# ಅನಂತ ಯಾತ್ರೆ

## ಪೂಜ್ಯ ಶ್ರೀ ಬಾಬೂಜಿ ಮಹಾರಾಜರು ಭಗಿನಿ ಕಸ್ತೂರಿಯವರಿಗೆ ಬರೆದ ಪತ್ರಗಳು (೧೯೪೮–೧೯೭೩)

ಹಿಂದಿ/ಇಂಗ್ಲಿಷ ಮೂಲದಿಂದ
ಕನ್ನಡಕ್ಕೆ :
**ಲಕ್ಷ್ಮೀಕಾಂತ ಹೆಗಡೆ**

**ಡಿವೈನ ಶ್ರೀ ಬಾಬೂಜಿ ಮಹಾರಾಜ – ಸೇಂಟ ಕಸ್ತೂರಿ ಮೆಮೋರಿಯಲ್ ಟ್ರಸ್ಟ**
ಜೆ ೩೭ / ಎಸ್ ೧, ದಿಲ್ಶಾದ ಕಾಲನಿ, ದಿಲ್ಲಿ ೧೧೦ ೦೯೫



ANANT YATRE : Kannada Translation of Anant Yatre : by Lakshmikant Hegde, Bengaluru

Compared and approved by :
Shri Justice D. R. Vithal Rao, Bengaluru

First Edition (Kannada) : April 2016

500 copies

© All rights reserved

Price : ₹ 120/-

Published by :
Divine Shri Babuji Maharaj - Sant Kasturi Memorial Trust (Regd.)
J-37/S-1, Dilshad Colony, Delhi - 110095
Mob : +91 987138380
Email : dsbkmt@gmail.com
website : www.saintkasturi.org

Printed by :
Ravindra S. Akalwadi
Manohar Printing Press, Market, Dharwad 580 001

*For copies contact :*
Divine Shri Babuji Maharaj - Sant Kasturi Memorial Trust
J-37/S-1, Dilshad Colony, Delhi - 110095

Yogashram Committee
56, Kelgeri Road, Dharwad - 580 008
Phone : 0836 - 2774670

Sri B. G. Janardan
7, Fort Street, Kalasipalya, Bengaluru - 560 001
Mobile : 9481478047

# ಎರಡು ಮಾತು

## (ಭಾಗ ೧ಕ್ಕೆ) (ಇಂಗ್ಲಿಷ್ ಆವೃತ್ತಿಗೋಸ್ಕರ ಬರೆದದ್ದು)

ಪರಮ ಪೂಜ್ಯ ಬಾಬೂಜಿ ಮಹಾರಾಜರು, ಸಮರ್ಥ ಸದ್ಗುರು ಶ್ರೀ ಲಾಲಾಜಿ ಮಹಾರಾಜರ ನಿರ್ದೇಶಾನುಸಾರ, ಭಗಿನಿ ಸಂತ ಕಸ್ತೂರಿಯವರ ಮೇಲೆ ೨೫ ವರ್ಷಗಳ ಕಾಲ ಆಧ್ಯಾತ್ಮಿಕ ಸಂಶೋಧನೆ (Spiritual Research) ನಡೆಸಿದರು. 'ಅನಂತ ಯಾತ್ರೆ' ಎಂಬ ಪುಸ್ತಕ (ಐದು ಭಾಗಗಳಲ್ಲಿ) ಅದರ ಫಲಸ್ವರೂಪವಾಗಿ ಬಂದಿದೆ. ಭಗಿನಿ ಕಸ್ತೂರಿಯವರ ಭೇಟಿ ಶ್ರೀ ಬಾಬೂಜಿ ಮಹಾರಾಜರೊಂದಿಗೆ ಆದುದೆಂತು ಎಂಬುದರ ಮತ್ತು ಇತರ ವಿವರಗಳು, ಬಹೆನ್‌ಜೀ (ಕಸ್ತೂರಿ) ಯವರ ಮೊದಲನೆಯ ಪುಸ್ತಕ 'ದಿವ್ಯ ದೇಶ್ ಕಾ ದರ್ಶನ್ – ಸಹಜ ಮಾರ್ಗ ಕೇ ದರ್ಪಣ ಮೇ' ಎಂಬುದರಲ್ಲಿ ಉಲ್ಲೇಖಿತವಾಗಿವೆ.

ನಾವು, ಶ್ರದ್ಧೇಯ ಸಂತ ಕಸ್ತೂರಿ ಬಹನ್ ಅವರಿಗೆ ಸದೈವ ಆಭಾರಿಗಳಾಗಿರುತ್ತೇವೆ; ಅವರು ಸಮಸ್ತ ಮಾನವಜಾತಿಯ ಮೇಲಣ ಅಸೀಮ ಅನುಕಂಪೆಯಿಂದ ೯೦೧ ಪತ್ರಗಳನ್ನು ಸ್ವಯಂ ತಮ್ಮ ಕರಕಮಲಗಳಿಂದ ಲಿಪಿಬದ್ಧಗೊಳಿಸಿ, ಪ್ರತಿಗಳನ್ನು ಮಾಡಿದರು, ಮತ್ತು ಕೆಲವನ್ನು ಮೂಲ ಸ್ವರೂಪದಲ್ಲಿ ಸಂಕಲಿಸಿ, ಸುರಕ್ಷಿತವಾಗಿರಿಸಿದರು. ಲೋಕ ಕಲ್ಯಾಣದ ಉದ್ದೇಶದಿಂದ ಕೂಡಿದ, ಸಂತ ಕಸ್ತೂರಿ ಬಹನ್‌ಜಿ ಅವರ ಈ ಉಪಕಾರವನ್ನು ಎಂದಿಗೂ ಮರೆಯಲಾಗದು.

ಶ್ರೀ ಬಾಬೂಜಿ ಮಹಾರಾಜರು ಮತ್ತು ಕಸ್ತೂರಿ ಬಹನ್‌ಜಿ ಅವರ ಮಧ್ಯೆ ಬ್ರಹ್ಮವಿದ್ಯಾ ಪ್ರಶಿಕ್ಷಣ ಕುರಿತ ಪತ್ರ ವ್ಯವಹಾರ ದಿನಾಂಕ ೦೩–೦೫–೧೯೪೮ ರಿಂದ ೦೨–೦೫–೧೯೭೫ರ ವರೆಗೆ ನಡೆಯಿತು. ಈ ಪ್ರಕಾಶನದ ಶೀರ್ಷಿಕೆಯಾಗಿ 'ಅನಂತ ಯಾತ್ರಾ' ಎಂಬ ಹೆಸರನ್ನು ಶ್ರೀ ಬಾಬೂಜಿ ಮಹಾರಾಜರೇ ಮೊದಲೇ ಕೊಟ್ಟಿದ್ದರು. ಈ ಪತ್ರಗಳಲ್ಲಿ ಸಮರ್ಥ ಸದ್ಗುರು ಲಾಲಾಜಿ ಮಹಾರಾಜ ಮತ್ತು ಸ್ವಾಮಿ ವಿವೇಕಾನಂದರು ದಿವ್ಯ–ಲೋಕದಿಂದ (Brighter world) ನೀಡಿದ ಆದೇಶಗಳು (Dictates) ಕೂಡ ಸಿಗುತ್ತವೆ. ಶ್ರೀ ಬಾಬೂಜಿ ಮಹಾರಾಜರು ಈ ಪತ್ರಗಳ ಮೂಲಕ, ಮಾನವ ಮಾತ್ರರೆಲ್ಲರಿಗೆ ಅಮೂಲ್ಯವಾದಂಥ, ಅನೇಕ ದೈವಿಕ (ಆಧ್ಯಾತ್ಮಿಕ) ರಹಸ್ಯಗಳನ್ನು ತೆರೆದಿಟ್ಟಿದ್ದಾರೆ. ಈ ಪತ್ರಗಳಲ್ಲಿ ಕೆಲವು, ಪರಮ ಪೂಜ್ಯ ಬಾಬೂಜಿ ಮಹಾರಾಜರ ಜನ್ಮಸ್ಥಾನ ಷಾಹಜಹಾನ್‌ಪುರದಿಂದ ಪ್ರಕಟವಾಗುತ್ತಿದ್ದ 'ಸಹಜ–ಮಾರ್ಗ' ಪತ್ರಿಕೆಯಲ್ಲಿ, 'ಅನಂತ ಯಾತ್ರಾ' ಎಂಬ ಹೆಸರಿನಿಂದ, ಧಾರಾ–ರೂಪದಲ್ಲಿ ಪ್ರಕಾಶಿತಗೊಂಡಿವೆ.



ಬಹನ್‌ಜೀಯವರು ಅಭ್ಯಾಸಿಗಳಾದ ನಮಗೆ, ಶ್ರೀ ಬಾಬೂಜಿ ಮಹಾರಾಜರು ಮಾಡಿದ ಆಧ್ಯಾತ್ಮಿಕ ಸಂಶೋಧನೆಯನ್ನು (ಅನುಸಂಧಾನವನ್ನು) ಅವಗತಗೊಳಿಸಿದುದಷ್ಟೇ ಅಲ್ಲದೆ, ಶ್ರೀ ಬಾಬೂಜಿ ಮಹಾರಾಜರು ಮಾನವ ಮಾತ್ರರ ಹಿತಕ್ಕೋಸ್ಕರ, ಆಧ್ಯಾತ್ಮಿಕತೆಯ ಆದಿಯಿಂದ ಹಿಡಿದು, 'ಅಂತ್ಯದ ಅಂತ್ಯ'ದ ಅರ್ಥಾತ್ 'ಭೂಮಾ'ದ ವರೆಗಿನ ಎಲ್ಲ ದ್ವಾರಗಳನ್ನೂ ಸದಾಕಾಲಕ್ಕೋಸ್ಕರ ತೆರೆದಿಟ್ಟರು ಎಂಬುದನ್ನು ತಿಳಿಸಿದರು. ಶ್ರೀ ಬಾಬೂಜಿ ಮಹಾರಾಜರ ಸ್ಮರಣೆಯಲ್ಲಿ, ಅವರ ದಿವ್ಯತೆಯ ಅನಂತ ಸಾಗರದಲ್ಲಿ ಸದಾ ಅಭ್ಯಾಸಿಗಳು ಮುಳುಗಿರಬೇಕೆಂಬುದಕ್ಕೆ, ಆ ಮೂಲಕ ಅವರಲ್ಲಿ ವಿಲೀನತೆಯನ್ನು ಪಡೆಯಲು ಶಕ್ತರಾಗಬೇಕೆಂಬುದಕ್ಕೆ ಒತ್ತು ಕೊಡುತ್ತಿದ್ದರು.

'ಶ್ರೀ ಬಾಬೂಜಿ ಮಹಾರಾಜ–ಸಂತ ಕಸ್ತೂರಿ ಮೆಮೋರಿಯಲ್ ಟ್ರಸ್ಟ್'ನ ಪೋಷಕರೂ, ಬಹನ್‌ಜಿಯವರ ತಮ್ಮನೂ ಆದ ಶ್ರೀ ಜಿ. ಡಿ. ಚತುರ್ವೇದಿ (ಅವರನ್ನು ನಾವೆಲ್ಲರೂ 'ಬಡೇ ಭಾಯಿ' ಎಂದೇ ಕರೆಯುವುದು) ಅವರು, 'ಅನಂತಯಾತ್ರಾ'ದಲ್ಲಿ ಪ್ರಕಾಶಿತವಾದ, ಶ್ರೀ ಬಾಬೂಜಿ ಮಹಾರಾಜರು ಸಂತ ಕಸ್ತೂರಿ ಬಹನ್‌ಜಿಯವರಿಗೆ ಬರೆದ ಪತ್ರಗಳನ್ನು, ಬೇರೆ ಪುಸ್ತಕ ರೂಪದಲ್ಲಿ, ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಪ್ರಕಾಶಿತಗೊಳಿಸಲು ಅನುಮತಿ ನೀಡಿ, ನಮ್ಮನ್ನು ಉತ್ಸಾಹಿತರನ್ನಾಗಿ ಮಾಡಿದ್ದಾರೆ. ಅವರಿಗೆ ನಾವು ತುಂಬಾ ಆಭಾರಿಗಳು.

ಈ ಪುಸ್ತಕವನ್ನು (ಹಿಂದಿ ಮತ್ತು ಇಂಗ್ಲಿಷ್) ಪ್ರಕಟಿಸಲು ನಮಗೆ ಸಹಯೋಗ ನೀಡಿದ, ದಿಲ್ಲಿಯ ಬಂಧು ಪ್ರೇಮ ಪ್ರಕಾಶ ಸಕ್ಸೇನಾ, ರೋಹಿತಾಶ ಕುಂವರ್ ರೋಹಿಲಾ, ಅತುಲ ಚಂದ್ರ ದುಬೆ, ಶ್ರೀನಿವಾಸ್ ಪ್ರಸಾದ್, ಆರ್.ಕೆ. ಧರಮ್‌ಸಿಂಗ್ ಮತ್ತು ವಿನೋದ ರಾಣಾ–ರವರಿಗೆ ನಾವು ಋಣಿಗಳು.

ಈ ಪುಸ್ತಕದಲ್ಲಿ, ಕೇವಲ, ಪೂಜ್ಯ ಶ್ರೀ ಬಾಬೂಜಿ ಮಹಾರಾಜರು ಬಹನ್‌ಜಿಯವರಿಗೆ ಬರೆದ ಪತ್ರಗಳನ್ನು, ಸಮರ್ಥ ಸದ್ಗುರು ಶ್ರೀ ಲಾಲಾಜಿಯವರ ಆದೇಶ (Dictate) (ಅ, ಯಾ, ಭಾ, ೨, ಪತ್ರ ಸಂ. ೨೩೦), ಮತ್ತು ಪೂಜ್ಯ ಬಹನ್‌ಜಿಯವರು ಬರೆದ ಮೂರು ಪತ್ರಗಳನ್ನು ಒಳಗೊಂಡಿದೆ. ಸತ್ಯಾನ್ವೇಷಣೆಯಲ್ಲಿ ತೊಡಗಿದ ಜಿಜ್ಞಾಸು ಬಂಧು–ಭಗಿನಿಯರ ಕಲ್ಯಾಣದ ಉದ್ದೇಶವನ್ನುಳ್ಳ ಒಂದು ಪ್ರಯತ್ನ ಇದು. ಪೂಜ್ಯ ಬಾಬೂಜಿ ಮಹಾರಾಜರ ಈ ಪತ್ರಗಳನ್ನು ಓದಿ, ಅಭ್ಯಾಸಿ ಜಿಜ್ಞಾಸುಗಳು, ಬ್ರಹ್ಮವಿದ್ಯೆಯ ಉಪಲಬ್ಧಿಗಳ ಬಗ್ಗೆ ಅರಿವು ಪಡೆಯುವುದಲ್ಲದೆ, 'ಅನಂತ ಯಾತ್ರೆ'ಯ ಪಥದಲ್ಲಿ ಮುನ್ನಡೆದು, ಗುರಿಯ ಪ್ರಾಪ್ತಿಹೊಂದಿ, ಸರ್ವಶಕ್ತನಲ್ಲಿ ಲಯಹೊಂದಿ ಆ ಮೂಲಕ ಈ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲೆಂದು ನಾವು ವಿಶ್ವಾಸಪೂರ್ವಕ ಹಾರೈಸುತ್ತೇವೆ.

ದಿ. ೨೬, ಸೆಪ್ಟೆಂಬರ್ ೨೦೧೩ — ಡಿವೈನ್ ಶ್ರೀ ಬಾಬೂಜಿ ಮಹಾರಾಜ–<br>
ದಿಲ್ಲಿ– ೧೧೦೦೯೫ — ಸಂತ ಕಸ್ತೂರಿ ಮೆಮೋರಿಯಲ್ ಟ್ರಸ್ಟ್ (ರಿ)

# ಸಂತ ಕಸ್ತೂರಿ ಬಹನ್

ಸಂತ ಕಸ್ತೂರಿ ಬಹನ್‌ಜಿ ತಮ್ಮ ಸಂಪೂರ್ಣ ಜೀವನವನ್ನು ದಿವ್ಯ ವಿಭೂತಿ ಶ್ರೀ ಬಾಬೂಜಿ ಮಹಾರಾಜರ (ಶ್ರೀ ರಾಮಚಂದ್ರಜಿ, ಷಾಹಜಹಾನ್‌ಪುರ) ಸೇವೆಯಲ್ಲಿ ಮತ್ತು ಅವರು ಪ್ರತಿಪಾದಿಸಿದ ಆಧ್ಯಾತ್ಮಿಕ ಕಾರ್ಯದಲ್ಲಿ ತೊಡಗಿಸಿದರು. ಪ್ರವಚನ, ಸತ್ಸಂಗ, ಗೀತ–ಗಾಯನ ಮತ್ತು ಶ್ರೀ ಬಾಬೂಜಿಯವರಿಗೆ ಸಂಬಂಧಿತವಾದ ಪ್ರತಿಯೊಂದು ಆಧ್ಯಾತ್ಮಿಕ ಕಾರ್ಯದಲ್ಲಿ ದಿವ್ಯತೆಯ ಪ್ರಕಾಶವಿರುತ್ತಿತ್ತು. ಅವರ ಕಾರ್ಯದಲ್ಲಿ, ಸದಾ ಶ್ರೀ ಬಾಬೂಜಿ ಮಹಾರಾಜರ ಸಾಮೀಪ್ಯದ ಅನುಭವವಾಗುತ್ತಿತ್ತು.

ಕಸ್ತೂರಿ ಬಹನ್‌ಜಿಯವರು ದಿವ್ಯ ಪ್ರೇಮ ಮತ್ತು ಭಕ್ತಿಗಳ ಜೀವಂತ ಉದಾಹರಣೆಯಾಗಿದ್ದಾರೆ. ಅವರು ಶ್ರೀ ಬಾಬೂಜಿ ಮಹಾರಾಜರಿಂದ ಕಲಿತುದನ್ನೇ ಬೇರೆಯವರಿಗೆ ಕಲಿಸಿದರು ಮತ್ತು ತಮ್ಮ ಜೀವನದಲ್ಲಿ ಸ್ವತಃ ಅಳವಡಿಸಿಕೊಂಡು ತೋರಿಸಿದರು. ತಮ್ಮ ಸಂಪೂರ್ಣ ಜೀವನವನ್ನು ಪೂಜ್ಯ ಸದ್ಗುರು ಶ್ರೀ ಬಾಬೂಜಿ ಮಹಾರಾಜರಿಗೆ ಸಮರ್ಪಿತಗೊಳಿಸಿ ಬಾಳಿದರು. ಸಂತ ಕಸ್ತೂರಿಯವರು, ತಮ್ಮೊಳಗೆ ಲಯಾವಸ್ಥೆಯನ್ನು ಪಡೆದಿದ್ದರೆಂದು ಶ್ರೀ ಬಾಬೂಜಿ ಮಹಾರಾಜರೇ ಸ್ವತಃ ಹೇಳಿದ್ದಾರೆ. ನಾವೆಲ್ಲರೂ ಅವರನ್ನು 'ಬಹನ್‌ಜೀ' ಅಥವಾ 'ಜಿಜ್ಜೀ' (ಅಕ್ಕ) ಎಂದು ಕರೆಯುತ್ತೇವೆ, ಆದರೆ ನಮ್ಮ ಮೇಲಿನ ಅವರ ಪ್ರೇಮ ಒಬ್ಬ ತಾಯಿಯ ಪ್ರೇಮದಂತಿತ್ತು.

ಬಹನ್‌ಜಿಯವರು, ಶ್ರೀ ಬಾಬೂಜಿಯವರ ಆದೇಶದ ಮೇರೆಗೆ, ತಮ್ಮ ಜೀವನ ಪರಿಚಯವನ್ನು ಒಮ್ಮೆ ಬರೆದಿದ್ದರು, ಮತ್ತು ಶ್ರೀ ಬಾಬೂಜಿಯವರ ಚರಣಗಳಲ್ಲಿ ಸಮರ್ಪಿಸುತ್ತ– **'ನನ್ನ ನಿಜವಾದ ಜೀವನ ತಮ್ಮನ್ನು ಸಂಧಿಸಿದ ಮೇಲಷ್ಟೇ ಪ್ರಾರಂಭವಾಗಿದೆ, ಆದುದರಿಂದ ಈ ಜೀವನ ಪರಿಚಯಕ್ಕೆ ಯಾವ ಮಹತ್ವವೂ ಇಲ್ಲ'**– ಎಂದು ಹೇಳಿದ್ದರು. ಹಾಗಿದ್ದರೂ, ಶ್ರೀ ಬಾಬೂಜಿ ಮತ್ತು ಬಹನ್‌ಜಿಯವರ ನಡುವಣ ಪತ್ರ ವ್ಯವಹಾರ, ಬಹೆನ್‌ಜಿಯವರ ಆಧ್ಯಾತ್ಮಿಕ ದಿನಚರಿ ಮತ್ತು ಲಭ್ಯವಿರುವ ಪ್ರಕಾಶನಗಳ ಆಧಾರದ ಮೇಲೆ ಅವರ ಈ ಸಂಕ್ಷಿಪ್ತ ಜೀವನ ಪರಿಚಯವನ್ನು ಮಾನವರೆಲ್ಲರಿಗೋಸ್ಕರ ಮಾಡುವ ವಿನಮ್ರ ಪ್ರಯತ್ನವಿದು.

ಬಹನ್‌ಜಿ ಕಸ್ತೂರಿಯವರ ಜನ್ಮ ೧೯೨೬ನೆಯ ಇಸ್ವಿ, ಸೆಪ್ಟೆಂಬರ್ ಇಪ್ಪತ್ತಾರನೆ ತಾರೀಖಿನಂದು (ಆಶ್ವಿನ ಮಾಸ ಕೃಷ್ಣಪಕ್ಷ ಸಪ್ತಮಿ) ಮಹಾರಾಜನಗರ, ಲಖೀಂಪುರ ಖೇರಿ (ಉ.ಪ್ರ)ದಲ್ಲಿ ಆಯಿತು. ಅವರ ಅಜ್ಜ ಪಂಡಿತ ಜಗನ್ನಾಥಪ್ರಸಾದರು ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಹುದ್ದೆಯಲ್ಲಿದ್ದರು. ಅವರಿಗೆ ಮೂವರು ಗಂಡುಮಕ್ಕಳು ಮತ್ತು ಒಬ್ಬ ಮಗಳು ಇದ್ದರು. ಹಿರಿಯ ಮಗನ ಹೆಸರು ಪಂಡಿತ



ರಾಮದಾಸ ಚತುರ್ವೇದಿ, ಎರಡನೆಯ ಮಗನ ಹೆಸರು ಪಂಡಿತ ಎಂ.ಎಲ್. ಚತುರ್ವೇದಿ, ಮತ್ತು ಕಿರಿಯ ಪುತ್ರನ ಹೆಸರು ಪಂಡಿತ ದಯಾನಂದ ಚತುರ್ವೇದಿ. ಶ್ರೀ ಎಂ.ಎಲ್. ಚತುರ್ವೇದಿ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿದ್ದರು ಮತ್ತು ದಯಾನಂದ ಚತುರ್ವೇದಿ ಅಲಿಗಡ್‌ದಲ್ಲಿ ಅಡ್ವೊಕೇಟರಾಗಿದ್ದರು. ಪಂಡಿತ ರಾಮದಾಸ ಚತುರ್ವೇದಿ ಲಖೀಂಪುರದಲ್ಲಿಯೇ ವಕೀಲರಾಗಿದ್ದರು. ಅವರಿಗೆ ಐದು ಹೆಣ್ಣುಮಕ್ಕಳು ಮತ್ತು ಇಬ್ಬರು ಪುತ್ರರು. ಸಂತ ಕಸ್ತೂರಿಯವರು ಅವರ ಮೂರನೆಯ ಸಂತಾನ. ಅವರ ತಾಯಿ ಶ್ರೀಮತಿ ಭಗವತಿ ದೇವಿ ಅತ್ಯಂತ ಸುಶೀಲಳು, ಹಾಗೂ ಗೃಹ ಕಾರ್ಯಗಳಲ್ಲಿ ದಕ್ಷಳಾದ ಸಾಧ್ವಿಯಾಗಿದ್ದಳು.

ಬಹನ್‌ಜಿಯವರ ತಂದೆ ಧಾರ್ಮಿಕ ಪ್ರವೃತ್ತಿಯುಳ್ಳ ವ್ಯಕ್ತಿಯಾಗಿದ್ದರು. ಅವರ ಇಡೀ ಕುಟುಂಬವೇ ಶ್ರದ್ಧಾವಂತ ಕುಟುಂಬ. ಸಂತರು, ಫ಼ಕೀರರು ಅವರ ಮನೆಗೆ ಪದೇ ಪದೇ ಭೇಟಿಕೊಡುತ್ತಿದ್ದರು. ಕಸ್ತೂರಿಯವರ ತಂದೆ ತುಂಬಾ ಆಸಕ್ತಿಯಿಂದ ಸತ್ಸಂಗದಲ್ಲಿ ಪಾಲುಗೊಳ್ಳುತ್ತಿದ್ದರು. ದಾನಶೀಲರಾದ ಅವರು ಜನರಿಗೆ ತುಂಬಾ ಉಪಕಾರಿಗಳಾಗಿದ್ದರು. ವಿದ್ಯಾರ್ಥಿಗಳಿಗೆ ಬಟ್ಟೆ ಬರೆ, ಪುಸ್ತಕಗಳು ಮತ್ತು ಶಾಲಾ ಶುಲ್ಕವನ್ನು ಒದಗಿಸುತ್ತಿದ್ದರು. ಹಾಡುವ ಕಲೆ ಲೇಖನ ಮತ್ತು ಸಂಗೀತ ಕಲೆಗಳು ಇಡೀ ಕುಟುಂಬಕ್ಕೆ ದೈವದತ್ತವಾಗಿ ಬಂದಿತ್ತು. ಬಹುತೇಕ ಪ್ರತಿ ಸಂಜೆ, ಭಜನ ಸಂಗೀತ ಮತ್ತು ಕೀರ್ತನಗಳಿಗೆ ಮನೆಯ ಪ್ರತಿಯೊಬ್ಬರೂ ಸೇರುತ್ತಿದ್ದರು.

ಬಹೆನ್‌ಜಿಯ ಮನೆಯವರೆಲ್ಲರೂ ೧೯೬೦ರವರೆಗೆ ಲಖೀಂಪುರ (ಉ.ಪ್ರ.) ದಲ್ಲಿ ವಾಸವಾಗಿದ್ದರು. ಅನಂತರ ಅವರ ಅಣ್ಣನ ಜೊತೆಗಿರಲು ಬಹೆನ್‌ಜಿ ಬರೇಲಿಗೆ ಹೋಗಿ, ೧೯೬೫ರ ವರೆಗೆ ಇದ್ದರು. ಆಮೇಲೆ, ೧೯೭೫ರ ವರೆಗೆ ತಮ್ಮ ತಮ್ಮನ ಸಂಗಡ ಮೋದಿನಗರದಲ್ಲಿದ್ದರು. ಅದಾದ ನಂತರ ಇಡೀ ಕುಟುಂಬ ಲಖ್ನೌಗೆ ಹೋಗಿ ಉಳಿದರು. ೧೯೮೨ರಲ್ಲಿ ಲಖ್ನೌದಲ್ಲಿ ಒಂದು ಮನೆ ಕೊಂಡುಕೊಳ್ಳಲಾಯಿತು. ಈ ಮನೆಯಲ್ಲಿ, ಅವರು ತಮ್ಮ ತಂಗಿ, ತಮ್ಮ ಮತ್ತು ತಮ್ಮನ ಕುಟುಂಬದವರೊಂದಿಗೆ ೨೦೧೨ರವರೆಗೂ ಇದ್ದರು. ಫೆ. ೨೨, ೨೦೧೨ ರಂದು ಅವರು ಮಹಾಸಮಾಧಿ ಹೊಂದಿದರು.

ಬಹನ್‌ಜಿಯವರು ೧೯೪೫ರಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿದರು. ಚಿಕ್ಕಂದಿನಿಂದಲೇ ಅವರು ದಯಾಳು ಮತ್ತು ಮೃದು ಸ್ವಭಾವದವರಾಗಿದ್ದರು ಮತ್ತು ಸಾಧುತ್ವದ ಗುಣಗಳನ್ನು ಹೊಂದಿದ್ದರು.

ಬಹನ್‌ಜಿಯವರು ಶ್ರೀ ಬಾಬೂಜಿಯವರನ್ನು ಸಂಧಿಸುವ ಪೂರ್ವದಲ್ಲಿ ಒಂದು ಅದ್ಭುತ ಘಟನೆ ನಡೆಯಿತು. ೧೯೪೮ರ ಜನವರಿಯ ಒಂದು ಸಂಧ್ಯಾ ಸಮಯದಲ್ಲಿ, ಅವರ ಎಡೆಬಿಡದೆ, ನಿರ್ವಿಚಾರ ದೃಷ್ಟಿಯಿಂದ ಆಕಾಶವನ್ನು

ನೋಡುತ್ತಿದ್ದರು. ಒಮ್ಮೆಲೆ, ಆಕಾಶದಲ್ಲಿ ವ್ಯಾಪಕ ಪ್ರಕಾಶವನ್ನು ಕಂಡರು. ಆ ಪ್ರಕಾಶ ಮಧ್ಯದಲ್ಲಿ ಪ್ರಭು ಶ್ರೀ ರಾಮನ ರೂಪ ಗೋಚರಿಸಿತು. ಕೆಲ ಸಮಯಾನಂತರ ಆ ರೂಪ ಮಾಯವಾಗಿ, ಶ್ರೀ ಕೃಷ್ಣನ ರೂಪ ಕಂಡಿತು. ಅದೂ ಕೂಡ ಅಲ್ಪಸಮಯದ ನಂತರ ಲುಪ್ತವಾಗಿ 'ಓಂ'ಕಾರ ಕಾಣಿಸಿತು. ಅವರು ವೀಕ್ಷಿಸುತ್ತಿದ್ದಂತೆಯೇ, ಅದೂ ಮಾಯವಾಗಿ ಒಂದು ಕೋಮಲ ಹಾಗೂ ದಾಡಿ ಹೊಂದಿದ, ದೈವೀ ಪ್ರಕಾಶದಿಂದ ಕೂಡಿ, ಕಾಂತಿ ಸೂಸುತ್ತಿರುವ ತೇಜಸ್ವಿ ವ್ಯಕ್ತಿಯನ್ನು ಕಂಡರು. ಅದೆಷ್ಟು ಹೊತ್ತು ಅವರು ಈ ದೃಶ್ಯವನ್ನು ವೀಕ್ಷಿಸುತ್ತಿದ್ದರೋ ತಿಳಿಯದು. ಅವರು ಅದರಲ್ಲಿ ತಲ್ಲೀನರಾಗಿ ಮೈಮರೆತಿದ್ದರು. ಆದರೆ, ಕೆಲ ಸಮಯಾನಂತರ ಆಕಾಶ ಎಂದಿನಂತೆ ಗೋಚರಿಸಿತು. ಅಂದಿನಿಂದ, ಕಸ್ತೂರಿಯವರ ಅಂತರಂಗವು, ಅರಿವಿಲ್ಲದೆಯೇ ಆ ದಿವ್ಯರೂಪವನ್ನು ಕಾಣಲು ಹಂಬಲಿಸತೊಡಗಿ, ಪ್ರತೀಕ್ಷೆ ಮಾಡಲಾರಂಭಿಸಿತು.

ಅದೇ ರಾತ್ರಿ, ಸುಮಾರು ಒಂದು ಘಂಟೆಯ ಹೊತ್ತಿಗೆ ಅವರಿಗೆ ಒಂದು ಸ್ವಪ್ನ ಬಿತ್ತು. ಅವರು, ತಮ್ಮ ಕುಟುಂಬದ ಜನರೊಂದಿಗೆ ಒಂದು ಕಾಲೀಮಾತೆಯ ವಿಶಾಲ ಮಂದಿರದ ಮುಖ್ಯದ್ವಾರದಲ್ಲಿ ನಿಂತಿದ್ದರು. ಹೊಸ್ತಿಲಲ್ಲಿ ಒಬ್ಬ ಸುಂದರ, ದಾಡಿಯುಳ್ಳ, ದಿವ್ಯ ವ್ಯಕ್ತಿಯೊಬ್ಬರು, ಪ್ರಸನ್ನ-ಶಾಂತಭಾವದ ಮುಖಮುದ್ರೆಯಿಂದ, ನಿಂತಿದ್ದರು. ಅವರು ಬಹನ್‌ಜಿಯವರಿಗೆ ಒಂದು ಖಡ್ಗವನ್ನು ಕೈಗಿತ್ತು ಹೇಳಿದರು– "ಮಂದಿರದಲ್ಲಿ ಪ್ರವೇಶ ಪಡೆಯಬೇಕಿದ್ದರೆ, ಈ ಖಡ್ಗದಿಂದ ನಿನ್ನ ತಲೆಯನ್ನು ಕಡಿದುಕೊಂಡು ನನ್ನ ಕೈಯಲ್ಲಿ ಕೊಡು, ಇದು ಇಲ್ಲಿಯ ನಿಯಮ." ಬಹನ್‌ಜಿ ಮರುವಿಚಾರ ಮಾಡದೆ ಆ ಮಹಾ ಪುರುಷನ ಕೈಯಿಂದ ಖಡ್ಗ ತೆಗೆದುಕೊಂಡು, ತಮ್ಮ ತಲೆಯನ್ನು ಕತ್ತರಿಸಿ ಅವರ ಕೈಗಿತ್ತರು, ಮತ್ತು ಮಂದಿರದೊಳಗೆ ಪ್ರವೇಶಿಸಿದರು. ಆದರೆ ಅಲ್ಲಿ ಯಾವುದೇ ಮೂರ್ತಿ ಇರಲಿಲ್ಲ. ಅಲ್ಲಿ ಒಂದು ಅಲೌಕಿಕ ವಾತಾವರಣವಿತ್ತು, ಮತ್ತು ಬಹನ್‌ಜಿಯವರು ಒಂದು ದಿವ್ಯ ಅವಸ್ಥೆಯಲ್ಲಿದ್ದರು. ಕನಸು ಹರಿದು ಹೋಯಿತು. ಆದರೆ ಬಹನ್‌ಜಿಯ ಸ್ಮರಣೆಯಲ್ಲಿ ಆ ದೃಶ್ಯ ನಿರಂತರ ಮರುಕಳಿಸುತ್ತಲೇ ಇತ್ತು.

ಮಾರನೆಯ ದಿನ, ಜನವರಿ ೩, ೧೯೪೮, ಅವರಿಗೊಂದು ಆಶ್ಚರ್ಯ ಭರಿತ ದಿನವಾಗಿತ್ತು. ಶ್ರೀ ಬಾಬೂಜಿ ಮಹಾರಾಜರು ಅವರ ಮನೆಗೆ ಆಗಮಿಸಿದರು. ಅದೇ ಹಿಂದಿನ ದಿನ ಅವರು ಕನಸಿನಲ್ಲಿ ಕಂಡ ದಿವ್ಯ ವಿಭೂತಿ, ಶ್ರೀ ಬಾಬೂಜಿ ಮಹಾರಾಜರನ್ನು ಪ್ರತ್ಯಕ್ಷದಲ್ಲಿ ಕಂಡು ಅವರು ಆಶ್ಚರ್ಯದಿಂದ ದಿಙ್ಮೂಢರಾಗಿ ಹೋದರು. ಹೀಗೆ, ಒಬ್ಬ ಸದ್ಗುರುವನ್ನು ಪಡೆಯಬೇಕೆಂಬ ಅವರ ಅಭೀಪ್ಸೆ, ಪ್ರತೀಕ್ಷೆ ಪೂರ್ತಿಯಾದಂತಾಯಿತು. ಅವರು ಉದ್ಗರಿಸಿದರು– "ಬಾಬೂಜಿ, ಇದು ನೀವೆ! ನಾನು ಅದೆಷ್ಟು ಸಮಯದಿಂದ ತಮ್ಮ ಪ್ರತೀಕ್ಷೆ ಮಾಡುತ್ತಿದ್ದೆ!" ಬಾಬೂಜಿಯವರು ಭಾವಪೂರಿತರಾಗಿ, ಹೇಳಿದರು– "ಮಗಳೆ, ನಾನೂ ನಿನ್ನನ್ನು ಅರಸುತ್ತಿದ್ದೆ, ಇಂದು ನೀನು ನನಗೆ ದೊರೆತಂತಾಯಿತು".– ಬಹನ್‌ಜಿ ಮತ್ತು ಶ್ರೀ ಬಾಬೂಜಿಯವರ



ಪ್ರಥಮ ಭೇಟಿಯ ಸಂವಾದ ನಡೆದದ್ದು ಹೀಗೆ. ಸಾಮಾನ್ಯವಾಗಿ ಶಿಷ್ಯ ಗುರುವಿನ ಬಳಿಗೆ ಹೋಗುತ್ತಾನೆ. ಆದರೆ ಇಲ್ಲಿ ಒಬ್ಬ ವಿಶೇಷ ಶಿಷ್ಯಳ ಬಾಗಿಲಿಗೆ ಗುರುವೇ ಸ್ವತಃ ಆಗಮಿಸಿದರು. ಕಸ್ತೂರಿ ಬಹನ್‌ಜಿಯವರ ಅಧ್ಯಾತ್ಮಿಕ ಯಾತ್ರೆ ಈ ರೀತಿಯಾಗಿ ಪ್ರಾರಂಭವಾಯಿತು. ಬಹನ್‌ಜಿಯವರು ತಮ್ಮ ಅನುಭವಗಳನ್ನು ಶ್ರೀ ಬಾಬೂಜಿ ಮಹಾರಾಜರಿಗೆ ಪತ್ರಮುಖೇನ ನಿವೇದಿಸಿಕೊಳ್ಳುತ್ತಿದ್ದರು; ಪ್ರತಿಯಾಗಿ, ಶ್ರೀ ಬಾಬೂಜಿ ಮಹಾರಾಜರು ಅವರ ಆಧ್ಯಾತ್ಮಿಕ ಯಾತ್ರೆಯಲ್ಲಿ ಯಥೋಚಿತ ಮಾರ್ಗದರ್ಶನ ನೀಡುತ್ತ ಬಂದರು. ಬಹನ್‌ಜಿ ಮತ್ತು ಶ್ರೀ ಬಾಬೂಜಿಯವರ ನಡುವಣ ಪತ್ರ ವ್ಯವಹಾರವನ್ನು, ಮಾನವರೆಲ್ಲರ ಹಿತಕ್ಕೋಸ್ಕರ, **'ಅನಂತ ಯಾತ್ರಾ'** ಎಂಬ ಪುಸ್ತಕರೂಪದಲ್ಲಿ, ಐದು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಇದಲ್ಲದೆ ಅವರು ಇನ್ನೂ ಅನೇಕ ಪುಸ್ತಕಗಳನ್ನೂ ಬರೆದಿದ್ದಾರೆ. ಈ ಎಲ್ಲ ಕೃತಿಗಳು ಅವರ ನಿರಂತರ ಸಾಧನೆ ಹಾಗೂ ಶ್ರೀ ಬಾಬೂಜಿ ಮಹಾರಾಜರ ಕೃಪೆಯಿಂದ ಅವರಿಗೆ ದೊರೆತ ಆಧ್ಯಾತ್ಮಿಕ ಅನುಭವಗಳ ಮೇಲೆ ಆಧಾರಿತವಾಗಿವೆ.

ಶ್ರೀ ಬಾಬೂಜಿಯವರ ಸಂಪರ್ಕದಲ್ಲಿ ಬಹನ್‌ಜಿಯವರು ಬಂದಾಗಿನಿಂದ, ಅವರ ಸಂರಕ್ಷಣ ಮತ್ತು ಮಾರ್ಗದರ್ಶನದಲ್ಲಿ ಬಹನ್‌ಜಿಯವರ ಆಧ್ಯಾತ್ಮಿಕ ಯಾತ್ರೆ ಪ್ರಾರಂಭವಾಯಿತು. ಮಾನವತೆಯ ಉದ್ಧಾರಕ್ಕೋಸರವೇ ನಿಸರ್ಗದ ಅಗತ್ಯಕ್ಕೆ ಅನುಸಾರವಾಗಿ ಅವತರಣಗೊಂಡ ದಿವ್ಯ ವಿಭೂತಿ ಪುರುಷರು ಇವರೇ (ಶ್ರೀ ಬಾಬೂಜಿಯವರೇ) ಎಂದು ಅವರಿಗೆ ಹೃದ್ಗತವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ೦೭ ನವೆಂಬರ್ ೧೯೪೮ ರಂದು, ಬಹನ್‌ಜಿಯವರನ್ನು, ಬೇರೆ ಅಭ್ಯಾಸಿಗಳಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಕೊಡುವುದಕ್ಕೋಸ್ಕರ ಪ್ರಶಿಕ್ಷಕರನ್ನಾಗಿ, (Preceptor) ಶ್ರೀ ಬಾಬೂಜಿಯವರು ಮಾಡಿದರು. ಈ ಕಾರ್ಯವನ್ನು ಶ್ರೀ ಬಾಬೂಜಿಯವರಿಗೇ ಅರ್ಪಿಸುತ್ತ ಬಹನ್‌ಜಿಯವರು ಆಜೀವ ಪರ್ಯಂತ ಮಾಡುತ್ತ ಬಂದರು. ಅಷ್ಟೇ ಅಲ್ಲದೇ ಶ್ರೀ ಬಾಬೂಜಿ ಮಹಾರಾಜರು ಅವರಿಗೆ ಒಪ್ಪಿಸಿದ ಅನೇಕ ಮಹತ್ವಪೂರ್ಣ, 'ಪ್ರಕೃತಿ'ಯ (ನಿಸರ್ಗದ) ಕಾರ್ಯಗಳನ್ನೂ ಮಾಡಿದರು.

ಅಕ್ಟೋಬರ್ ೨೭, ೧೯೫೩ ರಂದು ಶ್ರೀ ಬಾಬೂಜಿ ಮಹಾರಾಜರು ಬಹನ್‌ಜಿಯುವರಿಗೆ 'ಸಂತ-ಗತಿ'ಯುನ್ನು ಅನುಗ್ರಹಿಸಿದರು. ಮತ್ತು ಬೇರೆಯವರೊಂದಿಗೆ ಅವರನ್ನು ಕುರಿತು ಹೇಳುವಾಗ 'ಸಂತ-ಕಸ್ತೂರಿ' ಎಂದು ಸಂಬೋಧಿಸಿದರು. ೧೯೫೫ ಅಗಸ್ಟ್ ೨೭ರಂದು ಶ್ರೀ ಬಾಬೂಜಿಯವರು ಬಹನ್ ಕಸ್ತೂರಿಯವರಿಗೆ – "ನೀನು ನನ್ನಲ್ಲಿ ಲಯ ಹೊಂದಿದ್ದೀಯೆ. ಇನ್ನು ಮುಂದೆ, ನೀನು ನಿನ್ನ ತಂದೆ ತಾಯಿಗಳು ಜನ್ಮಕೊಟ್ಟ 'ಕಸ್ತೂರಿ' ಆಗಿ ಉಳಿಯಲಿಲ್ಲ"– ಎಂದು ಬರೆದರು. ೧೯೬೪ರ ಸೆಪ್ಟೆಂಬರ್ ೧೫ರಂದು– 'ನಿನಗೆ ಈಗ ಈಶ್ವರೀಯ ದಶೆ ಪ್ರಾಪ್ತವಾಗಿದೆ. ಎಂದೂ ಬರೆದರು. ೧೯೬೭ ಸೆಪ್ಟೆಂಬರ್ ೧೫ರಂದು 'ಕೇಂದ್ರ ಮಂಡಲ'ದಲ್ಲಿ ಪ್ರವೇಶಿಸಿದರು ಮತ್ತು ೧೯೬೮ ಜೂನ್ ೨೮ ರಿಂದ 'ಆನಂದ'

(Bloss) ಸ್ಥಿತಿ ಪ್ರಾಪ್ತವಾಯಿತು. ಅವರು, ದಿ. ೨–೫–೧೯೭೫ರ ತಮ್ಮ ಪತ್ರದಲ್ಲಿ ಶ್ರೀ ಬಾಬೂಜಿಯವರಿಗೆ ಬರೆದಿರುವುದು– 'ಯಾರೋ ನನಗೆ ಅನಂತ ಸಾಗರವನ್ನು ದಾಟಿಸಿದರು."

ಶ್ರೀ ಬಾಬೂಜಿ ಮಹಾರಾಜರು ಬಹನ್ ಕಸ್ತೂರಿಯವರ ಮೇಲೆ ಆಧ್ಯಾತ್ಮಿಕ ಸಂಶೋಧನೆ (ಅನುಸಂಧಾನ) ನಡೆಸಿದರು. "ನಿನ್ನ ಆಧ್ಯಾತ್ಮಿಕ ಅನುಭವಗಳನ್ನು ಮಾನವಕುಲದ ಹಿತಕ್ಕೋಸ್ಕರ ಬರೆದು ಪ್ರಕಾಶಿತಗೊಳಿಸು"– ಎಂದು ಒಮ್ಮೆ ಶ್ರೀ ಬಾಬೂಜಿಯವರು ಅವರಿಗೆ ಹೇಳಿದ್ದರು. ಅಂದಿನಿಂದ ಅವರ ಲೆಕ್ಕಣಿಕೆ ಎಂದೂ ನಿಂತೇ ಇಲ್ಲ. ಅವರ ವಾಣಿಯಲ್ಲಿ ದೈವಿಕತೆಯ ಧಾರೆ ಪ್ರವಹಿಸುತ್ತಿತ್ತು. ಅಂತೆಯೇ ಅವರ ಗೀತ–ಗಾಯನಗಳು ಕೂಡ ಅದೇ ಅನುಭವಗಳನ್ನು ಕೊಡುತ್ತಿದ್ದವು. ಅವರು ರಚಿಸಿದ ಗೀತಗಳು 'ಸಂಧ್ಯಾಗೀತ' ಎಂಬ ಶೀರ್ಷಿಕೆಯಲ್ಲಿ ಎರಡು ಭಾಗಗಳಲ್ಲಿ ಪ್ರಕಟವಾಗಿವೆ. ಅವರು ಬರೆದ ಲೇಖನಗಳು ಮತ್ತು ಅನುಭವಗಳು 'ಅನುಭವ ಸರಿತಾ' ಎಂಬ ಹೆಸರಿನಲ್ಲಿ ಪ್ರಕಾಶಿತವಾಗಿವೆ. ಅಭ್ಯಾಸಿಗಳ ಮಾರ್ಗದರ್ಶನಕ್ಕೆ ತಮ್ಮ ಜೀವನವನ್ನು ಸಮರ್ಪಿಸಿಕೊಂಡಿದ್ದಲ್ಲದೆ, ಅವರು ಅಭ್ಯಾಸಿಗಳ ಸಹಾಯಕ್ಕೋಸ್ಕರ ಪ್ರಶಿಕ್ಷಕರನ್ನು ತಯಾರು ಮಾಡಿದ್ದಾರೆ.

ಬಹನ್‌ಜಿಯವರ ಪ್ರತಿಯೊಂದು ಮುಖದಲ್ಲಿಯೂ ಶ್ರೀ ಬಾಬೂಜಿಯವರ ಸಾನ್ನಿಧ್ಯದ ಅನುಭವವಾಗುತ್ತಿತ್ತು. 'ಇಲ್ಲಿ ಕುಳಿತಿದ್ದು, ಅಲ್ಲಿ ಜೀವಿಸುವುದು' ಅರ್ಥಾತ್ ಶರೀರದಿಂದ ಇರುವುದು ಇಲ್ಲಿ, ಆದರೆ ದೈವೀವಲಯದಲ್ಲಿ ತಮ್ಮನ್ನು ತಾವೇ ಕಳೆದುಕೊಂಡು ಲೀನನಾಗಿರುವುದು' – ಎಂಬ ಸ್ಥಿತಿ ಪ್ರತೀತವಾಗುತ್ತಿತ್ತು. ಶ್ರೀ ಬಾಬೂಜಿ ಮಹಾರಾಜರು ತಮ್ಮನ್ನು ಮಾಧ್ಯಮವಾಗಿಸಿ ಸಮರ್ಥ ಸದ್ಗುರು ಲಾಲಾಜಿ ಮಹಾರಾಜರ ಜೀವನವನ್ನು ಪ್ರಸ್ತುತಪಡಿಸಿದಂತೆಯೇ, ಅದೇ ಪ್ರಕಾರ, ಬಹನ್ ಕಸ್ತೂರಿಯವರೂ ಕೂಡ ಶ್ರೀ ಬಾಬೂಜಿ ಮಹಾರಾಜರ ಸಜೀವ ಉದಾಹರಣೆಯಾಗಿದ್ದರು. ಬಹನ್‌ಜೀಯವರು ತಮ್ಮ ಒಂದು ಗೀತದಲ್ಲಿ ಬರೆದಿದ್ದಾರೆ–

"ಓ ಬಾಬೂಜಿ, ನಾವು ನಿನ್ನ ಚರಣದೆಡೆಗೆ ಬಂದೆವು.
ಅಧ್ಯಾತ್ಮ ಪಥವ ಬೆಳಗುತಿರುವ ಜ್ಯೋತಿಯನ್ನು ಪಡೆದೆವು.

[ಓ ಬಾಬೂಜೀ ಜೋ ತೆರೇ ಚರಣೋಂಮೆ ಆ ಗಯೇ
ಅಧ್ಯಾತ್ಮ ಪಥ ಪೇ ಜಲತೇ ವೋ ಮಶಾಲ ಪಾಗಯೇ]

ಇನ್ನೊಂದು ಗೀತದಲ್ಲಿ ಅವರು,

"ನನ್ನೀ ದೇಹದ ಮಣ್ಣಿನಲ್ಲಿ ಯಾವುದಾದರೂ ವೃಕ್ಷ ಬೆಳೆಯಬಹುದು, ಆಗ ಅದರ ಎಲೆಯಲ್ಲಿ ಯಾರಾದರೂ ನಿನ್ನ ಹೆಸರು ಓದಬಹುದು; ಭಕ್ತಿಯ ರಸದಲ್ಲಿ ಎಲ್ಲರ ಮನವೂ ಪುಳಕಗೊಳ್ಳಬಹುದು."



[ತನ್ ಕಿ ಮಾಟೀ ಮೇ ಮೇರೆ ವೃಕ್ಷ ಜಬ್ ಉಗೇಗೀ ಕೋಯಿ,
ಪಾತಿ ಪಾತೀ ವೇ ತೇರಾ ನಾಮ ಪಢ್ ಸಕೇಗಾ ಕೋಯಿ,
ಭಕ್ತಿಕೇ ರಸಮೇ ಸಬ್ ಕೇ ಮನ್ ಪುಲಕ ಸೇ ಜಾಯೇಂಗೆ"

ಅವರ ಭಕ್ತಿ ಮತ್ತು ಶ್ರೀ ಬಾಬೂಜಿಯವರಲ್ಲಿ ಅವರ ಲಯಾವಸ್ಥೆ ಈ ಮಟ್ಟದ್ದಿತ್ತು!

# Divine Shri Babuji Maharaj - Sant Kasturi Memorial Trust (Regd.)

(The Way to Ultimate)

Registered Office : J-37/S-1, Dilshad Colony, Delhi - 110095

**Chief Patron:**
G.D.Chaturvedi, Faridabad
(Younger Brother of Saint Kasturi
**Settler:**
Prem Prakash Saxena, Delhi
**Trustees:**
P. Nagaraja Reddy, Delhi
Rohtash Kanwar Rohilla, Delhi
Atul Chandra Dubey, Delhi
V. Srinivasa Vara Prasad, Delhi
M. Srinivas, Warangal
Smt. Krishna Budhraja, Delhi
Vinod Kumar Rohilla, Delhi
Smt.Sonati Saxena, Delhi
S.K.Srivastava, Lucknow
C.S.Prasad, Hyderabad
**Governing Body:**
President : M.Srinivas,Warangal
**Vice Presidents:**
Prem Prakash Saxena, Delhi
Dr. Hemlata Reddy, Delhi
V. Srinivasa VaraPrasad, Delhi
**General Secretary:**
Atul Chandra Dubey, Delhi
**Secretaries:**
Akshat Gupta, Malaysia
C.S. Prasad, Hyderabad
**Treasurer:**
Rohtash Kanwar Rohilla, Delhi
**Joint Treasurer:**
Ashok Kumar Gupta, Delhi
**Executive Members:**
Smt. Uma Pathak, Delhi
Vinod Kumar Rohilla, Delhi
Smt.GeetaChaturvedi,Ghaziabad
Dr. Indira Sriram, Tirupati
S. Shankar, Hosur
Arun Kumar Bisaria, Lucknow
V. N. P. Sivaramakrishna, Tirupati
Prof. B. Sudhakar, Tirupati
Dharam Singh, Delhi
D. Guruprasad, Dubai
V. S. S. Murthy, Anekal(Bangalore)

## Trust Brief

Beloved Sister Saint Kasturi spent her entire life in service of Divine Personality Shri Babuji Maharaj of Shahjahanpur (Babuji) carrying forward his spiritual work. Divinity flowed all through her activities - delivery of Speech, conducting Satsangs, Songs or attending to any work connected to Shri Babuji Maharaj. One could clearly feel the presence of Babuji in all her existence.

Sister Kasturi has been a living example of divine love and devotion. She practically followed what she preached. She lived her life completely drowned in her spiritual Guru Shri Babuji Maharaj. Babuji himself declared that she attained the state of "Layawastha" in him.

In fond memory of our divine sister, a Trust has been formed and registered on 26th day of April 2012.The name of the Trust is 'DIVINE SHRI BABUJI MAHARAJ - SAINT KASTURI MEMORIAL TRUST'



Principal AIMS AND OBJECTIVES of the Trust are given below:

This Trust is purely a spiritual organization. The most fundamental object of the Trust is to awaken the awareness of the presence of Divinity inherent in mankind by propagating spirituality as given by Shri Babuji Maharaj of Shahjahanpur (UP) and practiced and imparted by revered Saint Kasturi Chaturvedi (BAHENJI) and to conduct / organize Satsangs.

It is aimed at making this Trust an effective organization for practical training, teaching and propagating one of the most effective techniques for God Realization which is Shri Babuji Maharaj's Divine Mission. Babuji descended with the "Sankalp" of taking the entire humanity to the Ultimate (the home land of the creation).

The CORE purpose of creating this trust is only to sub serve the Divine Mission of Shri Babuji Maharaj as it was carried forward by our beloved Saint Kasturi. The TRUST basically provides a common platforrn / banner to keep together all preceptors and abhyasies nurtured by Bahenji. The Trust will work for furtherance and fulfillment of Shri Babuji's Divine Mission (Sankalpa) only, which is *"To Achieve Complete Oneness with God" through spiritual methods prescibed by Shri Babuji and followed by Sister Kasturi.*

**The Trust is neither a separate Mission nor a Method- It will continue to follow the Master, Mission and Method prescribed by Babuji.**

All income/ receipts, moveable / immovable properties of the Trust shall be utilized only towards achieving the aims and objectives of the Trust.

The Trust has already launched a website (www.saintkasturi.org) to propagate the message and teachings of our beloved sister Kasturi which is freely accessible to all. The website was inaugurated on 29th April 2012 by Sister Kesar Chaturvedi on the occasion of Babuji Birth Day Celebrations in Lucknow (UP).

F-4-Books-PM-7-Ananthyatre-7



# ಮುನ್ನುಡಿ

ಸಂತ ಕಸ್ತೂರಿ ಬಹನ್‌ಜಿ ಅವರು ಪರಮ ಪೂಜ್ಯ ಬಾಬೂಜಿ ಮಹಾರಾಜ (ಶ್ರೀ ರಾಮಚಂದ್ರಜಿ, ಷಾಹಜಹಾನ್‌ಪುರ, ಉ. ಪ್ರ) ಅವರ ಅತ್ಯಂತ ನಿಕಟವರ್ತಿಗಳಾಗಿದ್ದರು, ಮತ್ತು ಶ್ರೀ ಬಾಬೂಜಿಯವರು ಪ್ರಚುರಪಡಿಸಿದ ಸಹಜ ಮಾರ್ಗ ಯೋಗ ಪದ್ಧತಿಯ ಮೊದಲ ಅಭ್ಯಾಸಿಗಳಲ್ಲೊಬ್ಬರಾಗಿದ್ದರು. ಅತ್ಯಂತ ಸೂಕ್ಷ್ಮ ಸಂವೇದನಾಸಾಮರ್ಥ್ಯ ಹೊಂದಿದ ಬಹನ್‌ಜಿಯವರನ್ನು ನಿಮಿತ್ತವಾಗಿರಿಸಿಕೊಂಡು ಪೂಜ್ಯ ಬಾಬೂಜಿಯವರು ರಾಜಯೋಗದಲ್ಲಿ ಮಾಡಿದ ಅನೇಕ ಸಂಶೋಧನೆಗಳ ಲಿಖಿತ ದಾಖಲೆ ಅವರಿಬ್ಬರ ನಡುವಣ ಪತ್ರ ವ್ಯವಹಾರದಲ್ಲಿ ಕಾಣಸಿಗುತ್ತದೆ. ಅದು 'ಅನಂತಯಾತ್ರೆ'.

ಈ ಪತ್ರಮಾಲೆಯು ಅಧ್ಯಾತ್ಮ–ಜಿಜ್ಞಾಸುಗಳಿಗೆ, ವಿಶೇಷತಃ ಪೂಜ್ಯ ಬಾಬೂಜಿಯವರು ತೋರಿಸಿಕೊಟ್ಟ ಸಾಧನಾ ಪದ್ಧತಿಯಾದ 'ಸಹಜ ಮಾರ್ಗ'ವನ್ನು ಅನುಸರಿಸುತ್ತಿರುವ ಅಭ್ಯಾಸಿಗಳಿಗೆ ಅಪೂರ್ವ ಮಹತ್ತ್ವವುಳ್ಳದ್ದು. ಒಬ್ಬ ನಿಜವಾದ ಜಿಜ್ಞಾಸು ಒಬ್ಬ ಸಮರ್ಥ ಸದ್ಗುರುವಿನ ಮಾರ್ಗದರ್ಶನ ಹಾಗೂ ಕೃಪೆಗಳಿಂದ ಸಾಧಿಸಬಹುದಾದ ಅದ್ಭುತ ಆಧ್ಯಾತ್ಮಿಕ ನೆಲೆಗಳನ್ನು ಮತ್ತು ಸ್ಥಿತಿಗಳನ್ನು ಇದು ವಿಶದವಾಗಿ ವರ್ಣಿಸುತ್ತದೆ. ಅಧ್ಯಾತ್ಮ ಯಾತ್ರೆಗೆ ಅಂತ್ಯವೆಂಬುದಿಲ್ಲ. ಅಂತೆಯೇ ಇದನ್ನು ಪೂಜ್ಯ ಶ್ರೀ ಬಾಬೂಜಿಯವರೇ 'ಅನಂತ ಯಾತ್ರೆ' ಎಂದು ಕರೆದಿದ್ದಾರೆ. ಸಮರ್ಥ ಗುರುವು ತನಗೆ ಶರಣಾದ ಶಿಷ್ಯನನ್ನು ಶಿಶುವಿನಂತೆ ಪಾಲಿಸಿ, ಕೈ ಹಿಡಿದು ಮುನ್ನಡೆಸಿ ಅನಂತ ಯಾತ್ರೆ ಮಾಡಿಸಿದ್ದಾರೆ. ತಮ್ಮ ಅಸೀಮ ಕೃಪೆಯಿಂದ ಶ್ರೀ ಬಾಬೂಜಿಯವರು ಅಭ್ಯಾಸಿಗಳನ್ನು ಮುನ್ನಡೆಸುತ್ತಿರುವ ರೀತಿಯ ಒಂದು ನಿದರ್ಶನ ಇದಾಗಿದ್ದು, ಅವರ ಅನುಯಾಯಿಗಳೆಲ್ಲರಿಗೂ ಸಾಧನಾ ಪಥದಲ್ಲಿ ಮುನ್ನಡೆಯುವ ಉತ್ಸಾಹ, ಧೈರ್ಯಗಳನ್ನು ದಯಪಾಲಿಸುತ್ತದೆ.

ಸಂತ ಕಸ್ತೂರಿ ಬಹನ್‌ಜಿಯವರ ಸಾಹಿತ್ಯ ಕನ್ನಡದಲ್ಲಿ ಬಂದಿರುವುದು ಅತ್ಯಲ್ಪ. ಈ 'ಅನಂತ ಯಾತ್ರೆ'ಯನ್ನು ಅಭ್ಯಾಸಿ ಬಂಧು ಲಕ್ಷ್ಮೀಕಾಂತ ಹೆಗಡೆ ಕನ್ನಡಕ್ಕೆ ಅನುವಾದಿಸಿದ್ದಾರೆ. ಹಿರಿಯ ಪ್ರಶಿಕ್ಷಕರಾದ ಶ್ರೀ ಡಿ. ಆರ್. ವಿಠ್ಠಲರಾವ್ ಅವರು, ಇದರ ಹಸ್ತಪ್ರತಿಯನ್ನು ಪರಿಶೀಲಿಸಿ ಅನುಮೋದಿಸಿದ್ದಾರೆ. ಕನ್ನಡ ಬಲ್ಲ ಎಲ್ಲ ಅಭ್ಯಾಸಿಗಳು ಇದರಿಂದ ಲಾಭಾನ್ವಿತರಾಗಲಿ.

ದಿನಾಂಕ : ೩೦–೪–೨೦೧೬ — **– ಬಿ. ಜಿ. ಜನಾರ್ದನ**
ಪ್ರಶಿಕ್ಷಕರು, ಬೆಂಗಳೂರು



# ಅನುವಾದಕನ ಅರಿಕೆ

ಪರಮ ಪೂಜ್ಯ ಶ್ರೀ ಬಾಬೂಜಿ ಮಹಾರಾಜ (ಶ್ರೀ ರಾಮಚಂದ್ರಜಿ ಮಹಾರಾಜ, ಷಾಹಜಹಾನ್‌ಪುರ, ಉ.ಪ್ರ) ಮತ್ತು ಸಂತ ಕಸ್ತೂರಿ ಬಹನ್‌ಜಿಯವರ ನಡುವಣ ಪತ್ರ ವ್ಯವಹಾರ, ಈ ಹಿಂದೆ, 'ಅನಂತ ಯಾತ್ರಾ' ಎಂಬ ಹೆಸರಿನಲ್ಲಿ ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಲಭ್ಯವಿತ್ತು. ಅವುಗಳಲ್ಲಿ, ಶ್ರೀ ಬಾಬೂಜಿಯವರ ಪತ್ರಗಳನ್ನು ಆಯ್ದು, ಅದೇ ಹೆಸರಿನಲ್ಲಿ 'ಡಿವೈನ್ ಶ್ರೀ ಬಾಬೂಜಿ ಸಂತ ಕಸ್ತೂರಿ ಮೆಮೋರಿಯಲ್ ಟ್ರಸ್ಟ್, ದಿಲ್ಲಿ', ಅವರು ೨೦೧೩ರಲ್ಲಿ ಹೊರತಂದರು. ಅದನ್ನು ಕನ್ನಡದಲ್ಲಿ ತಂದರೆ, ಅನೇಕ ಅಭ್ಯಾಸಿ ಬಂಧುಗಳಿಗೆ ಅನುಕೂಲವಾಗಬಹುದೆಂಬ ವಿಚಾರ ಬಂದಾಗ, ಪ್ರಶಿಕ್ಷಕರಾದ ಶ್ರೀ ಡಿ. ಆರ್. ವಿಠ್ಠಲರಾವ್ ಮತ್ತು ಶ್ರೀ ಬಿ. ಜಿ. ಜನಾರ್ದನರವರ ಸಲಹೆಯಂತೆ ಕನ್ನಡ ಅನುವಾದ ಕೈಗೊಂಡೆ.

ಮೂಲ ಪ್ರಕಾಶಕರಾದ, 'ಡಿವೈನ್ ಶ್ರೀ ಬಾಬೂಜಿ ಸಂತ ಕಸ್ತೂರಿ ಮೆಮೋರಿಯಲ್ ಟ್ರಸ್ಟ್'ನ ಪದಾಧಿಕಾರಿಗಳಾದ ಶ್ರೀ ಪ್ರೇಮ ಪ್ರಕಾಶ ಸಕ್ಸೇನಾ ಹಾಗೂ ಶ್ರೀ ಅತುಲ್ ಚಂದ್ರ ದುಬೆ ಅವರಿಂದ, ಕನ್ನಡ ಅನುವಾದಕ್ಕೆ ಅನುಮತಿ ಕೇಳಿದಾಗ ಅವರು ಸಂತೋಷದಿಂದ ಒಪ್ಪಿಗೆ ನೀಡಿದರಲ್ಲದೆ, ಟ್ರಸ್ಟ್‌ನ ಮೂಲಕವೇ ಪ್ರಕಟಿಸುವುದಾಗಿ ಸೂಚಿಸಿದರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಅನುವಾದ ಮಾಡುವಾಗ, ಇಂಗ್ಲಿಷ್ ಆವೃತ್ತಿಯಿಂದ ಪ್ರಾರಂಭಿಸಿದರೂ, ಮೂಲ ಹಿಂದಿ ಆವೃತ್ತಿಯನ್ನೇ ಹೆಚ್ಚು ಅವಲಂಬಿಸಿದ್ದೇನೆ. ಅನೇಕ ಸಂದೇಹಗಳನ್ನು ನಿವಾರಿಸಿಕೊಳ್ಳುವುದರಲ್ಲಿ, ಬಂಧು ಪುರುಷೋತ್ತಮ ಗಾಯಕವಾಡ್, ಪುಣೆ ಅವರು ಕೊಟ್ಟ ಅಮೂಲ್ಯ ಸಲಹೆ ಮತ್ತು ಸಹಕಾರಗಳನ್ನು ಸ್ಮರಿಸಿಕೊಳ್ಳದಿರಲಾರೆ. ಶ್ರೀ ಬಹನ್‌ಜಿಯವರಿಗೆ ಆಪ್ತರಾಗಿದ್ದ ಅವರ ಸಲಹೆಗಳು ಅನುವಾದವನ್ನು ಉತ್ತಮಪಡಿಸಲು ನೆರವಾಗಿವೆ. ಅವರಿಗೆ ನಾನು ಕೃತಜ್ಞ.

ಏನೇ ಇದ್ದರೂ ಅನುವಾದ ಒಂದು ಪ್ರತಿಬಿಂಬ ಮಾತ್ರ. ಪರಮ ಪೂಜ್ಯ ಬಾಬೂಜಿಯವರ ಶೈಲಿ ಅನನ್ಯವಾದುದು. ವಿಷಯವೂ ಅಧ್ಯಾತ್ಮದ ಉನ್ನತ ಸ್ತರಗಳ ಸೂಕ್ಷ್ಮ ಅನುಭವಗಳಿಗೆ ಸಂಬಂಧಿಸಿದುದು. ಆದುದರಿಂದ ಎಲ್ಲಿಯಾದರೂ ಅಸ್ಪಷ್ಟತೆ, ದೂರಾನ್ವಯಗಳು ಕಂಡು ಬಂದಲ್ಲಿ, ಮೂಲ ಹಿಂದಿ ಆವೃತ್ತಿಯನ್ನೇ ಅಧಿಕೃತವೆಂದು ಗಮನಿಸಬೇಕೆಂದು ಓದುಗ ಅಭ್ಯಾಸಿ ಬಂಧುಗಳಿಗೆ ನನ್ನ ವಿನಮ್ರ ವಿನಂತಿ.

ಹಸ್ತಪ್ರತಿಯನ್ನು ಆಮೂಲಾಗ್ರ ಓದಿ, ಆಶೀರ್ವದಿಸಿ, ಒಪ್ಪಿಗೆ ಸೂಚಿಸಿದ ಪ್ರಶಿಕ್ಷಕರಾದ ಪೂಜ್ಯಶ್ರೀ ವಿಠ್ಠಲರಾವ್ ಅವರಿಗೂ, ಅನುವಾದ ಮಾಡಲು

ಪ್ರೋತ್ಸಾಹಿಸಿದ ಶ್ರೀ ಬಿ. ಜಿ. ಜನಾರ್ದನ ಅವರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ಮುದ್ರಣ ಕಾರ್ಯದಲ್ಲಿ ನೆರವು ನೀಡಿದ ಧಾರವಾಡ ಕೇಂದ್ರದ ಬಂಧು ಶ್ರೀ ಎಲ್. ಎಚ್. ಪಾಟೀಲ ಮತ್ತು ಅಂದವಾಗಿ ಮುದ್ರಿಸಿದ ಮನೋಹರ ಪ್ರಿಂಟಿಂಗ್ ಪ್ರೆಸ್‌ನ ಶ್ರೀ ರವೀಂದ್ರ ಆಕಳವಾಡಿಯವರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

ಬೆಂಗಳೂರು — **– ಲಕ್ಷ್ಮೀಕಾಂತ ಹೆಗಡೆ**
೩೦–೪–೨೦೧೬



# ಅನಂತ ಯಾತ್ರೆ

ಪರಿವಿಡಿ

**ಭಾಗ ೧**
(೧೫–೦೭–೧೯೪೮ – ೬–೪–೧೯೫೨) ೧

**ಭಾಗ – ೨**
(೧೧ ಏಪ್ರಿಲ್ ೧೯೫೨ ರಿಂದ ೩೧ ಅಕ್ಟೋಬರ್ ೧೯೫೩ ರ ವರೆಗೆ) **೭೩**

**ಭಾಗ – ೩**
(೨೨ ನವೆಂಬರ್ ೧೯೫೩ ರಿಂದ ೧೪ ಜುಲೈ ೧೯೫೫ರ ವರೆಗೆ) **೧೫೭**

**ಭಾಗ ೪**
(೨೫ ಜುಲೈ ೧೯೫೫ ರಿಂದ ೨೭ ಏಪ್ರಿಲ್ ೧೯೫೮) ೨೪೯

**ಭಾಗ ೫**
(೨೦ ಮೇ ೧೯೫೯ ರಿಂದ ೧೬ ಜುಲೈ ೧೯೭೩) ೩೨೭

# ಅನಂತ ಯಾತ್ರೆ

## ಭಾಗ ೧

(೧೫-೦೭-೧೯೪೮ - ೬-೪-೧೯೫೨)

P-4-Books-PM-7-Anantyatre-10



ಕ್ರಮ ಸಂಖ್ಯೆ – ೧ **ಪತ್ರ ಸಂಖ್ಯೆ – ೩** ಷಾಹಜಹಾನಪುರ

೧೫–೦೭–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದ.

ನಿನ್ನ ಪತ್ರ ಕೈ ಸೇರಿ ಸಂತೋಷವಾಯಿತು. ನೀನು ಈಗ ಸರಿಯಾದ ಮಾರ್ಗವನ್ನು ಅನುಸರಿಸುತ್ತಿರುವಿಯೆಂಬುದು ನಿನಗೆ ಮನದಟ್ಟಾಗಿರಬಹುದು. ಪರಮಾತ್ಮನಿಗೆ ಯಾವ ಆಕಾರ ಮತ್ತು ರೂಪಗಳಿಲ್ಲ. ಹಾಗಾಗಿ ಅವನು ಸರ್ವವ್ಯಾಪಿಯೆನಿಸಿದ್ದಾನೆ. ಅವನಿಗೆ ಒಂದು ಆಕಾರವಿರುತ್ತಿದ್ದರೆ ಅವನು ಯಾವುದೋ 'ಒಂದು' ಸ್ಥಳದಲ್ಲಿ ಮಾತ್ರ ಇರುತ್ತಿದ್ದ. ನಮ್ಮ ಮನಸ್ಸು ವಿಶಾಲವಾಗಬೇಕು. ಸಂಕುಚಿತ ದೃಷ್ಟಿಯು ಸಂಕುಚಿತ ಮನಸ್ಸಿನ ಕಾರಣದಿಂದ ಉಂಟಾಗುತ್ತದೆ. ಜೀವನದುದ್ದಕ್ಕೂ ಸ್ಥೂಲ ರೂಪದ ಪೂಜೆ ಮಾಡುವವರು ನಮ್ಮಲ್ಲಿದ್ದಾರೆ. ವಾಸ್ತವದಲ್ಲಿ, ಸ್ಥೂಲ (ಜಡ) ಸ್ಥಿತಿಯಲ್ಲಿರುವವರನ್ನು ಮೊದಲು ಕೆಲ ಕಾಲದ ಮಟ್ಟಿಗೆ ಸ್ಥೂಲ ರೂಪಗಳ ಪೂಜೆಯಲ್ಲಿ ತೊಡಗಿಸಿ, ಅನಂತರ ಸಾವಕಾಶವಾಗಿ 'ಸೂಕ್ಷ್ಮತೆ'ಯ ಕಡೆಗೆ ಎಳೆದು ತಿರುಗಿಸುವುದು ಅಗತ್ಯ. ಆದರೆ, ನಾವು ನಾವೇ ಸ್ಥೂಲತೆಯಲ್ಲಿ ದೂಡಲ್ಪಟ್ಟು ಜಡರಾಗಿದ್ದೇವೆ ಎಂದಾದರೆ, ನಾವು ಅದರಿಂದ ಹೊರಕ್ಕೆ ಬರಲು ಬಯಸುವುದಿಲ್ಲ. ಸರಿಯಾದ ವಿಧಾನವನ್ನು ಕುರಿತು ತಿಳಿದುಕೊಂಡಮೇಲೂ ನಮ್ಮ ಹೃದಯವು ಸ್ಥೂಲ (ಮೂರ್ತಿ) ಪೂಜೆಯನ್ನು ಬಿಡಲು ಒಪ್ಪುವುದಿಲ್ಲ. ಇದನ್ನು ನಾನು ಪ್ರತಿಯೊಬ್ಬರಿಗೂ ಹೇಳುತ್ತ ಹೋದರೆ ಅವರು ನನ್ನನ್ನು ಮೂರ್ತಿ ಪೂಜೆಗೆ ವಿರುದ್ಧವಿದ್ದೇನೆಂದು ತಿಳಿಯಬಹುದು. ಆದರೆ ವಾಸ್ತವದಲ್ಲಿ ನನ್ನ ಉದ್ದೇಶ ಅದಲ್ಲ. ಕೇವಲ ಜಡ ವಸ್ತುವಿನ ಮೇಲೆ ಮಾತ್ರ ಚಿಂತಿಸಲು ಬಲ್ಲ ಜನರಿಗೋಸ್ಕರ ಮಾತ್ರವೇ ಅದಿರುವುದು. ಸ್ಥೂಲ ರೂಪದ ಪೂಜೆಯನ್ನೇ ಮಾಡುತ್ತ ಹೋದರೆ ಅದು ಹೃದಯದ ಮೇಲೆ ಸ್ಥೂಲತರ ಪರಿಣಾಮಗಳನ್ನೇ ಉಂಟು ಮಾಡಿ, ಹೃದಯವನ್ನು ಒಂದು ಕಲ್ಲಿನಂತೆ ಜಡವಾಗಿಸುತ್ತದೆ. ಮತ್ತೆ, ಆ ಸ್ಥೂಲತೆಯನ್ನು ಹೃದಯದಿಂದ ತೆಗೆದು ಹಾಕಲು ದೀರ್ಘ ಸಮಯ ತೆಗೆದುಕೊಳ್ಳುತ್ತದೆ.

ನಾನೂ ಮೂರ್ತಿಗಳ ಪೂಜೆ ಮಾಡಿದ್ದೇನೆ, ಆದರೆ ಕೆಲವೇ ದಿನಗಳ ಮಟ್ಟಿಗೆ ಮಾತ್ರ. ಅದರಿಂದ ನನಗೆ ತೃಪ್ತಿ ಉಂಟಾಗಲಿಲ್ಲ. (ಪ್ರಗತಿಯಂತೂ ಇಲ್ಲ, ಬದಲಿಗೆ ಹಿಂದಕ್ಕೆ ಸೆಳೆಯುವಂತೆನಿಸಿತು). ಆಗ, ಮೂರ್ತಿಪೂಜೆ ನಿರರ್ಥಕ ಎಂದು ನಾನು ತಿಳಿದುಕೊಂಡೆ, ಮತ್ತು ಅದನ್ನು ಕೈಬಿಟ್ಟೆ. ಮೂರ್ತಿಪೂಜೆಯ ಪದ್ಧತಿಯನ್ನು ಅನುಸರಿಸುವ ವ್ಯಕ್ತಿಗೆ ನಾನು ಇದನ್ನು ಹೇಳಿದರೆ, ಮತ್ತು ಅವನು ಈ ಸತ್ಯವನ್ನು ಒಪ್ಪದಿದ್ದರೆ ಅವನಿಗೆ ಸರಿಯಾದ ಮಾರ್ಗದಲ್ಲಿ ನಂಬಿಕೆ ಇದೆ ಎಂದು ಅದೆಂತು ಹೇಳಲಾದೀತು? ಮಹಾ ವ್ಯಕ್ತಿಗಳ ಪೂಜೆ (ವಿಭೂತಿ ಪೂಜೆ)ಯನ್ನು ಭಾರತದಲ್ಲಿ ಎಂದಿನಿಂದಲೂ ಅನುಸರಿಸಲಾಗಿದೆ; ಅದರ ಪರಿಣಾಮವೇನಾಯಿತೆಂದರೆ ಜನರು ಆ ರೀತಿಯ ಪೂಜೆಗೆ ತಮ್ಮನ್ನು



ಸೀಮಿತಗೊಳಿಸಿಕೊಂಡು ಬಿಟ್ಟರು ಮತ್ತು ತದನಂತರ ಮೂರ್ತಿಗಳು ಸ್ಥಾಪಿಸಲ್ಪಟ್ಟವು. ಒಂದು ವೇಳೆ ನಾನು ಮೂರ್ತಿಪೂಜೆ ಮಾಡುತ್ತಿದ್ದು, ಅದಕ್ಕಿಂತ ಮತ್ತೂ ಉತ್ತಮವಾದ ವಿಧಾನದ ಪೂಜೆ ನನಗೆ ತಿಳಿದು ಬಂದರೆ ಹಾಗೂ ನನ್ನ ಮಾರ್ಗದರ್ಶಿಯು ಅದನ್ನು ಬಿಡುವಂತೆ ಹೇಳಿದರೆ, ನಾನು ನನ್ನ ಜೀವವನ್ನೇ ಕೊಟ್ಟೇನು, ಇನ್ನು ಮೂರ್ತಿಪೂಜೆಯನ್ನು ತೊರೆಯುವುದು ಯಾವ ದೊಡ್ಡ ಮಾತು !

ಈ (ನಮ್ಮ) ಪದ್ಧತಿಯಲ್ಲಿ ದುರ್ಗುಣಗಳು ನಮ್ಮನ್ನು ಬಿಟ್ಟು ತೊಲಗುತ್ತವೆ ಮತ್ತು 'ಸದ್ಗುಣ'ಗಳೂ ಆಕರ್ಷಣೆಯಿಲ್ಲದವುಗಳಾಗಿ ತೋರುತ್ತವೆ,– ಆಗ ನಾವು ಕರ್ಮ– ಬಂಧನಗಳಿಂದ ಬಿಡುಗಡೆ ಹೊಂದುತ್ತೇವೆ. ನಾನಿದನ್ನು ಚೌಬೇಜೀ (ಬಹೆನ್‌ಜಿಯವರ ತಂದೆ)ಯವರಿಗೆ ಬರೆಯುವುದಿಲ್ಲ; (ಭಯವೆನಿಸುತ್ತದೆ). ಆದರೆ, ನಿನಗೆ ಬರೆಯುತ್ತಿದ್ದೇನೆ, ಯಾಕೆಂದರೆ ಸಂಭಾವ್ಯತಃ ಭಗವಂತನ ಇಚ್ಛೆಯು ನೀನು ಅಧ್ಯಾತ್ಮದಲ್ಲಿ ಇನ್ನೂ ಎತ್ತರದ ನಿಲುಕು ಪಡೆಯಲಿ ಎಂದು ಇದ್ದೀತು. ನೀನು ಕಾಣುವ 'ಪ್ರಕಾಶ'ವು ನಿನ್ನ ಆತ್ಮದ ಪ್ರತಿಫಲನವಾಗಿದೆ. ಮತ್ತು ಅದು ಪ್ರಗತಿಯ ಸೂಚಕವೂ ಆಗಿದೆ. ಆದರೆ (ಆಧ್ಯಾತ್ಮಿಕ) ಪ್ರಗತಿಗೆ ಪ್ರತಿಯೊಬ್ಬನೂ ಅದನ್ನು ಕಾಣಲೇಬೇಕು ಎಂದಿಲ್ಲ; ಅದು ವ್ಯಕ್ತಿಯ ಸಂಸ್ಕಾರಗಳು ಮತ್ತು ಸಹಜ ಪ್ರಕೃತಿಯನ್ನು ಅವಲಂಬಿಸಿದೆ. ಎಲ್ಲ ವಸ್ತುಗಳಿಗೂ ಅತೀತನಾದ ಮತ್ತು ಎಲ್ಲ ಕಲ್ಪನೆಗಳಿಗೂ ಮೀರಿದ ಭಗವಂತನನ್ನೇ ನಾವು ಪ್ರೀತಿಸಬೇಕು ಎಂದು ನನಗೆ ತೋರುತ್ತದೆ. ನೀನು ಬರೆದ ಇತರ ಅವಸ್ಥೆ (ಸ್ಥಿತಿ, ಅನುಭವ)ಗಳು ತುಂಬಾ ಒಳ್ಳೆಯವು. ಈ 'ಸ್ಥಿತಿ' (Conditions)ಗಳ ಕುರಿತು ನಾನು ಕೆಲದಿನಗಳ ನಂತರ ಬರೆಯುತ್ತೇನೆ.

ಚೌಬೇಜಿಯವರನ್ನು ಸರಿಪಡಿಸುವುದು ನಿಮ್ಮ ಕೈಯಲ್ಲಿಯೂ ಇದೆ ಎಂದು, ನಿನ್ನ ತಾಯಿಯವರಿಗೆ ಷಾಹಜಹಾನಪುರದಿಂದ ಹೋಗುವ ಹೊತ್ತಿನಲ್ಲಿ ನಾನು ಹೇಳಿದ್ದೆ. ಪತ್ನಿಯಾದವಳು ಮೊದಲು ಸ್ವತಃ ಅಭ್ಯಾಸ ಮಾಡಬೇಕು ಮತ್ತು ಆ ಒಳ್ಳೆಯ ಅಭ್ಯಾಸವನ್ನು ಅನುಸರಿಸಲು ಪತಿಗೆ ನೆರವಾಗಬೇಕು. ಮಗಳೆ, ಇಂಥ ಕಾಲ ಮತ್ತು ಸದವಕಾಶ ಮತ್ತೆ ಮತ್ತೆ ಮರುಕಳಿಸುವುದಿಲ್ಲ. ಕೆಲವರಾದರೂ ಇದನ್ನು ಅರ್ಥ ಮಾಡಿಕೊಂಡಾರು.

ನಿನ್ನ ಹಿತೈಷಿ

ರಾಮಚಂದ್ರ

* * * *

ಕ್ರಮ ಸಂಖ್ಯೆ – ೨ **ಪತ್ರ ಸಂಖ್ಯೆ – ೫** ಷಾಹಜಹಾನಪುರ

೨೪–೦೭–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ತಲುಪಿತು ಮತ್ತು ನಿನ್ನ (ಆಧ್ಯಾತ್ಮಿಕ) ಸ್ಥಿತಿ ಕುರಿತು ತಿಳಿದುಕೊಂಡೆ. 'ಪ್ರಕಾಶ'ದ ಬಗ್ಗೆ ನಿನಗೆ ನಾನು ಈಗಾಗಲೇ ಬರೆದಿದ್ದೇನೆ; ಅದು ಕೆಲವರಿಗೆ

P-4-Books-PM-7-Anantyatre-11



ಗೋಚರವಾಗುವುದು, ಮತ್ತೆ ಇನ್ನು ಕೆಲವರಿಗೆ ಗೋಚರವಾಗುವುದಿಲ್ಲ; ಅಲ್ಲದೆ, (ಆಧ್ಯಾತ್ಮಿಕ) ಪ್ರಗತಿಯ ಮಟ್ಟಿಗೆ ಹೇಳುವುದಾದರೆ, ಅದರಿಂದ ಯಾವುದೇ ವ್ಯತ್ಯಯವುಂಟಾಗುವುದಿಲ್ಲ. ಓರ್ವನು ಸರಿಯಾದ ಪದ್ಧತಿಯನ್ನು ಕಂಡುಕೊಂಡನೆಂದರೆ, ಅದನ್ನೇ ಅನುಸರಿಸಬೇಕು ಮತ್ತು ಅದರ ತತ್ತ್ವಗಳಿಗೆ ಬದ್ಧನಾಗಿರಬೇಕು ಎಂದು ನಾನು ಮತ್ತೊಮ್ಮೆ ಬರೆಯುತ್ತೇನೆ.

ನಿನ್ನ ತಂದೆ ನಿಮ್ಮೆಲ್ಲರ ಪ್ರಗತಿಯನ್ನು ಬಯಸುತ್ತಾರೆ; ಅದರಲ್ಲಿ ಯಾವುದೇ ಸಂದೇಹವಿಲ್ಲ. ಅವರು ಈ ಪದ್ಧತಿಯನ್ನು ಅನುಸರಿಸಿ ಒಳ್ಳೆಯ ಪ್ರಗತಿ ಕಾಣಲೆಂದು ಮತ್ತು ಅವರ ಪ್ರಗತಿಯಲ್ಲಿ ಅಡ್ಡಿ ಉಂಟು ಮಾಡುವ ಎಲ್ಲ ಅಡೆತಡೆಗಳು ದೂರವಾಗಲೆಂದು ನೀನು ಕೂಡ ಪ್ರಾರ್ಥನೆ ಮಾಡಬೇಕು. ಒಬ್ಬ ಕವಿ ಹೇಳಿದ ಸುಂದರ ಶ್ಲೋಕ– '*ಏಕ ಹೀ ಸಾಧೇ ಸಬ್ ಸಾಧೇ, ಸಬ್ ಸಾಧೇ ಸಬ್ ಜಾಯೆ*'– ಅಂದರೆ, 'ಕೇವಲ ಒಂದರ ಮೇಲೆಯೇ ಲಕ್ಷ್ಯವಿಟ್ಟು ಸಾಧನೆ ಮಾಡಿದರೆ ಎಲ್ಲವೂ ಸಾಧಿಸುತ್ತದೆ. ಅನೇಕ(ವಿಧಾನ)ಗಳನ್ನು ಸಾಧಿಸಹೊರಟರೆ, ನೀನು ಎಲ್ಲವನ್ನೂ ಕಳೆದುಕೊಳ್ಳುವೆ'.

ನೀವೆಲ್ಲರೂ ಅದನ್ನು ಅನುಸರಿಸಬೇಕು; ಇದೊಂದು ಒಳ್ಳೆಯ ಮಾತು. ವೈಯಕ್ತಿಕ ಲಾಭಕ್ಕೋಸ್ಕರ ಅಸಂಖ್ಯ ಪೂಜಾ ಪದ್ಧತಿಗಳನ್ನು ಹುಟ್ಟು ಹಾಕಲಾಗಿದೆ, ಈ ಜಗತ್ತಿನ ರೀತಿಗಳೇ ಹಾಗಿವೆ. 'ಏಕ'ದ ಬದಲಿಗೆ ಹೃದಯವು 'ಅನೇಕ'ದತ್ತ ಆಕರ್ಷಿತವಾಗಲು ಪ್ರಾರಂಭಿಸಿತು. ವಿಚಾರದ ಅನೇಕ ಧಾರೆಗಳು ಉಂಟಾದವು, ಮತ್ತು ಅವು ಅವರ ದೇವತೆಯ ಸುತ್ತ ತಿರುಗಲು ಪ್ರಾರಂಭಿಸಿದವು. ಚಿಲುಮೆಯಿಂದ ಬರುವ ನೀರು ಸಾವಿರಾರು ಧಾರೆಗಳಾಗುವಂಥ ಸ್ಥಿತಿ ಉಂಟಾಯಿತು. 'ಏಕ'ದ ಮೇಲೆ ಇರಬೇಕಿದ್ದ ಲಕ್ಷ್ಯವು ಚದುರಿ ಹೋಯಿತು. ನಾವು 'ಸತ್ಯ'ದಿಂದ ಬಲು ದೂರ ಹೋಗಲಾರಂಭಿಸಿದೆವು. ನಾವು ಎಂಥ ರೂಢಿಯಲ್ಲಿ ಸಿಕ್ಕಿಬಿದ್ದೆವೆಂದರೆ, ಅದನ್ನು ವಿವರಿಸಿದರೂ ನಾವು ಅದನ್ನು ಒಪ್ಪಿಕೊಳ್ಳುವುದಿಲ್ಲ. 'ಈಶ್ವರ ಪ್ರಾಪ್ತಿ'ಯೊಂದೇ ನಮ್ಮ ಗುರಿಯಾಗಬೇಕು; ಅದೊಂದೇ ಎಲ್ಲವುಗಳಿಗೂ ಪರಿಹಾರೋಪಾಯ. ನಾವು ಈ ಜಗತ್ತಿನಲ್ಲಿ ಸಹಸ್ರಾರು ವರ್ಷ ಬದುಕಿದೆವು, ಮತ್ತೆ, ನಾವು ಇನ್ನೂ ಲಕ್ಷಗಟ್ಟಲೆ ವರ್ಷ ಹೆಚ್ಚು ಕಾಲ ಬದುಕಲು ಬಯಸುತ್ತೇವೆ. ನಾವು ಎಲ್ಲಿಂದ (ಉದ್ಭವಿಸಿ) ಬಂದೆವೋ ಆ 'ಮೂಲ'ದಲ್ಲಿ ಒಂದಾಗುವುದನ್ನು ಸಾಧ್ಯಗೊಳಿಸುವ ಮತ್ತು ಆ ಮೂಲಕ ಲಕ್ಷಾಂತರ ವರ್ಷಗಳಿಂದ (ಪುನರ್ಜನ್ಮಗಳಿಂದ) ನಾವು ಪಾರಾಗುವಂತೆ ಮಾಡುವಂತಹ ಪದ್ಧತಿಯನ್ನು ನಾವು ಏಕೆ ಅಂಗೀಕರಿಸಬಾರದು?

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೩ **ಪತ್ರ ಸಂಖ್ಯೆ – ೮** ದಿವಾನ್ ಜೋಗ್‌ರಾಜ್
ಷಾಹಜಹಾನಪುರ
೧೭–೦೯–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ತಲುಪಿತು. ಬರೆದುಕೊಳ್ಳುವವರು ಯಾರೂ ಇರಲಿಲ್ಲವಾದ್ದರಿಂದ, ಈ ಮೊದಲೇ ಉತ್ತರಿಸಲಾಗಲಿಲ್ಲ. ಉತ್ತರಿಸಬೇಕಿದ್ದ ಅನೇಕ ಪತ್ರಗಳು ಉಳಿದಿವೆ; ಈಗ ಅವೆಲ್ಲವುಗಳಿಗೂ ಉತ್ತರ ಬರೆಯುತ್ತಿದ್ದೇನೆ.

ನಿನ್ನ ಆಧ್ಯಾತ್ಮಿಕ ಸ್ಥಿತಿಯನ್ನು ಕುರಿತು ತಿಳಿದು ಅತೀವ ಸಂತೋಷವಾಯಿತು. ನಿನ್ನ ಗುರಿಯ ಸಾಧನೆಯಲ್ಲಿ ಪರಮಾತ್ಮನು ನಿನಗೆ ಯಶಸ್ಸು ಕರುಣಿಸಲಿ. *ಭಗವಂತನ ಸ್ಮರಣೆಯಲ್ಲಿ ತಳಮಳ (ಚಡಪಡಿಕೆ) ಇರುವುದು ಒಳ್ಳೆಯದು. ನಾನು ಅನೇಕ ವರ್ಷಗಳ ಕಾಲ ಅದಕ್ಕೆ ಈಡಾಗಿದ್ದೆ. ನಮ್ಮನ್ನು ಗುರಿಗೆ ಮುಟ್ಟಿಸುವ ಏಕಮಾತ್ರ ಸಂಗತಿ ಅದೇ ಆಗಿದೆ; ಮತ್ತು ನಮ್ಮ ಪಾಲಿಗೆ 'ಶಾಂತಿ' ಎಂದರೆ ಅದೇ ಆಗಿದೆ. ಸದ್ಗುರುವಿನ ಸ್ಮರಣೆಯಲ್ಲಿ ತಳಮಳದಿಂದಿರುವುದು ಭಕ್ತನಾದವನಿಗೆ ಶ್ರೇಯಸ್ಕರ. ಶಾಂತಿಯ ಹುಡುಕಾಟದಲ್ಲಿ ಜನರು ಅರಣ್ಯಕ್ಕೆ ಹೋಗುತ್ತಾರೆ, ಆದರೆ ಈ ಅಮೂಲ್ಯ 'ರತ್ನ'ದ ಬಗ್ಗೆ ಯಾರಾದರೂ ಆಸಕ್ತನಾಗುವುದು ಕ್ವಚಿತ್ತಾಗಿಯೇ ಸರಿ.* ಎಷ್ಟರಮಟ್ಟಿಗೆ ಭಾರದ (heaviness) ಅನುಭವ ಆಗುತ್ತದೆಯೆಂಬುದನ್ನು ಮುಂದಿನ ಪತ್ರದಲ್ಲಿ ನನಗೆ ತಿಳಿಸು. ಭಾರದ ಅನುಭವವಾಗುವುದಕ್ಕೆ ಎರಡು ಕಾರಣಗಳುಂಟು. ಮೂರ್ತಿಪೂಜೆ ಮಾಡುವವರು ಅದರ ಪರಿಣಾಮವಾಗಿ ಒಂದು ರೀತಿಯ ಜಡತ್ವ (Solidity)ವನ್ನು ತಮ್ಮ ಹೃದಯದಲ್ಲಿ ಬೆಳೆಸಿಕೊಳ್ಳುತ್ತಾರೆ, ಮತ್ತು ಅದನ್ನು ಧ್ಯಾನದ ಮೂಲಕ ತೆಗೆದು ಹಾಕಿದಾಗ, ಈ ಪ್ರಕಾರದ 'ಭಾರ'ದ ಅನುಭವವಾಗುತ್ತದೆ; ಇದು ಒಂದು ಕಾರಣ. ಎರಡನೆಯ ಕಾರಣವೆಂದರೆ, ಹೃದಯದಲ್ಲಿ 'ಪ್ರೇಮ'ದಿಂದ, ಎಷ್ಟು ಪ್ರಮಾಣದಲ್ಲಿ ಆಧ್ಯಾತ್ಮಿಕ ಬಲವನ್ನು ಸಂಚರಣಗೊಳಿಸಲಾಗಿದೆಯೆಂದರೆ, ಅದನ್ನು ಇನ್ನೂ (ಪೂರ್ತಿ) ಹೀರಿಕೊಳ್ಳಲು ಸಾಧ್ಯವಾಗಿಲ್ಲ ಎಂದಿರುವ ಸಂದರ್ಭದಲ್ಲಿ ಅನುಭವಕ್ಕೆ ಬರುವ 'ಭಾರ'ದ ಅನಿಸಿಕೆ. ಎರಡನೆಯ ಕಾರಣದ ಸಂಭಾವ್ಯತೆ ತೀರ ಕಡಿಮೆ. (ಅಪರೂಪದ್ದು). ಈಗ ಆ 'ಭಾರ'ದ ಅನುಭವ ಕಡಿಮೆಯಾಗಿರಬಹುದು. ಅದರಿಂದ ಏನೂ ತೊಂದರೆಯಾಗದಂತೆ, ಅದು ತನ್ನಿಂದ ತಾನೇ ದೂರವಾಗಬೇಕೆಂದು ನಾನು ಬಯಸುತ್ತೇನೆ.

೨೭ ಅಗಸ್ಟ ೧೯೪೮, ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿನವಾಗಿತ್ತು. ಅಂದು, ಜಗತ್ತಿನಲ್ಲಿ ಎಲ್ಲಿಯೇ ಆಗಲಿ, ಉಪವಾಸ ಆಚರಿಸಿದವರಿಗೆ ಆಧ್ಯಾತ್ಮಿಕ ಲಾಭ ಕೊಡುವಂತೆ ನನಗೆ ಆದೇಶವಿದೆ. ಆದ್ದರಿಂದ ಭಗವಾನ್ ಕೃಷ್ಣನ ಜನ್ಮ ದಿನದಂದು ನಾನು ಅವರೆಲ್ಲರಿಗೂ ತಾಸುಗಟ್ಟಲೆ ಪ್ರಾಣಾಹುತಿ (Transsmission) ನೀಡುತ್ತಿರುತ್ತೇನೆ. ನಾನು ಮರುದಿವಸವೂ– ಅಂದರೆ ಒಟ್ಟಿಗೆ ಎರಡು ದಿವಸ–ಉಪವಾಸ

P-4-Books-PM-7-Anantyatre-12



ಆಚರಿಸಬೇಕೆಂದೂ ಆದೇಶವಿತ್ತು; ಆದರೆ (ನನ್ನ) ದೇಹ ದುರ್ಬಲವಾಗಿರುವ ಕಾರಣ ನಾನು ಒಂದು ದಿವಸ (ಮಾತ್ರ) ಉಪವಾಸ ಆಚರಿಸಬೇಕೆಂದೂ, ಮತ್ತು ಆಧ್ಯಾತ್ಮಿಕ ಉನ್ನತಿಯ ಶಿಖರದಲ್ಲಿರುವ ಹಾಗೂ ನನ್ನ ಗುರು ಬಂಧುವಾದ ಶ್ರೀ ರಾಮೇಶ್ವರ ಪ್ರಸಾದರು ಮರುದಿನ ಕೂಡ ಉಪವಾಸ ಆಚರಿಸಬಹುದೆಂದೂ ಆದೇಶವಾಯಿತು. ಇದು ಕಳೆದ ಎರಡು–ಮೂರು ವರ್ಷಗಳಿಂದ ಆಚರಿಸುತ್ತಿರುವ ರೂಢಿ ಆಗಿದೆ.

ನನ್ನ ಪತ್ರದಲ್ಲಿ ನಾನು ಬರೆದಿದ್ದ ಪ್ರಕಾರ ನೀನು ನಿನ್ನ ತಂದೆಯವರ ಆಧ್ಯಾತ್ಮಿಕ ಪ್ರಗತಿಗೋಸ್ಕರ ಪ್ರಾರ್ಥನೆ ಸಲ್ಲಿಸಿರಬಹುದು. ನಿನ್ನ ಈ ಹಿಂದಿನ ಪತ್ರಕ್ಕೆ ನಾನು ಉತ್ತರಿಸಿದ್ದೆ. ಇಂದು, ೧೬ ಸೆಪ್ಟೆಂಬರ್ ೧೯೪೮, ನಿನ್ನ ಎರಡನೆಯ ಪತ್ರವೂ ತಲುಪಿದೆ. ಅದರಲ್ಲಿ ನೀನು ಒಂದು ಆಧ್ಯಾತ್ಮಿಕ ಸ್ಥಿತಿಯ ಬಗ್ಗೆ ಬರೆದಿದ್ದೀಯೆ. 'ಸ್ಥಿತಿಯು ಈ ಹಿಂದೆ ಇದ್ದಂತೆ ಇಲ್ಲ' ಎಂದು ನೀನು ಬರೆದಿರುವೆ; ನೀನು ಹೇಳ ಬಯಸಿರುವುದು ಏನು ಎಂದು ನನಗೆ ಅರ್ಥವಾಗಲಿಲ್ಲ. ಆ ಮೊದಲು ಇದ್ದ ಸ್ಥಿತಿ ಯಾವುದಿತ್ತು, ಮತ್ತು ಈಗ ಆ ಸ್ಥಿತಿಯು ಲುಪ್ತವಾಗಿ ಹೋದ ಕಾರಣ ಹೃದಯದಲ್ಲಿ ಒಂದು ರೀತಿಯ ಜಿಗುಪ್ಸೆಯ (ಗ್ಲಾನಿಯ) ಅನುಭವ ನಿನಗೆ ಅನಿಸಿತೇನು? ನಾವು ಮುಂದಡಿಯಿಡುತ್ತಿರಬೇಕು ಮತ್ತು ಅದಕ್ಕೋಸ್ಕರ ಭಗವಂತನನ್ನು ಪ್ರಾರ್ಥಿಸಬೇಕು; ಅವನು ಎಲ್ಲವನ್ನೂ ಮಾಡಬಲ್ಲ. ನಿನ್ನ ತಾಯಿ ಮತ್ತು ಕೇಸರ್ (ಬಹೆನ್) ಧ್ಯಾನ ಆರಂಭಿಸಿದ್ದಾರೆಂದು ತಿಳಿದು ಸಂತೋಷವಾಯಿತು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪ **ಪತ್ರ ಸಂಖ್ಯೆ – ೧೦** ಷಾಹಜಹಾನಪುರ
೨೭–೯–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ತಲುಪಿತು, ಹೃದಯ ಪ್ರಸನ್ನವಾಯಿತು. ನೀನು ನಿನ್ನ 'ಭಾರ'ದ (ಜಡತೆಯ) ಅನುಭವ ಕುರಿತು ನನಗೆ ಬರೆದಾಗ, ನಾನು ನಿನಗೋಸ್ಕರ ಭಗವಂತನಲ್ಲಿ ಪ್ರಾರ್ಥಿಸಿದ್ದೆ. ಭಗವಂತನ ವಿಷಯದಲ್ಲಿ ಹೇಳುವುದಾದರೆ, ನಾನು–ನೀನು ಇಬ್ಬರೂ 'ಭಿಕ್ಷುಕರೇ'. ಅವನ ಸಂಕಲ್ಪಕ್ಕೆ ಅನುಸಾರವಾಗಿಯೇ ಎಲ್ಲವೂ ಸಂಭವಿಸುತ್ತದೆ. ಭಗವಂತ ಯಾರನ್ನು ತನ್ನತ್ತ ಆಕರ್ಷಿಸುತ್ತಾನೋ ಅವನು ಮಾತ್ರವೇ ಸಫಲನಾಗುವನೆಂದು ಹೇಳಲಾಗಿದೆ. *'ನಿನ್ನ ಸಂಕಲ್ಪವಿಲ್ಲದೆ ಯಾರೂ 'ನಿನ್ನ' ದರ್ಶನವನ್ನು ಕೂಡ ಪಡೆಯಲಾರರು'* ಎಂಬುದು ಒಬ್ಬ ಪರ್ಷಿಯನ್ ಕವಿಯ ಮಾತು. ಸಾಮಾನ್ಯ ಜನರು ಇದನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆಂಬುದನ್ನು



ನಾನು ನಿನಗೆ ವಿವರಿಸಬಹುದಾದರೆ ಅದು ಬಹಳಷ್ಟಾದೀತು. ಆದರೆ, ಭಗವಂತನು ನಿನ್ನಲ್ಲಿ ಆ ಸ್ಥಿತಿ ಬೆಳೆಯುವಂತೆ ಮಾಡಿದಾಗ, ಅಂದು ನಾನು, ವಾಸ್ತವದಲ್ಲಿ ನಿನಗೆ ಈ ಮಾತನ್ನು ವ್ಯಾಖ್ಯೆಗೊಳಿಸಿ ಹೇಳಬಲ್ಲೆ. ನೀನು ಕೊಟ್ಟ ಭರವಸೆಯಿಂದ ನಾನು ಅತಿಶಯ ಸಂತುಷ್ಟನಾಗಿದ್ದೇನೆ. ಭಗವಂತನು ನಿನಗೆ ಅದರಲ್ಲಿ ಯಶಸ್ಸು ಕರುಣಿಸಲಿ. ಅಷ್ಟೇ ಅಲ್ಲ, ದುಃಖಾರ್ತರಾದ ಜನತೆ ನಿನ್ನಿಂದ ಪ್ರಯೋಜನ ಪಡೆಯುವಂತಹ ದಿನವನ್ನು ಭಗವಂತ ತರಲಿ. ನೀನು ಚೌಬೇಜಿಯವರಿಗೋಸ್ಕರ ನಿಷ್ಠೆಯಿಂದ ಪ್ರಾರ್ಥಿಸಿದರೆ ಅದು ವ್ಯರ್ಥವಾಗಲಿಕ್ಕಿಲ್ಲ. ಭಗವಂತನು ನಿನ್ನನ್ನು ಅಭಿಮಾನ ಮತ್ತು ದಂಭಗಳಿಂದ ಕಾಪಾಡಲಿ. ಚೌಬೇಜಿ ಈಗ ಸ್ವಲ್ಪ ವಾಸಿ ಎನ್ನಬೇಕು, ಆದರೆ, ನಿನ್ನ ತಾಯಿ ಅದೆಂಥ ಬಲೆಯಲ್ಲಿ ಸಿಕ್ಕಿಬಿದ್ದಿರುವಳೆಂದರೆ, ಸರ್ವಶಕ್ತ ಭಗವಂತನತ್ತ ಅವಳು ನಿಜಾರ್ಥದಲ್ಲಿ ಒಲವು ಹೊಂದಿಲ್ಲ. ವರ್ಣ ರೂಪರಹಿತನಾದ 'ಅವನನ್ನು' ನಾವು ಪ್ರೀತಿಸಬೇಕು.

ನೀನು ಧ್ಯಾನ ಮಾಡುತ್ತಿದ್ದೀಯೆ; ನಾವೆಲ್ಲರೂ ಅಂತೆಯೇ ಮಾಡುತ್ತಿದ್ದೇವೆ; ಆದರೆ, ಯಾವನು ದೇಹ ಬಿಟ್ಟ ನಂತರ ಮತ್ತೆ ಈ ಜಗತ್ತಿಗೆ ಅವನನ್ನು ತರಬಾರದೆಂದು ಭಗವಂತ ಬಯಸುತ್ತಾನೆಯೋ ಅವನು ಮಾತ್ರವೇ 'ಅವನಲ್ಲಿ' ಸಂಪೂರ್ಣ ಒಲವು ಮತ್ತು ಶ್ರದ್ಧೆಗಳನ್ನು ಹೊಂದುತ್ತಾನೆ. ನನ್ನ ನಮಸ್ಕಾರವನ್ನು ನಿನ್ನ ತಾಯಿಗೆ ಮತ್ತು ತಂದೆಯವರಿಗೆ ತಿಳಿಸು. ನಿನ್ನ ಸೋದರಿಯರಿಗೆ ನನ್ನ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫ **ಪತ್ರ ಸಂಖ್ಯೆ – ೧೨** ಷಾಹಜಹಾನಪುರ
೨೩–೧೦–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ತಲುಪಿರುವುದು ಬಹಳ ಸಂತೋಷ. ನೀನು ಭಗವಂತನತ್ತ ನಿನ್ನ ಆಂತರಿಕ ಒಲವು ಬೆಳೆಸಿಕೊಳ್ಳುತ್ತಿದ್ದೀಯೆ, 'ಅವನಿಗೆ' ಕೃತಜ್ಞತೆ ಸಲ್ಲಬೇಕು. ಭಗವಂತನು ನಿನಗೆ ಪರ್ಯಾಪ್ತ ಆಧ್ಯಾತ್ಮಿಕ ಪ್ರಗತಿ ಅನುಗ್ರಹಿಸಲಿ. ನೀನು ಬರೆದ, 'ಶಾಂತಿಯ ಸ್ಥಿತಿ' ತುಂಬಾ ಒಳ್ಳೆಯದು. ಆದರೆ, ಈ ಶಾಂತಿಯಲ್ಲಿ ತಳಮಳವು ಇಲ್ಲದೆ ಹೋದರೆ, ಅದು ಉಪ್ಪು (ರುಚಿ) ಇಲ್ಲದ ಉತ್ತಮ ಆಹಾರದಂತೆ. ನಿನ್ನ ಸ್ಥಿತಿಯನ್ನು ಕುರಿತು ಬರೆಯುತ್ತಿರು. ನೀನು ಹೊಂದಿರುವ ಸ್ಥಿತಿಯು ಒಬ್ಬ ಮೃತ ವ್ಯಕ್ತಿಯ ಸ್ಥಿತಿಯಂತಿದೆ, ಎಂದು ನೀನು ಬರೆದಿದ್ದೀಯೆ; ಇದರ ಉತ್ತರವನ್ನು ನಾನು ಬಹಳ ದಿನಗಳ ನಂತರ, ನನಗೆ ನೆನಪಿನಲ್ಲಿ ಉಳಿದುದಾದರೆ, ಬರೆಯುತ್ತೇನೆ. ಈ ಸಮಯದಲ್ಲಿ ನಾನು ಅದಕ್ಕಿಂತ ಹೆಚ್ಚು ಬರೆಯುವುದು ಸೂಕ್ತವೆಂದು

P-4-Books-PM-7-Anantyatre-13



ನನಗನಿಸುವುದಿಲ್ಲ. ಯಾವುದೋ ಒಂದು ಸ್ಥಿತಿಯ ಬಗ್ಗೆ ಈ ಮಾತುಗಳನ್ನು ಮತ್ತೆ ಅನಂತರ ಉತ್ತರಿಸುತ್ತೇನೆಂದು ನನ್ನ ಒಂದು ಪತ್ರದಲ್ಲಿ ನಾನು ಬರೆದಿದ್ದೆ. ಈ ಸ್ಥಿತಿಗಳನ್ನು ನೀನು ದಿನಚರಿಯಲ್ಲಿ ಗುರುತು ಹಾಕಿ ಇಟ್ಟುಕೊಂಡರೆ, ನೀನು ನೆನಪಿಸಿದಾಗ ನಾನದನ್ನು ಮತ್ತೆ ಸ್ಮರಣೆಗೆ ತಂದುಕೊಳ್ಳಬಹುದು. ಕೇಸರಳ ನೆನಪು ನನಗೆ ಪದೇ ಪದೇ ಬರುತ್ತದೆ. ನಾನು ಅವಳ ಭಜನೆಗಳನ್ನು ತುಂಬಾ ಮೆಚ್ಚಿಕೊಂಡಿದ್ದೆ. ಆದ್ದರಿಂದ ಅವಳ ನೆನಪು ಹೆಚ್ಚು ಮರುಕಳಿಸುತ್ತಿರುತ್ತದೆ. ಸಾಧ್ಯವಿದ್ದ ಮಟ್ಟಿಗೆ ನಿನ್ನ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸು; ಅದು ತೀರಾ ಅವಶ್ಯ. ತಾಯಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬ **ಪತ್ರ ಸಂಖ್ಯೆ – ೧೪** ಷಾಹಜಹಾನಪುರ
೨–೧೧–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ಬಹಳೇ ಸಂತೋಷ ತಂದಿತು. ಭಗವಂತನತ್ತಣ ನಮ್ಮ ಪಯಣದಲ್ಲಿ ಅನೇಕ ಹಂತಗಳು/ಸ್ಥಿತಿಗಳು ಬರುತ್ತವೆ. ಈ ಸ್ಥಿತಿಗಳು ಅಭ್ಯಾಸಿಯ ಸಾಧನೆಯಲ್ಲಿ ಯಾವಾಗಲೂ ಬರುತ್ತವೆ. ನಿಜವಾದ ಭಕ್ತಿ (ನಿಷ್ಠೆ) ಇದ್ದರೆ ಈ ಸ್ಥಿತಿಗಳು ಅನುಭವಕ್ಕೆ ಸಿಗುತ್ತವೆ. ನಾನು ನಿನ್ನ ಪತ್ರಗಳನ್ನು ಕಾಯ್ದಿರಿಸುತ್ತೇನೆ. ಒಂದಾದ ಮೇಲೊಂದರಂತೆ ಪ್ರತಿಯೊಂದು ಸ್ಥಿತಿಯ ಮೇಲೆಯೂ ಬೆಳಕು ಚೆಲ್ಲಲು ಸಾಧ್ಯವಾಗುವುದು. ಆದರೆ, ನೀನು ಈ ಸ್ಥಿತಿಗಳನ್ನು ದಾಟಿ, ಉನ್ನತತರ ಸ್ಥಿತಿಗೆ ಮೇಲೇರಿದ ಸಮಯದಲ್ಲಿ ನೀನು ಈ ಸ್ಥಿತಿಗಳ ಬಗ್ಗೆ ಬರೆಯಲೆಂದು ನಾನು ಬಯಸುತ್ತೇನೆ. ದೇವರಿಂದ ದೂರವಾದುದು (ಅಸಾಧ್ಯವಾದುದು) ಯಾವುದೂ ಇಲ್ಲ. ಅವನು ಎಲ್ಲವನ್ನೂ ಮಾಡಬಲ್ಲ. ಅವನು ನಮ್ಮ ಅತಿ ನಿಕಟದಲ್ಲಿಯೇ (ನಮ್ಮ ಹೃದಯದಲ್ಲಿಯೇ) ಇರುವನಾದರೂ ನಮಗೆ ಅವನ ಸಾನ್ನಿಧ್ಯದ ಅನುಭವ ಆಗುತ್ತಿಲ್ಲವೆಂದರೆ, ತಪ್ಪು ನಮ್ಮದೇ ಸರಿ. ನಿನ್ನ ತಾಯಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭ **ಪತ್ರ ಸಂಖ್ಯೆ – ೧೮** ಷಾಹಜಹಾನಪುರ
೨೦–೧೧–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಎರಡೂ ಪತ್ರಗಳು ಕೈ ಸೇರಿವೆ. ಅವುಗಳನ್ನು ಓದುವುದೇ ಒಂದು ಸಂತೋಷ. ಭಗವಂತನತ್ತ ನಿನ್ನ ಒಲವು ವರ್ಧಿಸುತ್ತಿದೆ; ಅದು ಅವನ ಕರುಣೆಯೇ



ಸರಿ. ನಿನ್ನಲ್ಲಿ ಏಕಾತ್ಮಕತೆಯ ಸ್ಥಿತಿ (ಲಯ) ಬೆಳೆಯುತ್ತಿದೆಯೆಂಬುದು ನೀನು ಬರೆದಿರುವುದರಿಂದ ಕಂಡುಬರುತ್ತದೆ. ಆದರೆ ಅದಿನ್ನೂ ಸ್ಥಿರತೆ ಹೊಂದಿ ನೆಲೆಗೊಂಡಿಲ್ಲ. ಭಗವಂತ ಕರುಣೆ ತೋರಿದರೆ, ಮತ್ತು ನೀನು ನಿನ್ನ ಪ್ರಯತ್ನ (ಸಾಧನೆ) ಮುಂದುವರಿಸುತ್ತ ಹೋದರೆ, ಅದು ಸ್ಥಿರಗೊಳ್ಳುವುದು. ಈ ಕೆಲಸಕ್ಕೆ ಆರೋಗ್ಯವೂ ಆವಶ್ಯಕ; ಆದ್ದರಿಂದ ಆ ಕುರಿತು ನೀನು ಕಾಳಜಿ ತೆಗೆದುಕೊಳ್ಳಬೇಕು. ನಾನೂ, ಅಷ್ಟೇನೂ ಆರೋಗ್ಯದಿಂದಿಲ್ಲ. ನಿರಂತರವಾಗಿ ಇರುವ ನೋವಿನಿಂದ ನಾನು ದುರ್ಬಲನಾಗಿದ್ದೇನೆ; ಆದರೆ, ನಾನು ಈ 'ಸ್ಥಿತಿ'ಯನ್ನು ಬಹು ದೀರ್ಘ ಅಭ್ಯಾಸ ಮತ್ತು ಕಲಿಯುವುದರ ಮೂಲಕ ಪಡೆದಿದ್ದೇನೆ.

ದುರ್ಬಲನ ಧ್ವನಿ ಪರಮಾತ್ಮನಿಗೆ ಹೆಚ್ಚು ಕೇಳಿಸುತ್ತದೆ, ಅವನು ಅದಕ್ಕೆ ಹೆಚ್ಚು ಲಕ್ಷ್ಯ ಕೊಡುತ್ತಾನೆ. ಆದರೆ, ಅವನು ಆಲಿಸುವಂತಾಗುವ ಮೊದಲು, 'ಸದ್ಗುರು'ವಿಗೆ ನಮ್ಮ ಕೂಗು ಕೇಳಿಸುವಂತಾಗಲು ನಾವು ಅಂಥ ವಿಧಾನವನ್ನು ಅಂಗೀಕರಿಸಿ ಅಭ್ಯಾಸ ಮಾಡಬೇಕು; ಅದಕ್ಕೆ ಆರೋಗ್ಯವೂ ಆವಶ್ಯಕ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮ **ಪತ್ರ ಸಂಖ್ಯೆ – ೨೦** ಷಾಹಜಹಾನಪುರ
೧೦–೧೨–೧೯೪೮

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಪತ್ರ ತಲುಪಿತು ಓದಿ ಸಂತೋಷವಾಯಿತು. ನಿನ್ನ ಸ್ಥಿತಿ ಪ್ರಗತಿ ಹೊಂದುತ್ತಿದೆ; ಸದ್ಗುರುವಿಗೆ ಧನ್ಯವಾದಗಳು. ಪ್ರಯತ್ನದಿಂದ ಎಲ್ಲವೂ ಸಾಧ್ಯವಾಗುವುದು. ಮತ್ತೆ, ಪರಮಾತ್ಮನೊಂದಿಗೆ ಸಂಧಿಸುವುದು ಅತಿ ಸುಲಭ ಎಂದು ನನಗನಿಸುತ್ತದೆ. ಅದಕ್ಕೆ ಬೇಕಾದುದಿಷ್ಟೆ; ಅವನನ್ನು ಕುರಿತು, ಹೃದಯದ ನೈಜ ಹಾಗೂ ಪ್ರಾಮಾಣಿಕ ಒಲವಿರಬೇಕು; ಮತ್ತು ಎಲ್ಲರಿಗೂ ನಾನು ಹೇಳುತ್ತಿರುವುದು ಇದನ್ನೇ. ನಿನ್ನಲ್ಲಿ 'ಲಯ'ದ ಸ್ಥಿತಿ ವರ್ಧಿಸುತ್ತಿದೆ. ಭಗವಂತ ನಿನ್ನ ಮೇಲೆ ಕೃಪಾಪೂರ್ಣನಾಗಿದ್ದು, ನೀನು ನಿನ್ನ ಪ್ರಯತ್ನ (ಸಾಧನೆ) ಮುಂದುವರಿಸುತ್ತ ಹೋದರೆ, ಆ ಸ್ಥಿತಿ (ಅವಸ್ಥೆ) ಸ್ಥಿರಗೊಳ್ಳುತ್ತದೆ. ಅಧ್ಯಾತ್ಮದಲ್ಲಿ ಪ್ರಗತಿಗೆ ಕೊನೆ ಎಂಬುದಿಲ್ಲ. 'ಲಯಾವಸ್ಥೆ' ಪಡೆದರಷ್ಟೇ ಸಾಲದು, ಅದರಾಚೆಗೆ ಇನ್ನೂ ಬಹಳಷ್ಟಿದೆ, ಮತ್ತು ಆ ಹಂತಗಳಿಗೂ ಕೊನೆಯೆಂಬುದಿಲ್ಲ. ಓರ್ವನು ಅತ್ಯುನ್ನತ ಸ್ಥಿತಿಯನ್ನು ಪಡೆದರೂ,– ಜಗತ್ತಿನ ಆದಿಯಿಂದ ಯಾವೊಬ್ಬನೂ ಅದನ್ನು ಇದುವರೆಗೆ ಪಡೆದಿಲ್ಲ– ಮುಂದೆ ತಿಳಿಯಬೇಕಾದುದು ಇನ್ನೂ ಬಹಳಷ್ಟು ಉಳಿದಿದೆ. ಈ ಯುಗದಲ್ಲಿ (ಕಾಲದಲ್ಲಿ) ಮನುಷ್ಯ ತಾನು ಪರಿಪೂರ್ಣನೆಂದು ಅದೆಂತು ಭಾವಿಸಬಲ್ಲ?

P-4-Books-PM-7-Anantyatre-14



'ಪರಿಪೂರ್ಣತೆ' ಇರುವುದು ಕೇವಲ ಭಗವಂತನಲ್ಲಿ ಮಾತ್ರ. ಈ ಜನರು, ಒಂದು ಅರಿಷಿಣದ ಕೊಂಬು ದೊರೆತ ಮಾತ್ರಕ್ಕೆ ತಾನೊಬ್ಬ ಗ್ರಂದಿಗೆ ವ್ಯಾಪಾರಿಯೆಂದು ಭಾವಿಸುವ ಮನುಷ್ಯನಂತಿದ್ದಾರೆ. 'ನೇತಿ'–'ನೇತಿ' (ಇದಲ್ಲ, ಇದಲ್ಲ) ಎಂದು ವೇದಗಳು ಹೇಳಿವೆ.

ಬೇರೆಯವರ ಮನಸ್ಸು ನೋಯಿಸುವಂಥ ಮಾತುಗಳನ್ನು, ಅದರಲ್ಲಿಯೂ, ಅಂಥ ಮಾತುಗಳು ಒಂದು ವೇಳೆ ನಿಜವಾಗಿ ಘಟಿಸಿದರೆ ಅದರಿಂದ ಅವರಿಗೆ ಕಷ್ಟವಾಗಬಹುದಾದರೆ, ಅಂಥ ಮಾತುಗಳನ್ನು ಆಡಬಾರದೆಂಬುದನ್ನು ಪ್ರತಿಯೊಬ್ಬನೂ ನೆನಪಿನಲ್ಲಿಟ್ಟುಕೊಳ್ಳಬೇಕು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯ **ಪತ್ರ ಸಂಖ್ಯೆ – ೨೪** ಷಾಹಜಹಾನಪುರ
೧೬–೦೧–೧೯೪೫

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಆಧ್ಯಾತ್ಮಿಕ ಪ್ರಗತಿಯನ್ನು ಕುರಿತು ಅತ್ಯಂತ ಒಳ್ಳೆಯ ಪತ್ರಗಳು ನನಗೆ ತಲುಪುತ್ತಿರುವುದು ತುಂಬಾ ಸಂತೋಷದ ಸಂಗತಿ. ಇದಕ್ಕೋಸ್ಕರ ನಾನು ಭಗವಂತನಿಗೆ ಕೃತಜ್ಞ. ನನ್ನ ಬಗ್ಗೆ ಯಾರೂ ವಿಚಾರಿಸುವುದಿಲ್ಲ, ಮತ್ತು ತಮ್ಮ ಬಗ್ಗೆ ಯಾರೂ ನನಗೆ ತಿಳಿಸುವುದೂ ಇಲ್ಲ. ನಾನು ಶ್ರೀಮಂತನಲ್ಲವೆಂಬುದು ಸ್ಪಷ್ಟವಾಗಿ ತೋರಿ ಬರುತ್ತಿರುವಾಗ ಯಾರು ತಾನೆ ನನ್ನ ಬಗ್ಗೆ ವಿಚಾರಿಸುತ್ತಾರೆ? ಜನರು ನನ್ನಲ್ಲಿಗೆ ಬರುತ್ತಾರೆ, ನನ್ನಿಂದ ಕಲಿತುಕೊಳ್ಳುತ್ತಾರೆ ಕೂಡ; ಆದರೆ ಈ ಬಡಪಾಯಿಯನ್ನು ಪತ್ರಗಳ ಮೂಲಕ ವಿಚಾರಿಸುವವರು ತೀರಾ ಕಡಿಮೆ ಎಂದೆನ್ನಬೇಕು. ಜನರ ಲಕ್ಷ್ಯವನ್ನು ನನ್ನತ್ತ ಸೆಳೆಯಲು ನನ್ನಲ್ಲಿ ಬಡತನವೊಂದನ್ನುಳಿದು ಇನ್ನೇನೂ ಇಲ್ಲ. ನಾನು ಪ್ರಯಾಣಕ್ಕೋಸ್ಕರ ಯಾವ ಸಾಮಾನುಗಳನ್ನೂ (ಸಂಸ್ಕಾರ) ಇಟ್ಟುಕೊಂಡಿಲ್ಲ. ಯಾಕೆಂದರೆ ನನಗೆ ಯಾವುದೇ ಪ್ರಯಾಣ ಮಾಡುವುದು ಅಗತ್ಯವಿಲ್ಲ. ನಾನು ಯಾರನ್ನಾದರೂ ಅವರ 'ಮಾತೃಭೂಮಿ'ಗೆ ಪ್ರಯಾಣ ಮಾಡಲು ಕೇಳಿಕೊಂಡರೆ, 'ಗುರಿಯನ್ನು ಸಾಧಿಸಿ, ಗಂತವ್ಯವನ್ನು ತಲುಪಿದಾಗ ನನ್ನ ಸಾಮಾನು (Luggage)ಗಳೆಲ್ಲವನ್ನೂ ಕಳೆದುಕೊಳ್ಳುವುದಾದರೆ, ಅಂಥ ಪ್ರಯಾಣ ಯಾಕೆ ಕೈಗೊಳ್ಳಬೇಕು' ಎಂದು ಯಾರು ಬೇಕಾದರೂ ಕೇಳಬಹುದಲ್ಲವೆ? ನಮ್ಮ ಸಾಮಾನುಗಳೆಲ್ಲವೂ ಕಳೆದು ಹೋದ ನಂತರ ನಮ್ಮ ಬಳಿ ಉಳಿಯುವುದೇನು? ಪ್ರಯಾಣದ ಪ್ರತಿಫಲ, ಪರಿಣಾಮ ಇದೇ ಏನು ? ಇವೆಲ್ಲವೂ ಸತ್ಸಂಗದ ಪರಿಣಾಮ ಎಂಬುದು ಅವರಿಗೆ ತಿಳಿಯತೊಡಗಿದ ನಂತರ ಅವರು ಆಸಕ್ತಿ



ಕಳೆದುಕೊಳ್ಳಲಾರಂಭಿಸುತ್ತಾರೆ. ಷಾಹಜಹಾನಪುರದಲ್ಲಿ ಇದಕ್ಕೆ ಒಂದು ಜೀವಂತ ಉದಾಹರಣೆ ಇನ್ನೂ ಇದೆ.

ಪ್ರಿಯ ಪುತ್ರಿ, ನಾನು ನಿಮಗೆಲ್ಲರಿಗೂ ಏನು ಕೊಡಬೇಕು? ನನ್ನ ಕಳೆದು ಹೋದ ಸಾಮಾನುಗಳನ್ನು ನಾನು ಮರಳಿ ಹುಡುಕಿ ಪಡೆಯಲು ಪ್ರಯತ್ನಿಸುವುದೂ ಸಾಧ್ಯವಿಲ್ಲ; ಯಾಕೆಂದರೆ ಈ ಪ್ರಯಾಣದ ವೆಚ್ಚವಾಗಿ ನಾನು ಅವೆಲ್ಲವನ್ನೂ ಸಂದಾಯ ಮಾಡಿದ್ದೇನೆ. ಈಗ ನನ್ನ ಬಳಿ ಉಳಿದುದಾದರೂ ಏನು? ಈಗ ಉಳಿದಿರುವುದು 'ಶೂನ್ಯತೆ' ಮಾತ್ರ; ಮತ್ತೆ, ಅದನ್ನು ತೆಗೆದುಕೊಳ್ಳಲು ಒಬ್ಬಿಬ್ಬರಾದರೂ ಮುಂದೆ ಬರುವುದೂ ಕಷ್ಟ ಸಾಧ್ಯವೇನೊ ! ಇದು ಒಳಿತೆಂದು ನಿನಗನಿಸುವುದೆ? ಈಗ, ನೀವು ತೀವ್ರವಾಗಿ ಬಯಸುವ ಪ್ರೇಮವನ್ನು ಕೊಡಬೇಕೆಂದರೆ, ಅದೂ ಕೂಡ ನನ್ನ ಬಳಿ ಉಳಿದಿಲ್ಲ. ಹೌದು, ಭಗವಂತನು ಅದನ್ನು ಕೊಡಲೆಂದು, ನಾನು, ನೀನು ಇಬ್ಬರೂ ಕೈ ಜೋಡಿಸಿ ಪ್ರಾರ್ಥಿಸಬಹುದಷ್ಟೆ. ಆದರೆ ಅದರಲ್ಲಿಯೂ ಒಂದು ಕಷ್ಟ ಉಂಟು : 'ಈಯೆಲ್ಲವನ್ನೂ ನನಗೆ ಅರ್ಪಿಸಿದ ಈ ಬಡಪಾಯಿ, ನಾನು ಒಂದು ವೇಳೆ ಅದನ್ನು ಮರಳಿ ಕೊಟ್ಟರೆ ಆ 'ಪ್ರೇಮ'ವನ್ನು ಕಾಯ್ದಿಟ್ಟುಕೊಳ್ಳಲು ಶಕ್ತನಾಗಬಹುದೆ?' ಎಂದು ಭಗವಂತ ಪ್ರಶ್ನಿಸಲೂಬಹುದು. ಭಗವಂತ ತನ್ನ 'ಪ್ರೇಮ'ವನ್ನು ನಿನಗೇನೋ ಕೊಟ್ಟು ಬಿಡಬಹುದು; ಆದರೆ, ಮಗಳೆ, ನನ್ನ ಮಟ್ಟಿಗೆ, ನನಗೆ ಅವನು ಅದನ್ನು ಕೊಡುವನೋ ಅಥವಾ ಇಲ್ಲವೊ ಎಂಬ ಸಂದೇಹವಿದೆ; ಯಾಕೆಂದರೆ, ಈಗ ನಾನು ಅವನಿಗೆ ಸಂಪೂರ್ಣ ನಿರಾವರಣನಾಗಿ ನನ್ನನ್ನು ತೆರೆದುಕೊಂಡಿದ್ದೇನೆ. ನಿನ್ನ ಸ್ಥಿತಿಯ ಬಗ್ಗೆ ನೀನು ಬರೆದುದನ್ನು ನೋಡಿದರೆ, ನೀನೂ ನನ್ನಂತೆಯೇ ಪ್ರಯಾಣದ ವೆಚ್ಚವಾಗಿ ಸರ್ವಸ್ವವನ್ನೂ ಸಂದಾಯ ಮಾಡಿ, ಯಾವುದೇ ಸಾಮಾನು (Luggage) (ಸಂಸ್ಕಾರ)ಗಳೂ ಇಲ್ಲದ ಈ ಬಡವನಂತೆ ಆಗಿಬಿಡುತ್ತೀಯೆ ಎಂಬ ಭಯ ನನಗಾಗುತ್ತದೆ !

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦ **ಪತ್ರ ಸಂಖ್ಯೆ – ೨೬** ಷಾಹಜಹಾನಪುರ
೦೯–೦೨–೧೯೪೫

ಪ್ರಿಯ ಪುತ್ರಿ, ಆಶೀರ್ವಾದ

೨೪–೦೧–೧೯೪೫ರ ನಿನ್ನ ಪತ್ರ ಕೈಸೇರಿದೆ. ಅದಕ್ಕೆ (ಬಸಂತ) ಉತ್ಸವವಾದ ನಂತರ, ಈಗ ಉತ್ತರ ಬರೆಯುತ್ತಿದ್ದೇನೆ. ಒಬ್ಬ ಬಡವ ಕೇವಲ ಬಡತನವನ್ನಷ್ಟೇ ಕೊಡಬಲ್ಲ ಎಂದು ನನ್ನ ಪತ್ರಕ್ಕೆ ನೀನು ಉತ್ತರಿಸಿದ್ದೀಯೆ. ನಾನು ಅತ್ಯಂತ ಬಡವ ಎಂದು ನಾನು ಬರೆದ ಪತ್ರದ ಉತ್ತರ ಅದಾಗಿತ್ತು.

P-4-Books-PM-7-Anantyatre-15



ಬಡತನದ ಸ್ಥಿತಿ (ಶೂನ್ಯತೆ) (ಅಕಿಂಚನತ್ವ), ಯಾವುದಕ್ಕೋಸ್ಕರ ಜನರು ಹಪಹಪಿಸಿ, ಅಭೀಪ್ಸೆಯಿಂದ ಪ್ರಾಣತೆತ್ತರೋ ಆ ಸ್ಥಿತಿ; ಮತ್ತೆ, ಅನೇಕ ಸಂತರು ಮತ್ತು ಋಷಿಗಳು ಕೂಡ ಅದರ ಸವಿಯನ್ನು ಸವಿಯಲಾರದೆ ಉಳಿದಿರಬಹುದು. ನಾವು ಸಂಪತ್ತುಳ್ಳವರಲ್ಲ, ಎಂದರೆ ನಾವು ಬಡವರು (ಅಕಿಂಚನರು) ಎಂದು ಅರ್ಥ. ಸಂಪದ್ಭರಿತನಾದವನು ಎಲ್ಲವನ್ನೂ ಹೊಂದಿರುತ್ತಾನೆ. ಆದರೆ, ಬಡವ (ಅಕಿಂಚನ) ಕೇವಲ 'ರಿಕ್ತತೆ'ಯನ್ನು, 'ಶೂನ್ಯತೆ'ಯನ್ನು ಹೊಂದಿರುತ್ತಾನೆ; ಅಂದರೆ ಬಡವನ ಆಸ್ತಿ 'ರಿಕ್ತತೆ' (Nothing) ಎಂದು ಅರ್ಥಹೊರಡುತ್ತದೆ. ಈಗ, ಕೇವಲ 'ರಿಕ್ತತೆ'ಯನ್ನು ಹೊಂದಿದ ವ್ಯಕ್ತಿ, ಇತರರಿಗೆ ನೀಡಬಹುದಾದರೆ, ಅವನು ಹೊಂದಿರುವ ಅಂಥ ವಸ್ತುವಾದರೂ ಏನು ? ಅವನು ಏನನ್ನೇ ಕೊಟ್ಟರೂ, ಅದು 'ಶೂನ್ಯತೆ' (Nothing) ಎಂಬ ಹೆಸರಿನಿಂದ ಕರೆಯುವಂತಿದ್ದರೆ, ಆಗ ಅದು ಕೊಡಲು ಯೋಗ್ಯವಲ್ಲದ ವಸ್ತುವಾಗಿ ಉಳಿಯುತ್ತದೆ, ಒಮ್ಮೆ ಶ್ರೀಮಂತನಾಗಿದ್ದ ವ್ಯಕ್ತಿ, ತನ್ನ ಸಂಪತ್ತನ್ನು ಕೊಟ್ಟಾನು; ಆದರೆ ಅವನ ಬಳಿ ಏನೂ (ಯಾವ ವಸ್ತುವೂ) ಉಳಿಯದಿದ್ದಾಗ, ಅವನು ಆ 'ನಿರ್ವಸ್ತು' (Nothing) ವನ್ನಷ್ಟೇ ಕೊಡಬಲ್ಲ. ಏನನ್ನಾದರೂ ಕೊಡಲು ಅವನನ್ನು ನೀನು ಬೇಡಿದರೆ, ನನ್ನ ಬಳಿ ಏನೂ ಉಳಿದಿಲ್ಲವೆಂದು ಭಾವಿಸಬಹುದು. ಹೌದು ಒಂದು ಮಾತು ನಿಜ; ಏನೆಂದರೆ ಅದರ ತಳದಲ್ಲಿ 'ಏನೋ ಒಂದು', 'ಇದೆ', 'ಏನೂ ಅಲ್ಲ' (ಶೂನ್ಯತೆ) ಎಂದು ಕರೆಯಬಹುದಾದ ಆ 'ಏನೋ ಒಂದು ಇದೆ ಎಂದಾದರೆ, ಅದನ್ನು ಕೊಡಲು ಸಾಧ್ಯ. ಅದರಾಚೆಗೆ, ಅದೂ (ಅಸ್ತಿತ್ವದಲ್ಲಿ) ಉಳಿಯುವುದಿಲ್ಲ, ಮತ್ತು, 'ಕೊಡುವುದು' ಹಾಗೂ 'ತೆಗೆದುಕೊಳ್ಳುವುದು' ಎರಡೂ ಕೊನೆಗಾಣುತ್ತವೆ. ಈ ಸ್ಥಿತಿ (ಅವಸ್ಥೆ)ಯನ್ನು ಪಡೆಯುವ ದಾರಿ ಈಗ ನಿಚ್ಚಳವಾಗುತ್ತದೆ. ಅದೇನೆಂದರೆ, ವಸ್ತುಸಂಪತ್ತನ್ನು ಹೊಂದಿದ ವ್ಯಕ್ತಿಯಿಂದ ಅವನ ಆ ಸಂಪತ್ತನ್ನು ಕಸಿದುಕೊಳ್ಳುತ್ತ ಹೋಗಬೇಕು. ಆಗ ಅವನ ಬಳಿ ಯಾವ ವಸ್ತುವೂ ಇಲ್ಲದಾದಾಗ ಕೊನೆಯಲ್ಲಿ, ಅವನು 'ರಿಕ್ತತೆ' (ಶೂನ್ಯತೆ)ಯ ಸ್ಥಿತಿಗೆ ತಲುಪುತ್ತಾನೆ. 'ಯಾರೊಬ್ಬರ ಸಂಪತ್ತು, ಸಾಮಾನು ಸರಂಜಾಮುಗಳನ್ನು ಕಿತ್ತುಕೊಳ್ಳುವುದು ಶಾಸ್ತ್ರವಿರುದ್ಧವಲ್ಲವೆ ?' ಎಂದು ಚೌಬೇಜಿಯವರನ್ನು ಕೇಳಿ ನನಗೆ ನೀನು ಬರೆಯಬೇಕು. 'ಅವನು ತನ್ನ ಬಳಿ ಇರುವ ಸಾಮಾನುಗಳನ್ನು ಮನಸ್ಸಿಗೆ ತರಬಾರದು ಎಂಬುದು ಅವರ ಉತ್ತರವಾಗಬಹುದು. ಒಂದಿಲ್ಲೊಂದು ರೂಪದಲ್ಲಿ ವಸ್ತುಗಳು ಅವನ ಬಳಿ ಇವೆ, ಅವನಿಗೆ ಅವುಗಳ ನೆನಪು ತರುತ್ತವೆ ಎಂದಮೇಲೆ, ಮನಸ್ಸಿಗೆ ಹಚ್ಚಿಕೊಳ್ಳದಿದ್ದರೂ, ವಸ್ತುಗಳು ಅವನ ಸ್ವಾಧೀನದಲ್ಲಿಯೇ ಇದ್ದಂತಲ್ಲವೆ ? ಎಂಬ ಪ್ರಶ್ನೆ ಏಳುತ್ತದೆ. ಈಗೇನು ಮಾಡುವುದು ? ಉಳಿದಿರುವ ಒಂದೇ ಒಂದು ಉಪಾಯವೆಂದರೆ 'ಸಾಮಾನು'ಗಳನ್ನು ಒಂದು ಸ್ಥಳದಲ್ಲಿ ಇಡಬೇಕು, ಮತ್ತು ಅಗತ್ಯವಿದ್ದಾಗ ಅವನಿಗೆ ಅದು ಗೊತ್ತಿರಬೇಕು. ಆಗ ಆ ವಸ್ತುವನ್ನು ಬೇರೊಬ್ಬನ ಸುಪರ್ದಿಯಲ್ಲಿ ನ್ಯಾಸವಾಗಿ ಒಪ್ಪಿಸಲಾಗಿದೆ ಎಂಬ ವಿಚಾರ ಬರುತ್ತದೆ. ಈ ವಿಧಾನ ಒಂದು ಆರಂಭಿಕ ಕ್ರಮ; ಮುಂದಕ್ಕೆ ಅದು ಪ್ರಗತಿಯಾಗುತ್ತ ಹೋಗುವುದು.



ಬೇರೊಬ್ಬನಲ್ಲಿ ಇಡಲಾದ ವಸ್ತುಗಳು 'ಅವನಿಗೆ' (ಯಾರಲ್ಲಿ ನ್ಯಾಸವಾಗಿ ಇಡಲಾಗಿದೆಯೋ ಅವನಿಗೆ) ಸೇರಿದುದೆಂದು, ಮತ್ತು ಅದರ ಮೇಲೆ ಯಾವುದೇ ರೀತಿಯ ನನ್ನ ಹಕ್ಕು ಉಳಿದಿಲ್ಲ ಎಂದು ಭಾವಿಸಿದರೆ, ಎಲ್ಲವನ್ನು ಹೊಂದಿಯೂ ತನ್ನಲ್ಲಿ ಏನೂ ಇಲ್ಲ ಎಂಬ ಸ್ಥಿತಿ ಬೆಳೆಯುವುದು. ಈಗ ಭಗವಂತನಿಂದ ನಾವು ಪಡೆದ ಎಲ್ಲ ಆಂತರಿಕ ಶಕ್ತಿಗಳು, ಹಾಗೂ ಸಾಮರ್ಥ್ಯಗಳು ಭಗವಂತನಿಗೆ ಸೇರಿದವುಗಳೆಂದು ನಾವು ಭಾವಿಸಿದರೆ, ಮತ್ತು ಅವುಗಳ ಸರ್ವ ಸ್ವಾಮ್ಯವನ್ನು ಅವನಿಗೆ ಅರ್ಪಿಸಿದರೆ, ಅರ್ಥಾತ್ ಆ ಶಕ್ತಿ–ಸಾಮರ್ಥ್ಯಗಳನ್ನು ಅವನಿಗೇ 'ಮಾರಿ' ಬಿಟ್ಟರೆ, ಆಗ ನಾವು ಅವೆಲ್ಲವುಗಳಿಂದ ಮುಕ್ತರಾಗಿ ರಿಕ್ತಹಸ್ತರಾಗುತ್ತೇವೆ. ಈ ಎಲ್ಲವುಗಳನ್ನೂ ನಾವು ನ್ಯಾಸವಾಗಿ ಒಪ್ಪಿಸಿಕೊಡಬಹುದಾದ ನ್ಯಾಸಾಧಿಕಾರಿ (Banker)ಯನ್ನು ಹುಡುಕಿಕೊಳ್ಳುವುದೆಂತು ಎಂಬುದು ಈಗ ಏಳುವ ಪ್ರಶ್ನೆ. ಅವನು ಎಷ್ಟು ದೂರ ಇರುವನೆಂದರೆ, ಅವನನ್ನು ಹುಡುಕಿಕೊಳ್ಳುವುದು ದುಃಸಾಧ್ಯ; ಅವನು ನಮ್ಮೆಲ್ಲರಿಗೆ ಅತಿನಿಕಟತಮನಾಗಿರುವನೆಂದರೆ, ಅವನ ಸ್ಥಾನ ನಮ್ಮ ಕಣ್ಣುಗಳ ಸ್ಥಾನವಾಗುತ್ತದೆ; ನಮ್ಮದೇ ಕಣ್ಣು ನಮ್ಮ ಇನ್ನೊಂದು ಕಣ್ಣನ್ನು ಕಾಣಲಾರದು. ಹಾಗಾದರೆ ಅಂಥ ಬ್ಯಾಂಕರ್‌ನನ್ನು ಹುಡುಕುವುದು ಹೇಗೆ ? ಅದಕ್ಕೆ ಉತ್ತರವೆಂದರೆ, ನಾವು ಅಡಿಯಿಂದ ಮುಡಿಯವರೆಗೆ ಕಣ್ಣೇ ಆಗಿ ಬಿಟ್ಟರೆ, ನಾವು ಸಂಪೂರ್ಣವಾಗಿ 'ಕಣ್ಣು' ಎಂದಾದರೂ ಹೇಳಬಹುದು. ನಾವು ಅವನನ್ನು ಹುಡುಕಬೇಕಿದೆ. ನಾವು ಸಂಪೂರ್ಣವಾಗಿ ಕಣ್ಣು ಆಗಿದ್ದೇವೆ ಎಂದರೆ, ಇಡೀ ದೇಹವೇ 'ದರ್ಶಿಸುವ' ಶಕ್ತಿಯನ್ನು ಪಡೆಯಿತು ಎಂದೇ ಅರ್ಥ. ಈಗ ನೋಡಬೇಕಾದುದು ಏನು ? – ನಾವೇ ಸಂಪೂರ್ಣ ಕಣ್ಣು ಆಗಿ, ಬೇರೇನೂ ಆಗಿರದಿದ್ದಾಗ ? ಈಗ, ಒಂದು ಕಣ್ಣು ಇನ್ನೊಂದು ಕಣ್ಣನ್ನು ಕಾಣಲಾರದು ಎಂಬ ಸ್ಥಿತಿ ಅಳಿದುಹೋಗುತ್ತದೆ; ಯಾಕೆಂದರೆ, ಅವನತ್ತ ನೋಡಬೇಕೆಂದು ಪ್ರಚೋದಿಸುವ ಸಾಮರ್ಥ್ಯ ಮಾಸಿ ಹೋಗುತ್ತದೆ ಮತ್ತು ಆ ಸಾಮರ್ಥ್ಯಗಳ – ಅನೇಕ 'ರೂಪ'ಗಳಲ್ಲಿರುವ ಆ ಸಾಮರ್ಥ್ಯಗಳ ಸ್ಥಾನದಲ್ಲಿ ಕೇವಲ 'ಕಣ್ಣು' ಮಾತ್ರವೇ ಉಳಿದಿರುತ್ತದೆ, ಪ್ರಿಯ ಪುತ್ರಿ, ಈಗ ಕೇವಲ, ತನ್ನ ಬೆಳಕನ್ನು ಎಲ್ಲ ದಿಕ್ಕುಗಳಲ್ಲಿ ಸೂಸುತ್ತಿರುವ 'ಸತ್ಯ' ಒಂದೇ ಉಳಿದಿದೆ ಎಂಬ ಸ್ಥಿತಿ ಬರುತ್ತದೆ. ಇನ್ನೊಂದು ಕಣ್ಣನ್ನು ನೋಡಲು ಬಯಸುತ್ತಿರುವ ಕಣ್ಣು ಆದ್ಯಂತವಾಗಿ ಒಂದೇ ಆಗಿಬಿಡುತ್ತದೆ. ಆಗ, 'ಅದ'ನ್ನು ನೋಡುವ ಅಗತ್ಯವೇ ಏಳುವುದಿಲ್ಲ.

ಈ ಎಲ್ಲದರ ಒಟ್ಟು ತಾತ್ಪರ್ಯವೇನೆಂದರೆ, ನಮ್ಮಲ್ಲಿ ಕಣ್ಣು ಹಾಗೂ ಕಣ್ಣು ಮಾತ್ರವೇ ಕಂಡಿತ್ತು; ಈಗ, ಯಾವುದರಿಂದ ಕಣ್ಣು ಕಣ್ಣನ್ನು ಕಾಣಬಹುದಿತ್ತೋ ಆ ಎಲ್ಲ ವಸ್ತುಗಳೂ ಹೊರಟು ಹೋದವು. ಅದೇ ರೀತಿಯಾಗಿ, ಕಣ್ಣಿನ ಸ್ಥಾನದಲ್ಲಿ ನಾವು ಭಗವಂತನನ್ನು ಹಾಗೂ ಭಗವಂತನನ್ನು ಮಾತ್ರವೇ ಇಟ್ಟರೆ, ಅವನನ್ನೇ ಅನುಭವಿಸಿದರೆ, ನಮಗೆ ಒಬ್ಬ ನ್ಯಾಸಾಧಿಕಾರಿ (Banker)ಯ ಅಗತ್ಯ ಬರುವುದಿಲ್ಲ; ಯಾಕೆಂದರೆ ನಾವು ಯಾವುದನ್ನು ಬ್ಯಾಂಕರ್‌ನಿಗೆ ಒಪ್ಪಿಸಬೇಕೆಂದಿದ್ದೆವೊ, ಅದೆಲ್ಲವೂ ನೈಜ ರೂಪಕ್ಕೆ ಹೊಂದಿಕೊಳ್ಳುತ್ತದೆ. ಈಗ, ರಿಕ್ತತೆಯ (ಅಕಿಂಚನತ್ವದ) ಪ್ರಶ್ನೆ.

P-4-Books-PM-7-Anantyatre-16



ಆದರೆ, ನಾವು ಸಂಪತ್ತಿನ ಸ್ವಾಮ್ಯ ಮತ್ತು ರಿಕ್ತತೆ ಎರಡನ್ನೂ ಕೊನೆಗೊಳಿಸಬೇಕಿದೆ. ಅದು ಸಾಧ್ಯವಾಗುವುದು, ಅಡಿಯಿಂದ ಮುಡಿಯವರೆಗೆ ಕಣ್ಣು ಆಗುವುದರ ಸ್ಥಾನದಲ್ಲಿ (ಬದಲಿಗೆ) ತಾನು ನಿಜವಾದ ಕಣ್ಣು, ಅರ್ಥಾತ್ ಭಗವಂತನೇ ಆಗಬಹುದಾದರೆ ಮಾತ್ರ. ಅದು ಎಷ್ಟು ಸಹಜ ರೀತಿಯಲ್ಲಿ ಘಟಿಸುವುದೆಂದರೆ, ಅದರ ಅರಿವೂ ಉಂಟಾಗದು, ಮತ್ತು ಆಗ, ಸಂಪತ್ತಿನ ಸ್ವಾಮ್ಯ ಮತ್ತು ರಿಕ್ತತೆ ಎರಡೂ ಹೊರಟು ಹೋಗುತ್ತವೆ.

ನನ್ನ ಹಿಂದಿನ ಪತ್ರದಲ್ಲಿ, ನಾನು ರಿಕ್ತತೆ (Nothingness ಶೂನ್ಯತೆ) ಕುರಿತು ಪ್ರಸ್ತಾಪಮಾಡಿದ್ದೆ. ಇದು ಭಕ್ತನ ಸ್ಥಿತಿ; ಇದರಾಚೆಗೆ ಇರುವುದು ಮಹಾಪುರುಷರ ಸ್ಥಿತಿ. ಹಾಗೂ, ಅವತಾರಗಳ ಸ್ಥಿತಿಯು ಇನ್ನೂ ಆಚೆಗೆ ಇರುವುದು. ಪ್ರಿಯ ಪುತ್ರಿ, ಈ ಪತ್ರಕ್ಕೆ ನೀನು ಉತ್ತರ ಬರೆದರೆ ನನಗೆ ಅತಿಶಯ ಸಂತೋಷವಾದೀತು. ಅಲ್ಲದೆ, ನೀನು ಅದರ ಬಗ್ಗೆ ಬರೆಯಬೇಕಷ್ಟೇ ಅಲ್ಲ, ನೀನು ಅಂತೆಯೇ ಆಗುವಂತೆ ಪ್ರಾರ್ಥನೆ ಮಾಡಬೇಕು. ಭಗವಂತನ ಸಾಮರ್ಥ್ಯವನ್ನು ಮೀರಿದುದು ಯಾವುದೂ ಇಲ್ಲ. ಅವನು ಸರ್ವಸಮರ್ಥ. ನೀನು ಷಾಹಜಹಾನಪುರದಲ್ಲಿದ್ದಾಗ ನಾನು ನಿನ್ನನ್ನು ಸೇವಕಿಯಾಗಿ ನೇಮಿಸಿಕೊಳ್ಳಬೇಕೆಂದು ನೀನು ಪ್ರಾರ್ಥಿಸಿದ್ದೆ. ಈ ಪ್ರೀತಿಪೂರ್ಣ ಮಾತುಗಳಿಂದ ನಾನು ಅತೀವ ಪ್ರಸನ್ನನಾಗಿದ್ದೆ. ಪುತ್ರಿ, ಇರುವ ಒಂದೇ ಕಾಳಜಿ ಆರೋಗ್ಯದ್ದು; ಮತ್ತು ಅದರ ಕಾರಣದಿಂದಲೇ ಪರಿವರ್ತನೆ ಸಾವಕಾಶವಾಗಿ ಆಗುತ್ತಿದೆ. ಅದಿಲ್ಲವಾದರೆ, ಆಧ್ಯಾತ್ಮಿಕತೆಯನ್ನು ಅದರ ನೈಜ ಸ್ವರೂಪದಲ್ಲಿ ಉಂಟುಮಾಡುವುದು ಕೇವಲ ಕೆಲವೇ ಕ್ಷಣಗಳ ಕೆಲಸ. ಸೇವೆಯ ಶುಲ್ಕರೂಪದಲ್ಲಿ ನೀನು ದಿನಕ್ಕೆ ಆರು ಬೈಠಕ್‌ಗಳನ್ನು ಬೇಡಿದ್ದೆ. ನೀನು ಸದಾಕಾಲ ನಿರಂತರ 'ಬೈಠಕ್' ತೆಗೆದುಕೊಳ್ಳುತ್ತಿರುವ ಅನುಭವ ನಿನಗಾಗುವಂತೆ ಮತ್ತು ನಾನು ಯಾರ ಸೇವಕನಾಗಿರುವೆನೋ, ನೀನೂ ಅವರ ಸೇವಕಿಯಾಗುವಂತೆ ಭಗವಂತ ಅನುಗ್ರಹಿಸಲಿ.

ನಿನ್ನ ಪತ್ರದ ಜೊತೆಯಲ್ಲಿ ಕೇಸರ್‌ಳೂ ಒಂದು ಪತ್ರ ನನಗೆ ಕಳುಹಿಸಿದ್ದಾಳೆ. ಅವಳು ನನಗೆ ಮಗಳಾಗಿರಲಿ ಅಥವಾ ಸೋದರಿಯಾಗಿರಲಿ, ನಾನು ಅದೇ ಬಾಂಧವ್ಯ ಹೊಂದಿರುತ್ತೇನೆ ಎಂಬುದೇ ಅವಳ ಪತ್ರಕ್ಕೆ ಉತ್ತರ. ಇಡೀ ಜಗತ್ತು ನನಗಿಂತ ಹೆಚ್ಚು ಉತ್ತಮವಾಗಲಿ ಎಂದು ನಾನು ಆಶಿಸುತ್ತೇನೆ. ಅದು ನನ್ನ ಪ್ರಾರ್ಥನೆ ಕೂಡ. ಮತ್ತು, ಅದಕ್ಕೋಸ್ಕರ ನಾನು ಎಲ್ಲ ಪರಿಣಾಮಗಳನ್ನೂ ತಾಳಿಕೊಳ್ಳುತ್ತೇನೆ, ಎಲ್ಲ ಶಿಕ್ಷೆಗಳನ್ನೂ ಸ್ವೀಕರಿಸುತ್ತೇನೆ. ನಾನು ಈ ಪತ್ರದಲ್ಲಿ 'ವೈರಾಗ್ಯ' ಮತ್ತು 'ಲಯಾವಸ್ಥೆ' (ಏಕಾತ್ಮಕತೆ)ಗಳ ಸ್ಥಿತಿಯನ್ನು ತೋರಿಸಿದ್ದೇನೆ ಮತ್ತು 'ಈಶ್ವರದರ್ಶನ' (ಸಾಕ್ಷಾತ್ಕಾರ) ಎಂದರೇನೆಂಬುದನ್ನೂ ತೋರಿಸಿದ್ದೇನೆ. 'ಈಶ್ವರದರ್ಶನ' ಮತ್ತು ಉಪ್ಪಿನ ರುಚಿ ಕಳೆದುಕೊಂಡ ಉಪ್ಪಿನ ಹರಳಿನ (ಸಂಗ್–ಬೇ–ನಮಕ್) ಆನಂದವನ್ನು ಗಮನದಲ್ಲಿಡು. ಕೊನೆಯಲ್ಲಿ ಉಳಿಯುವುದು ಈ ಸ್ಥಿತಿಯೊಂದೇ. ಇದಕ್ಕೋಸ್ಕರ ಜನರು ಅನೇಕ ಜನ್ಮಗಳ ಕಾಲ ಪರಿಶ್ರಮಪಡುತ್ತಾರೆ.



ಪ್ರಾರಂಭದಲ್ಲಿಯೇ ಅವರಿಗೆ ಈ ಸ್ಥಿತಿಯನ್ನು (ರುಚಿರಹಿತ ರುಚಿ) ನೀಡಿದುದಾದರೆ, ಜನರು ಓಡಿಹೋದಾರು ಮತ್ತು ಯಾವೊಬ್ಬನೂ ಭಗವಂತನ ಕಡೆಗೆ ಆಕರ್ಷಿತನಾಗಲಿಕ್ಕಿಲ್ಲ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧ **ಪತ್ರ ಸಂಖ್ಯೆ – ೩೪** ಷಾಹಜಹಾನಪುರ
೦೮–೦೫–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ಕೈಸೇರಿ ಸಂತೋಷವಾಯಿತು. ನಾನು ನಿನ್ನನ್ನು ನನ್ನ ಸೋದರಿ ಎಂದು ನಡೆದುಕೊಳ್ಳಬಯಸುತ್ತೇನೆ ಯಾಕೆಂದರೆ ನಾವೆಲ್ಲರೂ ಲಾಲಾಜಿಯವರ ಮಕ್ಕಳು ಹಾಗೂ ಸೇವಕರು. ಆದರೆ ನಾನು ನಿನ್ನನ್ನು ಯಾವಾಗಲೂ ನನ್ನ ಪುತ್ರಿಯಾಗಿ ಕಂಡಿದ್ದೇನೆ. ಹಾಗಿರುವುದರಿಂದ ನನ್ನ ಹೃದಯದಲ್ಲಿ ನೀನು ನನ್ನ ಪುತ್ರಿಯ ಬಂಧುತ್ವ ಹೊಂದಿದ್ದೀಯೆ. ಆದರೆ, ಗೋಚರಲ್ಲಿ ನಾನು ನಿನ್ನೊಡನೆ ಸೋದರಿಯೆಂಬ ಸಂಬಂಧ ಇಟ್ಟುಕೊಳ್ಳುತ್ತೇನೆ. ಸೋದರೀ–ಭಾವವು ಆಂತರಿಕವಾಗಿ ವಿಕಾಸಗೊಂಡರೆ ಹೆಚ್ಚು ಒಳಿತು. ನಾನು ನಿನ್ನ ಎಲ್ಲ ಸೋದರಿಯರನ್ನು ನನ್ನ ಸೋದರಿಯರೆಂದು ಪರಿಗಣಿಸುತ್ತೇನೆ; ಆದರೆ ಈ ತೆರನಾದ ಬಾಂಧವ್ಯ ನಿನ್ನೊಂದಿಗೆ ಸಾಧ್ಯವಿಲ್ಲ. ನೀನು ಯಾವುದೋ ಜನ್ಮದಲ್ಲಿ ಒಬ್ಬ ಸಂತನ ಅಥವಾ ಋಷಿಯ ಪುತ್ರಿಯಾಗಿದ್ದಿರುವುದು ಸಾಧ್ಯ; ಮತ್ತು ನೀನು ಒಮ್ಮೆ ಮೋಕ್ಷ (ಸ್ವರ್ಗತಿ) ಪಡೆದಿದ್ದೆ. ಆ ಚಕ್ರ ಪೂರ್ತಿಯಾದ ನಂತರ ನೀನು ಪುನಃ ಜನ್ಮ ತಳೆದಿದ್ದೀಯೆ. ನೀನು ಎಷ್ಟು ಜನ್ಮಗಳನ್ನು ಹೊಂದಿದ್ದೆ ಎಂಬುದನ್ನು ನಾನು ಈಗ ಹೇಳಲಾರೆ. ಈಗ, ಭಗವಂತ ಅನುಗ್ರಹಿಸಿದರೆ, ನಿನ್ನ ಮುಕ್ತಿಪ್ರಾಪ್ತಿಗೆ (Liberation) ಸಂದರ್ಭ ಮತ್ತು ಸಮಯ ಒದಗಿಬಂದಿದೆ. ನೀನು ಋಷಿ ಪತಂಜಲಿಯ ಸಮಯದಲ್ಲಿ ಇದ್ದೆ ಮತ್ತು ಅವರನ್ನು ಚೆನ್ನಾಗಿ ಬಲ್ಲವಳಾಗಿದ್ದೆಯಲ್ಲದೆ, ನೀನು ಕೇವಲ ಶ್ರವಣಮಾಡಿದ, ಅವರ ಮಾತುಗಳು ನಿನ್ನ ಹೃದಯದಲ್ಲಿ ಅನುರಣಿಸುತ್ತ ಉಳಿದುಕೊಂಡವು ಎಂಬುದೂ ನನ್ನ ಮನಸ್ಸಿನಲ್ಲಿ ಹೊಳೆಯುತ್ತದೆ. ಆ ಜನ್ಮದ ನಂತರ ನೀನು ಯೋಗಾಭ್ಯಾಸ ಮಾಡಿದ್ದೆ. ಆದರೆ ಅದನ್ನು ಪೂರ್ತಿಗೊಳಿಸಲಾಗಿರಲಿಲ್ಲ, ಮತ್ತು ಆ ಅವಧಿಯಲ್ಲಿ ನಿನಗೆ ಮೋಕ್ಷ ಪ್ರಾಪ್ತಿಯಾಗಿತ್ತು. ಪ್ರಾಯಶಃ ಈ ಸಂಬಂಧದ ಕಾರಣವೇ ನಾನು ನಿನ್ನನ್ನು ನನ್ನ ಪುತ್ರಿ ಎಂದು ಭಾವಿಸುವ ಸಾಧ್ಯತೆ ಇರಬಹುದು. ಈ ರಹಸ್ಯವನ್ನು ನಾನು ಈ ಪತ್ರದಲ್ಲಿ ಬಹಿರಂಗಪಡಿಸಲು ಇಚ್ಛಿಸುವುದಿಲ್ಲ. ಈ ಪತ್ರವನ್ನು ಓದಿ ಜನರು ನನ್ನ ಬಗ್ಗೆ ಯಾವ ಅಭಿಪ್ರಾಯ ತಳೆಯುತ್ತಾರೋ ದೇವರಿಗೇ ಗೊತ್ತು. ನೀನು ಇದರ ಬಗ್ಗೆ ತಿಳಿಯಲು ತೀರಾ ಉತ್ಸುಕಳಾಗಿದ್ದರೆ ಮಾಸ್ಟರ್‌ಸಾಹೇಬರನ್ನು ವಿಚಾರಿಸು

P-4-Books-PM-7-Anantyatre-17



(ಈಶ್ವರ ಸಹಾಯ್). ಚೌಬೇಜಿಯವರ ವಿಷಯದಲ್ಲಿ ನನಗೆ ಭಯವಿದೆ. ಈ ಜನ್ಮಕ್ಕೆ ಮೊದಲು ನೀನು ಒಬ್ಬ ಕೃಷಿಕನ ಮುಗ್ಧ ಮಗಳಾಗಿದ್ದೆ ಮತ್ತು ಹದಿನಾಲ್ಕನೆಯ ವಯಸ್ಸಿನಲ್ಲಿ ಮರಣ ಹೊಂದಿದೆ. ನಿನ್ನ ಪತ್ರದ ವ್ಯಾಪ್ತಿಯನ್ನೂ ಮೀರಿ ಈ ಸಂಗತಿಯನ್ನು ನಾನು ಬರೆಯುತ್ತಿದ್ದೇನೆ.

ನಾನು ಒಂದು ಸಂಗತಿಯನ್ನು ಬರೆದುಬಿಡುತ್ತೇನೆ. ಒಬ್ಬ ಗುರುವಿನಿಂದ (ಆಧ್ಯಾತ್ಮಿಕ) ಶಿಕ್ಷಣ ಪಡೆಯುವವರೆಲ್ಲರೂ – ಅವರು ವಯಸ್ಸಿನಲ್ಲಿ ಅವನಿಗಿಂತ ಹಿರಿಯರಾದರೂ ಸರಿಯೆ ಅಥವಾ ಕಿರಿಯರಿದ್ದರೂ ಸರಿಯೆ – ಅವನ ಆಧ್ಯಾತ್ಮಿಕ ಸಂತಾನ. ಈ ಮಾತನ್ನು ಸ್ವಾಮೀ ವಿವೇಕಾನಂದರೂ ಹೇಳಿದ್ದಾರೆ. ಆದರೆ ಇದರಿಂದಾಗಿ, ನೀನು ನನ್ನನ್ನು ಒಬ್ಬ 'ಗುರು' ಅಥವಾ 'ಮಾರ್ಗದರ್ಶಿ' ಎಂದು ಪರಿಗಣಿಸಬಾರದು. 'ಗುರು' ಅಥವಾ ಆಚಾರ್ಯ (Teacher) ಬೇರೊಬ್ಬನಿದ್ದಾನೆ. ಅವನು ನಮಗೆಲ್ಲ (ಆಧ್ಯಾತ್ಮಿಕ) ಶಿಕ್ಷಣ ನೀಡುತ್ತಾನೆ. ಭಗವಂತನ ಅನುಗ್ರಹದಿಂದ ಕೇಸರಳ ಸ್ಥಿತಿ ಈಗ ಹೆಚ್ಚು ಉತ್ತಮಗೊಂಡಿದೆ. ಚೌಬೇಜಿಯವರೂ ಅವಳ ಬಗ್ಗೆ ಶಿಫಾರಸು ಮಾಡಿದ್ದರು. ಆದರೆ, ನೀನು ಅವಳಿಗೆ 'ದಿಲ್ಲಿ (ಗುರಿ) ಬಲುದೂರವಿದೆ, ಮತ್ತು ಅವಳು ಪ್ರಯತ್ನ ಮುಂದುವರಿಸುತ್ತಿರಬೇಕು' ಎಂದು ಹೇಳಬೇಕು.

ಅಭ್ಯಾಸಿಯು ಎಂದೂ ತೃಪ್ತನಾಗಬಾರದು; ಮತ್ತು ಸದ್ಗುರುವಿನ ಸ್ಮರಣೆಯನ್ನು ಸಾಧ್ಯವಿದ್ದಷ್ಟು ಹೆಚ್ಚು ಹೆಚ್ಚು ಮಾಡಬೇಕು. 'ಅವನ ಸ್ಮರಣೆ'ಯಿಂದ ನಾವು ಎಂದೂ ತೃಪ್ತರಾಗಬಾರದೆಂಬುದು ನಮ್ಮ ನಿಷ್ಠೆಯಾಗಬೇಕು. ಹಾಗಿದ್ದಾಗ ನಮ್ಮನ್ನು ಅವನು ಯಾವಾಗ ತೃಪ್ತಗೊಳಿಸಬೇಕೆಂಬುದು ಅವನ ಕೃಪೆ; ಅದು ಅವನ ಕೈಯಲ್ಲಿದೆ. ನೀನು ಉದಾಹರಿಸಿದ ನಿಯಮಗಳು ಮತ್ತು ತತ್ತ್ವಗಳು, ಅಂಥ ಸ್ಥಿತಿಯನ್ನು ಬೆಳೆಸಿಕೊಳ್ಳಬೇಕೆಂಬುದು ಪ್ರಾರಂಭಿಕರಿಗೋಸ್ಕರ ಇರುವಂಥವು. ನನ್ನ 'ಭಿಕ್ಷುಕನ ಭಿಕ್ಷಾಪಾತ್ರೆ' ಎಂಬ ಪತ್ರವನ್ನು ನೋಡು. (ಋತವಾಣಿ, ಭಾಗ–೨, 'ಸಂತನ ಸಂಪತ್ತು' (A Faqueer's Wealth). ಅದರ ಪ್ರತಿ (ನಕಲು) ಮಾಸ್ಟರ್ ಸಾಹೇಬ (ಈಶ್ವರ ಸಹಾಯ್)ರವರ ಬಳಿ ಇದೆ. ಅದರ ಪ್ರತಿ ಚೌಬೇಜಿ (ಕಸ್ತೂರಿ ಬಹೆನ್‌ರವರ ತಂದೆ)ಯವರ ಬಳಿಯೂ ಇರಬಹುದು. ಅಭ್ಯಾಸಿಯು ಊರ್ಧ್ವಲೋಕದೊಂದಿಗೆ ಜೋಡಿಸಲ್ಪಟ್ಟಾಗ, ಅವನು ಅದು ತನ್ನ ಸ್ವಗೃಹವೆಂಬ ಅನುಭವ ಪಡೆಯಲಾರಂಭಿಸುತ್ತಾನೆ. ಒಮ್ಮೆ ಅಂಥ ಸ್ಥಿತಿ ನನಗೂ (ಅನುಭವಕ್ಕೆ) ಬಂದಿತ್ತು. 'ನಾನು ಒಮ್ಮೊಮ್ಮೆ ಅಡಿಗೆ ಮನೆಯನ್ನು ಮರೆತು, ದಿಗ್ಭ್ರಮೆಗೊಳ್ಳುತ್ತೇನೆ' ಎಂದು ನೀನು ಬರೆದಿದ್ದೀಯೆ. ಚೌಬೇಜಿಯವರ ಮಾತಿನಲ್ಲಿ ಅದಕ್ಕೆ ಉತ್ತರವೆಂದರೆ, ಅಸ್ವಸ್ಥತೆಯ ಕಾರಣದಿಂದ ನೀನು ಹಸಿವೆಯಿಲ್ಲದಂತಿರುತ್ತೀಯೆ ಎಂಬುದಾಗಿದೆ. ಆದರೆ ನನ್ನ ಉತ್ತರ ಏನೆಂದರೆ, ನಿನ್ನಲ್ಲಿ 'ಮರೆವಿನ ಸ್ಥಿತಿ' ಬೆಳೆಯುತ್ತಿದೆ. ಆದರೆ ಈ ಸನ್ನಿವೇಶಗಳಲ್ಲಿ, ಮಿತಿಮೀರಿ ಹಾಗಾಗುವುದು ದುರ್ಬಲ ಮನಸ್ಸಿನ ಕಾರಣದಿಂದಾಗಿ. ದಿಗ್ಭ್ರಮೆಗೊಂಡು ಸ್ತಂಭೀಭೂತರಂತಾಗುವುದು ಒಂದು ಆಧ್ಯಾತ್ಮಿಕ ಅವಸ್ಥೆ; ಇದು



ಅದರ ಆರಂಭವಷ್ಟೆ. ಅದು ಇನ್ನೂ ಪೂರ್ತಿಯಾಗಿ ಒಡಮೂಡಿಲ್ಲ, ಆ ಸ್ಥಿತಿ ಬರುವ ಮೊದಲೇ ಆ ಕುರಿತು ವಿಚಾರವನ್ನು ನೀನು ಬೆಳೆಸಿಕೊಳ್ಳಬಾರದೆಂದು, ಆ ಸ್ಥಿತಿಯನ್ನು ಪೂರ್ತಿಯಾಗಿ ಪಡೆದಾಗ ಇರುವ ಲಕ್ಷಣಗಳನ್ನು ನಾನು ವಿವರಿಸುವುದಿಲ್ಲ. ದೈವೀ ವಿಜ್ಞಾನದ ಉಷೋದಯವಾಗುವುದು ಮನುಷ್ಯನು ಆಶ್ಚರ್ಯಮುಗ್ಧನಾಗಲು ಪ್ರಾರಂಭಿಸಿದಾಗ.

**ಸ್ವಾಮೀ ವಿವೇಕಾನಂದ (೮.೧೫ ರಾತ್ರಿ) :** *"ಈ ಸ್ಥಿತಿ ಕಂಡುಬರುವುದು ಅಪರೂಪವಾಗಿಯೇ ಸರಿ. ಎಲ್ಲ ಅಭ್ಯಾಸಿಗಳೂ ಅದನ್ನು ಬಳಿಸಾರುತ್ತಾರೆ; ಆದರೆ ಅಲ್ಲಿಯೇ ನೆಲೆನಿಲ್ಲುವುದಿಲ್ಲ. ಅದು ಅನುಗ್ರಹಿಸಲ್ಪಟ್ಟಿದೆಯೆಂಬುದು ನಿಃಸಂದೇಹ. ಮಗಳೆ, ಅದೊಂದು ಉತ್ಕೃಷ್ಟ ಪತ್ರ, ಅದರ ನಿಲುಕನ್ನು ನೋಡು. ಅಂಥ ಗುರುವನ್ನು (ಬೇರೆಲ್ಲೂ) ಪಡೆಯುವುದು ಸಾಧ್ಯವಿಲ್ಲ. ಈ ತೆರನಾದ (ಆಧ್ಯಾತ್ಮಿಕ) ತರಬೇತಿಗೋಸ್ಕರ ಯಾರೂ 'ಅವನ' ಬಳಿಗೆ ಬರುವುದಿಲ್ಲವೆಂದು ನನಗೆ ಖೇದವೆನಿಸುತ್ತದೆ. ಎಲ್ಲರೂ ಆಶ್ಚರ್ಯಮುಗ್ಧರಾಗಿದ್ದಾರೆ. ಭವಿಷ್ಯತ್ತಿನಲ್ಲಿ ಅಂಥ ಗುರು ಮೈದೋರಲಿಕ್ಕಿಲ್ಲ. ಪ್ರಭುತ್ವಪೂರ್ಣ ನಿಯಂತ್ರಣ ಅವನ ಕೈಯಲ್ಲಿದೆ. ಪುನಃ ಪುನಃ ನಾನು ಎಚ್ಚರಿಕೆ ನೀಡಿದುದರ ಹೊರತಾಗಿಯೂ ಜನರು ಇನ್ನೂ ಗಾಢ ಸುಪ್ತಿಯಲ್ಲಿ ಮಲಗಿದ್ದಾರೆ. ಮಗಳೆ, ಈ ಸದವಕಾಶದ ಲಾಭ ಪಡೆದುಕೊ. ಭಗವಂತ ನಿನ್ನನ್ನು ಹರಸಲಿ. ನಿನ್ನ ತಂದೆ ಮತ್ತು ತಾಯಿಯವರ ಸ್ಥಿತಿ ನಿನಗೆ ಗೊತ್ತಿಲ್ಲ. ಅವರಿಗೂ ಅದರ ಅರಿವು ಇಲ್ಲ. ಅವನು (ರಾಮಚಂದ್ರ) ಲಖೀಂಪುರದಲ್ಲಿ ಗೈದ ಕೆಲಸ ಮಾಡಲು ಇತರರಿಗೆ ಸಾವಿರಾರು ವರ್ಷ ಬೇಕಾಗುವುದು. ಪ್ರಭಾವಶಾಲಿಯಾದ ಅವನ ತರಬೇತಿಯನ್ನು ನೋಡು. ನಿನ್ನ ತಾಯಿಗೆ ಮೋಕ್ಷ ಕಟ್ಟಿಟ್ಟದ್ದು. ಯಾಕೆಂದರೆ ಅವಳು ಅಂಥ ಒಳ್ಳೆಯ ಗುರುವನ್ನು (Trainer) ಹೆತ್ತಿದ್ದಾಳೆ. ಕಲ್ಲುಗಳು ಅಂಥ ಒಳ್ಳೆಯ ಗುರುವನ್ನು ಜನ್ಮಕೊಟ್ಟು ಬೆಳೆಸಲಾರವು – ಅದು ಅವಳಿಗೆ ಮತ್ತು ಅವಳ ಬಂಧುಗಳಿಗೆ ಮಾತ್ರ ಸಾಧ್ಯ."*

ತನ್ನ ಮಗನ ಮೇಲೆ ಲಕ್ಷ್ಯ ಕೇಂದ್ರೀಕರಿಸುವ ಮಟ್ಟಿಗೆ ಹೇಳುವುದಾದರೆ, ನಿಜಕ್ಕೂ ನಿನ್ನ ತಾಯಿಯಂತಿರಬೇಕು ಮತ್ತು ಆಗ ಮಾತ್ರ ಈ ಲಾಭ ಸಾಧ್ಯ ಎಂದು ಲಾಲಾಜಿ ಸಾಹೇಬರು ನಿನ್ನ ತಾಯಿಯನ್ನು ಶ್ಲಾಘಿಸುತ್ತಿದ್ದಾರೆ. ಈ ಪತ್ರಗಳ ಪ್ರತಿ ನನ್ನ ಬಳಿ ಇಲ್ಲ ಎಂದು ಮಾಸ್ಟರ್ ಸಾಹೇಬರಿಗೆ ಹೇಳು. ಅವರು ಅದರ ಪ್ರತಿಗಳನ್ನು ಇಟ್ಟುಕೊಳ್ಳಯಸಿದರೆ, ಅದನ್ನು ಚೌಬೇಜಿಯವರಿಂದ ನಕಲು ಮಾಡಿಸಿ ಪಡೆಯಬಹುದು.

ನಾನು ನನ್ನದೇ ಓಘದಲ್ಲಿ ಬರೆದುಬಿಟ್ಟೆ. ಆದರೆ ಆ ಮೇಲೆ ನೀನು ಒಬ್ಬ ಕೃಷಿಕನ ಮಗಳಾಗಿ ಜನಿಸಿದ್ದೆ ಎಂದು ಬರೆದುದಕ್ಕೆ ಬೇಸರಪಟ್ಟುಕೊಂಡೆ. ವಾಸ್ತವವೇನೆಂಬುದು ದೇವರಿಗೆ ಮಾತ್ರ ತಿಳಿದಿರಬಹುದು. ನಾನು ಮನಸ್ಸಿಗೆ ಹೊಳೆದದ್ದನ್ನು ಹಾಗೆಯೇ ಬರೆದುಬಿಟ್ಟೆ; ಏಕೆ ಎಂಬುದು ತಿಳಿಯದು. ನಿನಗೆ

ಕೆಟ್ಟದ್ದೆನಿಸಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸು. ಯಾರಿಗೂ ಅದನ್ನು ಪ್ರತಿಮಾಡಿಕೊಳ್ಳಲು ಕೊಡಬೇಡ. ಬದಲಿಗೆ, ಅದನ್ನು ಹರಿದು ಹಾಕು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨ **ಪತ್ರ ಸಂಖ್ಯೆ – ೩೬** ಷಾಹಜಹಾನಪುರ
೧೫–೦೫–೧೯೪೫

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದ,

ನಿನ್ನ ಪತ್ರ ತಲುಪಿತು. ಸಂತೋಷ. ಭಗವಂತನು ದಿನ ದಿನಕ್ಕೂ ನಿನಗೆ ಆಧ್ಯಾತ್ಮಿಕ ಪ್ರಗತಿಯನ್ನು ಕೊಟ್ಟು ಅನುಗ್ರಹಿಸಲಿ. ನೀನು ನಿನ್ನ ಆತ್ಮಚರಿತ್ರೆ ಬರೆಯಲು ಪ್ರಾರಂಭಿಸಬೇಕೆಂಬುದು ನನ್ನ ಬಯಕೆ. ನೀನು ಬ್ರಹ್ಮ-ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿರುವುದರಿಂದ, ನಿನ್ನ ಆಧ್ಯಾತ್ಮಿಕ ಸ್ಥಿತಿಗಳನ್ನು ದಾಖಲಿಸುತ್ತ ಹೋಗು. ನಾನು ನಿನ್ನ ಎಲ್ಲ ಪತ್ರಗಳನ್ನು ಸುರಕ್ಷಿತವಾಗಿರಿಸಿದ್ದೇನೆ. ಅವುಗಳನ್ನು ನಿನಗೆ ಕಳುಹಿಸುತ್ತೇನೆ. ಅವುಗಳಲ್ಲಿ ಬರೆದ ಎಲ್ಲ ಸ್ಥಿತಿಗಳನ್ನೂ ಬರೆಯುತ್ತ ಹೋಗು. ಅದಕ್ಕೂ ಪೂರ್ವದ ಸ್ಥಿತಿಗಳು ನಿನ್ನ ತಾಯಿಗೆ ಗೊತ್ತಿರಬಹುದು. ಅವುಗಳನ್ನು ಅವಳಿಂದ ಕೇಳಿ ತಿಳಿಯಬಹುದು. ನಿನ್ನ ಆಧ್ಯಾತ್ಮಿಕ ಪ್ರಗತಿಗೆ ನೀನು ಅಂಗೀಕರಿಸಿದ ಎಲ್ಲ ವಿಧಾನಗಳನ್ನೂ ಬರೆಯುತ್ತ ಹೋಗು. ನಿನ್ನ ತಾಯಿಯವರಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩ **ಪತ್ರ ಸಂಖ್ಯೆ – ೩೯** ಷಾಹಜಹಾನಪುರ
೦೨–೦೬–೧೯೪೫

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿತು. ನಾನು ಕೆಲವೊಂದು ಕೆಲಸಗಳಲ್ಲಿ ಎಷ್ಟು ತೊಡಗಿಕೊಂಡಿದ್ದೆನೆಂದರೆ ನಿನ್ನ ಪತ್ರಕ್ಕೆ ಉತ್ತರ ಬರೆಯಲು ಸಮಯ ಸಿಗಲಿಲ್ಲ. ನೀನು ಅನುಭವ ಪಡೆದ 'ವಿಸ್ತಾರ'ದ ಸ್ಥಿತಿಯು ಹೃದಯದ ಕೇಂದ್ರಬಿಂದುವಿನ ಸ್ಥಿತಿಯಾಗಿದೆ. ಅಂದರೆ ಯಾವ ಬಿಂದುವಿನಿಂದಾಚೆಗೆ ನೈಜ ಸ್ಥಿತಿ ಪ್ರಾರಂಭವಾಗುವುದೋ ಆ ಬಿಂದುವಿನೊಂದಿಗೆ ನಿನ್ನನ್ನು ಜೋಡಿಸಿಕೊಂಡಿದ್ದೀಯೆ. ನೀನು ಅದರ ಸೂಕ್ಷ್ಮ ಅವಸ್ಥೆಯಲ್ಲಿ ಪ್ರವೇಶಿಸಿರುವೆ ಮತ್ತು ಅದರಲ್ಲಿ ವಿಸ್ತಾರಹೊಂದುತ್ತಿರುವೆ ಎಂದೂ ಇದರ ಅರ್ಥ. ಪ್ರಾಯಶಃ ಇದಕ್ಕಿಂತ ಮೇಲಿನ ಸ್ಥಿತಿಯನ್ನು ತಲುಪಿದ ಸುವಾರ್ತೆ ನಿನಗೆ ಇಷ್ಟರಲ್ಲಿಯೇ ದೊರೆಯಬಹುದು.



ನಿನ್ನನ್ನು ನೀನು ಒಂದು ಶಿಶು ಎಂದು ಭಾವಿಸಿ, ನನ್ನೊಂದಿಗೆ ಆಟವಾಡುತ್ತಿರುವುದು ದೈವೀವಿಚಾರವನ್ನು ಕಾಯ್ದುಕೊಂಡು ಹೋಗುವ ಒಂದು ವಿಧಾನವಾಗಿದೆ. ಕೇವಲ ಒಂದೇ ವಿಚಾರ ಇರಬೇಕು. 'ರೂಪ' ಬದಲಾದರೆ ಚಿಂತೆ ಇಲ್ಲ. ಅಲ್ಲದೆ, ಹಾಗೆ ಮಾಡುವಾಗ ಮಾನಸಿಕ ಶಾಂತಿಯೂ ದೊರೆಯುತ್ತದೆ.

ನಾನು ಅದಾಗಲೇ ನಿನ್ನ ಮೊದಲಿನ ಪತ್ರಕ್ಕೆ ಉತ್ತರ ಬರೆದಿದ್ದೆ; ಅಷ್ಟರಲ್ಲಿ ನಿನ್ನ ಎರಡನೆಯ ಪತ್ರ ಬಂದು ತಲುಪಿತು. ಈಗ ಅದಕ್ಕೆ ಉತ್ತರ ಬರೆಯುತ್ತಿದ್ದೇನೆ. ಯಾವ ಬಿಂದುವಿನಿಂದಾಚೆಗೆ ಲಯಾವಸ್ಥೆಯ ಸೂಕ್ಷ್ಮ ಅವಸ್ಥೆ ಆರಂಭವಾಗುವುದೋ, ಅದನ್ನು ಸಮೀಪಿಸುತ್ತಿದ್ದೀಯೆ ಎಂಬ ಭರವಸೆಯನ್ನು ನಿನ್ನ ಪತ್ರ ಉಂಟುಮಾಡಿದೆ. ಆದರೆ ಇವೆಲ್ಲವೂ ಹೃದಯಚಕ್ರದ ಅವಸ್ಥೆಗಳು. ಅದರಲ್ಲಿ ಇನ್ನೂ ಒಂದಿಷ್ಟು ಪ್ರಮಾಣ ಮಾಡುವುದು ಉಳಿದಿದೆ. ಅದಾದ ನಂತರ ಇನ್ನೂ ಉಚ್ಚತರವಾದ ಸ್ಥಿತಿಯನ್ನು ನೀನು ತಲುಪಿದ ಸುವಾರ್ತೆ ನಿನಗೆ ದೊರೆಯುವುದು. ಇದು ಮೊದಲನೆಯ ಚಕ್ರದ ಸ್ಥಿತಿಯೇ ಆಗಿದೆ. ಇನ್ನೂ ಅನೇಕ ಚಕ್ರಗಳನ್ನು ದಾಟುವುದಿದೆ. ಅದಾದನಂತರ ಬೇರೆ ಬೇರೆ ಸ್ಥಿತಿಗಳು ಯಾವುವು ಇವೆ ಎಂಬುದನ್ನು ಭಗವಂತನೇ ಬಲ್ಲ. ಮತ್ತು ಅನಂತರ ಅದಕ್ಕೆ ಕೊನೆ ಇಲ್ಲ. 'ಆ ಸ್ಥಿತಿಯನ್ನು ನಾನು ನೆನಪಿಸಿಕೊಳ್ಳಲಾರೆ' ಎಂದು ಬರೆದಿರುವುದು, 'ಸ್ಮರಣೆಯು' ನಿನ್ನ ಸತ್ತೆಯ ತಿರುಳಿನ ಭಾಗವನ್ನು ಮುಟ್ಟಿದೆ ಎಂಬುದರ ರುಜುವಾತು ಕೊಡುತ್ತದೆ. ಅದು ಭಗವಂತನ ಕಾರ್ಯ. ಯಾವ ರೀತಿಯಲ್ಲಿ ಸಾಧ್ಯವೋ ಆ ರೀತಿಯಲ್ಲಿ ಅವನ ಸ್ಮರಣೆಯನ್ನು ಕಾಯ್ದುಕೊಂಡಿಟ್ಟುಕೊಳ್ಳುವುದು ನಮ್ಮ ಕೆಲಸ. ನಮ್ಮ ಪದ್ಧತಿಯಲ್ಲಿ ಅಭ್ಯಾಸಿಯು ಒಂದಿಷ್ಟು ನಿಷ್ಠೆ (ಭಕ್ತಿ) ಹೊಂದಿದ್ದರೂ ಸರಿಯೆ, 'ಅವನ' ಸ್ಮರಣೆ, ಅದರ ಅರಿವು ಇಲ್ಲದೆಯೂ ಇದ್ದೇ ಇರುತ್ತದೆ. ನಾವು ನಮ್ಮ ವಿಚಾರವನ್ನು ಅವನಲ್ಲಿ ನೆಟ್ಟಾಗ, ಅದು ಸಾಂದ್ರ (ತೀವ್ರ)ವಾಗಿ ತೋರಿಬರುತ್ತದೆ. 'ಆಶ್ಚರ್ಯ'ದ ಸ್ಥಿತಿಯನ್ನು ಕುರಿತು ನನ್ನ ಈ ಹಿಂದಿನ ಪತ್ರದಲ್ಲಿ ನಾನು ಈಗಾಗಲೇ ಬರೆದಿದ್ದೇನೆ.

ನಿನ್ನ ನಿದ್ರೆಯ ವಿಷಯದಲ್ಲಿ ನೀನು ಬರೆದಿರುವುದರ ಅರ್ಥವೇನೆಂದರೆ, ನೀನು ಸುಷುಪ್ತಿ (ಗಾಢ ನಿದ್ರೆ)ಯ ಅವಸ್ಥೆಯಲ್ಲಿ ಪ್ರವೇಶ ಪಡೆಯುತ್ತೀಯೆ ಮತ್ತು ಕಣ್ಣು ತೆರೆದಾಗ ನೀನು ಹೊಸದೊಂದು ಲೋಕಕ್ಕೆ ಬಂದಿರುವಂತೆ ಅನಿಸುತ್ತದೆ. ನೀನು ನಿದ್ರೆಯಲ್ಲಿ ಆಳವಾಗಿ ಹೋಗುತ್ತಿರುವೆಯೆಂದು ಊಹಿಸಬಹುದು ಎಂಬುದು ಅದರ ಅರ್ಥ. ಅದಲ್ಲವಾದರೆ, ಬೇರೆಯವರು ಗಾಢ ನಿದ್ರೆಯಿಂದ ಎಚ್ಚತ್ತಾಗ, ಅವರಿಗೆ ತಾವು ಬೇರೆ ಎಲ್ಲಿಂದಲೋ ಬಂದಂತೆ ಅನಿಸುವುದಿಲ್ಲ. ಅದರಲ್ಲಿ ಮುಳುಗಿರುವುದು (ಆದರೆ ಅದಕ್ಕೋಸ್ಕರ ಪ್ರಯತ್ನ ಮಾಡಲಾಗುವುದಿಲ್ಲ) ಮತ್ತು ಅದರಲ್ಲಿ 'ಬಕಾ' ಸ್ಥಿತಿ ಉಂಟಾಗುವುದು, ಮುಂದೆ 'ತುರೀಯ' ಸ್ಥಿತಿಗೆ ಕರೆದೊಯ್ಯುತ್ತದೆ. ಆದರೆ ಅದಕ್ಕೆ ದೀರ್ಘ ಸಮಯ ಬೇಕು. 'ಬೈಠಕ್' ಕೊಡುವ ವಿಧಾನವನ್ನು ಮಾಸ್ಟರ್ ಸಾಹೇಬರು ಮಾತಾಜಿಯವರಿಗೆ ತಿಳಿಸಿಕೊಡುವರು.

ನಿನ್ನ ಹಿತೈಷಿ
ರಾಮಚಂದ್ರ

P-4-Books-PM-7-Anantyatre-19



* * * *

ಕ್ರಮ ಸಂಖ್ಯೆ – ೧೪ **ಪತ್ರ ಸಂಖ್ಯೆ – ೪೭** ಷಾಹಜಹಾನಪುರ
೨೭–೦೭–೧೯೪೯

ಪ್ರಿಯ ಪುತ್ರಿ ಕಸ್ತೂರಿ,

ಭಗವಂತ ನಿನ್ನನ್ನು ಹರಸಲಿ.

ನಿನ್ನ ಪತ್ರ ತಲುಪಿತು. ವಿಷಯ ಗಮನಿಸಿದೆ. ನಿಜವಾದ ಶ್ರದ್ಧೆಯಿದ್ದರೆ, ಈ ಮಾರ್ಗದಲ್ಲಿ ಯಾರೂ ಸ್ಥಗಿತರಾಗುವುದಿಲ್ಲ. ಸ್ಥಿತಿಯು ಕೆಲಮಟ್ಟಿಗೆ ನಿಶ್ಚಲವಾಗುವಂತಹ ಕೆಲವು ತಾಣಗಳೇನೋ ಬರುತ್ತವೆ. ಆದರೆ ಆ ನಿಲುಗಡೆ ದೀರ್ಘಸಮಯದ್ದಾಗಿದ್ದರೆ, ಅಷ್ಟು ಸಮಯದ ಮಟ್ಟಿಗೆ ಪ್ರಗತಿಯು ಕುಂಠಿತವಾಗಿರುತ್ತದೆ; ಆದರೆ ಅದು ಅಲ್ಪಕಾಲದ್ದಾಗಿದ್ದರೆ ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ. ಈ ನಿಲುಗಡೆಯ ಸ್ಥಿತಿಯೂ ಶುಭಕರವೇ ಆಗಿರುತ್ತದೆ. ಅದು, ಮುಂದಕ್ಕೆ ಚಲಿಸಲು ಬಲ ಕೊಡುತ್ತದೆ. ಈ ನಿಲುಗಡೆಗೆ ಇನ್ನೊಂದು ಕಾರಣವೂ ಉಂಟು. ಹೆಚ್ಚು ಪ್ರಮಾಣದಲ್ಲಿ ಸ್ವೀಕರಿಸಿ, ಅದನ್ನು ಜೀರ್ಣಿಸಿಕೊಳ್ಳದಿದ್ದಾಗ ಅಥವಾ (ನಮ್ಮೊಳಗೆ) ಹೀರಿಕೊಳ್ಳದಿದ್ದಾಗ ಇದು ಉಂಟಾಗುತ್ತದೆ. ಮಹಾತ್ಮರು ಈ ಸ್ಥಿತಿಯನ್ನೂ ಶುಭಕರವೆಂದೇ ಕರೆದಿದ್ದಾರೆ. ಅಭ್ಯಾಸಿಗಳು ಈ ಸ್ಥಿತಿಯಲ್ಲಿ ವರ್ಷಗಟ್ಟಲೆ ಇರುತ್ತಾರೆ ಎಂದೂ ಹೇಳಲಾಗಿದೆ. ಅದು 'ಆಧ್ಯಾತ್ಮಿಕ ಅಜೀರ್ಣ'ವೆಂದೆನ್ನಬಹುದು. ಆದರೆ ಗುರು ಮಹಾರಾಜರ (ಶ್ರೀ ಲಾಲಾಜಿಯವರ) ಕೃಪೆಯಿಂದ, ಯಾವುದೇ ಅಡ್ಡಿ ಉಂಟಾಗುವಂಥ ಸಮಸ್ಯೆ ಏಳುವುದಿಲ್ಲ. ಭಗವದಿಚ್ಛೆಯಿಂದ, ನಿನ್ನ ಸ್ಥಿತಿ ಹಾಗಿಲ್ಲ, ಮತ್ತು ಎಂದಿಗೂ ಹಾಗೆ ಆಗದು ಕೂಡ. ಆದರೆ, ನಿನ್ನದು ಒಂದು ಮಜಲನ್ನು ದಾಟಿದ ನಂತರ, ಇನ್ನೊಂದು ಮುಂಬರುವ ಹಂತವನ್ನು ತಲುಪುವ ಪೂರ್ವದಲ್ಲಿಯ ಮಧ್ಯಾಂತರದ ಸ್ಥಿತಿಯಾಗಿತ್ತು. ಪ್ರತಿಯೊಬ್ಬ ಅಭ್ಯಾಸಿಯೂ ಈ ಮಧ್ಯಾಂತರದ ಹಂತವನ್ನು ದಾಟಿಹೋಗಲೇ ಬೇಕಾಗುತ್ತದೆ. ಇದರಿಂದ ನಿನ್ನನ್ನು ಹೊರಗೆ ಎಳೆಯಲು ನಾನು ನನ್ನ ಆಧ್ಯಾತ್ಮಿಕ ಶಕ್ತಿಯನ್ನು ಪ್ರಯೋಗಿಸಲಿಲ್ಲ; ನೀನು ನಿನ್ನದೇ ಆದ ಶಕ್ತಿಯಿಂದ ಅದರಿಂದ ಹೊರಕ್ಕೆ ಬಂದಿದ್ದೀಯೆ, ಮತ್ತು, ನನಗೆ ಬೇಕಾದುದೂ ಅದೇ ಆಗಿತ್ತು. ನೀನು ಈ ಸ್ಥಿತಿಯಿಂದ ಹೊರಗೆ ಬಂದಿರದಿದ್ದರೆ ನಾನು ಖಂಡಿತವಾಗಿ ನನ್ನ ಸಂಕಲ್ಪಶಕ್ತಿಯನ್ನು ಉಪಯೋಗಿಸುತ್ತಿದ್ದೆ. ತನ್ನದೇ ಪ್ರಯತ್ನದಿಂದ ಅಭ್ಯಾಸಿಯು ಪ್ರಗತಿ ಸಾಧಿಸಿದರೆ, ಅದು ಅತ್ಯುತ್ತಮ ಪ್ರಗತಿ ಎಂದೆನಿಸಿಕೊಳ್ಳುತ್ತದೆ. ನೀನು ನಿನ್ನ ಹೃದಯದಲ್ಲಿ ಅಧೀರಳಾಗಬೇಕಿಲ್ಲ. ಯಾಕೆಂದರೆ, ನಿನಗೆ ಆ ಸ್ಥಿತಿ ಬರದೆ ಇದ್ದಿದ್ದರೆ, ನೀನು ಅದರಿಂದ ಹೊರಬರಲು ಹೆಣಗಾಡುತ್ತಿರಲಿಲ್ಲ. ನೀನು ಸ್ವಪ್ರಯತ್ನದಿಂದ ಅದರಿಂದ ಹೊರಬರಲು ಸೆಣಸಾಡಿದ ಕಾರಣ, ಮುಂದಿನ ಪ್ರಗತಿಹೊಂದಲು ನೀನು ಹೆಚ್ಚಿನ ಬಲ ಪಡೆದು ಲಾಭಾನ್ವಿತಳಾಗಿದ್ದೀಯೆ. ನೀನು ಹರಿದಾಡುವ ಸಂವೇದನೆ (Creeping sensation) ಬಗ್ಗೆ ಬರೆದಿದ್ದೀಯೆ. ಅದು ದೇಹದಲ್ಲಿ ಯಾವುದೇ ರೀತಿಯ ರೋಮಾಂಚನ ಉಂಟುಮಾಡುವುದೋ ಅಥವಾ ಒಂದು ರೀತಿಯ ಪ್ರತಿಕ್ರಿಯೆ ಮಾತ್ರವೋ ? ಎರಡನೆಯದಾಗಿ, ಅದು ಹೆಚ್ಚುತ್ತಿರುವುದೋ, ಇಲ್ಲವೋ ? ತಾಯಿಯವರಿಗೆ ನನ್ನ ನಮಸ್ಕಾರ ತಿಳಿಸು ಮತ್ತು ಮಕ್ಕಳಿಗೆ ನನ್ನ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೧೫ **ಪತ್ರ ಸಂಖ್ಯೆ – ೪೮** ಷಾಹಜಹಾನಪುರ
೦೮–೦೫–೧೯೪೯

ಪ್ರಿಯ ಪುತ್ರಿ ಕಸ್ತೂರಿ,

ಭಗವಂತನು ನಿನ್ನನ್ನು ಹರಸಲಿ,

ನಿನ್ನ ಪತ್ರ ತಲುಪಿತು; ನಾನು ಅದರ ಪ್ರತ್ಯುತ್ತರವನ್ನು ಮಾಸ್ಟರ್ ಸಾಹೇಬರ ವಿಳಾಸಕ್ಕೆ ಕಳುಹಿಸಿದ್ದೇನೆ. ದಿನಾಂಕ ೨೬ನೆಯ ಜುಲೈ ೧೯೪೯ರ ನಿನ್ನ ಎರಡನೆಯ ಪತ್ರವೂ ಕೈಸೇರಿದೆ. "ಹೃದಯವು ಗುರುಮಹಾರಾಜರ ಸ್ಮರಣೆಯಲ್ಲಿ ಘಾಸಿಗೊಂಡಿದೆ; ಆದರೆ ನಾನಿಷ್ಟೇ ಹೇಳಬಲ್ಲೆ; ಈ ಗಾಯಗಳನ್ನು ಹಾಗೇ ಪೋಷಿಸುವುದರಲ್ಲಿ ಒಂದು ವಿಚಿತ್ರ ಆನಂದೋನ್ಮಾದ ಇದೆ. ಅದಲ್ಲದೆ ಆ ಗಾಯಗಳು ತುಂಬ ಆಳದಲ್ಲಿದ್ದು, ಅಡಗಿವೆ; ಹಾಗೂ ಅವುಗಳ ವಿಸ್ತಾರವು ಮೇಲ್ಮೈಗೆ ಬರುತ್ತಿಲ್ಲ. ಆದ್ದರಿಂದ, ಈ ಸಂಸ್ಥೆಯನ್ನು ಬೇಗ ಸೇರಲು ಯಾರೂ ಸಿದ್ಧರಿಲ್ಲ." ಎಂದು ಬರೆದಿದ್ದೀಯೆ. ನೀನು ಬರೆದಿರುವುದು ಅತ್ಯಂತ ಸರಿಯಾಗಿದೆ. ಅಭ್ಯಾಸಿಗೆ ಅದು ಅನುಭವಕ್ಕೆ ಬರುವಹಾಗೆ, ಆ ಆಳದಲ್ಲಿ ಅಡಗಿದ್ದ ಗಾಯ ಮೇಲ್ಮುಖವಾಗಿ ವಿಸ್ತಾರಗೊಳ್ಳುವಂತೆ ಮಾಡುವ ವಿಧಾನ ಏನಾದರೂ ನಿನಗೆ ತಿಳಿದುಬಂದರೆ ನನಗೆ ಬರೆದು ತಿಳಿಸು. ಚೌಬೇಜಿಯವರು ಇದರ ಮೇಲೆ ಒಂದಿಷ್ಟು ಬೆಳಕು ಚೆಲ್ಲಬಹುದು; ಅದರಿಂದ ಇತರರೂ ಲಾಭ ಹೊಂದಬಹುದು; ಮತ್ತು ಜನರು ಅದರತ್ತ ಆಕರ್ಷಿತರಾಗಬಹುದು.

ಅದು ಅವರ ಅನುಭಕ್ಕೆ ಗೋಚರವಾಗುವುದಿಲ್ಲ; ಎಂದರೆ ಅದಕ್ಕೆ ಆಸಕ್ತಿಯ ಕೊರತೆಯೇ ಕಾರಣ. ಈ ಆಸಕ್ತಿ (ಅಭಿರುಚಿ)ಯನ್ನು ಬೆಳೆಸಿಕೊಳ್ಳುವುದು ಹೇಗೆ ? ಅದರ ಉಪಾಯವನ್ನು ನಾನು ಹೇಳುತ್ತೇನೆ. ಅದನ್ನು ಬೇರೆ ಯಾರೂ ಮಾಡುವುದಿಲ್ಲ. ಆದರೆ ನಾನು ನೀಡುವ ಪ್ರಾಣಾಹುತಿ ಅತ್ಯಂತ ಶುದ್ಧವಾದುದು. ಅದರಲ್ಲಿ ಯಾವುದೇ ಭಾವೋದ್ರೇಕವಿಲ್ಲ, ಮಾಯೆಯ ಕಿಂಚಿತ್ತು ಒಲವೂ ಇಲ್ಲ. ನನ್ನ ಪ್ರಾಣಾಹುತಿ (Transmission) ಎಂಥದ್ದಿದೆಯೆಂದರೆ ಶಾಂತಿ ಮತ್ತು ಲಘುತ್ವಗಳನ್ನುಳಿದು ಇನ್ನೇನೂ ಅನುಭವಕ್ಕೆ ಸಿಗುವುದಿಲ್ಲ; ಪ್ರೇಮವೂ ಇಲ್ಲ, ಭಕ್ತಿ ಕೂಡ ಇಲ್ಲ. ನಾನು ನೀಡುವ ಪ್ರಾಣಾಹುತಿಯಲ್ಲಿ ದೈವೀಸ್ಥಿತಿಯು (ಈಶ್ವರೀಯ ಸ್ಥಿತಿ) ತನ್ನ ನೈಜ ರೂಪದಲ್ಲಿ ಬರುತ್ತದೆ. ಮತ್ತು ಉದ್ದೇಶಕ್ಕೆ ಇದು ಸಲ್ಲುವಷ್ಟು ಬೇರೆ ಇನ್ನೇನೂ ಸಲ್ಲಲಾರದು. ನನ್ನ ಗುರುಮಹಾರಾಜರು ನನ್ನನ್ನು ಸಂಪೂರ್ಣ ಈ ಸ್ಥಿತಿಯಲ್ಲಿ

ಲಯಗೊಳಿಸಿಬಿಟ್ಟಿರುವುದರಿಂದ ನಾನು ಈ ತೆರನಾದ ಪ್ರಾಣಾಹುತಿ ನೀಡಲು ವಿವಶನಾಗಿದ್ದೇನೆ. ಕೆಲವು ಜನರು ಇನ್ನೂ (ಬದುಕಿ) ಇದ್ದಾರೆ; ಅವರ ಪ್ರಾಣಾಹುತಿಯು ಅಭ್ಯಾಸಿಗಳಮೇಲೆ ಶಕ್ತಿಯುತವಾದ ರಭಸದ ಪ್ರಭಾವ ಉಂಟುಮಾಡುತ್ತದೆ. ಮತ್ತು ಅವರು (ಅಭ್ಯಾಸಿಗಳು) ಅದೇ ಹೆಚ್ಚು ಒಳ್ಳೆಯದೆಂದು ಭಾವಿಸುತ್ತಾರೆ; ಯಾಕೆಂದರೆ, ನೈಜವಾದುದು ಮತ್ತು ಶುದ್ಧವಾದುದು ಅವರ ಅನುಭವಕ್ಕೆ ನಿಲುಕುವುದಿಲ್ಲ. ನನ್ನ ಸದ್ಯದ ಸ್ಥಿತಿ ಅದೇನೇ ಇರಲಿ, ಅದನ್ನು ನೋಡಿ, ನನ್ನ ಗುರುಮಹಾರಾಜರು ನನ್ನನ್ನು ನಿಜವಾಗಿ ಎಂತಹ ರೀತಿಯಲ್ಲಿ ಮಾಡಿರುವರೋ ಅದೇ ರೀತಿಯಲ್ಲಿ ಎಲ್ಲರೂ ನನ್ನನ್ನು ನಿರ್ಣಯಿಸಲಾರರು; ಮತ್ತು ಆದುದರಿಂದಲೇ ಅವರು ನನ್ನನ್ನು ಕುರಿತು ತಪ್ಪು ನಿರ್ಣಯಕ್ಕೆ ಬರುತ್ತಾರೆ. ಜನರಿಗೆ ಹಲ್ವ (ಸಿಹಿತಿಂಡಿ) ಬೇಕಾಗಿಲ್ಲ, ಬದಲಿಗೆ ಅವರು ಕಡಲೆ ಬೇಕೆಂದು ಬಯಸುತ್ತಾರೆ; ಇದಕ್ಕೆ ನನ್ನ ಹತ್ತಿರ ಯಾವ ಪರಿಹಾರೋಪಾಯವೂ ಇಲ್ಲ.

ನೀನು ಬರೆದಿರುವ ನಿನ್ನ ಸ್ಥಿತಿ ಒಳ್ಳೆಯದಿದೆ; ಭಗವಂತನ ಕೃಪೆ. ಹೃದಯಚಕ್ರದಲ್ಲಿ ನೀನು ಸಾಕಷ್ಟು ಕ್ರಮಣ ಮಾಡಿದ್ದೀಯೆ. ನಾನು ಇದನ್ನು ಇನ್ನೂ ನಿಚ್ಚಳವಾಗಿ ನೋಡಬಯಸುತ್ತೇನೆ. ಮತ್ತು ಯಾವ ಸ್ಥಿತಿಯೂ ಪೂರ್ಣವಾಗಿ ತೆರೆದುಕೊಳ್ಳದೆ ಇರಬಾರದಂತಾಗಲು ಅದನ್ನು ಇನ್ನೂ ಹೆಚ್ಚು ವಿಕಸಿಸಲು ಬಯಸುತ್ತೇನೆ. ನಿನ್ನ ತಾಯಿಯವರಿಗೆ ನನ್ನ ನಮಸ್ಕಾರ ಮತ್ತು ಮಕ್ಕಳಿಗೆ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೬ **ಪತ್ರ ಸಂಖ್ಯೆ – ೫೧** ಷಾಹಜಹಾನಪುರ
೨೫–೦೮–೧೯೪೯

ಪ್ರಿಯ ಪುತ್ರಿ ಕಸ್ತೂರಿ,

ಭಗವಂತನು ನಿನ್ನನ್ನು ಹರಸಲಿ,

ಪ್ರಕಾಶವನ್ನು ನೋಡಿದಾಗ ಕಣ್ಣು ಕೋರೈಸಿ, ಅಕ್ಷಿಪಟಲ ಹಿಗ್ಗಿ, ಅದರ ಪರಿಣಾಮವಾಗಿ ಪ್ರಕಾಶವಿರುವಾಗ ಕೂಡ ಕತ್ತಲೆ ತೋರಿಬರುತ್ತದೆ. ಸಾಮಾನ್ಯವಾಗಿ ತ್ರಿಕುಟಿ (ಭ್ರೂಮಧ್ಯ) ಬಿಂದುವನ್ನು ತಲುಪಿದಾಗ ಅಂಥ ಸ್ಥಿತಿ ಉಂಟಾಗುತ್ತದೆ. ಅಲ್ಲಿ ಸಾಕಷ್ಟು ಪ್ರಕಾಶ ಉಂಟು, ಆದ್ದರಿಂದಲೇ ಅದು ಕಪ್ಪಾಗಿ ತೋರುತ್ತದೆ. ನಾನು ಇದನ್ನು ಮುಂದೆ ಬರುವ ಕಾಲಕ್ಕೋಸ್ಕರ ಬರೆದಿದ್ದೇನೆ. '*ಲಖೀಂಪುರ ಪರದೇಶದಂತೆ ಮತ್ತು ಕುಟುಂಬದ ಎಲ್ಲ ಸದಸ್ಯರು ನನಗೆ ಗೊತ್ತೇ ಇರದ ಅಪರಿಚಿತರಂತೆ ಕಂಡಿತು*' ಎಂದು ನೀನು ಬರೆದಿದ್ದೀಯೆ. ಈ ಮೇಲೆ ಬರೆದ ನಿಯಮದಂತೆ, ಅಭ್ಯಾಸಿಯು ಆತ್ಮದೊಂದಿಗೆ ಲಯಾವಸ್ಥೆಯನ್ನು ಪಡೆದಾಗ, ಅವನು ಅದರಲ್ಲಿ ಒಂದಾಗುತ್ತಾನೆ. ಮತ್ತು ತನ್ನ ಆತ್ಮದೊಂದಿಗೆ ಮಾತ್ರವೇ ಆಸಕ್ತಿ



ಬೆಳೆಸಿಕೊಳ್ಳುತ್ತಾನೆ. ಆತ್ಮದೊಂದಿಗಿನ ಆಸಕ್ತಿಗೆ ವಿರುದ್ಧವಾದ ಬಹಿರ್ಮುಖ ದೃಷ್ಟಿ ಮಂದವಾಗುತ್ತದೆ, ಒಳಗಿನ ದೃಷ್ಟಿಯು ನಿಜವಾದ ಶಕ್ತಿ (Power)ಯ ಮೇಲೆ ಕೇಂದ್ರಿತವಾಗುತ್ತದೆ. ಕಣ್ಣೆದುರು ಇರುವ ವಸ್ತು ಮೊದಲಿಗೆ ಮಂದವಾಗಿ ತೋರುತ್ತದೆ. ಮತ್ತು ತದನಂತರ ಇಡೀ ಜಗತ್ತೇ ಹಾಗೆ ತೋರುತ್ತದೆ. ಅದಾದ ನಂತರ ಮುಂದಿನ ಬದಲಾವಣೆಗಳು ಉಂಟಾಗುತ್ತವೆ; ಆದರೆ ಆ ಸ್ಥಿತಿಯನ್ನು ಬಹಿರಂಗಪಡಿಸುವುದು, ಸದ್ಯದಲ್ಲಿ ಯೋಗ್ಯವೆಂದು ನಾನು ಭಾವಿಸುವುದಿಲ್ಲ. ಯಾವುದೇ ವಿಚಾರ ಅಥವಾ ಉದ್ದೇಶ ಇಲ್ಲದೆ ಇರುವುದು ಒಳ್ಳೆಯದು; ಮತ್ತು ಹೊರಗಿನ ಬಹುತೇಕ ಆವರಣಗಳು ಕಳೆದುಹೋದವೆಂದು ಅದರ ಅರ್ಥ. ಅತಿಶಯ ಧ್ಯಾನಾಭ್ಯಾಸದಿಂದ, ಕಣ್ಣುಗಳು (ದೃಷ್ಟಿ) ಹೃದಯಕ್ಕೆ ಅಂಟಿಕೊಂಡು ಅಲ್ಲಿಯೇ ನೆಲೆಸಿರುವುದಿಲ್ಲ; ಯಾಕೆಂದರೆ ನಾವು ಹೃದಯವನ್ನು, ಊರ್ಧ್ವಸ್ತರಗಳಿಗೆ ಅಥವಾ ವಲಯಗಳಿಗೆ ಸಾಗಲು ಆರಂಭ ಬಿಂದುವನ್ನಾಗಿ ಮಾಡಿಕೊಂಡಿದ್ದೆವು. ಆದ್ದರಿಂದ ಬಲಪೂರ್ವಕವಾಗಿ ನಮ್ಮ ಲಕ್ಷ್ಯವನ್ನು ಹೃದಯದ ಮೇಲೆ ಪುನಃ ಪುನಃ ಕೇಂದ್ರೀಕರಿಸುವುದು ಅಗತ್ಯವಿಲ್ಲ. ಪ್ರಾರಂಭದಲ್ಲಿ ವಿಚಾರವು ಹೃದಯದಮೇಲೆ ಕೇಂದ್ರಿತವಾಗಿರಬೇಕು; ಅದಾದನಂತರ, ಅವು (ವಿಚಾರಗಳು) ತಮ್ಮಿಂದ ತಾವೇ ಯಾವ ವಲಯದಲ್ಲಿ ತೇಲಿಹೋಗಿ ಸೇರುವವೋ ಆ ಸ್ತರದಲ್ಲಿಯೇ ನೆಲೆಸಲು ಬಿಡಬೇಕು. '*ಹಣೆಯ ಭಾಗ ಮತ್ತು ಶಿರಸ್ಸಿನ ಹಿಂಭಾಗ ಕೆಲಮಟ್ಟಿಗೆ ತೆರೆದುಕೊಂಡಂತೆ ತೋರುತ್ತದೆ*' ಎಂದು ನೀನು ಬರೆದಿದ್ದೀಯೆ. ಹಣೆಯ ಭಾಗದಲ್ಲಿ ಪರಿಣಾಮ (ಪ್ರಭಾವ) ಇದೆ ಎಂಬುದು ನಿಃಸಂದೇಹ, ಆದರೆ ತಲೆಯ ಹಿಂಭಾಗದಲ್ಲಿ ಇನ್ನೂ ಸ್ಪಂದನಗಳು ಉಳಿದುಕೊಂಡಿವೆ. ನಮ್ಮ ಸಂಸ್ಥೆಯ ವಿಧಾನದಲ್ಲಿ ಅಭ್ಯಾಸಿಗಳು ಹೆಚ್ಚು ಪಕ್ಷ ಈ ಅನುಭವ ಪಡೆಯುತ್ತಾರೆ. ಆದ್ದರಿಂದ, ನಾನು ಎಂಥ ಸರಳ ವಸ್ತುವನ್ನು (ಸೂಕ್ಷ್ಮ ಪ್ರಾಣಾಹುತಿ) ಕೊಡುತ್ತೇನೆಂದರೆ, ಅದು ಇರುವಲ್ಲಿ ಕೂಡಲೇ ಪರಿಣಾಮ ಬೀರುತ್ತದೆ. ನೀನು ಇದೊಂದು ಮಾತು ಬರೆಯಬೇಕು (ತಿಳಿಸಬೇಕು) : ನೀನು ಮನೆಗೆ ಹೋಗಿ ತಲುಪಿದ ಮೇಲೆ ಅಲ್ಲಿಯ ವಾತಾವರಣದಲ್ಲಿ ಏನಾದರೂ ಪರಿವರ್ತನೆಯನ್ನು ಗಮನಿಸಿದೆಯೇನು ? ಒಂದು ವೇಳೆ ಹಾಗಿದ್ದರೆ, ಎಷ್ಟರ ಮಟ್ಟಿಗೆ ಬದಲಾವಣೆ ಕಂಡೆ ? ಇಂತು–

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೭ **ಪತ್ರ ಸಂಖ್ಯೆ – ೬೧** ಷಾಹಜಹಾನಪುರ
೦೯–೧೦–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

ನಿನ್ನ ಅನೇಕ ಪತ್ರಗಳು ಬಂದು ತಲುಪಿದವು. ನಾನು ಅವುಗಳಿಗೆ ಯಾವುದೇ ಉತ್ತರ ಕಳುಹಿಸಲು ಸಾಧ್ಯವಾಗಲಿಲ್ಲ; ಈಗ ಬರೆಯುತ್ತಿದ್ದೇನೆ. ನಿನ್ನ (ಆಧ್ಯಾತ್ಮಿಕ)

P-4-Books-PM-7-Anantyatre-21



ಸ್ಥಿತಿಯ ಬಗ್ಗೆ ಹೇಳುವುದಾದರೆ, ನನಗೆ ಅನಿಸುವ ಮಟ್ಟಿಗೆ, ನೀನು ಹೃದಯಚಕ್ರದ ಯಾತ್ರೆಯನ್ನು ಕೈಗೊಂಡು, ಅದನ್ನು ಪೂರ್ಣಗೊಳಿಸಿದ್ದೀಯೆ. ಈಗ ಪಿಂಡ–ದೇಶದಲ್ಲಿ, ಆತ್ಮಚಕ್ರದ ಯಾತ್ರೆಯನ್ನು ಪ್ರಾರಂಭಿಸಿದ್ದೀಯೆ. ನಾನು ಶಬ್ದಗಳನ್ನು ಇಷ್ಟರಮಟ್ಟಿಗೆ ಮಾತ್ರ ಬರೆದಿದ್ದೇನೆ. ಯಾಕೆಂದರೆ, ಈ ಸಮಯದಲ್ಲಿ ನನ್ನ ಶಿರೋಭಾಗದಲ್ಲಿ 'ಭಾರ'ದ ಅನಿಸಿಕೆಯಿದೆ ಮತ್ತು ಆ ಕಾರಣ ನನ್ನ ಅನಿಸಿಕೆ ಅಥವಾ ವೀಕ್ಷಣೆ (ರೀಡಿಂಗ್) ಸರಿಯಾಗಿರಲಿಕ್ಕಿಲ್ಲ. ಅದು ಸರಿ ಆಗುವುದೆಂದು ನಾನು ಭಾವಿಸುತ್ತೇನೆ.

ಸದ್ಗುರುವು ಭಕ್ತನನ್ನು ಸ್ಮರಿಸಿಕೊಳ್ಳಲು ಪ್ರಾರಂಭಿಸಿದ್ದಾನೆ ಎಂದರೆ, ಭಕ್ತನ ಭಾವನೆಗಳ ಕಾವು ಅವನನ್ನು ತಲುಪಿದೆ ಮತ್ತು ಯಾವನೋ ಒಬ್ಬ ಭಕ್ತ ತನ್ನನ್ನು ಸ್ಮರಿಸುತ್ತಿದ್ದಾನೆಂಬುದು ಅವನ ಗಮನಕ್ಕೆ ಬಂದಿದೆ ಎಂದು ಅರ್ಥ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭಕ್ತನ ಕರೆ ಗುರುವಿನ ಕಿವಿಗೆ ಮುಟ್ಟಿದೆ. ಯಾರೋ ಒಬ್ಬ ಕರೆಯುತ್ತಿರುವ ಧ್ವನಿ ಕೇಳಿದಾಗ, ಕರೆಯಲ್ಪಟ್ಟವನು ಮೊದಲು ಅತ್ತ ಲಕ್ಷ್ಯಕೊಡುತ್ತಾನೆ; ಮತ್ತು ತನ್ನನ್ನೇ ಪ್ರೇಮ ಭಕ್ತಿಗಳಿಂದ ಕರೆಯುತ್ತಿದ್ದಾನೆಂದು ತಿಳಿದಮೇಲೆ ಅವನಲ್ಲಿ ಕೂಡ ಕರೆಯುತ್ತಿರುವವನ ಬಗ್ಗೆ ಪ್ರೇಮ ಬೆಳೆಯುತ್ತದೆ. ಸಂತ ಕವಿ ಕಬೀರ ಬರೆದ ಹಾಗೆ '*ಮೇರಾ ರಾಮ ಮುಝೇ ಭಜೇ ಜಬ್, ತಬ್ ಪಾಂವೂ ವಿಶ್ರಾಮ*' (ರಾಮ ಯಾವಾಗ ನನ್ನನ್ನು ಭಜಿಸಲು (ಸ್ಮರಿಸಲು) ಪ್ರಾರಂಭಿಸುತ್ತಾನೋ, ಆಗ ನನಗೆ ವಿಶ್ರಾಮ ದೊರೆಯುತ್ತದೆ). ಈ ಸ್ಥಿತಿಯು ನಿಜಕ್ಕೂ ಶ್ಲಾಘನೀಯವಾದುದು. 'ಭಗವಂತನೇ ಪ್ರಿಯಕರ, ಭಕ್ತನು ಪ್ರಿಯತಮೆ' ಎಂದು ಹಿರಿಯರು ಈ ಸ್ಥಿತಿಯನ್ನು ವರ್ಣಿಸಿದ್ದಾರೆ. ಭಕ್ತಿಮಾರ್ಗದಲ್ಲಿ ಇದು ಒಂದು ಉನ್ನತ ಸ್ಥಿತಿ ಎಂದು ಕರೆಯಲ್ಪಟ್ಟಿದೆ; ಮತ್ತು ನಾವು ಕೂಡ ಭಕ್ತಿಭಾವದಿಂದಲೇ ಮುಂದೆ ನಡೆಯುತ್ತೇವೆ. ಅದರ ತತ್ತ್ವವನ್ನು ನಾನು ವಿವರಿಸಲು ಹೊರಟರೆ, ಈ ಸ್ಥಿತಿ ಜ್ಞಾನಮಾರ್ಗದಲ್ಲಿ ಬರುತ್ತದೆ. ಆದ್ದರಿಂದ ಯಾರೂ ಇದರ ತತ್ತ್ವವನ್ನು ವಿವರಿಸಲು ಹೋಗಿಲ್ಲ. ಯಾಕೆಂದರೆ, ಅದು ಶಿಷ್ಟಾಚಾರ ಮತ್ತು ಸಂಸ್ಕೃತಿಗೆ ವಿರುದ್ಧವಾಗಿರುವಂತೆ ತೋರುತ್ತದೆ. ನೀನು ಆ ಬಿಂದು (ಸ್ಥಿತಿ)ವನ್ನು ತಲುಪಿದಾಗ ನಾನು ಅದನ್ನು ನಿನಗೆ ವಿವರಿಸುತ್ತೇನೆ. ಅದನ್ನು ನಾನು, ಮುಂದೆ ಪ್ರಕಟವಾಗಲಿಕ್ಕಿರುವ ನನ್ನ ಪುಸ್ತಕದಲ್ಲಿ 'ಕೇಂದ್ರ ಮಂಡಲ' ಎಂದು ಕರೆದಿದ್ದೇನೆ.

"ನನ್ನ ಸ್ಥಿತಿ, ನಾನು ಅಭ್ಯಾಸ ಪ್ರಾರಂಭಮಾಡುವಾಗ ಇದ್ದ ಸ್ಥಿತಿಯಂತಿದೆ" ಎಂದು ನೀನು ಬರೆದಿದ್ದೀಯೆ. ಇದರಲ್ಲಿ 'ಈಶ್ವರೀಯ ಸ್ಥಿತಿ'ಯ ಒಂದು ಛಾಯೆ ಇದೆ. ಆದರೆ ಅದರ ಪೂರ್ಣ ವಿಕಸಿತ ರೂಪವು ಮುಂದೆ ಬರಲಿಕ್ಕಿದೆ. ಹಾಗಿದ್ದರೂ, ಅದು ನಾನು ಬಯಸುವುದಕ್ಕಿಂತ ಬಲುದೂರ ಇದೆ. 'ಈಶ್ವರೀಯ ಸ್ಥಿತಿ' ಪಕ್ವಗೊಂಡಾಗ ಆ ವ್ಯಕ್ತಿಯನ್ನು 'ಸಂತ' ಎಂದು ಕರೆಯಲಾಗುತ್ತದೆ, ಮತ್ತು ಅದು ತನ್ನ ನೈಜ ಸ್ವರೂಪವನ್ನು ತಳೆದಾಗ ಅವನನ್ನು 'ಪರಮಸಂತ' ಎಂದು ಕರೆಯಲಾಗುತ್ತದೆ.



ಇದರಲ್ಲಿ ಒಂದು ಸ್ಥಿತಿಯು ಶವದ ಸ್ಥಿತಿಯಂತಿರುತ್ತದೆ. ಜೀವಿಸುತ್ತಿರುವಾಗಲೇ ಅಭ್ಯಾಸಿಯು ಮೃತ–ಸದೃಶ ಸ್ಥಿತಿಯನ್ನು ಅನುಭವಿಸುತ್ತಾನೆ. ಈ ಸ್ಥಿತಿಯು ಪಕ್ವಗೊಂಡಾಗ, ಅವನು ಜೀವನ್ಮುಕ್ತ ದಶೆಯನ್ನು ಹೊಂದುತ್ತಾನೆ ಮತ್ತು ಬೀಜ (ಪುನರ್ಜನ್ಮಕ್ಕೆ ಕಾರಣವಾಗುವಂಥದು) ಸುಟ್ಟುಹೋಗಿರುತ್ತದೆ (ಬೀಜದಗ್ಧ). ಈ ಹಂತದಲ್ಲಿ ಮನುಷ್ಯನನ್ನು 'ಮಾನವ ಜೀವಿ' ಎಂದು ಕರೆಯಬಹುದು. ಅದುವರೆಗೆ ಅವನು ಒಂದು 'ಪಶು' ಆಗಿರುತ್ತಾನೆ.

ನೀನು ಆಸ್ಪತ್ರೆಯಲ್ಲಿ ಕಂಡ ದೃಶ್ಯಗಳು ಮತ್ತು ಅನಂತರ ಭೀಷ್ಮ ಪಿತಾಮಹನ ಉದಾಹಣೆ ಕಣ್ಮುಂದೆ ಬಂದು, ಮೂಡಿದ ವಿಚಾರಗಳು ಪ್ರೋತ್ಸಾಹಕರವಾಗಿವೆ. (ಆದರೆ) ಅವುಗಳಿಗೂ ಆಧ್ಯಾತ್ಮಿಕತೆಗೂ ಯಾವುದೇ ಸಂಬಂಧವಿಲ್ಲ. ಅದಾದನಂತರ ನಿನಗೆ ಶಕ್ತಿಹೀನತೆ ಅನುಭವವಾಯಿತು ಎಂದು ಬರೆದಿದ್ದೀಯೆ. ಅದರ ಕಾರಣ ಪ್ರಾಯಶಃ ಇದು ಇರಬಹುದು : ನೀನು (ಶಾರೀರಿಕವಾಗಿ) ದುರ್ಬಲಳು. ಅತ್ಯುತ್ಸಾಹದಿಂದ ನಿನ್ನ ರಕ್ತದ ತಾಪಮಾನ ಹೆಚ್ಚಿತು. ಮತ್ತೆ, ಆ ಉತ್ಸಾಹ ತಣ್ಣಗಾದಮೇಲೆ, ಅದು ಸಾಮಾನ್ಯಸ್ಥಿತಿಗೆ ಬಂದಿತು. ಹಾಗಾಗಿ ಉತ್ಸಾಹದ ಕ್ರಿಯೆ ನಡೆಯುತ್ತಿರುವಾಗ ವ್ಯಯವಾದ ರಭಸ ಮತ್ತು ಸಾಮರ್ಥ್ಯ ಶರೀರದಲ್ಲಿ ಕುಂದಿ ಬಲಹೀನತೆ ಅನುಭವವಾಯಿತು. ಉದಾಹರಣೆಗೆ, ಹೃದಯ ದುರ್ಬಲವಿದ್ದಾಗ ಅದಕ್ಕೆ ಪ್ರಚೋದಕ ಔಷಧ ಕೊಟ್ಟಾಗ ಬಲ ಅನುಭವಕ್ಕೆ ಬರುತ್ತದೆ. ಮತ್ತು ಅದರ ಪರಿಣಾಮ ಕಡಿಮೆಯಾದಾಗ, ಔಷಧವು ಕೊಟ್ಟ ಬಲದೊಂದಿಗೆ ನಮ್ಮ ಸಹಜವಾಗಿದ್ದ ಬಲವೂ ವ್ಯಯವಾಗುವುದಾದ್ದರಿಂದ ಬಲಹೀನತೆ ಅನುಭವಕ್ಕೆ ಬರುತ್ತದೆ. ಹೃದಯ ಬಹಳಷ್ಟು ಕೆಲಸಮಾಡಿದಾಗ ಅದು ಶಕ್ತಿಹ್ರಾಸ ಮತ್ತು ದಣಿವು ಅನುಭವಿಸಲೇಬೇಕು. ಇದನ್ನೇ ದುರ್ಬಲತೆ ಎಂದು ಕರೆಯುವುದು.

ಈಗ, ನಿನ್ನ ಮಾತಾಜಿ (ಶ್ರೀ ಬಾಬೂಜಿಯವರ ಪತ್ನಿ)ಯ ಬಗ್ಗೆ ನೀನು ವ್ಯಕ್ತಪಡಿಸಿದ ದುಃಖ ಮಾನವೀಯತೆಗೆ ಸಹಜವಾದದ್ದು ಮತ್ತು ಕರ್ತವ್ಯ ಕೂಡ. ಅತ್ಯಂತ ಕಿರಿಯ ಮಗುವಿನ ಬಗ್ಗೆ ನನಗೆ ಕನಿಕರವೆನಿಸುವುದೇನೋ ನಿಜವೆ; ಆದರೆ ಭಗವಂತನೇ ಸರ್ವಪ್ರಭು. ಅವನ ಎಲ್ಲ ಕಾರ್ಯಗಳ ಹಿಂದೆ ಒಂದು ಉದ್ದೇಶ ಇದ್ದೇ ಇರುತ್ತದೆ. ಅಲ್ಲಿ ಎರಡೇ ಪರ್ಯಾಯಗಳಿದ್ದುವು. ಒಂದೋ, ನಾನು ಈ ಜಗತ್ತನ್ನು ಮೊದಲು ತ್ಯಜಿಸಬೇಕಿತ್ತು ಅಥವಾ ಅವಳು ಮೊದಲು ತ್ಯಜಿಸಬೇಕಿತ್ತು. ಒಂದು ವೇಳೆ ನಾನೇ ಮೊದಲು ಹೊರಟು ಹೋಗಿದ್ದರೆ, ಬಹುಶಃ ಅವಳ ಕೂಗು ನನ್ನನ್ನು ಅಷ್ಟು ಸರಿಯಾಗಿ ಮುಟ್ಟುತ್ತಿರಲಿಲ್ಲ ಮತ್ತು ಅವಳ ಉದ್ದೇಶವು ಅಷ್ಟು ಚೆನ್ನಾಗಿ ನೆರವೇರಿಸಲ್ಪಡುತ್ತಿರಲಿಲ್ಲ. ಅವಳ ಉದ್ದೇಶ ಖಂಡಿತ ಪೂರೈಸಲ್ಪಡುತ್ತಿತ್ತೆಂಬುದು ನಿಃಸಂಶಯ; ಯಾಕೆಂದರೆ ಲಾಲಾಜಿ ಮಹಾರಾಜರು ಹಾಗೆ ಒಮ್ಮೆ ನನಗೆ ಹೇಳಿದ್ದರು. ಅವರು ಹೇಳಿದುದರ ಸಾರ ಹೀಗಿದೆ– "ಅವಳು *ನಿನಗೆ (ಶ್ರೀ ಬಾಬೂಜಿಯವರಿಗೆ) ಬಹಳಷ್ಟು ಬೈದು ತೊಂದರೆ ಕೊಡುತ್ತಿದ್ದಳು*

P-4-Books-PM-7-Anantyatre-22



ಮತ್ತು ಅವಳಿಂದಾಗಿಯೇ ನೀನು ತಾಳ್ಮೆಯ ಅಭ್ಯಾಸ ರೂಢಿಸಿಕೊಂಡೆ; ಅದು ಆಧ್ಯಾತ್ಮಿಕ ಉನ್ನತಿಗೆ ಅತ್ಯಂತ ಆವಶ್ಯಕ. ಅದು ಕಾರಣ ಅವಳು ಮುಕ್ತಿ ಪಡೆಯುತ್ತಾಳೆ" ನಮ್ಮ ಹಿರಿಯರಿಗೆ (ಪೂರ್ವ ಗುರುಗಳಿಗೆ) ಯಾರನ್ನಾದರೂ ಮುಕ್ತರನ್ನಾಗಿ ಮಾಡುವುದು ಒಂದು ಮಕ್ಕಳ ಆಟವಿದ್ದಂತೆ. ಅವರು ಅದನ್ನು ಮಾಡಿದ್ದಾರೆ. ಕೆಲಸ ಬೇರೆಯವರಿಂದ ಮಾಡಲ್ಪಟ್ಟಿದೆ (ಲಾಲಾಜಿಯವರಿಂದ), ಆದರೆ ಅದರ ಶ್ರೇಯಸ್ಸನ್ನು ನನಗೆ ನೀಡಲಾಗಿದೆ.

ಕೇಸರ್ ಮತ್ತು ಬಿಟ್ಟೂ ಅವರಿಗೆ ನನ್ನ ಆಶೀರ್ವಾದ ಮತ್ತು ತಾಯಿಯವರಿಗೆ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೮ **ಪತ್ರ ಸಂಖ್ಯೆ – ೬೨** ಷಾಹಜಹಾನಪುರ
೦೯–೧೦–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಶುಭ ಆಶೀರ್ವಾದ,

ನಿನ್ನ ಉಳಿದೆಲ್ಲ ಪತ್ರಗಳಿಗೆ ನಾನು ಉತ್ತರ ಬರೆದಿದ್ದೇನೆ; ಅವುಗಳನ್ನು ಈ ಪತ್ರದ ಜೊತೆಗೆ ಇಟ್ಟಿದ್ದೇನೆ. ನಾನು ಈಗ ಮಾಸ್ಟರ್ ಸಾಹೇಬರು (ಈಶ್ವರ ಸಹಾಯ್) ತಂದ ನಿನ್ನ ಪತ್ರಕ್ಕೆ ಉತ್ತರಿಸುತ್ತಿದ್ದೇನೆ.

ನೀನು ಬರೆದಿರುವ ಆಧ್ಯಾತ್ಮಿಕ ಸ್ಥಿತಿ ಒಳ್ಳೆಯದಿದೆ. ಸಾಧ್ಯವಿದ್ದಷ್ಟು ಸದ್ಗುರುವಿನ ಸ್ಮರಣೆ ಮಾಡುತ್ತಿರಲು ನಾವು ಪ್ರಯತ್ನಿಸುತ್ತಿರಬೇಕು. ಹಾಗಿದ್ದಾಗ್ಯೂ ನಾವು ಸದ್ಗುರುವಿನ ಸ್ಮರಣೆಯನ್ನೂ ಮರೆಯಲಾರಂಭಿಸುವ ಸಮಯ ಖಂಡಿತ ಬಂದೇ ಬರುತ್ತದೆ. ಆದರೆ ನಾವು ಅದರ ಮೇಲೆಯೇ ನಿಲ್ಲಬಾರದು. ಸದ್ಗುರುವಿನ ಸ್ಮರಣೆ ಯಾವ ರೀತಿಯಲ್ಲಿಯೂ ಬರದಿದ್ದರೆ, ಆಗ ನಾವು 'ಅವನ ಸ್ವರೂಪ'ವನ್ನು ಬದಲಿಸಿ ಅವನ ಸ್ಮರಣೆ ಮಾಡಬೇಕು. ಅವನನ್ನು ಯಾವುದೇ 'ಸ್ವರೂಪ'ದಲ್ಲಿ ಸ್ಮರಿಸಲು ಸಾಧ್ಯವಾಗದಿದ್ದರೆ ಆಗ, ನಾವು 'ಅವನ ಸ್ಮರಣೆಯಲ್ಲಿ ಮುಳುಗಿಬಿಟ್ಟಿದ್ದೇವೆ' ಎಂದು ಕಲ್ಪಿಸಿಕೊಳ್ಳಬೇಕು. ತದನಂತರ ಸ್ಥಿತಿಯಲ್ಲಿ ಬದಲಾವಣೆ ಉಂಟಾದಾಗ, ನಾನು ಅದರ ಬಗ್ಗೆ ಹೇಳುತ್ತೇನೆ. ತಾಯಿಯವರಿಗೆ ನನ್ನ ನಮಸ್ಕಾರಗಳನ್ನು ಮತ್ತು ಮಕ್ಕಳಿಗೆ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೯ **ಪತ್ರ ಸಂಖ್ಯೆ – ೬೬** ಷಾಹಜಹಾನಪುರ
೧೧–೧೧–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ಭಗವಂತನ ಕೃಪೆಯಿಂದ ನಿನ್ನ ಸ್ಥಿತಿ ಉತ್ತಮಗೊಂಡಿರಬಹುದು. ಒಂದು ದಿನ ನಾನು ನಿನ್ನ ಕೆಲಸವನ್ನು ಗಮನಿಸಿದೆ. ನಾನು (ಆಗ) ಕೋರ್ಟಿನಲ್ಲಿ ಇದ್ದೆ. ನಾನು ಅತ್ಯಂತ ಸಂತುಷ್ಟನಾದೆ. ಅದು ತನ್ನಿಂದತಾನೇ ಆಗುತ್ತಿತ್ತೋ ಅಥವಾ ನೀನೇ ಸ್ವತಃ ಅದನ್ನು ಕೈಗೊಂಡಿದ್ದೆಯೋ ? ಏನೇ ಇರಲಿ, ಆ ವಿಧಾನ ಸರಿಯಾದುದಾಗಿತ್ತು. ಅದು ಭಾರತವನ್ನು ಶುದ್ಧೀಕರಿಸುವ ಕುರಿತಾಗಿತ್ತು. ನೀನು ಸ್ವಸ್ಥಳಾದಮೇಲೆ ನಿನ್ನ ಸ್ಥಿತಿಯನ್ನು ಕುರಿತು ತಿಳಿಸು. ನಾನು ಮುಂದಿನ ಸಾರೆ ಲಖೀಂಪುರಕ್ಕೆ ಬಂದಾಗ, ಭಗವಂತನ ಇಚ್ಛೆ ಹಾಗಿದ್ದರೆ, ವೀಕ್ಷಿಸಿ ಅರಿಯುವ (Reading) ಮತ್ತು ಅನುಭವ ಪಡೆಯುವ (ಸಂವೇದನಾಶೀಲತೆಯ) ನಿನ್ನ ಸಾಮರ್ಥ್ಯವನ್ನು ಮುಕ್ತಗೊಳಿಸುತ್ತೇನೆ (ತೆರೆಯುತ್ತೇನೆ). ಮತ್ತು ಯಾವ ಬಿಂದುವನ್ನು ತೆರೆದಾಗ ಅನುಭವಶಕ್ತಿ ಹೆಚ್ಚುವುದೋ ಆ ಬಿಂದುವಿನ ಬಗೆಗೂ ತಿಳಿಸುತ್ತೇನೆ. ಆದರೆ, ಅದರ ನಂತರ ಈ ಸಾಮರ್ಥ್ಯವು ಅದನ್ನು ರೂಢಿಸಿಕೊಳ್ಳುವ ಅಭ್ಯಾಸವನ್ನು ಅವಲಂಬಿಸಿದೆ. ಅಂದರೆ, ಯಾವುದಾದರೊಂದು ಸಾಮರ್ಥ್ಯವನ್ನು ಜಾಗ್ರತಗೊಳಿಸಿದಾಗ, ಅದರಿಂದ ಕೆಲಸ ತೆಗೆದುಕೊಳ್ಳದಿದ್ದರೆ, ಆಗ ಅದು ಹೆಚ್ಚು ವಿಕಾಸಗೊಳ್ಳುವುದಿಲ್ಲ. 'ಪಿಂಡದೇಶ' ಮತ್ತು 'ಬ್ರಹ್ಮಾಂಡ ದೇಶ'ಗಳ ಮೇಲೆ ಪ್ರಭುತ್ವವನ್ನು ಭಗವಂತ ನಿನಗೆ ಅನುಗ್ರಹಿಸಿದ್ದಾನೆ. 'ಪಿಂಡದೇಶ'ದ ಮೇಲಿನ ಪ್ರಭುತ್ವವೆಂದರೆ 'ವ್ಯಕ್ತಿ'ಯ ಮೇಲೆ ಸಂಪೂರ್ಣ ನಿಯಂತ್ರಣ, ಮತ್ತು 'ಬ್ರಹ್ಮಾಂಡ ದೇಶ'ದ ಮೇಲಿನ ಪ್ರಭುತ್ವವೆಂದರೆ 'ವಿಶ್ವ'ದ ಮೇಲೆ, ಅರ್ಥಾತ್ ವಿಶ್ವದ ಶಕ್ತಿಯ (Cosmic Power) ಮೇಲೆ ಸಂಪೂರ್ಣ ನಿಯಂತ್ರಣ. ಯಾವುದೇ ಸಮಯದಲ್ಲಿ ನನ್ನ ಮನಸ್ಸಿಗೆ ಹೊಳೆದರೆ, ಮತ್ತು ಊರ್ಧ್ವಲೋಕದಿಂದ ಯಾವುದೇ ಸಂಕೇತ (ಸೂಚನೆ) ಬಂದರೆ, ಆಗ ನಾನು ನಿನಗೆ ಬರೆಯುತ್ತೇನೆ. ಅದಲ್ಲದೆ ನಾನು ನಿನ್ನ ಪ್ರತಿಯೊಂದು ನರನಾಡಿಗಳಲ್ಲಿಯೂ, ಶರೀರದ ಅಂಗಾಂಗಗಳಲ್ಲಿಯೂ ಆಧ್ಯಾತ್ಮಿಕ ಶಕ್ತಿಯನ್ನು ತುಂಬಿದ್ದೇನೆ. ಅದನ್ನು ಅರಗಿಸಿಕೊಳ್ಳಲು ಅನೇಕ ವರ್ಷಗಳು ಬೇಕಾಗುವುದು. ಸದ್ಯ, ಹಾಗೆ ಭಗವದಿಚ್ಛೆ ಇದ್ದರೆ, ನಾನು ಒಂದೆರಡು ವರ್ಷಗಳಲ್ಲಿ ಅದು ಅರಗುವಂತೆ ಮಾಡುತ್ತೇನೆ; ಅದು ಅತ್ಯಂತ ಅಲ್ಪಾವಧಿಯೇ ಸರಿ. ನಾನು ನಿನ್ನಿಂದ ಕೆಲಸ ತೆಗೆದುಕೊಳ್ಳಬೇಕಿದೆ, ಆದ್ದರಿಂದ ಹಾಗೆ ಮಾಡಿದೆ; ಅಲ್ಲದೆ, ಹಾಗೆ ಮಾಡಲು ನೀನೂ ನನ್ನನ್ನು ವಿವಶಗೊಳಿಸಿದೆ ಕೂಡ. ಅದನ್ನು ಅರಗಿಸಿಕೊಳ್ಳಲು ಸಹಾಯವಾಗುವ ಒಂದು ವಿಧಾನವನ್ನು ನಾನು ನಿನಗೆ ಬರೆಯುತ್ತೇನೆ. ಅದೆಂದರೆ 'ಸದ್ಗುರುವಿನ ಸ್ಮರಣ'. ಸಾಮಾನ್ಯಗತಿಯಲ್ಲಿ ಒಂದು ಜೀವಮಾನವೇ ಕಳೆದು ಹೋಗಬಹುದು; ಆದರೂ ಅರಗದೆ ಉಳಿದಿರುತ್ತದೆ. ಹಾಗೆ ಅರಗದೆ ಉಳಿಯುವುದರಲ್ಲಿ ಯಾವುದೇ ಅಪಾಯವೇನಿಲ್ಲ. ಆದರೆ, ನಾನು ಇನ್ನಷ್ಟು ಹೆಚ್ಚು

P-4-Books-PM-7-Anantyatre-23



ಆಧ್ಯಾತ್ಮಿಕ ಶಕ್ತಿಯನ್ನು ತುಂಬುವ ಒಲವು ಬರಬಹುದು; ಆಗ ಅದಕ್ಕೆ ಮೊದಲಿಗೆ ಅವಕಾಶವಿರಬೇಕು. ಒಳ್ಳೆಯ ಆರೋಗ್ಯ ಮತ್ತು ಅಭ್ಯಾಸಿಗಳಿಗೆ 'ಬೈಠಕ್' ಕೊಡುವುದು ಕೂಡ, ಅದನ್ನು ನೀನು ಅರಗಿಸಿಕೊಳ್ಳಲು ನೆರವಾಗಬಹುದು, ನಿನ್ನ ಸೋದರಿ ಮತ್ತು ತಾಯಿಯಯವರು ನಿನ್ನೊಟ್ಟಿಗೆ 'ಪೂಜೆ'ಯಲ್ಲಿ ಕುಳಿತುಕೊಳ್ಳಬಹುದು. ಉಳಿದ ಮಹಿಳೆಯರೂ ಜೊತೆಯಲ್ಲಿ ಕುಳಿತರೆ ಇನ್ನೂ ಒಳಿತಾದೀತು. ನೀನು ತರಬೇತಿ ನೀಡುವುದರಲ್ಲಿ ನಿನಗೆ ಸಮಸ್ಯೆ ಅಥವಾ ಅಡ್ಡಿಯೇನಾದರೂ ಅನುಭವಕ್ಕೆ ಬಂದರೆ ನೀನು ಮಾಸ್ಟರ್ ಸಾಹೇಬರನ್ನು ವಿಚಾರಿಸಿ ತಿಳಿದುಕೊಳ್ಳಬಹುದು. ಭಗವಂತ ನಿನಗೆ ಎಲ್ಲವನ್ನೂ ಕೊಟ್ಟಿದ್ದಾನೆಂಬುದನ್ನು ನಾನು ಒಪ್ಪುತ್ತೇನೆ; ಆದರೆ 'ಅವನು ಅಪರಿಮಿತ'ನಾಗಿರುವಂತೆಯೇ, ನಮ್ಮ ಪ್ರಗತಿಗೂ ಸೀಮೆ (ಮಿತಿ) ಇಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ 'ನಾನು ಏನನ್ನೂ ತಿಳಿದಿಲ್ಲ ಎಂಬುದನ್ನು ಮಾತ್ರ ತಿಳಿದಿದ್ದೇನೆ' ಎಂದು ಘಂಟಾಘೋಷವಾಗಿ ಹೇಳಲು ನಾನು ಸಿದ್ಧನಿದ್ದೇನೆ. ಆದರೆ, ಮಗಳೆ, ನಮ್ಮ ಸಂಸ್ಥೆಯಲ್ಲಿರುವ ನಮ್ಮ ಗುರುಮಹಾರಾಜರ ಶಿಷ್ಯರಲ್ಲಿ ಎಂಥ ಸ್ಥಿತಿ ಇದೆಯೆಂದರೆ, 'ಒಂದು ಅರಿಷಿಣದ ಕೊಂಬು ಸಿಕ್ಕವನು, ತಾನು ಗ್ರಂದಿಗೆ ವ್ಯಾಪಾರಿ' ಎಂದು ಭಾವಿಸುತ್ತಾನೆ. ಆಧ್ಯಾತ್ಮಿಕ ಜ್ಞಾನದ ಸಾಗರ, ಒಬ್ಬನು ಜೀವನವಿಡೀ ಮತ್ತು ಅದರ ನಂತರವೂ ಈಜಿದರೂ ಕೊನೆಗಾಣದಷ್ಟು ವಿಶಾಲವೂ, ಆಳವೂ ಆಗಿದೆ. ನೀನು ಅಲ್ಲಿ ಕೃತಜ್ಞತೆಯ ಪ್ರಸಾದ ಅರ್ಪಿಸಬಹುದೆಂದು ನನಗೆ ಅನಿಸುತ್ತದೆ. ಈ ಪತ್ರವನ್ನು ಕೇಸರ್‌ಳಿಂದ ಒಂದು ನಕಲು ಮಾಡಿಸಿ, ಇಲ್ಲಿಗೆ ಒಂದು ನಕಲನ್ನು ಕಳುಹಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೦ **ಪತ್ರ ಸಂಖ್ಯೆ – ೬೯** ಷಾಹಜಹಾನಪುರ
೧೬–೧೧–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಮತ್ತು ಕೇಸರ್‌ಳ ಪತ್ರಗಳು ಕೈಸೇರಿದವು. ನಾನು ನಿನಗೆ (ದೀರ್ಘವಾಗಿ) ಬರೆಯಲಿಚ್ಛಿಸುತ್ತೇನೆ. ಆದರೆ ಈಗ ರಾತ್ರಿ ಒಂದು ಗಂಟೆಯಾಗಿದೆ. ಆದ್ದರಿಂದ ಸಂಕ್ಷಿಪ್ತವಾಗಿ ಅತ್ಯವಶ್ಯವಿರುವಷ್ಟನ್ನು ಮಾತ್ರ ಬರೆಯುತ್ತೇನೆ. ನಿನ್ನ ವ್ಯಾಕುಲತೆಯ (ತಳಮಳ, ಚಡಪಡಿಕೆ) ಬಗ್ಗೆ ನಾನು ನಿನ್ನನ್ನು ಅಭಿನಂದಿಸುತ್ತೇನೆ. ನೀನು ಮಾಡುತ್ತಿರುವ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿದ್ದೀಯೆ, ನಿನ್ನ ಮನಸ್ಸು ದಣಿದುಹೋಗದಿರುವಷ್ಟು ಮಾತ್ರವೇ ನೀನು ಕೆಲಸಮಾಡಬೇಕು. ನೀನು ಅಲಹಾಬಾದಿಗೆ ಹೋಗಲು ಬಯಸುತ್ತೀಯೆ; ಅದನ್ನು ಚೌಬೇಜೀಯವರ ಅಭಿಪ್ರಾಯಕ್ಕೆ ಬಿಟ್ಟುಬಿಡು. ನನಗೆ ಅಲಹಾಬಾದಿಗೆ ಹೋಗುವ ಮನಸ್ಸಿದೆ. ಮತ್ತು



ಭಗವಂತನು ದಯೆತೋರಿದರೆ ನಾನು ಅಲ್ಲಿಗೆ ತಲುಪುತ್ತೇನೆ. ನಾನು ಅಲ್ಲಿಗೆ ಹೋಗುವುದರಿಂದ, ನಾನು ಅಲ್ಲಿಗೆ ತಲುಪಿದ್ದೇನೆಂಬ ವಿಚಾರವನ್ನಿಟ್ಟುಕೊಳ್ಳುವುದರ ಹೊರತಾಗಿ, ಹೇಳಬಹುದಾದಂಥ ಮತ್ತಾವುದೇ ಪ್ರಯೋಜನ ನಿನಗಾಗದು. ಅದು ಯಾಕೆಂದರೆ ಅಲ್ಲಿ ಬೇರೆ ಸಂಬಂಧಿಕರೂ ಉಪಸ್ಥಿತರಿರುವುದರಿಂದ, ನೀವೆಲ್ಲರೂ ಅಲ್ಲಿ ನಾನಿದ್ದಲ್ಲಿಗೆ ಬರುವುದು ಸೂಕ್ತವೆನಿಸದು. ಪರ್ದಾ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು (ಪರದೆಯ ಹಿಂದೆ ಇರುವ ಪದ್ಧತಿ). ಕೇಸರ್‌ಳು ನನಗೆ ಬರೆದಷ್ಟರಮಟ್ಟಿಗೆ, ಅವಳಿಗೆ ಪೂಜೆಯಲ್ಲಿ (ಧ್ಯಾನ) ಆಸಕ್ತಿ ಮತ್ತು ಒಲವು ಹೆಚ್ಚುತ್ತಿದೆಯೆಂಬುದು ಕಂಡು ಬರುತ್ತದೆ. ಚೌಬೇಜಿ ಮತ್ತು ಮಾಸ್ಟರ್ ಸಾಹೇಬರು ಇಬ್ಬರೂ ಈ ಮೊದಲೇ ನನಗೆ ಹೇಳಿದ್ದಾರೆ; ಆದರೆ ನನ್ನಲ್ಲಿ ಬೇರೆ ಅಭಿಪ್ರಾಯ ಮೂಡಿತ್ತು. ಆದರೆ ಇನ್ನೂ ಆಸಕ್ತಿ ಹೆಚ್ಚುವುದನ್ನು ಕಾಯಬೇಕು. ಅವಳ ಆಸಕ್ತಿಯ ಮೇಲೆ ಭರವಸೆ ಮೂಡುವಷ್ಟು ಮಟ್ಟಕ್ಕೆ ಅವಳು ಇನ್ನೂ ಮುಟ್ಟಿಲ್ಲ. ಮತ್ತೆ, ನಾನು ಯಾರ ಸೇವೆ ಮಾಡಲೂ ಹಿಂದೆ ಸರಿಯಬಾರದು, ಹಾಗೆ ನಾನು ಹಿಂದೆ ಸರಿಯುವುದೂ ಇಲ್ಲ. ನೀವೆಲ್ಲರೂ ನನ್ನನ್ನು ತಿರುಗಿಸಿದ ದಿಕ್ಕಿನಲ್ಲಿಯೇ ನಾನೂ ತಿರುಗುತ್ತೇನೆ.

ಈಗ ತುಂಬ ತಡವಾಯಿತು. ನಾನು ಇನ್ನಾವಾಗಲಾದರೂ ಬರೆಯುತ್ತೇನೆ. ನಾನು ಈ ಪತ್ರದಲ್ಲಿ ಕೇಸರ್‌ಳ ಪತ್ರಕ್ಕೂ ಉತ್ತರ ಬರೆದಿದ್ದೇನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೧ **ಪತ್ರ ಸಂಖ್ಯೆ – ೭೩** ಷಾಹಜಹಾನಪುರ
೦೫–೧೨–೧೯೪೯

ಪ್ರಿಯ ಪುತ್ರಿ ಕಸ್ತೂರಿ, ಶುಭ ಆಶೀರ್ವಾದಗಳು,

ನಿನ್ನ ಎರಡು ಪತ್ರಗಳು ಕೈಸೇರಿದವು; ಒಂದು ಅಲಹಾಬಾದಿಗೆ ಹೋಗುವ ಮೊದಲು, ಇನ್ನೊಂದು ನಿನ್ನೆ ೩–೧೨–೧೯೪೯ ರಂದು. ನನ್ನ ಹೃದಯವನ್ನು ಅಲಹಾಬಾದವೇ ಹೆಚ್ಚು ಆವರಿಸಿತ್ತು. ನಿನ್ನ ಸೋದರಿ ಶಕುಂತಲಾ ನನಗೋಸ್ಕರ ಅಲಹಾಬಾದಿಗೆ ಬಂದಿದ್ದಳು. ಅವಳು ತನ್ನ ಹೃದಯಘಾತಗಳನ್ನೂ ಲೆಕ್ಕಿಸಲಿಲ್ಲ. ಅಲ್ಲಿ ಕೂಡ ಅವಳು ಅನೇಕ ಸಲ ಹೃದಯಾಘಾತದಿಂದ ನೊಂದಳು. ಅದನ್ನು ನೋಡಿ ನನಗೆ ಅವಳ ಬಗ್ಗೆ ಕನಿಕರವುಂಟಾಯಿತು; ಅಲ್ಲದೆ, ಚೌಬೇಜಿಯವರು ಅನೇಕ ಬಾರಿ ನೆನಪಿಸಿದುದರ ಹೊರತಾಗಿಯೂ ಅಂಥ ಒಳ್ಳೆಯ ಹುಡುಗಿಯನ್ನು ನಾನು ಸ್ಮರಿಸುವುದರಲ್ಲಿ ಚ್ಯುತನಾದೆ ಎಂದು ಖೇದಪಟ್ಟೆ, ಬಹಳೇ ಪ್ರಯತ್ನದಿಂದ ನಾನು ಅವಳನ್ನು ಎರಡು ಮೂರು ಸಲ ಜ್ಞಾಪಿಸಿಕೊಂಡೆ. ಒಂದು ದಿನ ಅವಳ ಹೃದಯ ತುಂಬಾ ವೇಗದಿಂದ ಬಡಿದುಕೊಳ್ಳುತ್ತಿತ್ತು. ಅವಳ ಸ್ಥಿತಿ ಕಂಡು ನನಗೆ

ಬಹಳ ಕಸಿವಿಸಿ ಉಂಟಾಯಿತು. ಪ್ರಾರ್ಥನೆಗಳಿಂದಾಗಿ ಅವಳಲ್ಲಿ ಸ್ವಲ್ಪ ಚೇತರಿಕೆ ಕಂಡು ಬಂದಿತು ಮತ್ತು ಅಲ್ಪ ಸಮಯದಲ್ಲಿಯೇ ಅವಳ ತೊಂದರೆ ಬಹಳಷ್ಟು ಶಮನವಾಯಿತು. ಅವಳ ಕುರಿತಾದ ಶಿಫಾರಸುಗಳ ದೆಸೆಯಿಂದ ಮತ್ತು ಅವಳ ಸ್ಥಿತಿಯನ್ನು ನೋಡಿ ಕನಿಕರವೆನಿಸಿದ ಕಾರಣ, ನಾನು ಅವಳ ಆಧ್ಯಾತ್ಮಿಕ ಪ್ರಗತಿಗೋಸ್ಕರ ಪ್ರಾರ್ಥನೆ ಮತ್ತು ಧ್ಯಾನದಲ್ಲಿ ನಿರತನಾಗಿ ಉಳಿದೆ. ಭಗವಂತನಿಗೆ ನನ್ನ ಧ್ವನಿ ಕೇಳಿಸಿತು. ಅವಳ ಪಿಂಡದೇಶದ ಎಲ್ಲ ಚಕ್ರಗಳ ಯಾತ್ರೆ ಮುಗಿದಿದೆ. ಈಗ ಅವಳು ಬ್ರಹ್ಮಾಂಡ–ಮಂಡಲದಲ್ಲಿ ನೆಲೆಸಿದ್ದಾಳೆ. ಅವಳ ಶರೀರದ ಆದ್ಯಂತ ದೈವೀಪ್ರಕಾಶ ತುಂಬಿದೆ ಮತ್ತು 'ಅನಾಹತ ಶಬ್ದ' ಅಥವಾ 'ಅಜಪಾ' ಸ್ಥಿತಿಯು ಅವಳ ಶರೀರದ ರೋಮ ರೋಮಗಳಲ್ಲಿಯೂ ಪ್ರಾರಂಭಗೊಂಡಿದೆ. ಅವಳು ದುರ್ಬಲಳೂ, ಹೃದಯದ ಕಾಯಿಲೆಯುಳ್ಳವಳೂ ಆಗಿರುವುದರಿಂದ, ಅವಳ ಹೃದಯದ ಮೇಲೆ ಭಾರ ಬೀಳದಂತೆ, ಉದ್ದೇಶವು ಸಫಲವಾಗುವ ರೀತಿಯಲ್ಲಿ ಕೆಲಸ ನಡೆಸಲಾಯಿತು. ಹೊರಡುವ ಸಮಯದಲ್ಲಿ ಅವಳನ್ನು ನಾನು ಮನಸ್ಸಿನಲ್ಲಿ ಇಟ್ಟುಕೊಳ್ಳುವಂತೆ ಅವಳು ಬೇಡಿಕೊಂಡಳು. ಅವಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವಂತೆ  ಅವಳ ಸೋದರಿ ಕಸ್ತೂರಿಗೆ ಬರೆಯಬೇಕೆಂದು ನಾನು ಅವಳಿಗೆ ಹೇಳಿದೆ. ನಾನು (ಈ) ಪತ್ರದಲ್ಲಿ ಇಷ್ಟು ಬರೆದಿದ್ದೆ, ಇಂದು ನಿನ್ನ ಇನ್ನೊಂದು ಪತ್ರ ಬಂದು ತಲುಪಿದೆ.

ಸಾಧ್ಯವಿದ್ದಷ್ಟರಮಟ್ಟಿಗೆ 'ಗುರುಸ್ಮರಣೆಯ ವಿಷಯದಲ್ಲಿ ಉದಾಸೀನ ತೋರಬಾರದು. ಅವನ ಸ್ಮರಣೆಯು ಉತ್ತರೋತ್ತರ ಲಘು (ಸೂಕ್ಷ್ಮ)ವಾಗುತ್ತ ಹೋಗುವಂಥ ಲಘುಸ್ವರೂಪದ ಸ್ಮರಣೆಯ ವಿಧಾನವನ್ನು ಅಂಗೀಕರಿಸಬೇಕು. ಮತ್ತು ಆಗ, ಏನೇ ಘಟಿಸಲಿ, ಅದು ಸದ್ಗುರುವಿನ ಇಚ್ಛೆಯನ್ನು ಅವಲಂಬಿಸಿರುತ್ತದೆ. 'ನನ್ನೊಳಗೆ ಏನು ಸಂಭವಿಸುತ್ತದೆಯೋ ಅದು ದೇವರಿಗೇ ಗೊತ್ತು, ನಿನ್ನೆ ಸಂಜೆ ನನ್ನೊಳಗೆ ಕಣ್ಣುಗಳು ತೆರೆದಿವೆಯೇನೋ ಎಂಬಂತೆ ತೋರುತ್ತದೆ' ಎಂದು ನೀನು ಬರೆದಿದ್ದೀಯೆ. ಇದರ ಅರ್ಥ ನನಗಾಗಲಿಲ್ಲ. 'ಆಂತರಿಕವಾಗಿ ನೋಡಿಕೊಂಡಾಗ ಆಂತರಿಕ ಅಂಗಾಂಗಗಳು ಕಾಣಲು ತೊಡಗಿದವೋ ಅಥವಾ ಯಾವುದೇ ತೆರನಾದ ಪ್ರಕಾಶ ಅಥವಾ ಬೇರೇನನ್ನೋ ಕಾಣತೊಡಗಿದೆಯೋ ? ಬರೆದು ತಿಳಿಸು.

ಈಗ ನಾನು ನಿನ್ನ ಇತ್ತೀಚಿನ ಕಡೆಯ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. ಭಗವಂತನ ಸ್ಮರಣೆಯಲ್ಲಿ, ಯಾರಿಗಾದರೂ ಬೈಠಕ್ ಕೊಟ್ಟರೆ, ಆ ವ್ಯಕ್ತಿಯಲ್ಲಿ ಒಂದು ದೊಡ್ಡ ಜಾಗ್ರತಿ ಮೂಡುತ್ತದೆ, ಮತ್ತು ಅದರಿಂದ ಅವನು ನಿದ್ರಿಸುತ್ತಿರುವಾಗಲೂ ಎಚ್ಚರದ ಸ್ಥಿತಿಯನ್ನು ಅನುಭವಿಸುತ್ತಾನೆ. ಆದರೆ, ನೀನು ನಿನ್ನ 'ನಿದ್ರೆಯ ಅವಸ್ಥೆ'ಯ ಕುರಿತು ಬರೆದಿಲ್ಲ. ನೀನು ನಿದ್ರೆಯಲ್ಲಿ ಎಚ್ಚರದ ಸ್ಥಿತಿಯನ್ನು ಅನುಭವಿಸುತ್ತೀಯೋ ಅಥವಾ 'ಗಾಢ ನಿದ್ರೆ'ಯನ್ನೋ ? ನಾನು ಗಾಢ ನಿದ್ರೆಯನ್ನು ಅನುಭವಿಸುತ್ತೇನೆ, ಆದರೆ ಸಂತನಿಗೆ (ಫಕೀರ) ಗಾಢ ನಿದ್ದೆ ನಿಷಿದ್ಧ.  ನನ್ನನ್ನು ನಿದ್ರೆಹೋಗುವಂತೆ ಮಾಡಲು ಮೇಲಿನಿಂದ ನಿರಂತರ ಧಾರೆ ಇಲ್ಲದಿದ್ದರೆ ಇಪ್ಪತ್ತನಾಲ್ಕು ತಾಸುಗಳುದ್ದಕ್ಕೂ



ನಾನು ನಿದ್ದೆ ಹೋಗುತ್ತಿರಲಿಲ್ಲ. ಗುರುಮಹಾರಾಜರು ನನಗೋಸ್ಕರ ಈ ತೊಂದರೆ ಸಹಿಸಬೇಕಾಗಿದೆ. ಇದು ಅವರಿಗೇ ಹೆಚ್ಚು ಚೆನ್ನಾಗಿ ಗೊತ್ತು.

ನೀನು ಪಂಡಿತ ಮಹಾದೇವಪ್ರಸಾದರ ಮನೆಗೆ ಹೋದಾಗ ನಿನಗೆ 'ಭಾರ'ದ ಅನುಭವವಾಯಿತು. ಅದು ಮೂರ್ತಿಪೂಜೆಯ ಮತ್ತು ಸ್ಥೂಲ ವಿಚಾರಗಳ ಪ್ರಭಾವವಾಗಿತ್ತು. ಸಾಮಾನ್ಯವಾಗಿ ಎಲ್ಲೆಡೆ ಮೂರ್ತಿ ಪೂಜೆ ಮಾಡಲಾಗುತ್ತಿದೆ. ಮತ್ತು ಅದರ ಪರಿಣಾಮವಾಗಿ ಆ ವ್ಯಕ್ತಿ ಅನೇಕ ಜನ್ಮಗಳವರೆಗೆ ಭಗವತ್‌ಸಾಕ್ಷಾತ್ಕಾರಕ್ಕೆ ಅನರ್ಹನಾಗಿ ಉಳಿಯುತ್ತಾನೆ. ನಾನು ಇದನ್ನು ಯಾರಿಗಾದರೂ ಹೇಳಿದರೆ ನನ್ನೊಂದಿಗೆ ಅವನು ಜಗಳಾಡಬಹುದು. ಯಾರಿಗಾದರೂ ಮುಕ್ತಿ ಬೇಕಿದ್ದರೆ, ಈ ವಿಧಾನ (ರಾಜಯೋಗ)ವನ್ನುಳಿದು ಬೇರೆ ಮಾರ್ಗವಿಲ್ಲ; ಅದನ್ನೇ ನಾವು ಅನುಸರಿಸುತ್ತಿದ್ದೇವೆ. ಸ್ವಾಮೀ ವಿವೇಕಾನಂದರೂ ಎಲ್ಲೋ ಒಂದೆಡೆ ಇದನ್ನು ಹೇಳಿದ್ದಾರೆ. ಅತ್ಯುನ್ನತ ಚರಮ ಹಂತದ ವರೆಗೆ ಕರೆದೊಯ್ಯಲು ರಾಜಯೋಗವನ್ನು ಬಿಟ್ಟರೆ ಬೇರೆ ಉಪಾಯವಿಲ್ಲ. ಹಠಯೋಗವು ನಮ್ಮನ್ನು ಆಜ್ಞಾ ಚಕ್ರದ ವರೆಗೆ ಮಾತ್ರ ಒಯ್ದು ತಲುಪಿಸಬಹುದು. ಈ ಚಕ್ರ ಭ್ರೂ–ಮಧ್ಯದಲ್ಲಿದೆ. ಅದರಿಂದಾಚೆಗೆ ನಮ್ಮನ್ನು ಕೊಂಡೊಯ್ಯುವ ಸಾಮರ್ಥ್ಯ ರಾಜಯೋಗದ್ದಿದೆ.

ನಾನು ನಿನ್ನ ಪತ್ರವನ್ನು ಕೆಲವು ಅಂಶ ಇಂಗ್ಲಿಷ್‌ನಲ್ಲಿ ಬರೆದಿದ್ದೇನೆ; ಅದು ಸ್ವಾಮೀಜಿ (ವಿವೇಕಾನಂದ)ಯವರ ಆದೇಶವಾಗಿದೆ. ನಿನಗೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಮಾಸ್ಟರ್ ಸಾಹೇಬರನ್ನು ಕೇಳಿ ತಿಳಿದುಕೊ, ಅಲ್ಲದೆ, ಇದನ್ನು ಬೇರೆ ಯಾರಿಗೂ ಹೇಳುವ ಅಗತ್ಯವಿಲ್ಲ. ಒಬ್ಬರ ಜೀವ ಉಳಿಸಬೇಕೆಂದಿದ್ದರೆ ವಿಧಾನ ಹೀಗಿದೆ : ಅವನ ಸುತ್ತ (ತನ್ನ ಸಂಕಲ್ಪ ಶಕ್ತಿಯನ್ನು ಉಪಯೋಗಿಸಿ) ಒಂದು ಕಾಲ್ಪನಿಕ ವೃತ್ತವನ್ನೆಳೆಯಬೇಕು. ಮತ್ತು ಕೆಲಕಾಲ ಅದನ್ನು ಮನಸ್ಸಿನಲ್ಲಿ ಧಾರಣಮಾಡಿ ಇಟ್ಟುಕೊಳ್ಳಬೇಕು. ಮಾರೀಚನು ಅಡವಿಯಲ್ಲಿ ಜಿಂಕೆಯ ರೂಪದಲ್ಲಿ ಬಂದಾಗ, ಮತ್ತು ರಾಮನು ಅದನ್ನು ಬೇಟೆಯಾಡಲು ಅರಣ್ಯದಲ್ಲಿ ಬೆಂಬತ್ತಿಹೋದಾಗ ಮತ್ತು ಅನಂತರ ಲಕ್ಷ್ಮಣನೂ ಅವನನ್ನು ಅರಸಿಹೋಗಬೇಕಾದ ಪ್ರಸಂಗ ಬಂದಾಗ ಸೀತೆಯ ಸುತ್ತ ಲಕ್ಷ್ಮಣನು ಎಳೆದದ್ದು ಅಂಥದೇ ಆಗಿತ್ತು. ಇಂದು ಸ್ವಾಮಿ ಸುಖದೇವಾನಂದರ ಆಶ್ರಮದಲ್ಲಿ ಒಂದು ಉತ್ಸವವಿದೆ. ಅದು ಮೂರು–ನಾಲ್ಕು ದಿವಸ ನಡೆಯುವುದು. ಸಾರ್ವಜನಿಕರು ಹದಿನೈದು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ಕೊಟ್ಟಿದ್ದಾರೆ. ಮಹಾತ್ಮರುಗಳು ಭಾಷಣ ಮಾಡಲಿದ್ದಾರೆ. ಒಬ್ಬ ಸದ್ಗೃಹಸ್ಥನ ಒತ್ತಾಯದಿಂದ, ನಾನು ಅಲ್ಲಿಗೆ ಒಂದೆರಡು ಗಂಟೆಗಳ ಮಟ್ಟಿಗೆ ಹೋಗುತ್ತೇನೆ. ಮನಸ್ಸು ದಣಿಯದಿರುವಷ್ಟು ಮಾತ್ರ ಕೆಲಸ ಮಾಡು.

ನಿನ್ನ ಹಿತೈಷಿ
ರಾಮಚಂದ್ರ

* * * *

P-4-Books-PM-7-Anantyatre-25



ಕ್ರಮ ಸಂಖ್ಯೆ – ೨೨ **ಪತ್ರ ಸಂಖ್ಯೆ – ೭೭** ಷಾಹಜಹಾನಪುರ
೦೪–೦೧–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಶುಭ ಆಶೀರ್ವಾದಗಳು,

ಡಿಸೆಂಬರ್ ೧೫ರ ನಿನ್ನ ಪತ್ರ ತಲುಪಿತು. ನಾನು ಚಳಿಗಾಲದ ರಜೆಯ ದಿನಗಳಲ್ಲಿ ನನ್ನ ಹಳ್ಳಿಗೆ ಹೋಗಿದ್ದೆ; ಮತ್ತು ಅದಕ್ಕೂ ಮೊದಲು ಉತ್ತರ ಬರೆಯಲು ನನಗೆ ಸಮಯ ದೊರೆಯಲಿಲ್ಲ. ಹಾಗಾಗಿ ಉತ್ತರಿಸಲು ತಡವಾಯಿತು. 'ಕೆಲವೊಮ್ಮೆ ಹೃದಯ ಮಬ್ಬು ಕವಿದಂತಿರುತ್ತದೆ' ಎಂದು ನೀನು ಬರೆದಿದ್ದೀಯೆ. ಯಾವುದೇ ಚಿಂತೆ ಇರಲಿಕ್ಕಿಲ್ಲ ಎಂದು ನಾನು ತಿಳಿಯುತ್ತೇನೆ. ಅಷ್ಟು ಮಾತ್ರವಲ್ಲ, ಭಗವಂತನ ಕೃಪೆಯಿಂದ, ಅದು ಒಂದು (ಆಧ್ಯಾತ್ಮಿಕ) ಸ್ಥಿತಿ. ಆ ಸ್ಥಿತಿಯ ತೀವ್ರತೆ ಕೆಲಮಟ್ಟಿಗೆ ಹೆಚ್ಚಿದಾಗ ನೀನು ವಿಷಣ್ಣಳಾದಂತೆ ನಿನಗನಿಸುತ್ತದೆ. ಈ ಸ್ಥಿತಿಗೆ 'ಉದಾಸಿ' ಎಂದು ಕರೆಯಲಾಗುತ್ತದೆ. ಯಾವುದೇ ಕೆಲಸ ಮಾಡಿ ಮುಗಿಸಿದ ನಂತರ, ಹೇಗೆ ಬಹಿರ್ದೆಶೆಗೆ ಹೋಗಿ ಬಂದನಂತರ, ತಿರುಗಿ ಮತ್ತೆ ನಮಗೆ ಅದರ ವಿಚಾರ ಸುಳಿಯುವುದಿಲ್ಲವೋ ಹಾಗಿರುವಂತೆ ಅಭ್ಯಾಸಿಯ ಸ್ಥಿತಿ ಇರುತ್ತದೆ. ಇದಕ್ಕೆ 'ಉದಾಸಿ ಸ್ಥಿತಿ' ಎಂದು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ 'ಉದಾಸಿ'ಗಳ ಗುಂಪು (ಸಂಘ) ಒಂದಿದೆ; ಆದರೆ ಅದಿರುವುದು ಕೇವಲ ಹೆಸರಿನಲ್ಲಿ ಮಾತ್ರ. ಪ್ರಾಯಶಃ ಅವರಲ್ಲಿ ಒಬ್ಬನೂ ಕೂಡ ಈ 'ಸ್ಥಿತಿ'ಯನ್ನು ಹೊಂದಿದವನಿರಲಿಕ್ಕಿಲ್ಲ. 'ಯಾವುದೋ ಒಂದು ಹೃದಯ ಕೆಲಸ ಮಾಡುತ್ತಿದೆ' ಎಂದು ನೀನು ಬರೆದಿದ್ದೀಯೆ. ಈ ಅನಿಸಿಕೆ ಸರಿಯಿದೆ. ಒಂದು ನೀರು ತುಂಬಿದ ಗ್ಲಾಸನ್ನು ಬೀಸಿ ಎಸೆದಾಗ, ಅದರ ಒಂದು ಮುಖ ಎಸೆಯುವವನ ಕಡೆಗೆ ಇರುತ್ತದೆ; ಇನ್ನೊಂದು ಮುಖ ಮತ್ತೊಂದು ಕಡೆಗಿರುತ್ತದೆ. ಈ ಸಂಗತಿ ಇರುವುದು ಹಾಗೆಯೇ. ಯಾವನ ಮುಖ ಸದ್ಗುರುವಿನತ್ತ ಹೊರಳಿರುತ್ತದೆಯೋ, ಅವನು 'ಅವನ'ನ್ನು ಸ್ಮರಿಸುತ್ತಿರುತ್ತಾನೆ. ಮತ್ತು ಜಗತ್ತಿನತ್ತ ಮುಖ ಮಾಡಿರುವವನು, ಪ್ರಾಪಂಚಿಕ ವಿಷಯಗಳನ್ನು ಸ್ಮರಿಸುತ್ತಿರುತ್ತಾನೆ. ನಾನು ಈ ವಿಷಯವನ್ನು ತೀರ ಸಂಕ್ಷಿಪ್ತವಾಗಿ ಬರೆದಿದ್ದೇನೆ; ಅದರ ಹಿಂದಿರುವ ತತ್ತ್ವವನ್ನು ವಿವರಿಸಿಲ್ಲ. ಹೃದಯದಲ್ಲಿ ಜಾಗ್ರತಿ ಉಂಟಾದಾಗ ಅದರ ಒಲವು ಭಗವಂತನತ್ತ ಹೊರಳಿರುತ್ತದೆ, ಮತ್ತು ಅಗತ್ಯವಿರುವಾಗ ಅದಕ್ಕೆ ತಕ್ಕಂತೆ ಪ್ರಪಂಚದ ಕಡೆಗೆ ಹೊರಳುತ್ತದೆ. ಚಳಿಯ ಅನುಭವ ಕಡಿಮೆಯಾಗುತ್ತಿದೆಯೆಂದರೆ, ತೀವ್ರವಾದ ಮತ್ತು ಗಾಢವಾದ ಒಲವು ಊರ್ಧ್ವದತ್ತ ಇರುವುದೆಂದು ಅರ್ಥ; ಆಗ ಅದರ (ಚಳಿಯ) ಅನುಭವ (ಸಂವೇದನೆ) ಮಂದವಾಗಿರುತ್ತದೆ. ಆದರೆ ನನಗಾದರೋ, ತುಂಬ ಚಳಿಯೆನಿಸುತ್ತದೆ. ಆದ್ದರಿಂದ ಮುಂಜಾನೆ ತಡವಾಗಿ ಏಳುತ್ತೇನೆ, ಮತ್ತು ಕೆಲಸ ಮಾಡಲಾರದಂಥವನಾಗಿರುತ್ತೇನೆ.

ನಾನು ನಿನ್ನ ತಂದೆಯವರ ಆರ್ಥಿಕ ಪರಿಸ್ಥಿತಿಯನ್ನು ಕುರಿತು ವಿಚಾರಮಾಡಿದಾಗ ನನಗೆ ತುಂಬಾ ಕಸಿವಿಸಿಯಾಗುತ್ತದೆ, ಮತ್ತು ನಾನು ಅಸಹಾಯಕನೆಂದೆನಿಸುತ್ತದೆ. ನನಗೆ ತುಂಬಾ ಕಾಳಜಿ ಮತ್ತು ಚಿಂತೆಯಾಗುತ್ತದೆ.



ನಾನು ಭಗವಂತನಲ್ಲಿ ಪ್ರಾರ್ಥಿಸಿದೆ. ಆದರೆ ಅವನು ಅದನ್ನೇಕೆ ಆಲಿಸುವುದಿಲ್ಲವೆಂಬುದು ಅವನಿಗೇ ಗೊತ್ತು. ಅದು (ಕೇವಲ) ನಮಗೆ ಸಂಬಂಧಿಸಿದುದೇ ಅದಕ್ಕೆ ಕಾರಣವಿರಬಹುದು. ಅಥವಾ ಬೇರೆ ಏನಾದರೂ ಕಾರಣವಿರಬಹುದು. ಭಗವಂತನಿಗೆ ಸಂಬಂಧಿಸಿದುದು ಏನೇ ಇದ್ದರೂ, ಅಲ್ಪಮಟ್ಟಿಗಿನ ವಿಚಾರ ಬಂದರೂ ಅವನು ಅದಕ್ಕೆ ಓಗೊಡುತ್ತಾನೆ. ಅದಕ್ಕೋಸ್ಕರ ಪ್ರಾರ್ಥನೆ ಮಾಡುವ ಅಗತ್ಯವೇ ಬರುವುದಿಲ್ಲ. ಈ ತೊಂದರೆಯಿಂದ ಪಾರಾಗಲು ನೀನೇ ಸದ್ಗುರುವನ್ನು ಪ್ರಾರ್ಥಿಸಬೇಕು. ನಿನ್ನ ಪ್ರಾರ್ಥನೆಯಿಂದ ಅವನು ಏನಾದರೂ ಮಾಡುವುದು ಸಾಧ್ಯವಿದೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ; ನನಗೆ ಅದರಿಂದ ನಾಚಿಕೆಯೆನಿಸುತ್ತದೆ. ಅಂಥ ಸಾಮಾನ್ಯ (ಚಿಕ್ಕ) ಕೆಲಸವನ್ನು ಮಾಡುವುದು ನನಗೆ ಸಾಧ್ಯವಿಲ್ಲ. ನಿನ್ನ ತಾಯಿಯವರಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೩ **ಪತ್ರ ಸಂಖ್ಯೆ – ೮೦** ಷಾಹಜಹಾನಪುರ
೧೨–೦೧–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಶುಭ ಆಶೀರ್ವಾದಗಳು,

ನಿನ್ನ ೨೯–೧೨–೧೯೪೯ರ ಪತ್ರ ತಲುಪಿತು. 'ನನ್ನ *ಶರೀರದ ಬಗೆಗಿನ ಸಂವೇದನೆಯ ಸಾಮರ್ಥ್ಯ ಬಹುತೇಕ ಅಳಿದು ಹೋಗಿದೆ*' ಎಂದು ನೀನು ಬರೆದಿದ್ದೀಯೆ, ಅದು ಒಂದು ಒಳ್ಳೆಯ ಸ್ಥಿತಿ, ಆ ಸ್ಥಿತಿಗೆ 'ಲಯ' ಎಂದು ಕರೆಯಲಾಗಿದೆ. ಪರ್ಷಿಯನ್ ಭಾಷೆಯಲ್ಲಿ ಅದನ್ನು 'ಫನಾ' ಎಂದು ಕರೆಯುತ್ತಾರೆ. ಅದು ಇನ್ನೂ ಮುಂದುವರಿಯುತ್ತಲೇ ಇದೆ. ಇದಾದ ನಂತರ, ಭಗವಂತನ ಇಚ್ಛೆ ಹಾಗಿದ್ದರೆ, ಇನ್ನೂ ಉತ್ತಮ ಸ್ಥಿತಿ ಬರುತ್ತದೆ. ಅದನ್ನು ನಾನು ನಿನಗೆ ಮುಂಚಿತವಾಗಿಯೇ ಹೇಳಬಯಸುವುದಿಲ್ಲ. ಅಂಥ ಸಮಯದಲ್ಲಿ ಬೇರೆಯವರು ಒಮ್ಮಿಂದೊಮ್ಮೆಲೆ ಎಚ್ಚರಗೊಳಿಸಬಾರದು. ಹಾಗೆ ಹಠಾತ್ತಾಗಿ ಎಚ್ಚರಗೊಳಿಸುವುದರಿಂದ, ಅವನು ಯಾವ ವಿಚಾರಗಳಲ್ಲಿ ಮುಳುಗಿಹೋಗಿದ್ದನೋ ಅವು ಒಮ್ಮೆಲೆ ದೂರ ಸರಿದಂತಾಗಿ, ಆಘಾತವನ್ನು ಅನುಭವಿಸುತ್ತಾನೆ. ಯಾವ ಅಭ್ಯಾಸಿಯನ್ನೂ ಒಮ್ಮಿಂದೊಮ್ಮೆಲೆ ಎಚ್ಚರಿಸಕೂಡದು. ನನ್ನ ವಿಷಯದಲ್ಲಿ ಹೇಳಬೇಕೆಂದರೆ, ನಾನು ಎಚ್ಚರವಿದ್ದಾಗ ಕೂಡ ಯಾರಾದರೂ ನನ್ನ ಹಾಸಿಗೆಯನ್ನು ಅಲುಗಾಡಿಸಿದರೆ, ನಾನು ಏನೋ ತೊಂದರೆ ಅನುಭವಿಸಲಾರಂಭಿಸುತ್ತೇನೆ.

೦೮–೦೧–೧೯೫೦ರ ನಿನ್ನ ಪತ್ರ ಕೈಸೇರಿತು. ಅದರಲ್ಲಿ "*ಒಂದು ದಿನ ನಾನು (ಆಧ್ಯಾತ್ಮಿಕ) 'ಕೆಲಸ' ಮಾಡುತ್ತಿರುವಾಗ ಭಾರತದಲ್ಲಿ 'ಓಂ' ಶಬ್ದದಂಥ ಏನೋ ಒಂದು ಗೋಚರಿಸಿತು*" ಎಂದು ಬರೆದಿದೆ. ಈ ಅನುಭವ ತೀರಾ

P-4-Books-PM-7-Anantyatre-26



ಸರಿಯಾಗಿದೆ. ಇದೆಂಥ ಸ್ವರ್ಣಕಾಲ ಎಂದರೆ, ಭವಿಷ್ಯತ್ತಿನಲ್ಲಿ ಸಾವಿರಾರು ವರ್ಷಗಳ ನಂತರವೂ ಇಂಥ ಸದವಕಾಶ ದೊರೆಯುವುದು ಅಸಾಧ್ಯ. ಈಗ ಒಬ್ಬ 'ದೈವೀಪುರುಷನ' ಸಹಾಯದಿಂದ ದೈವೀಶಕ್ತಿಯು ತನ್ನ ಶುದ್ಧರೂಪದಲ್ಲಿ ಅವತರಿಸಿದೆ. **ಅದರ ರುಜುವಾತು ಏನೆಂದರೆ, ಒಬ್ಬ (ಯಾವುದೇ) ವ್ಯಕ್ತಿ, ಯಾವುದೇ ಸ್ಥಳದಲ್ಲಿ ಧ್ಯಾನದಲ್ಲಿ ಕುಳಿತು, ಯಾವ ಮಹಾಪುರುಷನಲ್ಲಿ ದೈವೀಶಕ್ತಿಯು ನೈಜ ರೂಪದಲ್ಲಿ ಅವತರಣಗೊಂಡಿದೆಯೋ ಅವನಿಂದ ಆಧ್ಯಾತ್ಮಿಕ ಲಾಭ ಪಡೆಯುತ್ತಿರುವೆನೆಂದು ಭಾವಿಸಿದರೆ ಅವನು ತತ್‌ಕ್ಷಣವೇ ಲಾಭ ಹೊಂದುತ್ತಾನೆ.** 'ಓಂ'ದ ಶಕ್ತಿಯ ವಿಷಯದಲ್ಲಿ ಹೇಳುವುದಾದರೆ, ಅದರೊಂದಿಗೆ ಯಾವ ಮಹಾತ್ಮನೂ ಈ ಹಿಂದೆ ಪ್ರಾಯಶಃ ಬಂದಿರಲಿಕ್ಕಿಲ್ಲ. ನನ್ನ ಗುರುಮಹಾರಾಜರು ಇದಕ್ಕೆ ಒಂದು ಅಪವಾದ ವಾಗಿದ್ದರೆಂಬುದೇನೋ ಸರಿಯೆ; ಯಾಕೆಂದರೆ ಅವರಿಗೆ ಅಂಥ ಶಕ್ತಿಯನ್ನು ಉಂಟುಮಾಡುವ ಸಾಮರ್ಥ್ಯವಿದೆ. ಅಂಥ ಗುರುವಿನ ಸಾಮರ್ಥ್ಯವನ್ನು ಕುರಿತು ಹೇಳುವುದೇನಿದೆ ? ಈ ದೈವೀಶಕ್ತಿ ಅವತರಣಗೊಂಡಾಗ ವಿನಾಶ ಕಾರ್ಯವೂ ಉಂಟು ಮತ್ತು ಯಾರು ಅದರೊಂದಿಗೆ ಸಂಲಗ್ನರಾಗಿರುವರೋ (ಆಸಕ್ತರಾಗಿರುವರೋ) ಅವರು ಖಂಡಿತವಾಗಿಯೂ ಅಪರಿಮಿತ ಲಾಭ ಹೊಂದುತ್ತಾರೆ. ಮಹಾಭಾರತ ಕಾಲದಲ್ಲಿ ಈ ಶಕ್ತಿಯು ಪೂರ್ಣ ರೂಪದಲ್ಲಿ ಮತ್ತು ರಭಸದಿಂದ ಪ್ರಕಟವಾಗಿರಲಿಲ್ಲ. ಆ ಶಕ್ತಿಗೆ ವಿನಾಶಾತ್ಮಕ ಹಾಗೂ ರಚನಾತ್ಮಕ ಕಾರ್ಯದಲ್ಲಿ ಪೂರ್ಣ ಅಧಿಕಾರವಿರುವ ಸ್ವರೂಪದಲ್ಲಿ ಅದು ಪ್ರಕಟವಾಗಿತ್ತೆಂಬುದೇನೋ ನಿಃಸಂಶಯ. ಮತ್ತು ಆ ಸಮಯದಲ್ಲಿ ಆ ಶಕ್ತಿಯ ಪುಟ್ಟ ಧಾರೆಯೊಂದು ಹರಿದು ಬರುತ್ತಿತ್ತು ಹಾಗೂ ಆ ಕಾರಣದಿಂದಾಗಿ ಯುದ್ಧವು ಪೂರ್ಣ ರಭಸದಿಂದ ನಡೆಯುತ್ತಿರಲಿಲ್ಲ. ಆ ಸಮಯದಲ್ಲಿ ಅಷ್ಟೇ ಶಕ್ತಿಯು ಅಗತ್ಯವಿತ್ತು, ಆದರೆ ಈಗ ಅದಕ್ಕಿಂತ ಹೆಚ್ಚಿನ ಶಕ್ತಿಯ ಆವಶ್ಯಕತೆ ಇದೆ. ಅದು ಜಗತ್ತಿನ ಸಂಹಾರದ ಪ್ರಶ್ನೆ. ಅದಕ್ಕೆ ದೀರ್ಘ ಸಮಯ ಬೇಕಾಗಬಹುದು. ಆದರೆ ಏಕಕಾಲದಲ್ಲಿಯೇ ರಚನಾತ್ಮಕ ಕಾರ್ಯವನ್ನೂ ನೆರವೇರಿಸಬೇಕಿದೆ. ಮಹಾಪ್ರಳಯದ ಸಮಯದಲ್ಲಿ ಒಂದು ಶಕ್ತಿಯು ಇಡೀ ವಿಶ್ವವನ್ನು ಲಯಗೊಳಿಸಲು ಕೆಲಸಮಾಡುವುದು. ಆ ಸಮಯದಲ್ಲಿ ರಚನಾತ್ಮಕ ಕಾರ್ಯವು ಕೊನೆಗೊಳ್ಳುತ್ತದೆ. ತುಲಸೀದಾಸ (ಭಗಿನಿ ಕಸ್ತೂರಿಯವರ ಸೋದರ), 'ಒಂದಿಲ್ಲೊಂದು ದಿನ ಪ್ರತಿಯೊಬ್ಬನೂ ಸಾಯಲೇಬೇಕು, ಆದ್ದರಿಂದ ಓದುವುದು (ಅಧ್ಯಯನ) ವ್ಯರ್ಥ' ಎಂದು ಬರೆದಿದ್ದಾನೆ. 'ಜೀವಿಸಿರುವಷ್ಟು ಕಾಲ ಪ್ರತಿಯೊಬ್ಬನೂ ಅಧ್ಯಯನ ಮಾಡಬೇಕು' ಎಂದು ಅವನಿಗೆ ಹೇಳಬೇಕು. ನೀನೇ ಸ್ವತಃ ಈ ವಿಚಾರವನ್ನು (ಅಳಿಸಿಹಾಕಿ) ಶುದ್ಧಗೊಳಿಸಬಹುದು. ನೀನು ಬೇರೆಯವರ ಮೇಲೆ ಕೇಂದ್ರಿತಗೊಳಿಸುವ ವಿಚಾರಕ್ಕೆ ಅನುಗುಣವಾಗಿ ಅವರು ಪ್ರಭಾವಿತರಾಗುತ್ತಾರೆ.

ನಾನು ಇನ್ನೊಂದು ಸಂಗತಿ ಹೇಳಬಹುದು. ಭಗವಾನ್ ಕೃಷ್ಣ 'ಮಹಾಮಾಯಾ' ಮಂಡಲದಿಂದ (ದೈವೀ ವಲಯದಿಂದ) ಅವತರಿಸಿದ್ದಾನೆ;



ಮತ್ತು ಹಾಗೆಂದು ನಮ್ಮ ಗುರುಮಹಾರಾಜರು ಒಂದೆಡೆ ಹೇಳಿದ್ದಾರೆ. ಮಾಯಾ ಶಕ್ತಿಯು ಅತೀವ ಪ್ರಬಲವಾಗಿ ಒಂದು ವೃತ್ತಾಕಾರದಲ್ಲಿ ಇರುವುದು ಈ ಮಂಡಲದಲ್ಲಿಯೇ. 'ಮಹಾಮಾಯಾ' ಎಂಥ ಮಹಾಶಕ್ತಿಯೆಂದರೆ, ಅದು ಇಚ್ಛಾನುಸಾರ ಏನನ್ನು ಬೇಕಾದರೂ ಮಾಡಲು ಸಮರ್ಥವಾಗಿದೆ; ಅಂತೆಯೇ, ಭಗವಾನ್ ಕೃಷ್ಣ ಅಂಥ ಅಪಾರ ಸಾಮರ್ಥ್ಯ ಹೊಂದಿದ್ದಾನೆ. ಈ ಶಕ್ತಿಗೆ (ಸಾಮರ್ಥ್ಯಕ್ಕೆ) ಸರಿಸಮರಾಗಬಲ್ಲವರು ಯಾರೂ ಇಲ್ಲ, ಯಾಕೆಂದರೆ, ಭಗವಾನ್ ಕೃಷ್ಣನು ಪರಿಪೂರ್ಣ ಪ್ರಬುದ್ಧ (ಪಕ್ವ) ಸ್ಥಿತಿಯಲ್ಲಿ ಸ್ವತಃ ತನ್ನನ್ನು ತಾನೇ ಅವತರಣ ಗೊಳಿಸಿಕೊಂಡಿದ್ದಾನೆ. ಇದಕ್ಕಿಂತ ಉನ್ನತವಾದ ಆಧ್ಯಾತ್ಮಿಕ ವಲಯವೊಂದು ಇದೆ (ಭೂಮಾ), ಮತ್ತು ಭಕ್ತರು ಅದನ್ನು ತಲುಪಬಲ್ಲರು. ಆದರೆ, ಸಾವಿರಾರು ವರ್ಷಗಳ ಅಭ್ಯಾಸದ ನಂತರವಷ್ಟೇ ಆ ಆಧ್ಯಾತ್ಮಿಕ ವಲಯದ ಸ್ಥಿತಿ, ಅಪರೂಪಕ್ಕೆ ಒಬ್ಬನಿಗೆ ಲಭ್ಯವಾಗುತ್ತದೆ. ಭಗವಾನ್ ಕೃಷ್ಣನಿಗೆ ಮಹಾಮಾಯಾ ಮಂಡಲದ ಮೇಲೆ ಪೂರ್ಣ ಪ್ರಭುತ್ವವಿತ್ತು. ಮತ್ತು ನಾನು ಹೇಳಿದ ಆಧ್ಯಾತ್ಮಿಕ ಸ್ಥಿತಿಯಲ್ಲಿ ಅವನ ಪಾದವಿತ್ತು. ಈಗ ಪರಿಸ್ಥಿತಿಯು ಅದಕ್ಕೆ ಪೂರ್ಣವಾಗಿ ವಿರುದ್ಧವಿದೆ. ಈಗ ಭಗವಂತನು ಒಬ್ಬ ವಿಭೂತಿಪುರುಷನಿಂದ ಕೆಲಸ ತೆಗೆದುಕೊಳ್ಳುತ್ತಿದ್ದಾನೆ. ಭಗವಂತನು ಅವನಿಗೆ 'ಭೂಮಾ' (ಚರಮ ಸ್ಥಿತಿ)ದ ಮೇಲೆ ಸಂಪೂರ್ಣ ಪ್ರಭುತ್ವವನ್ನು ಅನುಗ್ರಹಿಸಿದ್ದಾರೆ, ಕಾಲದ ಕರೆಗೆ (ಆವಶ್ಯಕತೆಗೆ) ಅನುಸಾರವಾಗಿ ಭಗವಾನ್ ಕೃಷ್ಣನು ಮಹಾಮಾಯಾ ಮಂಡಲದಮೇಲೆ ಪ್ರಭುತ್ವ ಹೊಂದಿದ್ದನು ಮತ್ತು ಈಗ ಪ್ರಸ್ತುತ ಇರುವ ವಿಭೂತಿಪುರುಷನು 'ಭೂಮಾ'ದ ಶಕ್ತಿಯ ಮೆಲೆ (ಅತ್ಯಂತಿಕ ಸ್ಥಿತಿಯ ಮೇಲೆ 'Ultimate') ಪ್ರಭುತ್ವವುಳ್ಳವನಾಗಿದ್ದಾನೆ.

ಮಹಾತ್ಮಾ ಗಾಂಧೀಜಿಯವರ ಮರಣದ ನಂತರ ಯಾರೋ ಒಬ್ಬರು ಶ್ರೀ ಅರವಿಂದ ಘೋಷರನ್ನು "ಭಾರತದಲ್ಲಿ ಎಲ್ಲಿಯಾದರೂ 'ಪ್ರಕಾಶ' ಉಳಿದಿರುವುದೋ ಇಲ್ಲವೊ ?" ಎಂದು ಕೇಳಿದರು. ಆಗ ಅವರು 'ಇನ್ನೂ ಉತ್ತರ ಭಾರತದಲ್ಲಿ ಪ್ರಕಾಶ ಇದೆ' ಎಂದು ಉತ್ತರಿಸಿದರು. ಯಾವನೋ ಒಬ್ಬ (ವಿಭೂತಿ) ಪುರುಷನು ಖಂಡಿತ ಕೆಲಸಮಾಡುತ್ತಿದ್ದಾನೆ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ಅರವಿಂದ ಘೋಷರು ಒಬ್ಬ ಒಳ್ಳೆಯ 'ಮಹಾತ್ಮ' ಎಂದು ಹೇಳುತ್ತಾರೆ ಮತ್ತು ಇಡೀ ಜಗತ್ತು ಅವರನ್ನು ಹಾಗೆ ಮಾನ್ಯಮಾಡುತ್ತದೆ. ಅವರು ಬ್ರಹ್ಮಾಂಡಮಂಡಲದವರೆಗೆ ತಲುಪಿದ್ದರು. ಈ ಸಮಯದವರೆಗೂ ಅವರಿಗೆ ಇದಕ್ಕಿಂತ ಮುಂದೆ ಅಡಿಯಿಡಲಾಗಲಿಲ್ಲ, ಆದರೆ, ಅವರು ಬಹಳೇ ಪರಿಶ್ರಮಪಟ್ಟಿದ್ದರಿಂದ, ಅವರು ಹೆಚ್ಚಿನ ಶಕ್ತಿ (Power) ಹೊಂದಿದ್ದಾರೆ. ನಮ್ಮ ಸಂಸ್ಥೆಯಲ್ಲಿ ಜನರು ಒಂದು ವೇಳೆ ಪರಿಶ್ರಮ ಪಡುವುದಾದರೆ, ಅಂದರೆ, ಅವರು ತಾವೇ ಸ್ವತಃ ಉಚ್ಚತರ ಸ್ಥಿತಿಗಳಿಗೆ ಹೋಗುವುದಾದರೆ ಹಾಗೂ ನನ್ನಿಂದ ಕಡಿಮೆ ಶ್ರಮ ತೆಗೆದುಕೊಳ್ಳುವಂತಾದರೆ, ಅಲ್ಪಕಾಲದಲ್ಲಿಯೇ ನಮ್ಮ ಸಂಸ್ಥೆಯಲ್ಲಿ ಅನೇಕ

P-4-Books-PM-7-Anantyatre-27



ಅರವಿಂದ ಘೋಷರು ಕಾಣಲು ಸಿಗಬಹುದು. ನಿರಂತರ ಅಭ್ಯಾಸದಿಂದ ಶಕ್ತಿ (Power)ಯು ನಿಯಂತ್ರಣದಲ್ಲಿರುತ್ತದೆ. ಈ ಬಿಂದು ಬಹಳ ಉನ್ನತವಾದುದು. ಈ ಬಿಂದುವಿನಿಂದಲೇ ಭಗವಾನ್ ಕೃಷ್ಣ ತನ್ನ 'ವಿರಾಡ್ರೂಪ'ವನ್ನು ಅರ್ಜುನನಿಗೆ ತೋರಿಸಿದನು; ಆದರೆ ನಮ್ಮ ಸಂಸ್ಥೆಯಲ್ಲಿ ಈ ಸ್ಥಿತಿಗಳಿಗೆ ಮಹತ್ವ ಕೊಡಲಾಗುವುದಿಲ್ಲ; ಮತ್ತು ಅದು ತೀರಾ ಅಗ್ಗದ ವಸ್ತುವಾಗಿದೆ. ಈ ಮಹಾ ವರಗಳ (ಅನುಗ್ರಹಗಳ) ವಿಷಯದಲ್ಲಿ 'ಅಗೌರವ' ತೋರಿಸಿದ ಸಂಪೂರ್ಣ ಹೊಣೆ ನನ್ನ ಮೇಲಿದೆ; ಯಾಕೆಂದರೆ, ಮೊದಲನೆಯದಾಗಿ ಅವಸರದಿಂದ ಕೆಲಸ ಮಾಡುವುದು, ಎರಡನೆಯದಾಗಿ ಅಭ್ಯಾಸಿಗಳು ವೇಗವಾಗಿ ಪ್ರಗತಿಹೊಂದಬೇಕೆಂಬ ಗುರಿಯನ್ನಿಟ್ಟುಕೊಂಡಿರುವುದು, ಮತ್ತು ಮೂರನೆಯದಾಗಿ ಅವರು (ಅಭ್ಯಾಸಿಗಳು) ಕಠಿಣ ಪರಿಶ್ರಮ ಮತ್ತು ತ್ಯಾಗ ಮಾಡದಿರುವುದು. ಸಾಧ್ಯವಿದ್ದಮಟ್ಟಿಗೆ ನನ್ನ ಜೀವಿತಾವಧಿಯಲ್ಲಿಯೇ ಅವರನ್ನು ಆಧ್ಯಾತ್ಮಿಕವಾಗಿ ಪ್ರಗತಿಹೊಂದಿದವರನ್ನಾಗಿ ಮಾಡಬಹುದೆಂದು ನಾನು ಬಯಸುತ್ತೇನೆ. ಕನಿಷ್ಠಪಕ್ಷದಲ್ಲಿ ಕೆಲವರಾದರೂ ಮತ್ತೆ ಈ ಜಗತ್ತಿನಲ್ಲಿ ಜನ್ಮ ತಳೆಯದಿರುವಂತೆ ಮತ್ತು ಒಂದು ವೇಳೆ ಅದು ಸಾಧ್ಯವಾಗದಿದ್ದರೆ ಅವರು ಮುಂದಿನ ಜನ್ಮದಲ್ಲಿಯಾದರೂ ಮುಂದುವರಿಯಲು ಸಮರ್ಥರಾಗಲು ಬೇಕಾಗುವಷ್ಟನ್ನಾದರೂ ಮಾಡಲು ಬಯಸುತ್ತೇನೆ. ಒಂದು ವಿಷಯ ನನಗೆ ಅತೀವ ಪ್ರಿಯವಾದುದಿದೆ. ಅದೇನೆಂದರೆ, ಯಾರಾದರೂ ಭಗವಂತನಲ್ಲಿ ನೈಜ ಶ್ರದ್ಧೆಯನ್ನು ಬೆಳೆಸಿಕೊಂಡರೆ ಕೂಡಲೇ ನನ್ನ ಹೃದಯ ಅವರ ಆಧ್ಯಾತ್ಮಿಕ ಪ್ರಗತಿಯತ್ತ ಒಲಿಯುತ್ತದೆ. ನಾನು ಯಾವುದಕ್ಕೋಸ್ಕರ ಪ್ರತೀಕ್ಷೆಮಾಡುತ್ತಿರುವೆನೆಂಬುದು ನನಗೆ ಗೊತ್ತಿಲ್ಲ. ಇನ್ನೂ ಅದು ನನ್ನ ಅರಿವಿಗೆ ಬಂದಿಲ್ಲ. ಅಂಥದೊಂದು ನನ್ನಲ್ಲಿ ಬೆಳೆದರೆ, ಅದನ್ನು ನಿಲ್ಲಿಸಲು ಆದೇಶವಾದ ಹೊರತು ನಾನು ನಿಲ್ಲಿಸುವುದಿಲ್ಲ. ನಿನಗೆ ಗೊತ್ತಿದ್ದರೆ ತಿಳಿಸು; ಅದರಿಂದ ನನಗೂ ತಿಳಿದುಬರಬಹುದು. ನನಗೆ ಇನ್ನೊಂದು ಗೀಳು ಉಂಟು, ಅದೆಂದರೆ, ಶ್ರೀ ಲಾಲಾಜಿ ಮಹಾರಾಜರ ಕೃಪೆಯಿಂದ ನಾನು ಪಡೆದ ನನ್ನದೇ ಆದ ಸ್ಥಿತಿಯಿಂದ ಬೈಠಕ್ ಕೊಡಬಹುದಾದ ವ್ಯಕ್ತಿಯನ್ನು ನಾನು ಕಾಣಬೇಕೆಂಬುದು. ಯಾರಾದರೂ ಆ ಹಂತಕ್ಕೆ ಮೇಲೇರಬಹುದೆಂದು ನಾನು ಇನ್ನೂ ತೀವ್ರವಾಗಿ ಬಯಸುತ್ತಿದ್ದೇನೆ; ನಾನು ಆ ಸದವಕಾಶವನ್ನು ಕಳೆದುಕೊಳ್ಳಲಾರೆ. ಆದರೆ ಈಗ, ಆ ಅಭಿಲಾಷೆ ಹೊರಟು ಹೋಗಿದೆ. ಯಾಕೆಂದರೆ, ಪ್ರಕಾಶನ ತಾಯಿ ಸ್ವರ್ಗಸ್ಥರಾಗಲು ಸಿದ್ಧವಾಗತೊಡಗಿದಾಗ ನನಗೆ ಒಂದು ಅವಕಾಶ ದೊರಕಿತು; ಅದೂ ಕೂಡ ಐದಾರು ಸೆಕೆಂದುಗಳವರೆಗೆ ಮಾತ್ರ, ನಾನು ಈಶ್ವರೀಯ ವಲಯದಿಂದ ಬೈಠಕ್ ನೀಡಿದ್ದೆ. ಅದಕ್ಕಿಂತ ಮೇಲಿನ ಸ್ತರದಿಂದ ಬೈಠಕ್ ಕೊಡಬಹುದೆಂಬುದು ನನಗೆ ಹೊಳೆಯಲಿಲ್ಲ. ಅವಳ ಮರಣಾನಂತರ ನನ್ನ ಮನಸ್ಸಿಗೆ ಅದು ಒಮ್ಮೆ ಬಂದಿತು; ಆದರೆ ಅದಕ್ಕೆ ನನಗೆ ಅಪ್ಪಣೆ ಸಿಗಲಿಲ್ಲ. ಇದು ನಿನ್ನ ಪತ್ರದ ಉತ್ತರಕ್ಕೆ ಸಂಬಂಧಿಸಿದುದಲ್ಲವಾದರೂ, ನಾನು ಇದನ್ನೆಲ್ಲ ಬರೆಯಬೇಕೆಂಬ ಒಲವು ಯಾಕೆ ಮೂಡಿತೆಂಬುದನ್ನು ಭಗವಂತನೇ ಬಲ್ಲ.



**ಸ್ವಾಮೀ ವಿವೇಕಾನಂದಜಿಯವರ ಆದೇಶ – ೧೪–೦೧–೧೯೫೦ :**

"ಭಗವಾನ್ ಕೃಷ್ಣನಿಗೆ 'ವಿನಾಶ ಮಾಡುವ' ಸಾಮರ್ಥ್ಯ ಇತ್ತು ಎಂದು ನೀನು ಬರೆದಿರುವುದು ಸಂಪೂರ್ಣ ಸರಿ. ಆದರೆ ಅವನಿಗೆ ರಚನಾತ್ಮಕ ಸಾಮರ್ಥ್ಯವು ದತ್ತವಾಗಿರಲಿಲ್ಲ. ಮಹಾಭಾರತದ ಸಮಯದಲ್ಲಿ ವಾತಾವರಣ ವಿಷಪೂರಿತವಾಗಿತ್ತು. ಇದರ ಮೇಲಿನ ಜವಾಬುದಾರಿಕೆಯು ಕೌರವ, ಮತ್ತಿತರರದಾಗಿತ್ತು. ಅವರೇ ಮುಖ್ಯ ಕಾರಣರಾಗಿದ್ದರು. ಆದ್ದರಿಂದ ಅವರ ನಾಶಗೈಯಲಾಯಿತು. ಅದಲ್ಲದೆ, ಅವರು ಪಡೆದ ಶಕ್ತಿಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿತ್ತು; ಅದನ್ನು ಮುಗಿಸಬೇಕಿತ್ತು. ಭಗವಾನ್ ಕೃಷ್ಣ ಅದೆಲ್ಲವನ್ನೂ ಮಾಡಿದನು ಮತ್ತು ಆ ಶಕ್ತಿ (ಸಾಮರ್ಥ್ಯ)ಯನ್ನು ಕೊನೆಗೊಳಿಸಿದನು. ಶ್ರೀಕೃಷ್ಣನ ಶಕ್ತಿಯ ತೀವ್ರತೆ ಭಾರತಕ್ಕೆ ಸ್ಥಾನಿಕವಾಗಿ ಸ್ಥಿತವಾಗಿತ್ತು; ವಿದೇಶಗಳಿಗೆ ಹೋಗುವ (ವಿಸ್ತರಿಸುವ) ಅಥವಾ ಊರ್ಧ್ವಮುಖವಾಗಿ ಈಜುವ ಪ್ರಶ್ನೆ ಇರಲಿಲ್ಲ. ಆದರೆ ಈಗಿನ ಪ್ರಶ್ನೆ (ಪರಿಸ್ಥಿತಿ) ಬೇರೆಯೇ ಇದೆ.

ಅಸ್ಥಿಗಳ ರಾಶಿಯ ಮೇಲೆ ಆಮೂಲಾಗ್ರ ಪರಿಷ್ಕರಣೆ (ಮಾರ್ಪಾಟು) ಮಾಡಬೇಕಿದೆ. ನೀನು ಈಗ ಕಾಣುವಷ್ಟು ಜನರು ಜಗತ್ತಿನಲ್ಲಿರುವುದಿಲ್ಲ. ಆಗಿನ ಶಕ್ತಿಯ ತೀವ್ರತೆ ಭಾರತಕ್ಕಷ್ಟೇ ಮೀಸಲಾಗಿತ್ತು; ಆ ಕಾಲದಲ್ಲಿ ಬೇಕಿದ್ದ ಶಕ್ತಿ (Power) ಅದೇ ಇತ್ತು. ಇನ್ನೇನು ವಿವರಣೆ ಬೇಕು ? ನನ್ನ ಮಟ್ಟಿಗೆ ಹೇಳುವುದಾದರೆ ಆಧ್ಯಾತ್ಮಿಕ 'ಭೂಮಾ' ಬಿಂದುವಿಲ್ಲಿ ಸಂಪೂರ್ಣವಾಗಿ ಜಿಗಿಯುವುದು ಶ್ರೀ ಕೃಷ್ಣನಿಗೆ ಆ ಕಾಲದಲ್ಲಿ ದತ್ತವಾಗಿದ್ದ ಸಾಮರ್ಥ್ಯಕ್ಕಿಂತ ಮೇಲಿನದು. ಅದು ತುಂಬಾ ಮೇಲಿನದು. ಇದರ ಅರ್ಥ, ಭಗವಾನ್ ಶ್ರೀಕೃಷ್ಣ ದೇಹ ಮತ್ತು ಮನಸ್ಸುಗಳಲ್ಲಿ ಹೊಂದಿದ್ದ ಸಾಮರ್ಥ್ಯಗಳು ನಿನಗೆ ದೊರೆತಿವೆ ಎಂದಲ್ಲ. ಅವನಲ್ಲಿ ದೇಹ ಬಲವೂ ಇತ್ತು, ಆಯುಧ ಬಲವೂ ಇತ್ತು."

**ಭಗವಾನ್ ಕೃಷ್ಣನು ಆದೇಶ ಕೊಡುತ್ತಿದ್ದಾನೆ :**

"ಅಂದಿನ ಕಾಲಗತಿಯು ಆ ಶಕ್ತಿಯನ್ನು ಪ್ರಕಾಶಿತಗೊಳಿಸಿತು. ಈಗ ಯಾವ ಶಕ್ತಿಯ ಅಗತ್ಯತೆ ಇರುವುದೋ ಅದನ್ನು ದಬ್ಬಿ (ಅಡಗಿಸಿ) ಇಟ್ಟಿತ್ತು. ನಾನು ಈ ಶಕ್ತಿಯ ಕೆಳಗೆ (ಅಧೀನ) ಇದ್ದೇನೆ, ಅದರ ಪರಿಣಾಮವಾಗಿಯೇ ನನ್ನ ಅವತಾರವಾಗಿತ್ತು."

**ಸ್ವಾಮೀ ವಿವೇಕಾನಂದಜಿ :** 'ಭಗವಾನ್ ಕೃಷ್ಣನನ್ನು ನೀನು ಕರೆಯುವಂತೆ ಇನ್ನಾರಾದರೂ ಕರೆಯಲು ಸಾಧ್ಯವೆ ? ಅಂಥ ಸಾಮರ್ಥ್ಯವನ್ನು ಹೊಂದಿರುವವರು ಯಾರಾದರೂ ಇದ್ದಾರೆಯೆ ? ಭಗವಾನ್ ಕೃಷ್ಣನನ್ನು ಒಳಗೊಂಡು ಮಹತ್ತರ ವಿಭೂತಿಗಳನ್ನು ಯಾರು ತಾನೆ ಕರೆಯಬಲ್ಲರು ? ಭಗವಾನ್ ಕೃಷ್ಣನು ಈ ಮೇಲೆ ಕೊಟ್ಟ ಪುಟ್ಟ ಉತ್ತರದಲ್ಲಿಯೇ ಅದರ ಉತ್ತರ ಗರ್ಭಿತವಾಗಿದೆ. ಕಸ್ತೂರಿಗೋಸ್ಕರ ನಿನಗೆ ಇನ್ನೇನಾದರೂ ಬೇಕೇನು ? ಈಗ ವಾತಾವರಣವು

ಮಹಾಭಾರತಕಾಲದಲ್ಲಿದ್ದಷ್ಟು ವಿಷಮಯವಾಗಿಲ್ಲ ಎಂದು ನೀನು ನಿನ್ನ ಪುಸ್ತಕದಲ್ಲಿ ಬರೆದಿರುವುದು ಸರಿಯೇ ಇದೆ. ಆಗ ಮಹಾಶಕ್ತಿ (ಸಾಮರ್ಥ್ಯ)ಗಳನ್ನು ಹೊಂದಿದ್ದು, ಆ ಕಾಲದಲ್ಲಿ ಜೀವಿಸಿದ್ದ ಜನರು ವಾತಾವರಣವನ್ನು ದೂಷಿತಗೊಳಿಸಿ ಕೆಡಿಸಿಬಿಟ್ಟಿದ್ದರು. ಇಲ್ಲಿ ಜಗತ್ತಿನಲ್ಲಿರುವ ಎಲ್ಲ ಜನರೂ ತಮ್ಮ ಸುತ್ತಲ ಪರಿಸರದಲ್ಲಿ ಒಂದಿಷ್ಟು ಕಪ್ಪು (ದೂಷಿತ ವಸ್ತು) ಸೇರಿಸುತ್ತಿದ್ದಾರೆ. ಮತ್ತು ಅವರು ಆ ಕಾಲದಲ್ಲಿ ಇದ್ದವರಷ್ಟು ಶಕ್ತಿವಂತರಲ್ಲ."

'ಅವತಾರ'ಕ್ಕೆ ಸಂಬಂಧಿಸಿದ ಯಂತ್ರವ್ಯವಸ್ಥೆಯು ಅಗತ್ಯವಿದ್ದಮಟ್ಟಿಗೆ ಚಾಲಿತಗೊಳಿಸಲ್ಪಡುತ್ತದೆ. ಶಕ್ತಿಯ (Power) ಪರಿಣಾಮ ಎಷ್ಟೇ ಇದ್ದರೂ ಅದು, ಅದಕ್ಕಿಂತ ಮುಂದೆ ಕೆಲಸ ಮಾಡಲಾರದು. ಅದಕ್ಕೆ ಯಾವುದರ ಹಂಗೂ ಇಲ್ಲ, ಆದರೆ ಅದರ ಕಾರ್ಯಕ್ಷೇತ್ರದ ಪರಿಧಿ ಅದೇ ಇರುತ್ತದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೪ **ಪತ್ರ ಸಂಖ್ಯೆ – ೮೩** ಷಾಹಜಹಾನಪುರ
೦೯–೦೨–೧೯೩೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಾನು ಲಖೀಂಪುರದಿಂದ ಇಲ್ಲಿಗೆ ಸುರಕ್ಷಿತವಾಗಿ ಬಂದು ತಲುಪಿದೆ. ಭಗವಂತನ ಅಸೀಮ ಕೃಪೆಯೇ ಸರಿ – ನೀನು ಇಡೀ ಪರಬ್ರಹ್ಮಾಂಡ ಮಂಡಲದ ಯಾತ್ರೆಯನ್ನು ಕೈಗೊಳ್ಳುವಂತೆ (ಪೂರೈಸುವಂತೆ) ಮಾಡಿದನಲ್ಲದೆ, ಅದಕ್ಕೂ ಆಚೆಗೆ ಮುಂದುವರಿಯುವಂತೆ ಅವನು ಮಾಡಿದ್ದಾನೆ. ಇದು ಅವನದೇ ಕೃಪೆ, ಅವನದೇ ಕಾರ್ಯ, ಯಾರನ್ನಾದರೂ ಒಂದು ಬಿಂದುವಿನಿಂದ ಅಥವಾ ಮಂಡಲದಿಂದ ಮುಂದಕ್ಕೆ ಕರೆದೊಯ್ದಾಗ ಅದನ್ನು ನಾನು ವರ್ಣಿಸುವುದು ನನ್ನ ಅಭ್ಯಾಸ (ರೂಢಿ) ಆಗಿದೆ. ನಾನು ಅವನಿಗೆ ಈ ಸಂಗತಿಯನ್ನು ತಿಳಿಯಪಡಿಸುವುದರಿಂದಾಗಿ ಅವನು ಅಭಿಮಾನಪಟ್ಟುಕೊಳ್ಳುವುದಾದರೆ ಭಗವಂತನು ಅವನನ್ನು ಅದರಿಂದ (ಯಾರನ್ನೇ ಆಗಲಿ), ಕಾಪಾಡಲಿ. ಪರಮಾತ್ಮನ ಕೃಪೆಯಿಂದ ನಿನ್ನಲ್ಲಿ ಎಂದಿಗೂ ಅಹಂಕಾರ ಬೆಳೆಯದು. ನೀನು ನಿನ್ನ ಸ್ಥಿತಿಯ ಮೇಲೆ ನಿಕಟವಾಗಿ ಕಣ್ಣಿಡಬೇಕು, ಮತ್ತು ನಾನು ನಿನಗೆ ಇದನ್ನು ತಿಳಿಸುವುದು ಆ ಕಾರಣಕ್ಕಾಗಿಯೇ. ಒಂದರಿಂದ ಇನ್ನೊಂದರ (ಬಿಂದು ಅಥವಾ ವಲಯದ) ವ್ಯತ್ಯಾಸವನ್ನು ಅರಿಯಲು ಮತ್ತು ಮುಂದಕ್ಕೆ ಸಾಗಿದುದನ್ನು ಗ್ರಹಿಸಲು ಇದರಿಂದ ನಿನಗೆ ಶಕ್ಯವಾಗುವುದು. ನಿನಗೆ ಈ ವ್ಯತ್ಯಾಸವನ್ನು ಮುಂದೆ ಮುಂದೆ ಸಾಗಿದಂತೆ ಅರ್ಥಮಾಡಿಕೊಳ್ಳುವುದು ಕಷ್ಟವಾದೀತು. ಇಂದಿನಿಂದ ನಿನ್ನನ್ನು ಈ ವಲಯದ ಯಾತ್ರೆ ಪ್ರಾರಂಭಿಸುವಂತೆ ಮಾಡಲು ನಾನು ಕಾತರನಾಗಿದ್ದೇನೆ; ಮತ್ತು ಅವುಗಳಾಚೆಗೆ ಇನ್ನೂ ಹನ್ನೊಂದು ವೃತ್ತಗಳುಂಟು.



ಇತರರ ಆಧ್ಯಾತ್ಮಿಕ ಉನ್ನತಿಯನ್ನು ನಾನು ನನ್ನ ಜೀವಿತಕಾಲದಲ್ಲಿಯೇ ನೋಡಲು ಬಯಸುತ್ತೇನೆ. ಭಗವಂತನ ಕೃಪೆಯಿಂದ ಯಾರನ್ನಾದರೂ (ಅಹಂಕಾರದ) ಹದಿನಾರು ವೃತ್ತಗಳಿಂದಾಚೆಗೆ ಮುನ್ನಡೆಸಲು ಹೆಚ್ಚು ಸಮಯವೇನೂ ಬೇಕಾಗುವುದಿಲ್ಲವೆಂಬುದು ಸರಿಯೆ. ಅವನು ದಯಮಾಡಿ ಕೃಪೆದೋರಿದರೆ ಒಂದು ಸೆಕೆಂಡು ಸಾಕು. ನನಗೆ ಇದರ ಅನುಭವ ಉಂಟು, ಮತ್ತು ಹಾಗಾಗಿ ಅದನ್ನು ಮಾಡುವ ಸಾಹಸ ಮಾಡಬಲ್ಲೆ. ಈ ಐದು ವೃತ್ತಗಳನ್ನು ದಾಟಿದ ನಂತರ ಪ್ರಕಾಶನ ತಾಯಿ ಕೊನೆಯುಸಿರೆಳೆದಿದ್ದಳು. ಆ ಸಮಯದಲ್ಲಿ ಆ ಹನ್ನೊಂದು ವೃತ್ತಗಳು ನನ್ನ ದೃಷ್ಟಿಯಲ್ಲಿ ಇರಲಿಲ್ಲ; ಆದರೆ ಅವಳನ್ನು ಶುದ್ಧ ಸ್ಥಿತಿಗೆ ಮುಟ್ಟಿಸಲು ಭಗವಂತನು ಈ ವೃತ್ತಗಳನ್ನೂ ಅವಳು ದಾಟಿಸುವಂತೆ ಮಾಡಿದನು. ಅವನಿಗೆ ಅನಂತ ಧನ್ಯವಾದಗಳು.

ಮಗಳೆ, ಜನರು ನನ್ನ ಸ್ಥಿತಿಯ ಬಗ್ಗೆ ಅರಿತಿಲ್ಲ. ಮತ್ತೆ, ಅನಂತರವೂ ಅವರು ಅರಿಯದಿರುವ ಸಾಧ್ಯತೆ ಇದೆ. ನನ್ನಲ್ಲಿ ಏನೂ ಉಳಿದಿಲ್ಲ. ನಿಜ ಹೇಳಬೇಕೆಂದರೆ ನನ್ನಲ್ಲಿ ಆಧ್ಯಾತ್ಮಿಕತೆಯೂ ಉಳಿದಿಲ್ಲ. ಇದೂ ಕೂಡ ತುಂಬಾ ಭಾರವಾದುದು. ನಾನು ಯಾವುದರ ಬಗ್ಗೆ ಅಭಿಮಾನಪಡಲಿ ಎಂಬುದನ್ನು ನೀನೇ ಹೇಳಬೇಕು. ಏನನ್ನಾದರೂ ಹೊಂದಿರುವವನು ಅದರ ಬಗ್ಗೆ ಅಭಿಮಾನಪಡಲು ಸಾಧ್ಯ.

**ವಿವೇಕಾನಂದರು ಆದೇಶಿಸಿದುದು :** 'ಬಹು ಸುಂದರ ವಾಕ್ಯ, ಇದನ್ನು ಯಾರು ಅರ್ಥಮಾಡಿಕೊಳ್ಳುವರು ? ಇದು ಮೂಲ ಆಧಾರತಲ'.

ಮಗಳೆ, ಇಂದು ನಾನು ನನ್ನ ಪೂರ್ಣ ಸ್ಥಿತಿಯನ್ನು ಬರೆದಿದ್ದೇನೆ. ಜನರಿಗೆ ಇದು ತಿಳಿದುಬಂದರೆ, ನನ್ನ ಬಳಿ ಯಾರೂ ಬರುವುದಿಲ್ಲ. ಯಾವನು ಅದನ್ನು ಹೊಂದಿರುವುದಿಲ್ಲವೋ ಅವನ ಬಳಿಗೆ ಯಾರಾದರೂ ಆಧ್ಯಾತ್ಮಿಕ ಜ್ಞಾನಕ್ಕೋಸ್ಕರ ಯಾಕೆ ತಾನೆ ಹುಡುಕುತ್ತ ಹೋದಾರು ?

**ಸ್ವಾಮೀ ವಿವೇಕಾನಂದ :** "ನಿಜ ಹೇಳಬೇಕೆಂದರೆ ಇದು ಅತೀವ ತಾತ್ತ್ವಿಕವಾಗಿದೆ. ವೇದದ ಋಷಿಗಳಿಗೂ ಕೂಡ ಇದು ಅತಿಶಯವಾಗುತ್ತದೆ. ಯಾರೂ ಅದರ ಕಲ್ಪನೆ ಹೊಂದಿರಲಾರರು. ಇಲ್ಲಿ ನಾವು ಶಕ್ತಿಹೀನರು (Powerless)''.

ಜನರು ನನ್ನ ಬಳಿಗೆ ಬರದಿರುವುದು ಪ್ರಾಯಶಃ ಈ ಕಾರಣಕ್ಕಾಗಿಯೇ ಇರಬಹುದು.

**ಸ್ವಾಮೀ ವಿವೇಕಾನಂದ :** "ಈ ಕಾಲವನ್ನು ನೋಡು ! ರತ್ನಗಳನ್ನು ಬದಿಗೊತ್ತಿ ಕಲ್ಲು ಹರಳುಗಳನ್ನು ಅರಸುತ್ತಾರೆ, ಸಾಮಾನ್ಯ ಜನರ ಮನೋವೃತ್ತಿಯನ್ನು ನೋಡು ! ಆತ್ಮಾಭಿಮಾನ ಸತ್ತುಹೋದಾಗ, ಇದೇ ಗತಿ ಉಂಟಾಗುತ್ತದೆ."

ನಾನು ನಿನಗೆ ಯಾವುದೇ ಉದ್ದೇಶವಿಲ್ಲದೆ ಬರೆದಿದ್ದೇನೆ. ನೀನು ನಿನ್ನ ಕೆಲಸಕ್ಕೆ ನಿಷ್ಠನಾಗಿರು, ಭಗವಂತನು ಎಲ್ಲವನ್ನೂ ಮಾಡಲು ಸಮರ್ಥ, ಮತ್ತು ಎಲ್ಲವೂ ಅವನ ಕೈಯಲ್ಲಿದೆ.

P-4-Books-PM-7-Anantyatre-29



ಈ ಪತ್ರದ ಒಂದು ನಕಲನ್ನು ಮಾಸ್ಟರ್ ಸಾಹೇಬರಿಗೆ ಕೊಡು. ಅವರು ತಮ್ಮ ಕಡತದಲ್ಲಿಟ್ಟುಕೊಳ್ಳಲಿ. ನಾನು ನಕಲು ಇಟ್ಟುಕೊಂಡಿಲ್ಲ. ಅದು ಅಲ್ಲಿ ಬೇಕಾಗಿದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೫ **ಪತ್ರ ಸಂಖ್ಯೆ – ೮೭** ಷಾಹಜಹಾನಪುರ
೦೩–೦೩–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ಕೈಸೇರಿತು, ಸದ್ಗುರುವೊಬ್ಬನೇ ನಿನ್ನ ಚಿತ್ತದಲ್ಲಿ ಇರುವನೆಂಬುದು ಅತ್ಯಂತ ಒಳ್ಳೆಯದು. ಅಭ್ಯಾಸಿಗೆ ಕಾಳಜಿ ಇರಬೇಕಾದದ್ದು ಸದ್ಗುರುವಿನೊಂದಿಗೆ ಮಾತ್ರ. ಅದು ಸಂಪೂರ್ಣವಾಗಿ ಉದ್ದೇಶಕ್ಕೆ ಸಲ್ಲುತ್ತದೆ. ಅಭ್ಯಾಸಿಯ ಪ್ರಗತಿಯನ್ನು ಹೇಳುತ್ತ ಹೋಗುವುದು ನನ್ನ ರೂಢಿಯಾಗಿದೆ. ಪ್ರಾಯಶಃ ಅಭ್ಯಾಸಿಯ (ಶಿಷ್ಯನ) ಪ್ರಗತಿಯನ್ನು (ಕುರಿತು) ಆಚಾರ್ಯನಾದವನು (ವ್ಯಕ್ತವಾಗಿ) ಹೇಳುವುದಿಲ್ಲ. ನಮ್ಮ ಗುರುಮಹಾರಾಜರು ಕೆಲವೆಡೆ, ಕೆಲವೊಂದು ಸೂಚನೆಗಳನ್ನು (ಸುಳುಹು) ಕೊಡುತ್ತಿದ್ದರು. ನಾನು ಮಾಡುತ್ತಿರುವುದು ಸರಿಯೋ, ಅಲ್ಲವೋ ನಾನು ತಿಳಿಯೆ. ನಾನು ಯಾವ ಲೆಕ್ಕ ? ದೊಡ್ಡ ದೊಡ್ಡ ಮಹಾತ್ಮರೂ, ಸಂತರೂ ಹಾಗೆ ಮಾಡಿಲ್ಲ. ನಾನು ಆ ಕುರಿತು ಯೋಚನೆ ಮಾಡಿದಾಗಲೂ ನನಗೆ ಅರ್ಥವಾಗಲಿಲ್ಲ. ನಾನು ಈ ಬಗ್ಗೆ ಯಾರನ್ನಾದರೂ ಕೇಳುತ್ತೇನೆ. ವಿಶೇಷವಾಗಿ, ಚೌಬೇಜಿ ಮತ್ತು ಮಾಸ್ಟರ್ ಸಾಹೇಬರನ್ನು ಕೇಳುತ್ತೇನೆ. ಅವರ ಅಭಿಪ್ರಾಯ ಏನು ಎಂಬುದನ್ನು ನೋಡೋಣ. ನಿನಗೆ ಅರ್ಥವಾದರೆ ನೀನೂ ಬರೆದು ತಿಳಿಸು, ಅದರಿಂದ ನಾನು ಸರಿಯಾದ ಕ್ರಮವನ್ನು ಅನುಸರಿಸಲು ಅನುವಾದೀತು.

ನಾನು ಬೇರೆಯುವರಿಗೆ, ಮೌಖಿಕವಾಗಿ ಅಥವಾ ಲಿಖಿತದಲ್ಲಿ (ಆ) ಐದು ವೃತ್ತಗಳ ಅಥವಾ ಹನ್ನೊಂದು ವೃತ್ತಗಳ ಬಗ್ಗೆ, ಅಥವಾ ನನ್ನ ಅರಿವಿಗೆ ಬರುವ ಇನ್ನಾವ ವಿಷಯದ ಕುರಿತಾಗಿ ತಿಳಿಸುತ್ತ ಹೋಗುತ್ತೇನೆ. ಅದರಿಂದ ನನ್ನ ಕಾಲಾನಂತರ ಜನರು ಅದರಾಚೆಗೆ ಚಿಂತಿಸಲು ಪ್ರಾರಂಭಿಸಬಹುದು. ಮತ್ತು ನಾನು ಪಡೆದ ಯಾವುದೇ ಜ್ಞಾನವನ್ನು ನನ್ನ ಹೃದಯದಲ್ಲಿಯೇ ಅಡಗಿಸಿಟ್ಟುಕೊಂಡು ಅದನ್ನು ನನ್ನೊಂದಿಗೆ ತೆಗೆದುಕೊಂಡು ಹೋಗುವಂತಾಗಬಾರದಲ್ಲ. ಒಂದಿಷ್ಟು ಪಡೆದ (ಪ್ರಗತಿ ಹೊಂದಿದ) ನಂತರ ಅದು ಪರ್ಯಾಪ್ತವೆಂದು ಜನರು ಭಾವಿಸಿಯಾರು ಎಂಬ ಭಯ ನನಗಿದೆ. ನನಗೆ ಕಾಣುವಮಟ್ಟಿಗೆ ಹೇಳುವುದಾದರೆ, ಒಂದು ಅಲ್ಪ (ಆಧ್ಯಾತ್ಮಿಕ) ಸ್ಥಿತಿ ಅಥವಾ ಒಂದಿಷ್ಟು ಶಾಂತಿ ಅನುಭವಕ್ಕೆ ಬಂದಮಾತ್ರಕ್ಕೆ ಅಭ್ಯಾಸಿಗಳು ತಾವು ಪರಿಪೂರ್ಣರೆಂದು ಭಾವಿಸತೊಡಗುತ್ತಾರೆ. 'ಒಂದು ಅರಿಷಿಣದ ಬೇರು



ದೊರೆತವಮಾತ್ರಕ್ಕೆ ತಾನು ದೊಡ್ಡ ಗಂದಿಗೆ ವ್ಯಾಪಾರಿಯಾದೆ' ಎಂದು ಭಾವಿಸಿದಂತಾಯಿತು ಇದು. ನನ್ನ ಅನುಭವ, ನಾನೇನೂ ಅರಿತಿಲ್ಲವೆಂದು ನನ್ನ ಅರಿವಿಗೆ ಬಂದಿರುವುದೇ ಆಗಿದೆ. ನಾನು ಇನ್ನೂ ಆಧ್ಯಾತ್ಮಿಕ ಯಾತ್ರೆಯ ಆತ್ಯಂತಿಕ ಸೀಮೆಯನ್ನು ಮುಟ್ಟಿಲ್ಲ. ಪರಿಪೂರ್ಣತೆಯನ್ನು ಕುರಿತು ಹೇಳುವುದೇನು ? ನಾನು ನನ್ನ ಪತ್ರದಲ್ಲಿ ಮಾಸ್ಟರ್ ಸಾಹೇಬರಿಗೆ ಏನೋ ಒಂದಿಷ್ಟು ಬರೆಯುತ್ತೇನೆ. ನಿನ್ನ ತಿಳಿವಳಿಕೆಗೋಸ್ಕರ, ಮಾಸ್ಟರ್ ಸಾಹೇಬರನ್ನು ಓದಿ ಹೇಳುವಂತೆ ಕೇಳಿಕೊ. ನೀನು ತರಬೇತಿ ಕೊಡುವ ಕೆಲಸ ಮಾಡುತ್ತಿರುವುದರಿಂದ ಮತ್ತು ಮುಂದೂ ಮಾಡಬೇಕಾಗಿರುವುದರಿಂದ ಇದು ಉಪಯುಕ್ತ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೬ **ಪತ್ರ ಸಂಖ್ಯೆ – ೮೮** ಷಾಹಜಹಾನಪುರ
೦೫–೦೩–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ಫೆಬ್ರುವರಿ ೨೬ ರ ನಿನ್ನ ಪತ್ರ ತಲುಪಿತು. 'ಉದಾಸೀನತೆ'ಯ ಸ್ಥಿತಿಯನ್ನು ಹೊಂದುವುದು ಒಳ್ಳೆಯದು. ಕೆಲಸ ಮಾಡುವ ಮೊದಲು ಮತ್ತು ಅನಂತರ ಅದರ ವಿಚಾರ ಏನೂ ಇರದಿರುವುದೆಂದರೆ, ಆಗಾಮೀ ಸಂಸ್ಕಾರಗಳು ರೂಪುಗೊಳ್ಳುವುದು ಕೊನೆಗೊಂಡಿದೆಯೆಂದು ಅರ್ಥ. 'ಉದಾಸಿ' (ಪ್ರಾಪಂಚಿಕ ವಸ್ತುಗಳ ಕುರಿತು ಅನಾಸಕ್ತನಾಗಿರುವುದು) ಸ್ಥಿತಿಯಲ್ಲಿ ವಿಸ್ತಾರವಾಗುತ್ತಿರುವಂತೆ ಭಾಸವಾಗುತ್ತದೆ' ಎಂದು ನೀನು ಬರೆದಿದ್ದೀಯೆ. ನಿನ್ನ ದೃಷ್ಟಿಯಲ್ಲಿ ಕಂಡುಬರುತ್ತಿರುವುದು ಆತ್ಮ ವಿಸ್ತಾರವೇ ಆಗಿದೆ. (Self Expansion) ಈ ಸ್ಥಿತಿ ಇನ್ನೂ ವರ್ಧಿಸುತ್ತದೆ. ಲಯಾವಸ್ಥೆಯು ಇನ್ನೂ ಪೂರ್ತಿಯಾಗಿ ವರ್ಧಿಸಿಲ್ಲ. ಅದರ ಪೂರ್ಣ ವಿಕಸನಕ್ಕೆ ಕಾಯಬೇಕಿದೆ. ಪೂರ್ಣವಾಗಿ ಆ ಸ್ಥಿತಿಯು ಬೆಳೆಯುವ ಮುನ್ನವೇ ನೀನು ಪೂರ್ವಭಾವಿ ವಿಚಾರವನ್ನು ಕಲ್ಪಿಸಿಕೊಳ್ಳಬಾರದೆಂದು, ನಾನು ಅದರ ಲಕ್ಷಣಗಳನ್ನು ಹೇಳಲು ಬಯಸುವುದಿಲ್ಲ. ಅದರ ಅವಸ್ಥೆಯು ಸಂಪೂರ್ಣವಿಕಾಸ ಹೊಂದಿ ಅದರದೇ ಸ್ಥಿತಿಯಲ್ಲಿ ಮುಳುಗಿ ಹೋದಾಗ, ಅದರ ಭೋಗದ ಸ್ವರೂಪವು ಬದಲಾಗುತ್ತದೆ. ಅದಕ್ಕೇನೂ ವಿಲಂಬವಾಗುವುದಿಲ್ಲ. ಭಗವಂತನು ಅದನ್ನು ಕ್ಷಿಪ್ರದಲ್ಲಿಯೇ ಅನುಗ್ರಹಿಸುವನು. ನಾನು ಅದರ ಪರಿಣಾಮವೇನೆಂದು ಹೇಳುತ್ತೇನೆ. ಆದರೆ ನೀನು ಅದಕ್ಕೆ ಖೇದಪಡಬಾರದು. ನಾನು ಹೇಳುತ್ತಿರುವುದು ನಿನಗೋಸ್ಕರ ಮಾತ್ರ (ಇರಲಿ). ನೀನು ಈ ಸ್ಥಿತಿಯವರೆಗೆ ಬರುತ್ತಿರುವ ರೀತಿ ಹೇಗಿದೆಯೆಂದರೆ, ನಿನ್ನ ಕೆಲವು ಪೂರ್ವ ಸಂಸ್ಕಾರಗಳ ಭೋಗವನ್ನು ನಾನು ಅಂದರೆ ನಾನು ಮತ್ತು ನೀನು ಇಬ್ಬರೂ

P-4-Books-PM-7-Anantyatre-30



ಅನುಭವಿಸಬೇಕಾಗುತ್ತದೆ. ನಾನು ನನ್ನ ಮತ್ತು ನಿನ್ನ ಮತ್ತು ಸಂಸ್ಕಾರಗಳನ್ನು ಭೋಗಿಸಬೇಕಾಗಬಹುದೆಂಬ ಭಯ ನನಗಿಲ್ಲ; ಹಾಗೆಂದರೆ ಅದು ಎರಡುಸಾರೆ ನಡೆಯಬೇಕಾಗುತ್ತದೆ ಎಂದು ಅರ್ಥಹೊರಡುತ್ತದೆ; ಅದು ಹಾಗಿಲ್ಲ. ನನ್ನ ಸಂಸ್ಕಾರಗಳನ್ನು ನನ್ನ ಬದಲಿಗೆ ನನ್ನ ಗುರುಮಹಾರಾಜರು ಅನುಭೋಗಿಸಿದ್ದಾರೆ. ಒಬ್ಬ ಭಕ್ತನಾಗಿ ನಾನು ಲಾಲಾಜಿ ಮಹಾರಾಜರಿಗೆ ಅದೆಷ್ಟು ಋಣಿಯಾಗಿರಬೇಕು ! ಆದರೆ ಪ್ರಕೃತಿಯ ನಿಯಮದ ಅನುಸಾರ, ಅವರು ಹಾಗೆ ಮಾಡಲೇಬೇಕಿತ್ತು. ಅದೇ ರೀತಿ ನಾನೂ ವಿವಶನಾಗುತ್ತೇನೆ. ಈಗ ನಿನ್ನ ಸ್ಥಿತಿಯ ಬಗ್ಗೆ ಕೇಳು, ನೀನು ನಿನ್ನ ಸಂಸ್ಕಾರಗಳಿಂದ ಸಂಪೂರ್ಣ ಬಿಡುಗಡೆ ಹೊಂದಿದಾಗ ದೇಹ ಮತ್ತು ಆತ್ಮಗಳನ್ನು ಒಟ್ಟಿಗೆ ಇರಿಸಿಕೊಳ್ಳುವುದಕ್ಕೋಸ್ಕರ ನೀನು ಬೇರೆಯವರ ಸಂಸ್ಕಾರಗಳನ್ನು ತೆಗೆದುಕೊಳ್ಳಬೇಕಾಗುವುದು. ಎಲ್ಲಿಯವರೆಗೆ ಎಂದರೆ, ಒಬ್ಬ ತನ್ನವನಾದ ವ್ಯಕ್ತಿಯು ತನ್ನ ಸಂಸ್ಕಾರಗಳನ್ನು ತನ್ನ ಶಿಕ್ಷಕ (ಮಾರ್ಗದರ್ಶಿ/ ಗುರು) ಭೋಗಿಸುವಂತಾಗಬಾರದಂಥ ಸ್ಥಿತಿಯನ್ನು ತನ್ನೊಳಗೆ ಉಂಟುಮಾಡಿಕೊಳ್ಳುವವರೆಗೆ. ಹಾಗಾದಾಗ, ಗುರುವು, ಯಾವುದೇ ಸಂಬಂಧವಿಲ್ಲದ ಬೇರೆಯವರ ಸಂಸ್ಕಾರಗಳನ್ನು ಭೋಗಿಸುತ್ತಾನೆ. ಇಂದಿನ ಕಾಲದಲ್ಲಿ 'ಗುರು' ಆಗುವುದು ಬಲು ಸುಲಭವಾಗಿಬಿಟ್ಟಿದೆ. ಒಬ್ಬನ ಕೀರ್ತನೆ ಬೇರೊಬ್ಬನಿಗೆ ಮನಸ್ಸು ಮುಟ್ಟಿದರೆ ಸಾಕು, ಅವನನ್ನು ಆತನ ಗುರುವಾಗಿ ಒಪ್ಪಿಕೊಳ್ಳುತ್ತಾನೆ. ಮತ್ತು ಅವನು (ಕೀರ್ತನ ಹಾಡುವವ) ಆತನನ್ನು 'ಓ ನನಗೊಬ್ಬ ಶಿಷ್ಯ ದೊರೆತ' ಎಂದು ಸಂತೋಷದಿಂದ ಒಪ್ಪಿಕೊಳ್ಳುತ್ತಾನೆ. ಯಾರೋ ಒಬ್ಬ ತನ್ನ ಘನತೆ ಗೌರವಗಳನ್ನು ಹೆಚ್ಚಿಸಿಕೊಂಡು 'ಗುರು' ಆದನು. ಇನ್ನೊಬ್ಬ ದೈವೀ ಜ್ಞಾನದಾನ ಮಾಡುವೆನೆಂದು ಹೇಳುತ್ತ ಗುರುವಾದರೆ, ಬೇರೊಬ್ಬನು ದೇವರ ಹೆಸರಿನಲ್ಲಿ, ತನ್ನ ಪ್ರಭಾವವಲಯವನ್ನು ವಿಸ್ತರಿಸಿಕೊಳ್ಳುವುದಕ್ಕೋಸ್ಕರ ದಾನ–ದೇಣಿಗೆಗಳನ್ನು ಸಂಗ್ರಹಿಸಿದನು. ನಿಜವಾದ 'ಗುರು' ಆಗುವುದು ಎಷ್ಟು ಕಷ್ಟ ಎಂಬುದು ದೇವರಿಗೇ ಗೊತ್ತು. ಮಗಳೆ, ನಾನು 'ಗುರು' ಎಂದೆನಿಸಿಕೊಳ್ಳಲಾರೆ, ಯಾಕೆ ಗೊತ್ತೆ ? ನಾನು ಒಬ್ಬ ಭ್ರಾತೃವಾಗಿ (ಆಧ್ಯಾತ್ಮಿಕ) ತರಬೇತಿಯನ್ನು ನೀಡುವಾಗಲೇ ನಾನು ಇಷ್ಟು ಕಷ್ಟಪಡುತ್ತಿರುವಾಗ, ಇನ್ನು 'ಗುರು' ಆಗಿ ಬೇರೆಯವರಿಂದ ಕಷ್ಟಗಳನ್ನು ತಂದೆಳೆದುಕೊಳ್ಳಲು ಯಾರು ತಾನೆ ಸಿದ್ಧರಾದಾರು ! ಒಬ್ಬನು ತಾನು 'ಗುರು' ಎಂದಾದಮೇಲೆ, ಶಿಷ್ಯನನ್ನು ಭವಸಾಗರದಿಂದ ದಾಟಿಸಿ ಬಿಡುಗಡೆ ಮಾಡಲು ಅಥವಾ ಕನಿಷ್ಠ ಪಕ್ಷ ಆ ಶಿಷ್ಯನ (ಆಧ್ಯಾತ್ಮಿಕ) ಪ್ರಗತಿಯ ದಾರಿಯನ್ನಾದರೂ ತೆರೆಯಲು ಶಕ್ತನಾಗಲಿಲ್ಲವಾದರೆ, ಅವನು ಬಹುಶಃ ಸಹಸ್ರ ಜನ್ಮಗಳ ಕಾಲ ಅಂಧಕಾರದಲ್ಲಿ ತಡಕಾಡುತ್ತ ಇರಬೇಕಾಗುವಂಥ ಕಠಿಣ ಶಿಕ್ಷೆ ಪಡೆಯುತ್ತಾನೆ ಎಂದು ನನಗೆ ಅನಿಸುತ್ತದೆ. ಭಗವಂತನ ಸೃಷ್ಟಿಯ ಜೀವಿಗಳನ್ನು (ಈ ರೀತಿ) ಮೋಸಗೊಳಿಸುತ್ತಿರುವ ಸಾಧುಗಳಿಗೆ, ಸ್ವಾಮಿಗಳಿಗೆ ಇದನ್ನು ನಿಜಕ್ಕೂ ಹೇಳುವುದು ಸರಿಯೆನಿಸುತ್ತದೆ, ಇದರ ಪರಿಣಾಮವೇನಾಗುವುದೆಂದರೆ ನೂರಾರು ವರ್ಷಗಳ ನಂತರವೂ ಆ ಶಿಷ್ಯರು ಭಗವಂತನ ರಾಜ್ಯದ ಗಡಿಯನ್ನೂ ತಲುಪುವುದಿಲ್ಲ.



ಶಿಷ್ಯನನ್ನು ದೈವೀಲೋಕಪ್ರಾಪ್ತಿಯ ಅವಕಾಶದಿಂದ ವಂಚಿಸಿ, ಹಾಳುಮಾಡುವ ಆ ಗುರುಗಳನ್ನು ನಾನು ಹೆಚ್ಚು ದೋಷಿಗಳೆಂದು ಆರೋಪಿಸುತ್ತೇನೆ.

'ಗುರುವಿನೊಂದಿಗಿರುವ ಭಾವನೆ ಕೂಡ ಹೊರಟುಹೋಗಿದೆ' ಎಂದು ನೀನು ಬರೆದ ಮಾತು ನನಗೆ ಅರ್ಥವಾಗಲಿಲ್ಲ. ನಿನ್ನ ಮುಂದಿನ ಪತ್ರದಲ್ಲಿ ವಿವರಿಸಿ ಬರೆ. 'ಅವನು ನನ್ನ ಸ್ಮರಣೆಯಲ್ಲಿ ಹರ್ಷಮಗ್ನನಾಗಿದ್ದಾನೆ' ಎಂದು ಬರೆದಿರುವೆ. ಈ ಕುರಿತು ಸಂತ ಕಬೀರ 'ಮೇರಾ ರಾಮ ಮುಝೇ ಭಜೇ ಜಬ್ ತಬ್ ಪಾಂವೂ ವಿಶ್ರಾಮ್' ಎಂದಿದ್ದಾರೆ. (ನನ್ನ ರಾಮ ಯಾವಾಗ ನನ್ನನ್ನು ಸ್ಮರಿಸಲು ಪ್ರಾರಂಭಿಸುತ್ತಾನೋ, ಆಗ ನನಗೆ ನೆಮ್ಮದಿ (ವಿಶ್ರಾಂತಿ).

ಯಾರಿಗೆ ಜಾತಿ–ಪಾತಿ ಯಾವುದೂ ಇರುವುದಿಲ್ಲ ಎಂದು ನೀನು ಬಲ್ಲೆಯೇನು ? – ಕೇವಲ ಸಂನ್ಯಾಸಿಗೆ ಮಾತ್ರ. ಅವನು ಜಾತಿವ್ಯವಸ್ಥೆಗೆ ಅತೀತನಾಗಿರುತ್ತಾನೆ; ಮತ್ತು 'ವೈರಾಗ್ಯದ ಸಾರ' ಎಂದು ಕರೆಯಬೇಕಾದದ್ದು ಇದನ್ನೇ. ಇದು ಪಕ್ವಸ್ಥಿತಿಗೆ ಮುಟ್ಟಿದಾಗ ಅವನು ಸಂನ್ಯಾಸಕ್ಕೆ ಅರ್ಹನಾಗುತ್ತಾನೆ. ಇತ್ತೀಚೆಗಂತೂ ಯಾವ ಪರಿಶ್ರಮವೂ ಇಲ್ಲದೆ ಜನರು ಸಂನ್ಯಾಸಿಗಳಾಗುತ್ತಾರೆ. ಸಂನ್ಯಾಸ ತೆಗೆದುಕೊಳ್ಳುವುದು ಅದೆಷ್ಟು ಸುಲಭವಾಗಿಬಿಟ್ಟಿದೆ ನೋಡು ! ಹೀಗೇಕೆ ? ಯಾಕೆಂದರೆ 'ಗುರು'ವಾದವನು ತನ್ನ ಶಿಷ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕಲ್ಲ !

ನೀನು ಚೌಬೇಜಿ ಮತ್ತು ಮಾಸ್ಟರ್ ಸಾಹೇಬರ ಬಗ್ಗೆ ಶಿಫಾರಸು ಮಾಡಿದ್ದೀಯೆ. ನನಗೋಸ್ಕರ ಏಕೆ ಮಾಡಿಲ್ಲ ಎಂದು ನನಗೆ ಬೇಸರವೆನಿಸುತ್ತದೆ. 'ನಿಮ್ಮನ್ನು ಯಾರ ಮುಂದೆ ಶಿಫಾರಸು ಮಾಡಬೇಕು ?' ಎಂದು ನೀನು ಕೇಳಬಹುದು. 'ನೀನು ಯಾರಿಗೆ ಅವರನ್ನು ಶಿಫಾರಸು ಮಾಡಿದ್ದೀಯೋ 'ಅವನಿಗೆ' ಎಂಬುದೇ ಅದಕ್ಕೆ ಉತ್ತರ. ಆಧ್ಯಾತ್ಮಿಕತೆಯಿಂದ(ಲೂ) ರಿಕ್ತನಾದವನ ಶಿಫಾರಸು ಮಾಡಿಲ್ಲ. ಆದರೆ ಆಧ್ಯಾತ್ಮಿಕತೆಯನ್ನುಳ್ಳ ವ್ಯಕ್ತಿಗಳನ್ನು ಶಿಫಾರಸು ಮಾಡಲಾಗಿದೆ. ಇದೆಂಥ ವಿಚಿತ್ರ ! ಯಾರನ್ನು ನೀನು ಶಿಫಾರಸು ಮಾಡಿರುವೆಯೋ ಅವರಿಗೋಸ್ಕರ ನೀನೇಕೆ ಪ್ರಾರ್ಥನೆ ಮಾಡಬಾರದು, ಮತ್ತು ಕೆಲಸ ಮಾಡಬಾರದು ಎಂಬುದು ಪಂಡಿತ ರಾಮೇಶ್ವರ ಪ್ರಸಾದರ ಅಂಬೋಣ. ನಿನ್ನ ಹಿಂದಿನ ಪತ್ರದಲ್ಲಿ ಬರೆದ ನಿನ್ನ ಸ್ಥಿತಿ ಉತ್ತಮವಾಗಿದೆ. ಪಂಡಿತ್‌ಜಿ ಅದಕ್ಕೋಸ್ಕರ ನಿನ್ನನ್ನು ಅಭಿನಂದಿಸಿದ್ದಾರೆ. 'ಅವನನ್ನು ನಾನು ಎಷ್ಟು ಸ್ಮರಣೆ ಮಾಡಬೇಕಿತ್ತೋ ಅಷ್ಟು ಮಾಡುವುದರಲ್ಲಿ ನಾನು ಚ್ಯುತನಾಗಿದ್ದೇನೆ' ಎಂದು ಬರೆದಿದ್ದೀಯೆ. ಇದೇ ಕೊರಗು (ತೊಂದರೆ) ನನಗೂ ಸದಾ ಇದೆ. ನನ್ನದೇ ಆದ ಅಂಥ ತೊಂದರೆಯ ನಿವಾರಣೋಪಾಯ ಕಂಡುಕೊಳ್ಳಲಾಗದಿರುವಾಗ, ನಾನು ನಿನಗೇನು ಹೇಳಲಿ?

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೭ **ಪತ್ರ ಸಂಖ್ಯೆ – ೯೩** ಷಾಹಜಹಾನಪುರ
೨೭–೦೩–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರಗಳು ತಲುಪಿ ವಾರಗಳೇ ಕಳೆದವು. ನಿನ್ನ 'ಸ್ಥಿತಿ'ಯ ಬಗ್ಗೆ ತಿಳಿದುಕೊಂಡೆ. ಉತ್ತರಿಸಲು ಯೋಗ್ಯವಾದ ವಾಕ್ಯಗಳನ್ನು ನಾನು ಕೆಂಪುಗುರುತು ಮಾಡಿಟ್ಟುಕೊಂಡಿದ್ದೆ. ಅವುಗಳನ್ನು ಎಲ್ಲೋ ಇಟ್ಟುಕೊಂಡಿದ್ದೆ, ಆದರೆ, ಈಗ ಕಣ್ಣಿಗೆ ಬೀಳುತ್ತಿಲ್ಲ. ಅದಕ್ಕೆ ಬೇಸರವೆನಿಸುತ್ತದೆ. ಇಲ್ಲಿ ಕೋಮುಗಳ ಗಲಭೆ ಇತ್ತಾದ ಕಾರಣ ಯಾರೂ ಬರೆದುಕೊಳ್ಳುವವರು ಸಿಗಲಿಲ್ಲ. ಉತ್ತರ ಬರೆಯಲು ಆ ಕಾರಣ ತಡವಾಯಿತು. ಅದಲ್ಲದೆ ಅನೇಕ ದಿನಗಳು ಕಳೆದ ಕಾರಣ ಆ ಪತ್ರಗಳಲ್ಲಿ ಏನು ಬರೆದಿತ್ತೆಂಬುದು ಜ್ಞಾಪಕವಿಲ್ಲ. ಇಂದು, ಪ್ರಿಯ ನಾರಾಯಣ, ನಿನ್ನ ಮತ್ತೆರಡು ಪತ್ರಗಳನ್ನು ಕೊಟ್ಟಿದ್ದಾನೆ. ಅವುಗಳನ್ನೋದಿ ನಾನು ನಿನ್ನ ಸ್ಥಿತಿಯ ಬಗ್ಗೆ ನಿರ್ಣಯಿಸಿದೆ. ಭಗವಂತನ ಕೃಪೆಯಿಂದ ಸ್ಥಿತಿ ಚೆನ್ನಾಗಿದೆ. ಆದರೆ ಮಗಳೆ, ನಿಜವನ್ನು ನೀನು ಕೇಳಬಯಸಿದರೆ, ಗುರಿಯು ಇನ್ನೂ ಸಾವಿರ ಸಾವಿರ ಮೈಲು ದೂರವಿದೆ; ಮತ್ತು ಅದಕ್ಕೆ ಪಾರವೆಂಬುದಿಲ್ಲ. ವಿಶ್ವದ ಸೃಷ್ಟಿಯಾದಂದಿನಿಂದ ಒಬ್ಬನು ಬ್ರಹ್ಮವಿದ್ಯೆಯಲ್ಲಿ ಪ್ರಗತಿ ಹೊಂದುತ್ತಾ ಮಹಾಪ್ರಳಯ ಸನ್ನಿಹಿತವಾಗುವ ವರೆಗೂ ಮುಂದುವರಿದರೂ, ಅದರ ಕೊನೆಯ ಅಂಚನ್ನು ಅವನು ಮುಟ್ಟಲಾರನೆಂದು ನಾನು ತಿಳಿಯುತ್ತೇನೆ. ಜನರು ತಮ್ಮನ್ನು ಪರಿಪೂರ್ಣರೆಂದು ಅದೆಂತು ಭಾವಿಸಿಕೊಳ್ಳುತ್ತಾರೋ ನನಗೆ ಆಶ್ಚರ್ಯವಾಗುತ್ತದೆ. 'ಅವನ' (ಪರಮಾತ್ಮನ) ಅಪಾರ ಕರುಣೆ ಮತ್ತು ಅನುಗ್ರಹದಿಂದ, ಸದ್ಯ ನಿನಗೆ 'ಸತ್ಯ'ದ ಒಂದಿಷ್ಟು ತುಂತುರು ಸ್ಪರ್ಶವಾಗಿದೆ, ಮತ್ತು ಆ ತುಂತುರು ಇನ್ನೂ ಹೆಚ್ಚುತ್ತದೆ. ಇದು 'ಉದಾಸಿ'ಯ ಆದಿಯ ಸ್ಥಿತಿ; ಅದು ತನ್ನ ಕೊನೆಯ ಸೀಮೆಯನ್ನು ತಲುಪುವುದನ್ನು ಪ್ರತೀಕ್ಷಿಸಬೇಕು. ಭಗವದಿಚ್ಛೆಯಿಂದ ಅದು ಸದ್ಯದಲ್ಲಿಯೇ ವರ್ಧಿಸುವುದು. ನೀನು 'ಪೂಜೆ' ಮಾಡುವುದು ಅನಿವಾರ್ಯವಲ್ಲ; ನೀನು ಮಾಡಬಹುದು ಅಥವಾ ಮಾಡದಿರಬಹುದು. ಕೆಲವರಾದರೂ ನನ್ನ ಜೀವಿತಾವಧಿಯಲ್ಲಿಯೇ ಪರಿವರ್ತನೆ ಹೊಂದಲೆಂಬುದು, (ಆದರೆ ಬಹು ಸಂಖ್ಯೆಯ ಜನರಲ್ಲಿ ಈ ದಿಶೆಯಲ್ಲಿ ಮುಂದೆಬರುವ ಧೈರ್ಯವಿಲ್ಲ), ಮತ್ತು ನಾನು ಈ ಆಧ್ಯಾತ್ಮಿಕ ಪುಷ್ಪವನವನ್ನು ಕಾಣಬೇಕೆಂಬುದು ನನ್ನ ಆಶಯ; ಆದರೆ ಎಲ್ಲವೂ ಭಗವಂತನ ಕೈಯಲ್ಲಿದೆ; ಅವನು ಏನು ಇಚ್ಛಿಸುವನೋ, ಅದೇ ಆಗುತ್ತದೆ, ಅದು ನನ್ನ ನಿಯಂತ್ರಣಕ್ಕೆ ಮೀರಿದುದು. ಎಷ್ಟು ಸಾಧ್ಯವೋ ಅಷ್ಟು ಆಧ್ಯಾತ್ಮಿಕ ಪ್ರಗತಿಯನ್ನು ನನ್ನ ಜೀವಿತಕಾಲದಲ್ಲಿ ನೀಡಬೇಕೆಂದು ನಾನು ಬಯಸುತ್ತೇನೆ. ಆದರೆ, ನಿನ್ನನ್ನು ನಾನು ಅದರಿಂದ ವಂಚಿತಳನ್ನಾಗಿ ಮಾಡಿಲ್ಲ. ಅರ್ಥಾತ್ ನೀನು ಅದಕ್ಕೆ ಅವಲಂಬಿತಳಾಗಿರುವಂತೆ ನಾನು ಮಾಡಿಲ್ಲ. ನನ್ನ ಉತ್ತರಾಧಿಕಾರಿಯಾಗಿ ಬರುವ ವ್ಯಕ್ತಿಯನ್ನು (ಅವನು ಯಾರು ಎಂದು ಹೇಳಲಾಗುವುದಿಲ್ಲ) ಪ್ರತಿಯೊಬ್ಬನೂ ಗೌರವಿಸಬೇಕಾದುದು



ಉಚಿತ, ಅಷ್ಟೇ ಅಲ್ಲ ಕಡ್ಡಾಯ ಕೂಡ. ನಿನ್ನ ಆಧ್ಯಾತ್ಮಿಕ ಹಂತಗಳು ಭವಿಷ್ಯತ್ತಿನಲ್ಲಿ ನೇರವಾಗಿ ನಿರ್ಧರಿಸಲ್ಪಡುತ್ತವೆ (ಪೂರೈಸಲ್ಪಡುತ್ತವೆ). ಯಾಕೆಂದರೆ ನಾನು ನಿನ್ನನ್ನು ನೇರವಾಗಿ ಸರ್ವಶಕ್ತನೊಂದಿಗೆ ಜೋಡಿಸಿದ್ದೇನೆ. ಆ ಕಾರಣ ನೀನು ಅವಲಂಬಿತಳಾಗಿರಬೇಕಿಲ್ಲ (ಆ ಅವಲಂಬನೆ ಕೊನೆಗೊಂಡಿದೆ). ಭಗವದಿಚ್ಛೆಯಿದ್ದರೆ, ನಿನ್ನ ಕಾರ್ಯನಿರ್ವಹಣೆಯಲ್ಲಿ ಯಾವ ಬಾಧಕ ಉಂಟಾಗದು. ನಿನ್ನ ತಂದೆ ಚೌಬೇಜಿಯವರಿಗೆ ಅನುಪಸ್ಥಿತಿಯಲ್ಲಿ ಪ್ರಾಣಾಹುತಿ ನೀಡು. ಆದರೆ ಅವರನ್ನು ಶುದ್ಧೀಕರಿಸುವತ್ತ ಹೆಚ್ಚು ಲಕ್ಷ್ಯ ಕೊಡಬೇಕು. ಅವರು ಅಲ್ಪಸಮಯದಲ್ಲಿಯೇ ತಮ್ಮ ಸ್ಥಿತಿಯನ್ನು ದೂಷಿತಗೊಳಿಸಿಕೊಂಡುಬಿಡುತ್ತಾರೆ; ಮತ್ತು ನಾನು ಅವರಿಗೋಸ್ಕರ ಬಹಳಷ್ಟು ಕೆಲಸ ಮಾಡಬೇಕಿದೆ.

ಸದಾಕಾಲ ದೈವೀ ಧಾರೆ ಹರಿಯುತ್ತಿದೆ ಎಂದು ನೀನು ಬರೆದಿದ್ದೀಯೆ; ಅದು ಸರಿಯೇ ಇದೆ. ನೀನು ನೇರವಾಗಿ ಭಗವಂತನೊಂದಿಗೆ ಜೋಡಿಸಲ್ಪಟ್ಟಿರುವೆಯೆಂಬುದರ ಒಂದು ರುಜುವಾತು ಇದು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೮ **ಪತ್ರ ಸಂಖ್ಯೆ – ೯೮** ಷಾಹಜಹಾನಪುರ
೦೧–೦೪–೧೯೫೦

ಪ್ರಿಯ ಪುತ್ರಿ ಕಸ್ತೂರಿ, ನೀನು ಪ್ರಸನ್ನತೆಯಿಂದಿರಲಿ,

ನಿನ್ನ ಪತ್ರ ಕೈಸೇರಿತು; ಓದಿ ಬಹಳೇ ಸಂತೋಷವಾಯಿತು. ಅದರೊಟ್ಟಿಗೆ, ನಾನು ನಿನ್ನ ಮೇಲೆ ಕೋಪಗೊಂಡಿರುವೆನೆಂಬ ನಿರಾಧಾರ ವಿಚಾರ ನಿನಗೆ ಅದೆಂತು ಬಂದಿತು ? ಎಂದು ಆಶ್ಚರ್ಯವೂ ಆಯಿತು. ಅಂಥ ವಿಚಾರಕ್ಕೆ ಎಡೆಗೊಡಬೇಡ, ಅದನ್ನು ಇಟ್ಟುಕೊಳ್ಳಲೂ ಬೇಡ. ನಾನು ನನ್ನ ಬಗ್ಗೆ ಹೇಳುತ್ತೇನೆ. ಒಂದು ವೇಳೆ ಲಾಲಾಜಿ ಕೋಪಗೊಂಡಿದ್ದಾರೆಂಬ ವಿಚಾರ ನನ್ನೊಳಗೆ ಬಂದರೆ, ಲಾಲಾಜಿ ಮಹಾರಾಜರ ಕಣ್ಣಿನ ದೃಷ್ಟಿಯೇ ಬದಲಾಗುತ್ತಿತ್ತು. ಅವರ ಕೋಪ ಕುರಿತ ವಿಚಾರ ನನ್ನೊಳಗೆ ಹೆಚ್ಚು ಹೆಚ್ಚು ಬಂದಂತೆಲ್ಲ, ನನ್ನೊಂದಿಗೆ ಅವರ ಕೋಪವೂ ಹೆಚ್ಚಬಹುದಾಗಿತ್ತು. ನಾನೊಂದು ತಪ್ಪು ಮಾಡಿದೆ ಮತ್ತು ಅದನ್ನು ಹೃತ್ಪೂರ್ವಕ ಮನವರಿಕೆ ಮಾಡಿಕೊಂಡೆ ಎಂದು ಊಹಿಸಿಕೋ. (ಆಗ) ಲಾಲಾಜಿಯವರು ನನಗೆ ಶಿಕ್ಷೆ ವಿಧಿಸಲು ಕೂಡಲೆ ಸಿದ್ಧರಾಗಿಯೇ ಇರುವರು. (ಮತ್ತೆ, ತಪ್ಪು ಮಾಡುವುದಂತೂ ಮಾನವ ಸಹಜ). ಭಗವಂತ ನನ್ನ ಮೇಲೆ ದಯೆ ತೋರಲಿ. ನಾನು ಒಂದು ವೇಳೆ ತಪ್ಪುಮಾಡಬಹುದೆಂದು ಇಟ್ಟುಕೊಂಡರೂ, ನಾನು ತಪ್ಪೆಸಗುತ್ತಿದ್ದೇನೆಂಬ ವಿಚಾರಕ್ಕೆ ಆಸ್ಪದ ಕೊಡುವುದಿಲ್ಲ. ಒಂದು ಸ್ಥಿತಿ ಬರುವ ಪೂರ್ವದಲ್ಲಿ, ಒಂದು ರೀತಿಯ ಆದರ ಹಗುರಾದ ಪ್ರತಿಫಲನ (ಊಹೆ)

P-4-Books-PM-7-Anantyatre-32



ಇರುವುದು; ಮತ್ತು ಅದಾದನಂತರವಷ್ಟೆ ತನ್ನ ನೈಜ ರೂಪದಲ್ಲಿ ಅದು ಪ್ರಕಟಗೊಳ್ಳುವುದು. ಕಿವಿಗೆ ಬೀಳುವ ಮಾತುಗಳ ಆಧಾರದಮೇಲೆ ಆ ಸ್ಥಿತಿಯ ಪೂರ್ವಗಾಮೀ ಛಾಯೆಯಲ್ಲಿ ಏನಾದರೂ ಸಂಮಿಶ್ರವಾದರೆ, ಅದರ ನಿಜರೂಪವೂ ಮೇಲುದಿಸಿಬರುವುದು. ಈ ವಸ್ತುವೇ ಮೇಲ್ಪದರಿನಲ್ಲಿ ಕಂಡುಬಂದರೆ, ಅದು ನಮ್ಮದೇ ಸ್ಥಿತಿ ಎಂಬಂತೆ ತೋರಿಬರುವುದು. ನೀನು ಬರೆದು ತಿಳಿಸಿರುವ ಸ್ಥಿತಿಯಲ್ಲಿ ಒಂದಿಷ್ಟು ಊಹೆಯೂ ಸೇರಿಸಿಕೊಂಡಿದೆ ಎಂಬುದನ್ನು ನಾನು ಮಾಸ್ಟರ್ ಸಾಹೇಬರಿಗೆ ಬರೆದಿದ್ದೆ. ಇದರ ಅರ್ಥವೇನೆಂದರೆ, ಅದರಲ್ಲಿ ನಿಃಸಂಶಯವಾಗಿ ಸತ್ಯತೆ ಇರುವುದೇನೋ ಸರಿಯೆ; ಆದರೆ, ಒಂದಿಷ್ಟು ಊಹೆಯ (ಭ್ರಮೆಯ) ಪ್ರಭಾವ (ಪರಿಣಾಮ) ಕೂಡ ಇದೆ. ಇದರಲ್ಲಿ ನೀನು ಅಧೀರಳಾಗಬೇಕಿಲ್ಲ. ಇದು ಬಂದು ಹೋಗುತ್ತಿರುತ್ತದೆ.

ನೀನು ನಿಂತಿಲ್ಲ (ಸ್ಥಗಿತಳಾಗಿಲ್ಲ); ಪ್ರಗತಿಹೊಂದುತ್ತಿದ್ದೀಯೆ. ಆ ನಿಶ್ಚಲ ಸ್ಥಿತಿಯನ್ನು ನೀನು ಸ್ಥಗಿತತೆ ಎಂದು ಭಾವಿಸಿದ್ದೀಯೆ. ಆಧ್ಯಾತ್ಮಿಕ ಪಯಣವು ಕೆಲವೊಮ್ಮೆ ತೀವ್ರಗತಿಯನ್ನೂ ಕೆಲವೊಮ್ಮೆ ಮಂದಗತಿಯನ್ನೂ ಹೊಂದುವುದು ನಿಃಸಂಶಯ. ಅಭ್ಯಾಸಿಯು ಒಂದು ಬಿಂದುವಿನಿಂದ ಇನ್ನೊಂದಕ್ಕೆ ಸಾಗಲು ಬಯಸಿದಾಗ ಈ ತೆರನಾದ ಸ್ಥಿತಿ ಬಂದೇ ಬರುತ್ತದೆ. ಇದರಿಂದ 'ನಾನು ಸ್ಥಗಿತನಾದೆ' ಎಂದು ತಿಳಿಯಬಾರದು. ಯಾವುದೊಂದು ಬಿಂದು ಅಥವಾ ಚಕ್ರದಲ್ಲಿ ಸ್ಥಿತಿಯು ವಿಸ್ತಾರಗೊಳ್ಳುವಾಗಲೂ ಸ್ಥಗಿತತೆ ಅನುಭವಕ್ಕೆ ಬರುವುದು. ಅದನ್ನು ಗುರುತಿಸುವುದು ಬಹಳ ಕಷ್ಟ. ನೀನು ಭಗವಂತನೊಂದಿಗೆ ನೇರವಾಗಿ ಜೋಡಿಸಲ್ಪಟ್ಟಿದ್ದೀಯೆ ಎಂದು ನಾನು ಈಗಾಗಲೇ ನಿನಗೆ ಹೇಳಿದ್ದೇನೆ. ನಿನ್ನ ಪ್ರಗತಿ ಸ್ಥಗಿತವಾಗಿಲ್ಲ. ಯಾರಾದರೂ ನಿನ್ನನ್ನು ಮುಂದಕ್ಕೆ ತಳ್ಳಲಿ ಅಥವಾ ತಳ್ಳದಿರಲಿ, ಭಗವಂತ ನಿನಗೆ ಆಧ್ಯಾತ್ಮಿಕ ಪ್ರಗತಿಯನ್ನು ದಯಪಾಲಿಸುತ್ತಲೇ ಇರುತ್ತಾನೆ. ಈಗ, 'ಪೂಜೆ' ಮಾಡುವುದು ನಿನಗೆ ಅಸಾಧ್ಯದ ಮಾತು. ಸದ್ಗುರುವನ್ನು ಸದ್ಗುರು (ಪ್ರಭು) ಎಂದು ತಿಳಿದು, ಅವನ ಆಜ್ಞೆಗಳನ್ನು ಪಾಲಿಸುತ್ತ ಹೋಗುವುದೇ ನಿನಗೆ 'ಪೂಜೆ.' ನೀನು ಒಳ್ಳೆಯ ರೀತಿ ಕೆಲಸಮಾಡುತ್ತಿದ್ದೀಯೆ, ಹಾಗೇ ಮಾಡುತ್ತ ಹೋಗು. ನಿನ್ನ ಸ್ಥಿತಿಗೆ ಹೋಲಿಸಿ ಹೇಳುವುದಾದರೆ, ನೀನು ಈಗಿರುವ ಸ್ಥಿತಿಯಲ್ಲಿಗಿಂತ ಹಿಂದಿನ ಸ್ಥಿತಿಯಲ್ಲಿ ಮಾಡುತ್ತಿದ್ದ 'ಕೆಲಸ' ಹೆಚ್ಚು ವೇಗವುಳ್ಳದ್ದಾಗಿತ್ತು. ನಾನು ಕೂಡ 'ಪೂಜೆ' ಮಾಡುವುದಿಲ್ಲ. ಆದರೆ ಬೇರೆಯವರು ಮಾಡಬೇಕೆಂದು ಹೇಳುತ್ತೇನೆ. ಇದನ್ನು ಕೇಳಿದ ಜನರು, ನಾನು ಬೇರೆಯವರಿಗೆ 'ಪೂಜೆ' ಮಾಡಲು ಉಪದೇಶಮಾಡುತ್ತೇನೆ ಎಂದು ಖಂಡಿತ ಆಕ್ಷೇಪಿಸುವರು; ಆದರೆ, ನನ್ನ ಮಟ್ಟಿಗೆ ಹೇಳುವುದಾದರೆ ನಾನು ಪೂಜೆ ಮಾಡುವುದಿಲ್ಲ. ಸತ್ಯ ಸಂಗತಿ ಏನೆಂದರೆ, 'ಪೂಜೆ' ಮಾಡುವುದು ಈಗ ನನ್ನ ಅಳವಿಗೆ ಮೀರಿದ್ದಾಗಿದೆ. ಈ ಸ್ಥಿತಿ ಇಂತಿರುವಾಗ ನಾನಿಷ್ಟೇ ಹೇಳಬಲ್ಲೆ– "*ಭಕ್ತಿಯಿಲ್ಲದಿರುವಾಗಲೂ ನೀನು ನನ್ನನ್ನು ಮುಕ್ತಗೊಳಿಸಬಲ್ಲೆಯಾದರೆ, ಆಗ ಅದರ ಶ್ರೇಯಸ್ಸು ನಿನ್ನದೇ ಎಂದೆನ್ನುತ್ತೇನೆ.*" ಬಹಳ ಜನರು ಇದನ್ನು



ಪ್ರಾರಂಭದಿಂದಲೇ ಜಪಿಸುತ್ತಿರುತ್ತಾರೆ. ಆದರೆ ಭಗವಂತನು ಅದಕ್ಕೆ ಕಿವಿಗೊಡುವುದಿಲ್ಲ. ಮಾಸ್ಟರ್ ಸಾಹೇಬರ ಅನುಭವ ಅವರನ್ನು ಮೋಸಗೊಳಿಸಿದೆ ಎಂದು ನಾನು ತಿಳಿಯುತ್ತೇನೆ. ವಾಸ್ತವವೇನೆಂದರೆ, ಅವರ ಅನುಭವ (ಅನಿಸಿಕೆ) ಅವರಿಗೆ ಮೋಸಮಾಡಿಲ್ಲ, ಆದರೆ ಅವರು ಯಾವುದನ್ನು 'ಕಪ್ಪು ಹೊಗೆ'ಯಂತಹ ಕಲ್ಮಷ ಎಂದು ತಿಳಿದರೋ ಅದು 'ಸತ್ಯ'ದ ವರ್ಣವಾಗಿದೆ. ಮತ್ತು ಕೆಲಮಟ್ಟಿಗೆ ಅವರು 'ಭಗವಂತನೊಂದಿಗೆ ಜೋಡಿಸಲ್ಪಟ್ಟಿದ್ದಾರೆ' ಎಂಬುದರ ಪುರಾವೆಯೂ ಆಗಿದೆ. ಮಾಸ್ಟರ್ ಸಾಹೇಬರು ಹೊಂದಿದ ಅನುಭವ ಶ್ಲಾಘನೀಯವಾದುದು, ಮತ್ತು ಅವರ ಸೂಕ್ಷ್ಮಗ್ರಹಣದಿಂದ ನನಗೆ ಅತೀವ ಸಂತೋಷವಾಗಿದೆ. ಆದರೆ ಆ ಬಡಪಾಯಿಗೆ (ಮಾಸ್ಟರ್ ಸಾಹೇಬರಿಗೆ) ಇದು ಏನು ಎಂಬ ಅರಿವು ಇರಲಿಲ್ಲ. ಭಗವಂತನ ಇಚ್ಛೆಯಾದರೆ, ಈ ಅನುಭವವನ್ನು ಕೊಟ್ಟ ನಂತರ ನಾನು ಯಾವುದೇ ಸಮಯದಲ್ಲಿ, 'ನಿಜವಾದ ಕಪ್ಪುವರ್ಣ' ಮತ್ತು ಈ ತೆರನಾದ 'ಕಪ್ಪುವರ್ಣ'ಗಳ ಭೇದವನ್ನು ಅವರು ಅರಿಯಲು ಶಕ್ತರಾಗುವಂತೆ ಮಾಡುತ್ತೇನೆ. ಈ ವರ್ಣ ಕೊನೆಯವರೆಗೂ ಇರುತ್ತದೆ; ಆದರೆ ಅದರಲ್ಲಿ ಕೂಡ ಅಸಂಖ್ಯ ಸ್ಥಿತಿಗಳುಂಟು. ಇದು (ಈ ಅನುಭವ) ತುಂಬಾ ಒಳ್ಳೆಯದು; ಮತ್ತು ಇದು ಭಗವಂತನೊಂದಿಗೆ ನೇರವಾಗಿ ಜೋಡಿಸಲ್ಪಟ್ಟಿರುವುದರ ಕಾರಣವೂ ಆಗಿದೆ. ಈ ಸ್ಥಿತಿ ನನ್ನಲ್ಲಿ ಉಂಟಾದಾಗ ನಾನಿದನ್ನು ಗುರುಮಹಾರಾಜರಿಗೆ ಅರಿಕೆಮಾಡಿಕೊಂಡಿದ್ದೆ, ಮತ್ತು ಅವರು ಖಂಡಿತವಾಗಿ ಅತೀವ ಪ್ರಸನ್ನರಾಗಿದ್ದಿರಬಹುದು.

"*ಮಗಳೇ, ದೀರ್ಘಾಯುಷಿಯಾಗು, ಪೂರ್ಣಾಯುಸ್ಸು ಹೊಂದು. ಈ ಸ್ಥಿತಿಯನ್ನು ಗ್ರಹಣ ಮಾಡುವುದು ಕಷ್ಟಸಾಧ್ಯ. ನಿಜವಾದ ಜೀವನದ ಅಮೃತವನ್ನು ಸವಿದವನು ಮತ್ತು ನಿಮಗೆಲ್ಲ ನೀಡುತ್ತಿರುವವನು ಅವನೇ (ರಾಮಚಂದ್ರ). ಹೊಲಸು ದಾರಿಯಲ್ಲಿ ಉರುಳಾಡುತ್ತಿರುವ ಕಲ್ಲುಗಳ ಮೇಲೆ ಕನಿಕರವಿಡು*" ಎಂದು ಸ್ವಾಮೀ ವಿವೇಕಾನಂದರು ಹೇಳುತ್ತಾರೆ.

"*ಇದು ಅತಿಶಯ ಒಳ್ಳೆಯ ಸ್ಥಿತಿ. ಮನಸ್ಸಿನಲ್ಲಿ ದುಃಖಕ್ಕೆ ಎಡೆಗೊಡಬೇಡ. ಭಗವಂತ ನಿನ್ನನ್ನು ಅನುಗ್ರಹಿಸಲಿ, ನಿನಗೆ ಉತ್ತರೋತ್ತರ ಹೆಚ್ಚು ಹೆಚ್ಚು ಪ್ರಗತಿ ಕರುಣಿಸಲಿ*" ಇವು ಪೂಜ್ಯ ಲಾಲಾಜಿಯವರ ಮಾತುಗಳು.

ಇಂಗ್ಲೀಷ್‌ನಲ್ಲಿರುವ ಮಾತುಗಳು ನಿನಗೆ ಅರ್ಥವಾಗದಿದ್ದರೆ ಮಾಸ್ಟರ್ ಸಾಹೇಬರನ್ನು ವಿವರಿಸುವಂತೆ ಕೇಳು. ಚೌಬೇಜಿಯವರೂ ನಿನಗೆ ಇದನ್ನು ವಿವರಿಸುವರು. ಬಿಮ್ಲಾಳ ಪತ್ರಕ್ಕೆ ನಾನು ಉತ್ತರ ಬರೆದಿದ್ದೇನೆ. ನೀನು ನಿನ್ನ ಆತ್ಮಚರಿತ್ರೆಯನ್ನು ಬರೆಯುತ್ತ ಹೋಗಬೇಕೆಂದು ನಾನು ಬಯಸುತ್ತೇನೆ. ನಿನ್ನ ಬಾಲ್ಯಕಾಲದ ವಿಷಯಗಳನ್ನು ನಿನ್ನ ತಂದೆ–ತಾಯಿಯರು ತಿಳಿಸುವರು. ನೀನು ಧ್ಯಾನ ಆರಂಭಿಸಿದ ನಂತರದ ಎಲ್ಲ ವಿಷಯಗಳನ್ನೂ ಅದು (ಆತ್ಮಚರಿತ್ರೆ) ಒಳಗೊಳ್ಳಬೇಕು, ಅಂದರೆ ನೀನು ನನಗೆ ಬರೆದ ಮತ್ತು ನಾನು ನಿನಗೆ ಬರೆದ

P-4-Books-PM-7-Anantyatre-33



ಪತ್ರಗಳನ್ನೂ ಒಳ್ಳಗೊಳ್ಳಬೇಕು. ನಿನ್ನ ಎಲ್ಲ ಪತ್ರಗಳೂ ನನ್ನ ಬಳಿ ಇವೆ. ನೀನು ಬರೆಯಲು ಪ್ರಾರಂಭಿಸಿದಾಗ ಕೇಳಿ ಅವುಗಳನ್ನು ಪಡೆದುಕೊ. ನಾನು ಉತ್ತರ ರೂಪದಲ್ಲಿ ಬರೆದ ಪತ್ರಗಳಂತೂ ನಿನ್ನ ಬಳಿ ಇದ್ದೇ ಇವೆ.

ಪಾಪ, ಶಕುಂತಲಾ ಹೃದಯರೋಗದಿಂದ ಬಳಲುತ್ತಿದ್ದಾಳೆ, ಅವಳು ಹೆಚ್ಚು ಧ್ಯಾನ ಮಾಡಲಾರಳು. ನನಗೆ ಅವಳ ಬಗ್ಗೆ ತುಂಬಾ ಕನಿಕರವೆನಿಸುತ್ತದೆ. ನಿನ್ನ ತಾವೂಜಿ ಮತ್ತು ತಾಯಿ ಅವಳ ಬಗ್ಗೆ ಬಹಳೇ ಶಿಫಾರಸುಮಾಡಿದ್ದಾರೆ; ಮತ್ತು ನನಗೆ ಅವಳ ನೆನಪು ಆಗಾಗ ತರುವಂತೆ ನಿನಗೂ ಬರೆದಿದ್ದಾಳೆ. ನಾನು ಅವಳನ್ನು ಸ್ಮರಣೆಗೆ ತಂದುಕೊಂಡೆನೋ ಇಲ್ಲವೋ ಬೇರೆ ಮಾತು. ಆದರೆ ನಿನ್ನ ಅಭಿಪ್ರಾಯವೂ ಹಾಗಿರುವುದಾದರೆ ಮತ್ತು ತಾವೂಜಿ ಮತ್ತು ತಾಯಿಯವರು ಇಚ್ಛಿಸಬಹುದಾದರೆ ಅವಳನ್ನು ಇನ್ನೂ ಉನ್ನತ ಮಂಡಲಕ್ಕೆ ಮೇಲೆತ್ತಬಹುದು; ಆದರೆ ನೀನು ಅವಳ ಪಿಂಡದೇಶ ಮತ್ತು ಬ್ರಹ್ಮಾಂಡ ದೇಶಗಳ ಶುದ್ಧೀಕರಣ ಮಾಡಬೇಕು. ಹಾಗಿದ್ದರೂ ನೀನು ನಿನ್ನ ಸಂಕಲ್ಪ ಶಕ್ತಿಯಿಂದ ಅವಳ ಹೃದಯಕ್ಕೆ ಆಘಾತ ಕೊಡಬಾರದು. ಶುದ್ಧೀಕರಣವು ಶಕುಂತಲಾಗೆ ಸುಖಕರವೆನಿಸದಿದ್ದರೂ, ನೀನು ಆದಷ್ಟು ಕೂಡಲೆ ಮಾಡಬೇಕು. ಅವಳನ್ನು ಕೂಡಲೆ ಉನ್ನತ ವಲಯ (ಮಂಡಲ)ಕ್ಕೆ ಮೇಲೆತ್ತಿದರೆ, ಅವಳು ತಾನು ಪ್ರಗತಿಯನ್ನೇ ಹೊಂದಿಲ್ಲವೆಂದು ದೂರಬಹುದು. ಈಗ, ನೀವೆಲ್ಲ ಈ ಕುರಿತು ವಿಚಾರ ಮಾಡಬೇಕು. ನಿಮ್ಮೆಲ್ಲರ ಅಭಿಪ್ರಾಯವನ್ನು ನನಗೆ ಬರೆದು ತಿಳಿಸು.... ನಿನ್ನ ಪತ್ರಗಳಿಗೆ ನಾನು ಉತ್ತರಿಸಲಾಗುತ್ತಿಲ್ಲ; ಏಕೆಂದರೆ, ನಾರಾಯಣ ಹೊರಟು ಹೋಗಿದ್ದಾನೆ, ಮತ್ತು ಯಾರಾದರೂ ಬರೆದುಕೊಳ್ಳಲು ನನಗೆ ಸಿಗುವುದು ಆಕಸ್ಮಿಕವಾಗಿದೆ. ನಿನ್ನ ಸಹೋದರ ಹರಿಗೆ ಅವನ ಉದ್ಯೋಗದಿಂದಾಗಿ ಸಮಯ ಸಿಗುತ್ತಿಲ್ಲ. ಅವನು ಮುಂದಕ್ಕೆ ಸಾಗುವಂತಾಗಲು ನೀನು ಅವನ ಶುದ್ಧೀಕರಣ ಮಾಡಬಹುದು.

ಈಗ, ನೀನು ನಿನ್ನ ಸ್ಥಿತಿಯನ್ನು ಕುರಿತು ಬರೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೯ **ಪತ್ರ ಸಂಖ್ಯೆ – ೧೦೩** ಷಾಹಜಹಾನಪುರ
೨೫–೦೬–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಅನೇಕ ಪತ್ರಗಳು ಬಂದು ತಲುಪಿವೆ. ಕೆಲವೊಮ್ಮೆ ಬರೆದುಕೊಳ್ಳುವವರು ಯಾರೂ ಸಿಗದಿರುವ ಕಾರಣ ನಿನ್ನ ಎಲ್ಲ ಪತ್ರಗಳಿಗೆ ಉತ್ತರಿಸಲು ಸಾಧ್ಯವಾಗುವುದಿಲ್ಲ. ನಿನ್ನ ಅಸ್ವಸ್ಥತೆಯ ಬಗ್ಗೆ ನನಗೆ ಚಿಂತೆಯೆನಿಸುತ್ತದೆ. ಆದರೆ ಅದು ನನ್ನ ಅಳವಿಗೆ



ಮೀರಿದ್ದು. ಭಗವಂತ ಏನಿದ್ದಾನೆಯೋ ಇದ್ದಾನೆ. ಅದೇ ಅವನ ವಿಶೇಷತೆ. ಅವನ ವಿಶೇಷತೆ ಏನಿದೆಯೋ ಅದರತ್ತ (ಆ ಸ್ಥಿತಿಯತ್ತ) ನಾವು ಹೊರಳಬೇಕು. ಒಬ್ಬ ಎಷ್ಟು ದೂರ ಸಾಗಬಲ್ಲ ಎಂಬುದು 'ಅವನ' ವರದಾನ. ನಮ್ಮ ಸ್ಥಿತಿಯು ಸಂತುಲಿತವಾಗಬೇಕು. ತಕ್ಕಡಿಯ ಎರಡೂ ಪರಡಿಗಳು ಸಮಾನವಾಗಿರಬೇಕು. ತೂಕಮಾಡುವಾಗ ಪರಡಿಗಳು ಮೇಲಕ್ಕೆ, ಕೆಳಕ್ಕೆ ಸ್ವಲ್ಪ ಸಮಯದ ಮಟ್ಟಿಗೆ ಮಾತ್ರ ಹೋಗುತ್ತಿರಬಹುದು; ತದನಂತರ ಸಮತೋಲನ ಕಾಯ್ದುಕೊಳ್ಳಬೇಕು. ಅವಶ್ಯವಿರುವಲ್ಲಿ ಮಾತ್ರ ದಯೆ, ಕನಿಕರಗಳನ್ನು ತೋರಿಸಬೇಕು. ಎಲ್ಲವನ್ನೂ ದಾನ ಕೊಟ್ಟನಂತರ ತನ್ನನ್ನೇ ತಾನು ಮಾರಿಕೊಂಡ ಹರಿಶ್ಚಂದ್ರನೊಂದಿಗೆ ನಾನು ಸಹಮತನಾಗುವುದಿಲ್ಲ. ಅದು ಧರ್ಮ–ಸಮ್ಮತ ಕರ್ತವ್ಯ ಆಗಿರಲಿಲ್ಲ; ಬದಲಿಗೆ ಅವನು ಮಾಡಿದುದು ಮಾನವತೆಗೆ ವಿರುದ್ಧವಾದ ಒಂದು ರೀತಿಯ ಆತ್ಮಘಾತಕ ಕೃತ್ಯವೆನ್ನುವುದೇ ಸರಿ, ನನ್ನ ಗ್ರಹಿಕೆಯ ಪ್ರಕಾರ ಅವನು ಅದರಿಂದ ಕೀರ್ತಿ ಮತ್ತು ಸಂಕಷ್ಟಗಳನ್ನು ಬಿಟ್ಟು ಮತ್ತೇನನ್ನೂ ಪಡೆಯಲಿಲ್ಲ. ತಕ್ಕಡಿಯ ಒಂದು ಪರಡಿ ಯಾವಾಗಲೂ ಮತ್ತೊಂದಕ್ಕಿಂತ ಕೆಳಕ್ಕೆ ಇದ್ದರೆ ಏನಾಗುತ್ತದೆ ? ಒಂದು ಯಂತ್ರದ ಎಲ್ಲ ಭಾಗಗಳೂ ಸರಿಯಾಗಿ ಹೊಂದಿಸಿ ಇಡಲ್ಪಡದಿದ್ದರೆ, ಅದೊಂದು ಒಳ್ಳೆಯ ಯಂತ್ರ ಎಂದೆನ್ನಲಾಗದು. ಈ ದೋಷ ಯಂತ್ರದಲ್ಲಿ ಬಂದರೆ ಅದನ್ನು ಸರಿಪಡಿಸಲು ಒಬ್ಬ ಯಂತ್ರಜ್ಞ ಬೇಕು. ಸತ್ಯವನ್ನು ಮತ್ತು ನಿಜವಾದ ತತ್ತ್ವವನ್ನು ತಿಳಿದ ಜನರ ಅಭಾವ ಯಾವಾಗಲೂ ಇದ್ದೇ ಇದೆ; ಒಳ್ಳೆಯ ಕಾಲಗಳಲ್ಲಿ ಅಂಥವರು ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂಬುದೇನೋ ಸರಿಯೆ. ಮಗಳೆ, ನಿಜವಾದ ಸಾಕ್ಷಾತ್ಕಾರವೆಂದರೆ, ಭಗವಂತನಲ್ಲಿರುವ ಈಶ್ವರೀಯ ಗುಣಗಳನ್ನು (ಲಘುತ್ವ, ಸೂಕ್ಷ್ಮತೆ, ವಿಸ್ತಾರ) ಮತ್ತು ದೈವೀ ಸೌಂದರ್ಯವನ್ನು ನಾವು ನಮ್ಮೊಳಗೆ ಹೀರಿಕೊಳ್ಳಬೇಕು; ಸಮುದ್ರ ಮತ್ತು ಬಿಂದುಗಳನಡುವೆ ದೊಡ್ಡ ಅಂತರವಿದ್ದರೇನೂ ಅದರಿಂದ ತಪ್ಪಿಲ್ಲ. ನಿನ್ನ ಪತ್ರಕ್ಕೆ ಉತ್ತರ ಎಂದರೆ, ಆವಶ್ಯಕವಿರುವ ವಸ್ತುಗಳು ನಿನ್ನೊಳಗೆ ಸಾವಕಾಶವಾಗಿ ಬರುತ್ತಿವೆ ಎಂಬುದನ್ನು ನೀನು ಅರಿತುಕೊಳ್ಳಬೇಕು. ಸದಾಕಾಲ ನೀನು 'ಪೂಜೆ' ಮಾಡುತ್ತಲೇ ಇರುತ್ತೀಯೆ; ಅದು ನಿನ್ನ ಅನುಭವಕ್ಕೆ ಬರಲಿ ಅಥವಾ ಬರದೆ ಇರಲಿ, ಭವಿಷ್ಯತ್ತಿನಲ್ಲಿ ಒಂದು ಸಮಯ ಬರಬಹುದು, ಆಗ ಸ್ಥಿತಿ ಎಂಥದಿರುತ್ತದೆಂದರೆ, ಗೋಚರದಲ್ಲಿ ಪೂಜೆ ನಡೆಯುತ್ತಿರುವುದಿಲ್ಲ, ಮತ್ತು 'ಪೂಜೆ' ಮಾಡಲು ನೀನು ಯತ್ನಿಸಿದರೆ ಹೃದಯದಲ್ಲಿ ಅಸ್ವಸ್ಥತೆಯ (Uneasiness) ಅನುಭವವಾದೀತು. ಅಲ್ಲದೆ ಒಬ್ಬನು ಜೀವನದುದ್ದಕ್ಕೂ ಪೂಜೆಮಾಡುತ್ತಲೇ ಹೋಗಬೇಕೆಂಬುದು ಅನಿವಾರ್ಯವಲ್ಲ. ಯಾವ ಗುರಿಯನ್ನು ಮುಟ್ಟಲೋಸುಗ ಪೂಜೆ ಮಾಡಲಾಗುವುದೋ ಅದನ್ನು ಸಾಧಿಸಿದಮೇಲೆ ಪೂಜೆ ಮಾಡುವ ಅಗತ್ಯವಿರದು; ಆದರೆ ಅದನ್ನು ಗುರು ನಿರ್ಧರಿಸುತ್ತಾನೆ; (ಅಭ್ಯಾಸಿ) ತಾನೇ ನಿರ್ಧರಿಸಿಕೊಳ್ಳಬಾರದು. ಎರಡು ಪ್ರಕಾರದ ವ್ಯಕ್ತಿಗಳು ದೇವರನ್ನು ಪೂಜಿಸುವುದಿಲ್ಲ ಎಂದು ಸ್ವಾಮೀ

P-4-Books-PM-7-Anantyatre-34



ವಿವೇಕಾನಂದರೂ ಹೇಳಿದ್ದಾರೆ. ಒಂದು, ಅಮಾನವೀಯ ಪಶುಸದೃಶರು, ಎರಡನೆಯದು, ತಮ್ಮಿಂದಲೂ ಬಹು ಎತ್ತರಕ್ಕೆ ಏರಿದವರು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೦ **ಪತ್ರ ಸಂಖ್ಯೆ – ೧೦೫** ಷಾಹಜಹಾನಪುರ
೦೭–೦೭–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿತು. ನಿನ್ನ ಎಲ್ಲ ಪತ್ರಗಳನ್ನೂ ನಾನು ಇಟ್ಟುಕೊಂಡಿದ್ದೇನೆ. ನಿನ್ನ ಪ್ರತಿಯೊಂದು ಪತ್ರಕ್ಕೂ ವಿವರವಾಗಿ ಉತ್ತರ ಕೊಡಬೇಕೆಂಬುದು ನನ್ನ ಬಯಕೆ. ಆದರೇನು ಮಾಡಲಿ, ಬರೆದುಕೊಳ್ಳುವವರು ಯಾರೂ ನನಗೆ ಸಿಗುತ್ತಿಲ್ಲ; ನಾನೇ ಬರೆಯಲು ಕುಳಿತರೆ ವಿಚಾರಗಳು ಬರುವುದು ನಿಂತುಹೋಗುತ್ತದೆ. ನಿನ್ನ ಪತ್ರಗಳಿಗೆ ಉತ್ತರ ಬರೆಯದಿರಲು ಇದೇ ಕಾರಣ. ನನಗೆ ನಾರಾಯಣನಿಂದ ಬಹಳ ಸಹಾಯ ಸಿಗುತ್ತಿತ್ತು; ಹರಿಗೆ ಸಮಯ ಸಿಗುವುದು ತೀರಾ ಕಡಿಮೆ. 'ಅವನು' (ಪರಮಾತ್ಮ) ಹಾಗೆ ಬಯಸಿದಾಗ ಅದು ಸಾಧ್ಯವಾದೀತು. ವಿವರವಾಗಿ ಉತ್ತರಿಸಹೊರಟರೆ ಅದು ಏನಿಲ್ಲೆಂದರೂ ಇಪ್ಪತ್ತು – ಇಪ್ಪತ್ತೈದು ಪುಟಗಳಷ್ಟಾಗಬಹುದು; ಆದ್ದರಿಂದ ನಾನು ಸಂಕ್ಷಿಪ್ತವಾಗಿ ಬರೆಯುತ್ತಿದ್ದೇನೆ.

ನಾನು ಈಗ ಸ್ವಸ್ಥನಾಗಿದ್ದೇನೆ. ನೀನು ನಿನ್ನ ಸಂಕಲ್ಪಶಕ್ತಿಯನ್ನು ಎರಡು–ಮೂರು ದಿವಸ ಪ್ರಯೋಗಿಸಿದ್ದೀಯೆ. ನಾನು ಹೇಳತೀರದಷ್ಟು ಗುಣವಾಗಿದ್ದೇನೆ. ನಾನು ಸ್ವತಃ ವೀಕ್ಷಿಸುತ್ತಿದ್ದೆ, ಆದರೆ ನನಗೆ ಏನೂ ತಿಳಿದುಬರಲಿಲ್ಲ. ಇದು ಪ್ರಾರ್ಥನೆಯ ಪರಿಣಾಮ ಎಂಬ ಸಂಗತಿಯೊಂದೇ ನನಗೆ ತಿಳಿದು ಬಂದದ್ದು. 'ಕೆಲಸ ಮಾಡುವುದನ್ನು ಏನೇ ಆದರೂ ಕೈಬಿಡಬಾರದು. ನಿನಗೆ 'ಪೂಜೆ' ಎಂದರೆ 'ಕೆಲಸ' ಮಾಡುವುದು ಮತ್ತು ಇತರರಿಗೆ ಬೋಧಿಸುವುದೇ ಆಗಿದೆ. ನಾನು ನಿನಗೆ ಬ್ರಹ್ಮಾಂಡ ಮಂಡಲದ ಮೇಲೆ ಪ್ರಭುತ್ವವನ್ನು ನೀಡಿದ್ದೇನೆ; ಅದರಿಂದ ನಿನಗೆ 'ಕೆಲಸ' ಒಪ್ಪಿಸಬಹುದಾಗಿದೆ ಮತ್ತು ನೀನು ಅದನ್ನು ಚೆನ್ನಾಗಿ ಮಾಡಬೇಕು. ಈ 'ಕೆಲಸ'ವನ್ನು ಇದುವರೆಗೆ ಯಾವುದೇ ಮಹಿಳೆಗೆ ಬಹುಶಃ ಒಪ್ಪಿಸಿರಲಿಲ್ಲ. ನಿನ್ನ ಸದ್ಯದ ಸ್ಥಿತಿ 'ಶುದ್ಧರೂಪದ ವೈರಾಗ್ಯ'; ಮತ್ತು ನಿನ್ನ ಲಯಾವಸ್ಥೆಯೂ ಚೆನ್ನಾಗಿ ನಡೆಯುತ್ತಿದೆ. ನಮ್ಮ ಸ್ಥಿತಿ ಹೀಗೆಯೇ ಇರಬೇಕು. ಆದರೆ ಅದನ್ನು ಅನುಕರಣೆ ಮಾಡುವ ಅಗತ್ಯವಿಲ್ಲ. ಭಗವಂತನ ಕೃಪೆಯಿಂದ ಆ ಸ್ಥಿತಿಯು ನಿನ್ನಲ್ಲಿ ಈಗಾಗಲೇ ಆರಂಭಗೊಂಡಿದೆ; ಮತ್ತು ಆ ಕಾರಣವೇ ನಾನು ಇದನ್ನು ಬರೆಯುತ್ತಿದ್ದೇನೆ.



ನಾವು ದುಃಖದಲ್ಲಿರುವ, ನೋವು ಅನುಭವಿಸುತಿರುವ ಯಾರನ್ನಾದರೂ ನೋಡಿದರೆ ನಮಗೂ ದುಃಖವೆನಿಸಬೇಕು. ನೋವು ಅನುಭವಕ್ಕೆ ಬರಬೇಕು; ಮತ್ತು ಸಂತೋಷ–ಸಂಭ್ರಮಗಳಲ್ಲಿರುವ ಯಾರನ್ನಾದರೂ ನಾವು ಕಂಡರೆ, ನಮಗೂ ಸಂತೋಷಾನುಭವವಾಗಬೇಕು; ಆದರೆ, ಅವರನ್ನು ನಾವು ಬಿಟ್ಟು ಹೋದಾಗ ನಮಗೆ ದುಃಖ ನೋವುಗಳೂ ಇರಬಾರದು. ಸಂತೋಷವೂ ಅನ್ನಿಸಬಾರದು. ಮೀರತ್‌ನಲ್ಲಿ ನಿನ್ನ ಕಣ್ಣುಗಳಲ್ಲಿ ನೀರು ಬಂದಿರುವುದರ ಕಾರಣ ಇದೇ ಆಗಿದೆ.

ಮಾತಾಜಿಯವರಿಗೆ ಪ್ರಣಾಮ; ಮಕ್ಕಳಿಗೆ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೧ **ಪತ್ರ ಸಂಖ್ಯೆ – ೧೨೯** ಷಾಹಜಹಾನಪುರ
೨೨–೧೨–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಪ್ರಿಯ ನಾರಾಯಣನ ಮೂಲಕ ನಿನ್ನ ಪತ್ರ ತಲುಪಿತು. 'ಕೆಲಸ'ವನ್ನು ಕುರಿತಾದ ವಿಧಾನದ ಬಗ್ಗೆ ನೀನು ಬರೆದಿರುವುದು ಚೆನ್ನಾಗಿದೆ. ನೀನು (ಆಧ್ಯಾತ್ಮಿಕ ತರಬೇತಿಯ) ಕೆಲಸ ಪ್ರಾರಂಭಿಸಿದಾಗ, ವಿಧಾನವು ನಿನಗೆ ತನ್ನಿಂದ ತಾನೇ ತಿಳಿದುಬರುತ್ತದೆ. 'ಕೆಲಸ' ಮಾಡುವುದೇ ಗುರಿ, ಮತ್ತು ಉದ್ದೇಶ; ಸೂಕ್ತವಾದ ಯಾವ ವಿಧಾನವನ್ನಾದರೂ ಅನುಸರಿಸಬಹುದು. ಇಲ್ಲಿ ಎಲ್ಲರೂ ಕ್ಷೇಮ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೨ **ಪತ್ರ ಸಂಖ್ಯೆ – ೧೩೯** ಷಾಹಜಹಾನಪುರ
೦೩–೦೩–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರಗಳೆಲ್ಲವೂ ಕೈಸೇರಿದವು. ನಿನ್ನ ಸ್ಥಿತಿಯನ್ನು ಕುರಿತು ನಾನು ಇಷ್ಟೇ ಬರೆಯಬೇಕು. ನೀನು 'ಫ಼ನಾ–ಎ–ಫ಼ನಾ' (ಇದು ಲಯಾವಸ್ಥೆಯು, 'ಅವನಲ್ಲಿ' ಲಯವಾಗಿರುವ ಸ್ಥಿತಿ) ಸ್ಥಿತಿಯನ್ನು ದಾಟಿದ್ದೀಯೆ, ಮತ್ತು 'ಬಕಾ' (ಸಂಪೂರ್ಣ ಲಯಾವಸ್ಥೆ) ಸ್ಥಿತಿಯಲ್ಲಿ ಪ್ರವೇಶಿಸಿದ್ದೀಯೆ.'ಫ಼ನಾ–ಎ–ಫ಼ನಾ' ಸ್ಥಿತಿಯು ಹೆಚ್ಚು ಹೆಚ್ಚು ದಟ್ಟ (ತೀವ್ರ)ವಾಗುತ್ತ ಹೋದಂತೆ ಭಗವಂತನ ಧಾಮದಲ್ಲಿ 'ಬಕಾ' ಸ್ಥಿತಿಯೂ

ಹೆಚ್ಚು ಸಿದ್ಧಿಸುತ್ತದೆ. ನಿನ್ನ ಸೋದರ ಸೋದರಿಯರಿಗೆ ನನ್ನ ಆಶೀರ್ವಾದಗಳು. ಮತ್ತು ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೩ **ಪತ್ರ ಸಂಖ್ಯೆ – ೧೪೨** ಷಾಹಜಹಾನಪುರ
೧೪–೦೩–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿತು. ನೀನು ಬರೆದ, 'ಅನಾಸಕ್ತಿ' ಅಥವಾ 'ನಿರ್ಮೋಹ' ಸ್ಥಿತಿಯು, ವಾಸ್ತವವಾಗಿ, 'ನೈಜರೂಪದ ವೈರಾಗ್ಯ' ಸ್ಥಿತಿ ಅಲ್ಲ; ಬದಲಿಗೆ ಅದನ್ನು 'ಸಂಪೂರ್ಣ ಹೃತ್ಪೂರ್ವಕ ಲಕ್ಷ್ಯ' ಎಂದು ಕರೆಯಲಾಗುತ್ತದೆ (Whole hearted attention), ಒಮ್ಮೆಲೆ 'ಕಿರಿಕಿರಿ' ಅನಿಸುವುದು ಯಾಕೆಂದರೆ, ಯಾರಾದರೂ ಮಾತನಾಡಿದರೆ, ಹೃದಯವು ಆ ಸ್ಥಿತಿಯಿಂದ ವಿಚಲಿತಗೊಂಡು, ಅದು ಅಸಹನೀಯವೆನಿಸುತ್ತದೆ. ನಿನಗೆ ಬಾಧೆಕೊಡುತ್ತಿರುವ ವಿಚಾರಗಳು ನಿಜವಾಗಿ ನಿನ್ನವಲ್ಲ; ನೀನು 'ವಿರಾಟ್–ದೇಶ'ದಲ್ಲಿ ವಿಸ್ತಾರಗೊಳ್ಳುತ್ತಿರುವುದಕ್ಕೆ ಅವು ರುಜುವಾತುಗಳಾಗಿವೆ. ದಿನಾಂಕ ೨, ಮಾರ್ಚಿನ ನಿನ್ನ ಪತ್ರದಲ್ಲಿ ನೀನು ಬರೆದ ಸ್ಥಿತಿ ನಿಜವಾದ ಶಾಂತಿಯ ಒಂದು ಕ್ಷಿಪ್ರನೋಟ. 'ಬಕಾ' ಸ್ಥಿತಿಯು ಅಗಲವಾಗಿ ತೆರೆದುಕೊಳ್ಳುತ್ತಿದೆಯೆಂದು ನೀನು ಬರೆದಿದ್ದೀಯೆ. 'ಬಕಾ' ಸ್ಥಿತಿಯನ್ನು 'ತುರೀಯ' ಎಂದೂ ಕರೆಯಲಾಗುತ್ತದೆ. 'ಬಕಾ' ಮತ್ತು 'ತುರೀಯ' ಎಂದೆನ್ನಲಾದ ಸ್ಥಿತಿಗಳನ್ನು ನಾನು ವೀಕ್ಷಿಸಿದಾಗ, ಅವೆರಡೂ ಒಂದೇ ಎಂದು ತಿಳಿದು ಬರುತ್ತದೆ.

ನಿನ್ನ ತಮ್ಮಂದಿರಿಗೆ ಮತ್ತು ಸಹೋದರಿಯರಿಗೆ ಆಶೀರ್ವಾದಗಳು. ಅಮ್ಮಾಜಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೪ **ಪತ್ರ ಸಂಖ್ಯೆ – ೧೪೬** ಷಾಹಜಹಾನಪುರ
೦೩–೦೪–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರಗಳು ಕೈಸೇರಿದವು. ನಿನ್ನ 'ಸ್ಥಿತಿ'ಯ ಬಗ್ಗೆ ತಿಳಿಯಿತು. 'ನನ್ನಲ್ಲಿ ಒಂದಿಷ್ಟೂ ಪ್ರೇಮವೆಂಬುದಿಲ್ಲ....' ಮುಂತಾಗಿ ನೀನು ಬರೆದಿದ್ದೀಯೆ. 'ಫ಼ನಾಯಿಯತ್' ಹೆಚ್ಚು ವರ್ಧಿಸುತ್ತ ಹೋದಂತೆ ಅಂಥ ಸ್ಥಿತಿ ಅನುಭವಕ್ಕೆ ಬರುತ್ತದೆ ಎಂಬುದೇ ಅದಕ್ಕೆ ಉತ್ತರ. ನಿನ್ನ ಸ್ಥಿತಿ 'ಫ಼ನಾ–ಎ–ಫನಾ' ಇದೆ ಮತ್ತು 'ಬಕಾ' ಇದು ಫಾರ್ಸಿ



ಶಬ್ದ, ಕನ್ನಡದ ಬಕ ಅಲ್ಲ. ಸ್ಥಿತಿಯು ತೆರೆದುಕೊಳ್ಳುತ್ತಿದೆ ಎಂದು ನಾನು ನಿನಗೆ ಬರೆದಿದ್ದೆ. ಮತ್ತು 'ಬಕಾ'ದಲ್ಲಿಯೂ 'ಫ಼ನಾ' (ಲಯ), ಖಂಡಿತವಾಗಿಯೂ ಇದೆ.

ನಿನ್ನ ಸೋದರ–ಸಹೋದರಿಯರಿಗೆ ನನ್ನ ಆಶೀರ್ವಾದಗಳು ಮತ್ತು ಅಮ್ಮಾಜಿಯವರಿಗೆ ಪ್ರಣಾಮಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೫ **ಪತ್ರ ಸಂಖ್ಯೆ – ೧೫೦** ಷಾಹಜಹಾನಪುರ
೦೪–೦೫–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಮತ್ತು ಕೇಸರ್‌ಳ ಪತ್ರಗಳು ತಲುಪಿದವು. '*ನನ್ನ ಕೆಲಸ ಮತ್ತು ಮಾತುಗಳ ಶ್ಲಾಘನೆಯನ್ನು ಕೇಳಿದಾಗ ನನಗೆ ಯಾವುದೇ ಸಂಕೋಚವೂ ಆಗುವುದಿಲ್ಲ ಅಥವಾ ನನಗೆ ಏನೂ ಅನ್ನಿಸುವುದೇ ಇಲ್ಲ*' ಎಂದು ನೀನು ಬರೆದಿದ್ದೀಯೆ. ಇದು ಒಬ್ಬ ಸಂತನ ಮಹತಿ ಮತ್ತು ವಿಶೇಷ ಲಕ್ಷಣ. ಅವನ (ಅವಳು) ಸ್ತುತಿಯಿಂದ ಅಭಿಮಾನ ಅಥವಾ ಸಂತೋಷ ಹೊಂದುವುದೂ ಇಲ್ಲ; ಅಥವಾ ಅಪಮಾನದಿಂದ ಕೋಪಗೊಳ್ಳುವುದೂ ಇಲ್ಲ. ತನ್ನಿಂದ ತಾನೆ ಕೆಲಸ ನಡೆಯುವುದು ಅಥವಾ ಕೆಲಸವು ಸ್ವತಃಚಾಲಿತವಾಗುವುದು ಒಂದು ದೈವೀ ಗುಣ. ಮತ್ತು ಅಂಥ ಸ್ಥಿತಿಯಲ್ಲಿ ಸಂಸ್ಕಾರಗಳು ಉಂಟಾಗುವುದಿಲ್ಲ. ಕೆಲಸ ತನ್ನಿಂದ ತಾನೇ ನಡೆಯುತ್ತದೆ ಎಂಬ ವಿಚಾರವೂ ಏಳದಿರುವಾಗ, ನಿಜವಾದ 'ಸ್ಥಿತಿ' ಬರುತ್ತದೆ. ನಾನು ನನ್ನ 'ರಾಜಯೋಗದ ಪ್ರಭಾವ' ಪುಸ್ತಕದಲ್ಲಿ 'ಅಹಂಕಾರ' (Egoism) ಕುರಿತು ವರ್ಣಿಸುವಾಗ ಈ ಸ್ಥಿತಿಯನ್ನು ಚಿತ್ರಿಸಿದ್ದೇನೆ. ನಮ್ಮ ಸಂಸ್ಥೆಯಲ್ಲಿ ಅಭ್ಯಾಸಿಗಳು ಮುಂದುವರಿಯುತ್ತಲೇ, ಪ್ರಗತಿ ಹೊಂದುತ್ತಲೇ ಹೋಗುತ್ತಾರೆ. ಮತ್ತು ಯಾವುದೇ ಹಂತದಲ್ಲಿ ಅಥವಾ ಸ್ಥಿತಿಯಲ್ಲಿ ಸ್ಥಿರನಾಗಿ ನಿಲ್ಲುವುದೆಂದರೆ ಪ್ರಗತಿಯು ನಿಂತಿದೆ ಎಂದು ಅರ್ಥ. ದೀನತೆ ಮತ್ತು ಮುಗ್ಧತೆ (innocence)ಗಳ ಅನುಭೂತಿ (ಅರಿವು) ಇಲ್ಲದಿರುವುದು ಎಂದರೆ ಅವು ತಮ್ಮ ಪೂರ್ಣರೂಪದಲ್ಲಿ ಸಾಧಿಸಲ್ಪಟ್ಟಿವೆ ಮತ್ತು ಅವನು / ಅವಳು ಮುಂದಡಿಯಿಡುತ್ತಿದ್ದಾನೆಂದು ಅರ್ಥ.

ಅಭ್ಯಾಸಿಯು ಅಡಿಯಿಂದ ಮುಡಿಯವರೆಗೆ ಮೂರ್ತಿಮಂತ 'ಸ್ಮರಣೆ'ಯೇ ಆಗಿದ್ದಾಗ, ಪ್ರಯತ್ನಪಟ್ಟರೂ ಸ್ಮರಣೆಯು ಕೆಲ ಕ್ಷಣ ಮಾತ್ರ ಇರುತ್ತದೆ. '*ನಾನು ಎಲ್ಲಿಗಾದರೂ ಹೋದಾಗ ನನಗೆ ಪರಿಚಯವಿಲ್ಲದವರೂ ಕೂಡ, ಅವರು ತೀರಾ ಆಪ್ತರೋ ಎಂದೆನಿಸುತ್ತದೆ*' ಎಂದು ಬರೆದಿದ್ದೀಯೆ. ನಿನಗೆ ನಿಕಟವಾಗಿರುವವರ ಮತ್ತು ಅಪರಿಚಿತರನ್ನು ಒಳಗೊಂಡ ಇತರರ ಮಧ್ಯೆ ಯಾವುದೇ ಭೇದ ಕಾಣುವುದು ನನಗೆ ಸಾಧ್ಯವಾಗುವುದಿಲ್ಲವೆಂದು ನೀನು ಬರೆದಿರುವುದರಲ್ಲಿಯೇ ಇದರ

P-4-Books-PM-7-Anantyatre-36



ಉತ್ತರವನ್ನೂ ನೀನೇ ಕೊಟ್ಟಿದ್ದೀಯೆ. 'ಅನುಗ್ರಹ (ಕೃಪೆ)ವೆಂದರೇನೆಂದು ನನಗೆ ಅರ್ಥವಾಗುತ್ತಿಲ್ಲ, ಅಥವಾ ನಾನು ಗುರುತಿಸಲು ಶಕ್ತನಾಗುತ್ತಿಲ್ಲ' ಎಂದು ಬರೆದಿರುವೆ. ನೀನು ಯಾವಾಗಲೂ ಅನುಗ್ರಹದಲ್ಲಿ (ಫೈಜ) ಮುಳುಗಿರುವುದೇ ಇದಕ್ಕೆ ಕಾರಣ. ಸಮುದ್ರದಲ್ಲಿ ಸಂಪೂರ್ಣ ಮುಳುಗಿಹೋದ ವ್ಯಕ್ತಿ ತನ್ನ ಸುತ್ತಲೂ ನೀರನ್ನಲ್ಲದೆ ಬೇರೇನನ್ನೂ ಕಾಣಲಾರ. ಅಲ್ಲಿ ಬೇರೆ ಏನಾದರೂ ಇದ್ದರೆ, ಅದರ ವ್ಯತ್ಯಾಸ ತಿಳಿಯುತ್ತಿತ್ತು.

ನನ್ನ ಪ್ರಣಾಮಗಳನ್ನು ಅಮ್ಮಾಜಿಯವರಿಗೆ ತಿಳಿಸು ನಿನ್ನ ಸೋದರ–ಸೋದರಿಯರಿಗೆ ನನ್ನ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೬ **ಪತ್ರ ಸಂಖ್ಯೆ – ೧೫೪** ಷಾಹಜಹಾನಪುರ
೦೪–೦೬–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನೀನು ನನ್ನನ್ನು ಕನಸಿನಲ್ಲಿ ಕಂಡಾಗ, ಹಗಲಿನಲ್ಲಿ ಎರಡು ಸಾರೆ ಮತ್ತು ರಾತ್ರಿಯಲ್ಲಿ ಎರಡು ಸಾರೆ ಎಚ್ಚರತಪ್ಪುವಿಕೆಯಿಂದ ಬಳಲಿದ್ದೆ. ಮತ್ತು ನಾಲ್ಕನೆಯ ದಿವಸ ಮತ್ತೆ ಎಚ್ಚರ ತಪ್ಪಿತು. ನೀನು ಇದರ ಬಗ್ಗೆ ಚಿಂತಿಸಬಾರದು. ಭಗವಂತ ಹಾಗೆ ಇಚ್ಛಿಸಿದರೆ, ಅದು ಬೇಗ ಹೊರಟು ಹೋಗುವುದು. ಯಾಕೆ ಎಂದರೆ ಅಂತಹ ಸಂದರ್ಭಗಳಲ್ಲಿ ನನಗೆ 'ಕೆಲಸ' ಮಾಡುವುದು ಬಹಳ ಕಠಿಣವಾಗುವುದು. ಈಗ ನಾನು ನಿನ್ನ ಮೇ ೧೫ರ ಪತ್ರಕ್ಕೆ ಉತ್ತರಿಸುತ್ತೇನೆ. "ಈ ಹಿಂದೆ, ನನ್ನ ಸಂಕಲ್ಪ ಅಥವಾ ಗುರುವಿಗೋಸ್ಕರ ನನ್ನ ನಿಶ್ಚಯ ತುಂಬಾ ದೃಢವಾಗಿತ್ತು, ಬಲಿಷ್ಠವಾಗಿತ್ತು; ಆದರೆ ಈಗ ಆ ಸಂಕಲ್ಪ ಅಥವಾ ನಿಶ್ಚಯ ಅನುಭವಕ್ಕೆ ಬರುತ್ತಿಲ್ಲ" (ಎಂದು ಬರೆದಿದ್ದೀಯೆ); ಲಯಾವಸ್ಥೆಯನ್ನು ಪಡೆಯುವುದು ಮತ್ತು ಅಭ್ಯಾಸಿಯು ಅದನ್ನು ಸಾಕ್ಷಾತ್ತಾಗಿ ಅನುಭವಿಸುವುದು ಒಂದು ದೈವೀ ವರದಾನವೇ ಸರಿ. ಅದರಲ್ಲಿ (ಲಯಾವಸ್ಥೆಯಲ್ಲಿ) ಹೆಚ್ಚು ಹೆಚ್ಚು ಮಗ್ನನಾಗಬಲ್ಲವನಾದಂತೆ, ತಾನು ಗಂತವ್ಯವನ್ನು ಸಮೀಪಿಸುತ್ತಿದ್ದೇನೆ, ಅದನ್ನು ಮುಟ್ಟುತ್ತಿದ್ದೇನೆ ಎಂದು ತಿಳಿಯಬೇಕು. ವಿಚಾರದ ದೃಢತೆಯ ಅನುಭವವಾಗುವುದು ಅದರ ಸ್ಥಿತಿಯ ವಿಸ್ತಾರ ಇನ್ನೂ ಆರಂಭಗೊಳ್ಳದಿರುವವರೆಗೆ ಮಾತ್ರ. ವಿಸ್ತಾರದ ಸ್ವರೂಪ ಹೆಚ್ಚು ಹೆಚ್ಚು ವರ್ಧಿಸುತ್ತ ಹೋದಂತೆ, ಅಭ್ಯಾಸಿಗೆ ಹೆಚ್ಚು ಹೆಚ್ಚು ಲಘುತ್ವದ ಅನುಭವವಾಗುತ್ತ ಹೋಗುತ್ತದೆ. ಭಗವಂತ ಅದೆಷ್ಟು 'ಹಗುರ' (Light) ಮತ್ತು ಸೂಕ್ಷ್ಮನಾಗಿರುವನೆಂದರೆ ಅವನಲ್ಲಿ ಯಾವುದೇ 'ಭಾರ' ಇಲ್ಲ. ವಿಚಾರದ ತೀವ್ರತೆ, ಬಲ ಮತ್ತು ದೃಢತೆಗಳು ಪ್ರಾರಂಭದಲ್ಲಿ ಅಗತ್ಯ; ಅದರ ಭಾರ ಕ್ಷೀಣಿಸುತ್ತ ಹೋಗುತ್ತದೆ ಮತ್ತು ಒಂದಾನೊಂದು



ಹಂತದಲ್ಲಿ ಭಾರರಹಿತವಾಗುತ್ತದೆ. 'ಶುದ್ಧ ಸತ್ಯ'ವನ್ನು ತಲುಪುವ ಮತ್ತು ಅದನ್ನು ಪಡೆದು (ಸಾಧಿಸಿ)ಕೊಳ್ಳುವುದರ ಆಧಾರತಲ ಇದೇ ಆಗಿದೆ. ಇವೆಲ್ಲವನ್ನೂ ಹೊಂದಿದ್ದಾಗ್ಯೂ, ಗುರಿಯು ಇನ್ನೂ ಬಲು ದೂರವಿದೆ. ಲಾಲಾಜಿ ಮಹಾರಾಜರು ಒಮ್ಮೆ ಈ ಸ್ಥಿತಿಯನ್ನು ವ್ಯಕ್ತಪಡಿಸಿದ್ದರು. ಓ ! ಅವರು ವ್ಯಕ್ತಪಡಿಸಿದ ಆ ಸ್ಥಿತಿಯನ್ನು ಕುರಿತು ಹೇಳುವುದೆಂತು ! ಭಗವಂತ ಎಲ್ಲರಿಗೂ ಈ ವರವನ್ನು ಕೊಡಲಿ. ನಾನು ನನ್ನದೇ ಅಲ್ಪ ಸ್ಥಿತಿಯನ್ನು ಕುರಿತು ಹೇಳಬಹುದು; ಅದರಿಂದಾಗಿ ಭಗವಂತ ನಿನ್ನನ್ನು ಆ ಸ್ಥಿತಿಯ ಸಮೀಪ ತಂದು ಮುಟ್ಟಿಸಿದಾಗ ನೀನು ವ್ಯಗ್ರ ಅಥವಾ ಚಿಂತಿತಳಾಗಲಿಕ್ಕಿಲ್ಲ. ಅದನ್ನು (ಆ ಸ್ಥಿತಿ) ನಾನು ಹೀಗೆ ಹೇಳಿಯೇನು : "*ನನಗೆ ನನ್ನ ದೇಹದ ಅಥವಾ ಆತ್ಮದ ಅರಿವೂ (ಅನುಭವವೂ) ಆಗುವುದಿಲ್ಲ, ಅಥವಾ ಭೌತಿಕ ಅಥವಾ ಆಧ್ಯಾತ್ಮಿಕ ಅಸ್ತಿತ್ವದ ಅನುಭವವೂ ಆಗುವುದಿಲ್ಲ; ನನ್ನ ಆಧ್ಯಾತ್ಮಿಕ ಪ್ರಗತಿಯೂ ಅರಿವಿಗೆ ಬರುವುದಿಲ್ಲ. ಅತ್ಯಂತ ಭಾರರಹಿತವೆಂದೆನ್ನಲಾದ ಆಕಾಶ ಕೂಡ ನನಗಿಂತ ಭಾರವುಳ್ಳದ್ದಾಗಿ ತೋರುತ್ತದೆ*".

ಗೌರವ, ಘನತೆಗಳನ್ನು ಕುರಿತಾದ ನಿನ್ನ ಮೇ ೨೪ರ ಪತ್ರಕ್ಕೆ ಉತ್ತರಿಸುವುದು ಅಗತ್ಯವಿಲ್ಲ. ನಿನ್ನ ನಿಜವಾದ ಸ್ಥಿತಿಯಲ್ಲಿ ನೀನಿರುವಾಗ, ಎಲ್ಲರೊಂದಿಗೆ (ಎಲ್ಲದರೊಂದಿಗೆ) ಏಕಾತ್ಮತೆ ಇರುತ್ತದೆ. ಅಲ್ಲಿ ಎಲ್ಲವೂ ಸಮಾನವಾಗಿರುವುದರಿಂದ ಗೌರವ ಅಥವಾ ಘನತೆಯ ಯೋಚನೆಯೇ ಬರುವುದಿಲ್ಲ. ಸದ್ಯ ಆ ಏಕಾತ್ಮತೆಯು ಒಂದು ಸೀಮೆಯನ್ನು ಮುಟ್ಟಿದೆ. ಮತ್ತು ಬೇರೆಯವರ (ಯಾರಾದರಾಗಲಿ) ಮಾತುಗಳ ಮತ್ತು ಟೀಕೆಗಳ ಪರಿಣಾಮವಾಗುದಿರುವುದು, ವಾಸ್ತವದಲ್ಲಿ ಸಹನೆ, ಮತ್ತು ಸಹಿಷ್ಣುತೆಯಾಗಿದೆ; ಅದು ಒಳ್ಳೆಯದು, ಮತ್ತೆಲ್ಲ ಕ್ಷೇಮ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೭ **ಪತ್ರ ಸಂಖ್ಯೆ – ೧೫೬** ಷಾಹಜಹಾನಪುರ
೦೬–೦೬–೧೯೫೧

ಪ್ರಿಯ ಪುತ್ರಿ ಕಸ್ತೂರಿ,

ಭಗವಂತ ನಿನ್ನನ್ನು ಹರಸಲಿ, ಸುಖಿಯಾಗಿರು.

ನಿನ್ನ ಪತ್ರ ತಲುಪಿತು. 'ಪ್ರತಿ ಕ್ಷಣವೂ ನಾನು ಪ್ರಗತಿ ಹೊಂದುತ್ತಿರುವಂತೆ ಮಾಡಿ ದಯೆ ತೋರಿ' ಎಂದು ನೀನು ಬರೆದಿದ್ದೀಯೆ. ಅದಕ್ಕೆ ಉತ್ತರವೆಂದರೆ– 'ನನ್ನ ಗುರುಮಹಾರಾಜರು ನನಗೆ ನೀಡಿದುದು ಏನೆಲ್ಲ ನನ್ನ ಬಳಿ ಇರುವುದೋ ಆ ದೈವೀ ಪ್ರಾಣಾಹುತಿ ಮತ್ತು ಕೃಪೆಯಿಂದ ನಿನ್ನ ಮನೆ ತುಂಬಿ, ಉಕ್ಕಿಹರಿಯುತ್ತಿದೆ. ನಿನ್ನ ಸ್ಥಿತಿಯು ನಿಯಂತ್ರಣ ಮೀರಿದೆ' ಎಂದೂ ನೀನು ಬರೆದಿರುವೆ. ನೀನು

P-4-Books-PM-7-Anantyatre-37



ಹೇಳಿದುದರ ಸರಿಯಾದ ಅರ್ಥ ನನಗಾಗಲಿಲ್ಲ. ಮತ್ತೆ ಬರೆದು ತಿಳಿಸು. ಉಳಿದ ನಿನ್ನ ಸ್ಥಿತಿ ತಿಳಿಯಿತು. ಒಂದು ರೀತಿಯ ಮೂಕ ಪ್ರಜ್ಞಾವಸ್ಥೆಯಲ್ಲಿರುವಂತೆ, ಅದರ ಪರಿಣಾಮವು ಫಲಿಸಬೇಕು. ಅದು ಈಗಾಗಲೇ ಪ್ರಾರಂಭವಾಗಿದೆ, ಅದು ಇನ್ನೂ ವರ್ಧಿಸುತ್ತ ಹೋಗುತ್ತದೆ. ಪ್ರಾಚೀನ ಸಂತರು ಇದನ್ನು 'ತುರೀಯ' ಮತ್ತು ತುರೀಯಾತೀತ' ಎಂದು ಕರೆದಿದ್ದಾರೆ. ಅಂದರೆ, 'ತುರಿಯಾತೀತ'ವು 'ತುರೀಯ'ದ ನಂತರ ಬರುತ್ತದೆ. ನಮ್ಮ ಗುರುಮಹಾರಾಜರು ಮೂರು ತೆರನಾದ 'ತುರೀಯ'ದ ಕುರಿತು ಬರೆದಿದ್ದಾರೆ. ನಿನ್ನ 'ಸ್ಥಿತಿ'ಯನ್ನು 'ಬಕಾ' (ಒಂದು ಅವಸ್ಥೆ) ಎಂದು ಕರೆಯಲಾಗಿದೆಯೆಂದು ನಾನು ನಿನಗೆ ಬರೆದಿದ್ದೇನೆ. ಆ ಅವಸ್ಥೆಗೇ 'ತುರೀಯ' ಎಂಬ ಹೆಸರೂ ಇದೆ. ಈ ಸ್ಥಿತಿಯ ಲಯಾವಸ್ಥೆಯೂ ಆರಂಭಗೊಂಡಿದೆ; ಆದರೆ ಅಲ್ಪಪ್ರಮಾಣದಲ್ಲಿದೆ. ಮತ್ತೆಲ್ಲ ಕ್ಷೇಮ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೮ **ಪತ್ರ ಸಂಖ್ಯೆ – ೧೫೮** ಷಾಹಜಹಾನಪುರ
೧೦–೦೭–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಮತ್ತು ಕೇಸರ್‌ಳ ಪತ್ರಗಳು ಕೈಸೇರಿದವು. ಕೇಸರ್‌ಳು ಅವಳು ಬಯಸುವ 'ವಸ್ತು'ವಿಗೋಸ್ಕರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾಳೆ. ಫಲವು ಭಗವಂತನ ಇಚ್ಛೆ ಮತ್ತು ಸಂಕಲ್ಪಗಳನ್ನು ಅವಲಂಬಿಸಿದೆ. ಅವನು ಸರ್ವಕಾರ್ಯಸಮರ್ಥ. ಯಾವುದೇ ಕೆಲಸ ಮಾಡಿದರೂ, ಅದರ ಫಲವನ್ನು ಭಗವಂತನ ಇಚ್ಛೆಗೆ ಬಿಡಬೇಕೆಂದು ಭಕ್ತಿ ಮಾರ್ಗವೂ ಹೇಳುತ್ತದೆ. ತನ್ನತ್ತ ಒಂದು ಹೆಜ್ಜೆ ಮುಂದಕ್ಕೆ ಬರುವವನತ್ತ ಭಗವಂತನು ನಾಲ್ಕು ಹೆಜ್ಜೆ ಬರುತ್ತಾನೆಂಬುದು, ಎಂದೆಂದಿಗೂ ನಡೆಯುತ್ತಿರುವ ನಿತಾಂತ ಸತ್ಯ. ನನ್ನ ಈ ಹಿಂದಿನ ಪತ್ರದಲ್ಲಿ ನಿನ್ನ ಸ್ಥಿತಿಯನ್ನು ಕುರಿತು ನಾನು ಒಂದಿಷ್ಟು ಬರೆದಿದ್ದೆ, ಮತ್ತು ಅನಂತರ ಬರಲಿಕ್ಕಿರುವ ನಿನ್ನ ಸ್ಥಿತಿಯನ್ನು ಕುರಿತೂ ಬರೆದಿದ್ದೆ. ಸತ್ಯದ 'ಸ್ಥಿತಿಯು' ಹೆಚ್ಚಿನ ಮಟ್ಟಿಗೆ 'ನಿರ್ಲಿಪ್ತತೆ' ಅಥವಾ 'ನಿಶ್ಚಿಂತತೆ'ಯದಾಗಿದೆ. ದುಃಖದ ಕಾರಣದಿಂದಾಗಿ ನೀನು ಈ ಸ್ಥಿತಿಯಲ್ಲಿ ಒಂದು ಹೆಜ್ಜೆ ಮುಂದೆ ಸಾಗಲಾಗಲಿಲ್ಲ, ಆದ್ದರಿಂದ ಆ ಸ್ಥಿತಿಯು ಸಂಪೂರ್ಣವಾಗಿ ಪ್ರಕಟಗೊಂಡಿಲ್ಲ. ಈ ದುಃಖದ ಪ್ರಭಾವ ಕ್ಷಿಪ್ರದಲ್ಲಿಯೇ ಮರೆಯಾಗಿ ಹೋಗುತ್ತದೆ ಮತ್ತು ತದನಂತರ ಭಗವದಿಚ್ಛೆಯಿದ್ದರೆ, ನೀನು ಮತ್ತೆ ಪ್ರಗತಿ ಹೊಂದಲು ಪ್ರಾರಂಭಿಸುತ್ತೀಯೆ. ಈ ಸಮಯದಲ್ಲಿ ನಾನು ಲಖೀಂಪುರಕ್ಕೆ ಬರಬೇಕಿತ್ತು, ಅದು ನನ್ನ ಕರ್ತವ್ಯವಾಗಿತ್ತು. ಆದರೆ ನಾನು ನನ್ನ ಅಸ್ವಸ್ಥತೆ ಮತ್ತು ಚಿಕಿತ್ಸೆಯ ಕಾರಣ ಸಂಪೂರ್ಣ ಅಸಹಾಯಕನಾಗಿದ್ದೆ. ನಾನು ಖಂಡಿತ ಬರುತ್ತೇನೆ; ಆದರೆ, ಸದ್ಯ ದಿನಾಂಕವನ್ನು ನಿಶ್ಚಿತಪಡಿಸಲಾರೆ.



ಅಮ್ಮಾಜಿಯವರಿಗೆ ನನ್ನ ಪ್ರಣಾಮ ಮತ್ತು ಸೋದರ, ಸೋದರಿಯರಿಗೆ ಪ್ರೀತಿ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೩೯ **ಪತ್ರ ಸಂಖ್ಯೆ – ೧೬೨** ಷಾಹಜಹಾನಪುರ
೨೫–೦೮–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ೨೩–೦೭–೧೯೫೧ರ ಪತ್ರಕ್ಕೆ ನಾನು ೩೦–೦೭–೧೯೫೧ ರಂದು ಉತ್ತರ ಬರೆದಿದ್ದೆ. ಆದರೆ ಅಂಚೆಯವರ ದುರ್ಲಕ್ಷ್ಯದ ಕಾರಣ ಅದು ನಿನಗೆ ತಲುಪಿಲ್ಲ. ಅದರಲ್ಲಿ ಸ್ವಾಮೀ ವಿವೇಕಾನಂದರ ಒಂದು ಪುಟ್ಟ ಉಕ್ತ ಲಿಖಿತವಿತ್ತು. ಆ ಪತ್ರದಲ್ಲಿ ಒಳಗೊಂಡ ವಿಷಯಗಳು ನನಗೆ ಜ್ಞಾಪಕವಿಲ್ಲ. ನೆನಪಿಗೆ ಬಂದಷ್ಟನ್ನು ಮತ್ತೆ ಬರೆಯುತ್ತಿದ್ದೇನೆ. ಹೊಸತು ಏನಾದರೂ ನೆನಪಿಗೆ ಬಂದರೆ ಅದನ್ನೂ ಬರಯುತ್ತೇನೆ. 'ನನ್ನ ಸ್ಥಿತಿ ಈ ಅಭ್ಯಾಸಕ್ಕಿಂತ (Practice) ಹಗುರಾಗಿದೆ' ಎಂದು ನೀನು ಬರೆದಿದ್ದೇಯೆ. ಅದು ಸರಿ ಇದೆ. ಅಭ್ಯಾಸವು ಎಷ್ಟೇ ಹಗುರವೂ, ಸೂಕ್ಷ್ಮವೂ ಆಗಿದ್ದರೂ ಸರಿಯೆ, ಅದೂ ಒಂದು ಕರ್ಮವೇ. ಅದು ದೈಹಿಕ ಶ್ರಮಕ್ಕಿಂತಲೂ ಹೆಚ್ಚು ಭಾರವಾದುದು; ಮತ್ತು ಮಾನಸಿಕ ಶ್ರಮವು ದೈಹಿಕ ಶ್ರಮಕ್ಕಿಂತ ಭಾರವಾಗಿರುತ್ತದೆ. ಅದರ ಅರ್ಥವೇನೆಂದರೆ, ಅಭ್ಯಾಸ (Practice)ವು ಅದರ ಪರಿಣಾಮಕ್ಕಿಂತ (ಫಲಕ್ಕಿಂತ) ಹೆಚ್ಚು ಭಾರವುಳ್ಳದ್ದಾಗಿರುತ್ತದೆ. ನಿನ್ನ 'ಸ್ಥಿತಿ' ಒಂದು ನಿರ್ಜೀವ ದೇಹದಂತಿದೆ ಎಂದು ನೀನು ಈ ಹಿಂದೆ ಬರೆದಿದ್ದೆ. ನಾನಿದನ್ನು ನನ್ನ ಕಣ್ಣುಗಳಿಂದಲೇ, ಮೊದಲಬಾರಿಗೆ ನೋಡುತ್ತಿದ್ದೇನೆ; ಅದಕ್ಕೆ ಗುರುಮಹಾರಾಜರಿಗೆ ಧನ್ಯವಾದಗಳು. ಬಹಳೇ ಪ್ರಯತ್ನ ಮಾಡಿದುದರ ಹೊರತಾಗಿಯೂ, ಭಗವಂತನ ಸಹಾಯವಿಲ್ಲದೆ, ಒಬ್ಬನು ಈ ಸ್ಥಿತಿಯನ್ನು ಪಡೆಯಲಾರ. ಆದರೆ ನಮ್ಮಲ್ಲಿ ಎಷ್ಟು ಮಂದಿ ಭಗವಂತನ ಸಹಾಯಕ್ಕೋಸ್ಕರ ಕೂಗಿ, ಯಾಚಿಸುತ್ತಾರೆ ? ದೇವರ ಸ್ತುತಿಗೈಯುವ ಅನೇಕ ವ್ಯಕ್ತಿಗಳನ್ನು ನಾವು ಕಾಣುತ್ತೇವೆ, ಆದರೆ ಅವನ ಕೈಯಲ್ಲಿ ತಮ್ಮನ್ನು ತಾವು ಸಂಪೂರ್ಣ ಮಾರಿಕೊಳ್ಳುವವರನ್ನು ಕಾಣುವುದು ತೀರಾ ಅಪರೂಪ. ಭಿಕ್ಷೆಬೇಡುವುದು ನಮ್ಮ ಸುತ್ತಮುತ್ತ ಎಷ್ಟು ಹೆಚ್ಚಿದೆಯೆಂದರೆ, ಪ್ರತಿಯೊಬ್ಬನೂ ಬೇಡಲು ನನ್ನ ಭಿಕ್ಷಾ ಪಾತ್ರೆಯನ್ನು ಹಿಡಿದು ಕೈಚಾಚಿದ್ದಾನೆ. ಆದರೆ ಬೇಡುವ ಅಗತ್ಯವೇ ಬಾರದಂತೆ ಸದ್ಗುರು ತನ್ನ ಕರುಣೆಯನ್ನು ಅನುಗ್ರಹಿಸುವಂತಾಗುವಹಾಗೆ ತಮ್ಮನ್ನು ತಾವು ರೂಪಿಸಿಕೊಳ್ಳಲು ಯಾರೂ ಸಿದ್ಧರಿಲ್ಲ. ಭಿಕ್ಷುಕರು ಮನೆಯಿಂದ ಮನೆಗೆ ಭಿಕ್ಷೆ ಬೇಡುತ್ತ ಹೋಗುವುದನ್ನು ನೀನು ನೋಡಿದ್ದೀಯೆ; ದಿನದ ಕೊನೆಯಲ್ಲಿ ಅವರ ಭಿಕ್ಷಾಪಾತ್ರೆ, ಅವರ ಹಸಿವನ್ನು ತುಂಬಲಾರದಷ್ಟು ಅಲ್ಪಮಾತ್ರ ತುಂಬಿರುತ್ತದೆ. ಆಲದ ಮರದ ಕೆಳಗೆ ಪ್ರಭುಸ್ಮರಣೆಯಲ್ಲಿ ನಿರತರಾಗಿ ಕುಳಿತಿರುವವರೂ ಇದ್ದಾರೆ.

P-4-Books-PM-7-Anantyatre-38



ಅವರಿಗೆ ಅವರ ಹಸಿವೆಯನ್ನು ನೀಗಿಸಿಕೊಳ್ಳುವಷ್ಟು ಮಾತ್ರವಲ್ಲದೆ, ಬೇರೆಯವರಿಗೂ ಉಣಿಸುವಷ್ಟು ಭಿಕ್ಷೆ ಸಿಗುತ್ತದೆ. ಅಷ್ಟಾಗಿಯೂ ಇನ್ನೂ ಮಿಕ್ಕುಳಿದಿರುತ್ತದೆ. ಇದು ವಿರಕ್ತನಾಗಿ ಇರುವವನ ಮಹತಿ; ಮಿಕ್ಕುಳಿದವರನ್ನು ಭಿಕ್ಷುಕರೆಂದೇ ಕರೆಯಬೇಕಷ್ಟೇ.

ಮೃತ ಸದೃಶ ಸ್ಥಿತಿ ಉಂಟಾದಾಗ ಅದು ಆಧ್ಯಾತ್ಮಿಕತೆಯ ಆರಂಭವೆಂದು ತಿಳಿಯಬೇಕು. ಅಷ್ಟೇ ಅಲ್ಲ; ಈ ಸ್ಥಿತಿಯನ್ನು ಹೊಂದಿರುವಾಗಲೂ, ಅದರ ವಿಚಾರವು ಮನಸ್ಸಿನಲ್ಲಿ ಸುಳಿಯಬಾರದು. ಅದನ್ನು ಕುರಿತು ವಿಚಾರಮಾಡಿಯೂ ಮತ್ತು ಗಾಢವಾಗಿ ವೀಕ್ಷಿಸಿದಾಗಲೂ ಆ ಸ್ಥಿತಿಯ ಸಂವೇದನೆ ಉಂಟಾಗದಿದ್ದರೆ, ಆಗ ಅದು ನಿಜವಾದ ಸ್ಥಿತಿಯೆಂದು ಮತ್ತು ಆಧ್ಯಾತ್ಮಿಕತೆಯ ಆರಂಭ ಎಂದೆನಿಸಿಕೊಳ್ಳುತ್ತದೆ. ಈ ಕುರಿತು ಒಮ್ಮೆ ಒಂದು ಮಾತು ಶ್ರುತಿಯಾಗಿ (Dictate) ಕೇಳಿ ಬಂದಿತ್ತು– "ಇತರರೆಲ್ಲರೂ ಎಲ್ಲಿ ಆಧ್ಯಾತ್ಮಿಕತೆಯ ಕೊನೆ ಎಂದೆನ್ನುವರೋ *ಅಲ್ಲಿಂದ ರಾಮಚಂದ್ರನ ತರಬೇತಿ (ಆಧ್ಯಾತ್ಮಿಕ ಶಿಕ್ಷಣ) ಪ್ರಾರಂಭಗೊಳ್ಳುವುದು*". ಮತ್ತು ಈ ಉಕ್ತಿ ಸರಿಯೇ ಇದೆ. ಈ 'ಸ್ಥಿತಿ'ಯಿಂದಾಗಿ, ಎಲ್ಲ ಬಂಧನಗಳಿಂದ ಬಿಡುಗಡೆ ದೊರೆಯುತ್ತದೆ. ಅಂಥ 'ಜೀವನ್ಮೃತ ಅವಸ್ಥೆ'ಯ ಪ್ರತೀಕ್ಷೆ ಕುರಿತು ನನ್ನ ಪತ್ರಗಳಲ್ಲಿ ನಾನು ಬರೆದಿದ್ದೇನೆ.

ಈಗ ನಾನು ನಿನ್ನ ೨೨–೦೮–೧೯೫೧ರ ಪತ್ರಕ್ಕೆ ಉತ್ತರಿಸುತ್ತಿದ್ದೇನೆ. ಭಗವಂತನ ಕೃಪೆಯಿಂದ ಈಗ, ಮೃತ ಸದೃಶ ಸ್ಥಿತಿಯನ್ನು ಹೊಂದಿಯೂ ಅದರ ಸಂವೇದನೆ ಉಂಟಾಗದಂಥ ಸ್ಥಿತಿ ಬೆಳೆಯುತ್ತಿದೆ; ಆದರೆ ಇನ್ನೂ ಅದು ಪೂರ್ಣ ವಿಕಸನಗೊಂಡಿಲ್ಲ; ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. "*ಪ್ರತಿಯೊಂದು ವಸ್ತುವಿನಿಂದಲೂ ಪ್ರಕಾಶವೇ ಅಥವಾ ಪ್ರಾಣಶಕ್ತಿಯೇ ಹೊರ ಹೊಮ್ಮುತ್ತಿರುವಂತೆ ತೋರುವ ಸ್ಥಿತಿ ನನ್ನದಾಗಿದೆ. ಮತ್ತೆ ಆ ಪ್ರಕಾಶ ಎಂಥದೆಂದರೆ ಅದರಲ್ಲಿ ಬೆಳಕೂ ಇಲ್ಲ, ಕತ್ತಲೆಯೂ ಇಲ್ಲ*" ಎಂದು ನೀನು ಬರೆದಿದ್ದೀಯೆ. ಈ ಹಂತದಲ್ಲಿ ಒಳಗೂ ಹೊರಗೂ ನಿನಗೆ ಅದೇ ಸ್ಥಿತಿ ಅನುಭವಕ್ಕೆ ವೇದ್ಯವಾಗುತ್ತದೆ. ನನ್ನ ಅಭ್ಯಾಸ (ಸಾಧನೆಯ) ಕಾಲದಲ್ಲಿ ನನ್ನ ಸ್ಥಿತಿಯೂ ಅಂತೆಯೇ ಇತ್ತು. ಒಳಗಡೆ ನನಗೆ ವೇದ್ಯವಾಗುವುದೇ ಹೊರಗಡೆಗೂ ಕಂಡುಬರುತ್ತಿತ್ತು.

ಮಾತಾಜಿಯವರಿಗೆ ನನ್ನ ಪ್ರಣಾಮ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೦ **ಪತ್ರ ಸಂಖ್ಯೆ – ೧೬೪** ಷಾಹಜಹಾನಪುರ
೩೦–೦೮–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರಗಳು ಎಲ್ಲವೂ ತಲುಪಿವೆ. ಭಗವಂತನ ಕೃಪೆ; ನೀನಿರುವ ಸ್ಥಿತಿಯಲ್ಲಿ ಅಭ್ಯಾಸ (Practice) ಮಾಡುವುದು ತುಂಬಾ ಕಷ್ಟಸಾಧ್ಯ; ಅದು ಅಭ್ಯಾಸದ ಫಲವೇ



ಆಗಿದೆ. ಇಂಥ ಸ್ಥಿತಿಯಲ್ಲಿ ಅಥವಾ ಅಂಥ ಸಂದರ್ಭಗಳಲ್ಲಿ, ಅದಕ್ಕೆ ಸಂಬಂಧಿಸಿದ ಅಭ್ಯಾಸವು ಅರಿವಿಲ್ಲದೆಯೆ, ತನ್ನಿಂದ ತಾನೇ ನಡೆಯುತ್ತಿರುತ್ತದೆ. ಶ್ರದ್ಧೆಯು ನೈಜವೂ, ದೃಢವೂ ಆಗಿದ್ದರೆ, ನಮ್ಮ ಸಂಸ್ಥೆಯಲ್ಲಿ ಅಭ್ಯಾಸಿಯು ತನಗರಿವಿಲ್ಲದಂತೆಯೆ ಭಗವಂತನಿಗೆ ನಿಷ್ಠ (ಸಮರ್ಪಿತ)ನಾಗಿರುತ್ತಾನೆ. ಯಾಕೆಂದರೆ, ಮನಸ್ಸನ್ನು ಬ್ರಹ್ಮಾಂಡ ಮಂಡಲದಲ್ಲಿ ಅದ್ದಿತೆಗೆಯಲಾಗಿರುವುದರಿಂದ ಅದೇ ತೆರನಾದ ವರ್ಣವನ್ನು ಅದು ಪಡೆಯುತ್ತದೆ; ಮತ್ತು ಅದರ ಶಕ್ತಿಯು ಪ್ರಪಂಚದ ಕಡೆಗೆ ತಿರುಗುವುದು ಕಡಿಮೆಯಾಗುವಂತೆ ನಾನೂ ಕೂಡ– ವೃತ್ತಿಗಳನ್ನು (ಅಭ್ಯಾಸಿಯ) ಹೆಚ್ಚಿನ ಮಟ್ಟಿಗೆ ಊರ್ಧ್ವಮುಖವಾಗಿ ನಿರ್ದೇಶಿಸುತ್ತಿರುತ್ತೇನೆ.. ಲಯಾವಸ್ಥೆಯನ್ನು ಪಡೆದ ಅಭ್ಯಾಸಿಯು ಅದರ ಪ್ರಮಾಣ ಎಷ್ಟೇ ಇದ್ದರೂ ತನ್ನಿಂದ ತಾನೇ ಮಾರ್ಗದರ್ಶನ ಪಡೆಯುತ್ತಾನೆ. ನಾನು ಧ್ಯಾನ ಮಾಡುವುದನ್ನು ಪ್ರಾರಂಭಿಸಿದಾಗ ನಾನು ಪ್ರಾರಂಭಿಸಿದುದೇನೇ ಇರಲಿ, ಅದೆಲ್ಲವೂ ತಾನೇ ಆರಂಭಗೊಂಡಿತು ಮತ್ತು ನಾನು ಗುರಿ ಮುಟ್ಟುವವರೆಗೂ, ಅದು ಗುರಿಯನ್ನು ತಲುಪುವುದನ್ನು ಕುರಿತು ಏನಾದರೊಂದನ್ನು ಅರುಹುತ್ತಲಿತ್ತು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭಗವಂತನ ಕೃಪೆಯಿಂದ ನಾನು ಗುರಿಯನ್ನು ಸಮೀಪಿಸುತ್ತಲೇ ಇದ್ದೆ. ನಾನು ಏನನ್ನು ಪ್ರಾರಂಭಿಸಿದ್ದೆನೆಂದು ದೇವರೇ ಬಲ್ಲ; ಮತ್ತು ನಾನೂ ಹೇಳಲು ಸಂಕೋಚಪಡುತ್ತೇನೆ. ಅದನ್ನು ಹೇಳುವ ಸಂದರ್ಭ ಒಂದು ವೇಳೆ ಬಂದರೆ, ಆಗ, ಅಭ್ಯಾಸಿಯು ಅದನ್ನು ಪೂರ್ಣವಾಗಿ ಅನುಷ್ಠಾನದಲ್ಲಿ ತರಲು ಅಸಮರ್ಥನಾಗುತ್ತಾನೆ. ನಿನ್ನ 'ಮೃತ–ಸದೃಶ' ಸ್ಥಿತಿಯ ಬಗ್ಗೆ ನೀನು ಬರೆದಿದ್ದೀಯೆ, ವಾಸ್ತವವಾಗಿ ಪ್ರತಿಯೊಬ್ಬನೂ ಪಡೆಯಲು ಪ್ರಯತ್ನಿಸಬೇಕಾದ ಸ್ಥಿತಿ ಅದೇ. ನಿಜವಾದ ಆಧ್ಯಾತ್ಮಿಕತೆ ಆರಂಭವಾಗುವುದು ಇಲ್ಲಿಂದಲೇ. ಅ.... ಆ.... ಇ.... ಈ.... ಕಲಿಯುವುದು ಆರಂಭವಾಗುವುದೂ ಇಲ್ಲಿಂದಲೇ. ಅಲ್ಲಲ್ಲ ! ಮೃತ–ಸದೃಶ ಸ್ಥಿತಿಯ ವಿಚಾರವೂ ಏಳಬಾರದು. ಆಗ ನಿಜವಾದ ಆಧ್ಯಾತ್ಮಿಕತೆಯ ಅ, ಆ, ಇ, ಈ ಅಕ್ಷರಮಾಲೆ ಇಲ್ಲಿಂದ ಶುರುವಾಗುವುದು,

ಸ್ವಾಮೀ ವಿವೇಕಾನಂದರ ಆದೇಶ ಇಂತಿದೆ.

"*ಇದೊಂದು ಉನ್ನತ ವಿಚಾರ, ಪುತ್ರಿ, ಈ ಹಂತದಲ್ಲಿ ಜನರು ಆಧ್ಯಾತ್ಮಿಕತೆಯನ್ನು (ಸಾಧನೆಯನ್ನು) ಕೊನೆಗೊಳಿಸುತ್ತಾರೆ. ಆದರೆ ಅವನು (ರಾಮಚಂದ್ರ) ಪ್ರಾರಂಭಗೊಳಿಸುತ್ತಾನೆ. ಈ ವಿಚಾರ ಸರಿ ಇದೆ, ಅಂಥ ವ್ಯಕ್ತಿಯನ್ನು ನೀನೆಲ್ಲಾದರೂ ಕಾಣಬಲ್ಲೆಯೇನು ? ಜನರು ನಗಬಹುದು. ಇದು ಎಲ್ಲ ಚಟುವಟಿಕೆಗಳ ಅಂತ್ಯ; ಆದರೆ, ನಿಜಕ್ಕೂ ಇದು ಆಧ್ಯಾತ್ಮಿಕತೆಯ ಆರಂಭ.*"

'*ನಾನು ಅಭ್ಯಾಸ (ಸಾಧನೆ)ಕ್ಕಿಂತ ಮೇಲಿರುವೆನೆಂದು ಕಂಡು ಬರುತ್ತದೆ*' ಎಂದು ನೀನು ಬರೆದಿರುವುದು ಪೂರ್ಣವಾಗಿ ಸರಿ ಇದೆ. ಉಳಿದ ಉದ್ದೇಶಗಳನ್ನು ಒಂದು ವ್ಯವಸ್ಥೆಗೆ ತರುವಂತಹ ಉದ್ದೇಶವಾಗಿ ಸಾಧನೆಯನ್ನು ತೆಗೆದುಕೊಳ್ಳಬೇಕು. ಅದು ಇದಕ್ಕಿಂತ ಹೆಚ್ಚಿನದೇನೂ ಅಲ್ಲ. ಯಾವುದೊಂದು ವಸ್ತುವು ವ್ಯವಸ್ಥಿತ ಕ್ರಮದಲ್ಲಿ ಬಂದಾಗ ಅದು ಸಮರ್ಪಕವಾಗಿ ಕಾರ್ಯಗೈಯುತ್ತದೆ. 'ಲಯಾವಸ್ಥೆ'ಯನ್ನು

P-4-Books-PM-7-Anantyatre-39



ಪಡೆಯತಕ್ಕದ್ದಿದೆ; 'ಸಾಮೀಪ್ಯ', 'ಸಾಲೋಕ್ಯ', 'ಸಾರೂಪ್ಯ' ಮತ್ತು 'ಸಾಯುಜ್ಯ' ಇವೆಲ್ಲವೂ ಅದರ ಹಂತಗಳು. ಇವೆಲ್ಲವನ್ನೂ ನಾನು ಬಯಸುತ್ತೇನೆ. ಆದರೆ ಅದು ಬರುತ್ತಿರುವ ಶುಭ ಸಮಾಚಾರ ಇನ್ನೂ ನನಗೆ ತಲುಪಿಲ್ಲ. ನಿನ್ನಲ್ಲಿ ನಾನು ಈ 'ಮೃತ–ಸದೃಶ' ಸ್ಥಿತಿಯನ್ನು (ಮುರ್ದಾಪನಾ), ನನ್ನ ಜೀವನದಲ್ಲಿಯೇ ಕಾಣುತ್ತಿದ್ದೇನೆ; ಅದಕ್ಕೋಸ್ಕರ ಭಗವಂತನಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಹಂತದವರೆಗೆ ತಲುಪಿದ ಮೇಲೆ, ಬಂಧನಗಳಿಂದ ಬಿಡುಗಡೆಯಾಗುತ್ತದೆ. ವಾಸ್ತವವಾಗಿ ಈ ಸ್ಥಿತಿಯು ನಮ್ಮ ನಿಯಂತ್ರಣಕ್ಕೆ ಮೀರಿದ್ದಿದೆ; ಇದೊಂದು ದೈವೀ ವರ (ಅನುಗ್ರಹ). 'ಶರೀರದ ಪ್ರತಿಯೊಂದು ಕಣ–ಕಣವೂ ಕರಗಿ ಹರಿಯುತ್ತಿದೆ' ಎಂದು ನೀನು ಬರೆದಿದ್ದೀಯೆ. ಈ ಅನಿಸಿಕೆ ಸರಿ ಇದೆ. ಮಳೆ ಬಂತೆಂದರೆ ಗಿಡಮರಗಳ ಮೇಲಿನ ಧೂಳು ತೊಳೆದುಹೋಗುತ್ತದೆ. ಆದರೆ ಈ ವರ್ಷಣೆ ಎಂಥದಿದೆ ಎಂದರೆ (ಪ್ರಾಣಾಹುತಿ) ಅದು ಪ್ರತಿಯೊಂದು ಕಣದಲ್ಲಿಯೂ ಒಳಸೇರಿಕೊಳ್ಳುತ್ತದೆ ಮತ್ತು ಎಲ್ಲ ಅವಾಂಛಿತ ವಸ್ತುಗಳೆಲ್ಲ ಬೇರ್ಪಟ್ಟು, ಅದರ ತೇಜಸ್ಸು ಮತ್ತು ನೈಜತೆ (ಮೂಲ ಸ್ಥಿತಿ)ಯನ್ನು ಮರಳಿ ತರುತ್ತದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೧ **ಪತ್ರ ಸಂಖ್ಯೆ – ೧೬೯** ಷಾಹಜಹಾನಪುರ
೩೦–೦೯–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ನಿನ್ನ ಸ್ಥಿತಿಯು 'ಆರೋಹಣ' (ಉರೂಜ಼್) ಮತ್ತು 'ಅವರೋಹಣ' (ನುಜ಼ೂಲ್) ಆಗಿದೆ. ಒಬ್ಬ ವ್ಯಕ್ತಿ ಮೇಲಕ್ಕೆ ಆರೋಹಿಸಿದಂತೆಯೇ ಅವನ ದೃಷ್ಟಿಯು ಕೆಳಕ್ಕೆ 'ಅವರೋಹಣ' ಮಾಡುತ್ತದೆ. 'ಅವರೋಹಣ' (ನುಜ಼ೂಲ್) ಎಂದರೆ ವಿನಮ್ರತೆಯ ಸ್ಥಿತಿ ಮತ್ತು ಶೂನ್ಯತೆ (ನಾನು ಎಂಬುದು ಕಳೆದುಹೋಗುವುದು). ನಿನ್ನನ್ನು ಬಾಧಿಸುತ್ತಿರುವ ವಿಚಾರಗಳು ನಿನ್ನವಲ್ಲ; ಅವು ವಾತಾರವಣದಲ್ಲಿ ತೇಲಾಡುತ್ತಿರುವಂಥವು. ಈಗಷ್ಟೇ ನಿನ್ನ ಇನ್ನೊಂದು ಪತ್ರ ಬಂದಿತು. ಅದರ ವಿವರವಾದ ಉತ್ತರವನ್ನು ನಾನು ಅನಂತರ ಬರೆಯುತ್ತೇನೆ. ನಿನ್ನ ಸ್ಥಿತಿಯು, ಗುರಿಯ ಚರಮ ಸ್ಥಿತಿಯನ್ನು ತಲುಪುವ ಚಿಹ್ನೆಗಳನ್ನು ಮತ್ತು ಭರವಸೆಯನ್ನು ತೋರಿಸುತ್ತದೆ.

ಅಮ್ಮಾಜಿಯವರಿಗೆ ನನ್ನ ನಮಸ್ಕಾರ ತಿಳಿಸು. ಕಿರಿಯ ಸೋದರ–ಸೋದರಿಯರಿಗೆ ನನ್ನ ಪ್ರೀತಿಯ ನೆನಹುಗಳು.

ನಿನ್ನ ಹಿತೈಷಿ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೪೨ **ಪತ್ರ ಸಂಖ್ಯೆ – ೧೭೦** ಷಾಹಜಹಾನಪುರ
೦೧–೧೧–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಾನು ಇಂದು ಮೊದಲಿಗಿಂತ ವಾಸಿಯಾಗಿದ್ದೇನೆ. ನಿನ್ನ ೧೭ ಸೆಪ್ಟೆಂಬರ್ ೧೯೫೧ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. 'ನಾನು ನನ್ನ ಜೀವಿತಾವಧಿಯಲ್ಲಿಯೇ ಮುಕ್ತಿಯನ್ನು ಅನಿಭವಿಸುತ್ತಿದ್ದೇನೆ' ಎಂದು ನೀನು ಬರೆದಿದ್ದೀಯೆ. ಇದು ಒಂದು ಒಳ್ಳೆಯ ಸ್ಥಿತಿ. ಈ ಸ್ಥಿತಿಯು ತನ್ನ ಚರಮ ಸೀಮೆಯನ್ನು ಮುಟ್ಟುವುದು ಯಾವ ರೀತಿ ಎಂದರೆ ಅದು ಸಂವೇದನೆಗೆ ಸಿಗಲಾರದು. ಅದಕ್ಕೆ 'ಜೀವನ್ಮುಕ್ತ ಸ್ಥಿತಿ' ಎಂದು ಕರೆಯಲಾಗುತ್ತದೆ; ಇದು ಅದರ ಆರಂಭ. ಅದು ಎಷ್ಟು ಬೇಕಾದರೂ ಬೆಳೆಯಬಹುದು. ಆದರೆ ನನ್ನ ಆಲೋಚನೆಗಳ ಬಗ್ಗೆ ಏನು ಹೇಳಲಿ; ಯಾವ ಹಂತದಲ್ಲಿಯೂ ಅವುಗಳಿಗೆ ಸಂಪೂರ್ಣ ತೃಪ್ತಿ ಎಂಬುದೇ ಇಲ್ಲ. ಒಬ್ಬ ಅಭ್ಯಾಸಿ 'ಜೀವನ್ಮೋಕ್ಷ' ಸ್ಥಿತಿ ಪಡೆದನೆಂದು ಅಂದುಕೊಳ್ಳೋಣ ಆಗ ಕೂಡ ಅದರಾಚೆಗೆ ಅನೇಕ ಸ್ಥಿತಿಗಳುಂಟು. ನಮ್ಮ ಪೂಜ್ಯ ಶ್ರೀ ಲಾಲಾಜಿಯವರು ನನಗೆ ಒಮ್ಮೆ ಆ ಸಾಮರ್ಥ್ಯದ (Power) ಒಂದಿಷ್ಟು ನೋಟವನ್ನು ಒದಗಿಸಿದ್ದರು. ನಾನು ಸಂಪೂರ್ಣ ಸ್ತಂಭೀಭೂತನಾಗಿದ್ದೆ. ಆದರೆ ಈಗ ನನಗೆ ಏನಾಗಿದೆಯೆಂಬುದು ಭಗವಂತನಿಗೇ ಗೊತ್ತು, ನಾನು ನನ್ನದೇ ಶಕ್ತಿಯ ಬಗ್ಗೆ ಸಂಪೂರ್ಣ ಅಜ್ಞನಾಗಿದ್ದೇನೆ. ಕೆಲವೊಮ್ಮೆ ಲಾಲಾಜಿ ಸಾಹೇಬರಿಂದ ನನಗೆ ಬೆಳಕು ದೊರೆಯುತ್ತದೆ, ಮತ್ತು ನಾನು ಅನಂತದಲ್ಲಿ ಈಜುತ್ತಿದ್ದೇನೆ ಎಂದು ಅವರು ಹೇಳುತ್ತಾರೆ. ನಿನ್ನ ಅನೇಕ ಒಳ್ಳೆಯ ಸ್ಥಿತಿಗಳನ್ನು ನಿನ್ನ ಪತ್ರಗಳಲ್ಲಿ ಕಂಡಾಗ ನಾನು ಅತೀವ ಹರ್ಷಿತನಾಗುತ್ತೇನೆ. ನಿಜವೇನೆಂದು ನೀನು ನನ್ನನ್ನು ಕೇಳಿದರೆ, ಇದೆಲ್ಲವೂ ನಿನ್ನ ಪರಿಶ್ರಮದ ಫಲ. ನಾನು ನಿನ್ನ ಮೇಲೆ ಏನೂ ಪರಿಶ್ರಮ ತೆಗೆದುಕೊಂಡಿಲ್ಲ. ಇತರರ ಮೇಲೆ ನಾನು ಎಷ್ಟೇ ಪರಿಶ್ರಮ ತೆಗೆದುಕೊಂಡರೂ ಇಂಥ ತೃಪ್ತಿಕರ ಫಲ ನನಗೆ ಸಿಗುತ್ತಿಲ್ಲ ಎಂಬುದು ನನ್ನ ಸಾಮರ್ಥ್ಯವಾಗಿದೆ. ಇದೆಲ್ಲವೂ (ನಿನ್ನದೆಲ್ಲವೂ) ನನ್ನ ಸಾಮರ್ಥ್ಯದ ಫಲ ಎಂದು ನೀನು ಹೇಳುವುದಾದರೆ, ಇತರರಲ್ಲಿ ಅಂಥದೇ ಸ್ಥಿತಿಗಳು ಏಕೆ ಬೆಳೆಯುತ್ತಿಲ್ಲ ? ಯಾರೊಬ್ಬರ ಸ್ವಂತ ಪರಿಶ್ರಮವೇ ಫಲವನ್ನೀಯುವುದು. ನೀನು ಜೀವನ್ಮೋಕ್ಷ ಸ್ಥಿತಿಯನ್ನು ಪಡೆದೆಯೆಂಬುದು ನನಗೆ ಸಂತೋಷ. ಆದರೆ ಅದರ ಪರಿಪೂರ್ಣ ಸ್ಥಿತಿಯು ಆಧ್ಯಾತ್ಮಿಕತೆಯ ಎ. ಬಿ. ಸಿ. ಡಿ. ಆಗಿದೆ. 'ಲಘುತ್ವದ ಅನುಭವವೂ ನನಗೆ ಆಗುತ್ತಿಲ್ಲ' ಎಂದು ನೀನು ಬರೆದಿದ್ದೀಯೆ. ಅದರ ಉತ್ತರವನ್ನು ಈ ಮೇಲಿನ ಸಾಲುಗಳಲ್ಲಿ ನಾನು ಕೊಟ್ಟಿದ್ದೇನೆ. ನಿನ್ನ 'ಅಸ್ತಿತ್ವ'ದ ಅಥವಾ 'ನಾಸ್ತಿತ್ವ'ದ ಅನುಭವವೂ ನಿನಗೆ ಆಗುತ್ತಿಲ್ಲವೆಂದೂ ಬರೆದಿದ್ದೀಯೆ. ಅದು ಲಯಾವಸ್ಥೆಯ ತುಂಬಾ ಎತ್ತರದ ಸ್ಥಿತಿ (ಹಂತ). ಪ್ರತಿಯೊಬ್ಬನ ಪ್ರಗತಿಯನ್ನು ಹಾರೈಸುವುದು ಒಂದು ಉತ್ತಮ ವಿಚಾರ. ಅದೊಂದು ರೀತಿಯ ಸೇವೆ. ಅಭ್ಯಾಸಿಯು ಪ್ರಗತಿಹೊಂದುತ್ತ ಹೋದ

P-4-Books-PM-7-Anantyatre-40



ಹಾಗೆ ಈ ಭಾವನೆಯೂ ವರ್ಧಿಸುತ್ತ ಹೋಗುತ್ತದೆ. ನನ್ನ ಪರಿಸ್ಥಿತಿಯೂ ಅಂತೆಯೇ ಇದೆ. ವಿಸ್ತಾರದ ಅನುಭವವಾಗುತ್ತಿದೆಯೆಂದರೆ, ನಾವು ವಿರಾಟ್ ದೇಶದಲ್ಲಿ ಪಯಣಿಸುತ್ತಿದ್ದೇವೆ ಎಂದು ಅರ್ಥ. ಈ ಹಂತದಿಂದಲೆ ನಮ್ಮ ವಿಸ್ತಾರದ ಅನುಭವವಾಗುವುದು ಪ್ರಾರಂಭವಾಗುತ್ತದೆ; ಮತ್ತು ಮುಂದುವರಿಯುತ್ತ ಹೋದಂತೆ ವಿಸ್ತಾರಗೊಳ್ಳುವುದು ಇನ್ನೂ ಬದಲಾವಣೆಗೊಳ್ಳುತ್ತ ಹೋಗುತ್ತದೆ. ಹಾಗಿದ್ದರೂ ಈ ಸ್ಥಿತಿಯು ನಿನಗೆ ತನ್ನಿಂದ ತಾನೇ ಪ್ರಾಪ್ತವಾಗುವವರೆಗೆ ಈ ಸ್ಥಿತಿಯ ಮೇಲೆ ನೀನು ನಿನ್ನ ಚಿತ್ತವನ್ನು ಗಟ್ಟಿಗೊಳಿಸಿ ಕಟ್ಟಿ ನಿಲ್ಲಿಸುವುದಿಲ್ಲ ಎಂದು ತಿಳಿದು ನಾನು (ಇದನ್ನು) ಬರೆಯುತ್ತಿದ್ದೇನೆ. ಅಭ್ಯಾಸಿಯು ಈಶ್ವರೀಯ ದಶೆಯಲ್ಲಿ (Godly condition) ನೆಲೆಸುವವರೆಗೂ ಸ್ಥಿತಿಯು ಕ್ರಮೇಣ ಪರಿವರ್ತನೆಗೊಳ್ಳುತ್ತ ಹೋಗುತ್ತದೆ. ಈ ಸ್ಥಿತಿಯನ್ನು ದಾಟಿದನಂತರ ವಿಸ್ತಾರವು ಅನುಭವಕ್ಕೆ ಬರುವುದಿಲ್ಲ. ಅದು ಬೇರೆಯದೇ ಆಗಿ ಬದಲಾಗುತ್ತದೆ. ಈ ಹಂತದವರೆಗೆ ಬಂಧನ ಇರುತ್ತದೆ. ನಾವು ಈಶ್ವರನನ್ನು ಕುರಿತು ಮೊರೆಯಿಡುತ್ತಿರುವವರೆಗೂ ಅದು ಉಳಿದಿರುತ್ತದೆ. ಜೀವನ್ಮೋಕ್ಷ ಸ್ಥಿತಿಯು ಇದಕ್ಕೂ ಮೊದಲೇ ಬರುತ್ತದೆ. ಅದು ಸಾಮಾನ್ಯವಾಗಿ ತೋರಿಬರುವಷ್ಟು ದೊಡ್ಡ ಸಂಗತಿ ಅಲ್ಲ. ನಾವು ಜೀವನದುದ್ದಕ್ಕೂ ಭಗವಂತನ ಸ್ಮರಣೆ ಮಾಡುತ್ತೇವೆ. ಆದರೆ ಅವನು ನಮ್ಮ ಬಂಧನದ ಕಾರಣವಾಗುತ್ತಾನೆ. ಸಮಾಜ ನನ್ನನ್ನು ನಿರೀಶ್ವರವಾದಿಯೆಂದು ತಿಳಿಯಬಹುದು. ಆದರೆ, ನಾನು 'ಅವನಿಂದ' (ಭಗವಂತನಿಂದ) ಒಂದು ಕ್ಷಣವೂ ಅಗಲಿ ಇಲ್ಲ. ಆದ್ದರಿಂದ, ನನ್ನನ್ನು ನಿರೀಶ್ವರವಾದಿಯೆಂದು ಕರೆಯುವುದು ತಪ್ಪಾಗುವುದು. ನಿನ್ನ 'ವಿಸ್ತಾರದ' ಸ್ಥಿತಿಯಲ್ಲಿ ಇನ್ನೂ ಬಹಳಷ್ಟು ನ್ಯೂನತೆಗಳುಂಟು. ಇನ್ನೂ ಬೆಳೆಯಬೇಕಾದುದೊಂದಿದೆ; (ಆದರೆ) ಅದರ ಬಗ್ಗೆ ನಾನು ನಿನಗೆ ಮುಂಚಿತವಾಗಿ ಬರೆಯುವುದಿಲ್ಲ.

ಈಗ ಅಕ್ಟೋಬರ್ ೨೬ರ ನಿನ್ನ ಪತ್ರಕ್ಕೆ ಉತ್ತರಿಸುತ್ತೇನೆ. ನಿನ್ನಲ್ಲಿ ಏಕಾಗ್ರತೆಯಿದೆ, ಮತ್ತು ನಿನಗೂ ಅರಿವಿಲ್ಲದಂತೆಯೇ ನಿನ್ನ ಚಿತ್ತವು ಸದ್ಗುರುವಿನೊಂದಿಗೆ ಸಂಲಗ್ನವಾಗಿರುತ್ತದೆ; ಆದ್ದರಿಂದ ಯಾರಾದರೂ ದೊಡ್ಡ ಸ್ವರದಲ್ಲಿ ಮಾತನಾಡಿದರೆ ಒಂದು ರೀತಿಯ ಆಘಾತವಾದಂತಾಗುತ್ತದೆ; ಅದರ ಪರಿಣಾಮವಾಗಿ ಒಂದಿಷ್ಟು ತೊಂದರೆ ಉಂಟಾಗುತ್ತದೆ. ರಕ್ತಪಾತ ಮತ್ತು ವಿನಾಶವನ್ನು ಕುರಿತು ನೀನು ಅನುಭವ ಪಟ್ಟಿದುದು (ಕಂಡದ್ದು) ಭವಿಷ್ಯತ್ತಿನಲ್ಲಿ ಎಲ್ಲವೂ ಘಟಿಸುವುದು. ವಿನಾಶಕಾರ್ಯದ ಹೊರತಾಗಿ ಜಗತ್ತಿನಲ್ಲಿ ಸುಧಾರಣೆಯಾಗದು. ಕೇವಲ ಮೂರು–ನಾಲ್ಕು ದಿನಗಳ ಹಿಂದಷ್ಟೇ ನಿನ್ನನ್ನು ಮುಂದಿನ ಉನ್ನತ ಹಂತದಲ್ಲಿ ನಾನು ನಿಲ್ಲಿಸಿದೆ. ನಾನು ಆಗಾಗ ಈ ರೀತಿಯ ಅಲ್ಪ ಸಹಾಯ ಮಾಡುತ್ತಿರುತ್ತೇನೆ. ಯಾವುದೇ ಹಂತದಲ್ಲಿ ಸಂಪೂರ್ಣ ವಿಸ್ತಾರವಾಗಿರುವುದನ್ನು ನಾನು ಕಂಡಾಗ, ಮತ್ತು ಆ ಸ್ಥಿತಿಯು ಮುಂದಕ್ಕೆ ಸಾಗುವುದರಲ್ಲಿ ವಿಫಲವಾದಾಗ, ನಾನು ಒಂದು ಮುನ್ನಡೆಯ ನೂಕು (ಆಘಾತ) ಕೊಡುತ್ತೇನೆ.



ಪೂಜ್ಯ ಮಾತಾಜಿಯವರಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೩ **ಪತ್ರ ಸಂಖ್ಯೆ – ೧೬೩** ಷಾಹಜಹಾನಪುರ
೧೮–೧೧–೧೯೫೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ತಲುಪಿತು. ನೀನು ನಿನ್ನ ಸ್ಥಿತಿಯ ಬಗ್ಗೆ ಬರೆಯುವಾಗ, ನಿನ್ನ ಸ್ಥಿತಿಯನ್ನು ಕುರಿತು ಬರೆಯುತ್ತಿರುವಿಯೋ ಅಥವಾ ನನ್ನ ಸ್ಥಿತಿಯನ್ನು ಕುರಿತೋ ಎಂದು ನನಗೆ ಆಶ್ಚರ್ಯವಾಯಿತು. ಆ ಬಗ್ಗೆ ನಾನು ಯೋಚಿಸಿದಾಗ ನಾನು ಕೆಲಕಾಲ ಹಿಂದೆ ಅನುಭವಪಟ್ಟ, ನನ್ನಲ್ಲಿ ಅಡಗಿದ್ದ ಸ್ಥಿತಿಯೇ ನಿನ್ನಲ್ಲಿ ಈಗ ಪ್ರಕಟಗೊಳ್ಳುತ್ತಿರುವುದು ಕಂಡುಬಂದಿತು. ನನ್ನ ಸ್ಥಿತಿಯು ಬೇರೆಡೆ ಎಲ್ಲೋ ಪುನರಾವರ್ತಿತವಾಗುತ್ತಿರುವುದಕ್ಕೋಸ್ಕರ ಗುರುಮಹಾರಾಜರಿಗೆ ಧನ್ಯವಾದ ಸಲ್ಲಬೇಕು. ಪ್ರತಿಯೊಂದು ಬಿಂದುವಿನ, ಪ್ರತಿಯೊಂದು ರೋಮ–ರೋಮಗಳಲ್ಲಿಯ ಸ್ಥಿತಿ ನಿನ್ನಲ್ಲಿ ಈಗ ತೆರೆದುಕೊಳ್ಳುತ್ತಿದೆ. ಅದರ ಮೇಲೆ ಪ್ರಭುತ್ವ ಹೊಂದುವುದೆಂದರೆ ಇದೇ ಆಗಿದೆ. ಅದು ಅವತಾರಗಳಲ್ಲಿ ಕಂಡುಬರುತ್ತದೆ. ಅದು ಅವರ ನಿಜವಾದ ಸ್ಥಿತಿಯ ಒಂದು ಭಾಗಾಂಶ ಮಾತ್ರ. ಭಗವಾನ್ ಕೃಷ್ಣನು ತನ್ನ ಪ್ರತಿಯೊಂದು ಕಣ–ಕಣದ ಮೇಲೆ (ಬಿಂದುವಿನ ಮೇಲೆ) ಪ್ರಭುತ್ವ ಹೊಂದಿದ್ದನು. ಶ್ರೀ ರಾಮಚಂದ್ರನು (ಆಯೋಧ್ಯಾ) ಅವತಾರಿಯಾಗಿದ್ದರೂ, ಈ ಪ್ರಭುತ್ವ ಅವನಿಗಿರಲಿಲ್ಲವೆಂಬುದು ಖೇದದ ಸಂಗತಿ. ಇವೆರಡೂ ಅವತಾರಗಳನ್ನು ನಾನು ಹೋಲಿಸಿ ನೋಡಿದರೆ, ಇವೆರಡರಲ್ಲಿ ಮಹದಂತರವಿರುವುದು ಕಂಡುಬರುತ್ತದೆ. ಸಂಕಲ್ಪ ಶಕ್ತಿಯಿಂದ ವಿನಾಶಕಾರ್ಯಮಾಡುವ ಸಾಮರ್ಥ್ಯ ಶ್ರೀರಾಮಚಂದ್ರನಿಗಿರಲಿಲ್ಲ. ಆದರೆ ಶ್ರೀಕೃಷ್ಣ ಈ ಸಾಮರ್ಥ್ಯದಿಂದ ಪರಿಪ್ಲುತನಾಗಿದ್ದನು. ನಾನೊಂದು ವಿಚಿತ್ರ ಸಂಗತಿಯನ್ನು ಬರೆಯುತ್ತಿದ್ದೇನೆ ಏನೆಂದರೆ, ಶ್ರೀ ಕೃಷ್ಣನಿಗೆ ದೇಹ ಪ್ರಜ್ಞೆಯಿರಲಿಲ್ಲ; ಆದರೆ ಅಂಥ ಸ್ಥಿತಿ ಶ್ರೀ ರಾಮಚಂದ್ರನದಾಗಿರಲಿಲ್ಲ. ನಾವು ಶ್ರೀಕೃಷ್ಣನನ್ನು ಅನುಸರಿಸುತ್ತೇವೆ; ಆ ಕಾರಣವೇ ಅವನಿಗೆ ಸಂಬಂಧಿಸಿದ ಲಯಾವಸ್ಥೆಯನ್ನು ನಾವು ಪಡೆಯುತ್ತೇವೆ. ನನ್ನ ಹಿಂದಿನ ಪತ್ರದಲ್ಲಿ ಜೀವನ್ಮೋಕ್ಷ ಸ್ಥಿತಿಯ ಬಗ್ಗೆ ಬರೆಯುತ್ತ ಅದರ ಕೆಲವು ಅಂಶಗಳು ನಿನಗೆ ಲಭ್ಯವಾಗಿವೆ ಎಂದು ಬರೆದಿದ್ದೆ. ಈಗ ಅದು ಮತ್ತೂ ಮುಂದುವರಿದಿದೆ. ಭಗವದಿಚ್ಛೆ ಇದ್ದರೆ ನೀನು ಖಂಡಿತವಾಗಿ ಆ ಸ್ಥಿತಿಯ ಅನುಭವ ಹೊಂದುತ್ತೀಯೆ. ಅಲ್ಲಿ ಒಂದು ಗ್ರಂಥಿ (ಗಂಟು) ಇರುವಂತೆ ತೋರುತ್ತದೆ. ಅದು ಕರಗಿ ಹೋದಾಗ (ಭಗವದಿಚ್ಛೆಯಿದ್ದರೆ) ಅಂಥ ಸ್ಥಿತಿಯು ನಿನ್ನಲ್ಲಿ ಬೆಳೆದು ಬರುತ್ತದೆ. ನನ್ನದೇ ಸಾಮರ್ಥ್ಯದಿಂದ ನಾನು ಆ ಗ್ರಂಥಿಯನ್ನು ಏಕೆ ಕರಗಿಸಿ ಅಥವಾ ಭೇದಿಸಿ

P-4-Books-PM-7-Anantyatre-41



ಬಿಡುವುದಿಲ್ಲವೆಂಬುದು ದೇವರಿಗೇ ಗೊತ್ತು. ಆ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ, ನಾನು ಹಾಗೆ ಮಾಡುತ್ತಿದ್ದೆನೇನೋ ! ನಿನ್ನ ಸಂಕಲ್ಪಶಕ್ತಿ, ಅಭ್ಯಾಸ (ಸಾಧನೆ)ಗಳಿಂದ ನೀನು ಮುಂದುವರಿಯಬೇಕು ಮತ್ತು ಆ ಮೂಲಕ ನೀನು ಅದನ್ನು ಭೇದಿಸಬೇಕೆಂದು ನಾನು ಬಯಸುತ್ತೇನೆ. ನಾನು ನಿನಗೆ ಖಂಡಿತ ಸಹಾಯ ನೀಡುತ್ತೇನೆ; ಅದು ನನ್ನ ಕರ್ತವ್ಯ.

ಮಾತಾಜಿಯವರಿಗೆ ನನ್ನ ವಂದನೆಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೪ **ಪತ್ರ ಸಂಖ್ಯೆ – ೧೮೧** ಷಾಹಜಹಾನಪುರ
೧೫–೦೧–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಎರಡೂ ಪತ್ರಗಳು ತಲುಪಿವೆ. ನೀನು ಬರೆದ ಎಲ್ಲ ಸ್ಥಿತಿಗಳೂ 'ಲಯಾವಸ್ಥೆ'ಯ ವರಗಳಾಗಿವೆ. 'ಲಯಾವಸ್ಥೆ' ಎಷ್ಟು ಚೆನ್ನಾಗಿರುವುದೋ ಅದೇ ಪ್ರಮಾಣದಲ್ಲಿ ಸಾಫಲ್ಯವೂ ಹೆಚ್ಚು. ಉತ್ಕಟ ಪ್ರೇಮ ಮತ್ತು ನಿರಂತರ ಸ್ಮರಣೆಗಳಿಂದ ಲಯಾವಸ್ಥೆ ಬೆಳೆಯುತ್ತದೆ. ಅದಕ್ಕೆ ಕೆಲವು ಕಾರ್ಯವಿಧಾನಗಳೂ ಉಂಟು; ಆದರೆ ಅವುಗಳ ಬಗ್ಗೆ ಹೇಳುವುದು ಸೂಕ್ತವೆಂದು ನನಗನಿಸುವುದಿಲ್ಲ. ದೀರ್ಘ ಕಾಲಾವಧಿಯಲ್ಲಿ ನಾನು ಅದನ್ನು ಇಬ್ಬರು–ಮೂವರು ಅಭ್ಯಾಸಿಗಳಿಗೆ ಮಾತ್ರವೇ ಹೇಳಿದ್ದೆ; ಆದರೆ ಅವರ ಪೈಕಿ ಕೇವಲ ಒಬ್ಬನು ಕೆಲಮಟ್ಟಿಗೆ ಅದನ್ನು ಅನುಷ್ಠಾನಗೊಳಿಸುತ್ತಿದ್ದಾನೆ. ಬೇರೊಬ್ಬರು ಅದನ್ನು ಗಮನಕ್ಕೆ ತಾರದೆಯೆ, ಅಭ್ಯಾಸಿಯು ಸ್ವತಃ ತಾನೇ ಅದರ ಅರಿವು ಪಡೆಯಬೇಕಾದ ವಿಷಯ ಅದಾಗಿದೆ. ಪ್ರಾಯಶಃ ಲಾಲಾಜಿ ಸಾಹೇಬರು ಯಾರಿಗೂ ಅದರ ಬಗ್ಗೆ ಹೇಳಿರಲಿಕ್ಕಿಲ್ಲ. ಆದರೆ, ಅದನ್ನು ಅನುಸರಿಸಿ ಆ ಪ್ರಕಾರ ನಡೆದುಕೊಂಡವರಿದ್ದರು. ಅದಲ್ಲದೆ, ನಾನು ಒಂದು ವೇಳೆ ಏನಾದರೂ ಸುಳಿವು ಕೊಟ್ಟರೂ, ಅದನ್ನು ಯಾರೂ ಗ್ರಹಿಸಲಾರರು. ಕಳೆದ ಬಸಂತಪಂಚಮಿ ಉತ್ಸವದಲ್ಲಿ ನಾನೊಂದು ಲೇಖನ ಬರೆದಿದ್ದೆ. ಅದರ ಸಾರಾಂಶವು ಇದೇ (ಲಯಾವಸ್ಥೆ) ಆಗಿತ್ತು. ಆದರೆ ಅದನ್ನು ಕೇಳಿದ ನಂತರ ಸುಮಾರು ಒಂದು ವರ್ಷವೇ ಆಗುತ್ತಿದ್ದರೂ, ಯಾವೊಬ್ಬನೂ ಅದನ್ನು ಮತ್ತೆ ಸ್ಮರಣೆಗೆ ತಂದುಕೊಂಡಿಲ್ಲ. ನಿಜ ಏನೆಂದರೆ ನಾವು ಅದನ್ನು ಜನರ ಮೇಲೆ ಒತ್ತಾಯಪೂರ್ವಕ ತುರುಕುತ್ತಿದ್ದೇವೆ; ಆದರೆ ಕೇವಲ ಒಬ್ಬರಿಗಷ್ಟೆ ಅದರ ಬಗ್ಗೆ ಆಸ್ಥೆ ಉಂಟು. ಯಾರಾದರೂ ಅದರಿಂದ ಏನು ಪಡೆಯುತ್ತಾರೆಂಬುದು ಅವರನ್ನು ಅವಲಂಬಿಸಿದೆ. ಲಾಲಾಜಿ ಸಾಹೇಬರು ತಮ್ಮ ಮಹಾಸಮಾಧಿಗೆ ಕೆಲವು



ದಿನಗಳ ಮೊದಲು, 'ಅಭ್ಯಾಸಿಗಳಲ್ಲಿ ಲಯಾವಸ್ಥೆಯೂ ಕೂಡ ಇನ್ನೂ ಹುಟ್ಟಿಲ್ಲ. ಮತ್ತೆ, ಲಯಾವಸ್ಥೆಯ ಹೊರತು ಜೀವನದ ನಿಜವಾದ ಮಾರ್ಗ ಕಾಣಸಿಗದು' ಎಂದು ನನಗೆ ಹೇಳಿದ್ದರು. ಅದಕ್ಕೆ 'ಫನಾಯಿಯತ್' ಎಂದೂ ಕರೆಯುತ್ತಾರೆ. ಅದರ ಅರ್ಥ 'ಅದಕ್ಕೋಸ್ಕರ ಸಾಯುವುದು (ಹಪಹಪಿಸುವುದು)' ಎಂದಾಗುತ್ತದೆ. ನಿನ್ನ ಕುಟುಂಬದಲ್ಲಿ ಇದು (ಲಯಾವಸ್ಥೆ) ಅದೆಂತು ತುಂಬಿಕೊಳ್ಳುತ್ತಿದೆ ! ಅದಕ್ಕೆ ಕಾರಣವೇನೆಂದರೆ, ಅಭ್ಯಾಸಿಗಳ ಪೈಕಿ, ದೇವರ ದಯೆಯಿಂದ ನಿನ್ನಲ್ಲಿ ಸಾಕಷ್ಟು ಮಟ್ಟದಲ್ಲಿ ಲಯಾವಸ್ಥೆ ಕಂಡುಬರುತ್ತದೆ. ನಿನ್ನ ನಂತರ ಕೇಸರ್‌ಳ ಸರದಿ. ಇನ್ನೊಬ್ಬನಲ್ಲಿಯೂ ಅದು ಅಲ್ಪ ಪ್ರಮಾಣದಲ್ಲಿ, ಅಂದರೆ ರೂಪಾಯಿಯಲ್ಲಿ ಒಂದೆರಡು ಆಣೆಯಷ್ಟು ಇದೆ. ಬೇರೊಬ್ಬರಲ್ಲಿ ನಗಣ್ಯ ಪ್ರಮಾಣದಲ್ಲಿ (ಒಂದು ಕಾಸಿಗೂ ಕಡಿಮೆಯಷ್ಟು) ಇದ್ದಿರಬಹುದೆಂಬ ಸಂದೇಹ ನನಗಿದೆ. ಮಗಳೆ, ಉಳಿದೆಲ್ಲವರಲ್ಲಿ ಇದುವರೆಗೆ ಸಂಪೂರ್ಣ ಅಭಾವವಿದೆ. ಭವಿಷ್ಯತ್ತಿನಲ್ಲಿ ದೇವರು ಯಾರಿಗೆ ಬೇಕಾದರೂ ಕೊಡಬಹುದು; ಅವನೇ ಸರ್ವೇಶ. ಬ್ರಹ್ಮವಿದ್ಯೆಯ ಶಿಕ್ಷಣವೂ ಅಪರೂಪವಾಗಿದೆ, ಯಾಕೆಂದರೆ, ಹಿಂದಿನ ಕಾಲಗಳಿಗೆ ಹೋಲಿಸಿದರೆ ಅದನ್ನು ಬಯಸುವವರೂ ಕೂಡ ಅಪರೂಪವಾಗಿದ್ದಾರೆ. ಈಗ ನಮ್ಮ ಸಂಸ್ಥೆಯಲ್ಲಿ ಶಿಕ್ಷಣಕ್ಕೂ ಜನರು ಎಷ್ಟು ಕುರುಡರಾಗಿದ್ದಾರೆಂದರೆ, ಅವರಿಗೆ ಅದರಲ್ಲಿ ಶ್ರದ್ಧೆಯೇ ಇಲ್ಲ. ನಿನ್ನ ಕುಟುಂಬದ ಸದಸ್ಯರು ನನ್ನನ್ನು ಬಹುವಾಗಿ ಪ್ರೀತಿಸುತ್ತಾರೆ; ಅಂತೆಯೇ ಅವರು ಲಾಭಾನ್ವಿತರೂ ಆಗುತ್ತಿದ್ದಾರೆ. ಯಾರಲ್ಲಿ ಪ್ರೇಮವಿದೆಯೋ ಅವರು ಲಾಭ (ಪ್ರಯೋಜನ) ಪಡೆಯುತ್ತಾರೆ.

ನಿನ್ನ ಸ್ಥಿತಿಯನ್ನು ಕುರಿತು ನಾನೇನು ಹೇಳಲಿ ? ಭಗವಂತನಿಗೆ ಧನ್ಯವಾದ ಹೇಳುತ್ತೇನೆ. 'ಅಂಥ ಸ್ಥಿತಿ ಒಬ್ಬನ ಸ್ವಂತ ಸಾಮರ್ಥ್ಯಮಾತ್ರದಿಂದ ಉಂಟಾಗದು, ಆದರೆ ಭಗವಂತನು ಯಾರನ್ನು ಮೆಚ್ಚುವನೋ ಅವನಿಗೆ ಅದನ್ನು ಅವನು ಅನುಗ್ರಹಿಸಬಹುದು. ನೀನು ತಲುಪಬೇಕಾದ ಸ್ಥಿತಿ ಇನ್ನೂ ಬಲು ದೂರವಿದೆ. ಭಗವಂತ ಅದನ್ನು ಕರುಣಿಸುತ್ತಾನೆ. ಮೊದಲನೆಯದಾಗಿ ದೈವೀ ಅನುಗ್ರಹವಿಲ್ಲದೆ ನಿನ್ನ ಸದ್ಯದ ಸ್ಥಿತಿಯನ್ನು ಪಡೆಯುವುದೂ ತುಂಬ ಕಠಿಣವೇ; ಮತ್ತು ಯಾರಾದರೂ ಅದನ್ನು ತಲುಪಿದಾಗ, ಅದೇ ಬೇಕಾದುದಕ್ಕಿಂತ ಹೆಚ್ಚು ಎಂದು ಭಾವಿಸತೊಡಗುತ್ತಾನೆ. ಯಾವುದು 'ನಿಜವಾದ ಸ್ಥಿತಿ'ಯೋ ಆ ಶುದ್ಧ ಸ್ಥಿತಿ ಇಲ್ಲಿ ಆರಂಭ ಕೂಡ ಆಗುವುದಿಲ್ಲ. ಒಬ್ಬ ಅಭ್ಯಾಸಿ ಅಲ್ಲಿಗೆ ತಲುಪುವ ಸಾಹಸ ಮಾಡಿದರೂ, ಅದಕ್ಕೂ ಮುಂದೆ ಸ್ವಪ್ರಯತ್ನದಿಂದ ಮುಂದುವರಿಯುವುದು ಅಸಾಧ್ಯವೇ ಸರಿ. ಯಾಕೆಂದರೆ, ತನ್ನ ದೃಷ್ಟಿಯನ್ನು ಪ್ರಪಂಚದಕಡೆಗೆ ತಿರುಗಿಸಿದ ಆ ದೈವೀ ಶಕ್ತಿಯೊಳಕ್ಕೆ ಪ್ರವೇಶಿಸುವುದು ತೀರಾ ಕಷ್ಟ ಸಾಧ್ಯ. (ಅಧೋಮುಖವಾಗಿ ಪ್ರವಹಿಸುತ್ತಿರುವ ಆ ದೈವೀ ಶಕ್ತಿಯ ವಿರುದ್ಧ ಸಾಗುವುದು ಅಸಾಧ್ಯ). ಆ ದೈವೀ ಶಕ್ತಿಯಮೇಲೆ ಪ್ರಭುತ್ವ ಹೊಂದಿದ ಸಮರ್ಥ ಸದ್ಗುರು ಮಾತ್ರವೇ ಅಭ್ಯಾಸಿಯನ್ನು ಅದರಾಚೆಗೆ ನೂಕಿ ಎಸೆಯಬಲ್ಲ. ಪೂಜ್ಯ ಲಾಲಾಜಿ ಮಹಾರಾಜರಿಂದಾಗಿ ಈಯೆಲ್ಲ ಅನುಗ್ರಹ (ವರ)ಗಳೂ ನಮ್ಮ

P-4-Books-PM-7-Anantyatre-42



ಸಂಸ್ಥೆಯಲ್ಲಿ ಲಭ್ಯವಾಗಿವೆ; ಅವರು ತಮ್ಮ ಜೀವನಕಾಲದಲ್ಲಿಯೇ ಅತ್ಯುನ್ನತ ಹಂತ ತಲುಪಿದ್ದರು, ಅಲ್ಲದೆ ಈಗ ಅವರು 'ಅಪರಿಮಿತ' (Unlimited) ಆಗುತ್ತಿದ್ದಾರೆ. ಅವರ ದೈವೀ ಶಕ್ತಿ ಕುರಿತು ಹೇಳುವುದೇನು ? ನಿನ್ನ ಹಿಂದಿನ ಪತ್ರದಿಂದ ನಾನು ಗ್ರಹಿಸಿದಂತೆ, ವೈರಾಗ್ಯದ ಸ್ಥಿತಿ ನಿನ್ನಲ್ಲಿ ಪರಿಪೂರ್ಣವಾಗಿದೆ; ಆದರೆ ಅದಿನ್ನೂ ಸ್ಥಿರತೆಯನ್ನು ಪಡೆಯಬೇಕಿದೆ. ಅದೂ ಸಾಧಿಸಲ್ಪಡುವುದು. ನೀನು ಬರೆದ ಸ್ಥಿತಿಯು ವೈರಾಗ್ಯಕ್ಕಿಂತ ಬಹಳ ಮೇಲಿನದು. ಈಗ ನಾನು ನಿನ್ನನ್ನು ಅದಕ್ಕೂ ಉಚ್ಚತರ ಸ್ಥಿತಿಗೆ ಕಳುಹಿಸಲು ಬಯಸುತ್ತೇನೆ; ಆದರೂ ಸದ್ಯಕ್ಕಿನ್ನೂ ಆ ಕುರಿತು ನಿರ್ಧಾರ ಮಾಡಿಲ್ಲ. ನನ್ನ ಹೃದಯ ನಿರ್ಧರಿಸಿದರೆ, ಇಂದು ನಿನ್ನನ್ನು ಇನ್ನೂ ಉಚ್ಚತರ ಸ್ಥಿತಿಗೆ ಒಯ್ಯುವುದು ಸಾಧ್ಯ. ಏನೇ ಇರಲಿ, ನಿನಗೆ ಅದು ತಿಳಿದುಬರುವುದು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೫ **ಪತ್ರ ಸಂಖ್ಯೆ – ೧೯೦** ಷಾಹಜಹಾನಪುರ
೦೫–೦೩–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ತಲುಪಿತು. ನನ್ನ ಸಂತೋಷಕ್ಕೆ ಮೇರೆಯಿಲ್ಲದಾಯಿತು. 'ನಿಷ್ಕ್ರಿಯತೆಯ' (ಉದಾಸಿ)ಯ ಸ್ಥಿತಿ ಮತ್ತೂ ಗಾಢವಾಗುತ್ತಿರುವುದೆಂದು ನೀನು ಬರೆದಿದ್ದೀಯೆ. ಅದರ ಅರ್ಥವನ್ನು ನಾನು ಗ್ರಹಿಸಲಾರದಾದೆ. 'ನಿಷ್ಕ್ರಿಯತೆ' ಎಂದು ನೀನು ಹೇಳುತ್ತಿರುವುದು ಏನು ? ಪ್ರಾಪಂಚಿಕ ಸಂಗತಿಗಳ ಬಗ್ಗೆ ಅನಾಸಕ್ತಿ ಎಂತಲೋ ಅಥವಾ 'ಆಲಸ್ಯ'ವೊ ? ಇದು ವೈರಾಗ್ಯವು ಶುದ್ಧ ಸ್ಥಿತಿಯಲ್ಲಿರುವುದರ ಕಾರಣ ಉಂಟಾದುದು; ದೃಢ ವೈರಾಗ್ಯದಿಂದ ಈ ಸ್ಥಿತಿ ಉಂಟಾಗುತ್ತದೆ. ಹೃದಯದಲ್ಲಿ ಏಕತಾನತೆಯಿರುವುದು, ಸ್ವಗೃಹದ ಸ್ಮರಣೆ ನಲೆಸಿ ನಿಂತಿರುವುದರ ಚಿಹ್ನೆಯಾಗಿದೆ. 'ಸ್ವಗೃಹ' ಎಂದರೆ ನಾನು ಹೇಳುವುದು ನೀನು ವಾಸವಾಗಿರುವ ಮನೆ ಅಲ್ಲ. 'ಸ್ವಗೃಹ' ಎಂದರೆ ನಿಜಧಾಮ; ನಾವೆಲ್ಲರೂ ಯಾವುದರಿಂದ ಉದ್ಭವಿಸಿ ಬಂದೆವೋ ಆ 'ನಿಜಧಾಮ' (ಭೂಮಾ). *'ದಿನವಿಡೀ ನನ್ನ ಎದೆಯನ್ನು ಬಡಿಸಿಕೊಳ್ಳುತ್ತಿದ್ದರೂ ನನಗೆ ನೆಮ್ಮದಿ ಸಿಗುವುದಿಲ್ಲ'* ಎಂದು ನೀನು ಬರೆದಿದ್ದೀಯೆ. ಓಹ್ ! ಎಂಥ ಅದ್ಭುತ ಅವಸ್ಥೆ ! ಅತ್ಯುತ್ಕೃಷ್ಟವಾದುದು ! ಈ ಪ್ರೇಮಕ್ಕೋಸ್ಕರ ಸಾವಿರಾರು ರಾಜ್ಯಗಳನ್ನಾದರೂ ತ್ಯಾಗಮಾಡಬಹುದು. ನೀನು ಸ್ವತಃ ಈ ಸ್ಥಿತಿಯಲ್ಲಿ ಮುಳುಗಿದ್ದು, ಬೇರೆಯವರಿಗೆ ಬೈಠಕ್ ನೀಡಿದರೆ ನಿಜಕ್ಕೂ ಅದು 'ನೈಜ ಆನಂದೋನ್ಮಾದ' ವಾಗುವುದು. ನಾನು ಈ ಸ್ಥಿತಿಯಲ್ಲಿ ಮೂರು ದಿನಗಳು ಮಾತ್ರ ಇದ್ದೆ. 'ಜೀವನ್ಮೃತಾವಸ್ಥೆ'ಗೋಸ್ಕರ ಇರುವ ಸಂಗತಿಗಳು ಇವು. ಪ್ರತಿ ಎರಡು ಅಥವಾ ಮೂರು ದಿನಕ್ಕೊಮ್ಮೆ ನೀನು ಪತ್ರ ಬರೆಯುತ್ತಿರಬೇಕೆಂದು ನಾನು ಬಯಸುತ್ತೇನೆ.



ಈ ಸ್ಥಿತಿಯು ಹತೋಟಿ ಮೀರುವುದೆಂದು ಕಂಡುಬಂದರೆ ನೀನು ನಿನ್ನ ಪೂಜಾ ಕೋಣೆಗೆ ಹೋಗಿ ಮಂಚದ ಬಳಿ ಧ್ಯಾನಕ್ಕೆ ಕುಳಿತುಕೊಳ್ಳಬೇಕು. ನಾನೂ ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತೇನೆ. ಈ ಅವಸ್ಥೆಯು ಹದ್ದು ಮೀರಿ ಹೋಗುವುದಿಲ್ಲವೆಂದು ನನಗೆ ಭರವಸೆ ಇದೆ; ಯಾಕೆಂದರೆ ನಿನ್ನ ಸುರಕ್ಷಿತತೆಯ ಬಗ್ಗೆ ಪೂಜ್ಯ ಶ್ರೀ ಲಾಲಾಜಿ ಸಾಹೇಬರು ನನಗೆ ಈಗಾಗಲೇ ಮಾತುಕೊಟ್ಟಿದ್ದಾರೆ.

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು. ಅಮ್ಮಾಜಿಯವರಿಗೆ ನನ್ನ ವಂದನೆ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೬ **ಪತ್ರ ಸಂಖ್ಯೆ – ೧೯೭** ಷಾಹಜಹಾನಪುರ
೨೨–೦೩–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಭಗವಂತ ನಿನ್ನನ್ನು ಹರಸಲಿ,

ನಿನ್ನ ಪತ್ರಗಳೆಲ್ಲವೂ ತಲುಪಿವೆ. ಹಿಂದಿಯಲ್ಲಿ ಬರೆದುಕೊಳ್ಳುವವರು ಯಾರೂ ದೊರೆಯಲಿಲ್ಲವಾದ್ದರಿಂದ, ನಾನು ನಿನಗೆ ಹಿಂದಿಯಲ್ಲಿ ಬರೆಯಲಾಗಲಿಲ್ಲ. ಸಾಮಾನ್ಯ ವಿಷಯಗಳ ಬಗ್ಗೆ ನಾನೇ ಸ್ವತಃ ಬರೆಯಬಲ್ಲೆ. ಆದರೆ ಆಳವಾಗಿ ವಿಚಾರಮಾಡಿ ಬರೆಯುವಂಥದೇನಾದರೂ ಇದ್ದರೆ, ವಿಚಾರ ಮಾಡುವುದು ಮತ್ತು ಬರೆಯುವುದು ಎರಡೂ ಒಟ್ಟಿಗೆ ಸಾಗುವುದಿಲ್ಲ. ಆಧ್ಯಾತ್ಮಿಕ ಸ್ಥಿತಿಗಳು ಅನೇಕ ಉಂಟು; ಅವು ಬರುತ್ತಲೇ ಇರುತ್ತವೆ. ಲಕ್ಷ್ಯದಿಂದಿರುವವನು ಮತ್ತು ಗುರುವಿನ ಜೊತೆ–ಜೊತೆ ಸಾಗುವವನು ಆಯಾ ಆಧ್ಯಾತ್ಮಿಕ ಕ್ಷೇತ್ರಗಳ ಸ್ಥಿತಿಗಳನ್ನು ಮತ್ತು ಭಾವನೆಗಳನ್ನು ಅರಿವಿಗೆ ತಂದುಕೊಳ್ಳಬಲ್ಲ. ಕಣ್ಣುಮುಚ್ಚಿಕೊಂಡೇ ಮುಂದೆ ಸಾಗುವ ಜನರು ನಮ್ಮ ಸಂಸ್ಥೆಗಳಲ್ಲಿ ಅನೇಕರಿದ್ದಾರೆ. ಅವರು ತಮ್ಮ ತೃಪ್ತಿಗೋಸ್ಕರ ಪೂಜೆ (ಧ್ಯಾನ) ಮಾಡುತ್ತಾರೆ, ಅದೊಂದು ನಿಯತ ಕರ್ತವ್ಯವೆಂಬಂತೆ. ಮತ್ತೆ, ತದನಂತರ ಅದರ ಬಗ್ಗೆ ಅವರಿಗೆ ಕಾಳಜಿಯೇ ಇಲ್ಲ. ಅಂಥ ಜನರನ್ನು ಅನೇಕ ಬಾರಿ ಪ್ರೋತ್ಸಾಹಿಸುತ್ತೇನೆ. ಅದು ನನ್ನದೇ ತಪ್ಪು ಎನ್ನು. ಆದರೆ ಅದೆಲ್ಲವೂ ವ್ಯರ್ಥ. ತಾವು ಇದುವರೆಗೆ ಏನನ್ನು ಸಾಧಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲೂ ಅವರು ಸಮರ್ಥರಾಗಿಲ್ಲ. ಆ ಕಾರಣ ನನ್ನ ಈ ರೂಢಿಯನ್ನು ನಾನು ಕಡಿಮೆ ಮಾಡಿದ್ದೇನೆ. ಜನರು ಅದಕ್ಕೋಸ್ಕರ ಪ್ರೀತಿ ಮತ್ತು ಆಸಕ್ತಿ ಬೆಳೆಸಿಕೊಳ್ಳುವುದಿಲ್ಲ. ಅದಿಲ್ಲವಾದರೆ, ಅವರೂ ಕೂಡ ಎಲ್ಲ ಸ್ಥಿತಿಗಳ ಸ್ವಾದವನ್ನು ಪಡೆಯುತ್ತಿದ್ದರು.

ನೀನು ನಿನ್ನ ಇಂದಿನ ಪತ್ರದಲ್ಲಿ ಒಂದು ತಮಾಷೆಯ ವಿಷಯ ಬರೆದಿದ್ದೀಯೆ. ನನಗೆ ಮೊಮ್ಮಗಳು ಹುಟ್ಟಿದ ಸಂದರ್ಭದಲ್ಲಿ ನಿನಗೆ ನಾನು ಪೂರ್ಣಾನಂದದ

F-4-Books-PM-7-Anantyatre-43



ಸ್ಥಿತಿಯನ್ನು ಕೊಡುವಂತೆ ನೀನು ಪ್ರಾರ್ಥಿಸಿದ್ದೀಯೆ. ನನಗೆ ಒಬ್ಬಳು ಮೊಮ್ಮಗಳು ಹುಟ್ಟಿದುದಕ್ಕೆ ದೇವರಿಗೆ ನಾನು ಕೃತಜ್ಞ, ಅವಳಿಗೆ ಅವನು ದೀರ್ಘಾಯುಸ್ಸು ಮತ್ತು ಸಂತೋಷಗಳನ್ನು ದಯಪಾಲಿಸಲಿ; ಆದರೆ, ನನಗೊಬ್ಬಳು ಮೊಮ್ಮಗಳು ಜನಿಸಿದ್ದಾಳೆಂದು ನನಗೆ ಅನಿಸುವುದೇ ಇಲ್ಲ; ಅಂದಮೇಲೆ, ಅದರ ಬಗ್ಗೆ ಸಂತೋಷಪಡುವ ಅಥವಾ ಸಂಭ್ರಮಿಸುವ ಪ್ರಶ್ನೆಯೇ ಏಳುವುದಿಲ್ಲ. ಹೀಗಿದ್ದರೂ, ನೀನು ಬರೆದು ವಿನಂತಿಸಿಕೊಂಡದ್ದನ್ನು ನಾನು ನಿನಗೆ ನೀಡಲು ಸಿದ್ಧನಿಲ್ಲವೇನೋ ಎಂದು ನನಗೆ ಆಶ್ಚರ್ಯವಾಗುತ್ತದೆ. ನಿನ್ನ ಸದ್ಯದ ಸ್ಥಿತಿಯು ಅದೇನೇ ಇರಲಿ– ನೀನು ಬಯಸಿದ ಸಂತೋಷದ (ಆನಂದದ) ಸ್ಥಿತಿಗಿಂತ ಅದೆಷ್ಟೋ ಹೆಚ್ಚು ಉತ್ತಮವಾದುದು. ಹಿಂದಿನ ಸ್ಥಿತಿಯು ಕುದಿಯುವ ಉಗಿಯಂತಿತ್ತು; ಈಗಿನದು ಮಿಂಚಿನಂತೆ ಎಂದು ತಿಳಿ. ಇದು, ಅದಕ್ಕಿಂತ ಎಷ್ಟೋಪಟ್ಟು ಉತ್ತಮವಾದುದು. ನಿನ್ನ ವಿನಂತಿಯನ್ನು ನಾನು ಅಲ್ಲಗಳೆಯುವುದಿಲ್ಲ; ನಿನಗೆ ಆ ಹಿಂದಿನ ಸ್ಥಿತಿಯನ್ನು ಕೊಡಲು ನನ್ನ ಹೃದಯ ಬಯಸುತ್ತದೆ. ಅಂದರೆ, ನಾನು ನಿನ್ನನ್ನು ಮೇಲಿನ ಸ್ತರದಿಂದ ಕೆಳಕ್ಕೆ ಎಳೆಯಬೇಕು. ಆದರೆ ಹಾಗೆ ಮಾಡಲು ನನ್ನ ಒಲವಿಲ್ಲ. ಅದೇನೇ ಇದ್ದರೂ, ಒಂದೋ, ಹಾಗೆ ಪ್ರಾರ್ಥನೆ ಮಾಡಿ ನಾನು ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಅಥವಾ ಕೇವಲ ಒಂದು ದಿನದ ಮಟ್ಟಿಗೆ ಆ ಸ್ಥಿತಿ ಬರಲೆಂದು ನಾನು ಪ್ರಾರ್ಥಿಸಬೇಕು. ಅಭ್ಯಾಸಿಯಾದವನು ಯಾವಾಗಲೂ ಪ್ರಗತಿ ಹೊಂದುತ್ತಿರಬೇಕು, ಪ್ರತಿಯೊಂದು ಹೆಜ್ಜೆಯೂ ಊರ್ಧ್ವಮುಖಿಯಾಗಿರಬೇಕು. ಈ ಆನಂದದ ಸ್ಥಿತಿಯಲ್ಲಿ, ನೀನು 'ಅವಧೂತ' (ಆನಂದೋನ್ಮತ್ತ) ಆಗದಿರಲು ಪ್ರತಿಯೊಂದು ಕ್ಷಣವೂ ನಿನ್ನನ್ನು ನಿಕಟವಾಗಿ ವೀಕ್ಷಿಸುತ್ತಿರಬೇಕು; 'ಅವಧೂತ' ಸ್ಥಿತಿಯು ಮುಂದಣ ಪ್ರಗತಿಯನ್ನು ತಡೆಯುತ್ತದೆ. ಆದ್ದರಿಂದ, ಆನಂದದ ಸ್ಥಿತಿಯಲ್ಲಿ ನೀನಿದ್ದಾಗ ಲಾಲಾಜಿ ಮಹಾರಾಜರು ಕಾಪಿಟ್ಟು ನಿನ್ನನ್ನು ರಕ್ಷಿಸುತ್ತಿದ್ದರು.

ಮಗಳೆ, ಅದು ಆನಂದದ ಒಂದು ಕಿಡಿ ಮಾತ್ರವಾಗಿತ್ತು. ಅದರಲ್ಲಿ ಮಾಯೆಯ ವಾಸನೆ ಮಿಶ್ರಿತವಾಗಿತ್ತು. ನಾನು ಈ ಸ್ಥಿತಿಯಲ್ಲಿದ್ದಾಗ, ನನಗೆ ಅದನ್ನು ತಡೆದುಕೊಳ್ಳಲಾಗಲಿಲ್ಲ. ನನ್ನ ಗುರುಬಂಧುಗಳಲ್ಲೊಬ್ಬರು, ತಮ್ಮ ಗ್ರಹಿಕೆಯಂತೆ ಚೆನ್ನಾಗಿ ನಡೆದುಕೊಂಡರು. ಆದರೆ ನನ್ನ ಈಗಿನ ಅನಿಸಿಕೆಯ ಪ್ರಕಾರ ಅವರು ಅದನ್ನು ಸಮರ್ಪಕವಾಗಿ ನಿರ್ವಹಿಸಿಲ್ಲ. ಪೂಜ್ಯ ಲಾಲಾಜಿಯವರ ಕೃಪೆಯಿಂದ ನಿನ್ನ ಸ್ಥಿತಿಯನ್ನು ಕ್ರಮಬದ್ಧವಾಗಿ ಉತ್ತಮಪಡಿಸಲು ನಾನು ಹೇಗೋ ಶಕ್ತನಾದೆ. ಬಹುಶಃ ನಾನು ಅದನ್ನು ಒಂದಿಷ್ಟು ಹೆಚ್ಚು ಚೆನ್ನಾಗಿ ಮಾಡಿದ್ದೇನೆ. ನಾನು ಈ ಸ್ಥಿತಿಯನ್ನು ಅದಾಗಲೇ ಅನುಭವಪಟ್ಟಿದ್ದೇನೆ. ಮತ್ತು ನೀನು ಅದನ್ನು ಬಹಳೇ ಮೆಚ್ಚಿಕೊಂಡು ಆಸ್ವಾದಿಸಿದ್ದೀಯೆ. ಯಾವ ಸಂತೋಷ, ಆನಂದ ಇಲ್ಲದಿರುವ ನನ್ನ ಸದ್ಯದ ಸ್ಥಿತಿಯನ್ನು ನಾನು ಇಟ್ಟುಕೊಳ್ಳಬಯಸುವೆನೋ ಅಥವಾ ನನಗಿರುವಂಥ ಸಂತೋಷಮಯ ಸ್ಥಿತಿಯನ್ನೋ ಎಂದು ಯಾರಾದರೂ ನನ್ನನ್ನು ಕೇಳಿದರೆ ನಾನು ನನ್ನ ಸದ್ಯದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿದ್ದೇನೆ ಮತ್ತು ಅದಕ್ಕೋಸ್ಕರ



ನಾನು ನನ್ನ ಗುರುಮಹಾರಾಜರಿಗೆ ಅತಿಶಯವಾಗಿ ಋಣಿ ಎಂದು ಹೇಳಬಲ್ಲೆ. ನಾನು ನಿನ್ನನ್ನು ಬೇರೊಂದು ಹಂತಕ್ಕೆ ('ಬಿ' ಬಿಂದು ಎನ್ನು) ಒಯ್ಯಬೇಕೆಂದು ಬಯಸಿದ್ದೆ. ಆದರೆ ಈಗ ನಾನೇನು ಮಾಡಬೇಕೆಂದು ನನಗೆ ತೋಚುತ್ತಿಲ್ಲ. ಯಾರಾದರೂ ಕೇಳಿದುದನ್ನು ನಾನು ಇಲ್ಲವೆನ್ನಲಾರೆ. ಆದ್ದರಿಂದ ನೀನು ಬರೆದಂತೆ ನಾನು ಮಾಡುವೆ– ಎಂದೆನ್ನು; ಇದೊಂದು ನನಗೆ ಕಬ್ಬಿಣದ ಕಡಲೆಯೇ ಸರಿ. ನಿಜವಾಗಿಯೂ ಪ್ರಗತಿಹೊಂದುತ್ತಿರುವವನನ್ನು ಕೆಳಕ್ಕೆ ಎಳೆಯುವುದನ್ನು ಶಾಸ್ತ್ರಗಳೂ ಒಪ್ಪುವುದಿಲ್ಲ. ಅದಲ್ಲದೆ, ಹಾಗೆ ಮಾಡುವಾಗ ಒಂದು ಆಘಾತದ ಅನುಭವವಾಗುತ್ತದೆ. ಮತ್ತು ಅಸ್ವಸ್ಥತೆ (ಕಸಿವಿಸಿ) ಹೆಚ್ಚುತ್ತದೆ. ನಿನ್ನನ್ನು ಕೆಳಕ್ಕೆ ಎಳೆಯದೆ ಹಾಗೆ ಮಾಡುವ ತಂತ್ರವೇನಾದರೂ ಉಂಟೇ ಎಂದು ನಾನು ಇಂದು ಶ್ರೀ ಲಾಲಾಜಿ ಮಹಾರಾಜರನ್ನು ಕೇಳುತ್ತೇನೆ; (ನನಗೇನೋ ಅದು ಅಸಾಧ್ಯದ ಸಂಗತಿಯೆಂದೆನಿಸುತ್ತದೆ). 'ಮಿಂಚಿ'ನಂಥ ಈಗಿನ ಸ್ಥಿತಿಯನ್ನು ಹೆಚ್ಚು ತೀವ್ರಗೊಳಿಸಬಹುದು, ಆದರೆ ಮೇಲಣ ಸ್ತರದಿಂದ ಕೆಳಕ್ಕೆ ಎಳೆಯದೆ, 'ಹಬೆ'ಯಂಥ ಸ್ಥಿತಿಯನ್ನುಂಟು ಮಾಡಲಾಗದು. ಕಳೆದು ಹೋದ ಹಿಂದಿನ ನಿನ್ನ ಸ್ಥಿತಿಯನ್ನು ನೀನು ಮರೆತರೆ, ಆಗ, ಸದ್ಯದ ಸ್ಥಿತಿ ಹೆಚ್ಚು ಉತ್ತಮವಾದುದೆಂದು ನಿನಗೆ ಖಂಡಿತ ಕಂಡುಬಂದೀತು. ಮುಂದೆ ಬರಲಿಕ್ಕಿರುವ ಸ್ಥಿತಿ ಇನ್ನೂ ಹೆಚ್ಚಿನ ಸರಳತೆಯುಳ್ಳದ್ದೂ, ಸ್ಫುಟತೆಯುಳ್ಳದ್ದೂ ಆಗಿರುವುದು.

ಇನ್ನೂ ತೆಗೆದೊಗೆಯಬೇಕಾದ ಅಸಂಖ್ಯ ಆವರಣಗಳಿವೆ. ಅವುಗಳನ್ನು ಗಣಿಸಿದರೆ, ಇದು ಇನ್ನೂ ಆಧ್ಯಾತ್ಮಿಕತೆಯ ಆರಂಭ ಮಾತ್ರ. ಪ್ರತಿಯೊಂದು ಬಿಂದುವನ್ನು ತಲುಪಲು ಮತ್ತು ಅದರಲ್ಲಿ ಉಳಿಯಲು ನೀನು ಅಷ್ಟು ದೀರ್ಘ ಸಮಯ ತೆಗೆದುಕೊಂಡರೆ, ಅಂತಿಮ ಗುರಿಯನ್ನು ಮುಟ್ಟಲು ಸಾವಿರಾರುವರ್ಷಗಳೇ ಬೇಕಾಗಬಹುದು, ನಾನಾದರೋ ನಾನು ಜೀವಿಸಿರುವಾಗಲೇ ನಿನ್ನನ್ನು ಅಲ್ಲಿಯವರೆಗೆ ಕರೆದೊಯ್ಯಬಯಸುತ್ತೇನೆ. ನೀನು ಪ್ರಸ್ತಾಪಿಸಿದ 'ಅಳುವ' ಸ್ಥಿತಿಯ ಬಗ್ಗೆ ಕಬೀರ ಸಾಹೇಬರೂ ಒಂದು ಸಮರ್ಪಕ ಶ್ಲೋಕ ಬರೆದಿದ್ದಾರೆ.

"ಹಂಸೀ ಖೇಲ ನಹಿ ಯಿಯಾಂ, ಜಿನ ಪಾಯಾ ತಿನ ರೋಯ್  
ಹಂಸೀ ಹಾಲೇ ಪಿಯ ಮಿಲೇ, ತೋ ಕೌನ್ ದುಹಾಗಿನ್ ಹೋಯ್"

"ಅವನನ್ನು ಪಡೆಯುವುದು ನಗೆಚಾಟಿಕೆಯ ಆಟದಷ್ಟು ಸುಲಭವಲ್ಲ. ಪಡೆದವರೆಲ್ಲರೂ ಅವನಿಗೋಸ್ಕರ ಅಳುವ ಮೂಲಕವೇ ಪಡೆದರು. ನಗುನಗುತ್ತಲೇ ಪ್ರಿಯನನ್ನು (ಪರಮಾತ್ಮನನ್ನು) ಪಡೆಯಬಹುದಾಗಿದ್ದರೆ, ಯಾರು ತಾನೇ ಅವನ ವಿರಹಿಯಾಗಿ ವೇದನೆ ಪಡಲು ಸಿದ್ಧರಾಗುತ್ತಿದ್ದರು ?"

ಕಿರಿಯ ಸೋದರ–ಸೋದರಿಯರಿಗೆ ನನ್ನ ಪ್ರೀತಿಯ ನೆನಹುಗಳು.

ನಿನ್ನ ಹಿತೈಷಿ  
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೭ **ಪತ್ರ ಸಂಖ್ಯೆ – ೨೦೩** ಷಾಹಜಹಾನಪುರ
೨೨–೦೩–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ತಲುಪಿದವು. ಅವುಗಳನ್ನು ಓದುವುದೇ ನನಗೊಂದು ಸಂತೋಷ. ಕಳೆದ ಕೆಲವು ದಿನಗಳಿಂದ ನಾನು ನಿನಗೆ ಬೈಠಕ್ (Sitting) ಕೊಡುವುದನ್ನು ಮರೆತಿದ್ದೆ. ಆದರೆ ಈಗ ನಾನು ಈ ಹಗಲು ಅನೇಕ ಬಾರಿ ಬೈಠಕ್ ಕೊಡಲು ವಿವಶನಾಗಿದ್ದೇನೆ. ನಾನು ನಿನ್ನತ್ತ ಅಲಕ್ಷ್ಯದಿಂದ ಇದ್ದಷ್ಟು ನಾನು ಹೆಚ್ಚು ನಿನ್ನತ್ತ ಏಕಾಗ್ರನಾಗಬೇಕಾಗುತ್ತದೆ. ಅದರಿಂದ ಸಮತೋಲನ ಈಗ ಕಾಯ್ದುಕೊಳ್ಳಲಾಗಿದೆ. ನಿನಗೆ ನಾನು ಪ್ರತಿದಿನವೂ ಬೈಠಕ್ ಕೊಡುತ್ತೇನೆ; ಕೊಡದಿರುವ ದಿನ ಇಲ್ಲವೆನ್ನುವಷ್ಟು ಕ್ವಚಿತ್ತಾಗಿ ಮಾತ್ರ. ಈಗ, ಒಂದೆರಡು ಬಿಂದುಗಳ ನಂತರ, ನಾನು ನಿನ್ನನ್ನು ಎಲ್ಲೂ ನಿಲ್ಲಗೊಡಲಿಚ್ಛಿಸುವುದಿಲ್ಲ. ಆದರೆ ನಾನು ಇನ್ನೂ ನಿರ್ಧಾರ ಮಾಡಿಲ್ಲ. ಪ್ರತಿಯೊಂದು ಸ್ಥಿತಿಯ (ಹಂತದ) ಜ್ಞಾನವನ್ನು ನೀನು ಗಳಿಸುತ್ತ ಹೋಗಬಹುದು; ಅದರಿಂದ ಭವಿಷ್ಯತ್ತಿನಲ್ಲಿ ಇತರರಿಗೆ ಬೇರೆ ಬೇರೆ ಹಂತಗಳನ್ನು ದಾಟಿಸಲು ಸಹಾಯವಾಗುವುದು. ಅನುಭವದ ಕೊತೆಯಿಂದಾಗಿ ನಾನು ಒಮ್ಮೊಮ್ಮೆ ತಪ್ಪು ಮಾಡುತ್ತೇನೆ. ನಿಜಸಂಗತಿ ಏನೆಂದರೆ, ಗುರುಮಹಾರಾಜರು ನನಗೆ ಅನುಗ್ರಹಿಸಿದ ಶಕ್ತಿಯ ಸರಿಯಾದ ಅಂದಾಜು ಮಾಡಿಕೊಳ್ಳುವುದರಲ್ಲಿ ನಾನು ಎಡವುತ್ತೇನೆ. ನಾನು ನಿನ್ನನ್ನು 'ಬಿ' ಬಿಂದುವಿಗೆ ಕೊಂಡೊಯ್ದಾಗ ಅರಿವಿಲ್ಲದೆಯೆ ಹೆಚ್ಚು ಶಕ್ತಿಯನ್ನು (ಪ್ರಾಣಾಹುತಿ) ನೀಡಿದೆ. ಅದರ ಪರಿಣಾಮವಾಗಿ, ಹೆಚ್ಚು ಸಾಂದ್ರವಾದ ಶಕ್ತಿ 'ಬಿ' ಬಿಂದುವಿನ ಸ್ತರದಲ್ಲಿ ಉಂಟಾಯಿತು. ಈಗ ಅದನ್ನು ವಿಸ್ತರಿಸಿ ಹರಡಿದರೆ ಈ ಬಿಂದುವಿನ ಯಾತ್ರೆ ಪ್ರಾರಂಭವಾಗುವುದು. ನಾನು ಇಂದು ಬೆಳಿಗ್ಗೆ ಎದ್ದೇಳುವಾಗ ಈ ವಿಚಾರ ನನ್ನ ಮನಸ್ಸಿನಲ್ಲಿ ಬಂದಿತು. ಅದು ಖಂಡಿತವಾಗಿ ಸರಿಪಡಿಸಲ್ಪಡುವುದು, ಯಾಕೆಂದರೆ ಪೂಜ್ಯ ಲಾಲಾಜಿ ಮಹಾರಾಜರು ಎಲ್ಲವನ್ನೂ ಮಾಡಲು ಸಮರ್ಥರು.

ನಿನ್ನ ಸೋದರ–ಸೋದರಿಯರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

# ಅನಂತ ಯಾತ್ರೆ

## ಭಾಗ – ೨

(೧೧ ಏಪ್ರಿಲ್ ೧೯೫೨ ರಿಂದ ३೧ ಅಕ್ಟೋಬರ್ ೧೯೫३ ರ ವರೆಗೆ)

P-4-Books-PM-7-Anantyatre-46



# ಎರಡು ಮಾತು

## (ಭಾಗ ೨ಕ್ಕೆ) (ಹಿಂದಿ ಆವೃತ್ತಿಗೋಸ್ಕರ ಬರೆದದ್ದು)

ಶ್ರೀ ಬಾಬೂಜಿ ಮಹಾರಾಜರಿಗೆ ಸ್ವಾಮೀ ವಿವೇಕಾನಂದರ ಆದೇಶ. (Dictate): Go on writing; but publication must be made after you and whoever comes forward for the publication of these writings, his liberation is sealed. Think him to be liberated. This is the reward rarely found, I give him" (ಬರೆಯುತ್ತ ಸಾಗು. ಆದರೆ ಅದರ ಪ್ರಕಟಣೆ ನಿನ್ನ ನಂತರವಷ್ಟೇ ಮಾಡತಕ್ಕದ್ದು. ಅಲ್ಲದೆ, ಇವುಗಳ ಪ್ರಕಟಣೆಗೆ ಮುಂದಾಗಿ ಬರುವವನಿಗೆ ಮುಕ್ತಿ ಕಟ್ಟಿಟ್ಟದ್ದು. ಅವನು ಮುಕ್ತನೆಂದೇ ತಿಳಿ. ಇದು ನಾನು ಕೊಡುವ ಅತ್ಯಪರೂಪದ ವರ")

ಈ ಮೇಲೆ ಹೇಳಿದ ಆದೇಶದ ಹಿನ್ನೆಲೆಯಲ್ಲಿ, ನನ್ನ ಪತ್ರಗಳನ್ನು ಮತ್ತು ನನ್ನ ಜೀವನ ಸರ್ವಸ್ವವಾದ ಶ್ರೀ ಬಾಬೂಜಿ ಮಹಾರಾಜರ ಉತ್ತರಗಳನ್ನು, ೪೪ ವರ್ಷಗಳ ನಂತರ, ಜನಸಾಮಾನ್ಯರೆಲ್ಲರಿಗೆ ಲಭ್ಯಗೊಳಿಸುವ ಪ್ರಯತ್ನ ಮಾಡಿದ ಬಂಧುವಿನ ಕಿಂಚಿತ್ ಪರಿಚಯ ಮಾಡಿಕೊಡಲು ನನ್ನ ಲೇಖನಿ ವಿವಶವಾಗಿದೆ, ಏಕೆಂದು ತಿಳಿಯೆ. ಪುಸ್ತಕ, ಶ್ರೀ ಬಾಬೂಜಿ ಮಹಾರಾಜರು ಸ್ವತಃ ಕೊಟ್ಟ **'ಅನಂತ ಯಾತ್ರಾ'** ಎಂಬ ಹೆಸರಿನಲ್ಲಿಯೇ ಪ್ರಕಾಶಿತವಾಗುತ್ತಿದೆ.

"ನನ್ನ ಮತ್ತು ನಿನ್ನ ಪತ್ರ ವ್ಯವಹಾರ ಅಭ್ಯಾಸಿಗಳ (ಸಹಜ ಮಾರ್ಗದ ಸಾಧಕರ) ಆಧ್ಯಾತ್ಮಿಕ ಲಾಭಕ್ಕೋಸ್ಕರ ಮುದ್ರಿತವಾಗಲಿ" – ಇದು ಶ್ರೀ ಬಾಬೂಜಿಯವರ ಇಚ್ಛೆಯಾಗಿತ್ತು. ಅದನ್ನು ಪೂರ್ಣಗೊಳಿಸಿದ ಶ್ರೇಯಸ್ಸು, ಅವರ ಪಾವನ ಪ್ರಸಾದ ರೂಪಿಗಳಾದ ಶ್ರೀ ಸುರೇಂದ್ರ ಮೋಹನ ಪ್ರಸಾದರವರಿಗೆ ಸಲ್ಲುತ್ತದೆ. ಅವರು ಈ ಪತ್ರಗಳನ್ನು ದಣಿವರಿಯದೆ ಪರಿಶ್ರಮಿಸಿ ಐದು ಭಾಗಗಳಲ್ಲಿ ಸಂಕಲಿಸಿದ್ದಾರೆ. ಮೊದಲ ಭಾಗ ಈಗಾಗಲೇ ತಮ್ಮ ಕೈ ಸೇರಿದೆ. ಈಗ ಅದರ ಎರಡನೆಯ ಭಾಗ ತಮ್ಮೆದುರಿಗಿದೆ. ಶ್ರೀ ಬಾಬೂಜಿ ಮಹಾರಾಜರ ಅಸೀಮ ಕೃಪೆಯಿಂದ ಕಾಲಕ್ರಮೇಣ ಉಳಿದ ಭಾಗಗಳೂ ತಮಗೆ ಕೈ ಸೇರಬಹುದು.

ಈ ಪಾವನ ಕಾರ್ಯದಲ್ಲಿ, ತಮ್ಮ ಅಸ್ವಾಸ್ಥ್ಯದ ಹೊರತಾಗಿಯೂ ಕಾರ್ಯಪೂರ್ತಿಗೆ ಅನುಪಮ ಸಹಯೋಗ ನೀಡಿದ ಶ್ರೀಮತಿ ವಿಮಲಾ ಸಿಂಹರನ್ನು ಅಭಿನಂದಿಸಲೇಬೇಕು.

**– ಕಸ್ತೂರಿ ಚತುರ್ವೇದಿ**



ಕ್ರಮ ಸಂಖ್ಯೆ – ೪೮ **ಪತ್ರ ಸಂಖ್ಯೆ – ೨೦೭** ಷಾಹಜಹಾನಪುರ

೧೧–೦೪–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ತಲಪಿತು ಮತ್ತು ಸಾಂತ್ವನ ತಂದಿತು. ಜನರು ಹೆಚ್ಚು ಹೆಚ್ಚು ಲಾಭಾನ್ವಿತರಾಗಬೇಕೆಂಬ ಕಾತರ ನನಗಿದೆ. ನನ್ನಲ್ಲಿರುವ ಜ್ಞಾನವನ್ನೆಲ್ಲ ವಿತರಣೆ (ಪ್ರಸಾರ) ಮಾಡಬೇಕು ಅಥವಾ ಶಕ್ತಿಯನ್ನು (Power) ಸಂವಹನಮಾಡಬೇಕು (Transmit), ಎಲ್ಲವನ್ನು ನನ್ನ ಹೃದಯದಲ್ಲಿಯೇ ಇಟ್ಟುಕೊಂಡು ನಾನು ಈ ಜಗತ್ತನ್ನು ತ್ಯಜಿಸಬಾರದಂತಾಗಬೇಕು ಎಂಬ ವಿಚಾರ ನನಗೆ ಕೆಲವೊಮ್ಮೆ ಬರುತ್ತದೆ. ನಾನೇನು ಇಚ್ಛಿಸುವೆನೋ ಅದನ್ನು ನಿಮಿಷಮಾತ್ರದಲ್ಲಿ ನಾನು ಮಾಡಬಲ್ಲೆ ಎಂದು ಕೆಲವರು ತಿಳಿಯುತ್ತಾರೆ. ಪ್ರಾರ್ಥನೆಯ ನೆರವಿನಿಂದ ಮತ್ತು ಗುರುಮಹಾರಾಜರ ಅನುಗ್ರಹದಿಂದ ನಾನು ಹಾಗೆ ಮಾಡಿದುದಾದರೆ ಆ ಅಭ್ಯಾಸಿ ಉನ್ನತಮಟ್ಟದ ಸಂತನಾಗುತ್ತಾನೆ. ಆದರೆ ಅದರಿಂದ ಪ್ರಯೋಜನವಿಲ್ಲ. ಯಾಕೆಂದರೆ ಆ ಅಭ್ಯಾಸಿ ಏನನ್ನೂ ಗ್ರಹಿಸಲಾರ. ಸಂಪೂರ್ಣ ಶಕ್ತಿಯನ್ನು ಪ್ರಯೋಗಮಾಡಿದರೆ ಅದರಿಂದ. ಅವನಿಗೆ ಖಂಡಿತ ಲಾಭವಾದೀತು; ಆದರೆ, ಅಂಥ ಸಂದರ್ಭದಲ್ಲಿ ಅಭ್ಯಾಸಿಯು ದೇಹಬಿಡುವುದು ಖಚಿತ. ಅಭ್ಯಾಸಿಯು ಸ್ವಪ್ರಯತ್ನ ಮತ್ತು ಪರಿಶ್ರಮದಿಂದ ಎಲ್ಲ ಹಂತಗಳ ಯಾತ್ರೆಮಾಡಿ ಅವುಗಳ ಅನುಭವ ಪಡೆಯದಿದ್ದರೆ, ಆ ಸ್ಥಿತಿಗಳ ಮೇಲೆ ಅವನಿಗೆ ಪ್ರಭುತ್ವ ಉಂಟಾಗದು; ಮತ್ತು ಆ ವಿಶಿಷ್ಟ ಸ್ಥಿತಿಯನ್ನು ಬೇರೊಬ್ಬರಲ್ಲಿ ಉಂಟುಮಾಡುವಂತೆ ಪ್ರಾಣಾಹುತಿ ನೀಡುವ ಧೈರ್ಯ ತಳೆಯಲಾರ. ಯಾರಿಗೆ ಬೇಕಾದರೂ, ಯಾವ ಸ್ಥಿತಿಯನ್ನು ಬೇಕಾದರೂ ನೀಡುವ ಸಾಮರ್ಥ್ಯವನ್ನು ಗುರುಮಹಾರಾಜರು ನನಗೆ ಅನುಗ್ರಹಿಸಿದ್ದಾರೆ. ಅದು ಅವರು ಗೈದ ಕಾರ್ಯ. ಅವರ ದಯೆಯಿಂದಾಗಿ ನಾನದನ್ನು ಪಡೆದಿದ್ದೇನೆ. (ನನ್ನದಾಗಿಸಿಕೊಂಡಿದ್ದೇನೆ). ಅದರ ಪರಿಣಾಮವಾಗಿ, ಪ್ರತಿಯೊಂದು ಸ್ಥಿತಿಯ ಜ್ಞಾನವೂ ನನಗಿದೆ ಮತ್ತು ಅದನ್ನು ಕ್ಷಣಮಾತ್ರದಲ್ಲಿ ಬೇರೆಯವರಿಗೆ ಕೊಡಬಲ್ಲೆ. ನಿಜ ಸಂಗತಿಯೇನೆಂದರೆ, ಈ ತೆರನಾದ ಜ್ಞಾನವನ್ನು ಪಡೆಯಲು ಆಧ್ಯಾತ್ಮಿಕತೆಯ ನಿಜವಾದ ಜಿಜ್ಞಾಸುಗಳು ಸಿಗುವುದಿಲ್ಲ. ಜನರು ಪ್ರೇಮ ಮತ್ತು ಭಕ್ತಿಗಳಿಂದ ಅಭ್ಯಾಸಮಾಡಿದ್ದರೆ, ಅವರಿಗೆ ಅದರ ಆನಂದ ತಿಳಿದು ಬರುತ್ತಿತ್ತು. ನಮ್ಮ ಸಂಸ್ಥೆ (Mission) ಖಂಡಿತವಾಗಿ ಬೆಳೆಯುತ್ತದೆ; ಆದರೆ ಅದನ್ನು ನಾನು ನನ್ನ ಜೀವಿತಾವಧಿಯಲ್ಲಿ ಕಾಣಬಯಸುತ್ತೇನೆ. ಮತ್ತೆ, ಭವಿಷ್ಯತ್ತಿನಲ್ಲಿ ಅಷ್ಟು ಕ್ಷಿಪ್ರದಲ್ಲಿ ಅವುಗಳನ್ನು ಪಡೆಯುವುದು ಅಸಾಧ್ಯವಾದೀತೆಂಬಂಥ 'ಸ್ಥಿತಿ'ಗಳನ್ನು ನಾನು ಅಭ್ಯಾಸಿಗಳಲ್ಲಿ ಉಂಟುಮಾಡುವಂತಾದರೆ, ಇನ್ನೂ ಹೆಚ್ಚು ಚೆನ್ನಾಗಿರುತ್ತಿತ್ತು.

ನಿನ್ನ ಪತ್ರವನ್ನೋದಿ ನಿನ್ನ ಎಲ್ಲ ಸ್ಥಿತಿಗಳನ್ನು ತಿಳಿದುಕೊಂಡೆ. ಈ 'ಅಂಧಕಾರದ ಸ್ಥಿತಿ' ನಿನಗೆ ಈ ಹಿಂದೆಯೂ ಬಂದಿರಬಹುದು, ಆದರೆ ನನ್ನ ಕಡೆಯಿಂದ ನಾನು ತ್ವರೆಮಾಡಿದುದರ ಕಾರಣ ನೀನು ಅದರ ಅನುಭವವನ್ನು ಗ್ರಹಿಸಿರಲಿಕ್ಕಿಲ್ಲ. ಅದು

P-4-Books-PM-7-Anantyatre-47



ನಿಜವಾದ ಸ್ಥಿತಿಯ (real-condition) ಒಂದು ಮಸಕಾದ ಚಿತ್ರ, ಆದರೆ ಈಗ ಅದು ಇನ್ನೂ ಸೂಕ್ಷ್ಮವಾಗಿದೆ. ಈ ಸ್ಥಿತಿ ಇನ್ನೂ ಉತ್ತಮಗೊಳ್ಳುವುದು. ಆದರೆ 'ಸತ್ಯ'ವು ಇನ್ನೂ ಬಹುದೂರ ಇದೆ. ನಾನೂ ಈ ಸ್ಥಿತಿಯನ್ನು ಅನುಭವಿಸಿದ್ದೆ, ಅದು ನನಗೆ ನೆನಪಿದೆ. ಈ ಪತ್ರ ಬರೆಸುವಾಗ ಮತ್ತೆ ಅದು ನನ್ನ ಅನುಭವಕ್ಕೆ ಬರುತ್ತಿದೆ. ಒಂದು ಚಕ್ರದಲ್ಲಿ ಕಂಡು ಬಂದ ಸ್ಥಿತಿಯೇ ಸೂಕ್ಷ್ಮತರವಾಗುತ್ತ ಹೋಗಿ ಉಳಿದೆಲ್ಲ ಚಕ್ರಗಳಲ್ಲಿಯೂ ಅನುಭವಕ್ಕೆ ಬರುತ್ತದೆ. ಬಹುಶಃ ಆರು ಚಕ್ರಗಳ ಬಗ್ಗೆ ಹೇಳಲಾಗಿದೆ. ನೀನು ಈಗಾಗಲೇ 'ಲಯಾವಸ್ಥೆ'ಯಿಂದ ಅನುಗ್ರಹೀತಳಾಗಿದ್ದೀಯೆ. ಈಗ ನೀನು ಲಯಾವಸ್ಥೆಯ 'ಬಕಾ' (Baqua) ಸ್ಥಿತಿಯನ್ನು ಹೊಂದಿದ್ದೀಯೆ. ಇನ್ನೆಷ್ಟು 'ಬಕಾ' ಮತ್ತು ಅವುಗಳ ಲಯಾವಸ್ಥೆಗಳಿರುವವೋ ಭಗವಂತ ಬಲ್ಲ; ಅವುಗಳಿಗೆ ಕೊನೆಯಿಲ್ಲ. ಮತ್ತು ಆಧ್ಯಾತ್ಮದ ನಿಜವಾದ ಸಾಧಕನು, ಮುಂದೆ ಇನ್ನಾವ ಸ್ಥಿತಿಯನ್ನೂ ಪಡೆಯುವುದುಳಿಯುವುದಿಲ್ಲವೋ ಅಲ್ಲಿಗೆ ಮುಟ್ಟುವವರೆಗೂ ವಿಶ್ರಮಿಸುವುದಿಲ್ಲ. (ಅಹಂಕಾರದ) ಹದಿನಾರು ವೃತ್ತಗಳನ್ನು ಮತ್ತು ಭೂಮಾದ ಏಳು ಜ್ಯೋತಿರ್ಮಯ ವೃತ್ತಗಳನ್ನು ಅಭ್ಯಾಸಿಯು ದಾಟಿದ ನಂತರ, ಅಭ್ಯಾಸಿಯು ಯಾವ ಸಂದರ್ಭದಲ್ಲಿಯೂ ಅವನು ಅಶಾಂತನಾಗದಂಥ ಶಾಶ್ವತ ಶಾಂತಿ ಲಭ್ಯವಾಗುತ್ತದೆ ಎಂದು ನಾನು ಹೇಳಬಹುದು. ಈಗ, ಸನಾತನ ಆಧ್ಯಾತ್ಮಿಕತೆಯ ಇತಿಹಾಸವು ನಮ್ಮ ಪೂಜ್ಯ ಗುರುಮಹಾರಾಜರಿಗೆ ಅಭಿನಂದಿಸಲೇಬೇಕು. ಯಾಕೆಂದರೆ ಇದು ಅವರು ಮಾಡಿದ ಸಂಶೋಧನೆ, ಮತ್ತು ಅವರ ಕೃಪೆಯಿಂದ ಪ್ರಾಣಾಪಾಯವಿಲ್ಲದೆ, ಜೀವಿಸುತ್ತಿರುವಾಗಲೇ ಅದನ್ನು ಪಡೆಯಬಹುದಾಗಿದೆ. ಪ್ರತಿಯೊಬ್ಬನೂ ಅವುಗಳನ್ನು ಕ್ರಮಿಸಿ ಮುಂದೆ ಹೋಗಲೆಂದು ನಾನು ಬಯಸುತ್ತೇನೆ. ಆದರೆ, ನಾನು ಹಾರೈಸುವುದಷ್ಟೇ ಸಾಲದು, ಅದು ಭಗವಂತನು ಅನುಗ್ರಹಿಸುವ ವರ. ಅವನು ಇಚ್ಛಿಸಿದವರ ಮೇಲೆ ಅದನ್ನು ಅವನು ಅನುಗ್ರಹಿಸಲಿ.

ನಿನ್ನ ಸೋದರ, ಸೋದರಿಯರಿಗೆ ನನ್ನ ಆಶೀರ್ವಾದ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೪೯ **ಪತ್ರ ಸಂಖ್ಯೆ – ೨೦೮** ಷಾಹಜಹಾನಪುರ
೧೩–೦೪–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ಬಂದುದೇ ಒಂದು ಸಂತೋಷವೆನಿಸಿತು. ನಿನ್ನ ಪತ್ರದಲ್ಲಿಯೇ ಅದರ ಉತ್ತರವನ್ನೂ ಕೊಟ್ಟಿದ್ದೀಯೆ. ಅದು ಹೀಗೆ – 'ಸೂರ್ಯನನ್ನು *(ಗುರುಮಹಾರಾಜರನ್ನು)* ಎಡೆಬಿಡದೆ ನೋಡುತ್ತ ನೋಡುತ್ತ ನನ್ನ ದೃಷ್ಟಿಯೇ ಕಳೆದು ಹೋಗಿದೆ' ಎಂದು ಬರೆದಿದ್ದೀಯೆ. ನೀನು ಅದನ್ನು 'ಸುಷುಪ್ತಿ' ಎಂದು ಕರೆದಿರುವೆ; ಆದರೆ ಅದು ಸುಷುಪ್ತಿ ಅಲ್ಲ. ಅದು 'ಮರೆವಿನ ಸ್ಥಿತಿ'. ಪ್ರತಿಯೊಂದು ಹಂತದಲ್ಲಿಯೂ ಲಯಾವಸ್ಥೆ ಇದೆ. ಅದನ್ನು ನೀನು ಅರಗಿಸಿಕೊಳ್ಳುವ ಮೂಲಕ ಅದರ ಮೇಲೆ ಪ್ರಭುತ್ವ ಪಡೆಯುತ್ತೀಯೆ. ಈಗ ಇರುವ ಸ್ಥಿತಿ ಅದೇ ಆಗಿದೆ. ಸುಷುಪ್ತಿಯು ಮನುಷ್ಯನ ನಿಲುಕಿನಲ್ಲಿ ಎಲ್ಲ ಕಡೆಗೂ ಇದೆ. ಆದರೆ ನಾವು ಮುಂದುವರಿದಂತೆ ಅದು ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತದೆ. ಉನ್ನತ ನೆಲೆಯಲ್ಲಿ ಅದಕ್ಕೆ ತುರೀಯ ಎಂದು ಹೆಸರು. ನಾನು ಆಗಾಗ ಚಿಂತಿಸುವ ಉಚ್ಚತರದ ಸ್ಥಿತಿಗಳ ಬಗ್ಗೆ ನಾನು ಹೇಳಿ ಬರೆಯಿಸಬಲ್ಲೆ. ಆದರೆ ನಾನೇ ಸ್ವತಃ ಬರೆಯಲಾರೆ.



ಅಮ್ಮಾಜಿಯವರಿಗೆ ನನ್ನ ನಮಸ್ಕಾರ ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೦ **ಪತ್ರ ಸಂಖ್ಯೆ – ೨೧೨** ಷಾಹಜಹಾನಪುರ
೦೪–೦೫–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಏಪ್ರಿಲ್ ೨೩ ಮತ್ತು ೩೦ರ ಎರಡೂ ಪತ್ರಗಳು ತಲುಪಿವೆ. ನಿನ್ನ ಏಪ್ರಿಲ್ ಪತ್ರದಲ್ಲಿ ಕೊಟ್ಟ ಉತ್ತರ ತೀರಾ ಸರಿ ಇದೆ. ನಿನಗೆ ಕೇಳಲಾದ ಅದೇ ಪ್ರಶ್ನೆಗೆ ನಾನು ಉತ್ತರ ಬರೆಯುವುದಾದರೆ ಅದನ್ನು ಬೇರೆ ರೀತಿಯಲ್ಲಿ ಬರೆಯಬೇಕು. ನಾನು ನಿನ್ನನ್ನು 'ಸಿ' (C) ಬಿಂದುವಿನಲ್ಲಿ ಇರಿಸಿರುವೆನೆಂದು ಮಾಸ್ಟರ್ ಸಾಹೇಬರಿಗೆ ಬರೆದಿದ್ದೆ. ನಿನ್ನ ಎರಡು ಪತ್ರಗಳು 'ಸಿ' ಬಿಂದುವಿನಲ್ಲಿರುವ ಸ್ಥಿತಿಯನ್ನು ವರ್ಣಿಸುತ್ತಿವೆ. ನೀನು ಪ್ರಗತಿಹೊಂದುತ್ತ ಹೋದಂತೆ, ಅದರ ಅರಿವು ನಿನಗೆ ಹೆಚ್ಚು ಹೆಚ್ಚು ಉಂಟಾಗುವುದು, ಆದರೆ ಅದನ್ನು ಅಭಿವ್ಯಕ್ತಗೊಳಿಸಲು ಶಬ್ದಗಳು ಸಿಗುವುದು ಕಷ್ಟ. ನೀನು ಭಗವಂತನ ಬಗ್ಗೆ ಅದೇ ನಿಷ್ಠೆ, ಆಸಕ್ತಿ ಮತ್ತು ಪ್ರೇಮದಿಂದ ಮುಂದುವರಿದರೆ, ನಾನು ನಿನ್ನನ್ನು 'ಕೇಂದ್ರ'ದ (ಚರಮ ಸ್ಥಿತಿಯ) (ಭೂಮಾ) ವರೆಗೆ ಕರೆದೊಯ್ಯಬೇಕೆಂಬುದನ್ನು ಯೋಚಿಸಿದಾಗ ದಿಗ್ಭ್ರಾಂತನಂತಾಗುತ್ತೇನೆ. ಆದರೆ ಲಾಲಾಜಿ ಸಾಹೇಬರಿಗೆ ಯಾರನ್ನಾದರೂ ಅಲ್ಲಿಯ (ಭೂಮಾ)ವರೆಗೆ ಕೊಂಡೊಯ್ಯುವುದು ಕ್ಷಣಮಾತ್ರದ ಕೆಲಸ. ಆದರೆ ಅದರಲ್ಲಿ ಒಂದು ಸಮಸ್ಯೆ ಉಂಟು. ಅದೇನೆಂದರೆ, (ಅಭ್ಯಾಸಿಯು) ಪ್ರತಿಯೊಂದು ಸ್ಥಿತಿಯಮೇಲೆ ಪ್ರಭುತ್ವವನ್ನು ಹೊಂದಲು ಸಾಕಷ್ಟು ಧೈರ್ಯ ತಾಳುವುದಿಲ್ಲ. ನಾನು ಬಹಳಷ್ಟು ಜನರಿಗೆ ತ್ವರೆಯಿಂದ ಉನ್ನತ ಹಂತಗಳವರೆಗೆ ಕರೆದೊಯ್ದಿದ್ದೇನೆ ಮತ್ತು ಅವರ ಯಾತ್ರೆಯನ್ನೂ

P-4-Books-PM-7-Anantyatre-48



ಪೂರೈಸಿದ್ದೇನಾದರೂ, ಅವರು ಎಲ್ಲ ಪ್ರತಿಯೊಂದು ಹಂತದಲ್ಲಿಯೂ ಲಯಾವಸ್ಥೆಯನ್ನು ಕಾಯ್ದುಕೊಳ್ಳಲು ಸಮರ್ಥರಾಗಲಿಲ್ಲವಾದ್ದರಿಂದ, ಅದು ಪ್ರಯೋಜನಕಾರಿಯೆಂದು ಸಿದ್ಧವಾಗಿಲ್ಲ. ಅದಕ್ಕೆ ಕಾರಣ, ಅವರು ನಿರಂತರ ಸ್ಮರಣೆಯ ಅಭ್ಯಾಸವನ್ನು ಮೈಗೂಡಿಸಿಕೊಳ್ಳದಿರುವುದೇ ಆಗಿದೆ. ನಿರಂತರ ಸ್ಮರಣೆ ತುಂಬ ಸುಲಭ. ನಿರಂತರ ಸ್ಮರಣೆಯನ್ನು ಮೈಗೂಡಿಸಿಕೊಳ್ಳಲು ಹತ್ತು ಹನ್ನೆರಡು ದಿನಗಳಿಗಿಂತ ಹೆಚ್ಚು ಬೇಕಿಲ್ಲ ಎಂದು ನನಗೆ ಅನಿಸುತ್ತದೆ. ಆದರೆ ಅದಕ್ಕೆ ಪ್ರಯತ್ನಪಡಲು ಯಾರೂ ಸಿದ್ಧರಿಲ್ಲ. ಯಾರು ಪ್ರಗತಿಯನ್ನು ಕೊಡುತ್ತಾನೋ ಅವನೇ ಇದನ್ನೂ ಕೊಡುವನೆಂದೂ, ಮತ್ತು ಆ ಕಾರಣ, ಅವರು ಆ ದಿಶೆಯಲ್ಲಿ ಯಾಕೆ ಶ್ರಮಪಡಬೇಕು ಎಂದೂ ಅವರು ಭಾವಿಸುತ್ತಾರೆ. ಒಬ್ಬನು ನನ್ನನ್ನು ಮುಖಸ್ತುತಿಮಾಡಿ ನನ್ನ ಸವಲತ್ತು ಪಡೆಯಲು ಯತ್ನಿಸಿದರೆ, ಒಬ್ಬನು ನನಗೆ ತುಂಬಾ ವಿಧೇಯನಾಗಿರುವಂತೆ ತನ್ನ ಚಟುವಟಿಕೆಗಳನ್ನು ಯೋಜಿಸುತ್ತಾನೆ; ಆದರೆ ಇದೆಲ್ಲವನ್ನೂ ನಾನು ಚೆನ್ನಾಗಿ ಬಲ್ಲೆ. ಅವರು ಸ್ಥಗಿತರಾಗಿದ್ದಾರೆ, ಪ್ರಗತಿ ಹೊಂದುತ್ತಿಲ್ಲವೆಂಬುದು ನನಗೆ ಪೂರ್ಣ ಮನದಟ್ಟಾದಾಗ ನಾನು ಅವರನ್ನು ತ್ವರೆಯಿಂದ ಮುಂದೆ ತಳ್ಳುತ್ತ ಹೋದೆ; ಇದು ನನ್ನ ಸ್ವಂತದ ಉದ್ದೇಶವೆಂದು ನೀನು ತಿಳಿಯಬಹುದು. ಅಭ್ಯಾಸಿಯು ನಾನು ತ್ವರೆಮಾಡುವಂತೆ ಮಾಡಿದರೆ (ನನ್ನನ್ನು ವಿವಶಗೊಳಿಸಿದರೆ) ನಾನೂ ತ್ವರೆ ಮಾಡುತ್ತೇನೆ. ಆದರೆ ಈ ತಪ್ಪು (ಅಂದರೆ, ಅಭ್ಯಾಸಿಯು ಉತ್ತಮಗೊಳ್ಳಲು ಏನೂ ಪ್ರಯತ್ನ ಮಾಡದಿರುವುದು ಮತ್ತು ನಾನು ಅವನನ್ನು ಮುಂದಕ್ಕೊಯ್ಯುವುದು) ಇನ್ನು ಮುಂದೆ ಮಾಡಲಾಗುವುದಿಲ್ಲ. ನನ್ನ ಹಿರಿಯ ಮಗ ಪ್ರಕಾಶನ ಮದುವೆಯ ಸಮಯದಲ್ಲಿ ನಾನು ಅವನನ್ನು ಒಂದು ಮರದ ಕೆಳಗೆ ಕುಳ್ಳಿರಿಸಿ ಬೈಠಕ್ ಕೊಟ್ಟಿದ್ದೆ. ಆ ಬೈಠಕಿನಲ್ಲಿ, ಅವನನ್ನು ಕೇಂದ್ರ ಮಂಡಲಕ್ಕೆ ಒಯ್ಯುವುದನ್ನು ದೃಷ್ಟಿಯಲ್ಲಿರಿಸಿ ಅವನ ಆತ್ಮಕ್ಕೆ ಪ್ರಾಣಾಹುತಿ ನೀಡಿದ್ದೆ. ಮತ್ತೆ ಅವನು 'ಭೂಮಾ'ದ ವರೆಗೂ ಪ್ರಗತಿಹೊಂದುವ ಮಾರ್ಗವನ್ನು ತೆರೆದಿಟ್ಟಿದ್ದೆ. ಆಗ, ನಾನು ಅವನ ಧ್ಯಾನ (ಲಕ್ಷ್ಯ)ವನ್ನು ನಿರಂತರ ಸ್ಮರಣೆಯತ್ತ ಹೊರಳಿಸಿದ್ದೆ.

"ನಾನು ನಿನ್ನನ್ನು 'ಭೂಮಾ' (ಕೇಂದ್ರ)ದ ವರೆಗೂ ಕರೆದೊಯ್ಯಬಯಸಿದಾಗ ನಾನು ದಿಗ್ಭ್ರಮೆಗೊಳ್ಳುತ್ತೇನೆ". ಎಂದು ಬರೆದಿದ್ದೆನಷ್ಟೆ. ಅದರ ಅರ್ಥ, ನೀನು ಇನ್ನೂ ಕ್ರಮಿಸುವುದು ತುಂಬಾ ಇದೆ ಮತ್ತು ನೀನು ಜ್ಞಾನವನ್ನು (ಪ್ರತಿಯೊಂದು ಬಿಂದುವಿನ) ಪಡೆಯುತ್ತಲೇ ಅಲ್ಲಿಗೆ ತಲುಪುವಂತಾಗಲು ನಿನಗೋಸ್ಕರ ಎಷ್ಟು ಸಮಯ ಮೀಸಲಿಡಬೇಕಾಗಬಹುದು ಎಂದು ಚಿಂತಿಸುತ್ತೇನೆ. ಪ್ರತಿಯೊಬ್ಬನೂ ಕೇಂದ್ರವನ್ನು (ಚರಮ ಸ್ಥಿತಿ) ಪಡೆಯಬೇಕು ಎಂದು ನಾನು ಯೋಚಿಸುತ್ತೇನೆ. ಮತ್ತು ಅದಕ್ಕೆ ನಾನು ಎಲ್ಲಾ ಪ್ರಯತ್ನವನ್ನು (ಪರಿಶ್ರಮ) ಮಾಡಲು ಸಿದ್ಧನಿದ್ದೇನೆ. ಆದರೆ ನನ್ನಿಂದ ಕೆಲಸ ತೆಗೆದುಕೊಳ್ಳಲು ಯಾರೂ ಬಯಸುವುದಿಲ್ಲ. ನಾನು ಎಷ್ಟೇ ಅಸ್ವಸ್ಥನಿರಲಿ, ನೀನು ಚಿಂತೆಪಡುವ ಕಾರಣವಿಲ್ಲ. ನನ್ನ ಅಂತಿಮ ಯಾತ್ರೆ ಇನ್ನೂ ದೂರವಿದೆ.



ಒಂದು ಮಾತು ಬರೆಯಲು ಮರೆತಿದ್ದೆ. ನಾನು ನಿನ್ನೆ ರಾತ್ರಿ, 'ಸಿ' ಬಿಂದುವಿನಲ್ಲಿ ನೀನು ಯಾತ್ರೆಮಾಡುವಂತೆ ನಿನಗೆ 'ಬೈಠಕ್' ಕೊಟ್ಟಿದ್ದೆ. ಅದಕ್ಕೂ ಮೊದಲು ನಾನು ಯಾವುದೋ ಕೆಲಸದಲ್ಲಿ ನಿರತನಾಗಿದ್ದೆ. ಮತ್ತು ನನ್ನ ಮನಸ್ಸು ದಣಿದಿದ್ದರಿಂದ ಈ ಬೈಠಕನ್ನು ನಿನಗೆ ಈ ಮೊದಲೇ ಕೊಟ್ಟಿರಲಿಲ್ಲ. ನಾನು ಬೇರೆ ಬೇರೆ ಮಂಡಲಗಳಲ್ಲಿರುವ ಮುಖ್ಯ ಬಿಂದುಗಳನ್ನು ಕೈಗೆತ್ತಿಕೊಳ್ಳುತ್ತೇನೆ. ದೊಡ್ಡ ಬಿಂದುವಿನೊಳಗೆ ಇರುವ ಪ್ರತಿಯೊಂದು ಚಿಕ್ಕ ಬಿಂದುವನ್ನು ತೆಗೆದುಕೊಂಡರೆ, ಅವುಗಳನ್ನು ಕ್ರಮಿಸಲು ಸಾವಿರಾರು ವರ್ಷಗಳು ಸಾಕಾಗದು. ಆದರೆ ನಾನು ಎಲ್ಲ ಬಿಂದುಗಳ ಯಾತ್ರೆಯನ್ನೂ ನೀನು ಪೂರೈಸುವಂತೆ ಮಾಡುತ್ತೇನೆಂಬುದು ಖಂಡಿತ. ನಿನ್ನ ಆಧ್ಯಾತ್ಮಿಕ ಯಾತ್ರೆಯನ್ನು (ಕ್ರಮಣವನ್ನು) ಕುರಿತು ಬರೆಯುತ್ತಿರು, ಯಾಕೆಂದರೆ ಈಗ ನಾನು ತ್ವರೆಮಾಡಬಯಸುತ್ತೇನೆ. ಈ ಮಂಡಲದ ಯಾತ್ರೆ ಮುಗಿದ ನಂತರ, ಉಳಿದ ಬಿಂದುಗಳಲ್ಲಿಯ ಸ್ಥಿತಿಗಳ ಅನುಭವ ನಿನಗೆ ಏಳೆಂಟು ದಿನಗಳ ಮಧ್ಯಾಂತರದ ನಂತರ ಉಂಟಾಗಬಹುದು. ಈಗ ಈ ತ್ವರಿತದ ಪಯಣದಲ್ಲಿ ಈ ಎಲ್ಲ ಬಿಂದುಗಳಲ್ಲಿಯೂ ಲಯಾವಸ್ಥೆ ಹೊಂದುವುದು ನಿನ್ನ ಕರ್ತವ್ಯ. ನನ್ನ ಗುರುಬಂಧು ರಾಮೇಶ್ವರ ಪ್ರಸಾದರನ್ನು ಈ ಬಿಂದುಗಳ ಯಾತ್ರೆ ಮಾಡಿಸಲು ನಾನು ಕೈಗೆತ್ತಿಕೊಂಡಾಗ ನಾನು 'ಕೆ' ಬಿಂದುವಿನವರೆಗೆ ಎಣಿಸುತ್ತ ಹೋದೆ; ಅನಂತರ ಎಣಿಸುವುದನ್ನು ಕೈಬಿಟ್ಟೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೧ **ಪತ್ರ ಸಂಖ್ಯೆ – ೨೧೫** ಷಾಹಜಹಾನಪುರ
೦೮–೦೫–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಮೇ ೪, ೧೯೫೨ರ ಪತ್ರ ಅಂಚೆಯ ಮೂಲಕ ಮತ್ತು ಮೇ ೭ರ ಪತ್ರ ಮಾತಾಜಿಯವರ ಮೂಲಕ ತಲುಪಿದವು. ತಾವೂಜಿಯವರ ಸ್ಥಿತಿಯ ಬಗ್ಗೆ ನೀನು ಬರೆದಿದ್ದೀಯೆ. ಅದು ಭಾಗಶಃ ನಿಜ (ಅಥವಾ ಸರಿ ಇದೆ). ಅವನಲ್ಲಿ ಸಂಸ್ಕಾರಗಳು ಉಂಟಾಗುವುದು ಬಹುತೇಕ ನಿಂತಿದೆ. ನೀನು ಆ ಕುರಿತು ಬರೆದ 'ಸಾಮ್ಯಾವಸ್ಥೆ' ಅನೇಕ ಪ್ರಕಾರಗಳದ್ದಿರುತ್ತದೆ. ಅವನಲ್ಲಿ ಅತ್ಯಂತ ಕೆಳಗಿನ ಪ್ರಕಾರದ ಸಾಮ್ಯಾವಸ್ಥೆ ಇದ್ದಂತೆ ತೋರುತ್ತದೆ. ಯಾಕೆಂದರೆ ನಾನು ಆ ರೀತಿಯಾಗಿ ಅವನಿಗೆ ಪ್ರಾಣಾಹುತಿ ನೀಡಿದ್ದೇನೆ.

ನೀನು ನಿನ್ನ ಅಕರ್ಮ (Inactiveness) ಸ್ಥಿತಿಯ ಬಗ್ಗೆ ಬರೆದಿದ್ದೀಯೆ. ನಮ್ಮ ಸಂಸ್ಥೆಯಲ್ಲಿ ಅಕರ್ಮ (ಸ್ವತಃ ಚಾಲಿತ) ಸ್ಥಿತಿಯು ಆರಂಭದಿಂದಲೇ, ಅಂದರೆ, ಮೊದಲನೆಯ ದಿನದಿಂದಲೇ ಪ್ರಾರಂಭಗೊಳ್ಳುತ್ತದೆ. ಹೆಚ್ಚು ಹೆಚ್ಚು

ಮುಂದುವರಿದಂತೆ ಈ ಅಕರ್ಮ (ಸ್ವತಃ ಚಾಲಿತ) ಸ್ಥಿತಿ ಹೆಚ್ಚು ಪ್ರಮಾಣದಲ್ಲಿ ಅನುಭವಕ್ಕೆ ಬರುತ್ತದೆ. ಏನನ್ನಾದರೂ ಜ್ಞಾಪಕಕ್ಕೆ ತಂದುಕೊಂಡರೆ, ಸ್ಥಿತಿಯು ಅಧೋಮುಖಿಯಾಗಿ ಒಲಿದಂತೆ ತೋರಿಬರುತ್ತದೆ. ಯಾಕೆಂದರೆ ಮನಸ್ಸಿನ ಏಕಾಗ್ರತೆ ಕೆಲಮಟ್ಟಿಗೆ ಭಂಗವಾಗುತ್ತದೆ. 'ನನ್ನ ಸ್ಥಿತಿ ಆಲಸ್ಯವೆಂಬಂತೆ ತೋರುತ್ತದೆ, ನಾನು ನಿದ್ರೆಯಲ್ಲಿಯೇ ಉಳಿಯಲು ಬಯಸುತ್ತೇನೆ ಮತ್ತು ಕೈಕಾಲುಗಳನ್ನು ಆಡಿಸುವುದೂ ಬೇಕಿಲ್ಲವೆಂದೆನಿಸುತ್ತದೆ' ಎಂದು ನೀನು ಬರೆದಿದ್ದೀಯೆ. ವಾಸ್ತವವಾಗಿ ಇದು ಆಲಸ್ಯವಲ್ಲ, ಬದಲಿಗೆ, ಎಲ್ಲ ಅವಯವ (ಅಂಗಾಂಗ)ಗಳೂ ಹೆಚ್ಚು ಕಡಿಮೆ ಲಯಾವಸ್ಥೆಯನ್ನು ಮುಟ್ಟಿವೆ ಎಂಬುದರ ನಿದರ್ಶನವಿದು. 'ಬೇರೊಬ್ಬರ ಮನಸ್ಸಿನಲ್ಲಿ, ಹೃದಯದಲ್ಲಿ ಇರುವುದನ್ನು ನಾನು ಹೇಳತೊಡಗುತ್ತೇನೆ' ಎಂದು ಬರೆದಿದ್ದೀಯೆ. ಇದು, ಹೃದಯದ ಶುದ್ಧತೆಯ ಚಿಹ್ನೆ ಮತ್ತು ಸಂಕೇತವಾಗಿದೆ. ಕೆಲ ಕಾಲ ಹಿಂದೆ, ಇನ್ನೂ ಹೆಚ್ಚು ತೀವ್ರತೆಯುಳ್ಳ ಈ ಸ್ಥಿತಿಯನ್ನು ನಾನು ಹೊಂದಿದ್ದೆ, ಆದರೆ ಅದು ಈಗ ಎಲ್ಲಿ ಹೋಯಿತೆಂಬುದನ್ನು ಭಗವಂತ ಬಲ್ಲ. ಈ ವಿಶಿಷ್ಟ ಸ್ಥಿತಿ ಲಾಲಾಜಿ ಸಾಹೇಬರಲ್ಲಿ ಕೊನೆಯ ಕ್ಷಣದವರೆಗೂ ಇತ್ತು ಎಂಬುದು ಆಶ್ಚರ್ಯದ ಸಂಗತಿ; ಆದರೆ ಈಗ ನನಗೆ ಈ ಸ್ಥಿತಿಯು ಅನುಭವಕ್ಕೆ ಬರುತ್ತಿಲ್ಲ. ಮೇ ೭ರ ಪತ್ರದಲ್ಲಿ ಅಕರ್ಮಣ್ಯ ಸ್ಥಿತಿ ಮರೆಯಾಗಿ ಹೋದ ಬಗ್ಗೆ ಬರೆದ್ದೀಯೆ. ಅದು ಒಳ್ಳೆಯ ಸ್ಥಿತಿ. 'ಮನಸ್ಸು' ಎಲ್ಲಿಂದ (ಉದ್ಭವಿಸಿ) ಬಂದಿದೆಯೋ ಅಲ್ಲಿಗೆ ತಲುಪುವರೆಗೂ ಅದರ ಗಂಭೀರತೆ (ಗಹನ ಅವಸ್ಥೆಯಲ್ಲಿ ವಿಲೀನವಾಗುವುದು) ಪ್ರತಿಫಲಿಸುತ್ತದೆ ಅಥವಾ ಗಮನಕ್ಕೆ ಬರುತ್ತದೆ ಎಂಬುದು ನಿನ್ನ ಪತ್ರದ ಉಳಿದ ಭಾಗಕ್ಕೆ ಉತ್ತರ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೨ **ಪತ್ರ ಸಂಖ್ಯೆ – ೨೧೮** ಷಾಹಜಹಾನಪುರ
೧೬–೦೫–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರಗಳು ತಲುಪಿದವು. ಅವುಗಳಿಗೆ ಮಾರುತ್ತರ ನೀಡುವ ಅಗತ್ಯವಿಲ್ಲವಾದರೂ, ನಾನು ಏನೋ ಒಂದಿಷ್ಟು ಬರೆಯುತ್ತಿದ್ದೇನೆ. ಯಾರೋ ಒಬ್ಬರು ಪ್ರಾಪಂಚಿಕ ಸಂಗತಿಗಳ ಬಗ್ಗೆ ಚಿಂತೆ ಮಾಡುತ್ತಿದ್ದರೆ, ಇನ್ನಿತರರು ಬೇರೆ ಯಾವುದೋ ಅಗತ್ಯ ವಿಷಯಗಳ ಬಗ್ಗೆ ಚಿಂತಿಸುತ್ತಿರುತ್ತಾರೆ. ಆದರೆ ನಾನು ನಿನ್ನ 'ಸ್ಥಿತಿ'ಯನ್ನು ಅವಲೋಕಿಸಿದಾಗ ಮುಂದಿರುವ ಬಿಂದುಗಳಲ್ಲಿ ನಿನ್ನನ್ನು ಎಷ್ಟು ಸಮಯ ಇರಿಸಿಕೊಳ್ಳಬೇಕೆಂದು ಚಿಂತಿಸುತ್ತೇನೆ; ಯಾಕೆಂದರೆ ಮುಂಬರುವ ಕೆಲವು ಬಿಂದುಗಳು ತುಂಬಾ ಪ್ರಯೋಜನಕಾರಿಯಾಗಿವೆ. ನನ್ನ ಗುರುಗಳ ಅನುಗ್ರಹದಿಂದ



ನನ್ನ ಎಲ್ಲ ಕೆಲಸಗಳನ್ನೂ ನಾನು ಯುವಕನಾಗಿರುವಾಗಲೇ ಮುಂಚಿತವಾಗಿ ಪೂರೈಸಿಕೊಂಡೆ. ಮುಂದೆ ಸಾಗುವ ಧೈರ್ಯ ಹೊಂದಿದ ಎಲ್ಲರ ಕೆಲಸವನ್ನೂ ನಾನು ಅದೇ ರೀತಿ ಪೂರ್ಣಗೊಳಿಸಲು ಬಯಸುತ್ತೇನೆ. ಮಾಸ್ಟರ್ ಸಾಹೇಬರ ಕೆಲಸವನ್ನು ತ್ವರೆಯಿಂದ ಮಾಡಿ ಮುಗಿಸಲಾಗಿತ್ತು; ಅದರ ಲಾಭವೆಂದರೆ, ನಾನು ಅವರಿಗೆ ಈಗ ಬಹಳ ಬೈಠಕ್ ಕೊಡುವ ಅಗತ್ಯವಿಲ್ಲ. ಕೆಲವೊಮ್ಮೆ ಒಂದಿಷ್ಟು ಸಹಾಯ ನೀಡುತ್ತೇನೆ ಅಥವಾ ಅವರ 'ಸ್ಥಿತಿ'ಯಲ್ಲಿ ಒಂದಿಷ್ಟು ಹೆಚ್ಚು ಹೊಳಪು ತರಲು ಪ್ರಯತ್ನಿಸುತ್ತೇನೆ.

ನಾನು ನಿನ್ನ 'ಸಿ' ಬಿಂದುವಿನ ಮೇಲೆ ಅನೇಕ ಸಲ ಲಕ್ಷ್ಯವನ್ನು ಕೇಂದ್ರಿತಗೊಳಿಸುತ್ತೇನೆ. ಯಾತ್ರೆಯ (ಆ ಬಿಂದುವಿನ) ಸ್ಥಿತಿ ಇನ್ನೂ ಉಂಟಾಗಿಲ್ಲ (ಆರಂಭವಾಗಿಲ್ಲ), ಈಗ ಅದು ಆರಂಭಗೊಳ್ಳಬೇಕಿದೆ. ಪ್ರತಿಯೊಂದು ಬಿಂದುವಿನಲ್ಲಿಯೂ ನಾನು ನಿನ್ನನ್ನು ಏಳೆಂಟು ದಿನ ಇರಿಸಿಕೊಳ್ಳುವೆನೆಂದು ನಾನು ನಿನಗೆ ಬರೆದಿದ್ದೆ. 'ಸಿ' ಬಿಂದು ಮುಗಿದಮೇಲೆ ನಾನು ನಿನ್ನನ್ನು ಮುಂದಿನ ಸ್ಥಿತಿಗೆ ಕರೆದೊಯ್ಯುತ್ತೇನೆ. ಆದರೆ ನಾನು ಗಾಢವಾಗಿ ವಿಚಾರಮಾಡಿ ನೋಡಿದಾಗ, ಮುಂದಿನ ಬಿಂದು ಅಥವಾ ಹಂತದಲ್ಲಿ ವಿಶಾಲವಾದ ದೃಶ್ಯ ಇರುವುದು ಕಂಡುಬರುತ್ತದೆ. ಈಗ ನಾನು ಏನು ಮಾಡಬೇಕೆಂಬುದು ತಿಳಿಯುತ್ತಿಲ್ಲ. ಪೂಜ್ಯ ಲಾಲಾಜಿಯವರು ನನ್ನನ್ನು ಅಂಥ ಬಿಂದುಗಳನ್ನು ದಾಟುವಂತೆ ಹೇಗೆ ಮಾಡಿದರೆಂಬ ಬಗ್ಗೆ ನಾನು ಅವರ ಆದೇಶ (Dictate) ತೆಗೆದುಕೊಳ್ಳುತ್ತೇನೆ.

ನಿನ್ನ ಸೋದರ–ಸೋದರಿಯರಿಗೆ ನನ್ನ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೩ **ಪತ್ರ ಸಂಖ್ಯೆ – ೨೨೪** ಷಾಹಜಹಾನಪುರ
೨೯–೦೬–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿತು. ಜೂನ್ ೧೭ರ ನಿನ್ನ ಪತ್ರದ ಎರಡು ವಿಷಯಗಳಿಗೆ ಮಾತ್ರ ಉತ್ತರ ಕೊಡುತ್ತಿದ್ದೇನೆ. ತಣ್ಣೀರಿನ ತುಂತುರು ಮಳೆ ನಿನ್ನ ತಲೆಯ ಮೇಲೆ ಬೀಳುತ್ತಿರುವುದರ ಅನುಭವ ನಿನಗಾಗುವುದು ಅರ್ಥವೇನೆಂದರೆ, ನೀನು ಮಾಸ್ಟರ ಸಾಹೇಬರ ಮನೆಯಲ್ಲಿದ್ದಾಗ ನಿನ್ನ ತಲೆಯ ಭಾಗದಲ್ಲಿ ತುಸು ಉಷ್ಣತೆಯ ಅನುಭವವಾಯಿತೆಂದು ನೀನು ಹೇಳಿದ್ದೆ, ಅದು ಶಮನವಾಗಲೆಂದು ನಾನು ಕೆಲವು ತಂಪು ಹನಿಗಳನ್ನು ನಿನಗೆ ಪ್ರಾಣಾಹುತಿಯ ಮೂಲಕ ನೀಡಿದ್ದೆ. ಗಾಢವಾದ

P-4-Books-PM-7-Anantyatre-50



ಪ್ರೇಮ ಮತ್ತು ಭಕ್ತಿಗಳ ಕಾರಣ ನಿನ್ನಲ್ಲಿ ಆಕರ್ಷಣೆಯ ಸಾಮರ್ಥ್ಯ ಹೆಚ್ಚಿದೆ, ಅದು ಮತ್ತೂ ಹೆಚ್ಚುತ್ತಿದೆ. ಪ್ರತಿಯೊಂದು ವಿಚಾರದಲ್ಲಿಯೂ 'ಪ್ರಾಣ' ಇದೆ. ಮತ್ತು ಮಾಯೆಗೆ ಸಂಬಂಧಿಸಿರದಿದ್ದರೆ, ಆ 'ವಿಚಾರ' (ಸಂಕಲ್ಪ)ದಲ್ಲಿ ದೈವೀ ಶಕ್ತಿ ಬೆಳೆಯುತ್ತದೆ. (ಆ ಕಾರಣ) ಅದರ ಪರಿಣಾಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ; ಮತ್ತು ಆ ದೈವೀ ಪ್ರಭಾವವನ್ನು ನೀನು ಇರಿಸಿಕೊಂಡಿರುವೆಯೆಂಬುದು ನಿನ್ನ ಸಾಮರ್ಥ್ಯ (ಯೋಗ್ಯತೆ)ವನ್ನು ತೋರಿಸುತ್ತದೆ. ಅದೇ ಪತ್ರದಲ್ಲಿ '*ನಾನು ಒಂದು ತೆರನಾದ ಸ್ಥಿತಿಯ ಬಯಲಿನಲ್ಲಿ ನಿಶ್ಚಿಂತಳಾಗಿ ಈಜುತ್ತಿದ್ದೇನೆ; ಅದನ್ನು ಕುರಿತು ಹೇಳಲು ನನ್ನ ಶಬ್ದಗಳಿಗೆ ನಿಲುಕುವುದಿಲ್ಲ*' ಎಂದು ಬರೆದಿದ್ದೀಯೆ. ಇದು ತುಂಬಾ ಒಳ್ಳೆಯ ಸ್ಥಿತಿ. ಒಮ್ಮೆ ಲಾಲಾಜಿ ಸಾಹೇಬರು ನನಗೆ ಹೇಳಿದ್ದರು– '*ಆಧ್ಯಾತ್ಮಿಕ ಉನ್ನತಿ ಎಂದರೇನು ? ಒಂದು ವಿಸ್ತಾರವಾದ ಬಂಜರು (ಮರುಭೂಮಿ) ಹಾಸಿ ಬಿದ್ದಿದೆ, ಅದರಲ್ಲಿ ಸಾಗುತ್ತಲೇ ಹೋಗಬೇಕು, ಆದರೆ 'ದಿಲ್ಲಿ (ಗುರಿ) ಇನ್ನೂ ಬಲು ದೂರವಿದೆ !*' ಈ ಬಂಜರು ಮೈದಾನ ಕಣ್ಣೆದುರಿಗಿದೆ, ಅಷ್ಟೆ; ನಾವು ಈಜುತ್ತಲೇ ಹೋಗಬೇಕು. ಅಂದರೆ, ಈಗ ದಾರಿ ತೆರೆದಂತಾಯಿತು, ಆಧ್ಯಾತ್ಮಿಕತೆಯ ಆರಂಭ ಸರಿಯಾಗಿ ಆಯಿತೆಂದಾಯಿತು. ಅದರಲ್ಲಿ ಎಷ್ಟು ಮುಂದುವರಿಯುತ್ತೇವೆಯೋ ಅದೆಲ್ಲವೂ ಆಧ್ಯಾತ್ಮಿಕತೆಗೆ ಸಂಬಂಧಿಸಿದೆ. ಲಾಲಾಜಿ ಮಹಾರಾಜರ ಆದೇಶ (Dictate) :

*"ಆದರೆ ಯಾವುದೇ ಸ್ಥಿತಿಯನ್ನೂ ಸಾಕಷ್ಟಾಯಿತು ಎಂದುಕೊಳ್ಳಬಾರದು. ಇನ್ನೂ ದಿಲ್ಲಿ (ಗುರಿ) ಬಲುದೂರವಿದೆ ಎಂದು ರಾಮಚಂದ್ರ ಮೇಲೆ ಬರೆದಿದ್ದಾನೆ. ಇದುವರೆಗೆ ನೀನು ನೋಡಿರುವುದಾದರೂ ಎಷ್ಟು ? ನೋಡತಕ್ಕ ಸ್ಥಿತಿಗಳು ಇನ್ನೂ ಬರಲಿಕ್ಕಿವೆ. ಅದನ್ನು ಅರ್ಥಮಾಡಿಕೊಳ್ಳಲು (ಅನುಭವದಲ್ಲಿ ತಂದುಕೊಳ್ಳಲು) ವಿಶಾಲ ಹೃದಯ, ಹಿರಿದಾದ ಬುದ್ಧಿಮತ್ತೆ ಬೇಕು. ನಮ್ಮಲ್ಲಿ ಆ ಅವಸ್ಥೆಗಳು ಎಲ್ಲರಲ್ಲಿಯೂ ಇಳಿದು ಬರುತ್ತವೆ; ಆದರೆ ಜನರಲ್ಲಿ ಅವುಗಳನ್ನು ಅನುಭಕ್ಕೆ ತಂದುಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಹಾಗಿರುವುದರಿಂದ ಅವರು ಅವುಗಳ ಚೆಲುವಿನಿಂದ ವಂಚಿತರಾಗಿ ಉಳಿಯುತ್ತಾರೆ. ನಿನ್ನ ಜೂನ್ ೨೩ರ ಪತ್ರಕ್ಕೆ ಉತ್ತರಕೊಡುವ ಅಗತ್ಯವಿಲ್ಲ. ಅದರಲ್ಲಿ ಯಾವ ವಿಶಿಷ್ಟ ಸ್ಥಿತಿಯ ವರ್ಣನೆ ಇದೆಯೋ ಅದನ್ನು ನಾನು ಈಗಾಗಲೇ ಬರೆದಿದ್ದೇನೆ. ಸುಖಿಯಾಗಿರು".*

ನಿನ್ನೆ, ಅಂದರೆ, ಜೂನ್ ೨೮, ಶನಿವಾರ, ಹಗಲಿನಲ್ಲಿ ನಿನ್ನಲ್ಲಿ ವಿಚಾರಗಳಿಂದಾಗಿ ಒಂದಿಷ್ಟು ಆಯಾಸವಾಗಿತ್ತೆಂದು ತಿಳಿದು ಬಂದಿತು; ಆದರೆ, ಇಂದು ಅದಿಲ್ಲ. ತೀವ್ರ ವೇಗದಿಂದ ಮುಂದುವರಿಯುತ್ತಿರುವಾಗ ಕೆಲವೊಮ್ಮೆ ಅಂತಹ ಆಯಾಸ ಅನಿಸುತ್ತದೆ. ಅಂಥ ಸಂದರ್ಭದಲ್ಲಿ ಮತ್ತೆ ಊರ್ಜೆ (ಶಕ್ತಿ)ಯನ್ನು ತುಂಬಲಾಗುತ್ತದೆ. ಕೆಲವೊಂದು ಮುಖ್ಯ ಬಿಂದುಗಳನ್ನು ದಾಟುವಾಗ ನನಗೂ ಇದು ಅನುಭವಕ್ಕೆ ಬಂದಿದೆ. ಮತ್ತೆ, ಅದರಿಂದೇನೂ ಬಾಧೆ (ಹಾನಿ) ಇಲ್ಲ. ಎಷ್ಟು



ಸಮಯ ನಿನ್ನನ್ನು 'ಡಿ' ಬಿಂದುವಿನಲ್ಲಿ ನಿಲ್ಲಿಸಿ ಇರಿಸಿಕೊಳ್ಳಬೇಕೆಂಬುದು ನನಗೆ ಈಗ ಗೊತ್ತಾಗುತ್ತಿಲ್ಲ. ಇರಲಿ, ಅದನ್ನು ಒಂದೆರಡು ದಿನಗಳಲ್ಲಿ ನಿರ್ಧರಿಸುತ್ತೇನೆ. ನನಗೆ ಯಾವ ರೀತಿ ಬೆಳಕು (ಸುಳುಹು) ಸಿಗುವುದೋ ಆ ರೀತಿ ಮಾಡುತ್ತೇನೆ.

ಈಗ ಜೂನ್ ೨೪ರ ಪತ್ರ ಬಂದು ಕೈ ಸೇರಿದೆ– ಈ (ಅದರಲ್ಲಿ ಬರೆದ) ಸ್ಥಿತಿಯಂತೂ ತುಂಬ ಚೆನ್ನಾಗಿದೆ. ನಾನೂ ಆ ಸ್ಥಿತಿಗಾಗಿ ಕಾತರಿಸುತ್ತೇನೆ. ನಾನು ನಿನ್ನ ಸ್ಥಿತಿಯನ್ನು ವೀಕ್ಷಿಸಿದ್ದೇನೆ. ಅದು ಎಷ್ಟು ಉತ್ಕೃಷ್ಟವಾದುದೆಂದರೆ ಅದಕ್ಕೋಸ್ಕರ ಸಾವಿರ ರಾಜ್ಯಗಳನ್ನಾದರೂ ನಾನು ಬಲಿಕೊಡಲು (ತ್ಯಾಗ ಮಾಡಲು) ಸಿದ್ಧನಾದೇನು. ಆದರೆ ಇದರ ಅರ್ಥ, ಇನ್ನು ಏನೂ ಬಾಕಿ ಉಳಿದಿಲ್ಲವೆಂದಲ್ಲ. ಈಗ ಇಷ್ಟು ಸಾಕು.

ಹಂಸೀ ಖೇಲ್ ನಹಿ ಪಾಯಿಯಾ, ಜಿನ ಪಾಯಾ ತಿನ ರೋಯ್ ।
ಹಂಸೇ ಖೇಲೇ ಪಿಯ ಮಿಲೇ, ತೋ ಕೌನ್ ದುಹಾಗಿನ್ ಹೋಯ್ ॥


ಪ್ರಿಯನನ್ನು ಹೊಂದುವುದು ಹುಡುಗಾಟವಲ್ಲ, ಅವನನ್ನು ಪಡೆದವರು ಅತ್ತೇ ಅಳುತ್ತಾರೆ. ನಗೆಚಾಟಿಕೆಯ ಹುಡುಗಾಟದಿಂದ ಪ್ರಿಯಕರ ಸಿಗುವಂತಿದ್ದರೆ, ಯಾರು ತಾನೆ ಪ್ರಿಯಕರನ ವಿಯೋಗ ಅನುಭವಿಸುತ್ತಿದ್ದಾರು".

ಶುಭ ಚಿಂತಕ
ರಾಮಚಂದ್ರ

* * * *

P-4-Books-PM-7-Anantyatre-51





**ಪರಮಪೂಜ್ಯ ಸಮರ್ಥ ಸದ್ಗುರು ಶ್ರೀ ಲಾಲಾಜಿ ಮಹಾರಾಜ ಫತೇಹ್‌ಘರ್,**
**(ಉ. ಪ್ರ)**



ಕ್ರಮ ಸಂಖ್ಯೆ – ೫೪ **ಪತ್ರ ಸಂಖ್ಯೆ – ೨೩೦** ಷಾಹಜಹಾನಪುರ
೧೭–೦೭–೧೯೫೨

**ಪರಮಪೂಜ್ಯ ಸಮರ್ಥ ಸದ್ಗುರು ಶ್ರೀ ಲಾಲಾಜಿ ಮಹಾರಾಜರ ಆದೇಶ**

ಭಾಗ್ಯವಂತೆ ಪುತ್ರಿ ಕಸ್ತೂರಿ, ಸುಖಿಯಾಗಿರು,

ಕೆಲವು ಜನರಾದರೂ ರಾಮಚಂದ್ರನಂತೆ ಆಗಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಆಶಯವಾಗಿತ್ತು. ಆದರೆ ನನಗೆ ನಿರಾಸೆಯೇ ನಿರಾಸೆ ಉಳಿದಿದೆ. ಆದರೂ, ಇನ್ನೂ ನಾನು ಕೆಲವರು ಹಾಗೆ ಆಗಲೆಂದು; ಅಭಿಲಾಷೆ ಇಟ್ಟುಕೊಂಡೇನು. ಆದರೆ ರಾಮಚಂದ್ರನ ದೈಹಿಕ ನಿಃಶಕ್ತಿಯನ್ನು ನೋಡಿದರೆ, ಅವನ ದೇಹಾರೋಗ್ಯದ ಸ್ಥಿತಿ ಅಂಥ ದೊಡ್ಡ ಭಾರ ಹೊರಲು ಶಕ್ತವಾದೀತೆ ? ಎಂಬ ವಿಚಾರ ಬರುತ್ತದೆ. ಆಧ್ಯಾತ್ಮಿಕತೆಯ ವಿಷಯದಲ್ಲಿ ಅವನು ಇನ್ನೂ ಯುವಕನೇ ಸರಿ. ಮತ್ತು ಯೌವನಭರಿತನಾಗಿಯೇ ಇರುವನು; ಆದರೆ ಪರಿಶ್ರಮ ವಹಿಸುವುದು ದೈಹಿಕ ಸ್ವಾಸ್ಥ್ಯವನ್ನು ಅವಲಂಬಿಸಿದೆ. ಆಧ್ಯಾತ್ಮಿಕತೆ, ಬೇಕೆಂದು ಬಯಸಿದಮಾತ್ರಕ್ಕೆ ಬಾಯಿಗಿಡುವ ತುತ್ತು ಎಂದು ಜನರು ತಿಳಿಯುತ್ತಾರೆ. ಯಾರೂ ಕಠಿಣ ಪರಿಶ್ರಮ ಮಾಡಲು ಬಯಸುವುದಿಲ್ಲ. ಕಾಂತಿ, ಶೋಭೆಗಳನ್ನು ತರುವುದು ಹೇಗೆಂಬುದನ್ನು ಅವರು ಕಲಿಯಲೇ ಇಲ್ಲ. ಅತ್ಯುನ್ನತ ಪದದ ಬಗ್ಗೆ ಅವರು ಕೇವಲ ಕೇಳಿದ್ದಾರೆ, ಅಷ್ಟೆ. ಮತ್ತೆ, ಹೆಚ್ಚೆಂದರೆ ಅಲ್ಲಿಯವರೆಗೆ ತಾವು ತಲುಪಬೇಕೆಂಬುದನ್ನು ತಿಳಿದುಕೊಂಡಿದ್ದಾರೆ. ಜಗತ್ತನ್ನು ತ್ಯಾಗಮಾಡುವುದರ ಬದಲಿಗೆ ಅವರು 'ಪ್ರಭು' (ಸದ್ಗುರು)ವನ್ನೇ ತ್ಯಾಗ ಮಾಡಿದ್ದಾರೆ. ಅವನು (ರಾಮಚಂದ್ರ) ಪತ್ರಗಳನ್ನು ಬರೆದನು ಮತ್ತು ಅವರು ಅರ್ಥಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟರು, ಆದರೆ ಎಲ್ಲವೂ ನಿಷ್ಪ್ರಯೋಜಕ ! ಏನೂ ಪರಿಣಾಮವಾಗಲಿಲ್ಲ. ಈಗ, ಅದು ಭಗವಂತನ ಇಚ್ಛೆಯೆಂಬುದನ್ನುಳಿದು, ಹೇಳುವದೇನೂ ಉಳಿಯಲಿಲ್ಲ. ಜನರು ಅಲ್ಪಸಂಖ್ಯೆಯಲ್ಲಿರುಬಹುದು ಅಥವಾ ಬಹುಸಂಖ್ಯೆಯಲ್ಲಿರುಬಹುದು, ಅದು ಮಹತ್ತ್ವದ್ದಲ್ಲ. ಬಹಳ ಜನರೇ ಇದ್ದರೂ ಅವರಲ್ಲಿ ಕೆಲವರಾದರೂ ರಾಮಚಂದ್ರನಂತಾದರೆ, ಅದೇ ಒಳಿತು. ಇದರ ಅರ್ಥ, ಬಹು ಜನರು ಸಂಸ್ಥೆಯನ್ನು ಸೇರಲು ಅನುಮತಿ ಕೊಡಲಾಗದು ಎಂದಲ್ಲ, ಯಾಕೆಂದರೆ, ಅದರ ಬಾಗಿಲು ಸದಾ ಎಲ್ಲರಿಗೂ ತೆರೆದೇ ಇದೆ. ಈಗ ನಾನು ನನ್ನ ಆಶೆಗಳನ್ನು ನಿನ್ನ ಮೇಲಿಟ್ಟಿದ್ದೇನೆ ಎನ್ನು; ಆದರೆ ನಿನ್ನ ಆರೋಗ್ಯವೂ ಮಿತಿ ಮೀರಿ ಕ್ಷೀಣಿಸಿದೆ. ಹಾಗಿದ್ದರೂ ನಿನ್ನ ತಳಮಳ, ಮತ್ತು ಸದ್ಗುರುವಿನ ಮೇಲಿನ ಭಕ್ತಿಗಳು ನಿರೀಕ್ಷೆಗೂ ಮೀರಿ, ಅದ್ಭುತಗಳನ್ನು ಎಸಗಬಲ್ಲವು. ಮತ್ತು ನಿನ್ನ ಆಧ್ಯಾತ್ಮಿಕ ಉನ್ನತಿಗೋಸ್ಕರ ನಾನು ಆಶಿಸಲೇಬೇಕು. ಒಬ್ಬ ಹುಡುಗ (ಪುರುಷ) ಅಲ್ಲದಿದ್ದರೆ, ಹುಡುಗಿ (ಸ್ತ್ರೀ) ಆಧ್ಯಾತ್ಮಿಕ ಉನ್ನತಿಯನ್ನು ಪಡೆದರೇನಾಯಿತು ? ಹುಡುಗ–ಹುಡುಗಿಯರಲ್ಲಿ ಯಾವ ವ್ಯತ್ಯಾಸವೂ ಇಲ್ಲ; ಅವರ ನಡುವೆ ಭೇದ ಕಲ್ಪಿಸಿರುವುದು ಸಮಾಜ. ಇಬ್ಬರೂ ಒಂದೇ ಬೇರಿನಿಂದ

P-4-Books-PM-7-Anantyatre-52



ಹುಟ್ಟಿ ಬೆಳೆದ ಚಿಗುರುಗಳಾಗಿದ್ದಾರೆ. ಕೆಲಸ ಎಂತಿರಬೇಕೆಂದರೆ, ಮಿಷನ್ನು ಯಶಸ್ಸು ಪಡೆಯುತ್ತಲೇ, ಶೋಭಿಸುತ್ತಲೇ ಇರಬೇಕು, ಮತ್ತು, ಎಂದೂ ಮಿಷನ್ನಿನ ವಿರುದ್ಧ ಬೆರಳು ತೋರಿಸಿ ಮಾತನಾಡುವಂತಿರಬಾರದು. ಅವನು ಕೆಲವರನ್ನು ಸಮಯದ ಅಗತ್ಯಕ್ಕೆ ಸಲ್ಲುವಂತೆ ತಯಾರುಮಾಡಿದ್ದಾನೆಂಬುದು ನಿಃಸಂದೇಹ, ಆದರೆ ಮೊತ್ತಮೊದಲಿಗೆ ಅವರಿಂದ ಕೆಲಸ ತೆಗೆದುಕೊಳ್ಳಲು ಯಾರೂ ಇಲ್ಲ. ಅಂಥವನೊಬ್ಬ ಸಿಗುತ್ತಾನೆ ಎಂದಿಟ್ಟುಕೊಂಡರೆ, ಅವನು ತನ್ನೊಂದಿಗೆ ಸಂಪೂರ್ಣ ಸ್ಥೂಲತೆ (ಜಡತೆ)ಯನ್ನೂ ತರುತ್ತಾನೆ.

ಪ್ರಶಿಕ್ಷಕರಲ್ಲಿ ನಾನು ಆಯ್ಕೆಮಾಡಿಕೊಳ್ಳಬೇಕೆಂದರೆ, ಕೇವಲ ಮಾಸ್ಟರ್ ಸಾಹೇಬ (ಈಶ್ವರ ಸಹಾಯ್)ರನ್ನು ಆಯ್ಕೆಮಾಡಿಕೊಳ್ಳುವುದು ಸಮರ್ಥನೀಯವಾದೀತು; ಮತ್ತು ಅವರ ಮೇಲೆ ಒಂದಿಷ್ಟು ಭರವಸೆ ಇಡಬಹುದು – ಆದರೆ ಪ್ರತಿಯೊಬ್ಬನೂ ಪ್ರತಿಯೊಂದು ವಿಷಯದಲ್ಲಿ ದಕ್ಷನಾಗಿರುವುದಿಲ್ಲ. ಅವನ ಕೆಲಸ ಯಾವುದೋ ಅದನ್ನು ಮಾತ್ರ ಚೆನ್ನಾಗಿ ಮಾಡಲು ಸಾಧ್ಯ. ಒಬ್ಬನೇ ವ್ಯಕ್ತಿಗೆ ಎಲ್ಲ ಕೆಲಸಗಳನ್ನೂ ಒಪ್ಪಿಸಿದರೆ ಅವನು ಯಾವ ಕೆಲಸವನ್ನೂ ಸರಿಯಾಗಿ ಮಾಡಲಾರ.

ಸ್ವಾಮೀ ವಿವೇಕಾನಂದರ ಆದೇಶ : 'ಕೆಲವೊಂದು ಕೆಲಸಗಳಿಗೆ, ನಿರ್ದಿಷ್ಟ ವಿಭಾಗಗಳಿರಬೇಕು' (ವಿಶಿಷ್ಟ ಕೆಲಸವನ್ನು ವಿಶಿಷ್ಟ ವ್ಯಕ್ತಿಗೆ ಒಪ್ಪಿಸಬೇಕು).

ಇಲ್ಲಿಯ ಪರಿಸ್ಥಿತಿ ಎಂತಿದೆಯೆಂದರೆ, ಬರೆಯುವವನೂ ಒಬ್ಬನೇ, ಅವನೇ ಎಲ್ಲ ಸಹಾಯುಮಾಡುವವ ಕೂಡ, ಸಮಾರಂಭಗಳನ್ನು ಏರ್ಪಡಿಸಿ ನಿರ್ವಹಿಸುವವನೂ ಅವನೇ; ಯಾಕೆಂದರೆ ಅವನೊಬ್ಬ ಹೃದಯಪೂರ್ವಕ ನಿಷ್ಠನಾಗಿದ್ದಾನೆ, ಮತ್ತು ಇತರರು ಅದಕ್ಕೆ ಮಹತ್ತ್ವ ಕೊಡುವುದಿಲ್ಲ. ಚೌಬೇಜಿಯವರ ಆಸಕ್ತಿಯೇನೋ ಇತ್ತ ಇದೆ, ಆದರೆ ಅವರ ಬಗ್ಗೆ ರಾಮಚಂದ್ರನಿಗಿರುವ ಆಸಕ್ತಿ ಕಡಿಮೆಯೇನಿಲ್ಲ. ಅವರು (ಚೌಬೇಜಿ) ಪ್ರಗತಿಹೊಂದುತ್ತಿದ್ದಾರೆ, ಮತ್ತು ಮಿಷನ್ನಿನ ಒಳಿತಿಗೋಸ್ಕರ ವಿಚಾರ ಮಾಡುತ್ತಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ, ಯಾವನು ಒಂದೇ ಬಾಗಿಲಿನ ಮುಂದೆ (ಅಂಟಿಕೊಂಡು) ನಿಲ್ಲುವನೋ, ಅವನತ್ತ ಲಕ್ಷ್ಯ ಹೆಚ್ಚು ಇರುತ್ತದೆ. ನಾನು ರಾಮಚಂದ್ರನಂಥವರನ್ನು ಮೆಚ್ಚಿಕೊಳ್ಳುತ್ತೇನೆ. ಯಾರಾದರೂ ಅವನ ಕುತ್ತಿಗೆಯ ಮೇಲೆ ಚೂರಿ ಇಟ್ಟರೂ ಅವನು ಸರಿಯಾದುದನ್ನೇ (ಸತ್ಯವನ್ನೇ) ಹೇಳಲು ಹಿಂಜರಿಯುವುದಿಲ್ಲ. ಯಾರೇ ವಿರೋಧಿಸಲಿ, ಅಥವಾ ತಪ್ಪು ತಿಳಿಯಲಿ, ಚಿಂತೆ ಇಲ್ಲ. ಪರಿಣಾಮವೇನೆಂದರೆ ಯಾರಾದರೂ ಅವರ ತತ್ತ್ವ (ನಿಯಮ) ಒಪ್ಪದಿರಬಹುದು. ಆದರೆ ಯಾರೂ ಅವನ ವಿರುದ್ಧ ಹೋಗಲಾರರು. ಈಗ ಹೇಳು, ನಿನ್ನ ಮನಃಸಂತೋಷವಾಗುವಂತೆ, ನಿನ್ನ ಪ್ರಗತಿಯ ಬಗ್ಗೆ ಮೆಚ್ಚುಗೆ ಹೇಳಲೇನು ? ನನಗನಿಸುತ್ತದೆ, ನಾನು ಇಷ್ಟು ಹೇಳಿದರೆ ಸಾಕು – ನಿನ್ನ ಬಗ್ಗೆ ನನಗೆ ತುಂಬಾ ಸಂತೋಷವಿದೆ. ಇಂದು ಮುಂಜಾನೆ ರಾಮಚಂದ್ರನಲ್ಲಿ ತೃಷೆ ಮಿತಿ ಮೀರಿ ಹೆಚ್ಚಿತು. ಯಾವುದರ ತೃಷೆ ಎಂದು ಹೇಳಲೇನು – 'ಕೆಲಸ



ತೆಗೆದುಕೊಳ್ಳುವ ಬಗೆಗಿನ ತೃಷೆ'. ಅದಕ್ಕೋಸ್ಕರ ಅವನು ಬೇರೆ ಬೇರೆ (ವಿವಿಧ) ಸಾಧನ – ವಿಧಾನಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದ. ಯಾರನ್ನಾದರೂ ವಿಚಾರಶಕ್ತಿಯಿಂದ (ಚಿಚ್ಛಕ್ತಿ) ಕೆಲಸ ತೆಗೆದುಕೊಳ್ಳಲು ತಯಾರು ಮಾಡಲೆ? ಎಂದು ಒಮ್ಮೆ ಯೋಚಿಸಿದರೆ, ಒಮ್ಮೆ ಇನ್ನಾವುದರ ಮೂಲಕ ಕೆಲಸ ತೆಗೆದುಕೊಳ್ಳುವಂತೆ ಮಾಡಿ, ಸಂಪೂರ್ಣ ಅದೇ ಕೆಲಸದಲ್ಲಿ ತೊಡಗಿರುವಂತೆ ಮಾಡಲೇ? – ಎಂದು ಯೋಚಿಸಿದ. ಈಗ ಆ ಕೆಲಸದ ಧ್ಯೇಯಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವವರು ಯಾರು ? ಯಾರಲ್ಲಿ ಯಾವ ತೆರನಾದ ಸಾಮರ್ಥ್ಯ ಉಂಟು ? ಅವರು ಶಾಂತವಾಗಿ ವಿಚಾರಮಾಡಿ, ಯಾವ ವಿಶಿಷ್ಟ ರೀತಿಯ ಕೆಲಸದಲ್ಲಿ ತಮಗೆ ಆಸಕ್ತಿ (ಅಭಿರುಚಿ) ಇರುವುದೆಂಬುದನ್ನು ಬರೆದು ತಿಳಿಸಲಿ; ಅದೇ ಕೆಲಸವನ್ನು ಅವರಿಗೆ ಒಪ್ಪಿಸಬಹುದು. ಹುಡುಗರಲ್ಲಿ (ಪುರುಷ) ಮತ್ತು ಹುಡುಗಿಯರಲ್ಲಿ (ಸ್ತ್ರೀ) ನಾನು ಯಾವುದೇ ವ್ಯತ್ಯಾಸ ಎಣಿಸುವುದಿಲ್ಲ; ನನ್ನ ಕಣ್ಣಿಗೆ ಇಬ್ಬರೂ ಸಮ. ಹೆಣ್ಣುಮಕ್ಕಳಿಗೆ ಕೆಲವು ನಿಬಂಧನೆಗಳಿರುವುದೇನೋ ಸರಿಯೆ, ಆದರೆ ಅವರಿಗೆ ಅನುಮತಿ ಕೊಡಬಾರದೆಂದೇನಿಲ್ಲ. ಗಂಡುಮಕ್ಕಳಿಗೆ ಹೆಚ್ಚು ಸ್ವಾತಂತ್ರ್ಯ ಕೊಡಲಾಗುವುದು, ಅಷ್ಟೆ. ನಾನು ಗಂಡು–ಹೆಣ್ಣು ಮಕ್ಕಳಿಬ್ಬರಿಗೂ (ಅವರ) ಕರ್ತವ್ಯಗಳನ್ನು ವಿಧಿಸುತ್ತೇನೆ.

**ಶ್ಲೋಕ :** ಮನ್ ಆ(ಂ) ಮೋರಮ್ ಕಿ ಅಜ಼್ ಪಾಯಂ ಬೇಮಾಲಂದ್ ।
ನ ಜಂಬೂರಮ್ ಕಿ ಅಜ಼ನೇಶಮ್ ಬೇನಾಲಂದ್ ॥

**ಅರ್ಥ :** ನಾನು ಒಂದು ಇರುವೆ, ಜನರು ತಮ್ಮ ಪಾದದ ಕೆಳಗೆ ತುಳಿಯಬಹುದು,
ನಾನು, ನನ್ನಿಂದ ಜನರಿಗೆ ನೋವಾಗುವಂಥ, ಕಣಜದ ಹುಳು ಅಲ್ಲ.

ನಿನ್ನ ಹಿತೈಷಿ
(ಸಮರ್ಥ ಶ್ರೀ ಲಾಲಾಜಿ ಮಹಾರಾಜ, ಫತೇಹ್‌ಘರ್)

* * * *

ಕ್ರಮ ಸಂಖ್ಯೆ – ೫೫ **ಪತ್ರ ಸಂಖ್ಯೆ – ೨೩೩** ಷಾಹಜಹಾನಪುರ
೨೪–೦೭–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ಕೈಸೇರಿತು. ಇಂದು ನಾನು ನಿನ್ನನ್ನು 'ಇ' (E) ಬಿಂದುವಿನಿಂದ 'ಎಫ್' (F) ಬಿಂದುವಿಗೆ ಮುಟ್ಟಿಸಿದ್ದೇನೆ. ನಿನ್ನ ಅನುಭವವನ್ನು ಬರೆದು ತಿಳಿಸು. ಈ ಬಿಂದುವಿನಲ್ಲಿ ನಿನ್ನನ್ನು ಹೆಚ್ಚು ಸಮಯ ನಿಲ್ಲಿಸಬಾರದೆಂದಿದ್ದೇನೆ. ಆದರೆ ಎಲ್ಲಿಯಾದರೂ ನಿಲ್ಲಿಸುವ ಆವಶ್ಯಕತೆ ಬಂದರೆ, ನಾನು ಅಸಹಾಯಕನಾಗುತ್ತೇನೆ. ನಮ್ಮ ಸತ್ಸಂಗದಲ್ಲಿ ಈ ಬಿಂದುಗಳಿಗೆ ಮಹತ್ತ್ವವಿಲ್ಲ. ಇಲ್ಲಿ, ಜನರಾದರೋ (ಅಭ್ಯಾಸಿಗಳು) ಈ ಬಿಂದುವಿನಿಂದ ಕೂಡ ಹೊರಬರಲು ಬಯಸುವುದಿಲ್ಲ. ಅಭ್ಯಾಸದ ಆರಂಭದಿಂದಲೇ ಶಾಂತಿಯನ್ನು ಬಯಸುವುದೂ ಇದೆ. ಮತ್ತೆ, ಅವರಿಗೆ

P-4-Books-PM-7-Anantyatre-53



ಮೊದಲ ಅಥವಾ ಎರಡನೆಯ ಬೈಠಕ್ಕಿನಲ್ಲಿ ಶಾಂತಿ ಅನುಭವಕ್ಕೆ ಬರದಿದ್ದರೆ, ಅವರ ದೃಷ್ಟಿಯಲ್ಲಿ ನಾನು ಅಸಮರ್ಥ ಮತ್ತು ಪ್ರಯೋಜನಕ್ಕೆ ಬಾರದವನೆಂದೆನಿಸಿಬಿಡುತ್ತೇನೆ. ಮೊದಲನೆಯ ಬೈಠಕಿನಲ್ಲಿ ಅವರಿಗೆ ತುಸು ಶಾಂತಿ ಅನುಭವವಾಗಲೆಂದು ನಾನೂ ಕೂಡ ಬಯಸುತ್ತೇನೆ. ಲಾಲಾಜಿಯವರ ಕೃಪೆ ಅವರ ಮೇಲೆ ಅವಶ್ಯ ಸುರಿಯುತೊಡಗುತ್ತದೆ. ಆದರೆ ಕೆಲವರು ಎಂಥವರಿರುತ್ತಾರೆಂದರೆ, ಅವರು ನನ್ನನ್ನು ಮಹಾತ್ಮ ಎಂಬ ಭಾವನೆಯಿಂದ ಬಂದಿರುವ ಕಾರಣ ತಮಗೆ ಶಾಂತಿಯ ಅನುಭವ ಆಯಿತು, ಅದು ತಮ್ಮದೇ ಯೋಗ್ಯತೆಯಿಂದಾಗಿ ಆ ವಸ್ತು (ಶಾಂತಿ) ತಮ್ಮೊಡನೆಯೆ ಇದೆ, ಎಂದು ತಿಳಿಯುವವರೂ ಇದ್ದಾರೆ. ಆದರೆ, ನಾನು ನೋಡಿದ್ದೇನೆ, ಜನರು ಪ್ರಸ್ತುತ ಪ್ರಸಿದ್ಧಿ ಪಡೆದ ಸುಖದೇವಾನಂದ, ನಾರದಾನಂದ ಮುಂತಾದ ಮಹಾತ್ಮರೆಡೆಗೆ ಹೋಗುತ್ತಾರೆ, ಹಾಗೂ ತಿಂಗಳುಗಟ್ಟಲೆ ಉಳಿದುಕೊಳ್ಳುತ್ತಾರೆ. ಮತ್ತೆ ಅಲ್ಲಿ ಈ ಶಾಂತಿಯ ಪ್ರಶ್ನೆ ಯಾಕೆ ಏಳುವುದಿಲ್ಲ ? ಇದರ ಕಾರಣ ಏನಿರಬಹುದೆಂದು ನಿನಗೆ ಅನಿಸುತ್ತದೆ ? ಕೇವಲ ಒಂದೆರಡು ಬೈಠಕ್‌ಗಳಲ್ಲಿ ಶಾಂತಿ ಅನುಭವಕ್ಕೆ ಬರುವುದು ತುಂಬಾ ಕಠಿಣ. ಅದು ಅಭ್ಯಾಸ ಸಂಬಂಧಿತ ಸಂಗತಿ. ಶಾಂತಿ ಯಾವುದರಿಂದ ವರ್ಧಿಸುವುದೋ ಅಂಥ ವಾತಾವರಣವನ್ನು ಉಂಟುಮಾಡುವುದು ನನ್ನ ಕರ್ತವ್ಯ. ನನಗೆ ತಿಳಿದಂತೆ ಅವರಲ್ಲಿ ಶಾಂತಿ ಅನುಭವಕ್ಕೆ ಬರುವುದರ ಕಾರಣವೆಂದರೆ, ಅವರ ದೃಷ್ಟಿಯಲ್ಲಿ ನಾನೊಬ್ಬ ಅಸಮರ್ಥ ಎಂದಾಗುವುದು ಲಾಲಾಜಿ ಮಹಾರಾಜರಿಗೆ ಬೇಕಿಲ್ಲ. ಇದಕ್ಕೋಸ್ಕರ ಅವರಿಗೆ ಸಹಸ್ರ ಸಹಸ್ರ ಧನ್ಯವಾದಗಳು ಸಲ್ಲಬೇಕು. ನನ್ನ ಸಾಧನೆಯ ಕಾಲದಲ್ಲಿ ನಾನು ೨೨ ವರ್ಷಗಳನ್ನು ತಳಮಳ (ವ್ಯಾಕುಲತೆ)ಯಲ್ಲಿಯೇ ಕಳೆದೆ. ಮತ್ತು ಅದರಲ್ಲಿ ಎಂಥ ಶಾಂತಿ ಮತ್ತು ಸಂತೋಷವಿತ್ತೆಂದರೆ, ಅದು (ಹಾಗೆನ್ನಲಾದ) 'ಶಾಂತಿ'ಯಲ್ಲಿಯೂ ಇಲ್ಲ.

ನೀನು ನಿನ್ನ ಒಂದು ಪತ್ರದಲ್ಲಿ ಯಾವುದೋ ಒಂದು ಸಂಗತಿಯ ಬಗ್ಗೆ ಕೇಳಿದ್ದೆ, ಅದನ್ನು ಕುರಿತು ಬರೆಯುವುದನ್ನು ನಾನು ಮರೆತಿದ್ದೆ; ಈಗ ಬರೆಯುತ್ತಿದ್ದೇನೆ. ಕ್ಲೋರೋಫಾರ್ಮಿನ ಪರಿಣಾಮ ಸಂಪೂರ್ಣ ನಿವಾರಣೆಯಾಗಿದೆಯೋ ಇಲ್ಲವೋ ಎಂದು ನೀನು ಕೇಳಿದ್ದೆ. ಅದರ ತೀಕ್ಷ್ಣತೆ ಕಡಿಮೆಯೇನೋ ಆಗಿರಬಹುದು, ಆದರೆ ಅದು ಅನುಭವಕ್ಕೆ ಬಂದಿಲ್ಲ. ನಾನು ನಿನಗೆ 'ಕೆಲಸ' ಮಾಡುವ (ಒಂದು) ವಿಧಾನವನ್ನು ತಿಳಿಸುತ್ತೇನೆ. ನೀನು ಯಾವಾಗಲೇ ಕೆಲಸ ಮಾಡಲಿ, ಆಗ, ನೀನು ನನ್ನ ಸಂಕಲ್ಪಶಕ್ತಿಯಿಂದ ಕೆಲಸ ತೆಗೆದುಕೊಳ್ಳುತ್ತಿರುವೆ ಎಂದು ಭಾವಿಸಬೇಕು. ಆಧ್ಯಾತ್ಮಿಕ ಉನ್ನತಿ ನೀಡುವಾಗ ಅಥವಾ ಯಾವುದೇ ಈಶ್ವರೀಯ ಕೆಲಸಮಾಡುವಾಗ ಈ ವಿಧಾನವು ಬಹಳ ಬಹಳ ತ್ವರಿತದಲ್ಲಿ ಇಚ್ಛಿತ ಪರಿಣಾಮ ಉಂಟುಮಾಡುತ್ತದೆ. ಒಂದು ವೇಳೆ, ೧೬ ವೃತ್ತಗಳನ್ನೂ ದಾಟಿ, ತನ್ನ ಗುರುವಿನಲ್ಲಿ ಲಯಾವಸ್ಥೆ ಪಡೆದ ಅಭ್ಯಾಸಿಗೆ ಈ ವಿಧಾನ ಅಗತ್ಯವಿಲ್ಲ. ಆದರೆ ಅಲ್ಲಿಯವರೆಗೆ ಬೈಠಕ್ ನೀಡುವಾಗ, ಗುರುವೇ ಬೈಠಕ್ (ಪ್ರಾಣಾಹುತಿ) ಕೊಡುತ್ತಿದ್ದಾನೆ ಎಂದು ಭಾವಿಸಬೇಕು. ಅದು



ಅದ್ಭುತ ಪರಿಣಾಮ ಉಂಟುಮಡುತ್ತದೆ. ಇದು ಪ್ರಶಿಕ್ಷರಿಗೆ ಗೊತ್ತಿರಬೇಕು. ಯಾವಾಗಲೂ ಬೈಠಕ್ ಕೊಡುವಾಗ ಪ್ರಾಣಾಹುತಿ ಕೊಡುವವ ತಾನಲ್ಲ, ಕೊಡುತ್ತಿರುವವನು 'ಗುರು'ವೇ ಎಂದು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸಂಕ್ಷೇಪವಾಗಿ ಹೇಳುವುದಾದರೆ, ತನ್ನನ್ನು ತಾನು ಗುರುವಿನ ರೂಪವೆಂದೇ ತಿಳಿದುಕೊಳ್ಳಬೇಕು. ನಾನು ಯಾರಿಗಾದರೂ ಬೈಠಕ್ ಕೊಡಬೇಕಿದೆ ಎಂದುಕೊಳ್ಳೋಣ. ಆಗ ಬೈಠಕ್ ಕೊಡುವ ಪೂರ್ವದಲ್ಲಿ ನನ್ನ ಹೃದಯ, ಮನಸ್ಸು, ಆತ್ಮ ಎಲ್ಲವೂ ಲಾಲಾಜಿಯವರದೆಂದು ಭಾವಿಸಿ ನಂತರ ಬೈಠಕ್ ಕೊಡಬೇಕು.

ನಿನ್ನ ೨೩–೭–೧೯೫೨ರ ಪತ್ರ ಕೈಸೇರಿದೆ. ನೀನು ನಿನ್ನ 'ಆಲಸ್ಯ'ದ ಸ್ಥಿತಿಯ ಬಗ್ಗೆ ಬರೆದಿದ್ದೀಯೆ. ಅದು ಆತ್ಮದ ಹೊರ ಆವರಣ. ನಾವು ಅದರ ಸಮೀಪಕ್ಕೆ ಬಂದಾಗ 'ನಿಷ್ಕ್ರಿಯ'ವಾದ ಅದರ ಆವರಣ ಅನುಭವಕ್ಕೆ ಬರುತ್ತದೆ. ಮತ್ತು ಅದು ನಮ್ಮ ಬಾಹ್ಯ ಜೀವನದ ರೀತಿಯ ಮೇಲೆಯೂ ತನ್ನ ಪ್ರಭಾವ ತೋರ್ಪಡಿಸುತ್ತದೆ.

ಅಮ್ಮಾಜಿಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೬ **ಪತ್ರ ಸಂಖ್ಯೆ – ೨೩೮** ಷಾಹಜಹಾನಪುರ
೩೧–೦೭–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

೨೬ನೆಯ ಜುಲೈ ೧೯೫೨ರ ನಿನ್ನ ಪತ್ರ ತಲುಪಿತು. ಇದು 'ಈ' (E) ಬಿಂದುವಿನ ಸ್ಥಿತಿ. 'ರುಕ್ಷ' (dry) ಸ್ಥಿತಿ ಒಳ್ಳೆಯದೇ; ಅದನ್ನು ಸ್ಥಿತಿರಹಿತ ಸ್ಥಿತಿ (Conditionless condition) ಎಂದು ಕರೆಯಲಾಗುತ್ತದೆ. ಅಂದರೆ ಅಲ್ಲಿ ಯಾವುದೇ 'ಸ್ಥಿತಿ' ಇರುವುದಿಲ್ಲ. ಈ 'ಖುಷ್ಕ್ ಹಾಲತ್' (ರುಕ್ಷ ಸ್ಥಿತಿ) ಸುಸ್ಥಾಪಿತವಾಗುವುದು ಒಂದು ಅದ್ಭುತ (ಪವಾಡ). 'ಮಾಲಿಕ' (ಗುರು)ನಲ್ಲಿ ಆಕರ್ಷಣಶಕ್ತಿ ಉಂಟು ಎಂದು ನೀನು ಬರೆದಿದ್ದೀಯೆ. ಅದನ್ನು ವೀಕ್ಷಿಸಿ, ಅನುಭವಪಟ್ಟು ನಂತರ ಬರೆ. ನೀನು ಅದರ ಕುರಿತು ಬರೆದಾಗ, ನಾನೂ ಲಕ್ಷ್ಯವಿಟ್ಟು ನೋಡಿದೆ, ಮತ್ತೆ ನನಗೂ ಅದು ಅನುಭಕ್ಕೆ ಬಂದಿತು. ಶ್ರೀ ಕೃಷ್ಣನ ಕಾಲದಲ್ಲಿ ಇದು ಖಂಡಿತ ಇತ್ತು.

ನಿನ್ನ ಸೋದರ–ಸೋದರಿಯರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

P-4-Books-PM-7-Anantyatre-54



ಕ್ರಮ ಸಂಖ್ಯೆ – ೫೭ **ಪತ್ರ ಸಂಖ್ಯೆ – ೨೩೯** ಷಾಹಜಹಾನಪುರ
೦೪–೦೮–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷದಿಂದಿರು,

ಈಗ ಜುಲೈ ೩೦ (೧೯೫೨)ರ ಪತ್ರ ಬಂದಿತು. ನಾನು ಈಗಾಗಲೇ ಬರೆದಿರುವಂತೆ ನಿನ್ನ ಇರವು ಈಗ 'ಎಫ್' (F) ಬಿಂದುವಿನಲ್ಲಿದೆ; ಆದರೆ ನನ್ನ ಪ್ರಾಣಾಹುತಿ (Transmission) 'ಎಫ್' ಬಿಂದುವಿನ ಯಾತ್ರೆಗೆ (ಮಾಡಿಸಲು) ಕೆಲಸಮಾಡುತ್ತಿಲ್ಲ, ಮತ್ತು ಆ ಬಿಂದು ಚೆನ್ನಾಗಿ ಪೂರ್ಣರೂಪದಲ್ಲಿ ತೆರೆದುಕೊಳ್ಳುತ್ತಿಲ್ಲ. ಅದರ ಕಾರಣವೇನೆಂಬುದು ಇನ್ನೂ ಗೊತ್ತಿಲ್ಲ. "ಈಗ ಸ್ಥಿತಿಯು 'ಆರ್ದ್ರ'ವೆಂದಾಗಲೀ, 'ರುಕ್ಷ'ವೆಂದಾಗಲಿ ಅನಿಸುತ್ತಿಲ್ಲ" ಎಂದು ನೀನು ಬರೆದಿದ್ದೀಯೆ. ನೀನು 'ಆತ್ಮ'ದ ಸಮೀಪ ತಲುಪಿರುವೆಯೆಂಬುದು ಇದರ ಅರ್ಥ. ಆದರೆ ಇನ್ನೂ ನಿನ್ನ ವಿಚಾರದಲ್ಲಿ 'ಆರ್ದ್ರ' ಮತ್ತು 'ರುಕ್ಷ'ದ ಗುರುತು ಉಳಿದಿದೆ. 'ಶುದ್ಧ ಸ್ಥಿತಿ' ಯಾವುದೆಂದರೆ ಅದರಲ್ಲಿ ಆ ಸ್ಥಿತಿಯ ಅರಿವೂ ಇರುವುದಿಲ್ಲ. ನೀನು ನಿನ್ನ ಸಾಧನೆಯಲ್ಲಿ ಇದೇ ರೀತಿ ಮಗ್ನಳಾಗಿ ಇದ್ದರೆ ಭಗವಂತನು ಈ ಸ್ಥಿತಿಯನ್ನು ನಿನಗೆ ಖಂಡಿತವಾಗಿ ದಯಪಾಲಿಸುತ್ತಾನೆ. "ಬಹುತೇಕ 'ಖಾಲಿ ಬಯಲು' (ಸ್ಥಿತಿ) ನನ್ನಲ್ಲಿ ಕರಗಿ ಹೋಗುತ್ತಿದೆ" ಎಂದು ಬರೆದಿದ್ದೀಯೆ. ಈ ಸ್ಥಿತಿ ಎಂಥದೆಂದರೆ, ಒಬ್ಬನ ಮನೆ ಬಿದ್ದು ಬಯಲಾಗಿಹೋದರೆ, ಅಲ್ಲಿಯೇ ಬಹುಕಾಲ ಇದ್ದುದರ ಪರಿಣಾಮವಾಗಿ ಅದೂ (ಬಯಲೂ) ತನಗೇ ಸೇರಿದ್ದೆಂಬ ಭಾವನೆ ಇರುತ್ತದೆ; ತದನಂತರ ಆ ಬಯಲು ಇರುವುದೆಂಬ ಅನುಭವ ಹೊರಟು ಹೋಗುತ್ತದೆ; ಹಾಗೆ 'ಬಯಲು ಕರಗಿ' ಹೋಗುತ್ತಿದೆಯೆಂದೆನಿಸುತ್ತಿದೆ ಎಂಬುದರ ಹಿಂದಿನ ಅನಿಸಿಕೆ (Feeling) ಏನಿದೆ ? ಅದರ ಬಗ್ಗೆ ಬರೆದು ತಿಳಿಸು ಅದರ (ನೀನು ಬರೆದುದರ) ಅರ್ಥ. ಸಿಂಧುವು ಬಿಂದುವಿನಲ್ಲಿ ಲೀನವಾಗಿ (ಸಮರಸವಾಗಿ) ಹೋದಂತೆ, ಎಂದಾದರೆ ಅದು ಬಹಳೇ ಒಳ್ಳೆಯ ಸ್ಥಿತಿ.

'ನಿನ್ನ ಚಿತ್ತವು (ವಿಚಾರ, ಖ್ಯಾಲ್) ಗುರುವಿನ ಚಿತ್ತದಲ್ಲಿ ಒಮ್ಮೆಲೆ ಪ್ರವೇಶಿಸಿ ಬಿಟ್ಟಿದೆ' ಎಂದು ಬರೆದಿದ್ದೀಯೆ. ಇದು ಕೂಡ ತುಂಬಾ ಒಳ್ಳೆಯ ಸ್ಥಿತಿ. ದೃಷ್ಟಿಯಿಂದ 'ದೇಹ'ವು ಮರೆಯಾದಾಗ, ಅಂದರೆ ದೇಹ ಪ್ರಜ್ಞೆ ಅಳಿದುಹೋದಾಗ ಮತ್ತು ನಿನ್ನ ಚಿತ್ತವು ಗುರುವಿನಲ್ಲಿ ಸಂಪೂರ್ಣ ಮಗ್ನವಾಗಿ ಹೋದಾಗ, ಈ ಅನುಭವ ಉಂಟಾಗುತ್ತದೆ. ಇದು ಆರಂಭ ಮಾತ್ರ; ಈ ಸ್ಥಿತಿಯು ಇನ್ನೂ ಪೂರ್ಣವಾಗಿ ಬೆಳೆದಿಲ್ಲ (ಪಕ್ವವಾಗಿಲ್ಲ). ಅದು ಈಶ್ವರನ ಕೈಯಲ್ಲಿದೆ. ಅವನು ಮೆಚ್ಚಿಕೊಳ್ಳುವ ಯಾರಿಗೆ ಬೇಕಾದರೂ ಅದನ್ನು ದಯಪಾಲಿಸಬಲ್ಲನು. ಇದರಲ್ಲಿ ಏನೂ ನನ್ನ ವಶದಲ್ಲಿಲ್ಲ. 'ನನ್ನನ್ನು ನಿನ್ನ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಲು ಪ್ರಾರಂಭಿಸು' ಎಂದು ನಾನು ಬರೆದಿದ್ದೆ. ಅಂದರೆ 'ಕೆಲಸ ಮಾಡುತ್ತಿರುವುದು ನನ್ನ ಚಿಚ್ಛಕ್ತಿಯೇ ಹೊರತು ನಿನ್ನದಲ್ಲ' ಎಂದು ಅರ್ಥ. ಈ ಸಂದರ್ಭದಲ್ಲಿ 'ಇದು ಆಧ್ಯಾತ್ಮಿಕ ಉನ್ನತಿಗೆ ಒಂದು ಅತ್ಯುತ್ತಮ ಅಭ್ಯಾಸ (ಸಾಧನೆ)' ಎಂದು ನೀನು ಬರೆದಿರುವೆ.



ಈ ಮಾತು ನನಗೆ ಅರ್ಥವಾಗಲಿಲ್ಲ, ನನಗೆ ತಿಳಿಯುವಂತೆ ವಿವರಿಸು. ಆಧ್ಯಾತ್ಮಿಕ ಉನ್ನತಿಗೆ ಅತೀವ ಹಾನಿಕಾರಕವಾದುದೊಂದಿದೆ. ಅದೆಂದರೆ, 'ಅಹಂಕಾರ' (ego). ಪ್ರಶಿಕ್ಷಕನೊಬ್ಬನಿಗೆ ತನ್ನ ಜ್ಞಾನ ಮತ್ತು ಆಧ್ಯಾತ್ಮಿಕ ಪ್ರಶಿಕ್ಷಣ ನೀಡುವ ಸಾಮರ್ಥ್ಯದ ಬಗ್ಗೆ ಅಹಂಕಾರವಿದ್ದರೆ, ಅದು ಅತ್ಯಂತ ಕೆಟ್ಟದ್ದು. ಜನರು ಇದನ್ನು ಮನಗಾಣುವುದಿಲ್ಲ; ಇರಲಿ; ಆದರೆ ಅದು ನಮಗೆ ಅದರ ಅರಿವು ಇಲ್ಲದೆಯೇ ತನ್ನ ಬಣ್ಣ (ಪ್ರಭಾವ) ತೋರಿಸುತ್ತದೆ. ಇದಕ್ಕಿಂತಲೂ ಕೆಟ್ಟದ್ದು (ಎರಡನೆಯದು) ಅಸೂಯೆ. ಸ್ವಾಮೀ ವಿವೇಕಾನಂದರು ಹೇಳಿದ್ದಾರೆ– 'ಶ್ರೇಷ್ಠ ವ್ಯಕ್ತಿ ಯಾರು ಎಂದರೆ, ಯಾವನು ಯಾರೊಬ್ಬರ ವಿಷಯದಲ್ಲಿಯೂ ಅಸೂಯೆಪಡುವುದಿಲ್ಲವೋ ಅವನು'. ಈ ಎರಡು ಕೆಡುಕುಗಳನ್ನು ದೂರಮಾಡಿಕೊಳ್ಳಲು ವಿಫಲನಾದವನು ಯಾವುದೇ ಹೊತ್ತಿನಲ್ಲಿಯೂ ಎಂಥ ಅತ್ಯಂತ ಹೀನ ಮಟ್ಟಕ್ಕೆ ಬೀಳಬಹುದೆಂದರೆ ಅಲ್ಲಿಂದ ಅವನು ಮೇಲೆದ್ದು ಬರಲಾರ. ಯಾವ ವ್ಯಕ್ತಿಯು ಮೇಲೆಯೇ ಆದರೂ ಈಶ್ವರನ ಕೃಪಾವರ್ಷಣೆಯಾಗುವುದನ್ನು ಕಂಡರೆ ನಾವು ಸಂತೋಷಪಡಲೇಬೇಕು. ಆದರೆ ವಾಸ್ತವ ಸಂಗತಿ ಇದಕ್ಕೆ ವಿರುದ್ಧವಾಗಿದೆ. ಯಾರಲ್ಲಿಯಾದರೂ ದೌರ್ಬಲ್ಯ ಕಂಡುಬಂದಾಗ ಅದನ್ನು ಅವನು ನಿವಾರಿಸಿಕೊಳ್ಳುವ ಪ್ರಯತ್ನ ಮಾಡಲಿ ಎಂದು ನಾನು ಅವನಿಗೆ ಹೇಳಿದೆ ಎನ್ನು. ಅವನಿಗೆ ಅದು ಎಷ್ಟು ಕೆಟ್ಟದ್ದೆನಿಸುತ್ತದೆಯೆಂದರೆ ಅವನು ಮತ್ತೆ ನನ್ನ ಮುಖನೋಡಲು ಕೂಡ ಬಯಸುವುದಿಲ್ಲ. ಈಗ ನನ್ನ ಈ ವಯಸ್ಸಿನಲ್ಲಿ, ಯಾವನಾದರೂ ಅಭ್ಯಾಸಿಯಲ್ಲಿ ದೌರ್ಬಲ್ಯ ಕಂಡುಬಂದರೆ, ನಾನು ಅಷ್ಟು ಶ್ರಮವಹಿಸಲಾರೆ. ನಾನು ನನ್ನ ಆಧ್ಯಾತ್ಮಿಕ ಸಾಮರ್ಥ್ಯದಿಂದ ಅವನ ಅರಿವಿಗೂ ಬರದಂತೆ ಅವನ ದೌರ್ಬಲ್ಯವನ್ನು ತೆಗೆದುಹಾಕಬಹುದು. ಅದು ನನ್ನದೇ ದೌರ್ಬಲ್ಯ ಎಂದು ನಾನು ತಿಳಿಯುವುದು ಈ ಕಾರಣಕ್ಕಾಗಿಯೇ. ಅಲ್ಲದೆ ನಾನು ಅದನ್ನು ಬೊಟ್ಟಿಟ್ಟು ತೋರಿಸುವುದಿಲ್ಲ.

ನಿನ್ನ ಸೋದರ – ಸೋದರಿಯರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ನಿಯಮವೇನೆಂದರೆ, ಗುರುವಿನಿಂದ ಆಧ್ಯಾತ್ಮಿಕ ಪ್ರಶಿಕ್ಷಣ ಪಡೆಯುವವರು ವಿಶೇಷತಃ ದೀಕ್ಷೆ ಹೊಂದಿದವರು, ಅವರು ವಯಸ್ಸಿನಲ್ಲಿ ಹಿರಿಯರಾಗಿದ್ದರೂ ಕೂಡ ಆ ಗುರುವಿನ ಆಧ್ಯಾತ್ಮಿಕ ಸಂತಾನ. ಆದರೆ ಈ ಅಂಶಗಳನ್ನು ಗಣಿಸದೆ ನಾನು ವಯಸ್ಸಿಗೆ, ಹಿರಿಯರಿಗೆ ಗೌರವ ತೋರಿಸುತ್ತೇನೆ. ಯಾರಾದರೂ ನನ್ನ ಬಗ್ಗೆ ಕೆಟ್ಟದ್ದಾಗಿ ಆಡಿದರೆ, ಬೈದರೆ (ದೂಷಿಸಿದರೆ) ಅದು ನನ್ನ ಮೇಲೆ ಪರಿಣಾಮ ಬೀರದು. ಯಾರಿಗಾದರೂ ನನ್ನ ಮಾತಿನಲ್ಲಿ ನಂಬಿಕೆಯಾಗದಿದ್ದರೆ, ಅದನ್ನು ಅನುಭವಪಟ್ಟು ನೋಡಲಿ. ನಾನೂ ಒಬ್ಬ ಮನುಷ್ಯನಾಗಿರುವುದರಿಂದ ಅದು

P-4-Books-PM-7-Anantyatre-55



ನನಗೆ ತಟ್ಟಿತೆಂದರೂ ಅದು ಒಂದೆರಡು ಕ್ಷಣಗಳು ಮಾತ್ರ. ಅನಂತರ ನಾನು ಎಂತಿರುವೆನೋ ಹಾಗೇ ಇರುತ್ತೇನೆ.

* * * *

ಕ್ರಮ ಸಂಖ್ಯೆ – ೫೮ **ಪತ್ರ ಸಂಖ್ಯೆ – ೨೪೩** ಷಾಹಜಹಾನಪುರ
೧೩–೦೮–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸಂತೋಷದಿಂದಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ನಿನಗೆ ವಿಚಾರ (ತರಂಗ)ರಹಿತ ಸ್ಥಿತಿ ಅನುಭವವಾಗುತ್ತಿದೆ ಎಂದು ಬರೆದಿದ್ದೀಯೆ. ನಿಜಕ್ಕೂ ಇದು ಒಂದು ಒಳ್ಳೆಯ ಸ್ಥಿತಿ. ಆದರೆ ನಿನಗೆ ಇನ್ನೂ ವಿಚಾರ (ತರಂಗ) ರಹಿತ ಸ್ಥಿತಿಯ ಭಾವ ಇದೆ. (ಎಚ್ಚರ ಇದೆ). 'ಸವಿಚಾರ' ಮತ್ತು 'ನಿರ್ವಿಚಾರ'ಗಳ ಭೇದದ ಅರಿವೂ ಉಳಿದಿದೆ. ಇದೂ ಕೂಡ ಉಳಿಯಬಾರದು– ಆಗ 'ವಾಸ್ತವಿಕತೆ' (Originality) ಆರಂಭವಾಗುವುದು ಎಂದು ತಿಳಿ. (ನಿನ್ನಲ್ಲಿ) ಸಾಹಸ ಮತ್ತು ಸ್ಫೂರ್ತಿ ಇದ್ದರೆ, ಈಶ್ವರ ಅದನ್ನೂ ನಿನಗೆ ಕರುಣಿಸುತ್ತಾನೆ. ಅದು ಎಂಥ ನಾಜೂಕಾದ ಸ್ಥಿತಿಯೆಂದರೆ, ಎಲ್ಲರೂ (ಯಾರು ಬೇಕಾದವರು) ಅದರ ಕಲ್ಪನೆಯನ್ನೂ ಮಾಡಲಾರರು. ಅದನ್ನು ಪಡೆದವರು ಮಾತ್ರವೇ ಅದರ ರುಚಿಯನ್ನು ಅರಿಯಬಲ್ಲರು. ನಿನ್ನಲ್ಲಿ ಆ ಸ್ಥಿತಿ ಉಂಟಾಗುವಂತೆ ಈಶ್ವರ ಅನುಗ್ರಹಿಸಲಿ. ಇನ್ನೊಂದು ವಿಷಯ ನನಗೆ ತಿಳಿದು ಬಂದಿತು. ಅದು ನಿನ್ನ ಪತ್ರಕ್ಕೆ ಸಂಬಂಧಿಸಿದುದಲ್ಲ; ಆದರೂ ಬರೆಯುತ್ತಿದ್ದೇನೆ. ನಿನ್ನ ಮತ್ತು ಶ್ಯಾಮಪತಿಯವರ ನಡುವೆ ನಡೆದ ಸಂಭಾಷಣೆಯನ್ನು ನನಗೆ ನಾರಾಯಣ ಹೇಳಿದರು. ಆ ಸ್ಥಳದ ವಾತಾವರಣದ ಬಗ್ಗೆ ನೀನು ಹೇಳಿದಾಗ ಅವರಿಗೆ ಆಶ್ಚರ್ಯವಾಯಿತಂತೆ. ಒಂದು ಮಾತು (ಸಂಗತಿಯನ್ನು) ಅನುಭವಿಸಿ (ಪರೀಕ್ಷಿಸಿ) ನೋಡಬೇಕು. ನಾನು ಹಾಗೆ ಮಾಡಿಲ್ಲ. ನಾನೂ ನೋಡುತ್ತೇನೆ. ನಾನು ಮರೆತುಬಿಡಬಹುದು, (ಆದರೆ) ನೀನು ಜ್ಞಾಪಕ ಇಟ್ಟುಕೊ. ಯಾವುದೇ ವಸ್ತುವಿನ ಪ್ರಭಾವ ವಾತಾವರಣ (ಪರಿಸರ)ದಲ್ಲಿ ಆಗುತ್ತದೆ. ಹತ್ತಿರ ಇರುವ ವ್ಯಕ್ತಿಯ ವಿಚಾರಗಳು ಎಂಥವು ಇರುತ್ತವೆಯೋ, ಅಂಥದೇ ಪರಿಣಾಮ ಸುತ್ತಲೂ ಉಂಟಾಗುತ್ತದೆ. ಅವರೆದುರಿನಲ್ಲಿ ಯಾವ ರೀತಿಯ ಅನುಭವ (ಅನಿಸಿಕೆ) ಉಂಟಾಗುವುದೋ, ಅವರ ವಿಚಾರಗಳೂ ಅಂತೆಯೇ ಇರುತ್ತವೆ. ಒಂದು ವಿಚಾರ ಬಂತು, ಬರೆಯುತ್ತಿದ್ದೇನೆ (ಅದನ್ನು ಪ್ರಮಾಣಿಸಿ ನೋಡಿಲ್ಲ).

'ಜಗತ್ತಿನ ಒಬ್ಬ ಸಾಧಾರಣ ವ್ಯಕ್ತಿ, ದೈನಂದಿನ ಜೀವನ ಕಳೆಯುತ್ತಿರವವನ ಸ್ಥಿತಿಯಂತೆ ನನ್ನದೂ ಇದೆ ಎಂದು ನನಗೆ ಅನಿಸುತ್ತದೆ' ಎಂದು ನೀನು ಬರೆದಿದ್ದೀಯೆ ಸರಿ. ನನ್ನ ಸ್ಥಿತಿಯೂ ಅಂತೆಯೇ ಇದೆ. ಎಷ್ಟರ ಮಟ್ಟಿಗೆ ನಿನ್ನ ಅನುಭವಕ್ಕೆ ಬಂದಿರುವುದೋ ಅದರಂತೆ ನೀನು ಬರೆದಿದ್ದೀಯೆ, ಆದರೆ, ಅದನ್ನು ಸರಿಯಾಗಿ ಅಭಿವ್ಯಕ್ತಗೊಳಿಸಲು ನಿನಗೆ ಸಾಧ್ಯವಾಗಲಿಲ್ಲ; ಅದರಲ್ಲಿ ಇನ್ನೂ ಸಾಕಷ್ಟು ಸ್ಥೂಲತೆ



ಇದೆ. ಇದರೊಂದಿಗೆ ಸಂಬಂಧಿಸಿದುದರ ನಿಜವಾದ ಸ್ಥಿತಿ, ಬಹುದೂರವಿದೆ; ಅದೊಂದು ಈಶ್ವರೀಯ ರಹಸ್ಯ. ಅದನ್ನು ಕುರಿತು ಲಾಲಾಜಿ ಮಹಾರಾಜರು ನನ್ನ ಪತ್ರಕ್ಕೆ ಕೊಟ್ಟ ಉತ್ತರದಲ್ಲಿ ಬರೆದಿದ್ದರು. ಮತ್ತು ಅದನ್ನು ಬಹಿರಂಗಪಡಿಸಕೂಡದೆಂದೂ ಆದೇಶಿಸಿದ್ದರು. ಕಬೀರದಾಸರು ತಮ್ಮ ಪ್ರಿಯ (ಸಮರ್ಥ) ಶಿಷ್ಯ ಧರ್ಮದಾಸರಿಗೆ ಹೇಳುತ್ತಾರೆ :

"ಧರಮದಾಸ ತೋಹೇ ಲಾಖ ದುಹಾಯಿ।
ಮಗರ್ ಭೇದ ನಹಿ ಬಾಹರ ಜಾಯಿ।
ಓ ಧರ್ಮದಾಸ, ನಿನ್ನನ್ನು ಲಕ್ಷ ಸಾರೆ ಕೂಗಿ ಹೇಳುತ್ತೇನೆ,
(ಈ) ದೈವೀ ರಹಸ್ಯ ಹೊರಗೆ ಹೋಗಬಾರದು"

ಪೂಜ್ಯ ಲಾಲಾಜಿ ಸಾಹೇಬರ ಕೃಪೆಯಿಂದ ನನ್ನ ಸ್ಥಿತಿ ಹೆಚ್ಚು ಕಡಿಮೆ ಸಂಪೂರ್ಣ ಪಕ್ವತೆ ಪಡೆದಾಗ ನಾನು ಅವರಿಗೆ ಒಂದು ಪದ್ಯದ ಸಾಲು ಬರೆದು ಕಳುಹಿಸಿದ್ದೆ– 'ಪರ್ವತವು ಒಂದು ಹುಲ್ಲುಕಡ್ಡಿಯ ಹಿಂದೆ ಇರುವಂತೆ ತೋರುತ್ತದೆ' ಎಂಬುದು ಅದರ ಅರ್ಥ ಇತ್ತು. ಅಂದಮಾತ್ರಕ್ಕೆ ಶುದ್ಧರೂಪದ ಅಧ್ಯಾತ್ಮದ ಜ್ಞಾನವನ್ನು ಯಾರಿಗೂ ನೀಡಕೂಡದು ಎಂದಲ್ಲ; ಬದಲಿಗೆ, ಅಭ್ಯಾಸಿಯು ಸ್ವತಃ ಅದನ್ನು ಅನುಭವಪಡುವವರೆಗೆ, ಮಾತಿನ ಮೂಲಕ ನಿಜವಾದ ರಹಸ್ಯವನ್ನು ಹೊರಗೆಡವಬಾರದು ಎಂದರ್ಥ. ಆದ್ದರಿಂದ, ಮಾತಿನ ಮೂಲಕ ತಿಳಿಸುವುದನ್ನು ಪ್ರತಿಬಂಧಿಸಲಾಗಿದೆ. ಇದರ ಮೇಲೆ ಯಾರಿಗಾದರೂ (ಮಾತಿನ ಮೂಲಕ ತಿಳಿದಾಗ) ನಂಬಿಕೆಯಾಯಿತೆಂದರೆ, ಭಗವಂತನ ಮಹತ್ತ್ವವು ಅವನ ದೃಷ್ಟಿಯಲ್ಲಿ ಹೊರಟು ಹೋಗಬಹುದು. ಮತ್ತು ಯಾರೂ ಬೇಗ ಅದನ್ನು ನಂಬಲೂ ಆಗದಿರಬಹುದು. ಲಾಲಾಜಿಯವರು ಅವರ ಒಂದು ಪತ್ರದಲ್ಲಿ ಹೀಗೆ ಹೇಳಿದ್ದರು– 'ನೀನು ಒಂದು ಏಕಾಂತದ ಒಳ್ಳೆಯ ಸ್ಥಳಕ್ಕೆ ಹೋಗು; ನಿನ್ನನ್ನು ನೀನೇ ಅತ್ಯಂತ ದೀನ ಭಿಕ್ಷುಕನ ಮಟ್ಟಕ್ಕೆ ಅಥವಾ ಅತ್ಯಂತ ಕನಿಷ್ಠನ ಸ್ಥಾನಕ್ಕೆ ಇಳಿಸಿಕೊಂಡು, ಅನಂತರ ಎಲ್ಲ ಚಕ್ರಗಳ ಜ್ಞಾನವನ್ನು ಪಡೆಯುತ್ತ, ನಿನ್ನ ಮೂಲದ ನೈಜ ಸ್ಥಿತಿ (Condition) ವರೆಗೆ ಕ್ರಮಶಃ ಸಾವಕಾಶವಾಗಿ ಉನ್ನತಿ ಸಾಧಿಸಬೇಕು. ಆ ಇಡೀ ಕಾಲಾವಧಿಯಲ್ಲಿ, ಅಂದರೆ, ನೀನು ನಿನ್ನನ್ನು ದೀನ–ಪತಿತ ಸ್ಥಿತಿಯಲ್ಲಿರಿಸಿಕೊಂಡಾಗ, ಜನರಿಗೆ ಕಲಿಸುವ (ತರಬೇತಿ ಕೊಡುವ) ಮಾಡುವ ಹೊಣೆಯನ್ನು ನಾನು ತೆಗೆದುಕೊಳ್ಳುತ್ತೇನೆ" ನಾನು ಈ ಕ್ಷೇತ್ರದಲ್ಲಿ ಪ್ರಯೋಗ ನಡೆಸಬೇಕೆಂದು ಅವರು ಬಯಸಿದ್ದರು. ಆದರೆ ಅದನ್ನು ನನಗೆ ಮಾಡಲು ಸಾಧ್ಯವಾಗಲಿಲ್ಲ. ಭವಿಷ್ಯತ್ತಿನಲ್ಲಿ ನಾನು ಆ ಪ್ರಯೋಗ ಮಾಡಲು ಸಮಯಾನುಕೂಲ ಸಿಗುವುದೋ ಇಲ್ಲವೋ ನನಗೆ ತಿಳಿಯದು. ಈ ತೆರನಾದ ಪ್ರಯೋಗ, ಕೇವಲ ಒಂದು ಪರ್ವತ ಅಥವಾ ಅರಣ್ಯದಲ್ಲಿ ಸಾಧ್ಯ. ನಾನು ಈಶ್ವರನ ಅನೇಕ ರಹಸ್ಯಗಳನ್ನು ಪ್ರಕಟಪಡಿಸಿದ್ದೇನೆ; ಮತ್ತು ನನ್ನ ಪತ್ರಗಳಲ್ಲಿ ಹಾಗೂ ಪುಸ್ತಕಗಳಲ್ಲಿ ಅವುಗಳ ಬಗ್ಗೆ ಬಹಳಷ್ಟು ಬರೆದಿದ್ದೇನೆ. ಆದರೆ ಎಲ್ಲಿಯೂ ಅತೀವ ಮಹತ್ತ್ವದ ರಹಸ್ಯಗಳನ್ನು ಪ್ರಕಟಪಡಿಸಿಲ್ಲ. ನಾನು ನನ್ನ ಹೃದಯದಲ್ಲಿ

P-4-Books-PM-7-Anantyatre-56



ಇರುವ ಎಲ್ಲ ರಹಸ್ಯಗಳನ್ನೂ, ನನ್ನ ಭೌತಿಕ ದೇಹ ತ್ಯಜಿಸುವ ಮುನ್ನ ಪ್ರಕಟಗೊಳಿಸಬೇಕೆಂದು, ಈಗ ಆದೇಶ ಬಂದಿದೆ. ಬರೆದುಕೊಳ್ಳುವವರು ಸಿಗುತ್ತಿಲ್ಲವಾದ ಕಾರಣ ನಾನು ಎಲ್ಲ ರಹಸ್ಯಗಳನ್ನೂ ಪ್ರಕಟಪಡಿಸುವುದು ಸಾಧ್ಯವಾಗಲಿಕ್ಕಿಲ್ಲ. ಮತ್ತು ಒಂದು ವೇಳೆ ಬರೆದುಕೊಳ್ಳುವವನು ದೊರೆತರೆ, ಕಾಲಕಾಲಕ್ಕೆ ನನ್ನ ಮನಸ್ಸಿನಲ್ಲಿ ಮೂಡಿಬರುವ ವಿಚಾರಗಳನ್ನು ಬರೆಯಲು ಅನುವಾಗುವಂತೆ, ಅವನು ನನ್ನನ್ನು ನೆರಳಿನಂತೆ ಹಿಂಬಾಲಿಸಬೇಕಾಗುವುದು. ನೀನು ನಿನ್ನ ತಳಮಳದ ಬಗ್ಗೆ ಬರೆದಾಗ, ಅದು ನನಗೆ ನನ್ನ ತಳಮಳವನ್ನು ಜ್ಞಾಪಕಕ್ಕೆ ತಂದಿತು. ಈ ತಳಮಳದಲ್ಲಿ, ವೇದನೆಯಲ್ಲಿ ನಾನು ಅದೆಷ್ಟು ಸಂತೋಷ ಪಡೆದೆನೆಂದರೆ, ಶಾಂತಿಯನ್ನು ಅರಸುತ್ತಿರುವವರು ಪ್ರಾಯಶಃ ಅದನ್ನು (ಶಾಂತಿಯನ್ನು) ನಿವಾಳಿಸಿ ಎಸೆದಾರು. ಈಗ ನಾನು ಇವೆಲ್ಲವುಗಳಿಂದಲೂ ಮುಕ್ತನಾಗಿದ್ದೇನೆ; ತಳಮಳವೂ ಇಲ್ಲ; ಅಶಾಂತಿ (ವೇದನೆ) ಕೂಡ ಇಲ್ಲ. ಆದರೆ ನನ್ನ ಈ ಸ್ಥಿತಿಯನ್ನು ಯಾರೂ ಅನುಕರಿಸಕೂಡದು, ಯಾಕೆಂದರೆ ಅದು ತನ್ನಿಂದ ತಾನೇ ವಿಕಾಸಗೊಳ್ಳಬೇಕು. ಕಬೀರದಾಸರ ಆ ಶ್ಲೋಕದ ಅರ್ಥವೇನೆಂದು ಶ್ಯಾಮಪತಿಜಿಯವರನ್ನು ಕೇಳು. ಅವರು ಚೆನ್ನಾಗಿ ವಿವರಿಸಬಹುದು; ಯಾಕೆಂದರೆ ಅವರೊಬ್ಬ ಯೋಗ್ಯ (ಸುಶಿಕ್ಷಿತ) ವ್ಯಕ್ತಿ; ಅನಂತರ, ಆ ಶ್ಲೋಕಕ್ಕೆ ನಾನು ಕೊಟ್ಟ ಅರ್ಥನಿರೂಪಣೆಯನ್ನು ಅವರಿಗೆ ತಿಳಿಸು. ಒಂದು ವಿಷಯವಂತೂ ಸ್ಪಷ್ಟ (ಸಿದ್ಧ)ವಾದೀತು, ಅದನ್ನು ನನಗೆ ಅನಂತರ ಬರೆದು ತಿಳಿಸು. ಕೇಸರಳ ಪತ್ರ ತಲುಪಿದೆ. ಅವಳ ಅಶಾಂತಿಯ (ತಳಮಳದ) ಸ್ಥಿತಿಗೋಸ್ಕರ ಧನ್ಯವಾದಗಳು. ಈ ತಳಮಳ (ಅಶಾಂತಿ, ವ್ಯಾಕುಲತೆ)ವನ್ನು ಬೆಳೆಸಿಕೊಳ್ಳುವುದು ತುಂಬಾ ಕಷ್ಟ. ಸಂತರ ಸಂಪರ್ಕದಿಂದ, ಜಿಜ್ಞಾಸುವಿನಲ್ಲಿ ಭಗವಂತನನ್ನು ಕುರಿತು ಜಿಜ್ಞಾಸೆ ಇದ್ದರೆ, ಅದು (ತಳಮಳ) ಬೆಳೆಯಲೇಬೇಕು. ಸೂಫಿಗಳು ಈ ಸ್ಥಿತಿಯನ್ನು 'ದರ್ದ್–ಎ–ದಿಲ್'; (ಹೃದಯದ ವ್ಯಾಕುಲತೆ, ವಿರಹ ವೇದನೆ) ಎಂದು ಕರೆದಿದ್ದಾರೆ. ಈ ಸ್ಥಿತಿಯಲ್ಲಿ ಅನೇಕ ಹಂತಗಳುಂಟು. ವ್ಯಾಕುಲತೆಯು ಎಷ್ಟು ಉನ್ನತಮಟ್ಟದ್ದಾಗಿರುವುದೋ ಅಭ್ಯಾಸಿ (ಸಾಧಕ) ಅಷ್ಟೇ ಉನ್ನತ ಮಟ್ಟಕ್ಕೆ ತಲುಪುತ್ತಾನೆ. ಮಗಳೆ, ನಿಜ ಹೇಳಬೇಕೆಂದರೆ, ಏನೋ ಒಂದಿಷ್ಟು ಉದ್ದೇಶ ಸಾಫಲ್ಯ ದೊರೆತೀತೆಂದು ನಾನು ಅಭ್ಯಾಸಿಗಳನ್ನು ದಾಪುಗಾಲಿನಿಂದ ಮುಂದಕ್ಕೆ ಕರೆದೊಯ್ಯುತ್ತ, ಅವರಿಗೆ ಪ್ರಗತಿಯನ್ನುಂಟುಮಾಡುತ್ತೇನೆ. (ಆಧ್ಯಾತ್ಮಿಕ ಉನ್ನತಿ ಕೊಡುತ್ತೇನೆ). ಗುರಿಗೋಸ್ಕರ ನಿಜವಾದ ವ್ಯಾಕುಲತೆ ಯಾರಲ್ಲಿಯಾದರೂ ಕಂಡುಬರುವುದು ಬಲು ಕಷ್ಟ. ಲಾಲಾಜಿಯವರ ಸತ್ಸಂಗದಲ್ಲಿ ಅನೇಕ ಒಳ್ಳೆಯ ಅಭ್ಯಾಸಿಗಳಿದ್ದರು. ಆದರೆ ನೈಜ ವ್ಯಾಕುಲತೆಯ ಅಭಾವ ಅವರಲ್ಲಿತ್ತು. ನಿಜ ಹೇಳಬೇಕೆಂದರೆ, ಲಾಲಾಜಿ ಸಾಹೇಬರು ಎಷ್ಟು ಉದಾರ ಹೃದಯಿಗಳಾಗಿದ್ದರೆಂದರೆ, (ಆಧ್ಯಾತ್ಮಿಕ) ರತ್ನಗಳನ್ನು ಅವರು ಸುತ್ತಲೂ ಸೂರೆಗೈಯ್ಯುತ್ತಿದ್ದರು. ಆದರೆ ಈಗಲೂ ಕೂಡ ನಮ್ಮ ಕಣ್ಣುಗಳು ತೆರೆದಿಲ್ಲ, ಮತ್ತು ಯಾರೂ ಅವರನ್ನು ನಿಜವಾದ ಅರ್ಥದಲ್ಲಿ ಅರಿತುಕೊಳ್ಳಲು ಶಕ್ತರಾಗಿಲ್ಲ. ಅವರಿಂದ ಅನೇಕ ಸಮಸ್ಯೆ ಮತ್ತು ತೊಡಕುಗಳನ್ನು ನಿವಾರಿಸಿಕೊಳ್ಳಬಹುದಿತ್ತು, ಆದರೆ ನನಗೂ ಅದರ ಅರಿವು



ಉಂಟಾಗಲಿಲ್ಲ. ಆದರೂ ಅವರು ನನಗೆ ಇಷ್ಟೆಲ್ಲವನ್ನೂ ಅನುಗ್ರಹಿಸಿದರು, ಅದು ಅವರ ಕೃಪೆ, (ಅವರ ಉದಾತ್ತತೆ).

ಅಮ್ಮಾಜಿಯವರಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೫೯ **ಪತ್ರ ಸಂಖ್ಯೆ – ೨೪೬** ಷಾಹಜಹಾನಪುರ
೦೧–೦೯–೧೯೫೨

ಪ್ರಿಯ ಪುತ್ರಿ ಕಸ್ತೂರಿ,

ಅಗಷ್ಟ ೨೨ ಮತ್ತು ೨೬ರ ನಿನ್ನ ಪತ್ರಗಳು ಕೈಸೇರಿದವು. ಈಶ್ವರ ಕೃಪೆಯಿಂದ ನಿನ್ನ ಸ್ಥಿತಿ ಚೆನ್ನಾಗಿ ಮುಂದುವರಿಯುತ್ತಿದೆ. ಬೇರೆಯವರು ದೊಡ್ಡದಾಗಿ ಮಾತನಾಡುವುದು ನಿನಗೆ ಕಿರಿಕಿರಿ ಉಂಟು ಮಾಡುತ್ತದೆ ಎಂದು ಬರೆದಿದ್ದೀಯೆ; ನಿನ್ನ ಏಕಾಗ್ರತೆ ಗಾಢವಾಗುತ್ತಿದೆಯೆಂದು ಅದರ ಅರ್ಥ. ಅಗಸ್ಟ ೩೧ರ ರಾತ್ರಿ ಸುಮಾರು ೧೨–೩೦ರ ಹೊತ್ತಿಗೆ ನಾನು ನಿನಗೆ 'ಎಫ್' ಬಿಂದುವಿನಲ್ಲಿ ಬೈಠಕ್ (ಪ್ರಾಣಾಹುತಿ) ಕೊಡುತ್ತಿದ್ದೆ. ಒಮ್ಮೆಲೆ, 'ಎಫ್' ಬಿಂದುವಿನ ಯಾವುದೋ ಒಂದು ಆವರಣ (ಪರದೆ) ಹರಿದು ಹೋದುದು ಹಾಗೂ ತುಸು ರುಕ್ಷವಾಗಿರುವ ಮತ್ತು ಚಂದ್ರಪ್ರಕಾಶದಂತಹ ಪ್ರಭೆಯುಳ್ಳ ಒಂದು ರೀತಿಯ ಜ್ವಾಲೆ ನನಗೆ ಗೋಚರವಾಯಿತು. ಅದು ಏನಿತ್ತೆಂಬುದು ನನಗೆ ತಿಳಿಯಲಿಲ್ಲ. ಅದಕ್ಕೂ ಮೊದಲು ನಾನು 'ಎಫ್' ಬಿಂದುವಿನ ತೀರ ಒಳಗಿನ ಭಾಗಕ್ಕೆ ಪ್ರಾಣಾಹುತಿ ನೀಡುತ್ತಿದ್ದೆ ಮತ್ತು ಅದರ ಸ್ಥಿತಿಯನ್ನು ಜಾಗ್ರತಗೊಳಿಸುತ್ತಿದ್ದೆ, ಆದರೆ ಅದು ಮೇಲೆದ್ದು ಬರಲಿಲ್ಲ. (ಜಾಗ್ರತವಾಗಲಿಲ್ಲ), ಆದರೆ ಅದರ ಮೇಲೆ ಪ್ರಭಾವ ಖಂಡಿತ ಆಗಿತ್ತು. ಮತ್ತು ಸಾಕಷ್ಟು ಶಕ್ತಿಯೂ ಅದಕ್ಕೆ ಮುಟ್ಟುತ್ತಿತ್ತು. ಈಗ ಅದರ ಸ್ಥಿತಿ ಪರ್ಯಾಪ್ತ ವಿಕಸಿತ ರೂಪದಲ್ಲಿದೆ ಎಂದು ನನಗೆನಿಸುತ್ತದೆ. ಆದರೂ ನನ್ನ ಇಚ್ಛಾಶಕ್ತಿಯ ತೀಕ್ಷ್ಣತೆ ಅದರ ಮೇಲೆ ತೀವ್ರವಾಗಿ ಕೇಂದ್ರಿತವಾದಂತೆ ಅನಿಸುತ್ತಿತ್ತು; ಪ್ರಾಯಶಃ ಅದು ಇನ್ನೂ ವಿಕಾಸಗೊಳ್ಳಬಹುದು. ನನಗೆ, ತ್ವರೆಯಾಗಿ ಕೆಲಸಮಾಡುವ ರೂಢಿ (ದೋಷ) ಇದೆ; ಆ ಕಾರಣ ಅದರ ಅಂದಾಜು ಉಳಿಯುವುದಿಲ್ಲ. ಸೆಪ್ಟೆಂಬರ್ ಒಂದರ ಮುಂಜಾನೆಯಿಂದ ನಂತರದ ನಿನ್ನ ಅನಿಸಿಕೆ (ಅನುಭವ) ಏನು ಮತ್ತು ಈಗಿನ ಸ್ಥಿತಿ ಏನು ಎಂಬುದನ್ನು ಆದಷ್ಟು ಬೇಗ ಬರೆದು ತಿಳಿಸು.

ಅಮ್ಮಾಜಿಯವರಿಗೆ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

P-4-Books-PM-7-Anantyatre-57



* * * *

ಕ್ರಮ ಸಂಖ್ಯೆ – ೬೦ **ಪತ್ರ ಸಂಖ್ಯೆ – ೨೪೯** ಷಾಹಜಹಾನಪುರ
೦೬–೦೯–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎರಡೂ ಪತ್ರಗಳು ತಲುಪಿವೆ. ನಿನ್ನ 'ಅನುಭವ'ದಿಂದ ನನಗೆ ಬಹಳ ಸಂತೋಷವಾಯಿತು. ಈಶ್ವರನಿಗೆ ಕೃತಜ್ಞತೆಗಳು. ನೀನು ಆರೋಗ್ಯದಿಂದ ಇರಬೇಕಾದುದು ಅಗತ್ಯ. ಯಾಕೆಂದರೆ ನಾನು ನಿನ್ನಿಂದ ಕೆಲಸ ತೆಗೆದುಕೊಳ್ಳುವುದಿದೆ. ನೀನು ಹದಿನೈದು ನಿಮಿಷಗಳಷ್ಟು ನಿನ್ನ ಆರೋಗ್ಯಕ್ಕೋಸ್ಕರ ಮೀಸಲಿಟ್ಟರೆ, ನೀನು ಸ್ವಸ್ಥಳಾಗುತ್ತೀಯೆ. ಅದರ ವಿಧಾನವನ್ನು ನಾನು ನಿನಗೆ ತಿಳಿಸಿದ್ದೇನೆ. ಆ ವಿಧಾನಗಳನ್ನು ಒಂದು ವೇಳೆ ಅನುಸರಿಸಲು ಸಾಧ್ಯವಾಗದಿದ್ದರೆ, (ಇಷ್ಟನ್ನಾದರೂ ಮಾಡು), 'ಬ್ರಹ್ಮಾಂಡ ಮಂಡಲದಿಂದ ಆರೋಗ್ಯವನ್ನು ಬಲಪಡಿಸುವ ಶಕ್ತಿ ಬರುತ್ತಿದೆ, ಮತ್ತು ಅದು ನಿನ್ನ ಎಲ್ಲ ಅಸ್ವಸ್ಥತೆ (ಕಾಯಿಲೆ)ಗಳನ್ನು ದೂರಮಾಡುತ್ತಿದೆ' ಎಂಬ ವಿಚಾರದ ಮೇಲೆ ಲಕ್ಷ್ಯವಿಡು. ನಾನು ಹೇಳಿದುದನ್ನು ನೀನು ಅನುಸರಿಸುತ್ತೀಯೆ ಎಂಬ ಭರವಸೆ ನನಗಿದೆ. ಕೇಸರ್‌ಳಲ್ಲಿ ಲಯಾವಸ್ಥೆ (ಫನಾಯಿಯತ್) ವರ್ಧಿಸುತ್ತಿದೆ; ಅದು ತುಂಬಾ ಒಳ್ಳೆಯದು ಅಮ್ಮಾಜಿಯವರಿಗೆ ನನ್ನ ವಂದನೆಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೧ **ಪತ್ರ ಸಂಖ್ಯೆ – ೨೫೬** ಷಾಹಜಹಾನಪುರ
೧೧–೧೧–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರಗಳು ತಲುಪಿದವು. ನಿನ್ನ 'ಸ್ಥಿತಿ'ಯನ್ನು ನಾನು ವೀಕ್ಷಿಸಿದೆ. ಈಶ್ವರನ ಪಥದಲ್ಲಿ ಬರುವುದೆಲ್ಲವೂ ನಮ್ಮ ಒಳಿತಿಗಾಗಿಯೇ ಇರುತ್ತವೆ. ಮಾರ್ಗದಲ್ಲಿ ಅಡೆತಡೆಗಳಿದ್ದರೂ ಕೂಡ, ಅವುಗಳನ್ನು ನಿವಾರಿಸಲು ಪ್ರಭುವಿನ (ಸದ್ಗುರುವಿನ) ಲಕ್ಷ್ಯವು ನಮ್ಮತ್ತ ಇರಬೇಕು. ಸದ್ಗುರುವಿನ ಲಕ್ಷ್ಯ ನಮ್ಮತ್ತ ತಿರುಗಿದೆ ಎಂಬುದಕ್ಕಿಂತ ಹೆಚ್ಚು ನಮಗೆ ಇನ್ನೇನು ಬೇಕು ! ಎಲ್ಲ ಪೂಜೆ, ಧ್ಯಾನಗಳ ಉದ್ದೇಶವೇ ಸದ್ಗುರುವಿನ ಲಕ್ಷ್ಯ ನಮ್ಮತ್ತ ತಿರುಗುವಂತೆ ಮಾಡಲಿಕ್ಕೋಸ್ಕರವೇ ಆಗಿದೆ. ಆಧ್ಯಾತ್ಮಿಕತೆಯ ಪಥದಲ್ಲಿ (ನಮಗೆ) ಏನಾದರೂ ಅಡೆತಡೆ ಬಂದಾಗಲೇ ಅವನು ನಮ್ಮತ್ತ ದೃಷ್ಟಿಹಾಯಿಸಲು ವಿವಶನಾಗುತ್ತಾನೆ. ಶ್ರೀಕೃಷ್ಣನ ಭಕ್ತನಾದ ಸೂರದಾಸ, ದೃಷ್ಟಿಹೀನನಾಗಿದ್ದ; ಕೃಷ್ಣ ಪ್ರೇಮದಲ್ಲಿ ಅವನು ತನ್ನ ಕೋಲಿನಿಂದ ಬಾವಿಯಿರುವುದನ್ನು ಗುರುತಿಸಲಾಗದೆ ಅದರಲ್ಲಿ ಬಿದ್ದುಬಿಟ್ಟ. ಶ್ರೀಕೃಷ್ಣ ಸ್ವತಃ ತನ್ನ ಕೈಯಿಂದ ಅವನ್ನು ಮೇಲಕ್ಕೆತ್ತಿದ.



ಶ್ರೀಕೃಷ್ಣನ ಹಸ್ತಸ್ಪರ್ಶ ಅವನಿಗಾಯಿತು. ಅದೆಂಥ ಭಾಗ್ಯಶಾಲಿ ! ಬಾವಿಯಲ್ಲಿ ಬಿದ್ದ ಕಾರಣದಿಂದ ಶ್ರೀಕೃಷ್ಣನ ದಿವ್ಯಸ್ಪರ್ಶವಾಗಿ, ಅವನ ಪವಿತ್ರತೆಯೂ ವರ್ಧಿಸಿತು. ಈಶ್ವರೇಚ್ಛೆಯಿದ್ದರೆ, ಈ ಪತ್ರ ನಿನಗೆ ತಲುಪುವ ಹೊತ್ತಿಗೆ ನಿನ್ನ ಸ್ಥಿತಿಯಲ್ಲಿ ಬದಲಾವಣೆ ಉಂಟಾಗಲು ಪ್ರಾರಂಭವಾಗುವುದು. ಈಗ ರಾತ್ರಿ ೧೦.೫೫ ಗಂಟೆ. ನಿನ್ನ ಸ್ಥಿತಿಯಲ್ಲಿ ಒಂದಿಷ್ಟು ಬದಲಾವಣೆ ಈಗಾಗಲೇ ಆಗಿರಬಹುದು. ನಿನ್ನ ಯಾತ್ರೆಯಲ್ಲಿ, 'ಎಚ್' (H) ಬಿಂದುವಿನಲ್ಲಿ ನೀನಿರುವುದನ್ನು ನೀನು ಕಾಣುತ್ತೀಯೆ.

ಅಮ್ಮಾಜಿಯವರಿಗೆ ಪ್ರಣಾಮ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೨ **ಪತ್ರ ಸಂಖ್ಯೆ – ೨೫೯** ಷಾಹಜಹಾನಪುರ
೨೩–೧೧–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿವೆ. ಇತ್ತೀಚಿನ ದಿನಗಳಲ್ಲಿ ನಾನು ಬೇರೆ ಒಂದೆರಡು ಕೆಲಸಗಳಲ್ಲಿ ಮಗ್ನನಾಗಿದ್ದೆನಾದ್ದರಿಂದ, ನಿನಗೆ ಹೆಚ್ಚು ಸಮಯ ಕೊಡಲಾಗಲಿಲ್ಲ. ಇನ್ನೂ ಸುಮಾರು ಎಂಟು ದಿನ ನಾನು ಕೆಲಸದಲ್ಲಿ ವ್ಯಸ್ತನಾಗಿರುತ್ತೇನೆ. ಈಶ್ವರೇಚ್ಛೆಯಿದ್ದರೆ, ಈ ಪತ್ರ ನಿನಗೆ ಮುಟ್ಟುವ ಹೊತ್ತಿಗಾಗಲೇ 'ಎಚ್' ಬಿಂದುವಿನ ನಿನ್ನ ಆಧ್ಯಾತ್ಮಿಕ ಯಾತ್ರೆ ಪ್ರಾರಂಭವಾಗಬಹುದು. 'ಈಗ ಬಯಲೂ ಇಲ್ಲ, ಬಿಂದುವೂ ಇಲ್ಲ, ಸಿಂಧುವೂ ಇಲ್ಲ' ಎಂದು ನೀನು ಬರೆದಿದ್ದೇಯೆ. ಇದೊಂದು ಒಳ್ಳೆಯ ಅವಸ್ಥೆ. ಲಯಾವಸ್ಥೆಯ ಪರಿಣಾಮವಾಗಿ, ಬಿಂದು, ಸಿಂಧು ಮತ್ತು ಬಯಲುಗಳು ತಮ್ಮ ಸೀಮಿತತೆಗಳನ್ನು ನಿನ್ನ ಚಿತ್ತದಲ್ಲಿ ಬರಗೊಡುವುದಿಲ್ಲ ಎಂದು ಇದರ ಅರ್ಥ. ಅಂದರೆ, ಇವು ನಿನ್ನ ವಿಚಾರದಲ್ಲಿ ಅಳಿಸಿಹೋಗಿವೆ. ಅಥವಾ ನಿನ್ನ ವಿಚಾರದಲ್ಲಿ ಅವುಗಳ ಬಂಧನ ಉಳಿಯಲಿಲ್ಲ, ಅವುಗಳಿಂದ ನೀನು ಬಿಡುಗಡೆ ಪಡೆದಿದ್ದೀಯೆ. ಬೇರೊಂದು ರೀತಿಯಲ್ಲಿ ವಿವರಿಸುವುದಾದರೆ, ನಿನ್ನ ವಿಚಾರ (ಚಿತ್ತ) ತುಂಬಾ ಹಗುರಾಗಿದೆ. ನಿನ್ನ ಪತ್ರದ ವಿಶೇಷ ಉತ್ತರ, "ಅಭ್ಯಾಸಿಯ ಸ್ಥಿತಿ 'ಸಾವನ ಸೂಖಾ ನ ಭಾದೋ ಹರಾ' ಎಂಬಂತಿರಬೇಕು" ಎಂಬುದೇ ಆಗಿದೆ. ಇದು 'ಬಬೂಲ್' ವೃಕ್ಷದ ವಿಶೇಷತೆ; ಸದಾಕಾಲ ಅದರ ರೂಪ ಒಂದೇ ತೆರನಾಗಿರುತ್ತದೆ. (ಶಿಶಿರ ಬರಲಿ, ವಸಂತ ಬರಲಿ, ಅದರ ರೂಪ ಒಂದೇ ತೆರ).

ಅಮ್ಮಾಜಿಯವರಿಗೆ ನನ್ನ ವಂದನೆ.

ನಿನ್ನ ಹಿತೈಷಿ
ರಾಮಚಂದ್ರ

P-4-Books-PM-7-Anantyatre-58



* * * *

ಒಳ್ಳೆಯ ಆರೋಗ್ಯಕರ ಆಹಾರ ತೆಗೆದುಕೊಳ್ಳಬೇಕೆಂದು ಅಮ್ಮಾಜಿ ನನಗೆ ಸಲಹೆಮಾಡಿದ್ದಾಳೆ. ಆದರೆ ಇತ್ತೀಚೆಗೆ ಆರ್ಥಿಕ ಸ್ಥಿತಿ ಎಂತಿದೆಯೆಂದರೆ, ಹಾಸಿಗೆ ಇದ್ದಷ್ಟೇ ಕಾಲು ಚಾಚು' ಎಂಬಂತಿದೆ; ಸರಿ. ಈಶ್ವರ ಕೊಟ್ಟಾಗ ನಾನಿದನ್ನು ಲಕ್ಷ್ಯದಲ್ಲಿಟ್ಟುಕೊಳ್ಳುತ್ತೇನೆ. ಎಲ್ಲರಿಗೂ ಒಳ್ಳೆಯ, ಆರೋಗ್ಯಕರ ಭೋಜನ ದೊರೆತಾಗ, ನಾನು ಸಂತುಷ್ಟನಾಗುತ್ತೇನೆ. ಅಂಥ ಕಾಲ ಎಂದು ಬರುವುದೋ ಈಶ್ವರನೇ ಬಲ್ಲ. ಅದು ಬರಲೇ ಬೇಕು. ಹಾಲಿನ ಹೊಳೆ ಹರಿಯಬೇಕು' ಆದರೆ ಅದಕ್ಕಿನ್ನೂ ಕಾಲ ಬರಬೇಕು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೩ **ಪತ್ರ ಸಂಖ್ಯೆ – ೨೬೨** ಷಾಹಜಹಾನಪುರ
೩೦–೧೧–೧೯೩೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ನವಂಬರ್ ೨೩ರ ಪತ್ರ ಕೈಸೇರಿತು. ಅಹಮಿಕೆ ಇರುವ ವರೆಗೂ ಮನುಷ್ಯ ಹೊಗಳಿಕೆಯಿಂದ ಪ್ರಸನ್ನನಾಗುತ್ತಾನೆ. ಯಾರಾದರೂ ಅವನ ಬಗ್ಗೆ ಕೆಟ್ಟದಾಗಿ ಹೇಳಿದರೆ ಅವನು ವಿಚಲಿತನಾಗುತ್ತಾನೆ. ಅಹಮಿಕೆಗೆ ಎಲ್ಲೆಯೆಂಬುದೇ ಇಲ್ಲ; ಅದು ಎಲ್ಲಿಯವರೆಗೆ ಹೋಗುವುದೆಂಬುದು ಗೊತ್ತಿಲ್ಲ. ಬಹುಕಾಲಾನಂತರವೇ ಜನರು ಶುದ್ಧ ಅಹಮಿಕೆ (ಅಸ್ಮಿತೆ)ಯಿಂದ ಬಿಡುಗಡೆ ಹೊಂದುವುದು. ಶುದ್ಧ 'ಮಾಯೆ' ಮತ್ತು ಶುದ್ಧ ಅಹಂಕಾರ (ego)ಗಳಿಗೂ ಇದೇ ಮಾತು ಸಲ್ಲುತ್ತದೆ. ಇವೆರಡಕ್ಕೂ ಅತಿಶಯ ಶಕ್ತಿ (Powar) ಉಂಟು ಮತ್ತು 'ಯೋಗಿ'ಯು ಈ ಕೇಡುಗಳಿಗೆ ಬಲಿಬೀಳುತ್ತಾನೆ. ಸರ್ವಶಕ್ತನು ತನ್ನ ಅನುಗ್ರಹವನ್ನು ನಿಮ್ಮೆಲ್ಲರ ಮೇಲೆ ಸುರಿಸಲಿ ಮತ್ತು ನಿಮ್ಮೆಲ್ಲರನ್ನು ಇವುಗಳಿಂದ ಕಾಪಾಡಲಿ.

ನಿನಗೆ ಇನ್ನೊಂದು ಮಾತು ಹೇಳಬಯಸುತ್ತೇನೆ. ಮಾನ–ಅಪಮಾನಗಳೊಂದಿಗೆ ನಮಗೆ ಯಾವುದೇ ಸಂಬಂಧ ಇರಕೂಡದು. 'ಅಪಮಾನ'ದಿಂದ ನಾವು ಶೀಘ್ರ ಬಿಡುಗಡೆ ಹೊಂದಬಹುದು. ಆದರೆ 'ಮಾನ'ದ ಸಂಕೋಲೆಯನ್ನು ಕಡಿದೊಗೆಯುವುದು ಈಶ್ವರಾಧೀನ ಸಂಗತಿ. ಈಶ್ವರನು ಪೂರ್ಣ ಅನುಗ್ರಹ ವರ್ಷಣೆ ಮಾಡಿದಾಗ ಮಾತ್ರವೇ ನಾವು 'ಮಾನ'ದ ಶೃಂಖಲೆಯಿಂದ ಬಿಡುಗಡೆ ಹೊಂದಲು ಸಾಧ್ಯ. ಆದರೂ, ಎಲ್ಲಿಯವರೆಗೆ ಶರೀರ ಇರುವುದೋ ಅಲ್ಲಿಯವರೆಗೆ ಒಂದಿಷ್ಟು ಶೇಷ ಉಳಿದೇ ಉಳಿಯುತ್ತದೆ. ಈಗ ನಾನು ನನ್ನ ದೌರ್ಬಲ್ಯದ ಕುರಿತು ಬರೆಯುತ್ತೇನೆ. ಯಾರಾದರೂ ನನ್ನ ಪ್ರಶಂಸೆ ಮಾಡಿದಾಗ



ನನ್ನ ಚಿತ್ತವೂ ಪ್ರಸನ್ನವಾಗುತ್ತದೆ. ಆದರೆ, ಅದು ಮೊದಲನೆಯದಾಗಿ ತೀರ ಅಲ್ಪಪ್ರಮಾಣದಲ್ಲಿ ಪ್ರಸನ್ನಗೊಳ್ಳುವುದೆಂಬುದು ಖಂಡಿತ; ಒಂದು ವೇಳೆ ಪ್ರಸನ್ನವಾದರೂ ಕೂಡ, ಯಾರ ಪ್ರಶಂಸೆ ನಡೆಯುತ್ತಿದೆ, ಯಾರು ಪ್ರಸನ್ನರಾಗುತ್ತಿದ್ದಾರೆ ಎಂಬ ಅನುಭವವಾಗುವುದಿಲ್ಲ. "ನಾನು ಎಷ್ಟು ಮಟ್ಟಿಗೆ ಪ್ರಭು (ಸದ್ಗುರು)ವಿನಲ್ಲಿ *ಸಮರ್ಪಿತಳಾಗಿ, ಕರಗಿಹೋಗಿ ನಾನಿಲ್ಲದಂತಾಗಲು ಅಭೀಪ್ಸೆಪಡುವೆನೋ, ಅಷ್ಟು ಪ್ರಮಾಣದಲ್ಲಿ ಆಗಲು ಸಾಧ್ಯವಾಗುತ್ತಿಲ್ಲ*" ಎಂದು ನೀನು ಬರೆದಿದ್ದೀಯೆ. ಇದರ ಅರ್ಥವೇನೆಂದರೆ, ಒಬ್ಬನು ತನ್ನ ಬಾಣವನ್ನು ಯಾವ ಗುರಿಗೆ ತಲುಪಬೇಕೆಂದು ನಿರ್ಧರಿಸಿ ಬಾಣ ಬಿಡುವನೋ, ಆ ಗುರಿಯನ್ನು ಅದು ಮುಟ್ಟಲೇ ಬೇಕು; ಅಂತೆಯೇ ಸಂಪೂರ್ಣ ಆತ್ಮ ಸಮರ್ಪಣೆಯ ವಿಚಾರ ಪೂರ್ಣ ರೂಪದಲ್ಲಿ ಉತ್ಪನ್ನವಾಯಿತೆಂದರೆ, ಸಮರ್ಪಣೆಯ ಪ್ರಕ್ರಿಯೆ ಆರಂಭಗೊಂಡಿತೆಂದೇ ತಿಳಿಯಬೇಕು. ಮತ್ತು ಬಾಣ ಗುರಿಯನ್ನು ಮುಟ್ಟಿಯೇ ಮುಟ್ಟುತ್ತದೆ.

" 'ಆತ್ಮ ಸಮರ್ಪಣೆ' ಎನ್ನುವುದು ನನಗೆ ಮರೆತೇ ಹೋಗಿದೆ" ಎಂದು ಬರೆದಿದ್ದೀಯೆ. ಆತ್ಮಸಮರ್ಪಣದ ನಿಜವಾದ ಸ್ಥಿತಿ ಇದೇ ಆಗಿದೆ. ಆತ್ಮಸಮರ್ಪಣವೆಂದರೆ ಮತ್ತೇನೂ ಅಲ್ಲ– ಸದ್ಗುರುವಿನ ವಶಕ್ಕೆ ನಮ್ಮನ್ನು ನಾವು ಒಪ್ಪಿಸಿಕೊಂಡುಬಿಡುವುದು, ಮತ್ತು ಅವನ ಇಚ್ಛೆಗೆ ವಿಧೇಯನಾಗಿರುವುದು. ನೀನು 'ಅಜ್ಞಾನತೆಯ' ಸ್ಥಿತಿಯ ಬಗ್ಗೆ ಬರೆದಿದ್ದೀಯೆ. ಅದು ಬಹಳ ಉನ್ನತ ಸ್ಥಿತಿ; ಅದಿನ್ನೂ ಆರಂಭಗೊಂಡಿಲ್ಲ; ಅದಿನ್ನೂ ಗಾವುದ ಗಾವುದ (ಮೈಲಿಗಟ್ಟಲೆ) ದೂರ ಉಂಟು; ಆದರೆ ಸದ್ಗುರುವಿನ ಕೃಪೆ ಅತ್ಯಂತ ಸಮೀಪ ಇದೆ ಮತ್ತು ಅದು ಅದ್ಭುತಗಳನ್ನೆಸಗಬಲ್ಲದು. ಬಂಧು, 'ಅಜ್ಞಾನತೆ'ಯನ್ನು ಕೇಳುವವರಾದರೂ, ಯಾರಿದ್ದಾರೆ ? ಅದನ್ನು ಜನರು ಬಹು ದೂರ ಇಡಲು ಬಯಸುತ್ತಾರೆ. ನನ್ನ ಉದಾಹರಣೆ ನಿನ್ನ ಮುಂದಿದೆ; ವಿದ್ಯಾವಂತರೂ, ಪ್ರಾಯಶಃ, ನನ್ನೊಂದಿಗೆ ಮಾತನಾಡುವುದೂ ಕೂಡ ಸಮಯ ಹಾಳುಮಾಡಿದಂತೆ ಎಂದು ಭಾವಿಸುತ್ತಾರೆ. 'ನನ್ನ ಸ್ಥಿತಿ ಚೆನ್ನಾಗಿ ಸಾಗುತ್ತಿಲ್ಲ' ಎಂದು ನೀನು ಬರೆದುದು ಏಕೆಂದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ನಮ್ಮಲ್ಲಿ ಎಲ್ಲ ಸ್ಥಿತಿಗಳೂ ಒಳ್ಳೆಯವೇ ಆಗಿರುತ್ತವೆ. ಒಂದು ವೇಳೆ ತನ್ನ 'ಸ್ಥಿತಿ' ಚೆನ್ನಾಗಿಲ್ಲವೆಂದು ಯಾರಿಗಾದರೂ ಅನಿಸಿದರೆ, ಅದು ಒಳ್ಳೆಯ 'ಸ್ಥಿತಿ'ಯನ್ನು ತೆರೆಯುವ (ಉಂಟುಮಾಡುವ) ಕೀಲಿಕೈ. ಗುರುವಿನ ಬಗ್ಗೆ ಪ್ರೇಮವಿರುವುದು, ಯಾರಲ್ಲಿಯೇ ಆಗಲಿ, ಕಂಡು ಬಂದಾಗ, ಅವನನ್ನು ನಿನ್ನವನೇ ಎಂದೆನಿಸುವಂಥ ಪ್ರೇಮದಲ್ಲಿ ಕಾಣುತ್ತೀಯೆ. ಈ ಭಾವನೆ (ಅನಿಸಿಕೆ) ಒಳ್ಳೆಯದು. ನಾನೇ ಒಂದು ಉದಾಹರಣೆಯಾಗಿದ್ದೇನೆ. ಮೊದಲನೆಯದಾಗಿ, ನಾನು 'ನನ್ನಲ್ಲಿ' ಜೀವಿಸುತ್ತಿಲ್ಲ, ಆದರೆ, ನಾನು ಅದರಿಂದ (ಆ ಸ್ಥಿತಿಯಿಂದ) ಹೊರ ನಿಂತು ದೃಷ್ಟಿ ಹಾಯಿಸಿದರೆ, ಆಗ ಬೇರೆಯವರು ನನಗಿಂತಲೂ ಹೆಚ್ಚು ಆಧ್ಯಾತ್ಮಿಕ ಪ್ರಗತಿ ಸಾಧಿಸಿದ್ದಾರೆಂದು ನನಗೆ ತೋರುತ್ತದೆ. ಇದಕ್ಕೂ ಮುಂದೆ ಹೋದರೆ, ಅವರೇ ನನಗೆ ಅಧ್ಯಾತ್ಮ ವಿದ್ಯೆಯನ್ನು ಕಲಿಸಿದವರು ಮತ್ತು ನನ್ನ ಸ್ಥಿತಿ ಏನಿರುವುದೋ, ಅದನ್ನು

P-4-Books-PM-7-Anantyatre-59



ಅವರೇ ಕೊಟ್ಟಿದ್ದಿದೆ ಎಂದು ನನಗೆ ಅನಿಸುತ್ತದೆ. 'ಎಲ್ಲವುಗಳ ಹಿಂದಿನ ಸತ್ಯತೆ ಒಂದೇ ಇದೆ, ಮತ್ತು ಎಲ್ಲವೂ ಅಲ್ಲಿಂದಲೇ ಬಂದಿದೆ' ಎಂಬುದು ಇದರ ಅರ್ಥ. ಕೆಲವರು ಗಾಢವಾಗಿ ಆಸಕ್ತ (ಮಗ್ನ)ರಾಗಿದ್ದರೆ, ಇತರರು ಅವಜ್ಞೆಯಲ್ಲಿ ಉಳಿದರು.

ಮಗಳೆ, ನಿನ್ನ ಮೊದಲಿನ ಪತ್ರಕ್ಕೆ ಉತ್ತರ ಬರೆಸಿ ಆದ ಮೇಲೆ ನಿನ್ನ ನವಂಬರ್ ೨೬ರ ಪತ್ರ ಬಂದು ತಲುಪಿತು. ನೀನು ಕಂಡ ಸ್ವಪ್ನಕ್ಕೋಸ್ಕರ ನಿನಗೆ ಅಭಿನಂದನೆಗಳು. ನೀನು ನೋಡಿದ ನೀರು, ಸಾಕ್ಷಾತ್ಕಾರದ ನದಿಯಾಗಿತ್ತು. ನೀನು ಈಗ ಸಂಪೂರ್ಣವಾಗಿ ಅದರಲ್ಲಿ ಒಂದಾಗಿಹೋಗಿದ್ದೀಯೆ (ಕರಗಿಹೋಗಿದ್ದೀಯೆ); ಅಂದರೆ, 'ಸತ್ಯ'ತೆ (Reality) ಆರಂಭಗೊಂಡಿದೆ, ಮತ್ತು ನಿಜ ಏನೆಂದು ಕೇಳಿದರೆ, ನನ್ನ ಕೆಲಸ ಸಂಪನ್ನಗೊಂಡಿತು. ಈಗ ಮುಂದುವರಿಯುತ್ತ ಸಾಗು, ಮುಂದೇನಿರುವುದನ್ನು ನೋಡು. ನಿನ್ನ ಆವಶ್ಯಕ ಕರ್ತವ್ಯ ಏನಿತ್ತೋ ಅದನ್ನು ಈಶ್ವರನು ಪೂರ್ಣಗೊಳಿಸಿದನು ಎಂದು ನನಗೆ ವಿಶ್ವಾಸವಿದೆ; ಮುಂದೆ ಬರುವ ಸ್ಥಿತಿಗಳು 'ಎಚ್' (H) ಬಿಂದುವಿಗೆ ಸಂಬಂಧಿಸಿದವುಗಳಾಗಿವೆ. *'ಸಂಪೂರ್ಣ ಬ್ರಹ್ಮಾಂಡ ನನ್ನ ಹೃದಯದಲ್ಲಿ ಸಮಾವಿಷ್ಟವಾಗಿದೆ'* ಎಂದು ನೀನು ಬರೆದಿದ್ದೀಯೆ. ಇದೇ 'ಬ್ರಹ್ಮಗತಿ'. 'ಹಿರಣ್ಯಗರ್ಭ'ನ (Mind Region) ಸ್ಥಿತಿ ಇದಕ್ಕಿಂತ ಉನ್ನತವಾಗಿದೆ. ಅದಕ್ಕೂ ಮೇಲೆ 'ಶುದ್ಧ ಬ್ರಹ್ಮ'ದ ಸ್ಥಿತಿ ಇರುತ್ತದೆ. *'ಹೃದಯದ ಎಲ್ಲ ಬಂಧನಗಳು ಕಡಿದುಹೋದವು'* ಎಂದು ನೀನು ಬರೆದಿರುವ ಮಾತು ಸತ್ಯವೇ ಇದೆ. ಆದರೆ ನಾನು, ಇನ್ನೂ ಹೃದಯವನ್ನು (ಸಂಪೂರ್ಣ) (ಹೃದಯದ ಬಂಧನಗಳನ್ನು) ತೆರೆದಿಲ್ಲ; ಈ ನೆನಪು ನನಗೆ ಈಗ ತಾನೆ ಬಂದಿತು. ಅದನ್ನು ತೆರೆಯುವಂತೆ ನನಗೆ ಒಲವು ಮೂಡುವುದು ಈಗ ಸದ್ಗುರುವಿನ ಇಚ್ಛೆಯನ್ನು ಅವಲಂಬಿಸಿದೆ. *"ಪ್ರತಿಯೊಂದು ಸಮಯದಲ್ಲಿಯೂ, ಪ್ರತಿಯೊಂದು ಸ್ಥಳದಲ್ಲಿಯೂ, ನನ್ನ ಬದಲಿಗೆ (ಸ್ಥಾನದಲ್ಲಿ) ಒಂದು ಸೂಕ್ಷ್ಮವಾದ, ಹಗುರಾದ ಛಾಯೆ (ನೆರಳಿನಂಥ)* ಇರುವುದು *ನನ್ನ ಅನುಭವಕ್ಕೆ ಬರುತ್ತಿದೆ; ನಿಕಟದಿಂದ ಲಕ್ಷ್ಯವಿಟ್ಟು ನೋಡಿದರೆ ನಿಮ್ಮ ಸ್ವರೂಪವೇ ಅಲ್ಲಿ ನನಗೆ ಕಾಣಸಿಗುತ್ತದೆ"* ಎಂದು ಬರೆದಿದ್ದೀಯೆ. ಈ ಹೇಳಿಕೆ ಎಷ್ಟು ಸಂದಿಗ್ಧವಾಗಿದೆಯೆಂದರೆ, ವಿಚಾರ ಸ್ಪಷ್ಟವಾಗುವುದಿಲ್ಲ. ಇದನ್ನು ಇನ್ನೂ ಸ್ಫುಟವಾದ ಶಬ್ದಗಳಲ್ಲಿ ಬರೆದು ತಿಳಿಸು, ಅಂದರೆ ನನಗೆ ಉತ್ತರಿಸುವುದು ಸಾಧ್ಯವಾದೀತು. *"ಇಡೀ ಜಗತ್ತು ಮತ್ತು ಜಲ ನನ್ನ ಹೃದಯದಲ್ಲಿ ಸಮಾವಿಷ್ಟವಾಗಿವೆ, ಆದರೆ ನಾನು ಸ್ವತಃ ಎಲ್ಲಿಯೋ ಕಾಣೆಯಾಗಿದ್ದೇನೆ"* ಎಂದು ಬರೆದಿರುವೆ, 'ನಿನ್ನ'ನ್ನು ನೀನು ಸಾಕಷ್ಟು ಲುಪ್ತಗೊಳಿಸಿಕೊಂಡಿದ್ದೀಯೆ ಎಂದು ಇದರ ಅರ್ಥ. ಈ ಸ್ಥಿತಿಯು ಎಲ್ಲ ಅಭ್ಯಾಸಿಗಳಿಗೂ ಪ್ರಾಪ್ತವಾಗುವಂತೆ ಈಶ್ವರನು ಕೃಪೆಮಾಡಲಿ. ವಾಸ್ತವವಾಗಿ, ಯಾರಾದರೂ ನನಗಿಂತ ಹೆಚ್ಚು ಉನ್ನತ ಆಧ್ಯಾತ್ಮಿಕ ಸ್ಥಿತಿ ಪಡೆದವರನ್ನು ನಾನು ಕಂಡರೆ ನನಗೆ ಅತೀವ ಸಂತೋಷವಾಗುತ್ತದೆ. ಸಾಮಾನ್ಯವಾಗಿ ಒಂದು ಕೆರೆಯಲ್ಲಿ ನೀರು ಉಕ್ಕಿ ಹರಿಯುತ್ತದೆ; ಆದರೆ ಸಮುದ್ರ ಉಕ್ಕಿಹರಿಯುವುದಿಲ್ಲ. ಅಭ್ಯಾಸಿಯಾದವನು ಆಧ್ಯಾತ್ಮಿಕತೆಯ (ಸಾಕ್ಷಾತ್ಕಾರದ) ಸಹಸ್ರ ಸಮುದ್ರಗಳನ್ನು



ಕುಡಿಯುತ್ತಲೇ ಹೋಗಬೇಕು, ಹಾಗೂ ಇನ್ನೂ ಬೇಕು ಎಂದು ಬೇಡುತ್ತಿರಬೇಕು. ಸದ್ಗುರು (ಪ್ರಭು)ವಿನ ಕೃಪೆಯಿಂದ ನಿನ್ನ ಸ್ಥಿತಿ ಬಹಳೇ ಚೆನ್ನಾಗಿದೆ. ಈಶ್ವರನು ನಿನ್ನನ್ನು ಇನ್ನೂ ಮುಂದಕ್ಕೆ ಮುಂದಕ್ಕೆ ಕರೆದೊಯ್ಯಲಿ. ಹೌದು, ಅದು ಹೇಗಿರಬೇಕೋ ಹಾಗೆ ಇದೆ. ಮತ್ತು ಹಾಗೆಯೇ ಇರುತ್ತದೆ. ಇಲ್ಲಿಯ ಜನರು ಈ ಸ್ಥಿತಿಯ ವರೆಗೆ ಹೋಗುವ ಅಭಿಪ್ಸೆಯನ್ನೂ ಹೊಂದಿಲ್ಲ. ಈಶ್ವರ ಅಸೀಮನಿದ್ದಾನೆ. ನನ್ನ ಗುರುಮಹಾರಾಜರು ನನ್ನನ್ನು ಗಂತವ್ಯಕ್ಕೆ ಒಯ್ದು ಮುಟ್ಟಿಸಿದ್ದಾರೆ. ಅವರಿಗೆ ಸಹಸ್ರ ಸಹಸ್ರ ಧನ್ಯವಾದಗಳು. ಆದರೆ, ನೆಲೆ ಎಲ್ಲಿ ಎಂಬುದು ಇನ್ನೂ ಗೊತ್ತಿಲ್ಲ; ಈಜುವುದು ಇನ್ನೂ ಆರಂಭದಲ್ಲಿದೆ (ನಾನು ಅನಂತದಲ್ಲಿ ಈಜುತ್ತಲೇ ಇದ್ದೇನೆ). ಏನೋ ಒಂದಿಷ್ಟು ದೊರೆತಮಾತ್ರಕ್ಕೆ ಅದೇ ದೊಡ್ಡ ಸಿದ್ಧಿ ಎಂದು ಜನರು ಯಾಕೆ ತೃಪ್ತರಾಗಿ ಕುಳಿತುಬಿಡುತ್ತಾರೆ ಎಂಬುದು ತಿಳಿಯದು.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೪ **ಪತ್ರ ಸಂಖ್ಯೆ – ೨೬೫** ಷಾಹಜಹಾನಪುರ
೨೦–೧೨–೧೯೫೨

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿ ಬಹಳ ಸಂತೋಷವಾಯಿತು. ನೀನು ನನ್ನ ಪತ್ರದ ಪ್ರತೀಕ್ಷೆ ಮಾಡುತ್ತಿರುವಂತೆಯೇ, ನಾನು ಕೂಡ ನಿನ್ನ ಪತ್ರದ ಪ್ರತೀಕ್ಷೆಯಲ್ಲಿರುತ್ತೇನೆ. ಅರ್ಥಾತ್ ಈಶ್ವರನ ಕೃಪೆಯಿಂದ ನೀನು ಈಶ್ವರಪ್ರಾಪ್ತಿಗೋಸ್ಕರ ತಹತಹಿಸುತ್ತಿರುವಂತೆಯೇ ಅದೇ ರೀತಿ ಈಶ್ವರನೂ ಇದ್ದಾನೆ. ಅಂಥ ಸ್ಥಿತಿ ನಿನ್ನದು, ನಾನು 'ಈಶ್ವರ' ಶಬ್ದವನ್ನು ಬಳಸಿದರೆ, ಒಂದು ಸ್ವಲ್ಪ ತಪ್ಪಾದೀತು. ಯಾಕೆಂದರೆ, ಈಶ್ವರನು ನಿನ್ನನ್ನು ತನ್ನ ನಿಲುಕು ಇರುವವರೆಗೆ ಕೊಂಡೊಯ್ದಿದ್ದಾನೆ ಮತ್ತು ನೀನು ತಲುಪಬೇಕಾದ ಗಂತವ್ಯ ಮತ್ತು ಅದರ ಮಾರ್ಗವನ್ನು ತೋರಿಸಿದ್ದಾನೆ. ಈಶ್ವರ ಸಾಕ್ಷಾತ್ಕಾರ ಪೂರ್ಣಗೊಂಡಿತು ಮತ್ತು ಈಗ 'ಭೂಮಾ' ಆರಂಭವಾಗುತ್ತದೆ. ಅದರ ಕುರಿತು ನಾನು ಹಿಂದಿನ ಪತ್ರದಲ್ಲಿ ಬರೆದಿದ್ದೆ; ಸತ್ಯತೆ (ವಾಸ್ತವಿಕತೆ – ಅಸಲಿಯತ್) ಆರಂಭವಾಗುವುದು ಇಲ್ಲಿಂದ ಎಂದೂ ಬರೆದಿದ್ದೆ. ತಿಳಿವಳಿಕೆಗೋಸ್ಕರ ಸಾಕ್ಷಾತ್ಕಾರವು 'ಭೂಮಾದ' ಒಂದು ಪ್ರತಿಫಲನ ಅಥವಾ ಪ್ರತಿಫಲನದ ಪ್ರತಿಫಲನ ಎಂದು ಹೇಳಬಹುದು. 'ಸತ್ಯ'ವು ಕೊನೆಗೊಳ್ಳುವಲ್ಲಿ 'ಭೂಮಾ'ದ ಪರಿಧಿ ಆರಂಭವಾಗುತ್ತದೆ ಎಂದೂ ಹೇಳಬಹುದು. ಇದರಲ್ಲಿ ಗಾಬರಿಪಡುವಂಥದು ಏನೂ ಇಲ್ಲ. ಅದು ಶಬ್ದದಲ್ಲಿ ತೋರಿಬರುವಷ್ಟು ದೊಡ್ಡ ವಿಷಯವೇನೂ ಅಲ್ಲ. ಈ ಸ್ಥಿತಿಯನ್ನು ನಿನಗೆ ಅನುಗ್ರಹಿಸಿದವನೇ ಅಲ್ಲಿಗೂ ತಲುಪಲು ನಿನಗೆ ಸಹಾಯಮಾಡುತ್ತಾನೆ. ನಾವು ಲಾಲಾಜಿ ಮಹಾರಾಜರಲ್ಲಿ ದೃಢವಾದ ಶ್ರದ್ಧೆ ಮತ್ತು

F-4-Books-PM-7-Anantyatre-60



ವಿಶ್ವಾಸ ಹೊಂದಿರಬೇಕು. ಅವರ ಏನು ಬೇಕಾದರೂ ಮಾಡಲು ಸಮರ್ಥರು. ನಮ್ಮ ಸಂಸ್ಥೆಯಲ್ಲಿ ಲಾಲಾಜಿಯವರ ಅನುಗ್ರಹ ಮತ್ತು ಆಶೀರ್ವಾದಗಳೇ ಎಲ್ಲವಕ್ಕೂ ಕಾರಣ, ಮತ್ತು ಲಾಲಾಜಿಯವರ ದಿವ್ಯ ಶಕ್ತಿಯೇ 'ಸಹಜಮಾರ್ಗ'ದಲ್ಲಿ ಕೆಲಸ ಮಾಡುತ್ತಿರುವುದು.

ನೀನು ಮಾನ – ಅಪಮಾನ ಮತ್ತಿತರ ನಿಪ್ರಯೋಜಕ ಗಣನೆಗಳ ಸಂಬಂಧವನ್ನು ಸಂಪೂರ್ಣ ಕಡಿದೊಗೆದಿದ್ದೀಯೆ ಎಂಬುದನ್ನು ನಿನ್ನ ಪತ್ರದಿಂದ ತಿಳಿದು ಸಂತೋಷವಾಯಿತು. "ನನ್ನ ಸ್ಥಾನದಲ್ಲಿ ಒಂದು ನವುರಾದ ಛಾಯೆ ಗೋಚರವಾಗುತ್ತದೆ; ಲಕ್ಷ್ಯವಿಟ್ಟು ಗಮನಿಸಿದಾಗ ಅದು ನಿಮ್ಮದೇ ಸ್ವರೂಪ" ಎಂದು ನಾನು ಮರಳಿ ಕೇಳಿದ ಮೇಲೆ ಬರೆದಿದ್ದೀಯೆ. ಇದು ಬಹಳ ಒಳ್ಳೆಯ ಸ್ಥಿತಿ. ಆದರೆ, ಇದಕ್ಕೂ ಮುಂದೆ, ಲಯಾವಸ್ಥೆಯ ಉತ್ತಮ ಸ್ಥಿತಿ ಬರುವುದು; ಅದನ್ನು ಕುರಿತು ನಾನು ಬರೆಯುವುದಿಲ್ಲ, ಅದರಾಚೆಗೂ ಒಂದು ಸ್ಥಿತಿ (ಹಂತ) ಇರುವುದು ಸಾಧ್ಯ. ತಹತಹಿಕೆ ಹೆಚ್ಚುತ್ತಿರುವುದೆಂದರೆ, ಸತ್ಯವು (ಸತ್–ತತ್ತ್ವವು) ನಮ್ಮನ್ನು ತನ್ನೊಳಗೆ ಸೆಳೆದು ಸಮಾವಿಷ್ಟಗೊಳಿಸಿಕೊಳ್ಳುತ್ತಿದೆ ಎಂದೇ ಅರ್ಥ. ಈ ತೃಷೆಯನ್ನು ಅದು ತನ್ನಿಂದ ತಾನೇ ಶಮನಗೊಳ್ಳುವ ವರೆಗೂ ಕಾಯ್ದಿಟ್ಟುಕೊಳ್ಳಬೇಕು. ನೀನು ಬರೆದ ಇತರ ಮಾತುಗಳು 'ಲಯಾವಸ್ಥೆ' ಮತ್ತು 'ಪ್ರೇಮ'ಗಳ ಸ್ಥಿತಿಗಳಾಗಿವೆ. ನಿನ್ನ ಸದ್ಯದ ಸ್ಥಿತಿಗಿಂತ ಕೆಳಗಿನ ಹಂತದವರೆಗೆ ತಲುಪಿದವನು ಯಾರಾದರೂ ವೇದಿಕೆಗೆ ಬಂದು ಆಧ್ಯಾತ್ಮಿಕ ಶಿಕ್ಷಣ (ತರಬೇತಿ) ಕೊಡಲು ಮುಂದೆ ಬಂದರೆ, ಅದೊಂದು ದೊಡ್ಡ ಪ್ರಮಾದ. ಗುರುವಿನ ಕಾರ್ಯವೆಂದರೆ ಅಭ್ಯಾಸಿಯನ್ನು ಈಶ್ವರ ಸಾಕ್ಷಾತ್ಕಾರದ ವರೆಗೆ ಒಯ್ದು ಮುಟ್ಟಿಸುವುದು. ಆದರೆ, ಜನರು ಇಲ್ಲಿಗೆ ತಲುಪಿದಷ್ಟಕ್ಕೆ ತೃಪ್ತರಾಗಿ ನಿಂತುಬಿಡುತ್ತಾರೆ.

ಕೆಲ ದಿನಗಳ ನಂತರ, ಅಂದರೆ ನಾಲ್ಕೈದು ದಿನಗಳಲ್ಲಿ ನಾನು ನಿನ್ನನ್ನು ಮುಂದಿನ ಉನ್ನತ ಬಿಂದುವಿಗೆ ಒಯ್ಯುತ್ತೇನೆ. ನಾನು ಅದನ್ನು 'ಆಯ್' (I) ಬಿಂದು ಎಂದು ಕರೆದಿದ್ದೇನೆ. ಸದ್ಯ ನೀನು 'ಎಚ್' (H) ಬಿಂದುವಿನಲ್ಲಿ ಇದ್ದೀಯೆ.

ಅಮ್ಮಾಜಿಯವರಿಗೆ ನನ್ನ ನಮಸ್ಕಾರ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೫ **ಪತ್ರ ಸಂಖ್ಯೆ – ೨೬೮** ಷಾಹಜಹಾನಪುರ
೦೧–೦೧–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳು ಕೈಸೇರಿದವು. ಡಿಸೆಂಬರ್ ೨೪ರ ಪತ್ರದ ಉತ್ತರ ಕೊಡುತ್ತೇನೆ : ನಾವು ಧ್ಯಾನ (ಸಾಧನೆ) ಆರಂಭಮಾಡುವಾಗ ನಮ್ಮ ದೃಷ್ಟಿ ಸದ್ಗುರು



(ಪ್ರಭು)ವಿನ ಮೇಲೆ ನೆಟ್ಟಿರುತ್ತದೆ; ಮತ್ತು ಅದರ ನಂತರ ನಮ್ಮ ಸಂಬಂಧ ಒಬ್ಬ ಭಕ್ತನದಾಗಿರುತ್ತದೆ. ನಮ್ಮ ಭಕ್ತಿಯ ಸಂಬಂಧದ ಕೊಂಡಿ (ತಂತು) ಸದ್ಗುರುವಿಗೆ ಮುಟ್ಟಿದಾಗ, ಯಾರೋ ತನ್ನನ್ನು ಸ್ಮರಿಸುತ್ತಿದ್ದಾರೆಂಬ ವರ್ತಮಾನ ಅವನಿಗೆ ತಲುಪುತ್ತದೆ; ಅರ್ಥಾತ್ ಅವನು ನಿನ್ನೊಂದಿಗೆ ಸಂಪರ್ಕವೇರ್ಪಡಿಸುವ ಮೂಲಕ, ಲಕ್ಷ್ಯಕೊಡಲಾರಂಭಿಸುತ್ತಾನೆ; ಮತ್ತು ಆಗ ಅವನಲ್ಲಿರುವುದೆಲ್ಲವೂ ನಿನ್ನ ಕಡೆಗೆ ಹರಿದು ಬರತೊಡಗುತ್ತದೆ, ಅವನ ಬಳಿ ಇದ್ದಿತ್ತಾದರೂ ಏನು ? ವಿಶೇಷವಾಗಿ, 'ನಿರ್ಲಿಪ್ತತೆ' ಮತ್ತು ಯಾವುದರಿಂದಾಗಿ ಅವನು ಸದ್ಗುರು (ಪ್ರಭು) ಆದನೋ ಅದೇ ತೆರನಾದ ಸಾಮರ್ಥ್ಯ ನಿನ್ನಲ್ಲಿಯೂ ಉಂಟಾಗತೊಡಗಿತು. ಹೆಚ್ಚು ಕಡಿಮೆ ಅದೇ ತೆರನಾದ ಆಕರ್ಷಣೆ ನಿನ್ನಲ್ಲಿ ಉಂಟಾಯಿತು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವನದೇ ಸ್ವರೂಪ, ಸೌಂದರ್ಯ ನಿನ್ನಲ್ಲಿಯೂ ಮೂಡಿಬರತೊಡಗಿತು. ಒಬ್ಬ ಭಕ್ತನ ಸಂಬಂಧವಿರಿಸಿಕೊಂಡು ನೀನು ಅವನನ್ನು ಸ್ಮರಿಸುತ್ತಿರುವ ಕಾರಣ, ನಿನ್ನಲ್ಲಿದ್ದುದೂ ಅವನಿಗೆ ತಲುಪತೊಡಗಿತು. ನಿನ್ನಲ್ಲಿದ್ದುದು ಅವನಿಗೆ ಹೋಗಿ ಮುಟ್ಟಿತೆಂದರೆ, ಅವನಿಗೆ ತಲುಪಿದ ವಸ್ತು ಏನು ? ಅದೇ ನಿನ್ನ ಭಕ್ತಿ ಮತ್ತು ಸೇವಕನೆಂಬ ಭಾವ. ಅದು ಅವನಿಗೆ ಎಷ್ಟರ ಮಟ್ಟಿಗೆ ಹೋಗಿ ಮುಟ್ಟತೊಡಗಿತೆಂದರೆ, ನೀನು ನಿನ್ನನ್ನೇ ಮರೆಯತೊಡಗಿದೆ. ಈ ಪರಿಸ್ಥಿತಿ ಏರ್ಪಟ್ಟಾಗ, ನಿನ್ನಲ್ಲಿರುವುದು ನಿನ್ನ ಭಕ್ತಿ ಮತ್ತು ಸೇವಕಭಾವ ಅವನಿಗೆ ಹೋಗಿ ತಟ್ಟಿಬಿಟ್ಟಿತ್ತು. ಆ ಕಾರಣ, ಅವನೇ ಸ್ವತಃ ನಿನ್ನ ಸ್ಮರಣೆಯಲ್ಲಿ ಇರುವನೆಂದು ನಿನಗೆ ಅನಿಸತೊಡಗಿತು. ಇದೇ ರೀತಿಯಲ್ಲಿ ಅನೇಕ ದಶೆ (ಅವಸ್ಥೆ)ಗಳು ಅಂತರ್ಮುಖತೆ ಮುಂತಾದವುಗಳ ಬಗೆಗೂ ಅರಿವಿಗೆ ಬರುತ್ತ ಹೋಗುತ್ತವೆ. ಅವೆಲ್ಲವೂ ಅವನಿಂದಲೇ ಬರುತ್ತಿರುವಂತೆ ಭಾಸವಾಗುತ್ತವೆ. ಹೀಗೆ, 'ಭಕ್ತಿ'ಯಲ್ಲಿ ಒಂದು ಹೊಸ ಅಧ್ಯಾಯ ಆರಂಭಗೊಳ್ಳುತ್ತದೆ.

ಡಿಸೆಂಬರ ೩೧ ೧೯೫೨ ರಂದು ನಾನು ನಿನ್ನನ್ನು 'ಜೆ' (J) ಬಿಂದುವಿನ ವರೆಗೆ ತಂದು ಬಿಟ್ಟಿದ್ದೇನೆ. ಈಶ್ವರೇಚ್ಛೆಯಿದ್ದರೆ, ಈ ಪತ್ರ ಮುಟ್ಟುವಷ್ಟರ ಹೊತ್ತಿಗೆ ಆ ಬಿಂದುವಿನ ಯಾತ್ರೆಯೂ ಪ್ರಾರಂಭವಾಗುವುದು. ನಾನು ತುಸು ತ್ವರೆಮಾಡಲು ಬಯಸುತ್ತೇನೆ, ಆದರೆ ಅದೇ ಹೊತ್ತಿನಲ್ಲಿ, ನಿನಗೆ ಯಾತ್ರೆಯ ಅನುಭವಗಳೂ ಬರಲೆಂದು ಬಯಸುತ್ತೇನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೬ **ಪತ್ರ ಸಂಖ್ಯೆ – ೨೭೫** ಷಾಹಜಹಾನಪುರ
೦೪–೦೨–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಜನವರಿ ೨೭ ಮತ್ತು ೩೦ರ ಮತ್ತು ಫೆಬ್ರುವರಿ ೨ರ ಪತ್ರಗಳು ಕೈಸೇರಿವೆ. ನೀನು 'ಬಸಂತ ಪಂಚಮಿ' ಉತ್ಸವಕ್ಕೆ ಇಲ್ಲಿಗೆ ಬಂದಾಗ, ಜನವರಿ ೧೮ರ ಮುಂಜಾನೆ ನಾನು ನಿನ್ನನ್ನು 'ಕೆ' (K) ಬಿಂದುವಿಗೆ ಮುಟ್ಟಿಸಿದ್ದೆ. ನಿನ್ನ

(ಪತ್ರದಲ್ಲಿ ಬರೆದ) ಎಲ್ಲ ಸ್ಥಿತಿಗಳು ಅದೇ ಬಿಂದುವಿಗೆ ಸಂಬಂಧಿಸಿದವುಗಳು; ಅವು ಲಯಾವಸ್ಥೆಯಲ್ಲಿಯ ಪ್ರಗತಿಯನ್ನು ಸೂಚಿಸುತ್ತವೆ. ನೀನು ಆಧ್ಯಾತ್ಮಿಕ ಪ್ರಗತಿಗೋಸ್ಕರ ಸದಾ ಕಾತರದಿಂದಿರುವುದು ಸಂತೋಷದ ಸಂಗತಿ; ಮತ್ತು ಈ ಎಲ್ಲ ಪ್ರಗತಿಯ ಶ್ರೇಯಸ್ಸು ನಿನಗೇ ಸಲ್ಲುತ್ತದೆ. ಇವೆಲ್ಲವೂ ನನ್ನ ದೆಸೆಯಿಂದ ಎಂದು ಮಾತಿಗೋಸ್ಕರ ಹೇಳಬಹುದಷ್ಟೆ, ಆದರೆ, ನೀನು ಸದಾ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದೆ ಸಾಗುತ್ತಿರುವುದು ನಿನ್ನ ಯೋಗ್ಯತೆಯೇ (ಸಾಮರ್ಥ್ಯ) ಆಗಿದೆ. ಇವೆಲ್ಲ ನನ್ನ ಸಾಮರ್ಥ್ಯದ ದೆಸೆಯಿಂದ ಎಂದೆನ್ನುವುದಾದರೆ ಎಲ್ಲ ಅಭ್ಯಾಸಿಗಳೂ ಪ್ರಗತಿಯ ಅತ್ಯುಚ್ಚ ಶಿಖರವನ್ನು ತಲುಪಿಬಿಡುತ್ತಿದ್ದರು. ನಾನೇನೋ, ಅಭ್ಯಾಸಿಯು ಮುಂದುವರಿಯಲು ಒಂದಿಷ್ಟು ಸಹಾಯ ಮಾಡುವುದೇನೋ ಖಂಡಿತಕ್ಕೂ ಸರಿಯೆ, ಆದರೆ; ಅದು ನನ್ನ ಸಾಮರ್ಥ್ಯದ ಕಾರಣದಿಂದ ಎನ್ನುವುದು ಅಷ್ಟು ಸರಿಯಾಗಲಿಕ್ಕಿಲ್ಲ. ಯಾಕೆಂದರೆ ಪ್ರಗತಿಯತ್ತ ದಾಪುಗಾಲಿಟ್ಟು ಮುಂದುವರಿಯುವಂತೆ ನಿನಗೆ ಸಹಾಯಮಾಡಲು ನನ್ನನ್ನು ವಿವಶಗೊಳಿಸುವುದು ನಿನ್ನ ತಳಮಳ ಮತ್ತು ಯೋಗ್ಯತೆಗಳೇ ಆಗಿವೆ. ಅಭ್ಯಾಸಿಯು ಅತ್ಯುಚ್ಚ ಆಧ್ಯಾತ್ಮಿಕ ಸ್ತರಕ್ಕೆ ತಲುಪಲು ಸಹಾಯಮಾಡುವುದು ನನ್ನ ಸಾಮರ್ಥ್ಯ ಎಂದು ನೀನು ಹೇಳುವುದಾದರೆ, ಅದೂ ಸಮರ್ಪಕವೆನಿಸದು; ಯಾಕೆಂದರೆ ನಾನು ನಾನಾಗಿ ಉಳಿದಿಲ್ಲ; (ಉಳಿದು) ಇರುವವನು 'ಅವನೇ' (ಲಾಲಾಜಿ ಮಹಾರಾಜರು), ಅವರೇ ಎಲ್ಲರಿಗೂ ಗುರಿ ತಲುಪಲು ಸಹಾಯ ಮಾಡುತ್ತಿರುವವರು.

'ನನ್ನ ಶರೀರ ಕ್ರಮೇಣ ಕರಗಿ ಹೋಗುತ್ತಿದೆ' ಎಂದು ನೀನು ಬರೆದಿದ್ದೀಯೆ. ಒಂದು ಮಾತು ಹೇಳುತ್ತೇನೆ. ಪ್ರಾಯಶಃ ಅದು ನಿನ್ನ ಮಾತಿಗೆ ಉತ್ತರವಾದೀತು. ಏನೆಂದರೆ, ನಾವು ಹೃದಯ ಪೂರ್ವಕ, ಪ್ರೇಮ ಮತ್ತು ಭಕ್ತಿಗಳಿಂದ ಧ್ಯಾನ ಮಾಡಿದಾಗ, ಹಿಂದಿನ ಎಲ್ಲ ವಿಚಾರಗಳ ಪ್ರಭಾವವು ದೂರವಾಗುತ್ತವೆ ಮತ್ತು ಹಳೆಯ ಕಣಗಳ ಸ್ಥಾನದಲ್ಲಿ ಪಾವಿತ್ರ್ಯದ ಹೊಸ ಕಣಗಳು (ಕೋಶಗಳು) ಬರುತ್ತವೆ. ದೇಹಧಾರಿಯ ಪ್ರತಿಯೊಂದು ಕಣ–ಕಣವೂ, ಆ ವ್ಯಕ್ತಿಯ ವಿಚಾರಗಳಿಗನುಸಾರ ಪರಿವರ್ತಿತವಾಗುತ್ತ ಹೋಗುತ್ತದೆ. ಪ್ರೇಮ ಭಕ್ತಿಗಳಿಂದ ಈಶ್ವರನತ್ತ ಸಾಗುವವನ ದೇಹದ ಕಣಗಳೂ ಅದಕ್ಕನುಸಾರವಾಗಿ ರೂಪುಗೊಳ್ಳುತ್ತ ಹೋಗುತ್ತವೆ.

ನಿಜವಾದ ಪ್ರೇಮ ಎಂಥದೆಂದರೆ, ನೀನು ಸದ್ಗುರುವಿನ ಪ್ರೇಮಮಾಡುತ್ತ ಹೋದಹಾಗೆ ಆ ಪ್ರೇಮದ ಅರಿವೂ ಇರದಂತೆ ಮರೆಯಾಗಿ (ಮರೆತು) ಹೋಗುತ್ತದೆ. ಅಂತಹ ಸ್ಥಿತಿ ಉಂಟಾದಾಗ, ಅಭ್ಯಾಸಿಯು 'ಸತ್ಯ'ದಲ್ಲಿ ಪ್ರವೇಶಿಸಲು ಪ್ರಾರಂಭಿಸುತ್ತಾನೆ. ಮತ್ತು ಹೃದಯವು ಮೃದುವಾಗಿ, ಅವನು ಹೆಚ್ಚು ಹೆಚ್ಚು ನಮ್ರನಾಗುತ್ತ ಹೋಗುತ್ತಾನೆ. ಇದೇ ಸ್ಥಿತಿಯಲ್ಲಿ ಅಥವಾ ಇದಕ್ಕಿಂತ ಉಚ್ಚತರತರಸ್ಥಿತಿಯಲ್ಲಿ ಭಕ್ತರು–

*"ಬಿನಾ ಭಕ್ತಿ ತರೋ, ತಬ್ ತರಿಬೋ ತಿಹಾರೋ ಹೈ"* (ಭಕ್ತಿ ಇಲ್ಲದೆ ನೀನು ದಾಟಿಸು, ಆಗ ನಿಜಕ್ಕೂ ನೀನು ದೊಡ್ಡವನು!) ಎಂದು ಹೇಳಿದ್ದಾರೆ.



*"ಸದ್ಗುರುವಿನ (ಪ್ರಭುವಿನ) ಈ ಸೇವಕಿಯಲ್ಲಿ ಎಲ್ಲವೂ ಉದ್ಭವವಾಗುತ್ತವೆ. ಎಲ್ಲವೂ ಅಂತ್ಯಗೊಳ್ಳುತ್ತವೆ"* – ಎಂದು ನೀನು ಒಂದು ಕಡೆ ಬರೆದಿದ್ದೀಯೆ. ಎಲ್ಲವೂ ಎಲ್ಲಿಂದ ಉದ್ಭವವಾಗುವುವೋ ಆ ವಲಯ (ಮಂಡಲ)ವನ್ನು ನೀನು ಪ್ರವೇಶಿಸಿದ್ದೀಯೆ ಎಂಬುದು ಇದರ ಅರ್ಥ. ನಿನ್ನದು ಈಗ 'ಹಿರಣ್ಯಗರ್ಭ'ದ ಸ್ಥಿತಿ. ಅಥವಾ ಅದೇ ತೆರನಾದ ಸ್ಥಿತಿ ಬರಲಿಕ್ಕಿದೆ ಎಂದು ನಾನು ನಿನಗೆ ಒಮ್ಮೆ ಬರೆದಿದ್ದೆ. ನನಗೆ ಸರಿಯಾಗಿ ಜ್ಞಾಪಕವಿಲ್ಲ. ಆ ಸ್ಥಿತಿ ಈಗ ನಿನಗೆ ಪ್ರಾಪ್ತವಾಗಲು ಪ್ರಾರಂಭಿಸಿದೆಯೆಂದು ನನಗೆ ಅನಿಸುತ್ತದೆ, ಆದರೆ ಅದು ಇನ್ನೂ ಪೂರ್ಣರೂಪದಲ್ಲಿ ಅನುಭವಕ್ಕೆ ಬಂದಿಲ್ಲ. ಅಥವಾ ನಿನ್ನ ಒಂದು ಪಾದ 'ಹಿರಣ್ಯಗರ್ಭ' ಸ್ಥಿತಿಯಲ್ಲಿದೆ ಎಂದೂ ಹೇಳಬಹುದು. ಈಗ, ನಿನ್ನನ್ನು ಈ ಸ್ಥಿತಿಯಲ್ಲಿ 'ಲಯ' ಹೊಂದುವಂತೆ ನಾನು ಮಾಡಬಹುದು ಅಥವಾ 'ಕೆ' (K) ಬಿಂದುವಿನಿಂದ 'ಎಲ್' (L) ಬಿಂದುವಿಗೆ ಕೊಂಡೊಯ್ಯಲೂ ಬಹುದು; ಅದನ್ನು, ಸೂಕ್ಷ್ಮವಾಗಿ ನಿನ್ನ ಸ್ಥಿತಿಯನ್ನು ವೀಕ್ಷಿಸಿದ ನಂತರ ನಿರ್ಧರಿಸಲಾಗುವುದು. ಈ ಎರಡು ಪರ್ಯಾಯಗಳ ಬಗ್ಗೆ ನಾನು ಇನ್ನೂ ಯೋಚನೆ ಮಾಡಿಲ್ಲ. ನಾನು 'ಎಲ್' (L) ಬಿಂದುವನ್ನು ತೆಗೆದುಕೊಳ್ಳುವುದೂ ಸಾಧ್ಯ. ಆದರೆ ಯಾವಾಗ ? ನೀನು ಈ 'ಕೆ' (K) ಬಿಂದುವಿನ ಯಾತ್ರೆಯನ್ನು ಮುಗಿಸಿದುದನ್ನು ನಾನು ಕಂಡಮೇಲೆ ಮಾತ್ರ. ಯಾತ್ರೆಯನ್ನಂತೂ ನಾನು ಖಂಡಿತ ತ್ವರಿತಗೊಳಿಸುತ್ತಿದ್ದೇನೆ.

'ಗುರು ಸಂದೇಶ' ('ಋತವಾಣಿ'ಯಲ್ಲಿರುವ, 'ನನ್ನ ಗುರುಗಳ ಸಂದೇಶ')ವನ್ನು ಪರಿಷ್ಕರಿಸುವಾಗ ತುಂಬ ಎಚ್ಚರ ವಹಿಸು. ಅದರಲ್ಲಿ ಯಾವುದೇ ತಪ್ಪು ಇರಬಾರದು. ನಾನು ಎಲ್ಲ ಕೆಲಸಗಳಲ್ಲಿಯೂ ತ್ವರೆಮಾಡುವುದರಿಂದ, ತಪ್ಪುಗಳಾಗುತ್ತವೆ; ಆದರೆ ಆ ಅಭ್ಯಾಸ ಹೊರಟು ಹೋಗುವುದಿಲ್ಲ. ಸರಿಪಡಿಸಿದನಂತರ ಶ್ಯಾಮಪತೀಜಿಯವರಿಗೆ ಒಂದು ನಕಲು ಕಳಿಸು.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೬೭ **ಪತ್ರ ಸಂಖ್ಯೆ – ೨೭೮** ಶಾಹಜಹಾನಪುರ
೨೨–೦೨–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಫೆಬ್ರುವರಿ ೮ ಮತ್ತು ೧೪ರ ನಿನ್ನ ಪತ್ರಗಳು ಕೈಸೇರಿದವು. ಇಷ್ಟು ಸೂಕ್ಷ್ಮ ಸ್ಥಿತಿಗಳ ಬಗ್ಗೆ ಉತ್ತರಿಸುವುದು ಬಹಳ ಕಷ್ಟದ ಕೆಲಸ. ನಿನ್ನ ಸ್ಥಿತಿಗಳು 'ಧನ್ಯವಾದ'ಕ್ಕೆ ಯೋಗ್ಯವಾಗಿವೆ ಎಂಬುದನ್ನು ಬಿಟ್ಟು ಬೇರೇನು ಹೇಳಲು ಸಾಧ್ಯ ? ಪ್ರಸಾದ ಅರ್ಪಣೆಮಾಡುವುದು ಅನಿವಾರ್ಯವೇನಲ್ಲ. ಯಾರಾದರೂ ಅರ್ಪಣೆ ಮಾಡಲು

ಬಯಸಿದರೆ ಅದಕ್ಕೇನೂ ಅಭ್ಯಂತರವಿಲ್ಲ. ವಾಸ್ತವವೇನೆಂದರೆ, ನಿಜವಾದ ಜಿಜ್ಞಾಸುಗಳು ಸಿಗುವುದಿಲ್ಲ, ಅದಿಲ್ಲವಾದರೆ, ಬಹಳ ಸಂತೋಷವಾಗುತ್ತಿತ್ತು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ತಾವು ಏನಾದರೂ ಆಗುವಷ್ಟು ಮಟ್ಟದ ಸ್ಥಿತಿಯನ್ನು ಉಂಟುಮಾಡಿಕೊಳ್ಳಲು ಪರಿಶ್ರಮಪಡಬಯಸುವುದಿಲ್ಲ. ಕೆಲವು ಆಧ್ಯಾತ್ಮಿಕ ರಹಸ್ಯಗಳು ನನ್ನೊಂದಿಗೆ ಎಲ್ಲಿ ಹೊರಟುಹೋಗುವುವೋ ಎಂದು ನನಗೆ ಅನಿಸುತ್ತದೆ. ಹಾಗಿದ್ದರೂ, ಏನಿಲ್ಲೊಂದು ಸ್ಥಿತಿಯನ್ನು ನಾನು ಅಭ್ಯಾಸಿಗಳಿಗೆ ಕೊಡುತ್ತಲೇ ಇರುತ್ತೇನೆ. ಯಾವುದಾದರೊಂದು ಸ್ಥಿತಿ ತನ್ನಲ್ಲಿ ಉಂಟಾದಾಗ ಅಭ್ಯಾಸಿಯು ಅದನ್ನು ಅನುಭವಪಟ್ಟಾಗ (ಮಾತ್ರ), ಅವನು ಬೇರೆಯವರ ಬಗ್ಗೆ (ಅವರ ಉನ್ನತಿಗೆ) ಕೆಲಸಮಾಡಲಾಗುವಂತೆ ಅವನನ್ನು ಉಪಯೋಗಿಸಿಕೊಳ್ಳಬಹುದು. ಅನೇಕ ಸ್ಥಿತಿಗಳು ನನ್ನ ಕಣ್ಣೆದುರು ಇವೆ. ಅನೇಕ ಬಿಂದುಗಳೂ ನನ್ನ ದೃಷ್ಟಿಯಲ್ಲಿವೆ; ಅಲ್ಲದೆ, ಮುಂದೆ ಅನೇಕ ಬಿಂದುಗಳ ಸಂಶೋಧನೆಯೂ ಆಗುತ್ತಿದೆ. ಒಂದೆರಡು ಬಿಂದುಗಳ ಪ್ರಯೋಜನ ಪಡೆಯುವ ಶಕ್ತಿಯೂ ಯಾರಲ್ಲಿಯೂ ಕಾಣುತ್ತಿಲ್ಲ. ಆದರೂ, ಪ್ರತಿಯೊಬ್ಬ ಅಭ್ಯಾಸಿಯೂ ಪ್ರತಿಯೊಂದು ಬಿಂದುವಿನ ಸ್ಥಿತಿಯ ರುಚಿಯನ್ನು ಆಸ್ವಾದಿಸಲಿ ಎಂದು ನನ್ನ ಹೃದಯ ತಡಪಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ನಾನು ಬ್ರಹ್ಮವಿದ್ಯೆಯನ್ನು ಪೂರ್ಣರೂಪದಲ್ಲಿ ಪ್ರದಾನ ಮಾಡಲು ಕಾತರಪಡುತ್ತಿದ್ದೇನೆ. ಅದರ ಒಂದು ಅಂಶವನ್ನಾದರೂ ಅಭ್ಯಾಸಿಗಳು ತನ್ನದಾಗಿ ಮಾಡಿಕೊಂಡರೆ, ಅವರು ಏನೇನೋ ಆಗಿಬಿಡಬಹುದು. 'ಈ ಮಟ್ಟದ ವರೆಗೆ (ಬ್ರಹ್ಮವಿದ್ಯೆಯನ್ನು) [ತರಬೇತಿ] ಪಡೆಯುವವರೂ ಸಿಗುವುದು ಬಹಳ ಕಷ್ಟ' ಎಂದು ಲಾಲಾಜಿಯವರು ನನಗೆ ಹೇಳಿದ್ದರು. ಯಾವ ಮಟ್ಟದ ಅಭ್ಯಾಸಿಗಳು ಸಿಗುವರೋ, ಸರಿ; ಅದೇ ಒಳಿತು ಎನ್ನಬೇಕು. ಜನರು ತಮ್ಮ ಅಂತಃಸ್ಥಿತಿಯ ಅನುಭವವಾಗುವುದಿಲ್ಲ ಎಂದು ಅನೇಕ ಬಾರಿ ಹೇಳುತ್ತಿರುತ್ತಾರೆ. 'ನಿಮ್ಮ ಸ್ಥಿತಿಯನ್ನು ಅನುಭವ ಪಡಲು ನೀವು ಎಂದಾದರೂ ಪ್ರಯತ್ನಿಸಿದ್ದಿರಾ, ಅದರಲ್ಲಿ ಆಳವಾಗಿ ಮುಳುಗಿ ನೋಡಿದ್ದಿರಾ'? ಎಂದು ಕೇಳಿದರೆ, ತಮಗೆ ಅನುಭವ ಪಡುವ (ಸೂಕ್ಷ್ಮಗ್ರಹಣ) ಸಾಮರ್ಥ್ಯವಿಲ್ಲ ಎಂದು ಉತ್ತರಿಸುತ್ತಾರೆ. ನಾನು ಇದನ್ನು ಒಪ್ಪುವುದಿಲ್ಲ. ಪ್ರತಿಯೊಬ್ಬನಿಗೂ ಈ ಸಾಮರ್ಥ್ಯ ಉಂಟು ಎಂದು ನನ್ನ ನಂಬಿಕೆ. ಯಾಕೆಂದರೆ ಬ್ರಹ್ಮ ವಿದ್ಯೆಯಲ್ಲಿ (ಅಧ್ಯಾತ್ಮ ವಿದ್ಯೆಯಲ್ಲಿ) ಅಭ್ಯಾಸಿಯು ತನ್ನ ಅಭ್ಯಾಸದಲ್ಲಿ ಮುಂದುವರಿಯುತ್ತ ಹೋದಂತೆ ಬುದ್ಧಿಶಕ್ತಿಯೂ ಖಂಡಿತ ವರ್ಧಿಸುತ್ತದೆ. ವಾಸ್ತವವೇನೆಂದರೆ ಅವರು ಈ ವರ್ಧನೆಹೊಂದಿದ ಬುದ್ಧಿಶಕ್ತಿಯನ್ನು ಬೇರೆ ವಿಷಯಗಳಲ್ಲಿ ಬಳಸುತ್ತಾರೆಯೇ ಹೊರತು, ಇದಕ್ಕೆ ಉಪಯೋಗಿಸುವುದಿಲ್ಲ. ಸಾಮಾನ್ಯವಾಗಿ ಅದು ಪ್ರಾಪಂಚಿಕ ವಿಷಯಗಳ ಕಡೆಗೆ ತಿರುಗಿಸಲ್ಪಡುವುದೇ ಹೊರತು, ದೈವೀವಿಷಯದ ಕಡೆಗಲ್ಲ. ಅದರ ಪರಿಣಾಮವಾಗಿ, ವೈರಾಗ್ಯವನ್ನು ಬೆಳೆಸಿಕೊಳ್ಳುವುದರ ಬದಲಿಗೆ ಅವರು ಪ್ರಪಂಚಕ್ಕೆ ದೃಢವಾಗಿ ಅಂಟಿಕೊಳ್ಳುತ್ತಾರೆ. ಈ ದೋಷದ ಕುರಿತ ವಿಚಾರ ನನಗೆ ಈ ಪತ್ರಕ್ಕೆ ಉತ್ತರ ಬರೆಯುತ್ತಿರುವಾಗ ಈಗ ಬಂದಿತು; ಮತ್ತು ಅದು ಸರಿಯೇ ಇದೆ ಕೂಡ. ಜಿಜ್ಞಾಸುವು ವೈರಾಗ್ಯವನ್ನು



ಬೆಳೆಸಿಕೊಂಡ ನಂತರವೇ ಅವನಿಗೆ ಈ ಅನರ್ಘ್ಯ ರತ್ನ (ಬ್ರಹ್ಮವಿದ್ಯೆ)ವನ್ನು ಕೊಡತಕ್ಕದ್ದು ಎಂದು ಮಹಾತ್ಮರು ಅಭಿಪ್ರಾಯ ಪಟ್ಟಿರುವುದು ಸರಿಯಾಗಿಯೇ ಇದೆ. ಜನರು ಹೃದಯಪೂರ್ವಕವಾಗಿ ಯಾವ ತ್ಯಾಗ ಮಾಡಲೂ ಸಿದ್ಧರಿರುವುದಿಲ್ಲ. ಹೇಳಿ–ಕೇಳಿ ತಿಳಿದುಬಂದ ಮಾತಿನ ಮೇಲೆ ನನ್ನ ಬಳಿ ಬಂದು ಅಭ್ಯಾಸ ಪ್ರಾರಂಭಿಸುತ್ತಾರೆ. ಅವರಿಗೆ ನಿಜವಾದ ಸತ್ಯಸಾಕ್ಷಾತ್ಕಾರದ ತೃಷೆ ಇರುವುದಿಲ್ಲ. ಹಾಗಿದ್ದರೂ, ಅವರಿಗೆ ಏನೋ ಒಂದಿಷ್ಟು ಲಾಭ ಆಗಿಯೇ ತೀರುವುದು. ಆದ್ದರಿಂದ ಅವರಿಗೆ ಸಹಾಯ ಮಾಡುವುದು ನನ್ನ ಬಾಧ್ಯತೆ (ಕರ್ತವ್ಯ) ಎಂದು ನಾನು ಭಾವಿಸುತ್ತೇನೆ. ಅಲ್ಲದೆ, ನನಗೆ ಅದೇ ರೀತಿ ಅಪ್ಪಣೆಯಾಗಿದೆ ಕೂಡ.

ಅಭ್ಯಾಸಿಯು ತನ್ನ ಲಕ್ಷ್ಯವನ್ನು ಈಶ್ವರನ ಕಡೆಗೆ ತಿರುಗಿಸಿದ್ದರೆ, ವೈರಾಗ್ಯವು ತನ್ನಿಂದ ತಾನೇ ಸುಲಭವಾಗಿ ಉಂಟಾಗುತ್ತಿತ್ತು. ನನ್ನ ಕಡೆಯಿಂದ, ನಾನು ಇಷ್ಟು ಖಂಡಿತ ಮಾಡುತ್ತೇನೆ. ನಾನು ಅವನ ಲಕ್ಷ್ಯವನ್ನು ಈಶ್ವರನತ್ತ ತಿರುಗಿಸಿ ನನ್ನ ಸಂಕಲ್ಪಶಕ್ತಿಯಿಂದ ಅಲ್ಲಿ ಸ್ಥಿರಗೊಳಿಸುತ್ತೇನೆ. ಇದರ ಅನುಭವ ಅವರಿಗಾಗುತ್ತದೆ ಮತ್ತು ಅವರು ಅದನ್ನು ಮನಗಾಣುತ್ತಾರೆ ಕೂಡ; ಆದರೆ ಅವರು ಅದನ್ನು ಪ್ರಾಪಂಚಿಕತೆಯತ್ತ ಎಳೆಯುತ್ತಾರೆ. ಗುರುಮಾಹಾರಾಜರ ಕೃಪೆಯಲ್ಲಿ ನನಗೆ ವಿಶ್ವಾಸವಿದೆ. ನಾನು ಅಭ್ಯಾಸಿಯೊಬ್ಬನ ಮನಸ್ಸನ್ನು ಈಶ್ವರನ ಕಡೆಗೆ ತಿರುಗಿಸಿದರೆ ಅದು ಕೆಳಗೆ ಬರಲಾರದು. ಪರಿಣಾಮವಾಗಿ, ಪ್ರಾಪಂಚಿಕತೆಯ ಕಡೆಗೆ ಓಡುವ ಅಂಥ ಜನರು ಪೇಚಾಟಕ್ಕೀಡಾಗುತ್ತಾರೆ ಯಾಕೆಂದರೆ, ಅವರ ಮನಸ್ಸು ಈಶ್ವರನತ್ತ ತಿರುಗಿ ಉನ್ನತ ಸ್ತರದಲ್ಲಿರಲು ಬಯಸುತ್ತದೆ, ಮತ್ತು ಅವರು ಅದನ್ನೇ ಕೆಳಕ್ಕೆ ಎಳೆಯುತ್ತಿರುತ್ತಾರೆ.

**ಸ್ವಾಮೀ ವಿವೇಕಾನಂದರು :** (ಆದೇಶ) ಇದು ಅತೀವ ಮೌಲಿಕತೆಯುಳ್ಳ ಪತ್ರ. ನೀನು ಬರೆದುದು ಸಂಪೂರ್ಣ ಸರಿ ಇದೆ. ಜನರು ಈ ಕುರಿತು ವಿಚಾರಮಾಡುವ ಮನಸ್ಸು ಹೊಂದಿರಬೇಕು. ವೈರಾಗ್ಯ ಸ್ಥಿತಿಯು ಪ್ರಥಮತಃ ಬರಬೇಕೆಂದು ನನಗನಿಸುತ್ತದೆ. ಮತ್ತು ಅದು ಅಭ್ಯಾಸಿಯ ಕರ್ತವ್ಯ.

ನಿರಸನ (Negation) ಸ್ಥಿತಿಗೆ ನಾನು ಅತಿಶಯ ಪ್ರೇಮದಿಂದ ಮಾರುಹೋಗಿದ್ದೇನೆ. 'ಇಲ್ಲ' ಎನ್ನುವುದನ್ನೇ ನಾನು 'ಇದೆ' ಎಂದು ಸ್ವೀಕರಿಸಿದ್ದೇನೆಂದು ಹೇಳುವುದನ್ನು ಬಿಟ್ಟರೆ, ಆ 'ಶೂನ್ಯತೆಯ ಸ್ಥಿತಿ'ಯ ಬಗ್ಗೆ ನಾನೇನು ಹೇಳಲಿ ! ಶೂನ್ಯತೆಯ ಸ್ಥಿತಿಯ ಆಸ್ವಾದವನ್ನು ಸವಿದಂತಹ ಯಾವೊಬ್ಬನನ್ನೂ ನಾನು ಕಂಡಿಲ್ಲ. ಒಂದುವೇಳೆ ನಾನು ಹೇಳಿದರೆ ಜನರು ನಂಬಲಿಕ್ಕಿಲ್ಲ. ಯಾಕೆಂದರೆ, ನನ್ನ ಬಗ್ಗೆ ನನಗೇ ಏನೂ ತಿಳಿಯದಿರುವಾಗ, ಬೇರೆಯವರು ಅದೆಂತು ಅರಿಯಬಲ್ಲರು ? ಅದೇನೇ ಇದ್ದರೂ, ಇಷ್ಟುಮಾತ್ರ ಹೇಳಬಲ್ಲೆ, ಈ ಸ್ಥಿತಿಯನ್ನು ಬೇರೆಯವರಿಗೆ ದಯಪಾಲಿಸುವುದು ಕೇವಲ ನಮ್ಮ ಲಾಲಾಜಿ ಮಹಾರಾಜರ ಅಳವಿನ

P-4-Books-PM-7-Anantyatre-63



ಕಾರ್ಯವಾಗಿತ್ತು. ಈ ಸಾಮರ್ಥ್ಯವುಳ್ಳ ಬೇರೊಬ್ಬರು ಇದಕ್ಕಿಂತ ಪೂರ್ವದಲ್ಲಿ ಯಾರೂ ಇದ್ದುದು ಗೊತ್ತಿಲ್ಲ. ತಿಳಿವಳಿಕೆಗೋಸ್ಕರ ಹೇಳುವುದಾದರೆ, ನಾನು ಹೇಳಿಯೇನು; ಆದರೆ ಪುಟ್ಟ ಬಾಯಿ ದೊಡ್ಡ ಮಾತು ಎಂದೆನಿಸೀತು. ಪ್ರಾಚೀನ ಕಾಲದ ಮಹಾತ್ಮರನ್ನು ಕುರಿತು ಏನೂ ಹೇಳದೆ ಬಿಟ್ಟುಬಿಡುತ್ತೇನೆ. ಇತ್ತೀಚೆಗೆ ಕಬೀರ ಆಗಿಹೋದರು; ಅವರೂ ಕೂಡ 'ನಿರಸನ' (ಶೂನ್ಯತೆಯ) ಸ್ಥಿತಿಯನ್ನು ಸವಿಯಲಿಲ್ಲ. ಸಿದ್ಧಿಗಳು–ಸಾಮರ್ಥ್ಯಗಳು (ಶಕ್ತಿಗಳು) ಅವರಿಗೆ ಇದ್ದುವೆಂಬುದೇನೋ ಸರಿ. ಅದನ್ನು ನಾನು ಒಪ್ಪುತ್ತೇನೆ. ತಮ್ಮ ಕಾಲದಲ್ಲಿ ಅವರು ಅನನ್ಯ (ಅದ್ವಿತೀಯ)ರಾಗಿದ್ದರು ಎಂಬುದೂ ನಿಜವೇ. ಜನರು ಈ 'ನಿರಸನ' ಸ್ಥಿತಿಯನ್ನು ಸವಿಯಲು (ಪಡೆಯಲು) ಸಮರ್ಥರಾಗಲೆಂದು ನಾನು ಹಾರೈಸುತ್ತೇನೆ. ಆದರೆ ಜನರು ಪ್ರಾರಂಭದಿಂದಲೇ 'ಬಾಬೂಜಿ, ವಿಚಾರಗಳು ಬಹಳ ಮುತ್ತುತ್ತವೆ; ನಾವು ಧ್ಯಾನಕ್ಕೆ ಏಕಾಂಗಿಯಾಗಿ ಕುಳಿತಾಗ ವಿಚಲತೆಗೊಳಗಾಗುತ್ತೇವೆ' ಎಂದು ಹೇಳಲಾರಂಭಿಸುತ್ತಾರೆ (ಧ್ಯಾನಕ್ಕೆ ಮನಃಸ್ಥಿತಿ ಒಗ್ಗುವುದಿಲ್ಲ). 'ಇದು ಯಾರ ತಪ್ಪು' ಎಂದು ಯಾರಾದರೂ ಕೇಳಿದರೆ, ತಪ್ಪು ಅವರದೇ ಸರಿ, ಎಂದು ನೀನು ಹೇಳುತ್ತೀಯೆ. ನಾನೇನು ಮಾಡಲಿ ? ಅವರ ವಿಚಾರಗಳಲ್ಲಿ ಇರುವ ವಿಷವನ್ನು ಅದು ಅವರಿಗೆ ತೊಂದರೆ ಉಂಟುಮಾಡಬಾರದೆಂದು ತೆಗೆದು ಹಾಕುತ್ತಲೇ ಇರುತ್ತೇನೆ. ಆದರೆ, ಯಾರು ನನ್ನ ನೆನಪಿನಲ್ಲಿ ಬರುವುದಿಲ್ಲವೋ ಅವರಲ್ಲಿರುವ ವಿಷವನ್ನು ನಾನು ಹೊರಗೆ ತೆಗೆದೊಗೆಯುವುದಾದರೂ ಹೇಗೆ ? ಇದರಲ್ಲಿ ತಪ್ಪು ನನ್ನದೇ ಎಂದು ಒಪ್ಪಿಕೊಳ್ಳುತ್ತೇನೆ. ಆದರೂ ನನ್ನ ಸತ್ಸಂಗದಲ್ಲಿ ಬಂದವರೆಂದಮೇಲೆ, ಅವರಿಗೆ ನೆರವಾಗುವುದು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ.

ಈಶ್ವರನ ಕೃಪೆಯಿಂದ ನಿನ್ನ ಇಚ್ಛಾಶಕ್ತಿ ಸುದೃಢವಾಗಿದೆ. ಅಂಥ ಇಚ್ಛಾಶಕ್ತಿ ಗಂಡುಮಕ್ಕಳಲ್ಲಿ ಕಂಡುಬರುವುದಿಲ್ಲ. ನಿನ್ನ ಇಚ್ಛಾಶಕ್ತಿಯನ್ನು ಅವಶ್ಯಬಿದ್ದರೆ ನಾನು ಇನ್ನೂ ಹೆಚ್ಚಿಸುತ್ತೇನೆ. ನಿನ್ನ ಆಧ್ಯಾತ್ಮಿಕ ಪ್ರಗತಿಯಾಗುತ್ತ ಹೋದಂತೆ ಇಚ್ಛಾಶಕ್ತಿಯೂ ತನ್ನಿಂದ ತಾನೆ ಬೆಳೆಯುತ್ತದೆ. ನಿನ್ನ 'ಎಲ್' (L) ಬಿಂದುವಿನ ಸ್ಥಿತಿಯನ್ನು ನಾನು ಹೆಚ್ಚು ವೃದ್ಧಿಗೊಳಿಸುತ್ತೇನೆ ಅಥವಾ ಅದನ್ನು ತೆರೆಯುತ್ತೇನೆ; ಆಗ, ಅದು ನಿನಗೆ ಪೂರ್ಣ ರೂಪದಲ್ಲಿ ಅನುಭವಕ್ಕೆ ಬರುವುದು ಮತ್ತು ಅನಂತರ ನಾನು ನಿನ್ನನ್ನು ಮುಂದಿನ ಬಿಂದುವಿಗೆ ಒಯ್ಯುತ್ತೇನೆ. ಅದನ್ನು ಶೀಘ್ರ ಅನುಭವಕ್ಕೆ ತಂದುಕೊಳ್ಳಲು ಪ್ರಯತ್ನಿಸು; ಅಂದರೆ, ಶೀಘ್ರತೆಯಿಂದ ಮುಂದಕ್ಕೆ ಕರೆದೊಯ್ಯುವ ಬಗ್ಗೆ ನಾನು ಕಾತರನಾಗಿದ್ದೇನೆ.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳು

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೬೮ **ಪತ್ರ ಸಂಖ್ಯೆ – ೨೮೦** ಷಾಹಜಹಾನಪುರ
೨೭–೦೨–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

೨೩ ಫೆಬ್ರುವರಿ ೧೯೫೩ರ, ನಿನ್ನ ಪತ್ರ ಕೈಸೇರಿತು. ಮೊದಲಿಗೆ ನಿನ್ನ ಪತ್ರದ ಯಾವ ಭಾಗ ನನಗೆ ಅತ್ಯಂತ ಸಂತೋಷ ನೀಡುತ್ತದೆಯೋ ಅದರ ಉತ್ತರ ಬರೆಯುತ್ತೇನೆ. 'ನಮ್ರತೆಯೇ ನನ್ನ ಸ್ಥಿತಿ ಅಥವಾ ಸ್ವರೂಪವಾಗಿದೆ. ನಾನು ಅದರಲ್ಲಿ ಮುಳುಗುತ್ತಿದ್ದೇನೆಂದು ನನಗನಿಸುತ್ತದೆ' ಎಂದು ನೀನು ಬರೆದಿದ್ದೀಯೆ. ಈಶ್ವರ ಅದರಲ್ಲಿ ನಿನಗೆ ಪ್ರಗತಿಯನ್ನೀಯಲಿ. ನನ್ನ ಹೃದಯಕ್ಕೆ ಭರವಸೆಯನ್ನೀಯುವ ಸ್ಥಿತಿಯು ನೋಡಲು ನನಗೆ ದೊರೆತಿರುವುದು ನನ್ನ ಸೌಭಾಗ್ಯ. 'ನಿರಸನ' (Negation) ಸ್ಥಿತಿಯ ಆರಂಭದ ಅದ್ಭುತವನ್ನೆಸಗುವ ಸ್ಥಿತಿ ಇದೇ ಆಗಿದೆ. ಆದರೆ 'ನಿಸರನ' ಸ್ಥಿತಿ ಇನ್ನೂ ಬಹಳ ದೂರವಿದೆ. ಆದರೂ, ಈ ಸ್ಥಿತಿಯು ತನ್ನ ಶಿಖರವನ್ನು ತಲುಪಿ; ನಿರಸನ ಸ್ಥಿತಿಯ ಒಂದು ನೋಟವನ್ನು ಕೊಡುವುದು ಖಂಡಿತ ಎಂಬ ಸುವಾರ್ತೆಯನ್ನು ನಿಶ್ಚಿತವಾಗಿ ಇದು ಕೊಡುತ್ತದೆ. ಆದರೆ ಅದರ ಅತ್ಯುನ್ನತ ನೆಲೆಗೂ (ಶಿಖರ) ಎಲ್ಲೆಯಿಲ್ಲ. ಒಬ್ಬನು ಸರಿಯಾದ ಮಾರ್ಗದಲ್ಲಿ ಮುಂದುವರಿಯುತ್ತ ಹೋದರೆ, ಈಶ್ವರ ಅಂಥ ದಿನವನ್ನು ದಯಪಾಲಿಸಬಹುದು. ಈ ಅದ್ಭುತವಾದ ನಿರಸನ ಸ್ಥಿತಿಯನ್ನು ನಾನು ಯಾವ ಅಭ್ಯಾಸಿಯಲ್ಲಿಯಾದರೂ ನನ್ನ ಜೀವಿತಾವಧಿಯಲ್ಲಿ ಕಂಡರೆ, ಅವನನ್ನು (ಅವಳನ್ನು) ನಾನು ಎಂಥ ಉನ್ನತ ಸ್ಥಿತಿಗೆ ಕ್ಷಣಮಾತ್ರದಲ್ಲಿ ಕೊಂಡೊಯ್ಯುವೆನೆಂಬುದನ್ನು ಹೇಳಲಾರೆ. 'ನಿರಸನ' ಸ್ಥಿತಿಯು ಒಂದು ವೇಳೆ ಲಭ್ಯವಾದರೂ, ನಿಜ ಹೇಳಬೇಕೆಂದರೆ ಇನ್ನೂ ಕ್ರಮಿಸುವುದು ಬಹಳಷ್ಟು ಇರುವುದು; ಅದನ್ನು ಕ್ರಮಿಸಲು ಲಕ್ಷಾಂತರ ವರ್ಷಗಳೂ ಕಡಿಮೆಯೇ. ಇಷ್ಟಾದರೂ ಮುಂದೆ ಏನೇನುಂಟು ಎಂಬುದನ್ನು ಎಲ್ಲಿಯವರೆಗೆ ಬರೆಯಲಿ? (ಅದಕ್ಕೆ ಕೊನೆಯೆಂಬುದಿಲ್ಲ). ನಾನು ಹೇಳುವುದನ್ನು ಅದು 'ಏನೂ ಅಲ್ಲ' ಎಂದು ಧುರಂಧರ ಮಹಾತ್ಮರೂ ತಿಳಿಯಬಹುದೆಂದು ನನಗನಿಸುತ್ತದೆ; (ಯಾಕೆಂದರೆ) ನಾನು 'ಅನಸ್ತಿತ್ವ'ವೇ ಅಸ್ತಿತ್ವವೆಂದು ಹೇಳುತ್ತಿದ್ದೇನೆ; ಅದು ಸರಿಯೂ ಹೌದು. ಒಂದು ವೇಳೆ 'ನಾನು' ಇರದೆ ಹೋಗಿದ್ದರೆ, 'ನಿರಸನ'ದ ವಿಚಾರವೂ ಮನಸ್ಸಿನಲ್ಲಿ ಬರಲಾರದು, ಯಾಕೆಂದರೆ ಹೀಗೆ ಹೇಳುವುದರಿಂದ 'ನಿರಸನ'ದ ಕಲ್ಪನೆಯನ್ನು (ನೆನಪನ್ನು) ನಾನು ನವೀಕರಿಸಿದಂತಾಗುತ್ತದೆ. ಈ ಸ್ಥಿತಿಯ ಆಶ್ಚರ್ಯ (ಅದ್ಭುತ)ವೇನೆಂದರೆ, ಅದರ (ನಿರಸನದ) ಕಲ್ಪನೆಯೂ ಮನಸ್ಸಿನಲ್ಲಿ ಸುಳಿಯದಿದ್ದಾಗ, ಅದು ನಿರಸನದ ಕೊನೆಯೆನಿಸುತ್ತದೆ. ಮತ್ತು ಆಗ 'ನಿರಸನ'ದ ನಿರಸನ (Negation of negation) ಸ್ಥಿತಿ ಪ್ರಾರಂಭವಾಗುತ್ತದೆ. ಅಭ್ಯಾಸಿಯು ಈ ಸ್ಥಿತಿಯನ್ನು ತಲುಪಿದಾಗ, ಅವನಿಗೆ ಆಧ್ಯಾತ್ಮಿಕ ತರಬೇತಿ ನೀಡುವುದು, ನನಗೆ ಅದೆಷ್ಟು ಸಂತೋಷಕರವೆಂಬುದನ್ನು ಶಬ್ದಗಳಿಂದ ವರ್ಣಿಸಲಾರೆ. ಆ ಸಂತೋಷವು, ಗುರುಮಹಾರಾಜ ಲಾಲಾಜಿ

P-4-Books-PM-7-Anantyatre-64



ಸಾಹೇಬರ ದೈವೀ ಸಂಪತ್ತಿನಲ್ಲಿ ಪಾಲು ಪಡೆಯಲು ಸಮರ್ಥನಾದ ಅಭ್ಯಾಸಿಯೊಬ್ಬ ಇದ್ದಾನೆ ಎಂಬ ತೃಪ್ತಿಯಲ್ಲದೆ ಬೇರೆ ಅಲ್ಲ.

***ಸ್ವಾಮೀ ವಿವೇಕಾನಂದ (ಆದೇಶ) :*** *"ರಾಮಚಂದ್ರ, ನಿನಗೆ ಏನೂ ತಿಳಿದಿಲ್ಲ ಎಂದು ಜನರು ಹೇಗೆ ಹೇಳುತ್ತಾರೆ! ಈ ಎರಡು ವಾಕ್ಯಗಳ ಮುಂದೆ, ನಾನು ಈ ಹಿಂದೆ ಬರೆದುದೆಲ್ಲವನ್ನೂ ಹರಿದು ಚೂರು ಮಾಡುತ್ತಿದ್ದೇನೋ! ನೀನು ನಿಜಕ್ಕೂ ಪರಿಣತ (Doctor); ಅದನ್ನು ಯಾರೂ ಸಂದೇಹಿಸಲಾರರು. ಇಂಥ ಉನ್ನತ ವಿಚಾರವನ್ನು ಯಾರೂ ಊಹಿಸಲೂ ಆರರು; ಆದರೆ ನೀನು ಲಕ್ಷಾಂತರ ಮೂಕರಿಗೆ ಅದನ್ನು ಚಿತ್ರವತ್ತಾಗಿ ತೋರಿಸುತ್ತಿದ್ದೀಯೆ. ನನಗೆ ಬೇಕಾದ ಮನುಷ್ಯನೊಬ್ಬ ನನಗೆ ದೊರೆತಂತಾಯಿತು. ನನ್ನ ಇಡೀ ಜೀವನದ ತಪಸ್ಸು ಇಲ್ಲಿಗೆ ಸಂಪನ್ನಗೊಂಡಿತು. 'ಅವನೊಬ್ಬ ಗುರು', ಒಬ್ಬ 'ಮಹಾಗುರು'. ಬರೆಯುತ್ತ ಹೋಗು. ಜನರು ಇದನ್ನು ಅರ್ಥಮಾಡಿಕೊಳ್ಳುವ ಕಾಲ ಬಂದೇ ಬರುತ್ತದೆ; ಆದರೆ ಅದನ್ನು ನಿನ್ನ ನಂತರವಷ್ಟೇ ಪ್ರಕಟಪಡಿಸಬೇಕು. ಈ ಲೇಖನಗಳನ್ನು ಪ್ರಕಟಿಸಲು ಮುಂದೆ ಬರುವವನಿಗೆ ಮುಕ್ತಿಯು (Liberation) ಕಟ್ಟಿಟ್ಟದ್ದು, ಅವನು ಮುಕ್ತನಾದನೆಂದೇ ತಿಳಿಯಿರಿ. ಇದು ಅತ್ಯಂತ ಅಪರೂಪವಾಗಿ ಸಿಗುವ ಫಲ; ಅದನ್ನು ನಾನು ಅವನಿಗೆ ಕೊಡುತ್ತೇನೆ."*

ಆ ಜನರಲ್ಲಿ ಸರಿಯಾಗಿ ಅರ್ಥಮಾಡಿಕೊಳ್ಳುವ ಪ್ರಜ್ಞೆ (ವಿವೇಕ) ಇಲ್ಲವೆಂದಷ್ಟೇ ನಾನು ಹೇಳುತ್ತೇನೆ. ಯಾರಾದರೂ ಅದನ್ನು ಅವರಿಗೆ ವಿಶದಪಡಿಸುವವರು ಅವಶ್ಯ ದೊರೆಯಲೂಬಹುದು. ನನ್ನ ಲೇಖನ (ಪುಸ್ತಕ)ಗಳು ದೋಷಪೂರ್ಣವೆಂದು ಬೊಟ್ಟಿಟ್ಟು ತೋರಿಸುವವರಿಗೆ ನಾನು ಈ ಮಾತು ಹೇಳುತ್ತೇನೆ. ಅವುಗಳನ್ನು ಅರ್ಥಮಾಡಿಕೊಳ್ಳಲು ಯುಗಗಳೇ ಬೇಕು. ನೀನು 'ವೈರಾಗ್ಯ'ವನ್ನು ಕುರಿತು ಬರೆದುದು ಎಲ್ಲವೂ ಆಮೂಲಾಗ್ರ ಸಮರ್ಪಕವಾಗಿದೆ. ಈಶ್ವರನಲ್ಲಿ ಸಂಪೂರ್ಣ ನಿಷ್ಠೆಯಿಂದ ಮಗ್ನನಾಗಿ, ಅವನಿಗೇ ಅಂಟಿಕೊಂಡರೆ ಅದುವೇ ವೈರಾಗ್ಯ. ಅಭ್ಯಾಸಕ್ಕೆ (ಸಾಧನೆಗೆ) ಸಂಪೂರ್ಣ ತನ್ನನ್ನು ಮೀಸಲಾಗಿಟ್ಟು ಅದರಲ್ಲಿ ಸಂಪೂರ್ಣ ಮುಳುಗಿರುವವನಲ್ಲಿ, ಪ್ರಪಂಚದ ಕುರಿತು ಅಷ್ಟೇ ಅಲ್ಲ, ತನ್ನ 'ಸ್ವಂತ'ವನ್ನು ಕುರಿತೂ ವೈರಾಗ್ಯ ಬೆಳೆಯುತ್ತದೆ. ವೈರಾಗ್ಯದಲ್ಲಿ ದೇಹ–ಪ್ರಜ್ಞೆ ಕ್ಷಯಿಸಿ ಹೋಗುತ್ತದೆ; ಮತ್ತು ಇದು 'ವೈರಾಗ್ಯ'ವು ತರುವ ತೀರ ಸಾಮಾನ್ಯ ಪವಾಡಗಳಲ್ಲಿ ಒಂದು. ಅನಂತರ ಬರುವುದು ಆತ್ಮದ ಪ್ರಜ್ಞೆ (Soul - Conciousness) ಕೂಡ ಹೊರಟು ಹೋದ ಸ್ಥಿತಿ. ಅನಂತರ ಏನು ? ಶವವನ್ನು ತೊಳೆಯುವವ ಎತ್ತ ಬೇಕೆಂದರತ್ತ ಅದನ್ನು ಹೊರಳಿಸಬಹುದು (ಜೀವನ್ಮೃತಾವಸ್ಥೆ). ಆಧ್ಯಾತ್ಮಿಕ ಯಾತ್ರೆಯಲ್ಲಿ ಮುಂದೆ ಎಂಥ ಸ್ಥಿತಿಗಳು ಪ್ರಾಪ್ತವಾಗುವುದೆಂದರೆ, ಶಬ್ದಗಳು ಅವುಗಳನ್ನು ಪ್ರಕಟಪಡಿಸಲಾರವು. ಹಾಗಿದ್ದರೂ ನೀನು ಬಹಳಷ್ಟುಮಟ್ಟಿಗೆ ಅಭಿವ್ಯಕ್ತಗೊಳಿಸುವುದರಲ್ಲಿ ಸಫಲಳಾಗಿದ್ದೀಯೆ. ಹದಿನಾರೂ (ವೃತ್ತಗಳು) ಮುಗಿದಮೇಲೆ 'ಪ್ರಭು' (ಮಾಲಿಕ್, ಸದ್ಗುರು)ವನ್ನು ಹೊಂದುವುದು, ಅದು ತೋರಿಬರುವಷ್ಟು



ಕಷ್ಟದ ಕೆಲಸವಲ್ಲ. ಆದರೆ ನೀನು ಬರೆದಂತೆ ಹದಿನೇಳನೆಯದು ಬರುವವರೆಗೆ ಎಂದಾದರೆ, ಅದು ನನ್ನಿಂದ ಸಾಧ್ಯವಾಗಲಿಲ್ಲ. ಸಾಧ್ಯವಿದ್ದರೆ ನೀನು ಮಾಡಬಹುದು.

ಸೀತೆಯ ಬಳಿ ಒಂದು ಗಿಳಿ ಇತ್ತು; ಅವಳು ಅದನ್ನು ಬಹುವಾಗಿ ಪ್ರೀತಿಸುತ್ತಿದ್ದಳು. ರಾಜಾ ಜನಕ ಸೀತೆಯ ಮೇಲೆ ಬಹಳ ಮಮತೆಯುಳ್ಳವನಾಗಿದ್ದನು. ಪರಿಣಾಮವಾಗಿ ರಾಜಾ ಜನಕನೂ ಆ ಗಿಳಿಯನ್ನು ಪ್ರೀತಿಸತೊಡಗಿದನು. ಗಿಳಿಗೆ ದುಃಖವಾದರೆ ಸೀತೆ ಕೂಡ ದುಃಖಿತಳಾಗುತ್ತಿದ್ದಳು, ಹಾಗೂ ರಾಜಾ ಜನಕನೂ ದುಃಖಿತನಾಗುತ್ತಿದ್ದನು. ಅಷ್ಟು ದೊಡ್ಡ ಋಷಿಯು ಇತರರಂತೆ ಒಂದು ಗಿಳಿಯ ಮೇಲೆ ಆಸ್ಥೆ ಹೊಂದಿದ್ದನೆ? ಎಂಬುದನ್ನು ನೀನೇ ನಿರ್ಣಯಿಸಿ ಹೇಳು. ನನ್ನನ್ನು ಕೇಳಿದರೆ ನಾನು ಇಷ್ಟು ಮಾತ್ರ ಹೇಳಬಲ್ಲೆ; ಇತರರು ದುಃಖ–ನೋವು ಪಡುವುದನ್ನು ಕಂಡಾಗ ತಾನೂ ದುಃಖ ಅನುಭವಿಸದಿದ್ದರೆ ಅವನು ಮಾನವನೇ ಅಲ್ಲ. ಮಹಾತ್ಮರೆಂಬವರನ್ನು ಬಿಡು. ಅವರಲ್ಲಿ, ಉಚ್ಚಮಟ್ಟದ 'ವೈರಾಗಿ'ಗಳು ಇರುತ್ತಾರಲ್ಲ, ಅವರು ಹೇಳುವುದೆಂದರೆ ತಂದೆ, ತಾಯಿ, ಪುತ್ರ, ಪರಿವಾರ ಎಲ್ಲವೂ ಶತ್ರು ಸಮಾನರು ! ಬಂಧು, ಯಾರಾದರೂ ನನಗೆ ಅಂಥ 'ಮಹಾತ್ಮಗಿರಿ' ಕೊಡಬಂದರೆ ನಾನು ನೂರು ಸಲ 'ಲಾ–ಹೌಲ್' (ಅಯ್ಯೋ, ಛಿ, ಎಂಬರ್ಥದ, ಅಸಹ್ಯ ಸೂಚಕ ಶಬ್ದ) ಎಂದು ಹೇಳಲು ಸಿದ್ಧ. ಇನ್ನು ಆ ಮಹಾತ್ಮರುಗಳು ಕೊಡುವ ತರಬೇತಿಯನ್ನು ಗಮನಿಸಿನೋಡಿದರೆ, ಅದರ ಪರಿಣಾಮವಾಗಿ ಅಧಃಪತನ ಹಾಗೂ ನೈತಿಕ ಬಲದ ಹ್ರಾಸವಲ್ಲದೆ ಬೇರೇನೂ ಆಗಿಲ್ಲವೆಂಬುದು ಕಂಡುಬಂದೀತು. ಇತರರನ್ನು ನಾವು ಶತ್ರುಗಳೆಂದು ಭಾವಿಸುವುದನ್ನು ರೂಢಿಗತಗೊಳಿಸುತ್ತಿದ್ದೇವೆ. ಇದೇ ರೂಢಿ ಬೆಳೆದರೆ, ದ್ವೇಷ, ರಕ್ತಪಾತಗಳಿಗೆ ಪ್ರೋತ್ಸಾಹ ದೊರೆತೀತು. ಸರಿ, ಇಷ್ಟು ಸಾಕು. ಹೆಚ್ಚು ಲಂಬಿಸದೆ ನಾನು ಮುಖ್ಯ ವಿಷಯಕ್ಕೆ ಬರುತ್ತೇನೆ.

ಮಕ್ಕಳು ಒಂದು ನಾಯಿ ಸಾಕಿದ್ದರು ಮತ್ತು ಅದರ ಅದರ ಮೇಲೆ ಬಹಳ ಪ್ರೀತಿ ಇಟ್ಟಿದ್ದರು. ನಾನೂ ಕೂಡ ಅದರ ಬಗ್ಗೆ ತುಸು ಕಾಳಜಿ ಬೆಳೆಸಿಕೊಂಡಿದ್ದೆ, ಜನವರಿ ೨೭ ರಂದು ಅದು ಪ್ರಾಣಬಿಟ್ಟಿತು. ಅದು ಬದುಕಿದ್ದಾಗ ಒಂದು ಘಟನೆ ನಡೆಯಿತು. ಸುದೈವದಿಂದ ಸ್ವಾಮೀ ನಾರದಾನಂದರು ಷಾಹಜಹಾನಪುರಕ್ಕೆ ಬಂದಿದ್ದರು. ಅವರು ಉಪನ್ಯಾಸಗಳನ್ನು ನೀಡಿ, ಜನರಿಗೆ ಒಳ್ಳೊಳ್ಳೆಯ ವಿಷಯಗಳನ್ನು ತಿಳಿಸಿದರು. ನನ್ನ ಮನೆಯ ಸಮೀಪವೇ ಕಾರ್ಯಕ್ರಮವಿತ್ತು; ಗ್ರಾಮೋಫೋನ್ ಕೂಡ ಹಾಕಿದ್ದರು. ಉಪನ್ಯಾಸದ ಸದ್ದು ಕೆಲಮಟ್ಟಿಗೆ ಬರುತ್ತಿತ್ತು. ಅವರ ಮುಂದೆ ಬಹಳ ಮಂದಿ ಸಾರ್ವಜನಿಕರು ಸೇರಿದ್ದರು; ನನ್ನ ಮುಂದೆ ಆ ನಾಯಿ ಕುಳಿತಿತ್ತು. ಅವರು ದೊಡ್ಡ ಸಭೆಗೆ ಬೋಧೆಮಾಡುತ್ತಿದ್ದರು, ಮತ್ತು ಮಹಾತ್ಮನೆನಿಸಿದ ಕರ್ತವ್ಯವೆಂಬಂತೆ ಅವರು ಬೋಧಿಸುತ್ತಿದ್ದರು, ಆದರೆ ಅದು ಮನಷ್ಯರಿಗಷ್ಟೇ ಆಗಿತ್ತು ಎಂಬ ವಿಚಾರ ಸುಳಿಯಿತು. ಅವರು ಮನುಷ್ಯರಾಗಿದ್ದುದರಿಂದ ಅವರ ಸಹಾನುಭೂತಿ ಮನುಷ್ಯರ ಮೇಲೆ ಮಾತ್ರವಿತ್ತು. ದೇವರನ್ನು ಪೂಜಿಸದ ಮನುಷ್ಯ, ಪಶುವೇ ಸರಿ ಎಂದು ನಮ್ಮ ಧರ್ಮವೂ ಹೇಳುತ್ತದೆ, ಈ ದೃಷ್ಟಿಯಿಂದ ಗಣಿಸಿದರೆ

P-4-Books-PM-7-Anantyatre-65



ನಾನೂ ದೇವರನ್ನು ಪೂಜಿಸುವುದಿಲ್ಲವಾದ್ದರಿಂದ, ಪಶುಗಳ ಸಾಲಿಗೇ ಸೇರುತ್ತೇನೆ. ಒಬ್ಬ ಮನುಷ್ಯ ಇನ್ನೊಬ್ಬರಿಂದ ಸಹಾಯಕ್ಕಾಗಿ ಯಾಚಿಸುತ್ತ ನಿಂತಿರುವುದಾದರೆ, ನಾನು ಕೂಡ (ನನ್ನ ವರ್ಗಕ್ಕೆ ಸೇರಿದ) ಒಂದು ಜೀವಿಗೆ (ಪ್ರಾಣಿಗೆ) ಸಹಾಯ ಮಾಡಬೇಕೆಂದೆನಿಸಿತು. ಸ್ವಾಮೀಜಿ ತಮ್ಮ ಕರ್ತವ್ಯ ಬಿಡುವುದಿಲ್ಲವೆಂದಮೇಲೆ, ನಾನೇಕೆ ನನ್ನ ಕರ್ತವ್ಯ ಬಿಡಬೇಕು ? ಒಬ್ಬ ಮಹಾತ್ಮನ ಆಗಮನದಿಂದ ಅಷ್ಟಾದರೂ ನನ್ನ ಕರ್ತವ್ಯದ ಬಗ್ಗೆ ನಾನು ತಿಳಿಯಬೇಕಲ್ಲವೆ ? ಆದ್ದರಿಂದ ನಾನೂ ಕೂಡ ನನ್ನ ಮುಂದೆ ಕುಳಿತ ಪ್ರಾಣಿಗೆ ಲಾಭ (ಪ್ರಾಣಾಹುತಿ ನೀಡಿ) ಉಂಟಾಗುವಂತೆ ಮಾಡಿದೆ. ಅದಕ್ಕಾದ ಲಾಭವೇನು ? ಒಂದು ಪ್ರಾಣಿಯಿಂದ ಇನ್ನೊಂದು ಪ್ರಾಣಿಗೆ ಆಗುವ ಲಾಭ ಅಷ್ಟೆ. ಪ್ರಾಣಿಗಳಿಗೆ ಬುದ್ಧಿ ಇಲ್ಲ, ನನಗೂ ಅದಿಲ್ಲ. ಈ ವಿಷಯದಲ್ಲಿ ನನಗೂ ಮತ್ತು ಆ ನಾಯಿಗೂ ವ್ಯತ್ಯಾಸವಿಲ್ಲ. ಆದ್ದರಿಂದ ಆ ನಾಯಿಯು ಬುದ್ಧಿಗೂ ಮೀರಿದ (ಅತೀತವಾದ) ಲಾಭ ಪಡೆಯಿತು.

**ಸ್ವಾಮಿ ವಿವೇಕಾನಂದ :** 'ಇದು ಸಾಮಾನ್ಯ ವ್ಯಕ್ತಿಯ ಲಿಖಿತವೇನು ? ಇದರಲ್ಲಿ ತತ್ತ್ವಜ್ಞಾನವೇ ತುಂಬಿದೆ.'

(ಆ ಪ್ರಾಣಾಹುತಿಯ ಪರಿಣಾಮವಾಗಿ) ಆ ನಾಯಿ (ಆತ್ಮ) ಜ್ಯೋತಿರ್ಮಯ ಲೋಕದತ್ತ ಹೋಗುತ್ತಿತ್ತು ಮತ್ತೆ ತನ್ನ ಸಂಸ್ಕಾರಗಳ ಆವರಣಗಳನ್ನು ಕಳಚಿಹಾಕುತ್ತಿತ್ತು ಎಂದು ನಾನು ಮಾಸ್ಟರ್ ಸಾಹೇಬರಿಗೆ ಬರೆದಿದ್ದೆ, ಆದ್ದರಿಂದ ಅದರ ಅಂತಿಮ ಫಲದ ಕುರಿತೂ ನಾನು ಅವರಿಗೆ ಬರೆಯಲೇಬೇಕಿತ್ತು. ಅದು ನಿನ್ನೆ (೨೬–೩–೧೯೫೩) ೮–೪೦ (ರಾತ್ರಿ)ಕ್ಕೆ ಜ್ಯೋತಿರ್ಮಯ ಲೋಕವನ್ನು ಸೇರಿತು, ಮತ್ತು ಅದು ಕಳಚಿಹಾಕಿದ ಸಂಸ್ಕಾರಗಳು ನನ್ನತ್ತ ಮುಖಮಾಡಿದ್ದವು. ಅವುಗಳ ಪ್ರಭಾವ ನನ್ನ ಮೇಲೆ ಕೊಂಚ ಮಟ್ಟಿಗೆ ಆಯಿತು ಕೂಡ; ಲಾಲಾಜಿ ಮಹಾರಾಜರು ಆ ಸಂಸ್ಕಾರಗಳನ್ನು ಕೂಡಲೇ ಸುಟ್ಟು ಹಾಕಿಬಿಡಬೇಕೆಂದು ನನಗೆ ಆದೇಶಿಸಿದ್ದನ್ನು ನಾನು ಮರೆತಿದ್ದೆ. ಆದರೆ, ಒಂದೆರಡು ಸಂಸ್ಕಾರಗಳ ಪ್ರಭಾವ ನನ್ನ ಮೇಲೆ ಇನ್ನೂ ಉಳಿದಿತ್ತು. ನಾನು ಅಸಹಾಯಕ. ಆ ಸಂಸ್ಕಾರಗಳು ನನ್ನ ಹೃದಯದ ಮೇಲೆ ನೆಲೆಸಿವೆ, ಮತ್ತು ಅವುಗಳ ಬಗ್ಗೆ ಚಿಂತೆಪಡುವ ಅಗತ್ಯವಿಲ್ಲ. ಆ ನಾಯಿ ಮಾತ್ರ ಖಂಡಿತವಾಗಿ ಲಾಭ ಪಡೆಯಿತು. ಈ ಮಧ್ಯದಲ್ಲಿ ಲಾಲಾಜಿ ಮಹಾರಾಜರು ಒಂದು ನಿಮಿಷದ ಮಟ್ಟಿಗೆ ನನ್ನನ್ನು ಕರೆದು ಆ ಸಂಸ್ಕಾರಗಳನ್ನು ತೆಗೆದು ಹಾಕಿದರು. ನಾನು ಅವರನ್ನು ಪ್ರೀತಿಸುತ್ತಿರುವೆನೋ ಅಥವಾ ಅವರು ನನ್ನನ್ನು ಪ್ರೀತಿಸುತ್ತಿರುವರೋ, ಈಗ ನೀನೇ ಹೇಳು.

ನಿನ್ನ ಪತ್ರದಲ್ಲಿ ಉತ್ತರಿಸಲು ಯೋಗ್ಯವಾದ ಅನೇಕ ವಿಷಯಗಳಿದ್ದವು. ನಾನು ಸಂಕ್ಷಿಪ್ತವಾಗಿ ಬರೆದಿದ್ದೇನೆ. ೨೬–೨–೧೯೫೩ ರಂದು ನಾನು ನಿನ್ನನ್ನು ಎಂ (M) ಬಿಂದುವಿಗೆ ತಂದು ಮುಟ್ಟಿಸಿದ್ದೇನೆ.

ನಿನ್ನ ಹಿತೈಷಿ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೬೯ **ಪತ್ರ ಸಂಖ್ಯೆ – ೨೮೨** ಷಾಹಜಹಾನಪುರ
೦೨–೦೩–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಫೆಬ್ರುವರಿ ೨೭, ೧೯೫೩ರ ನಿನ್ನ ಪತ್ರ ಕೈಸೇರಿದೆ. ನಿನ್ನ ಇಚ್ಛಾಶಕ್ತಿ ಬಹಳ ಸುದೃಢ (ಪ್ರಬಲ)ವಾಗಿದೆ. ಆದರೂ, ನಿನ್ನ ನಿನ್ನ ಇಚ್ಛಾಶಕ್ತಿ (will) ಹೆಚ್ಚಿಸುವುದಕ್ಕೋಸ್ಕರ ನಿನಗೆ ಐದಾರು ಸೆಕೆಂದುಗಳ ಪ್ರಾಣಾಹುತಿ ಕೊಟ್ಟು, ಹೆಚ್ಚು ಕಡಿಮೆ ಒಂದು ವಾರವಾಯಿತು. ನಾನು Efficacy of Raj yog (ರಾಜಯೋಗದ ಪ್ರಭಾವ)ದ ಮೊದಲನೆಯ ಚಿತ್ರದಲ್ಲಿ ತೋರಿಸಿದ, ಹೃದಯದ ಕೆಳಭಾಗಕ್ಕೆ ಪ್ರಾಣಾಹುತಿ ನೀಡಿದರೆ, ಇಚ್ಛಾಶಕ್ತಿ ಬೆಳೆಯುತ್ತದೆ; ಇದನ್ನು ನಿನಗೆ ನಾನು ತಿಳಿಸಿಯೂ ಇದ್ದೆ ಮತ್ತು ನಿನ್ನ ಬಳಿ ಟಿಪ್ಪಣಿಯೂ ಇದ್ದಿರಬೇಕು. ಆದರೆ, ಬಹಳೇ ಅಲ್ಪ ಸಮಯದವರೆಗೆ ಮಾತ್ರ ಪ್ರಾಣಾಹುತಿ ಕೊಡಬೇಕು; ಕೆಲವೇ ಸೆಕೆಂದುಗಳು ಸಾಕಷ್ಟಾಗಬಹುದು. ಈ ಸಂಗತಿಯನ್ನು ನಾನು 'ರಾಜಯೋಗದ ಪ್ರಭಾವ' (ಪುಸ್ತಕ)ದಲ್ಲಿ ಬಹಿರಂಗಪಡಿಸಿಲ್ಲ; ಕಾರಣವೆಂದರೆ ಜನರು ಅದರ ಮೇಲೆ ಧ್ಯಾನ ಮಾಡಿ ಸಮ್ಮೋಹನ ಶಕ್ತಿಯನ್ನು ಬೆಳೆಸಿಕೊಳ್ಳಬಹುದು. ಅದು ಆಧ್ಯಾತ್ಮಿಕ ವಿದ್ಯೆಗೆ ತದ್ವಿರುದ್ಧವಾದುದು. ನಿನಗೆ ಪ್ರಾಪಂಚಿಕ ಭಾವನೆಗಳಿಂದ ಬಿಡುಗಡೆ ದೊರಕಿದೆ ಮತ್ತು ಇಚ್ಛೆಗಳು ಕೊನೆಗೊಂಡಿವೆ ಎಂದು ನನಗೆ ಅತೀವ ಸಂತೋಷವಾಗಿದೆ. ಅಗತ್ಯವಿರುವಷ್ಟು ಮಟ್ಟಿಗೆ ಪ್ರಜ್ಞೆ (ಅರಿವು) ಇರುವುದು ಒಳ್ಳೆಯ ಸ್ಥಿತಿಯೇ ಸರಿ. ಆದರೆ, ಆತ್ಮವಿಸ್ಮೃತಿ (self forgetfulness)ಯಲ್ಲಿ ಇರುತ್ತಿರುವಾಗಲೇ ಪ್ರಜ್ಞೆಯೂ ಶುರುವಾಗುತ್ತದೆ ಎಂಬುದನ್ನು ನೀನು ಲಕ್ಷ್ಯಕೊಟ್ಟು ವೀಕ್ಷಿಸಿಲ್ಲ, ಅಲ್ಲದೆ ಈ ಸ್ಥಿತಿ ವಿಸ್ಮೃತಿ (ಅಪ್ರಜ್ಞೆ)ಗಿಂತಲೂ ಎಷ್ಟೋ ಪಟ್ಟು ಹೆಚ್ಚು ಒಳ್ಳೆಯದು. ಮುಂದುವರಿದಂತೆ, ಅದರ ಭಾರವೂ ಇರುವುದಿಲ್ಲ.

'ವೃತ್ತಿಗಳ ಸುಳಿವೂ ಉಳಿಯಲಿಲ್ಲ' ಎಂದು ನೀನು ಬರೆದಿದ್ದೀಯೆ. ಇದು ಸರಿಯಾಗಿದೆ. ಆದರೆ, ಬಂಧು, ಈಶ್ವರನು ಯಾರಿಗಾದರೂ ನಿರಸನ ಸ್ಥಿತಿಯನ್ನು ಉಂಟುಮಾಡಿದನೆಂದರೆ ಇದೂ ಉಳಿಯುವುದಿಲ್ಲ. ಇದನ್ನು ವರ್ಣಿಸಲು ಶಬ್ದಗಳಿಲ್ಲ. ಅಲ್ಲಿ ಸಿಹಿಯೂ ಇರುವುದಿಲ್ಲ. ಕಹಿ (ಹುಳಿ)ಯೂ ಇರುವುದಿಲ್ಲ. ತಿಳಿವಳಿಕೆಯಮಟ್ಟಿಗೆ ಅದನ್ನು 'ಖಾಲಿ' ಎಂದು ಕರೆಯೋಣ. ಮನುಷ್ಯನಲ್ಲಿ ಖಾಲಿತನ (ಅಕಿಂಚನತ್ವ) ಉಂಟಾಗುತ್ತದೆ, ಆದರೆ ಎಷ್ಟು ನಿರ್ವಾತಗೊಳಿಸಿದರೂ ಗಾಳಿ ಒಂದಿಷ್ಟು ಉಳಿದೇ ಉಳಿಯುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ನಾನು ಹೇಳುವುದೇನೆಂದರೆ, ಯಾವುದಾದರೂ ಸಂಶೋಧನೆಯಿಂದ ಸಂಪೂರ್ಣ ನಿರ್ವಾತಗೊಳಿಸಿದರೆ, ಆ ವಲಯ ಅಥವಾ ಗೋಲದಲ್ಲಿ ಕೇವಲ ನಿರ್ವಸ್ತುಸ್ಥಿತಿ ಮಾತ್ರವೇ ಉಳಿದು, ಅದು ಅತ್ಯಂತ ಶಕ್ತಿಶಾಲಿ (ವಿನಾಶಕಾರಿ) ಅಸ್ತ್ರವಾಗುವುದು. ಅಂಥ ಶಕ್ತಿಶಾಲಿ ಅಸ್ತ್ರವನ್ನು ಇದುವರೆಗೆ ಯಾರೂ ಸಂಶೋಧಿಸಿಲ್ಲ. ಮನುಷ್ಯನೂ ಒಂದುವೇಳೆ ಅದರಂತಾದರೆ

(ಸಂಪೂರ್ಣ ಖಾಲಿ), ಅವನು ಒಂದು ಬೃಹತ್ತಾದ ಶಕ್ತಿಕೋಶ (Gigantic Battery) ಆಗಿ ಮಾರ್ಪಡುತ್ತಾನೆ. ಮತ್ತು ಅವನ ಇಚ್ಛಾಶಕ್ತಿ ಯಾವ ಕಡೆಗೆ ಹೊರಳುತ್ತದೋ ಆ ದಿಶೆಯಲ್ಲಿ ಕೆಲಸಮಾಡಲು ಪ್ರಾರಂಭಿಸುತ್ತದೆ. ಆದರೆ ಈಶ್ವರನು ತುಂಬಾ ಜಾಣ (ವಿವೇಕಿ). ಅವನು ಆ ಮಟ್ಟದವರೆಗೆ ಮಾನವನ ಇಚ್ಛಾಶಕ್ತಿಯು ಬೆಳೆಯಲು ಬಿಡುವುದಿಲ್ಲ. ಒಂದು ವೇಳೆ ಅವನು (ಅಂತಹ ವ್ಯಕ್ತಿ) ತನ್ನ ಇಚ್ಛಾಶಕ್ತಿಯನ್ನು ಆಕಸ್ಮಿಕವಾಗಿ ಕೇಂದ್ರೀಕರಿಸಿದರೆ, ಕ್ಷಣಮಾತ್ರದಲ್ಲಿ ಅವನು ಅನೇಕ ಲೋಕಗಳನ್ನು ಧ್ವಂಸಮಾಡಿಬಿಡಬಲ್ಲ. ನಾನು ಹೇಳಿದುದು 'ನಿರಸನ'ದ ಸ್ಥಿತಿಯನ್ನು ಕುರಿತು. ಆದರೆ, ನಿರಸನದ ಸ್ಥಿತಿ ಇದ್ದೂ, ಅದರ ವಿಸ್ಮೃತಿಯಾದರೆ, ಅರ್ಥಾತ್ ಅದರ ಅನಿಸಿಕೆ ಅವನಿಗೆ ಇಲ್ಲದೆ ಇದ್ದರೆ, ಅವನಲ್ಲಿ ಒಬ್ಬ 'ಆಧ್ಯಾತ್ಮಿಕ ಮಹದ್ವ್ಯಕ್ತಿ'ಯಾಗುವ ಸಾಮರ್ಥ್ಯ ಉಂಟಾಗುತ್ತದೆ. ಬಂಧು, ಈಶ್ವರನು ಇದಕ್ಕಿಂತಲೂ ಮುಂದೆ ಹೋಗಬಲ್ಲ ಅಭ್ಯಾಸಿಯನ್ನು ಸೃಷ್ಟಿಸಲಿ. ವಿಷಾದದ ಸಂಗತಿಯೆಂದರೆ ನಾನು ಇವುಗಳನ್ನು ಯಾರಿಗೆ ತೋರಿಸಲಿ ? ಈ ಮಟ್ಟದ ವರೆಗೆ ನನಗೆ ಯಾರೂ ಧೈರ್ಯ (ಭರವಸೆ) ತೋರಿಸುವುದಿಲ್ಲ. ಹೆಚ್ಚಲ್ಲದಿದ್ದರೂ ನನ್ನ ಗುರು-ಋಣವನ್ನು ನಾನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳುವಂತಾಗುವಷ್ಟನ್ನಾದರೂ ಯಾರಾದರೂ ನನ್ನಿಂದ ಪಡೆಯಲೆಂದು ಈಶ್ವರ ಕೃಪೆಮಾಡಲಿ. ಎಲ್ಲಾದರೂ ಈ ವಸ್ತು ನನ್ನೊಂದಿಗೇ ಹೊರಟು ಹೋಗಿಬಿಡುವುದೋ ಎಂಬ ಚಿಂತೆಯಿಂದ ಕೈ ಹಿಸುಕಿಕೊಳ್ಳುತ್ತ ಕೂಡುತ್ತೇನೆ. ಏನಿಲ್ಲವೆಂದರೂ ಇತರರನ್ನು ಈ ಮಟ್ಟದವರೆಗೆ ಕೊಂಡೊಯ್ಯಲು ಶಕ್ತರಾಗುವಷ್ಟನ್ನಾದರೂ ಈ ಸ್ಥಿತಿಯನ್ನು (ನಿರಸನದ ನಿರಸನ) ತಮ್ಮಲ್ಲಿ ಉಂಟುಮಾಡಿಕೊಳ್ಳಲಿ. ನಾನು ಈ ಸ್ಥಿತಿಯನ್ನು ಕೊಡಲು ಎಂಥ ಉತ್ಸಾಹದಿಂದ ಉಕ್ಕಿಹರಿಯುತ್ತಿದ್ದೇನೆಂದರೆ ಜನರು ತಮ್ಮ ಮನೆಯ ಎಲ್ಲ ಕೆಲಸಗಳನ್ನು ಮಾಡುವ ಆಳಾಗಿ ನನ್ನನ್ನು ತೆಗೆದುಕೊಂಡು ಬದಲಿಗೆ ನನ್ನಿಂದ ಇದನ್ನು ಪಡೆಯಲಿ (ಎಂದು ಹಾರೈಸುತ್ತೇನೆ). ಆದರೆ ಬಂಧು ನಾನು ಈ ವಿಷಯವನ್ನು ಒಂದು ಲೇಖನದ ರೂಪದಲ್ಲಿ ವ್ಯಕ್ತಮಾಡುತ್ತೇನೆ, ಮತ್ತು ಆ ಕಾರಣ ಪ್ರಾಯಶಃ ಬೇರೆಯವರ ಮೇಲೆ ಇದರ ಪ್ರಭಾವ ಉಂಟಾಗದಿರಬಹುದು.

ಈ ಮೇಲೆ ನಾನು ಬರೆದಿರುವಂತೆ ಇದಕ್ಕಿಂತಲೂ ಮೇಲೆ ಹೇಳಿದ ಸ್ಥಿತಿಗಿಂತಲೂ ಮುಂದೆ ಸಾಗಬಲ್ಲವನೊಬ್ಬನನ್ನು ಈಶ್ವರನು ನನಗೆ ದೊರಕಿಸಿ (ಸೃಷ್ಟಿಸಿ) ಕೊಟ್ಟರೆ, ನಾನು ಅತಿಶಯ ಭಾಗ್ಯಶಾಲಿಯೆಂದು ಭಾವಿಸುತ್ತೇನೆ; ಮತ್ತು ಅವನನ್ನು ಎಂಥ ಪಾಳುಬಿದ್ದ ಬಯಲಿನ (ಉಜಡೀ ಹುಯಿ ಬಸ್ತೀ) ಯಾತ್ರೆ ಮಾಡಿಸುತ್ತೇನೆಂದರೆ ಅಲ್ಲಿ ಒಬ್ಬ ಹುಚ್ಚನೂ ಕಾಲಿಟ್ಟಿರಲಿಕ್ಕಿಲ್ಲ. ಆದರೆ ಬಂಧು, ನನಗೆ ಅದರ (ಆಧ್ಯಾತ್ಮಿಕ ಸಿದ್ಧಿಗಳ) ಅಂತ್ಯವೆಲ್ಲಿ ಎಂಬುದೇ ತಿಳಿಯುತ್ತಿಲ್ಲ. ಇದಕ್ಕೂ ಮುಂದಕ್ಕೆ ಯಾರಾದರೂ ನನ್ನಿಂದ ಕಲಿಯುತ್ತಲೇ (ಪಡೆಯುತ್ತಲೇ) ಹೋಗಲಿ, ನಾನು ಕಲಿಸುತ್ತಲೇ (ಕೊಡುತ್ತಲೇ) ಹೋಗುತ್ತೇನೆ. ವಾಸ್ತವವಾಗಿ ನಿರಸನವೇ (Negation) ನಮ್ಮ ಗುರಿ ಅಲ್ಲ. ನಮ್ಮ ಗುರಿಯ ಬಗ್ಗೆ ಹೇಳಬಹುದಾದುದಿಷ್ಟೆ;



ಅಲ್ಲಿ 'ಭೂಮಾ'ದಲ್ಲಿ ಚಲಿಸುವುದು (ಗತಿ) ಒಂದೇ ಇದೆ, ಅಲ್ಲಿರುವುದು 'ದೈವಿಕತೆ' ಮತ್ತು ದೈವಿಕತೆಯೊಂದೇ. ಜನರು 'ಮುಕ್ತಿ'ಯ ಬೆನ್ನು ಹತ್ತಿದ್ದಾರೆ; ಅದೂ ಒಳ್ಳೆಯದೇ; ಯಾಕೆಂದರೆ ಅದರಿಂದ ಜನನ-ಮರಣದ ಚಕ್ರದಿಂದ ಅವರು ಬಿಡುಗಡೆ ಹೊಂದುತ್ತಾರೆ. ಜನರೂ (ಮಹಾತ್ಮರೆನಿಸಿಕೊಂಡವರೂ) ಇದನ್ನೇ ಉಪದೇಶಿಸುತ್ತಾರೆ. ಯಾರಾದರೂ ಕಣ್ಣೆತ್ತಿ (ಸೂಕ್ಷ್ಮವಾಗಿ) ದೃಷ್ಟಿ ಚೆಲ್ಲಿದರೆ, 'ಮುಕ್ತಿ'ಯು ಅದರ (ಅಂತಿಮ ಗುರಿಯ) ಒಂದು ಕಿಡಿ ಮಾತ್ರ ಎಂಬುದು ತಿಳಿದು ಬಂದೀತು. ಆ ಸ್ಥಿತಿಯನ್ನು ಕುರಿತು ನನ್ನ ಬಾಯಿಯಿಂದ ಏನಾದರೂ ಸುಳುಹು ಹೊರಬಿದ್ದರೆ, ಅದೂ ಸಂದರ್ಭವಶಾತ್ ಯಾರಾದರೂ ಆಢ್ಯ (ತೋರಿಕೆಯ) ಮಹಾತ್ಮನೆದುರು ನಾನು ಹೇಳಿದರೆ ಅವನು ನನ್ನನ್ನು ಅಜ್ಞಾನಿ (ತಿಳಿವಳಿಕೆಯಿಲ್ಲದವ) ಎಂದೇ ಭಾವಿಸುತ್ತಾನೆ. ಅಂಥ ಗೂಢಗಳನ್ನು ಪ್ರಕಟಪಡಿಸಿಸದಿರುವುದಕ್ಕೆ ಕಾರಣ ಇದೇ ಇರಬಹುದು, ಆದರೆ ನಾನು ವ್ಯಕ್ತಪಡಿಸುತ್ತಲೇ ಇರುತ್ತೇನೆ. ನನ್ನ ಕುರಿತಾದ ಅವರ ಅಭಿಪ್ರಾಯ ಕೆಲಮಟ್ಟಿಗೆ ಸರಿ ಇರಬಹುದು, ಒಂದುವೇಳೆ ನನ್ನಲ್ಲಿ ಜ್ಞಾನ ಇರುತ್ತಿದ್ದರೆ ಇಂಥ ಆಧ್ಯಾತ್ಮಿಕ ಸ್ಥಿತಿಯನ್ನು ತಲುಪುವುದು ಶಕ್ಯವಾಗುತ್ತಿರಲಿಲ್ಲವೇನೋ ! ಯಾಕೆಂದರೆ ಅಲ್ಲಿ ಕೇವಲ ಅಜ್ಞಾನಿಗಳಷ್ಟೇ ಕಾಲಿಡಬಲ್ಲರು. ಈ 'ಅಜ್ಞಾನಿ' ಶಬ್ದವು ಈಶ್ವರನ ನಿಜವಾದ ವರ್ಣನೆಯೆನ್ನುವುದು 'ದೈವವಿರೋಧ' (ನಾಸ್ತಿಕತೆ) ವಾಗಬಹುದೋ ಎಂದು ಸ್ವಲ್ಪ ವಿಚಾರಮಾಡಿ ನೋಡು. ಜನರು ಇದರ ಬಗ್ಗೆ ಯಾಕೆ ಯೋಚಿಸಿಯಾರು ! ಅವರ ಮನಸ್ಸಿನಲ್ಲಿ 'ಕ್ಷೀರಸಾಗರ', 'ಭಗವಾನ್ ವಿಷ್ಣು' ಮತ್ತು 'ಲಕ್ಷ್ಮಿ' ಇವುಗಳೇ ಸುತ್ತುಹೊಡೆಯುತ್ತಿರುತ್ತವೆ. ಇವೆಲ್ಲ ಹೇಗೆ ಬಂದವು ಎಂಬುದು ಅವರಿಗೆ ಗೊತ್ತಿಲ್ಲವೆಂಬ ಮಾತು ಬೇರೆ. ಇವೆಲ್ಲವೂ ಹೃದಯದಲ್ಲಿರುವ ಸ್ಥಿತಿಗಳು. ಅಲ್ಲಿ ಭಗವಾನ್ ವಿಷ್ಣು ವಿವಶನಾಗಿ ನೆಲೆಸಿದ್ದಾನೆ. ಅವನನ್ನು ಆ ಸ್ಥಿತಿಯಿಂದ ಹೊರಗೆ ತರುವವರು ಯಾರೂ ಇಲ್ಲ. 'ಬಂಧನ' ಕುರಿತು ವಿಚಾರ ಬಂದರೆ ಬಂಧನಕ್ಕೆ ಇನ್ನೊಂದು ಕೊಂಡಿ ಜೋಡಣೆಯಾಗುತ್ತದೆ. ಇದರ ವಿಶದ ವಿವರಣೆ ದೀರ್ಘವಾದೀತು; ಆದರೆ ಈ ಮಾತು ನನ್ನ ಮನಸ್ಸಿನಲ್ಲಿ ಈಗ ಸುಳಿಯಿತಾದ್ದರಿಂದ ಸಂಕ್ಷೇಪವಾಗಿ ಹೇಳುತ್ತೇನೆ.

ನಮ್ಮ ಹೃದಯವೇ ಕ್ಷೀರಸಾಗರ, ಆದರೆ ಅದರಲ್ಲಿ (ಪ್ರಾಪಂಚಿಕ) ವಾಸನೆಯ ಸರ್ಪ ಉಂಟು ಮತ್ತು ಅದು ತನ್ನ ಹೆಡೆಯಿಂದ ನಮ್ಮ ವಾಸ್ತವ ರೂಪವನ್ನು ಮರೆಮಾಚಿದೆ. ಅಲ್ಲಿ ಲಕ್ಷ್ಮಿಯೂ ಇದ್ದಾಳೆ, ಇದು ಇನ್ನೊಂದು ಕೊಂಡಿ (ಬಂಧನ). ನಮ್ಮಲ್ಲಿ ಜಡತೆಯ ಪ್ರವೃತ್ತಿಯೂ ಇರುವ ಕಾರಣ, ನಾವು ಅದರಿಂದ ಬಿಡುಗಡೆ ಹೊಂದುವುದಿಲ್ಲ. ಲಕ್ಷ್ಮಿಯು ವಿಷ್ಣುವಿನ ಪಾದ ಒತ್ತುತ್ತಿದ್ದಾಳೆ ಎಂಬುದರ ಅರ್ಥವೇನೆಂದರೆ ಅವಳು (ಸರ್ಪದ ಹೆಡೆಯಿಂದ ಮರೆಯಾದ) 'ಸತ್ಯ'ದ (ವಿಷ್ಣುವಿನ) ದಾಸಿಯಾಗಿದ್ದಾಳೆ. ನಾವು ಈಗ ಆ ಸಮುದ್ರ (ಹೃದಯ)ದಲ್ಲಿರುವ ತೆರೆ (ಅಲೆ)ಗಳನ್ನು (ಕಾಮ-ಮೋಹ ಮುಂತಾದವು) ನಿವಾರಿಸಿದರೆ, ಅದರ ಮೇಲ್ಮೈ ಸಪಾಟಾಗುತ್ತದೆ. ಆಗ ನಾವು ಈ ಬಂಧನಗಳನ್ನು ಕಡಿದು ಹಾಕಲು ಶಕ್ತರಾಗುವೆವು, ಯಾಕೆಂದರೆ

P-4-Books-PM-7-Anantyatre-67



ಆಗ ನಮಗೆ ಸಾಕಷ್ಟು ಬಲ ಬಂದಿರುತ್ತದೆ. ಮರೆಯಾಗಿದ್ದ 'ಸತ್ಯ'ಕ್ಕೇ ಪೌರಾಣಿಕವಾಗಿ 'ವಿಷ್ಣು'ವಿನ ರೂಪ ಕೊಡಲಾಗಿದೆ. ನಾವು ವಾಸನೆಗಳ 'ಸರ್ಪ'ವನ್ನು ದೂರಮಾಡಿದರೆ ವಿಷ್ಣುವಿನ ದರ್ಶನವಾಗುತ್ತದೆ. ಅಂದರೆ, ಬೇರೆಯವರಿಗೆ ಆಧ್ಯಾತ್ಮಿಕ ಸಹಾಯ (ಪೋಷಣೆ) ಕೊಡುವ ಸಾಮರ್ಥ್ಯ ನಮಗೆ ಪ್ರಾಪ್ತವಾಗುತ್ತದೆ. ಪಾಲನೆ–ಪೋಷಣೆಗಳು ವಿಷ್ಣುವಿನ ಕಾರ್ಯ. ಆ ಕಾರಣ, ಲಕ್ಷ್ಮಿಯ (ಸಂಪತ್ತಿನ) ಅಗತ್ಯವಿದೆ. ವಿಷ್ಣು ಭಗವಾನನ ಶಕ್ತಿಯ ಬಗ್ಗೆ ನಿನಗೆ ಸ್ಪಷ್ಟವಾದಂತಾಯಿತು. ಅವನು ಪಾಲನ–ಪೋಷಣ ಕಾರ್ಯದಲ್ಲಿ ಬೇಸತ್ತಿದ್ದಾನೆ. ನಾನು ತೀರ ಸಂಕ್ಷಿಪ್ತವಾಗಿ ಬರೆದಿದ್ದೇನೆ; ಮನಸ್ಸು ಇನ್ನೂ ಹೆಚ್ಚು ಕೆಲಸ ಮಾಡುತ್ತಿಲ್ಲ. ನೀನು ವಿವರವಾಗಿ ತಿಳಿಯಬೇಕೆಂದಿದ್ದರೆ, ಮುಖತಃ ವಿವರಿಸುತ್ತೇನೆ. 'ವಿಷ್ಣು'ವನ್ನು ಉಪಾಸಿಸಬಯಸುವವರು ತಮ್ಮ ಹೃದಯದಮೇಲೆ ಧ್ಯಾನಮಾಡಬೇಕು. ಅದು ನಿಜವಾಗಿ ವಿಷ್ಣುವಿನ ಪೂಜೆ (ಉಪಾಸನೆ) ಆಗುತ್ತದೆ. ಆ ಹಂತ ಮುಗಿದ ಮೇಲೆ ಇತರ (ಮುಂದಿನ) ಸ್ಥಿತಿಗಳು ಅನುಸರಿಸಿ ಬರುತ್ತವೆ.

ನಿನ್ನ ಪತ್ರಗಳನ್ನು ನೋಡಿ, ನನ್ನ ಹೃದಯ (ಉತ್ತರ) ಬರೆಯುತ್ತಲೇ ಇರಬೇಕೆಂದು ಬಯಸುತ್ತದೆ. ನಿನ್ನ ಆಧ್ಯಾತ್ಮಿಕ ಸ್ಥಿತಿ ಮತ್ತು ಸಮಾಚಾರ ಕುರಿತು ಈಗಾಗಲೇ ಉತ್ತರ ಬರೆದಿದ್ದೇನೆ. ಆಧ್ಯಾತ್ಮಿಕತೆಯ ಉನ್ನತ ಸ್ತರವನ್ನು ತಲುಪಿರುವುದಕ್ಕೋಸ್ಕರ ನಿನ್ನನ್ನು ಪ್ರಶಂಸಿಸಲು ಬಯಸುತ್ತೇನೆ; ಅದರಿಂದ ಓದುಗರ ಚಿತ್ತವು ಬಡಿದೆಬ್ಬಿಸಲ್ಪಟ್ಟು, ಸ್ಫೂರ್ತಿಪಡೆಯಬಹುದು ಮತ್ತು ಅವರು ಈ ಹಂತದ ವರೆಗೆ ತಲುಪಲು ನಿಷ್ಠಾಪೂರ್ವಕ ಪ್ರಯತ್ನ ಮಾಡಬಹುದು. ಹಾಗೆನ್ನುವುದಾದರೆ, ಈಶ್ವರನು ಯಾರನ್ನು ಬೇಕಾದರೂ ತನ್ನೆಡೆಗೆ ಸೆಳೆಯಬಹುದು. ಏನನ್ನು ಬೇಕಾದರೂ ದಯಪಾಲಿಸಬಹುದು; ಅದು ಅವನ ಕೈಯಲ್ಲಿದೆ. ಆದರೆ ಯಾವನೋ ಒಬ್ಬ ಭಕ್ತ ಅವನ ವರೆಗೆ ಮುಟ್ಟಲು ಪ್ರಯತ್ನಪಡುತ್ತಿದ್ದಾನೆಂಬ ಸಮಾಚಾರ ಅವನಿಗೆ ತಲುಪುವಂತಾಗಲು ಪ್ರಯತ್ನ ಮಾಡುವುದು ಖಂಡಿತವಾಗಿಯೂ ನಮ್ಮ ಕರ್ತವ್ಯವಾಗಿದೆ. 'ಆತ್ಮನಿರಸನ'ವು ಕೊನೆಯ ಸೀಮೆ ಎಂದು ನಾನು ನಿನಗೆ ಹೇಳಿದೆ. ಯಾವಾಗ ಮನುಷ್ಯರು ಈ ಕೊನೆಯ ಸ್ಥಿತಿಯ ಕೊನೆಯನ್ನು ತಲುಪುತ್ತಾನೋ, ಅದರ ನಂತರವೂ ಕ್ರಮಿಸುವುದು ಉಳಿದಿರುತ್ತದೆ. ವ್ಯಕ್ತಿಯ ಈ ಕೊನೆಯ ಸೀಮೆಯ ಕೊನೆಯನ್ನು (ನಿರಸನದ ನಿರಸನ) ತಲುಪಿದಾಗ ಅವನ ಶರೀರದ ಪ್ರತಿಯೊಂದು ಪರಮಾಣುವೂ ಅತ್ಯುನ್ನತ ಶಕ್ತಿಯಿಂದ ತುಂಬಿರುತ್ತದೆ. ಪ್ರತಿಯೊಂದು ಗ್ರಂಥಿಯೂ ಸಂಪೂರ್ಣ ದೈವೀಕರಣಗೊಂಡಿರುತ್ತದೆ. (ಅಂತಿಮ ಸ್ಥಿತಿಯ ಅದ್ಭುತದಲ್ಲಿ ಪರ್ಯಾಪ್ತಗೊಂಡಿರುತ್ತದೆ) ಆಗ ಆಗುವುದೇನು ? ಅವನು ಪ್ರಕೃತಿಯ ವಿಶೇಷ ಉಪಕರಣವಾಗಿಬಿಡುತ್ತಾನೆ. (ಅಂಥ ವ್ಯಕ್ತಿಯನ್ನು ತಯಾರುಮಾಡುವುದು ಈಶ್ವರನ ಮೇಲೆ ಅವಲಂಬಿಸಿದೆಯೆಂಬುದೇನೋ ಸರಿಯೆ). ಹಾಗಿದ್ದರೂ, ಅವನು ಎಲ್ಲವನ್ನೂ (ಎಲ್ಲ ಸಾಮರ್ಥ್ಯ ಮತ್ತು ಅಧಿಕಾರವನ್ನು) ಪಡೆದಿದ್ದೂ, ಅವುಗಳ ಅರಿವಿಲ್ಲದಂತಿರುತ್ತಾನೆ, ಆದರೆ ದೈವೀಕಾರ್ಯಕ್ಕೋಸ್ಕರ ಅಗತ್ಯವಿರುವುದೆಲ್ಲದರ



ಅರಿವು ಅವನಿಗಿಲ್ಲದಿರುವುದಿಲ್ಲ. ಅವನು ಇಡೀ ವಿಶ್ವವನ್ನು ನಿಯಂತ್ರಿಸುತ್ತಾನೆ. ಇಂದಿನ ಕಾಲದಲ್ಲಿರುವ ದೈವೀಪುರುಷನಿಗೆ ಇರುವಂತೆಯೇ– ಅವನು ಯಾರೇ ಇರಲಿ–ಸಕಲ ದೈವೀಶಕ್ತಿಗಳು ಅವನ ವಶದಲ್ಲಿರುತ್ತವೆ. 'ರಾಜಯೋಗದ ಪ್ರಭಾವ' ಪುಸ್ತಕದಲ್ಲಿ, ಅಂಥ ವ್ಯಕ್ತಿ ಈಗ ಜಗತ್ತಿನಲ್ಲಿದ್ದಾನೆಂದು ನಾನು ಈಗಾಗಲೇ ಹೇಳಿದ್ದೇನೆ. ನಮಗೆ ಪ್ರಾಚೀನ ಶಾಸ್ತ್ರಗ್ರಂಥಗಳಿಂದ ತಿಳಿದು ಬರುವಂತೆ, ಅವತಾರಿಗಳಿಗೆ ಕೇವಲ ಸಂಹಾರಕ ಕಾರ್ಯಗಳಷ್ಟೇ ನಿಗದಿತವಾಗಿರುತ್ತವೆ. ರಚನಾತ್ಮಕ (ಸೃಷ್ಟ್ಯಾತ್ಮಕ) ಕಾರ್ಯ ಅವರ ಕೈಯಲ್ಲಿರುವುದಿಲ್ಲ. ಆದರೆ ವರ್ತಮಾನ ಕಾಲದಲ್ಲಿ ಅಸ್ತಿತ್ವದಲ್ಲಿರುವ ವಿಭೂತಿಪುರುಷನಿಗೆ ಈ ಎರಡೂ ರೀತಿಯ ಕಾರ್ಯಗಳೂ ಕೈಯಲ್ಲಿವೆ; ಮತ್ತು ಅವನು ತನ್ನ ನೆರವಿಗೋಸ್ಕರ ವ್ಯಕ್ತಿಗಳನ್ನು ತಯಾರುಮಾಡುತ್ತಾನೆ. ಅವತಾರಗಳ ಕೈಯಲ್ಲಿ ಶಸ್ತ್ರಾಸ್ತ್ರ (ಖಡ್ಗ)ಗಳಿರುತ್ತವೆ, ಆದರೆ ಇಂದಿನ ವಿಭೂತಿಪುರುಷನಿಗೆ ಅವು ಬೇಕಿಲ್ಲ. ಅವನು ಇಚ್ಛಿತ ಪರಿಣಾಮಗಳನ್ನು ತರುವ ಪರಿಸ್ಥಿತಿಗಳನ್ನು ಉಂಟುಮಾಡುತ್ತಾನೆ. ಅವನಿಗೆ ರಕ್ತಪಾತ ಅಥವಾ ಇತರ ಇನ್ನಾವುದೇ ಸಂಹಾರಕ ಕಾರ್ಯವು ಅವಶ್ಯವೆಂದು ಕಂಡುಬಂದರೆ, ಭವಿಷ್ಯತ್ತಿನಲ್ಲಿ ಅಂಥ 'ಅವತಾರ' ಬರುವಂತೆ ಮಾಡುವುದು ಅವನ ಕೈಯಲ್ಲಿದೆ. ಅಂದರೆ, ಅವನು ಜಗತ್ತಿನಲ್ಲಿರುವಾಗಲೇ ಅದನ್ನು ಯೋಜಿಸಿ ಇಡಬಲ್ಲನು. ವಿಚಾರಮಾಡಿ ನೋಡು, ಈ ನಮ್ಮ ಕಾಲದಲ್ಲಿ, ವಿಚಾರವಂತ ವ್ಯಕ್ತಿಗಳು 'ಕುಂಡಲಿನಿ'ಯನ್ನು ಜಾಗ್ರತಗೊಳಿಸಲು ಯಾವಾಗಲೂ ಹೆಚ್ಚು ಉತ್ಸುಕರಾಗಿದ್ದಾರೆ. ಆದರೆ ಈ (ಮೇಲೆ ಹೇಳಿದ) ಸ್ಥಿತಿಗಳ ಅನುಭವಪಡುವ ನಿಟ್ಟಿನಲ್ಲಿ ಅವರ ದೃಷ್ಟಿ ಬೀಳುವುದಿಲ್ಲ. ಕಬೀರ ಹೇಳಿದಂತೆ ಜಗತ್ತೆಲ್ಲವೂ ಕುರುಡಾಗಿದ್ದಾಗ ನಾನು ಯಾರಿಗೆ ತಾನೆ ತಿಳಿಸಲಿ (ಜಬ್ ಸಬ್ ಜಗ್ ಅಂಧಾ ಹೈ ಮೈ ಕಿಸೇ ಸಮಝಾಂವೂ) ? ಅವತಾರವನ್ನು ಇಳಿದು ಬರುವಂತೆ ಮಾಡುವ ಉಪಾಯವನ್ನು ನಾನು ಬರೆಯುತ್ತೇನೆ. ಅದು ಒಂದು ಸ್ಥೂಲ (ಸಾಮಾನ್ಯ)ವಾದುದು. ಇದರಿಂದ ಜನರಿಗೆ ಇದರ ತಿಳುವಳಿಕೆ ಉಂಟಾದೀತು.

ನಮ್ಮಲ್ಲಿ (ದೇಶದಲ್ಲಿ) ಅವತಾರವನ್ನು ಕುರಿತ ಸಾಧನೆಯಲ್ಲಿ ಜನರು ಆಸಕ್ತಿ ಹೊಂದಿಲ್ಲ. (ಅದಿಲ್ಲವಾದರೆ) ಈ ಪವಾಡದಲ್ಲಿಯೇ ಅವರ ಆಸಕ್ತಿ ಉಂಟಾಗಿ ಅವರು ದಿನಕ್ಕೊಂದು ಅವತಾರವನ್ನು ಆವಾಹಿಸುತ್ತಿದ್ದಿರಬಹುದಾದ ಸಾಧ್ಯತೆ ಇದೆ. ಯಾಕೆಂದರೆ ಅದರ ಉಪಾಯ (ಕ್ರಮ) ತೀರಾ ಸರಳ ಮತ್ತು ಸಾಮಾನ್ಯವಾದುದಾಗಿದೆ, ಆದರೆ ಅದು ಬಲಿಷ್ಠ ಇಚ್ಛಾಶಕ್ತಿಯನ್ನು ಅವಲಂಬಿಸಿರುವುದೇನೋ ಸರಿ. ಆ ವಿಧಾನ ಇಂತಿದೆ : ಒಂದು 'ಅವತಾರ' ಇಳಿದು ಬರಬೇಕಾದುದು ಅವಶ್ಯ ಎಂದು ಆ ದೈವೀ ಪುರುಷನಿಗೆ ಕಂಡರೆ, ಮೊತ್ತಮೊದಲಿಗೆ ಎಲ್ಲಿಂದ ಶಕ್ತಿ ಭೂಮಿಗೆ ಇಳಿದು ಬಂದಿತೋ ಅಲ್ಲಿ ಅವನು ಒಂದು 'ನಿರ್ವಾತ' (Vacuum) ಸ್ಥಿತಿಯನ್ನು ಉಂಟುಮಾಡುತ್ತಾನೆ. ಅಂದರೆ ಅವನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ 'ಅವತಾರ'ವೊಂದು ಇಳಿದು ಬರುತ್ತದೆ. ಹಾಗೆ ಇಳಿದು ಬರುವಾಗ, ಯಾವಾಗ ಅವನು (ಅವತಾರ)

P-4-Books-PM-7-Ananthyatre-68



ಮಹಾಮಾಯಾ ಮಂಡಲದಲ್ಲಿ ಬರುವನೋ ಆಗ, ಒಮ್ಮೆಲೆ ಆ ಸ್ಥಾನಕ್ಕೆ ಅಗತ್ಯವಿರುವಷ್ಟು ಶಕ್ತಿ (Power) ಅವನಲ್ಲಿ ತುಂಬಿಕೊಳ್ಳುತ್ತದೆ. ಆದರೆ ಅವನು ಮಹಾಮಾಯಾ ಮಂಡಲವನ್ನು ಬಿಟ್ಟುಬರುವವರೆಗೂ ಆ ಮಂಡಲದ ಸ್ಥಿತಿ ಎಂತಿತ್ತೋ ಅಂತೆಯೇ ಇರುತ್ತದೆ. ಅವನು ಆ ಸ್ಥಾನವನ್ನು ಬಿಟ್ಟಮೇಲೆ ಅವನ ಆಗಮನ ಪ್ರಾರಂಭವಾಗುತ್ತದೆ. 'ಭೂಮಾ' (ಶಿಖರ)ದಲ್ಲಿ ಎಂಥ 'ನಿರ್ವಾತ' ಉಂಟುಮಾಡಲಾಗಿತ್ತೆಂದರೆ, ಅವನು ಕೆಳಗಿಳಿದು ಬರುತ್ತಲೇ 'ಈಶ್ವರೀಯ ಮನಸ್ಸಿನ' ಪೂರ್ಣ ಪ್ರಭಾವ (ಸಾಮರ್ಥ್ಯ)ವನ್ನು ಅವನು ಬೆಳೆಸಿಕೊಳ್ಳುತ್ತಾನೆ. ಅದನ್ನು ಬಿಟ್ಟು (ದಾಟಿ) ಪರಬ್ರಹ್ಮಾಂಡ ಮಂಡಲ ಮತ್ತು ಬ್ರಹ್ಮಾಂಡ ಮಂಡಲ ಹಾದು ಬರುವಾಗ ಆ ಸ್ಥಳಗಳಲ್ಲಿಯ ಶಕ್ತಿಗಳನ್ನೂ ತೆಗೆದುಕೊಂಡು, ಈಗ ಅವನು ಒಂದು 'ಅವತಾರ'ವಾಗಿ ಪೃಥ್ವಿಗೆ ಇಳಿದು ಬರುತ್ತಾನೆ. 'ಭೂಮಾ'ದಲ್ಲಿ 'ನಿರ್ವಾತ'ವನ್ನು ಉಂಟು ಮಾಡಿದುದರ ಪರಿಣಾಮವಿದು. ಅವತಾರಿಯು ಮಹಾಮಾಯಾ ಮಂಡಲದಲ್ಲಿ ತನ್ನ 'ಜೀವ' (ಪ್ರಾಣಶಕ್ತಿ)ಯನ್ನು ಪಡೆಯುತ್ತಾನೆ. ಮತ್ತು ಆ 'ನಿರ್ವಾತ'ವು ಮಹಾಮಾಯಾ ಮಂಡಲ ತಲುಪಿದಾಗ, ತನ್ನ (ಅವತಾರದ) ಉದ್ದೇಶಕ್ಕೆ ಅಗತ್ಯವಿರುವ ಎಲ್ಲ ದೈವೀ ಶಕ್ತಿಗಳನ್ನೂ ಪಡೆಯುತ್ತದೆ. ಇದನ್ನು ಬಹಳ ಕಷ್ಟದಿಂದ ಅಭಿವ್ಯಕ್ತಗೊಳಿಸಿದ್ದೇನೆ, ನಾನು ಅಷ್ಟು ಓದಿದ ಮನುಷ್ಯನಲ್ಲ; ಇನ್ನೂ ಉತ್ತಮ ಶಬ್ದಗಳು ನನಗೆ ದೊರೆತಿಲ್ಲ. ಬಹುಶಃ ಚೌಬೇಜಿಯವರು ಈ ವಿಷಯದಲ್ಲಿ ನೆರವಾಗಲು ಸಮರ್ಥರಿರಬಹುದು; ಯಾಕೆಂದರೆ ಅವರ ಬಹಳಷ್ಟು ಧಾರ್ಮಿಕ ಸಾಹಿತ್ಯ ಅವಗತಮಾಡಿಕೊಂಡಿದ್ದಾರೆ, ಮತ್ತು ಇದರ ಸುಳುಹು ಅವರಿಗೆ ಎಲ್ಲಿಯಾದರೂ ದೊರೆತಿರಬಹುದು. ಅವರಿಗೆ ಎಲ್ಲಾದರೂ ಸುಳುಹು ಸಿಕ್ಕಿದ್ದರೆ ನನಗೆ ತಿಳಿಸು. ಪ್ರಾಚೀನ ಕಾಲದ ಸಂತರು ಮತ್ತು ಮಹಾತ್ಮರು ಹೇಳಿದುದಕ್ಕಿಂತ ಹೆಚ್ಚು, ಮತ್ತು ಮುಂದಿನ ವಿಷಯವನ್ನು ಯಾರೂ ಹೇಳಲು ಶಕ್ತರಾಗಲಿಕ್ಕಿಲ್ಲ ಎಂಬ ನಿಯಮವೇನಿಲ್ಲ. ನಾನು ಏನು ಹೇಳಿರುವೆನೋ ಅದು ಸತ್ಯವೇ ಇದೆ. ಯಾರಾದರೂ ಇದಕ್ಕಿಂತ ಉತ್ತಮ ಉಪಾಯ ಕಂಡುಹಿಡಿಯಲೂಬಹುದು. ಯಾಕೆಂದರೆ ಇಲ್ಲಿ ಅನೇಕ ಮಹಾತ್ಮರುಗಳಿದ್ದಾರೆ; ನಾನಾದರೋ ಒಬ್ಬ ಸಾಮಾನ್ಯ, ಅಪ್ರಸಿದ್ಧ ವ್ಯಕ್ತಿ. ಆದರೆ ಯಾರಾದರೂ ಇದರ ಬಗ್ಗೆ ಹೆಚ್ಚು ತಿಳಿಯಲಿಚ್ಛಿಸಿದರೆ ಅವರು ಸ್ವತಃ ಪ್ರಯತ್ನಪಡಬೇಕು. ಮಾನವನ ಸಾಮರ್ಥ್ಯ ಮತ್ತು (ಸಾಧ್ಯವಿರುವ) ನಿಲುಕಿನ ಬಗ್ಗೆ ಊಹಿಸಿ, ನಿರ್ಣಯಿಸಲು ಯತ್ನಿಸು. ಅವತಾರಗಳನ್ನು ಆವಾಹಿಸಿ ಕರೆತರುವ ಕೆಲಸವನ್ನು ಈಶ್ವರನು ಮಾನವನ ಕೈಯಲ್ಲಿಟ್ಟಿದ್ದಾನೆ. ವಾಸ್ತವವಾಗಿ ಮಾನವರು ತಲುಪಬಹುದಾದ ಸಾಧಿಸಬಹುದಾದ ಸ್ಥಿತಿಯನ್ನು ಅವತಾರಿಗಳೂ ಪಡೆಯಲಾರರು ಎಂಬುದು ನಿತಾಂತ ಸತ್ಯ, ನಾವು ಅಂಥ ಮಾನವರಾಗಲು ಪ್ರಯತ್ನಿಸಬೇಕು. ಈಶ್ವರ ಕೃಪೆಯಿಂದ ಯಾರಿಗಾದರೂ ಅಂಥ ವಿಭೂತಿಪುರುಷ (ದೈವೀಪುರುಷ) ದೊರೆತರೆ ಅವನು ಅತ್ಯಂತ ಭಾಗ್ಯಶಾಲಿಯೇ ಸರಿ. ಅಂಥ ದೈವೀಪುರುಷನ ಬಗ್ಗೆ ನಿಜವಾದ ಪ್ರೇಮವಿರುವುದಾದರೆ, ಅವನು ಊಹೆಗೂ ನಿಲುಕಲಾರದಷ್ಟು ದಯಪಾಲಿಸಬಹುದು.



ನೀವೆಲ್ಲರೂ ಅಂಥ ಮಹಾವ್ಯಕ್ತಿಯನ್ನು ಅರಸಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಅವನು ನಿಮ್ಮ ಸಂಪರ್ಕದಲ್ಲಿ ಬಂದರೆ ಅವನು ದೃಷ್ಟಿಮಾತ್ರದಿಂದ ಏನನ್ನು ಬೇಕಾದರೂ ಬಂಗಾರವಾಗಿ ಮಾರ್ಪಡಿಸಬಲ್ಲನು. ನನಗೆ ಚಿಂತೆ ಇಲ್ಲ ನಾನು ಅಂಥ 'ವ್ಯಕ್ತಿ' (ಪೂಜ್ಯ ಲಾಲಾಜಿ)ಯನ್ನು ಪಡೆದಿದ್ದೇನೆ; ಮತ್ತು ನನಗೆ ಸಿಗಬೇಕಿದ್ದ ಆಧ್ಯಾತ್ಮಿಕ ಜ್ಞಾನವನ್ನು ಪಡೆದಿದ್ದೇನೆ. ನಿಮ್ಮ ಬಗ್ಗೆ ನಿಮಗೆ ಗೊತ್ತು.

***ಪೂಜ್ಯ ಲಾಲಾಜಿ (ಆದೇಶ) :*** *"ಬಂಧುಗಳೆ, ಇಂಥ ಸುವರ್ಣಾವಕಾಶ ಪದೇ ಪದೇ ಬರುವುದಿಲ್ಲ. ಈ ಅವಧಿಯಲ್ಲಿ ಅತ್ಯುನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ಪಡೆಯಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ಇಂಥ ಉನ್ನತ ವಿಚಾರಗಳನ್ನು ನೀವು ಎಲ್ಲಿಯಾದರೂ ಕೇಳಿದ್ದಿರಾ ? ಇಂಥ ಉತ್ಕಟ ಉತ್ಸಾಹ ಮತ್ತು ನಿಷ್ಠೆ (ಪ್ರೇಮ)ಗಳನ್ನು ಎಲ್ಲಾದರೂ ಕಂಡಿದ್ದಿರಾ ? ಬಂಧು, ಇಂಥ ಅವನತಿಯ ಕಾಲದಲ್ಲಿ, ಇಂಥ ದೈವೀ ವ್ಯಕ್ತಿಯು ಲಭ್ಯವಾಗಿರುವುದು ಮಹಾ ಸೌಭಾಗ್ಯವೇ ಸರಿ. ಮತ್ತು ಅಂಥ ಮಹಾವ್ಯಕ್ತಿ ಆಧ್ಯಾತ್ಮಿಕ (ಶಿಕ್ಷಣ) ತರಬೇತಿಯ ಅಡಿಯಲ್ಲಿ ಬರುವುದು ಅತ್ಯಂತ ಸುದೈವದ ವಿಷಯ. ನಾನು ನನ್ನಲ್ಲಿರುವುದೆಲ್ಲವನ್ನೂ ಅವನಿಗೆ (ರಾಮಚಂದ್ರ) ಕೊಟ್ಟಿದ್ದೇನೆ. ಅಲ್ಲದೆ, ಅದು ಇನ್ನೂ ನನ್ನ ಅಭ್ಯಾಸ (ರೂಢಿ) ಆಗಿದೆ. ನನಗೆ ಲಭ್ಯವಾಗುವುದೆಲ್ಲವನ್ನೂ ಅವನಿಗೆ ಕೊಡುತ್ತಲೇ ಇರುತ್ತೇನೆ. ಎಂಥ ಪ್ರೇಮಭಾವ ನನ್ನ ಹೃದಯದಲ್ಲಿ ಅವನ ಬಗ್ಗೆ ಇರುವುದೋ ಅಂಥದೇ ಭಾವನೆ ಅವನ ಹೃದಯದಲ್ಲಿ ನಿಮ್ಮ ಬಗ್ಗೆ ಉಂಟಾಗುವಂತೆ ನೀವೆಲ್ಲರೂ ಪ್ರಯತ್ನಿಸಬೇಕು; ಅದು ನಿಮ್ಮ ಕೈಯಲ್ಲಿದೆ. ಇದು ಅತೀವ ಮಹತ್ತ್ವಪೂರ್ಣ ಪತ್ರ. ಇದರ ಮೂರು ನಾಲ್ಕು ನಕಲುಗಳನ್ನು ಕಾಯ್ದಿರಿಸಬೇಕು".*

'ಪ್ರಾರ್ಥನೆ' ಅತ್ಯಂತ ಮಹತ್ತ್ವವುಳ್ಳದ್ದು ಹಾಗೂ ಅನಿವಾರ್ಯ. ಪ್ರತಿಯೊಬ್ಬ ಅಭ್ಯಾಸಿಯು, ನಿದ್ದೆಹೋಗುವ ಮೊದಲು ಪ್ರಾರ್ಥನೆ ಮಾಡಬೇಕು. ಅದನ್ನು ನಾನು ನನ್ನ ಉರ್ದು ಪುಸ್ತಕದಲ್ಲಿ (ಹತ್ತು ನಿಯಮಗಳ ವ್ಯಾಖ್ಯಾನ) ಹೇಳಿದ್ದೇನೆ. ಸಂಪೂರ್ಣ ಪ್ರೇಮ ಭಕ್ತಿಗಳಿಂದ ಈ ಪ್ರಾರ್ಥನೆ ಮಾಡಿದ್ದಾದರೆ ಈಶ್ವರೇಚ್ಛೆಯಿದ್ದರೆ ಅವಾಂಛಿತ ವಿಚಾರತರಂಗಗಳ ಭಯ ಇರಲಾರದು. ಅವತಾರಗಳನ್ನು ಪೃಥ್ವಿಗೆ ಕರೆತರುವ ಸಾಮರ್ಥ್ಯದ ಬಗ್ಗೆ ನಾನು ಬರೆದಿದ್ದೇನೆ. ನನ್ನ ಅಂತರ್ದೃಷ್ಟಿಗೆ ಗೋಚರವಾಗುವಮಟ್ಟಿಗೆ (ಹೇಳುವುದಾದರೆ) ಯಾರಿಗೆ ಆ ಭಾಗ್ಯ (ವಿಧಿನಿಶ್ಚಿತ)ವಿತ್ತೋ ಅವರು ಮಾತ್ರವೇ ಆ ಸಾಮರ್ಥ್ಯ ಬೆಳೆಸಿಕೊಂಡು ಅದರ ಮೇಲೆ ಪ್ರಭುತ್ವಹೊಂದಬಲ್ಲವರಾಗಿದ್ದರು.

***ಸ್ವಾಮೀ ವಿವೇಕಾನಂದ (ಆದೇಶ) :*** *"ನನ್ನ ಅಂತರ್‌ದೃಷ್ಟಿ ತಲುಪುವ ಮಟ್ಟಿಗೆ ಮತ್ತು ಜ್ಯೋತಿರ್ಮಯಲೋಕದ ನನ್ನ ಅನುಭವದಿಂದ ಹೇಳುವುದಾದರೆ ಜಗತ್ತು ಅಸ್ತಿತ್ವದಲ್ಲಿ ಬಂದಾಗಿನಿಂದ ಅಂಥ ವ್ಯಕ್ತಿಯನ್ನು ನಾನು ಕಂಡಿಲ್ಲ. ಒಣ ಬಡಾಯಿಯ ಮಾತು ಇನ್ನು ಮುಂದೆ ನಿರ್ಲಕ್ಷಿಸಲ್ಪಡಬೇಕು. ಸ್ಪಷ್ಟ ಶಬ್ದಗಳಲ್ಲಿ*

P-4-Books-PM-7-Anantyatre-69



*ಹೇಳು, ಅವನು ಯಾರು ? ಆ ದಿವ್ಯ ಪುರುಷ ನೀನೇ ಎಂದು ಸಾರಿ ಹೇಳು. ಈ ಪತ್ರದಲ್ಲಿ ಬರೆದುದೆಲ್ಲವೂ ಅಕ್ಷರಶಃ ಸಂಪೂರ್ಣ ಸತ್ಯ (ಸರಿ ಇದೆ). ಈ ಪತ್ರ ಎಲ್ಲರಿಗಾಗಿಯೂ ಇದೆ. ಇದನ್ನು ನಕಲು ಮಾಡಿಟ್ಟುಕೊಂಡು ಸಮಯ ಬಂದಾಗ ಪ್ರಕಟಿಸಬೇಕು."*

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೦ **ಪತ್ರ ಸಂಖ್ಯೆ – ೨೮೪** ಷಾಹಜಹಾನಪುರ
೦೬–೦೩–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ಕೈಸೇರಿತು ಅದಕ್ಕೆ ಉತ್ತರವನ್ನು ಇದೇ ಪತ್ರದಲ್ಲಿ ಮುಂದೆ ಕೊಡುತ್ತೇನೆ. ಈಗ ರಾತ್ರಿ ಹತ್ತು ಗಂಟೆಯಾಗಿದೆ. ತಲೆ ಯಾಕೋ ಒಂದಿಷ್ಟು ಭಾರವಾಗಿದೆ. ಇರಲಿ, ನನ್ನ ವಿಚಾರದಲ್ಲಿ ತೋಚಿದ್ದನ್ನು ಹೇಳಿ ಬರೆಯಿಸುತ್ತಿದ್ದೇನೆ. ಈ ಪತ್ರ ನಿನಗೆ ಮತ್ತು ಶುಕ್ಲಾಜಿಯವರಿಗೋಸ್ಕರ ಇದೆ. ನಾನು ಈ ಹಿಂದಿನ ಪತ್ರದಲ್ಲಿ ಒಂದಿಷ್ಟು ಬರೆದಿದ್ದೆ; ಪತ್ರ ಸರಿಯಾಗಿ ನೆನಪಿಲ್ಲ, ಅಂದಾಜುಮಾಡಿ ಬರೆಯುತ್ತಿದ್ದೇನೆ. ಅದು ನಿರಸನ (Nagation) ಬಗ್ಗೆ ಇರಬೇಕು. ಪೂರ್ಣ ನಿರಸನ ಸಿದ್ಧಿಸಿದಾಗ ವ್ಯಕ್ತಿಯು ಸಂಪೂರ್ಣ 'ರಿಕ್ತ' (Vacuumised) ನಾಗುತ್ತಾನೆ. ಸಂಪೂರ್ಣ ನಿರ್ವಸ್ತು (ನಿರ್ವಾತ) (Vacuum) ಸ್ಥಿತಿಯನ್ನು ಉಂಟುಮಾಡಬಲ್ಲ ಯಾವ ಉಪಕರಣ (ಸಾಧನ)ವನ್ನೂ ಇದುವರೆಗೆ ಕಂಡುಹಿಡಿಯಲಾಗಿಲ್ಲವೆಂಬುದೇನೋ ಸರಿಯೆ. ಆದರೆ ನಮ್ಮ ಪದ್ಧತಿ (ಯೋಗ)ಯಲ್ಲಿ 'ಸಂಪೂರ್ಣ ನಿರಸನ'ದ ಮರೆವಿನ ಅವಸ್ಥೆ ಪ್ರಾಪ್ತವಾದಾಗ, ಆಗ ಸಂಪೂರ್ಣ ರಿಕ್ತತೆ ಉಂಟಾಗುತ್ತದೆ. ಅದರ ಶಕ್ತಿಗೆ ಮೇರೆಯೇ ಇಲ್ಲ; ಅವತಾರಗಳಿಗೂ ಕೂಡ ಈ ಶಕ್ತಿ (Power) ಇರುವುದಿಲ್ಲ. ಆವಶ್ಯಕತೆಗೆ ತಕ್ಕಂತೆ ಈ ಶಕ್ತಿಯನ್ನು ರಚನಾತ್ಮಕ ಅಥವಾ ವಿನಾಶಾತ್ಮಕ ಕಾರ್ಯಕ್ಕೆ ವಿನಿಯೋಗಿಸುವುದು 'ಅವನ' (ಆ ವಿಶೇಷ ವ್ಯಕ್ತಿಯ) ಕೈಯಲ್ಲಿದೆ.

ಸಾಧನೆಯ ಪ್ರಾರಂಭದಿಂದಲೇ ವ್ಯಕ್ತಿಯು ರಿಕ್ತನಾಗುತ್ತ ಹೋಗಲಾರಂಭಿಸಬೇಕೆಂಬುದು ನನ್ನ ವಿಧಾನ, ನನ್ನ ಗುರುಮಹಾರಾಜರು ನನ್ನನ್ನು ಮೇಲೆ ವಿವರಿಸಿದಂತೆ ಮಾಡಿರುವುದು ಸ್ಪಷ್ಟವೇ ಇರುವಾಗ, (ಅವರಿಗೆ ಶತಶತ ಧನ್ಯವಾದಗಳು) ಅದೇ ಬೀಜವನ್ನೇ ಇತರರಲ್ಲಿಯೂ (ನಾನು) ಬಿತ್ತಲೇ ಬೇಕು. ಅನುಭವ ಪಡೆದ ಸಮರ್ಥ ಮಾರ್ಗದರ್ಶಕನನ್ನೇ ಯಾವಾಗಲೂ ಅರಸಬೇಕೆಂಬುದು ಇದೇ ಕಾರಣಕ್ಕಾಗಿ; ಮತ್ತು, ಅಂಥ ಸಮರ್ಥ ಗುರು ದೊರಕಿರುವುದು ನನ್ನ ಸೌಭಾಗ್ಯ. ಇದರಲ್ಲಿ (ವ್ಯಕ್ತಿಯು ಸಂಪೂರ್ಣ 'ರಿಕ್ತ' ಸ್ಥಿತಿಯನ್ನು ಪಡೆದಾಗ) ಎಂಥ ಆಗಾಧ ಶಕ್ತಿ (Power) ಅವನಲ್ಲಿ ಉಂಟಾಗುವುದೆಂದರೆ ಬ್ರಹ್ಮ, ವಿಷ್ಣು, ಮಹೇಶ್ವರರೂ ಕೂಡ



ಅವನ ಆಜ್ಞೆಯನ್ನು ಉಲ್ಲಂಘಿಸಲಾರರು. ಆದರೆ ಈಶ್ವರನು ಯಾರನ್ನಾದರೂ ಅಂಥ ಸಿದ್ಧಿಗೆ (ನಿಲುಕೆ) ಆಯ್ಕೆಮಾಡುವಾಗ, ಯಾವನು ಈಶ್ವರೇಚ್ಛೆಯನ್ನು ಸ್ವತಃ ತನ್ನಿಂದ ತಾನೇ ನೆರವೇರಿಸಲು ಸಮರ್ಥನೋ ಅಂಥವನನ್ನೇ ಹುಡುಕುತ್ತಾನೆ (ಆಯ್ಕೆ ಮಾಡುತ್ತಾನೆ) ಎಂಬುದೂ ಸತ್ಯವೆ. ಅಂಥ ವ್ಯಕ್ತಿಯನ್ನು ಈಶ್ವರನು ಅವನ ಗುರುವಿಗೆ ಒಪ್ಪಿಸುತ್ತಾನೆ ಮತ್ತು ಗುರುವಿಗೆ ತನ್ನನ್ನು ಸಂಪೂರ್ಣ ಸಮರ್ಪಣೆಮಾಡಿಕೊಂಡಂಥವನಿಗೆ ಮಾತ್ರವೇ ಅದು ಲಭ್ಯವಾಗುತ್ತದೆ ಎಂದೂ ನಾನು ಹೇಳುತ್ತೇನೆ. ಈ 'ನಿರಸನ' (Nagation) ಸ್ಥಿತಿಯ ಮಹತಿಯನ್ನು ನಾನು ಎಷ್ಟೆಂದು ಕೊಂಡಾಡಲಿ ! ವಾಸ್ತವವಾಗಿ ಇದು 'ಅನಂತ'ದ ಆರಂಭವಾಗಿದೆ. ಇನ್ನೂ ಮುಂದಕ್ಕೆ ಕ್ರಮಿಸುವುದು ಎಷ್ಟಿದೆಯೆಂಬುದು ಗೊತ್ತಿಲ್ಲ. ತಾವು ಸ್ವತಃ ಆಧ್ಯಾತ್ಮಿಕತೆಯಿಂದ ಸಾವಿರಾರು ಮೈಲು ದೂರವಿದ್ದರೂ, ವೇದಿಕೆಗಳಮೇಲೆ ನಿಂತು ಅದರ ಕುರಿತು ಪ್ರಚಾರ (ಉಪದೇಶ) ಮಾಡುವವರನ್ನು ಕಂಡು ನಗು ಬರುತ್ತದೆ.

'ಪೂರ್ಣತೆ' (Perfection) ಎಂದರೇನೆಂದು ನಾನಿಂದು ನಿನಗೆ ವಿವರಿಸುತ್ತೇನೆ. ಹಾಗೆನ್ನುವುದಾದರೆ 'ಪೂರ್ಣ'ನು ಪರಮಾತ್ಮನೊಬ್ಬನೇ; ಅಥವಾ ಬೇರೆ ಶಬ್ದಗಳಲ್ಲಿ 'ಜ಼ಾತ್', 'ಭೂಮಾ' ಭೂಮಾ' ಮಾತ್ರವೇ ಎಂದು ಕರೆಯುತ್ತಾರೆ. ಅದೇ ಅರ್ಥದಲ್ಲಿ ಈ ಶಬ್ದ ಇಲ್ಲಿ ಬಳಸಲಾಗಿದೆ. ಇರಲಿ. ಆದರೆ, ಅಭ್ಯಾಸಿಯ (ಸಾಧಕನ) ಪೂರ್ಣತೆಯನ್ನು ಕುರಿತು ಹೇಳುವಾಗ ಅದರ ಅರ್ಥವೇನೆಂದರೆ, ಪ್ರಕೃತಿಯಲ್ಲಿ ಇರುವುದೆಲ್ಲದರ, ಅದರಲ್ಲಿ ಸೃಷ್ಟಿಯಾದುದೆಲ್ಲದರ ಜ್ಞಾನ ಅವನಿಗಿರಬೇಕು; ಹಾಗಿದ್ದೂ ಅವನು ಅದರ ಅರಿವು ಇಲ್ಲದೆ, 'ಅಜ್ಞಾನಿ'ಯಂತಿರುತ್ತಾನೆ. ಯಾವುದೇ 'ಜ್ಞಾನ'ವಿರಲಿ, ವಿಜ್ಞಾನ (Seience) ವಿರಲಿ ಅದು ಅವನ ಅಳವಿನಲ್ಲಿರುತ್ತದೆ. (ಅದು ಅವನಿಂದ ತಪ್ಪಿಸಿಕೊಂಡು ಉಳಿಯದು). ಯಾರಾದರೂ ಒಂದಿಷ್ಟು (ಪ್ರಚೋದನೆಯ) ಕಿಡಿ ತಾಗಿಸಿದರೆ ಸಾಕು ಅವನು ತಿಳಿಯಬಯಸಿದುದೆಲ್ಲವೂ ಸಹಜವಾಗಿ ಅವನ ಮುಖದಿಂದ ಹೊಮ್ಮಿ ಬರುತ್ತದೆ. ಪರಿಪೂರ್ಣ ವ್ಯಕ್ತಿಯನ್ನು ಪರೀಕ್ಷಿಸಿ ನೋಡಲು ಇದೇ ಒರೆಗಲ್ಲು.

ಹಿಂದಿನ ಪತ್ರದಲ್ಲಿ ಅವತಾರಗಳು ಇಳಿದು ಬರುವಂತೆ ಮಾಡುವ ವಿಧಾನವನ್ನು ಕುರಿತು ಬರೆದಿದ್ದೆ. ಜನರು ಅದರ ಉಪಯೋಗ ಮಾಡಬಹುದು. ಧಾರ್ಮಿಕ ಗ್ರಂಥಗಳಲ್ಲಿ ಹುಡುಕಿದರೆ ಇದಕ್ಕಿಂತ ಸರಳವಾದ ವಿಧಾನವೂ ದೊರೆಯಲೂ ಬಹುದು. ಆದರೆ ನಾನು ಹೇಳಿದ ವಿಧಾನ ಅಂದರೆ, 'ಭೂಮಾ'ದ ಹೊರಪರಿಧಿಯಲ್ಲಿ ನಿರ್ವಾತ(ರಿಕ್ತ) ಕ್ಷೇತ್ರವನ್ನುಂಟು ಮಾಡುವುದು ಅದು ಒಂದು ಸೆಕೆಂದಿನ ಕೆಲಸ ಎಂದು ನನಗನಿಸುತ್ತದೆ. ಸಮಯದ ಸೀಮೆಯಲ್ಲಿ ನಿರ್ಧರಿತ ಅವಧಿಗೆ ಅವತಾರವನ್ನು ಇಳಿಸಿ ತರುವುದಕ್ಕೆ ಎರಡು – ಮೂರು ಹೆಚ್ಚು ಸೆಕೆಂದುಗಳು ಸಾಕಾಗಬಹುದು. ಈ ಸಂದರ್ಭದಲ್ಲಿ ನಾನು ಇನ್ನೂ ಒಂದು ಮಾತು ಹೇಳುತ್ತೇನೆ : ಮಹಾತ್ಮರ ಹೃದಯದಲ್ಲಿಯೂ ಕೂಡ, ಹೃದಯ ಕುಸಿದು ಹೋಗುವಂಥ ಬಳಲಿಕೆ (ಗ್ಲಾನಿ) ಉಂಟಾದಾಗ, ಅವರಿಗೆ ಅರಿವಿಲ್ಲದೆಯೇ, ತನ್ನಿಂದ ತಾನೆ ರಿಕ್ತತೆ (Vacuum)

-4-Books-PM-7-Anantyatre-70



ಉಂಟಾಗುವವರೆಗೆ ಕಷ್ಟಗಳೂ ಬರುತ್ತವೆ (ಅಂತಹ ಸಂದರ್ಭದ ಉದಾಹರಣೆಗಳೂ ಸಿಗುತ್ತವೆ.) ರಾಮಾವತಾರಕ್ಕೆ ಸ್ವಲ್ಪ ಪೂರ್ವದಲ್ಲಿ ಇಂಥ ಸ್ಥಿತಿ ಉಂಟಾಗಿತ್ತು. ಅದರೆ ಹೆಚ್ಚು ಬಲವುಳ್ಳದ್ದಾಗಿರಲಿಲ್ಲ. ಅದರ ಪರಿಣಾಮವಾಗಿ ರಾಮಾವತಾರವಾಯಿತು. ಶ್ರೀಕೃಷ್ಣನ ಅವತಾರ ಆದುದೆಂತು ? ರಾಮಾವತಾರವಾಗುವಾಗ ಸಿಡಿದ ಜ್ವಾಲೆಯ ಪರಿಣಾಮ ಹೇಗಿತ್ತೆಂದರೆ ಅದರ ನೈಜ ಸ್ವರೂಪದಲ್ಲಿ ಅಂದರೆ, ಹೆಚ್ಚಿನ ಬಲ ಮತ್ತು ತೀವ್ರತೆಯುಳ್ಳದ್ದಾಗಿ, ಕೃಷ್ಣನ ರೂಪದಲ್ಲಿ ಮತ್ತೆ ಮರುಕಳಿಸಿ ಬಂದಿತು. ಶ್ರೀಕೃಷ್ಣ ಹೆಚ್ಚು ಬಲಶಾಲಿಯಾಗಿರುವುದರ ಕಾರಣ ಇದೇ ಆಗಿದೆ. ಈ ವಿಚಾರವನ್ನು ನಾನು ನನಗೆ ತೃಪ್ತಿಕರವಾಗುವ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಲಿಲ್ಲ; ಅನುಭವದ ಮೂಲಕ ಅದನ್ನು ಖಂಡಿತ ತೋರಿಸಬಹುದು. ಎರಡನೆಯ ಬಾರಿ ಅವತಾರವೇಕಾಯಿತು ? ನನಗೆ ತೋರುವ ಮಟ್ಟಿಗೆ ಅದು ಆ ಯುಗದ (ಕಾಲದ) ಅಗತ್ಯವಾಗಿತ್ತು.

**ಲಾಲಾಜಿ ಮಹಾರಾಜ್ (ಆದೇಶ) :** *ಈ ವಿಚಾರ ಸರಿ ಇದೆ. ರಾಮಾವತಾರದ ಮೊದಲು ಋಷಿಗಳು ಮಾಡಿದುದು ಆ ಕಾಲಕ್ಕೆ ಸಾಕಷ್ಟಾಗಿತ್ತು. ಆದರೆ ಆ ಜ್ವಾಲೆಯ ನಿಜವಾದ ಸ್ಫೋಟ ಉಂಟಾದದ್ದು ಕೃಷ್ಣಾವತಾರದ ಸಮಯದಲ್ಲಿ. ಆ ಕಾರಣವೇ ಅವನು ಪೂರ್ಣಾವತಾರ ಎಂದೆನಿಸಿದನು. ಆದರೆ ಸದ್ಯದಲ್ಲಿ ಅಸ್ತಿತ್ವದಲ್ಲಿರುವ ಪ್ರತಿಭೆ (ಶಕ್ತಿ) ಇದಕ್ಕಿಂತ ಪೂರ್ವದಲ್ಲಿ ಯಾರಲ್ಲಿಯೂ ಉಂಟಾಗಿರಲಿಲ್ಲ. ಪ್ರಕೃತಿಯು ತನ್ನೆಲ್ಲ ಸಾಮರ್ಥ್ಯವನ್ನು ಯಾರಿಗಾದರೂ ಧಾರೆಯೆರೆದರೆ, ಆಗ ಅವನ ಕಾರ್ಯಗಳಲ್ಲಿ ಅದು ಹಸ್ತಕ್ಷೇಪಮಾಡುವುದಿಲ್ಲ.*

**ಸ್ವಾಮೀ ವಿವೇಕಾನಂದ (ಆದೇಶ) :** *ಅವನು ಪ್ರಕೃತಿಯೊಂದಿಗೆ ಏಕಾತ್ಮತೆ ಹೊಂದಿರುತ್ತಾನೆ; ಅಷ್ಟೇ ಅಲ್ಲ, ಅದನ್ನು ನಿಯಂತ್ರಿಸುತ್ತಾನೆ. ನಾನು 'ಸರ್ವಶಕ್ತ ಪರಮಾತ್ಮ'ನಿಗೋಸ್ಕರ ಈ ಶಬ್ದ ಬಳಸುತ್ತಿಲ್ಲ. ಪ್ರಕೃತಿಯು ಪರಮಾತ್ಮನಿಗಿಂತ ನಂತರದ್ದು. ಪ್ರಸ್ತುತ ಅಸ್ತಿತ್ವದಲ್ಲಿರುವ ವಿಭೂತಿಪುರುಷನು 'ಪ್ರಕೃತಿ'ಗಿಂತ ಮೇಲೆ ಅಥವಾ ಪರಮಾತ್ಮನಿಗೆ ನಿಕಟತಮ ಎಂದು ಬೇಕಾದರೆ ನೀನು ಹೇಳಬಹುದು.*

'ಅವತಾರ'ವನ್ನು ಕುರಿತು ಇನ್ನೊಂದು ವಿಚಾರ ನನಗೆ ನೆನಪಿಗೆ ಬಂದಿತು. ಅದೇನೆಂದರೆ ಭಗವಂತನ ಆದೇಶಗಳನ್ನು ಪಾಲಿಸದಿರುವವರನ್ನು ಭಕ್ತರಿಗೆ ಕಷ್ಟಕೊಡುವವರನ್ನು ಮತ್ತು ಒಳ್ಳೆಯ ಜನರ ಜೀವನವನ್ನು ದುಃಖಮಯವಾಗಿಸುವವರನ್ನು ಅವತಾರಿಗಳು ನಾಶಗೊಳಿಸುತ್ತಾರೆ. ವಿಭೂತಿ ಪುರುಷನ ಕಾರ್ಯವೂ ಅಂತೆಯೇ ಇರುತ್ತದೆ. ಆದರೆ ಬಹಿರಂಗದಲ್ಲಿ ಅವನು ಯಾವುದೇ ಉಗ್ರ, ಹಿಂಸಾತ್ಮಕ ಸಾಧನಗಳನ್ನು ಬಳಸುವುದಿಲ್ಲ. ಈ ಕಾರಣದಿಂದ ಬಹಳಷ್ಟು ಜನರು ಅವನ ನಿಯಂತ್ರಣದಲ್ಲಿ ಬರುವುದಿಲ್ಲ. ಇನ್ನೊಂದು ಮಾತು : ಅವತಾರಿಗಳು ತಮ್ಮ ಉದ್ದಿಷ್ಟ (ಒಪ್ಪಿಸಲ್ಪಟ್ಟ) ಕಾರ್ಯದ ಮೇಲಷ್ಟೇ ಕೇಂದ್ರಿತವಾದ ಇಚ್ಛಾಶಕ್ತಿ ಹೊಂದಿರುತ್ತಾರೆ. ವಿಭೂತಿಪುರುಷನ ಇಚ್ಛಾಶಕ್ತಿಯು ಅವತಾರಿಯ



ಇಚ್ಛಾಶಕ್ತಿಯಂತೆ ಕೇಂದ್ರಿತವಾಗಿರಲು ಹೇಗೆ ಸಾಧ್ಯ ? ಕಾರಣವೆಂದರೆ ಇಡೀ ವಿಶ್ವವೇ ಅವನ ಕಾರ್ಯಕ್ಷೇತ್ರವಾಗಿರುತ್ತದೆ. ಅವನ ವೈಶ್ವಿಕ ದೃಷ್ಟಿಯು ಒಬ್ಬ ಚಕ್ರವರ್ತಿಯು ಇಡೀ ರಾಜ್ಯವನ್ನು ಸುರಕ್ಷಿತವಾಗಿ ಕಾಪಾಡುವಂತೆ ಇಡೀ ವಿಶ್ವವನ್ನು ಪಾಲಿಸಬೇಕಾಗುತ್ತದೆ. ಈ ಪತ್ರದಲ್ಲಿ ಹಿಂದಿನ ಪತ್ರದಲ್ಲಿ ಹೇಳಿದ ಕೆಲವು ವಿಚಾರಗಳು ಪುನರಾವರ್ತಿತವಾಗಿರಬಹುದು, ನನಗೆ ಹಿಂದಿನ ಪತ್ರದ ವಿಷಯಗಳು ಪೂರ್ತಿಯಾಗಿ ಜ್ಞಾಪಕವಿಲ್ಲ. ಹೇಗೆ ವಿಚಾರಗಳು ಮೂಡಿ ಬಂದವೋ ಹಾಗೆಯೇ ಬರೆಸುತ್ತಿದ್ದೇನೆ.

ಈಗ, ಅಭ್ಯಾಸಿಯು ನಿರಸನದ ಮತ್ತು ಅದರಾಚೆಯ ಸ್ಥಿತಿಗಳನ್ನು ಪಡೆಯಲು ಯಾವಾಗ ಸಮರ್ಥನಾಗುತ್ತಾನೆ ಮತ್ತು ಆ ಸ್ಥಿತಿಗೆ ಹೇಗೆ ತಲುಪುತ್ತಾನೆ ಎಂಬ ಪ್ರಶ್ನೆ. ಒಂದು ಉತ್ತರವೆಂದರೆ, ಒಂದು ವೇಳೆ ಅವನ ಮಾರ್ಗದರ್ಶಕನು ಆ ಸ್ಥಿತಿಯನ್ನು ಪಡೆದವನಾಗಿದ್ದರೆ, ಅವನ ಕೃಪೆಯಿಂದ ಪಡೆಯಬಹುದು. ಗುರುವು ಆ ಸ್ಥಿತಿಯನ್ನು ದಯಪಾಲಿಸುವಂತೆ ಅವನನ್ನು ಅಭ್ಯಾಸಿಯು ವಿವಶಗೊಳಿಸಬೇಕು. ಅದಾಗುವುದೆಂತು ? ಬುದ್ಧಿಯಿದ್ದವರೆಲ್ಲರಿಗೂ ಇದು ಗೊತ್ತಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಒಬ್ಬನು ನನ್ನನ್ನು ಬೈದನೆಂಬ ಕಾರಣದಿಂದ ಮತ್ತು ಅವನನ್ನು ಸಂತೋಷವಾಗಿಡಲು ಹಾಗೂ ಅವನು ನನಗಿಂತ ವಯಸ್ಸಿನಲ್ಲಿ ಬಹಳ ಹಿರಿಯನಾದುದರಿಂದ ಕೆಲಮಟ್ಟಿಗೆ ಉನ್ನತ ಸ್ಥಿತಿಯನ್ನು ಕೊಟ್ಟಿದ್ದೆ. ಆದರೆ ಅವನ ಬಣ್ಣ ಬದಲಾಗತೊಡಗಿತು. ಪರಿಣಾಮವೇನಾಯಿತೆಂದರೆ, ನನ್ನ ವಿರುದ್ಧ ನಿಲ್ಲುವಂಥ ಪರಿಸ್ಥಿತಿಯನ್ನು ಸ್ವತಃ ತಾನೇ ತಂದುಕೊಂಡ. ಮತ್ತು ಅಧ್ಯಾತ್ಮಕ್ಕೆ ಅನರ್ಹನೆನಿಸುವ ಮಟ್ಟಿಗೆ ಅವನತಿ ಹೊಂದಿದ. ಆದರೂ ನಾನು ಅವರನ್ನು ಗೌರವದಿಂದ ಕಾಣುತ್ತೇನೆ ಮತ್ತು ನನ್ನ ಹಿರಿಯರೆಂದೇ ಗಣಿಸುತ್ತೇನೆ. ಇನ್ನೂ ಕೂಡ, ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನ ಬಗ್ಗೆ ಹೊಂದಿರಬಹುದಾದ ಪ್ರೇಮ ಅವರ ಬಗ್ಗೆ ನನ್ನ ಹೃದಯದಲ್ಲಿದೆ. ನನ್ನ ಇನ್ನೊಂದು ದೌರ್ಬಲ್ಯವೂ ಇದೆ. ನಾನು ಒಬ್ಬ ಅಭ್ಯಾಸಿಯ ಪ್ರಗತಿಯು ಸ್ಥಗಿತವಾಗುವುದನ್ನು ನೋಡಲಾರೆ. ಜನರು ಇದರ ಲಾಭ ಪಡೆದುಕೊಳ್ಳಬಹುದು. ಅಲ್ಲದೆ, ತ್ವರೆಮಾಡುವುದು ನನ್ನ ಸ್ವಭಾವದಲ್ಲಿಯೇ ಬಂದಿದೆ. ಅಭ್ಯಾಸಿಯನ್ನು ನಿರಸನ ಮತ್ತು ಅದರಾಚೆಯ ಸ್ಥಿತಿಗಳಿಗೆ ಕೊಂಡೊಯ್ಯುವ ಸಂಗತಿಗಳೆಂದರೆ ಅವನ ವ್ಯಾಕುಲತೆ, ತಳಮಳ, ಅದರೊಟ್ಟಿಗೆ ಪ್ರೇಮ ಭಕ್ತಿಗಳೂ ಆವಶ್ಯಕ. ಈಗ ನಿನ್ನ (ಬಳಿಯಿರುವ) ಸತ್ಸಂಗಿಗಳಲ್ಲಿ ನಿಜವಾಗಿ ಈಶ್ವರಪ್ರೇಮಿಗಳು ಯಾರು ಎಂಬುದನ್ನು ನೀನೇ ಕಂಡುಕೊಳ್ಳಲು ಪ್ರಯತ್ನಿಸು.

ಯಾರೋ ಒಬ್ಬರಲ್ಲಿ 'ಒಂದು' (ಪ್ರಮಾಣ) ಪ್ರೇಮವಿದ್ದರೆ, ಇನ್ನೊಬ್ಬನಲ್ಲಿ ಅರ್ಧ ಮತ್ತೊಬ್ಬನಲ್ಲಿ ಕಾಲು ಭಾಗದಷ್ಟಿರುತ್ತದೆ. ಅವರನ್ನು ಕಠಿಣ ಶಬ್ದಗಳಲ್ಲಿ ತಿಳಿಹೇಳಿದರೆ, ಸತ್ಸಂಗವನ್ನು ಬಿಟ್ಟುಬಿಡುವಷ್ಟು, ಇನ್ನು ಕೆಲವರು ಕೋಪ ಮತ್ತು ಹತಾಶೆಯಿಂದ ಚಡಪಡಿಸುವಷ್ಟು ಕೆಳಮಟ್ಟದವರೂ ಕಾಣಸಿಗುತ್ತಾರೆ. ಇದರ ಅರ್ಥವಿಷ್ಟೆ : ಅವರು ತಮ್ಮ ಅಹಮಿಕೆಯನ್ನು (ಸ್ವಾರ್ಥವನ್ನು) ತ್ಯಜಿಸುವ ಬದಲಿಗೆ ಅದನ್ನು ಇನ್ನೂ ಗಟ್ಟಿಗೊಳಿಸುತ್ತಾರೆ. ಅದು ನನ್ನ ಕರ್ತವ್ಯವೆಂದು ಜನರು ತಿಳಿದಾರು.

ಆದರೆ, ಅವರು ಎಷ್ಟರ ಮಟ್ಟಿಗೆ ಅರ್ಹರಾಗುತ್ತಾರೋ, ಅಷ್ಟರಮಟ್ಟಿಗೆ ಮಾತ್ರ ಅದು ನನ್ನ ಕರ್ತವ್ಯವಾಗುತ್ತದೆ ಎಂಬುದನ್ನೂ ಯೋಚಿಸಬೇಕಲ್ಲವೆ ? ನಾನು ನನ್ನ ಕರ್ತವ್ಯವಿದ್ದಮಟ್ಟಿಗೆ ಎಲ್ಲರನ್ನೂ ಪ್ರೀತಿಸುತ್ತೇನೆ. ನಾನು ಎಲ್ಲರಿಗೂ ಸಂಪೂರ್ಣ ಆತ್ಮಸಮರ್ಪಣೆ ಮಾಡಿರೆಂದು ಕೇಳಿಕೊಳ್ಳುತ್ತೇನೆ, ಆದರೆ ಅವರು ಅದಕ್ಕೆ ಬೇಕಾದ ಪ್ರಾಥಮಿಕ ಸಂಗತಿಗಳಿಗೂ ಮನಸ್ಸು ಹಚ್ಚುವುದಿಲ್ಲ. ನನ್ನ ಕಡೆಯಿಂದ ನಾನು ಅವರನ್ನು ಸಂತುಷ್ಟಗೊಳಿಸಿ ಕೆಲಸ ತೆಗೆದುಕೊಳ್ಳಲು ವಿವಶನಾಗುತ್ತೇನೆ. ನಾನು ಯಾವಾಗಲೂ ಪತ್ರಗಳಲ್ಲಿ ಶಬ್ದಗಳನ್ನು ತೂಗಿ ನೋಡಿ (ಕಾಳಜಿಯಿಂದ) ಬಳಸುತ್ತೇನೆ– ಅವರಿಗೆ ಕೆಟ್ಟದೆನಿಸದರಲಿ ಎಂದು.

ಎಲ್ಲ ಆಧ್ಯಾತ್ಮಿಕ ಸ್ಥಿತಿಗಳನ್ನು ವಿಶೇಷತಃ 'ನಿರಸನ'ದ ಸ್ಥಿತಿಯನ್ನು ದಯಪಾಲಿಸುವವನು ಈಶ್ವರನೇ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಬಂಧು, ನನಗೆ ಏನೆಲ್ಲ ದೊರಕಿದೆಯೋ ಅದೆಲ್ಲವೂ ನನ್ನ ಗುರುಮಹಾರಾಜರಿಂದಲೇ ದೊರೆತಿದೆ. ಅಂಥ ಮಹಾತ್ಮರ ಕಡೆಗೆ ನನ್ನ ಮನಸ್ಸು ತಿರುಗಿಸಲು ಸಾಧ್ಯವಾಗುವ ಭಾವನೆಯನ್ನು ನನ್ನಲ್ಲಿ ಉಂಟುಮಾಡಿದುದಕ್ಕೋಸ್ಕರ ನಾನು ಈಶ್ವರನಿಗೆ ಅವಶ್ಯ ಕೃತಜ್ಞತೆ ಸಲ್ಲಿಸಬೇಕು. ದೇವರಿಂದ ಕೆಲಸ ಸಾಧಿಸಿಕೊಳ್ಳುವ ವಿಧಾನವು, ನಾವು ಗುರುಗಳಿಂದ ಪಡೆಯುವ ರೀತಿಯದೇ ಇದೆ; ಅದರ ಮೂಲಕ ನಾವು ನೇರವಾಗಿ ಈಶ್ವರಪ್ರೇಮವನ್ನು ಬೆಳೆಸಿಕೊಳ್ಳುತ್ತೇವೆ; ಅದು ತುಂಬಾ ಒಳ್ಳೆಯದು ಕೂಡ, ಆದರೆ, ಇದಕ್ಕಿಂತ ಹೆಚ್ಚು ಉತ್ತಮ ವಿಧಾನ ಬೇರೆ ಯಾವುದೂ ಇಲ್ಲಿದಿದ್ದಾಗ್ಯೂ ಈ ವಿಧಾನವನ್ನು ಅಂಗೀಕರಿಸಿದವರು ಬಹಳ ಕಡಿಮೆ. ಅಭ್ಯಾಸಿಯು ಗುರುವಿನಲ್ಲಿ ಭಕ್ತಿ ಮತ್ತು ವಿಧೇಯತೆಗಳನ್ನು ಬೆಳೆಸಿಕೊಳ್ಳುತ್ತ ಹೋಗಬೇಕು; ಹೆಚ್ಚಿಗೆ ಒಂದು ವೇಳೆ ಆಗದಿದ್ದರೂ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಕರ ಬಗ್ಗೆ ಹೊಂದಿರುವಷ್ಟಾದರೂ ಸರಿಯೆ; ಅದು ಅವನ ಕರ್ತವ್ಯವೂ ಹೌದು. ಇದರಿಂದ ಗುರುವಿಗೆ (ಮಾರ್ಗದರ್ಶಕನಿಗೆ) ಏನೂ (ಲಾಭ) ಸಿಗುವುದಿಲ್ಲ. ಆದರೆ ಅಭ್ಯಾಸಿಯು ಲಾಭ ಹೊಂದುತ್ತಾನೆ. ಅವನು ಇದನ್ನು (ನಿರಸನ) ಪಡೆಯಲು ಪಾತ್ರನಾಗುತ್ತಾನೆ. ನಿಜವಾಗಿ ಗುರು ಅಥವಾ ಮಾರ್ಗದರ್ಶಕರಾದವರು ತಮಗೋಸ್ಕರ ಗೌರವ ಅಥವಾ ಕೀರ್ತಿ (ಹೆಸರು) ಬಯಸುವುದಿಲ್ಲ. ಆದರೆ ಜನ ಸಾಮಾನ್ಯರು ಗೌರವ ತೋರಿಸಲಾಗದಂಥ ಕೆಲಸಗಳನ್ನು ಬಹಿರಂಗದಲ್ಲಿ ಮಾಡುವ ಸಂತರ ಉದಾಹರಣೆಗಳೂ ಸಿಗುತ್ತವೆ; ಕೇವಲ ಕೆಲವೇ ಆಯ್ದ ಶಿಷ್ಯರನ್ನುಳಿದು ಉಳಿದವರು ಅವರನ್ನು ಬಿಟ್ಟುಬಿಡುತ್ತಾರೆ. ಕಬೀರರದು ಅಂಥ ಒಂದು ಉದಾಹರಣೆ; ಒಂದಾನೊಂದು ಸಮಯದಲ್ಲಿ ಅವರು ಅದನ್ನೇ ಮಾಡಿದ್ದರು.

**ಬಂಧು ಶುಕ್ಲಾಜಿಯವರಿಗೆ :** ಬಂಧು, ನನಗೆ ಅತ್ಯಂತ ಪ್ರಿಯವಾದ ಸ್ಥಿತಿಯಲ್ಲಿ ನಿಮ್ಮನ್ನು ನಾನು ತರಲು ಸಾಧ್ಯವಾಗಬಹುದಾಗುವಂತೆ ನಿಮ್ಮನ್ನು ರೂಪಿಸಿಕೊಳ್ಳಿರಿ. ಒಂದು ವೇಳೆ ಅದು ಸಾಧ್ಯವಾಗದೆ ಹೋದರೆ, ನೀವು ಸಂಪೂರ್ಣ ನಿರಸನ ಸ್ಥಿತಿಯನ್ನು ನನ್ನ ಜೀವಿತಕಾಲದಲ್ಲಿಯೇ ಪಡೆಯಬೇಕು; ನಾನು ಇದನ್ನು ಎಲ್ಲರಿಗೂ



ಹೇಳುತ್ತೇನೆ. ನಮ್ಮ ಗುರುಮಹಾರಾಜರ ಈ ಸಂಸ್ಥೆ ಅತ್ಯಂತ ಚಿಕ್ಕದಿರಬಹುದು; ಆದರೆ, ಇಲ್ಲಿ ದೊರೆಯುವ ಆಧ್ಯಾತ್ಮಿಕ ಶಿಕ್ಷಣ (ತರಬೇತಿ) ಜಗತ್ತಿನಲ್ಲಿ ಬೇರೆ ಎಲ್ಲಿಯೂ ದೊರೆಯಲಾರದು ಎಂದು ನಾನು ಅಧಿಕಾರಯುತವಾಗಿ ಆಣೆಯಿಟ್ಟು ಹೇಳಬಲ್ಲೆ. ಅಲ್ಲದೆ ಪ್ರತಿಯೊಂದು ಯುಗದಲ್ಲಿಯೂ ಈ ವಿಷಯವನ್ನು ಅರಿತಿರುವವರು ಮತ್ತು ಕಲಿಯಬಯಸುವವರು ತೀರ ಕಡಿಮೆ ಎಂಬುದು ಸತ್ಯವೇ.

ಯಾರಿಗೆ ಮೋಕ್ಷ ಪ್ರಾಪ್ತಿಮಾಡಿಕೊಳ್ಳುವುದಿತ್ತೋ, ಅವರು ಈ ಮಿಷನ್ನನ್ನು ನಿಜವಾದ ಆಸಕ್ತಿಯಿಂದ ಸೇರಿಕೊಂಡರು. ಈ ಕಾಲದಲ್ಲಿ ಬಹುತೇಕವಾಗಿ ಜನರು ಮೋಕ್ಷವನ್ನು ಬಯಸುವುದಿಲ್ಲ. ಯಾಕೆಂದರೆ, ಅವರಿಗೆ ಮೋಕ್ಷವೆಂದರೇನು, ಆ ಸ್ಥಿತಿ ಏನಿದೆ ಎಂಬುದು ಗೊತ್ತಿಲ್ಲ, ಅಷ್ಟೇ ಅಲ್ಲ, ಅದನ್ನು ಅವರು ಅರಿತುಕೊಳ್ಳಲೂ ಬಯಸುವುದಿಲ್ಲ. ಮೋಕ್ಷಹೊಂದುವುದರ ಬದಲಿಗೆ, ಅವರು ಮೋಟರು, ದೊಡ್ಡ ಮಹಲುಗಳು, ಸಾಕಷ್ಟು ಹಣ ಇವುಗಳನ್ನು ಹೆಚ್ಚು ಬಯಸುತ್ತಾರೆ. ಈ ವಸ್ತುಗಳು, ಎಲ್ಲಾದರೂ ಅವರ ಕೈತಪ್ಪಿ ಕಳೆದು ಹೋದರೆ ಏನಾಗಬಹುದೆಂಬುದನ್ನು ಅವರು ಯೋಚಿಸುವುದಿಲ್ಲ. ಹೆಚ್ಚು ಹಣವುಳ್ಳ ಜನರು ಸಾಮಾನ್ಯವಾಗಿ ಎಷ್ಟು ಚಿಂತಾಗ್ರಸ್ತರಾಗಿರುವರೆಂದರೆ ಅವರು ನಿದ್ರಾಹೀನತೆ ಅಥವಾ ಇನ್ನಿತರ ರೋಗಗಳಿಂದ ಬಳಲುತ್ತಾರೆ. ಜೀವನವಿಡೀ ಕೇವಲ ನೆಲಗಡಲೆ, ರೊಟ್ಟಿ, ಸವುತೇಕಾಯಿಯ ಮೇಲೆಯೇ ಬದುಕುತ್ತಾರೆ.

ನಮ್ಮ ಭಾರತದಲ್ಲಿ ಮಹಾತ್ಮರೆನಿಸಿಕೊಂಡವರು, ವಿಶೇಷವಾಗಿ ಸನ್ಯಾಸಿಗಳು ಎಷ್ಟು ಅನಾಹುತ ಮತ್ತು ಹಾನಿ ಎಸಗಿದ್ದಾರೆಂದರೆ ಪ್ರಾಯಶಃ ಮುಸ್ಲಿಮರ ಖಡ್ಗಗಳೂ ಅಷ್ಟು ಅನಾಚಾರವೆಸಗಿರಲಿಕ್ಕಿಲ್ಲ, ಅಲ್ಲದೆ ನಮ್ಮ ಬುದ್ಧಿಗೆ ಮಂಕು ಕವಿಯಿತು; ಸರಿ– ತಪ್ಪುಗಳನ್ನು ವಿಂಗಡಿಸುವ ವಿವೇಚನಾಶಕ್ತಿ ಹೊರಟು ಹೋಯಿತು. ಮತ್ತು ನಾವು ನಮ್ಮ ವಿವೇಕವನ್ನು ಉಪಯೋಗಿಸುವುದು ಒಂದು ಪಾಪವೆನ್ನುವ ಮಟ್ಟಿಗೆ, ಬಣ್ಣದ ಬಟ್ಟೆಗಳಿಗೆ ಮಾರುಹೋದೆವು. ಅಂಥ ಅಯೋಗ್ಯರಿಗೆ ಸನ್ಯಾಸ ದೀಕ್ಷೆಯನ್ನು ಯಾಕೆ ಕೊಟ್ಟರೆಂದು ಜ್ಞಾನಿಗಳಾದ ಯೋಗ್ಯತೆಯುಳ್ಳ ಸಂತರನ್ನು ಹಾಗೂ ಸನ್ಯಾಸಿಗಳನ್ನು ನಾನು ಆಕ್ಷೇಪಿಸುತ್ತೇನೆ; ಹಾಗೆ ಮಾಡಿದುದರ ಪರಿಣಾಮವಾಗಿ ಅವರು ತಮ್ಮನ್ನು ತಾವೇ ಜ್ಞಾನಿಗಳೆಂದೂ, ಗುರುಗಳೆಂದೂ ಭಾವಿಸಲು ತೊಡಗಿದರು. ಅವರ ಪೈಕಿ, ಶಿಕ್ಷಣ ಪಡೆದಿರುವಂಥವರು ವೇದಿಕೆಗಳ ಮೇಲೆ ಉಪನ್ಯಾಸಗಳನ್ನು ಕೊಡಲಾರಂಭಿಸಿದರು. ಅವರಿಗೆ ತಮ್ಮದೇ ಸ್ವಂತ ಅನುಭವವೇನೂ ಇರಲಿಲ್ಲ. ಅವರಲ್ಲಿ ಕೆಲವರು ಯೋಗ್ಯತಾವಂತರೂ ಇದ್ದಾರೆ; ಅವರೇನು ಮಾಡಿದರೆಂದರೆ, ಕ್ಷಯರೋಗವನ್ನು ಗುಣಪಡಿಸಿ (ಪವಾಡಗಳ ಮೂಲಕ) ತಮ್ಮ ಯೋಗ್ಯತೆಯನ್ನು ತೋರಿಸಿದರು.

ಯಾರಾದರೂ ಘನವಸ್ತುಗಳ (ಮೂರ್ತಿ ಪೂಜೆ ಅಥವಾ ಸ್ಥೂಲ ಪ್ರಕಾರದ ಪೂಜೆ) ಪೂಜೆಯಲ್ಲಿ ತೊಡಗಿದರೆ ಅವನನ್ನು ಬಹಳೇ ಕೊಂಡಾಡಲಾಗುತ್ತದೆ.

F-4-Books-PM-7-Anantyatre-72



ಮತ್ತೆ, ಅವನು ಯಾವುದಾದರೂ ಪೂಜೆಯ ಸಲಹೆ ಮಾಡಿದರೆ, ಅದು ಸ್ವಾಭಾವಿಕವಾಗಿಯೇ ಸ್ಥೂಲರೂಪದ್ದಿರುತ್ತದೆ. ಅದಕ್ಕೆ ಕಾರಣವೇನು ? ಅವನು ತನ್ನ ಗುಂಪನ್ನು ಸ್ಥಾಪಿಸಿಕೊಳ್ಳಲು ಬಯಸುತ್ತಾನೆಂದು ಹೇಳುತ್ತೇನೆ. ನಿಜವಾದ ಆಧ್ಯಾತ್ಮಿಕ ಜ್ಞಾನವನ್ನು ನೀಡದ ಸಂಸ್ಥೆಯು ಒಂದು ಗುಂಪುಗಾರಿಕೆಯಲ್ಲದೆ ಬೇರೆ ಅಲ್ಲವೆಂಬುದು ನನ್ನ ವಿಚಾರ. ಅವರಿಗೆ ತಿಳಿಸಲಾದ ವಿಧಾನಗಳೆಲ್ಲವೂ ಅವರನ್ನು ಭಗವಂತನ ಸಾಮೀಪ್ಯಕ್ಕೆ ಕರೆದೊಯ್ಯುವ ಬದಲಿಗೆ ಅವನಿಂದ ಬಲು ದೂರ ಒಯ್ಯುತ್ತವೆ. ಅಥವಾ ಅವರನ್ನು ಮರದಿಂದ, ಪಿಠೋಪಕರಣ ಮಾಡಿದಂತೆ ಮಾಡಲಾಗುತ್ತದೆ. ಅವರು ಏನೂ ಮಾಡದೆ ಹೋಗಿದ್ದರೆ ಹೆಚ್ಚು ಚೆನ್ನಾಗಿರುತ್ತಿತ್ತು; ಅವರು ಬೇಕಾದಂತೆ ಮಣಿಸಲು ಬರುವಂತಹ ಹಸಿ ಕಟ್ಟಿಗೆಯಾಗಿ ಉಳಿಯುತ್ತಿದ್ದರು. ಈಗ ಸನ್ಯಾಸಿಯ ಮುಖ್ಯ ಕಾರ್ಯವು ಶಿಲಾಯುಗದ ಪುನರುಜ್ಜೀವನವೇ ಆಗಿದೆ; ಮತ್ತು ಜನರಿಗೆ ಅದು ಬಹಳ ಪ್ರಿಯವೆನಿಸುತ್ತದೆ. ಸಾಮಾನ್ಯ ಜನರು ಅವರನ್ನು ಮಹಾತ್ಮರೆಂದು ತಿಳಿದು ಅವರಿಗೆ ಶರಣಾಗುತ್ತಾರೆ.

ಇದು ಎಂಥ ಸಾಂಕ್ರಾಮಿಕ ರೋಗವಾಗಿದೆಯೆಂದರೆ ಅದನ್ನು ಕಾಲರಾ ಅಥವಾ ಪ್ಲೇಗು ಎಂಬಂತೆ ಕರೆಯಬಹುದು. ಕಬೀರರು ಬಹಳ ಸುಂದರವಾಗಿ ಹೇಳಿದ್ದಾರೆ. 'ಬ್ರಹ್ಮವನ್ನು ಬಿಟ್ಟುಕೊಟ್ಟರು, ಶಿಲೆಯನ್ನು ಪೂಜಿಸತೊಡಗಿದರು'. ಮೂರ್ತಿಪೂಜೆ ಅತ್ಯಂತ ಸ್ಥೂಲ ಪೂಜೆಯಾಗಿದೆ. ಇನ್ನು ಮಂತ್ರಜಪ ಮುಂತಾದವುದರಿಂದ ಜನರು ಇನ್ನೂ ಕೆಟ್ಟುಹೋಗುತ್ತಾರೆ (ದಾರಿತಪ್ಪುತ್ತಾರೆ). ಅದರಿಂದಾಗುವ ಹಾನಿಗಳನ್ನು ಎಷ್ಟು ಹೇಳಲಿ ? ಅಭ್ಯಾಸಿಗಳ ಒಳಿತಿಗೋಸ್ಕರ ಸಂಕ್ಷೇಪವಾಗಿ ಹೇಳಿದ್ದೇನೆ. ನಾನು ಹೇಳಲೇ ಬೇಕಿದೆ; ಅದೂ ಕೂಡ ಕೆಲವೇ ನಮ್ಮವರೇ ಆದವರಿಗೆ. ನಾನು ಮಹಾತ್ಮರು, ಸನ್ಯಾಸಿಗಳು ಮತ್ತು ಅವರ ಅನುಯಾಯಿಗಳಿಗೆ ಹೇಳಿದರೆ, ಅವರು ನನ್ನೊಡನೆ ಬೇಸರಪಟ್ಟುಕೊಳ್ಳುತ್ತಾರೆ. ಆದುದರಿಂದ ನಾನು ಅವರಿಗೆ ಹೇಳಲುಹೋಗುವುದಿಲ್ಲ; ಅವರ ಬಗ್ಗೆ ಕನಿಕರಪಡುತ್ತೇನೆ, ಅಷ್ಟೆ. ಆದರೆ, ಇಷ್ಟು ಎಚ್ಚರಿಕೆಯನ್ನು ಮಾತ್ರ ಕೊಡಬಯಸುತ್ತೇನೆ : ಪ್ರಕೃತಿಯು ಇದನ್ನು ಬಹಳ ತೀಕ್ಷ್ಣದೃಷ್ಟಿಯಿಂದ ನೋಡುತ್ತಿದೆ, ಏನಾಗುವುದೋ ಗೊತ್ತಿಲ್ಲ. ಒಂದು ಮಾತು ಖಂಡಿತ. ನನಗೆ ಪ್ರಕೃತಿಯು ಯಾವ ನಿಯಂತ್ರಣಾಧಿಕಾರವನ್ನು ಕೊಟ್ಟಿದೆಯೋ ಅದರಲ್ಲಿ ಅದು ಹಸ್ತಕ್ಷೇಪ ಮಾಡುವುದಿಲ್ಲ; ಇದು ಪ್ರಕೃತಿಯ ದಯೆ ಮತ್ತು ಅನುಗ್ರಹ. ಆದರೆ ನಾನು ನನ್ನನ್ನು ಗುರುಮಹಾರಾಜರ ಕೈಗೆ ಒಪ್ಪಿಸಿಕೊಂಡಿದ್ದೇನೆ. ಪ್ರಕೃತಿಯೂ ಕೂಡ ನನ್ನನ್ನು ಅವರ ಕೈಗೆ ಒಪ್ಪಿಸಿದೆ. ಆದುದರಿಂದ ಈ ಸೇವಕನು ಅಪ್ಪಣೆಯ ಪ್ರತೀಕ್ಷೆಯಲ್ಲಿದ್ದಾನೆ.

ಇನ್ನೊಂದು ಕಷ್ಟವಿದೆ; ನೀವುಗಳು ನನ್ನ ಬಹಳಷ್ಟು ಸಮಯ ತೆಗೆದುಕೊಳ್ಳುವಿರಾದ್ದರಿಂದ ಈಶ್ವರೀಯ ಕಾರ್ಯ ಮಾಡಲು ನನಗೆ ಹೆಚ್ಚು ಸಮಯ ಸಿಗುವುದಿಲ್ಲ. ವಿಶೇಷವಾಗಿ, ಬ್ರಹ್ಮವಿದ್ಯೆಯ ಬಗ್ಗೆ ನಿಜವಾದ ತೃಷೆ (ಜಿಜ್ಞಾಸೆ) ಇಲ್ಲದವರೇ ನನ್ನಿಂದ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಅವರು ಶರಣಾಗತರಾದರೆ,



ನನ್ನ ಬಹಳಷ್ಟು ಸಮಯ ಉಳಿತಾಯವಾಗುತ್ತದೆ. ಯಾವ ಪರಿಶ್ರಮವನ್ನು ಪಡದೆ ಜನರು ಎಲ್ಲವನ್ನೂ ಪಡೆಯಲಿಚ್ಛಿಸುತ್ತಾರೆ. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ; ಯಾಕೆಂದರೆ ಇದಕ್ಕೋಸ್ಕರವೇ ನಾನು ತಯಾರುಮಾಡಲ್ಪಟ್ಟಿದ್ದೇನೆ. ಆದರೆ, ನನ್ನ ಸೇವೆಗೆ ಪ್ರತಿಯಾಗಿ ಜನರು ನನ್ನ ಬಗ್ಗೆ ವ್ಯಾಕುಲತೆಯನ್ನಾದರೂ ಪಡಲಿ; ಅದರಿಂದ ನನ್ನ ಈಶ್ವರೀಯ ಕಾರ್ಯಕ್ಕೆ ಹೆಚ್ಚು ಸಮಯ ನನಗೆ ಸಿಗಬಹುದು. ಅಭ್ಯಾಸಿಗಳು ಹೇಗಿರಬೇಕೋ ಹಾಗೆ ತಮ್ಮನ್ನು ರೂಪಿಸಿಕೊಂಡರೆ, ಅವರು ನನ್ನಿಂದ, ತನ್ನಿಂದತಾನೇ ಪ್ರಾಣಾಹುತಿ (Transmission) ಪಡೆಯುತ್ತಲೇ ಇರುತ್ತಾರೆ. ಈ ಪತ್ರ ಮತ್ತು ಈ ಹಿಂದಿನ ಪತ್ರದ ಉದ್ದೇಶ ಮತ್ತು ತಾತ್ಪರ್ಯವೇನೆಂದರೆ ಜನರು ಉಳಿದೆಲ್ಲವನ್ನೂ ಬಿಟ್ಟು ಒಂದೇ ಒಂದು ವಿಧಾನವನ್ನು ಅನುಸರಿಸಲಿ ಮತ್ತು ತಮ್ಮೊಳಗೆ ಆಧ್ಯಾತ್ಮಿಕ ಜ್ಞಾನವನ್ನು ಬೆಳೆಸಿಕೊಳ್ಳುವ ಮತ್ತು ಕಲಿಯುವ ಕಾತರವನ್ನು ಬೆಳೆಸಿಕೊಳ್ಳಲಿ ಎಂಬುದೇ ಆಗಿದೆ. ಹಾಗೇ ಆಗಲಿ ಎಂದು ಈಶ್ವರನು ಕೃಪೆಮಾಡಲಿ.

ಪ್ರಿಯ ಪುತ್ರಿ ಮತ್ತು ಬಂಧು ಶುಕ್ಲಾಜಿಯವರೆ, ಇಷ್ಟು ಸುದೀರ್ಘ ಪತ್ರಗಳನ್ನು ಬರೆದು ನಾನು ಸಾಕಷ್ಟು ನಿಮ್ಮ ಸಮಯ ತೆಗೆದುಕೊಂಡಿದ್ದೇನೆ. ಇಷ್ಟುದ್ದದ ಪತ್ರಗಳನ್ನು ಬರೆಯುವುದರ ಬದಲಾಗಿ ನಾನು ನಿಮಗಿಬ್ಬರಿಗೂ ಪ್ರಾಣಾಹುತಿ ಕೊಟ್ಟರೆ, ಅಥವಾ, ನೀವು ಅಷ್ಟು ಸಮಯ ಧ್ಯಾನಮಾಡಿದರೆ ಹೆಚ್ಚು ಚೆನ್ನಾಗಿತ್ತು ಎಂದು ನೀವಿಬ್ಬರೂ ಭಾವಿಸಬಹುದು. ನನ್ನ ಪತ್ರಗಳನ್ನು ಓದಿ ನೋಡಿರಿ; ನಿಮ್ಮ ಸಮಯ ವ್ಯರ್ಥವಾಗಿಲ್ಲವೆಂಬುದು ನಿಮಗೆ ಮನದಟ್ಟಾದೀತು. ಗುರುಮಹಾರಾಜ ಲಾಲಾಜಿಯವರ ಕೃಪೆಯಿಂದ, ನನ್ನ ಎಲ್ಲ ಪತ್ರಗಳಲ್ಲಿಯೂ ದೈವೀ ಪ್ರಾಣಾಹುತಿಯು ಪ್ರವಹಿಸುತ್ತಿರುವುದನ್ನು ನೀವು ಕಾಣದೆ ಇರಲಾರಿರಿ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೧ **ಪತ್ರ ಸಂಖ್ಯೆ – ೨೮೬** ಷಾಹಜಹಾನಪುರ
೦೮–೦೩–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭ ಆಶೀರ್ವಾದಗಳು,

ಇಷ್ಟೊಂದು 'ಆಲ್ಹಾ' (ವೀರನೊಬ್ಬನ ಹೆಸರು) ಬರೆದ ನಂತರ, ಈಗ ಮಾರ್ಚ ೪ರ ನಿನ್ನ ಪತ್ರಕ್ಕೆ ಉತ್ತರ ಬರೆಯಲು ಸಮಯ ಎತ್ತಿಕೊಂಡಿದ್ದೇನೆ. ನಾನು ಇದಕ್ಕೆ 'ಆಲ್ಹಾ' ಎಂದು ಕರೆದುದು ಯಾಕೆಂದರೆ ಜನರು 'ಆಲ್ಹಾ' ಎಂಬುದನ್ನು ಕೇಳುತ್ತಲೇ ಅವರ ಧೈರ್ಯ ತುಂಬಿಬರುತ್ತದೆ. ಅದೇ ರೀತಿ ನನ್ನ ಪತ್ರದಲ್ಲಿಯ ವಿಷಯದ ಕುರಿತು ಕೇಳಿದಾಗ ಅವರ ಹೃದಯ ಮತ್ತು ಮನಸ್ಸುಗಳು ಸ್ವಲ್ಪಹೊತ್ತು ಹೊಸತನವನ್ನು ಪಡೆದುಕೊಳ್ಳುತ್ತವೆ. ಅದಕ್ಕೆ 'ಆಲ್ಹಾ' ಎಂದು ಕರೆಯಬೇಕು. ಅಭ್ಯಾಸಿಗಳು 'ರಾಮ'ನನ್ನು ಪಡೆಯದ ಹೊರತು ಶಾಂತಿಯಿಲ್ಲವೆಂದೆನಿಸುವಷ್ಟು

ವ್ಯಾಕುಲತೆಯನ್ನು ಬೆಳೆಸಿಕೊಂಡರೆ, ಆಗ ಅದಕ್ಕೆ 'ರಾಮ–ಕಥಾ' (ರಾಮ್ ಕಹಾನಿ) ಎಂದು ಕರೆಯಬಹುದು.

ನಿನ್ನ ಧೈರ್ಯ ಮತ್ತು ವಿಶ್ವಾಸಗಳನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ಆದರೆ ವಿಶ್ವಾಸದ (ಶ್ರದ್ಧೆಯ) ಇನ್ನೊಂದು ಉಚ್ಚತರ ಅವಸ್ಥೆ ಇದೆ. ಅದು ಒಮ್ಮೆ ನನ್ನಲ್ಲಿ ಬಂದಿತ್ತು. ನೀನು ಆ ಹಂತವನ್ನು ತಲುಪಿದಾಗ ನಾನು ನಿನಗೆ ಬರೆಯುತ್ತೇನೆ. ಆ ಹಂತ ಇನ್ನೂ ಬಲು ದೂರ ಇದೆ; ಆದರೆ ಅದು ಉಂಟಾಗುವುದು ಈಗ ನೀನು ಇರುವ ಅವಸ್ಥೆಯ ರೀತಿಯಲ್ಲಿಯೇ. ನಿನ್ನ ಸ್ಥಿತಿಯನ್ನು ನೋಡಿ ನನಗೆ ಬಹಳೇ ಸಂತೋಷ ಉಂಟಾಗುತ್ತದೆ; ಮತ್ತು ಈ ಪದ್ಧತಿಯನ್ನು ಅನುಸರಿಸುವವರು ಅಥವಾ ಆಧ್ಯಾತ್ಮಿಕತೆಯ ಮಾರ್ಗದಲ್ಲಿ ನಡೆಯುತ್ತಿರುವ ಪ್ರತಿಯೊಬ್ಬರಿಗೂ ನಾನು ನಿನ್ನ 'ಸ್ಥಿತಿ'ಯನ್ನು ಕುರಿತು ಮೆಚ್ಚುಗೆಯ ಮಾತುಗಳನ್ನಾಡುತ್ತೇನೆ. ಆದರೆ ನನ್ನ ದೃಷ್ಟಿಗೆ ನಾನೇನು ಮಾಡಲಿ ? ಆಧ್ಯಾತ್ಮಿಕ ಉನ್ನತಿಯ ಸಮುದ್ರದಲ್ಲಿ ನನಗಾದರೋ ಇನ್ನೂ ಒಂದು ಗುಳ್ಳೆಯಂತೆ ಕಂಡುಬರುತ್ತೀಯೆ.... 'ನನ್ನ ಇಷ್ಟೆಲ್ಲ ಪ್ರೇಮ ಮತ್ತು ಪರಿಶ್ರಮಗಳ ಫಲ ಕೇವಲ *ಒಂದು ಗುಳ್ಳೆಯಷ್ಟು ಮಾತ್ರವೇ ?*' ಎಂದು ಕೈಚೆಲ್ಲಿ ಕೂಡ್ರಬೇಡ. ಆದ್ದರಿಂದ ಮಗಳೆ, ನೀನು ಇಷ್ಟುಮಟ್ಟದ ಪ್ರಗತಿ ಹೊಂದಿದುದರ ಹೊರತಾಗಿಯೂ ನನ್ನ ಕಣ್ಣಿಗೆ ಒಂದು 'ಗುಳ್ಳೆ'ಯೇನೋ ಎಂಬಂತೆ ತೋರಿಬಂದೆ ಎಂದು ನಾನು ಹೇಳಿದರೆ, ಅದು ನನ್ನ ದೃಷ್ಟಿಯ ದೋಷವೇ ಅಲ್ಲವೇನು ?

ಇದೇ ಆಸಕ್ತಿ ಮತ್ತು ವ್ಯಾಕುಲತೆ ಹೀಗೆಯೇ ಮುಂದುವರಿದರೆ, ಭಗವದಿಚ್ಛೆಯಿದ್ದರೆ, ನೀನು ಉನ್ನತಮಟ್ಟದ ಆನಂದವನ್ನು ಅನುಭವಿಸುವುದು ಖಂಡಿತವೆನಿಸುವಂಥ ಲಕ್ಷಣಗಳಿವೆ. ನನ್ನ 'ಹುಚ್ಚುತನ'ದ ಕಿಡಿಗಳು ನಿಶ್ಚಿತವಾಗಿಯೂ ನಿನ್ನ ಮೇಲೆ ಪ್ರಭಾವ ಬೀರಿವೆಯೆಂಬುದನ್ನು ನಿನ್ನ ಪತ್ರ ತೋರಿಸುತ್ತದೆ. ಅಭ್ಯಾಸಿಗಳಲ್ಲಿ ಇಂಥ ಒಂದು ಸ್ಥಿತಿ ಉಂಟಾಗಬಹುದಾದರೆ, ಅವರಲ್ಲಿ ಬಹಳ ಸುಧಾರಣೆಯಾದೀತು. ಪ್ರಾರಂಭದಿಂದಲೇ ನೀನು 'ಪ್ರೇಮಿ' ಎಂಬ ಭಾವ ತಳೆದಿದ್ದೀಯೆ. ಅದರ ಪರಿಣಾಮವಾಗಿಯೇ ಅಭ್ಯಾಸಿ (ಸಾಧಕ) 'ಪ್ರೇಮಿ' ಅಥವಾ ಪ್ರಿಯತಮನಾಗುತ್ತಾನೆ. ಆದರೆ ನೀನು ಇನ್ನೂ ಸಂಪೂರ್ಣವಾಗಿ ಪ್ರೇಮಿಯಾಗಿಲ್ಲ. ಅದು ಯಾವ ಹೊತ್ತಿನಲ್ಲಿಯಾದರೂ ಉಂಟಾಗುವ ಸಾಧ್ಯತೆ ಇದ್ದೇ ಇದೆ. ಆದರೆ, ನಿನ್ನ 'ಸ್ವಂತಿಕೆ' (self) (ಆತ್ಮಪ್ರತ್ಯಯ) ಇನ್ನೂ ಪೂರ್ತಿಯಾಗಿ ಅಳಿದುಹೋಗಿಲ್ಲ ಎಂದು ನಾನು ಖಂಡಿತವಾಗಿ ಹೇಳಬೇಕು. ಉನ್ನತ ಹಂತದಲ್ಲಿ ಈಶ್ವರನು ಅದನ್ನು ಅನುಗ್ರಹಿಸುತ್ತಾನೆ. ಅಗ ಒಂದಿಷ್ಟು ನಮ್ಮ ಭಾಗ್ಯಕ್ಕೆ ದಕ್ಕುತ್ತದೆ.

ವಾಸ್ತವವಾಗಿ ಸಂಪೂರ್ಣ 'ನಿರಸನ'ದಲ್ಲಿ 'ತನ್ನತನ' (self) ಹೊರಟು ಹೋಗುತ್ತದೆ, ನನ್ನ ಅಭಿಪ್ರಾಯದಲ್ಲಿ ನಿಜವಾದ 'ಮಹಾತ್ಮ' ಎಂದೆನಿಸಿಕೊಳ್ಳುದೇನಿರುವುದೋ ಅದು ಅದಕ್ಕೂ ನಂತರ ಪ್ರಾರಂಭವಾಗುತ್ತದೆ.



ಇದರ ಅರಿವು ಯಾರಿಗುಂಟು ? ನನಗಂತೂ ಕೆಲವು ಸಮಯ ಜನರು ಈ ಸ್ಥಿತಿಯನ್ನು ಪಡೆಯಲಿ ಎಂಬ ತಹತಹಿಕೆಯುಂಟಾಗುತ್ತದೆ. 'ನಾನು ನಮ್ರತೆಯ ಸ್ಥಿತಿಯಲ್ಲಿ ಲಯವಾಗುತ್ತ ಹೋಗುತ್ತಿದ್ದೇನೆ' ಎಂದು ನೀನು ಬರೆದು, ಮುಂದಕ್ಕೆ 'ಇದೇ ನನ್ನ ರೂಪವಾಗಿದೆ, ಮತ್ತು ಈ ಸ್ಥಿತಿ ಇದ್ದೂ ಕೂಡ ಅದರ ಅರಿವು ಇಲ್ಲದವನಾಗಿದ್ದೇನೆ' ಎಂದೂ ಬರೆದಿದ್ದೀಯೆ. ಇದು ತುಂಬಾ ಒಳ್ಳೆಯ ಸ್ಥಿತಿ. ನೀನು ಲಯಾವಸ್ಥೆಯ ಸೀಮೆಯನ್ನು ತಲುಪುತ್ತಿರುವೆಯೆಂಬುದನ್ನು ಇದು ಸೂಚಿಸುತ್ತದೆ. ನೀನೇ ಸ್ವತಃ (ಸ್ವಪ್ರಯತ್ನದಿಂದ) ಅದರಲ್ಲಿ ಯಾವ ಮಟ್ಟದವರೆಗೆ 'ಲಯ' ಹೊಂದುತ್ತೀಯೆ ಮತ್ತು ಎಷ್ಟು ಪ್ರಮಾಣದಲ್ಲಿ ಲಯ ಹೊಂದುತ್ತೀಯೆ ಎಂಬುದನ್ನು ನಾನು ಇನ್ನೂ ನೋಡಬೇಕಿದೆ. ನಾನಂತೂ ನಿನ್ನನ್ನು ಮೇಲಕ್ಕೆ ಕೊಂಡೊಯ್ಯುತ್ತಲೇ ಇದ್ದೇನೆ. ಅದರ ಪ್ರಭಾವದಿಂದಲೂ ಇದರಲ್ಲಿ 'ಲಯಾವಸ್ಥೆ' ಉಂಟಾಗಬಹುದು. ಮತ್ತು ನನಗೆ ಒಮ್ಮಿಂದೊಮ್ಮೆಲೆ ಪ್ರೇರಣೆಯ ಅಲೆ ಬಡಿದರೆ, ನಿನ್ನನ್ನು ಅದರಲ್ಲಿ ಲಯಗೊಳಿಸಲೂಬಹುದು. ಅಥವಾ ನೀನು ಅದರಲ್ಲಿ (ಸ್ವತಃ) ಸಂಪೂರ್ಣ ಲಯ ಹೊಂದುವ ಸಾಮರ್ಥ್ಯವನ್ನೂ ನೀಡಬಹುದು; ಅದು ನನಗೆ ಮೀರಿದ್ದೇನೂ ಅಲ್ಲ. ಇದೆಲ್ಲವೂ ಸದ್ಗುರುವಿನ ಇಚ್ಛೆಯನ್ನು ಅವಲಂಬಿಸಿದೆ. ನಾನು ನಿನ್ನನ್ನು ನಿಮ್ನ ಸ್ತರದಲ್ಲಿ ಇರಲು ಬಿಡುವುದಿಲ್ಲ. ಈ ಪತ್ರವನ್ನು ಬರೆಯಿಸುತ್ತಿರುವಾಗ ನಾನು ನಿನ್ನನ್ನು 'ಎನ್' (N) ಬಿಂದುವಿನ ವರೆಗೆ ತಲುಪಿಸಿದ್ದೇನೆ. ಭಗವಂತನ ಇಚ್ಛೆ ಇದ್ದರೆ, 'ಎನ್' (N) ಬಿಂದುವಿನ ಯಾತ್ರೆಯನ್ನು ಮೂರು ನಾಲ್ಕು ದಿನಗಳಲ್ಲಿ ಪ್ರಾರಂಭಿಸುತ್ತೀಯೆ. ನಾನು ನಿನ್ನನ್ನು 'ಎನ್' (N) ಬಿಂದುವಿಗೆ ಒಯ್ದಾಗ, ರಾತ್ರಿ ಸಮಯ ೯–೫೦ ಗಂಟೆ.

ಅಮ್ಮಾಜಿಯವರಿಗೆ ನನ್ನ ವಂದನೆ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೨ **ಪತ್ರ ಸಂಖ್ಯೆ – ೨೮** ಷಾಹಜಹಾನಪುರ
೧೪–೦೩–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಮಾರ್ಚ್ ೯, ೧೯೫೩ರ ನಿನ್ನ ಪತ್ರ ಕೈಸೇರಿತು. ನೀನು ಕ್ರಮಿಸಿದ ಬಿಂದುಗಳಿಗೆ ಎ, ಬಿ, ಸಿ, ಡಿ.... ಇತ್ಯಾದಿ ಹೆಸರುಗಳನ್ನು ನಾನು ಕೊಟ್ಟಿದ್ದೇನೆಂಬುದು ನಿನಗೆ ಗೊತ್ತಿದೆ. ನನಗೆ ತೋರುವ ಮಟ್ಟಿಗೆ. 'ಎ'ದಿಂದ 'ಝಡ್'ದ ವರೆಗೆ ಎಷ್ಟುಸಾರೆ ಎಣಿಸಿದಾಗ ಗ್ರಂಥಿಗಳು ಕೊನೆಗೊಳ್ಳುವುವೋ ಪರಮಾತ್ಮ ಬಲ್ಲ. ನಾನು ಪ್ರಯೋಗಕ್ಕೋಸ್ಕರ ಎಣಿಸುತ್ತಿದ್ದೇನೆ. ಎಲ್ಲಿಯವರೆಗೆ ಎಣಿಸಬೇಕೆಂದು ನನಗೆ ಆತಂಕ ಉಂಟಾಗುತ್ತದೆ. ನಾನೇನು ಮಾಡಬೇಕೆಂದು ನೀನೇ ಹೇಳು. ಪ್ರತಿಯೊಂದು

P-4-Books-PM-7-Anantyatre-74



ಬಿಂದುವಿನ (ಗ್ರಂಥಿ) ಯಾತ್ರೆಯೂ ನಡೆಯುವುದಕ್ಕಿಂತ ಒಳಿತು ಇನ್ನೇನಿದ್ದೀತು ? ನಾನು ಯಾರನ್ನಾದರೂ ಉನ್ನತ ಸ್ಥಿತಿಗೆ ಒಯ್ದರೆ, ಅದರ ಯಾತ್ರೆಯನ್ನು ಪೂರೈಸುವಕಡೆಗೂ ಲಕ್ಷ್ಯವಿಡುತ್ತೇನೆ. ಆದರೆ, ಪ್ರತಿಯೊಂದು ಬಿಂದು (ಗ್ರಂಥಿ)ವಿನಲ್ಲಿಯೂ ನೀನು ಯಾತ್ರೆಮಾಡಬೇಕೆಂದು ನಾನು ಬಯಸುವುದೇಕೆಂದರೆ ನಿನ್ನ ಅನುಭವಶಕ್ತಿ, ಈಶ್ವರ ಕೃಪೆಯಿಂದ ಬಹಳೇ ಚೆನ್ನಾಗಿದೆ. ಎಲ್ಲರಲ್ಲಿಯೂ ಈ ಸ್ಥಿತಿಗಳು ಉಂಟಾಗುವುದೇನೋ ಸರಿಯೆ; ಆದರೆ ಎಲ್ಲರಿಗೂ ಅದು ಅನುಭವಕ್ಕೆ ಸಿಗುವುದಿಲ್ಲ. ನನ್ನ ವಿಷಯದಲ್ಲಿ ನನಗೇ ತಿಳಿಯದು. ಆದರೆ ಲಾಲಾಜಿ ಮಹಾರಾಜರ ಮಹಾಸಮಾಧಿಯ ಕೆಲವು ದಿನ ಮೊದಲು ನಾನು ಕೆಲದಿನಗಳಮಟ್ಟಿಗೆ ಫತೇಹ್‌ಘಡಕ್ಕೆ ಹೋದಾಗ ನನಗೆ ಅತ್ಯುನ್ನತ ಸ್ಥಿತಿಯನ್ನು ದಯಪಾಲಿಸಿದರೆಂದು ತಿಳಿಸಿದ್ದರು. ಅದಾದ ನಂತರ ಲಾಲಾಜಿಯವರು ಮತ್ತೆ ಹನ್ನೆರಡು ವರ್ಷ ತೆಗೆದುಕೊಂಡು ಯಾವ ಯಾವ ಬಿಂದು (ಗ್ರಂಥಿ)ಗಳನ್ನು ನಾನು ತಲುಪುವಂತೆ ಮಾಡಿದರೋ, ಅವುಗಳಲ್ಲಿ ಯಾತ್ರೆಯನ್ನು ಮಾಡಲು ನನ್ನನ್ನು ಸಿದ್ಧಗೊಳಿಸಿದರೋ (ತಯಾರು ಮಾಡಿದರೋ) ಈಶ್ವರನೇ ಬಲ್ಲ. ಮತ್ತು ನನ್ನ ಸದ್ಯದ ಸ್ಥಿತಿ ತೆರೆದುಕೊಳ್ಳಲು ಪ್ರಾರಂಭವಾದಾಗ ಅವರು, ಮತ್ತೆ ಮೂರು ತಿಂಗಳು ಹಗಲೂ-ರಾತ್ರಿ ನನ್ನ ಮೇಲೆ ಲಕ್ಷ್ಯ ನೆಟ್ಟಿದ್ದರು. ರಾತ್ರಿಗಳಲ್ಲಿ, ಅವರು ನನ್ನೊಳಗೆ ಆಧ್ಯಾತ್ಮಿಕ ಶಕ್ತಿಯನ್ನು ತುಂಬುತ್ತಿರುವ ಅನುಭವ ನನಗಾಯಿತು. ತ್ವರೆಮಾಡುವುದು ನನ್ನ ಸ್ವಭಾವದಲ್ಲಿದೆ; ಯಾರಲ್ಲಿ ಭಗವತ್‌ಪ್ರೇಮ ಮತ್ತು ಆಸಕ್ತಿ ಇದೆಯೋ ಆ ಅಭ್ಯಾಸಿಗಳನ್ನು ಕನಿಷ್ಠಪಕ್ಷ ಐದನೆಯ ವೃತ್ತದವರೆಗಾದರೂ ತಲುಪಿಸಿ ನನ್ನ ಹೊಣೆಗಾರಿಕೆಯಿಂದ ಬಿಡುಗಡೆ ಪಡೆಯಲು ಬಯಸುತ್ತೇನೆ; (ನಾನು ಏನು ಮಾಡಬೇಕೆಂಬುದು ತೋಚುತ್ತಿಲ್ಲ). ಅದಾದ ನಂತರ ಅವರು ಧೈರ್ಯತೋರಿದರೆ, ಅವರನ್ನು ಇನ್ನೂ ಮುಂದಕ್ಕೆ ಕೊಂಡೊಯ್ಯಬಹುದು. ಮಾಸ್ಟರ್ ಸಾಹೇಬರ ವಿಷಯದಲ್ಲಿ ನಾನು ನಿಶ್ಚಿಂತನಾಗಿದ್ದೇನೆ. ಆಗಾಗ ಅವರ ಕಡೆಗೆ ಲಕ್ಷ್ಯವನ್ನು ಕೊಡುತ್ತೇನೆ, ಅದು ನನ್ನ ಕರ್ತವ್ಯವೂ ಆಗಿದೆ. ಮಿಷನ್ನಿನ ಬಗ್ಗೆ ಅವರ ಪ್ರೇಮ ಮತ್ತು ಪ್ರಯತ್ನಗಳು ಅವರ ಪ್ರಗತಿಯ ಕಾರಣಗಳಾಗಿವೆ.

ನಿನ್ನನ್ನು ಐದನೆಯ ವೃತ್ತದ ವರೆಗೆ ಕರೆದೊಯ್ದು ಮುಟ್ಟಿಸಿ, ನಿನ್ನ ವಿಷಯದಲ್ಲಿಯೂ ನಾನು ನನ್ನ ಹೊಣೆಗಾರಿಕೆಯಿಂದ ಮುಕ್ತನಾಗಲೇ ಎಂದು ಕೆಲವೊಮ್ಮೆ ವಿಚಾರ ಸುಳಿಯುತ್ತದೆ. ಹಾಗೆಂದು ನಾನು ಯಾರನ್ನೂ ಐದನೆಯ ವೃತ್ತದಿಂದ ಮುಂದಕ್ಕೆ ಕರೆದೊಯ್ಯಲು ಬಯಸುವುದಿಲ್ಲ ಎಂದು ಭಾವಿಸಬೇಡ. ಅವರು ನನಗಿಂತಲೂ ಪ್ರಗತಿ ಹೊಂದಿದರೆ ನನಗೆ ನಿಜಕ್ಕೂ ಅತಿಶಯ ಸಂತೋಷವಾದೀತು. 'ನನ್ನ ಪ್ರಗತಿ' ಎಂಬುದಾದರೂ ಏನು ? ನಿದ್ರಿಸುತ್ತಿರುವೆನೆಂಬ ಅರಿವೂ ಇಲ್ಲದೆ ನಿದ್ರಿಸುತ್ತಿರುವವನಂತೆ ! ಸರಿ. ಅದು ಏನೇ ಇರಲಿ, ಅದಕ್ಕೋಸ್ಕರ ನಾನು ಅವನಿಗೆ 'ಅವನಿ'ಗೆ (ಗುರುಮಹಾರಾಜರಿಗೆ) ಕೃತಜ್ಞನಾಗಿದ್ದೇನೆ ಮತ್ತು ಜನರು ಇದಕ್ಕಿಂತಲೂ ಹೆಚ್ಚು (ಪ್ರಗತಿ ಸಾಧಿಸುವ) ಧೈರ್ಯಮಾಡಲಿ ಎಂದು ಹಾರೈಸುತ್ತೇನೆ. ಹತ್ತು-ಹನ್ನೆರಡು ಮಂದಿಯಾದರೂ ನನ್ನಿಂದ ತಯಾರಾದರೆ,



ಮತ್ತು ಅವರಲ್ಲಿ ಮಾತನಾಡುವ ಸಾಮರ್ಥ್ಯ ಮತ್ತು ಕೌಶಲ ಬೆಳೆದರೆ, ಈಶ್ವರೇಚ್ಛೆಯಿಂದ ಮಿಷನ್ನಿನ ಸ್ವರೂಪವೇ ಬದಲಾಗಬಹುದು. ಈಗ ನಾನು ನಿನ್ನ ಪತ್ರಕ್ಕೆ ಉತ್ತರಿಸುತ್ತೇನೆ. ನಿನ್ನ ಸ್ಥಿತಿಯು ಮತ್ತೂ ಹೆಚ್ಚು ಗಾಢ (ಅಂತರ್ಮುಖಿ) ಮತ್ತು ಗಂಭೀರವಾಗಿದೆ ಎಂದು ಬರೆದಿದ್ದೀಯೆ. ನೀನು ಯಾವ ಸ್ಥಾನ (ಮಜಲು)ದಲ್ಲಿರುವೆಯೋ ಅದರಲ್ಲಿ ಲಯಾವಸ್ಥೆಯು ಮತ್ತೂ ಹೆಚ್ಚಿದೆ ಎಂದು ಇದರ ಅರ್ಥ. ಪ್ರತಿಯೊಂದು ಬಿಂದುವಿನಲ್ಲಿಯೂ ಲಯಾವಸ್ಥೆ ಮತ್ತು ಸಾರೂಪ್ಯತೆಗಳು ಬರುತ್ತವೆ. ನಾನು ನಿನ್ನನ್ನು 'N' (ಎನ್) ಬಿಂದುವಿಗೆ ತಲುಪಿಸಿದ್ದೇನೆ. ಮತ್ತು ನಿನ್ನ ಈ ಅನುಭವ ಸರಿ ಇದೆ.

ನಾವು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮುಂದೆ ಮುಂದೆ ಸಾಗಿದಂತೆ, ಹೆಚ್ಚು ಹೆಚ್ಚು ಸೂಕ್ಷ್ಮರಾಗುತ್ತ ಹೋಗಿ, ಕೊನೆಯಲ್ಲಿ 'ಏನೂ ಇಲ್ಲ' ಎಂಬಂತೆ ಶೂನ್ಯತೆಯನ್ನು ತಲುಪುವವರೆಗೂ ಮುಂದುವರಿಯುತ್ತೇವೆ. ಇನ್ನೂ ಒಂದು ಮಾತು ಹೇಳುತ್ತೇನೆ, ನಾವು ಸೂಕ್ಷ್ಮಗೊಳ್ಳುತ್ತ ಹೋದಾಗ ನಮ್ಮ ಚಿತ್ತದಲ್ಲಿ ಸೂಕ್ಷ್ಮ ಅಲೆಗಳು ಏಳುತ್ತವೆ. ಮತ್ತು ನಾವು ಶೂನ್ಯತೆಯನ್ನು ತಲುಪಿದಾಗ ಅಲೆಗಳು ಏಳುವುದು ನಿಂತುಹೋಗುತ್ತದೆ. ಅಲೆಗಳು ಎಷ್ಟೇ ಸೂಕ್ಷ್ಮವಿರಲಿ, ನಮ್ಮ ಶಾಂತಿ ಬಾಧೆಗೊಳಗಾಗುತ್ತದೆ; ಮತ್ತು ಇಂದ್ರಿಯಗಳು ಒಂದಿಷ್ಟು ಅನುಭವ ಪಡೆಯುತ್ತಿರುತ್ತವೆ. ನಾವು 'ಸೂಕ್ಷ್ಮತೆ'ಯಿಂದಲೂ ಬಿಡುಗಡೆ ಪಡೆದಾಗ ಮಾತ್ರವೇ ಅವುಗಳಿಂದಲೂ ಬಿಡುಗಡೆ ಪಡೆಯುತ್ತೇವೆ. ನಾನು ಸಂಕ್ಷಿಪ್ತವಾಗಿ ಅಗತ್ಯವಿರುವಷ್ಟು ಮಾತ್ರ ಬರೆದಿದ್ದೇನೆ.

ನಾನು ದಿನಾಂಕ ೧೫-೩-೧೯೫೩ ರಂದು ಬೆಳಿಗ್ಗೆ ೯-೨೦ಕ್ಕೆ ನಿನ್ನನ್ನು ಓ (O) ಬಿಂದುವಿಗೆ ತಲುಪಿಸಿದ್ದೇನೆ.

ಅಮ್ಮಾಜಿಯವರಿಗೆ ನನ್ನ ವಂದನೆಗಳನ್ನು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೩ **ಪತ್ರ ಸಂಖ್ಯೆ – ೨೯೧** ಷಾಹಜಹಾನಪುರ
೨೦-೦೩-೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಮಾರ್ಚ್ ೧೨ ಮತ್ತು ೧೬ರ ನಿನ್ನ ಪತ್ರಗಳು ತಲುಪಿದವು. ದಿನಾಂಕ ೧೨ರ ಪತ್ರದ ಉತ್ತರ ಕೊಡುತ್ತಿದ್ದೇನೆ. " 'ಮಾಲಿಕ' (ಸದ್ಗುರು) ನನ್ನ ಕಣ್ಣುಗಳಲ್ಲಿದ್ದನು. ಮತ್ತು ನಾನು ಅದರಿಂದಲೂ ಕಣ್ಮರೆಯಾಗಿದ್ದೇನೆ" ಎಂದು ಬರೆದಿದ್ದೀಯೆ. ಈ ಕಲ್ಪನೆಯನ್ನು ನೀನು ಸರಿಯಾಗಿ ಅಭಿವ್ಯಕ್ತಗೊಳಿಸಲು ನಿನಗೆ ಶಕ್ಯವಾಗಿಲ್ಲ. ನನಗೆ

P-4-Books-PM-7-Anantyatre-75



ಅದು ತಿಳಿದಮಟ್ಟಿಗೆ ಉತ್ತರ ಬರೆಯುತ್ತೇನೆ. ಇದು ಲಯಾವಸ್ಥೆಯ ಒಂದು ಸ್ಥಿತಿ. ನೀನು ಸದ್ಗುರುವಿನ ಧ್ಯಾನದಲ್ಲಿ (ವಿಚಾರದಲ್ಲಿ) ಪ್ರವೇಶಿಸಲು ಬಯಸುತ್ತಿದ್ದಾಗ ವಿಚಾರವು ತಿರುವುಮುರುವು ಆಗಿ ನಿನ್ನ ಶರೀರಕ್ಕೆ ಅಂಟಿಕೊಂಡಿರಬಹುದು. ಇದು ಸರಿ ತಾನೆ ? ಇದು ಸರಿ ಇದ್ದುದೇ ಆದರೆ, 'ನೀನೇ ಸ್ವತಃ ಸದ್ಗುರುವೇ ಆಗಿದ್ದೀಯೆ' ಎಂಬ ಅನುಭವ ಇಡೀ ಶರೀರದಲ್ಲಿ ಆಗಬಹುದು. ಇದನ್ನು ಅನುಸರಿಸಿ, ಇದೇ ವಿಚಾರವನ್ನು ದೃಢವಾಗಿ ಹಿಡಿದುಕೊಳ್ಳಬೇಕು ಮತ್ತು ಈ ಶರೀರ ಮುಂತಾದವು ಸದ್ಗುರುವಿನದೇ ಎಂಬ (ಭಾವ) ಉಂಟಾಗಬೇಕು. ನೀನು 'ಎ' (A)ಯ ಮೇಲೆ ಧ್ಯಾನ ಮಾಡುತ್ತಿದ್ದಿಯೆಂದು ತಿಳಿದರೆ – ನನ್ನ ಅನುಭವಕ್ಕೆ ಬಂದಿರುವುದು (ಗಮನಿಸಿದುದು) ಸರಿ ಇದ್ದರೆ – ಮತ್ತು ನಾನು ಮೇಲೆ ಹೇಳಿದುದೇ ನಿನ್ನ ಸ್ಥಿತಿ ಇದ್ದರೆ, 'ಎ' (A)ಯಿಂದ ವ್ಯಾಪ್ತವಾದ ಅವನ ಶರೀರವನ್ನು ನಿನ್ನದೇ ಶರೀರವೆಂದು ಭಾವಿಸಿ ಧ್ಯಾನ ಆರಂಭಿಸು. ಭಾವಿಸುವುದೇನು ಬಂತು; ವಾಸ್ತವವಾಗಿ ನಿನ್ನ ಸ್ಥಿತಿ ಅದೇ ಇದೆ. ಅಂದರೆ, ಈಗ ನೀನು ಅದೇ (ಮೇಲೆ ಹೇಳಿದ) ವಿಧಾನದಲ್ಲಿ ಧ್ಯಾನವನ್ನು ಪ್ರಾರಂಭಿಸಿಯೇ ಇರಬೇಕು. ನನಗೆ ಅನಿಸಿರುವುದು ಸರಿ ಇದೆಯೇ ಎಂಬುದನ್ನು ಬರೆದು ತಿಳಿಸು.

ಈಗ ಮಾರ್ಚ್ ೧೬ರ ಪತ್ರಕ್ಕೆ ಉತ್ತರ ಬರೆಯುತ್ತೇನೆ.... 'ನಿನ್ನ ಅನುಭವವೇನಿದೆಯೋ ಅದು ನನ್ನ ದೆಸೆಯಿಂದಾಗಿ' ಎಂದು ನೀನು ಬರೆದಿದ್ದೀಯೆ. ವಾಸ್ತವದಲ್ಲಿ ಅದು ಹಾಗಿಲ್ಲ. ಅದು ನನ್ನ ಸಾಮರ್ಥ್ಯದಿಂದ ಆಗಿದ್ದಿದ್ದರೆ, ನನ್ನ ಬಳಿಬರುವ ಅಭ್ಯಾಸಿಗಳಿಗೆಲ್ಲರಿಗೂ ಅದೇ ಅನುಭವ ಉಂಟಾಗಿರಬೇಕಿತ್ತು. ಇದು ನಿನ್ನ ಸ್ವಂತ ಪ್ರಯತ್ನ, ಪ್ರೇಮ ಮತ್ತು ಭಕ್ತಿಗಳ ಫಲವೇ ಆಗಿದೆ. ಹೆಚ್ಚುಪಕ್ಷ ಈ ಮುಗ್ಧತೆಯನ್ನು ನೀನು ಹುಟ್ಟಿನಿಂದಲೇ ಪಡೆದು ಬಂದಿದ್ದೀಯೆ ಎಂದು ಇದರ ಅರ್ಥ. ನೀನು ನಮ್ರತೆಯನ್ನು ಕುರಿತು ಬರೆದಿರುವುದು ಸರಿ ಇದೆ. ನೀನು ನಮ್ರತೆಯನ್ನು ಎಷ್ಟು ಮೈಗೂಡಿಸಿಕೊಳ್ಳುತ್ತಿರುವಿಯೆಂದರೆ, ನಿನಗೆ ಅದರಲ್ಲಿ ಲಯಾವಸ್ಥೆ ಆರಂಭವಾಗಿದೆ. ಪ್ರತಿಯೊಂದು ಆಧ್ಯಾತ್ಮಿಕ ಸ್ಥಿತಿಯಲ್ಲಿಯೂ ಅಭ್ಯಾಸಿಯು ಲಯಾವಸ್ಥೆಯನ್ನು ಪ್ರಾಪ್ತಮಾಡಿಕೊಂಡಾಗಲೇ ಅವನು (ಅದರಲ್ಲಿ) ಪ್ರಭುತ್ವವುಳ್ಳ ವ್ಯಕ್ತಿಯಾಗುತ್ತಾನೆ. ನಮ್ಮಲ್ಲಿ ಜನರು ಪೂಜೆ ಮತ್ತು ಧ್ಯಾನಗಳನ್ನೇನೋ ಮಾಡುತ್ತಾರೆ, ಆದರೆ ಅದರ ನಂತರ ಅವರು ಏನೇನು ಮಾಡುತ್ತಾರೋ ಆಗ ಅವುಗಳೊಂದಿಗೆ (ಧ್ಯಾನ ಇತ್ಯಾದಿ) ಯಾವುದೇ ಯಾವುದೇ ಸಂಬಂಧವನ್ನೇ ಇಟ್ಟುಕೊಳ್ಳುವುದಿಲ್ಲ. ಬರೆದು ಮತ್ತು ಹೇಳಿ ನಾನು ದಣಿದು ಹೋಗಿದ್ದೇನೆ. ಆದರೆ ಅದು ಅವರೊಳಗೆ ಇಳಿಯುವುದೇ ಇಲ್ಲ (ಎಲ್ಲ ವ್ಯರ್ಥ). ಅವರನ್ನು ನಾನು ಮೇಲಕ್ಕೆ ಎಳೆಯುತ್ತಲೇ ಹೋಗುವುದು ಸಾಧ್ಯ. ಹಾಗೇ ಒಂದಿಷ್ಟು ಮಾಡುತ್ತಲೇ ಹೋಗುತ್ತೇನೆ ಕೂಡ. ಆದರೆ ಅದರಿಂದ ನನಗೂ ಆನಂದ ಸಿಗುವುದಿಲ್ಲ, ಅವರಿಗೂ ಸಿಗುವುದಿಲ್ಲ. ನನ್ನ ಹೃದಯ ಎಲ್ಲರಿಗೋಸ್ಕರ ಅದನ್ನು ಹಾರೈಸುತ್ತದೆ. ಅಭ್ಯಾಸಿಯಲ್ಲಿ ಎಷ್ಟರ ಮಟ್ಟಿಗೆ ಅಭೀಪ್ಸೆ ಇರುವುದೋ, ಅಷ್ಟೇ ಶೀಘ್ರ ಅವನು ಈಶ್ವರನನ್ನು ಆಕರ್ಷಿಸುತ್ತಾನೆ.



'ಎಲ್ಲಿಯವರೆಗೆ ಮಗ ಅಳುವುದಿಲ್ಲವೋ, ಅಲ್ಲಿಯವರೆಗೆ ತಾಯಿಯೂ ಹಾಲೂಡುವುದಿಲ್ಲ' ಎಂಬ ನುಡಿ ಪ್ರಸಿದ್ಧವೇ ಇದೆ. ಉಳಿದುದನ್ನು ನಿನ್ನ ಉತ್ತರ ಬಂದ ನಂತರ ಬರೆಯುತ್ತೇನೆ.

ಅಮ್ಮಾಜಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೪ **ಪತ್ರ ಸಂಖ್ಯೆ – ೨೯೩** ಷಾಹಜಹಾನಪುರ
೨೩–೦೩–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನೆ ಮಾರ್ಚ್ ೨೩ (೧೯೫೩) ರಂದು ಮಧ್ಯಾಹ್ನ ೨–೩೦ರ ಹೊತ್ತಿಗೆ 'ಓ' (O) ಬಿಂದುವಿನಲ್ಲಿ ಸ್ವಲ್ಪ ಶಕ್ತಿಹೀನತೆಯಿರುವುದು ಕಂಡುಬಂದಿತು. ಅದೇ ಹೊತ್ತಿನಲ್ಲಿ ನಾನು ಅದನ್ನು ನಿವಾರಿಸಿದೆ. ನಿನ್ನನ್ನು ಇಂದು ೨೩ರ ರಾತ್ರಿ ೧೦–೧೫ರ ಹೊತ್ತಿಗೆ 'ಪಿ' (P) ಬಿಂದುವಿಗೆ ತಲುಪಿಸಿದ್ದೇನೆ. ಅದೇ ಹೊತ್ತಿನಲ್ಲಿ ಅದರ ಆಧ್ಯಾತ್ಮಿಕ ಯಾತ್ರೆಗೆ ಬೇಕಾದ ಪರಮಾಣುಗಳನ್ನು ನಿನ್ನಲ್ಲಿ ತುಂಬಿದ್ದೇನೆ. ಇಂದು ಸುಮಾರು ೨–೩ಗಂಟೆಯ ಹೊತ್ತಿಗೆ ನೀನು ಅದರ ಯಾತ್ರೆಯನ್ನು ಪ್ರಾರಂಭಿಸುವ ಸಾಧ್ಯತೆ ಇದೆ. ಅದಾದ ನಂತರದ ನಿನ್ನ ಸ್ಥಿತಿಯನ್ನು ನನಗೆ ಬರೆದು ತಿಳಿಸು. ನೀನು ಪೂರ್ಣ ಅನುಭವವನ್ನು ಎರಡು ಮೂರು ದಿನಗಳಲ್ಲಿ ಪಡೆದ ನಂತರ, ಈಶ್ವರನ ಕೃಪೆಯಿಂದ ನಾನು ನಿನ್ನನ್ನು ಮುಂದಿನ ಬಿಂದುವಿಗೆ ಕೊಂಡೊಯ್ಯುತ್ತೇನೆ. ನನಗೆ ತಿಳಿದ ಮಟ್ಟಿಗೆ, ನಾನು ಬಿಂದುಗಳ ಲೆಕ್ಕವಿಡಲು ಸಾಧ್ಯವಿಲ್ಲ. ಯಾಕೆಂದರೆ ಬಿಂದುಗಳು ಅಸಂಖ್ಯ ಇವೆ. 'Z' 'ಝೆಡ್' ಬಿಂದುವನ್ನು ದಾಟಿದ ನಂತರ ಮುಂದಿನ ಪ್ರತಿಯೊಂದು ಬಿಂದುವನ್ನು ನಾನು ಸುಮಾರು ಮೂರುದಿನಕ್ಕೊಂದರಂತೆ ದಾಟಿಸುತ್ತೇನೆ. ನಿನ್ನ ೨೩–೩–೧೯೫೩ರ ಪತ್ರ ಬಂದಿದೆ. ಆ ಪತ್ರಕ್ಕೆ ಉತ್ತರ ಬರೆಯುವ ಅಗತ್ಯವಿಲ್ಲ. ಆದ್ದರಿಂದ ಬರೆಸಲಿಲ್ಲ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೫ **ಪತ್ರ ಸಂಖ್ಯೆ – ೨೯೬** ಷಾಹಜಹಾನಪುರ
೦೨–೦೪–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಮಾರ್ಚ್ ೨೪ ಮತ್ತು ೨೯, (೧೯೫೩)ರ ನಿನ್ನ ಪತ್ರಗಳು ತಲುಪಿವೆ. ನಾನು ದಿನಾಂಕ ೨೪ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. ಲಯಾವಸ್ಥೆ ಹೆಚ್ಚಿದಾಗ,

‘ಕೆಲಸವನ್ನು ಗುರುವೇ ಮಾಡುತ್ತಿದ್ದಾನೆ’ ಎಂಬ ಭಾವನೆಯನ್ನು ತಳೆಯುವ ಅಗತ್ಯ ಕಡಿಮೆ ಇರುತ್ತದೆ. ಗುರುವಿನಲ್ಲಿ ಅಭ್ಯಾಸಿಯು ‘ಲಯ’ ಹೊಂದುತ್ತ ಹೋದಹಾಗೆ, ಅದೇ ಪ್ರಮಾಣದಲ್ಲಿ ದ್ವೈತಭಾವವು ಕಡಿಮೆಯಾಗುತ್ತದೆ. ಪೂಜೆಯಲ್ಲಿ ‘ದ್ವೈತ’ ಬಂದೇ ಬರುತ್ತದೆ ಮತ್ತು ಆ ಕಾರಣ, ಹೃದಯದ ಮೇಲೆ ಭಾರ ಅನಿಸುತ್ತದೆ. ಅಂಥ ಸಂದರ್ಭದಲ್ಲಿ ಧ್ಯಾನವನ್ನು ಸ್ವಾಭಾವಿಕ ರೀತಿಯಲ್ಲಿ ಹಗುರಾಗಿ ಮಾಡಬೇಕು. ಸ್ಥಿತಿಯು ಹಗುರ (ಲಘು)ವಾಗುತ್ತ ಹೋದಷ್ಟೂ ಅಭಿವ್ಯಕ್ತಿಗೆ ಶಬ್ದಗಳು ಸಿಗುವುದಿಲ್ಲ; ರಿಕ್ತತೆ (ಖಾಲಿಯೆಂದೆನಿಸುವುದು) (ಶೂನ್ಯತೆಯಭಾವ) ವರ್ಧಿಸುತ್ತದೆ. ಮತ್ತು ಒಂದು ಹಂತದಲ್ಲಿ ಅದೂ ಇರುವುದಿಲ್ಲ.

೨೩ ಮಾರ್ಚ ೧೯೫೩ರ ನಿನ್ನ ಪತ್ರಕ್ಕೆ ಉತ್ತರ ಇಂತಿದೆ : ‘ನಾನು ನನ್ನ ಮೇಲೆಯೇ ಧ್ಯಾನಮಾಡುತ್ತೇನೆ. ನನ್ನನ್ನೇ ಪೂಜಿಸುತ್ತೇನೆ ಮತ್ತು ನನ್ನನ್ನೇ ಪ್ರಾರ್ಥಿಸುತ್ತೇನೆ’ ಎಂಬ ನಿನ್ನ ಸ್ಥಿತಿಯನ್ನು ಕಂಡ ನಾನು ಹರ್ಷದಿಂದ ಕುಣಿದಾಡಿದೆ. ಉತ್ತಮ ‘ಲಯಾವಸ್ಥೆ’ಯ ಶುಭ ಸಮಾಚಾರವಿದು. **‘ಅಪನೇ ಸಜ್ದೇಕೇ ಸಿವಾ, ಗೈರ್‌ಕಾ ಸಜ್ದಾ ಹೈ ಹರಾಮ್’** ಎಂದು ಯಾರೋ ಹೇಳಿದ್ದಾರೆ. (ತನ್ನನ್ನು ಪೂಜಿಸದೆ ಬೇರೆ ಯಾರನ್ನೋ ಪೂಜಿಸುವುದು ಒಂದು ಪಾಪ).

೨೯ರ ನಿನ್ನ ಪತ್ರಕ್ಕೆ ಒಂದು ದೀರ್ಘ ಉತ್ತರ ಕೊಡಬೇಕೆಂದಿದೆ. ಆದರೆ ಬರೆದುಕೊಳ್ಳುವವರು ಯಾರೂ ಸಿಗಲಿಲ್ಲ. ಒಳ್ಳೇದು, ಏನಿದ್ದರೂ ಅದು ಈಶ್ವರನ ಇಚ್ಛೆ. ನಾನು ಬರೆದುದು ಒರಟು ಮಾತಿನಲ್ಲಿದೆ, ಅಲ್ಲದೆ ಅಭಿವ್ಯಕ್ತಿಯೂ ಸಮರ್ಪಕವಾಗಿಲ್ಲ.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೬ **ಪತ್ರ ಸಂಖ್ಯೆ – ೩೦೧** ಷಾಹಜಹಾನಪುರ
೧೨–೦೪–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ನನಗೆ ಹಿಂದಿ ಅಷ್ಟಾಗಿ ಗೊತ್ತಿಲ್ಲ. ಬರೆಯುವಾಗ ನನ್ನ ಕೈ ನಡುಗುತ್ತದೆ ನಾನು ಬರೆಯಲು ಕುಳಿತರೆ ವಿಚಾರಗಳನ್ನು ಒಂದು ಸರಣಿಯಾಗಿ ತರುವುದಾಗುವುದಿಲ್ಲ. ಆದ್ದರಿಂದ ಅವು ಚದುರಿಹೋಗುತ್ತವೆ. ನನ್ನ ನ್ಯೂನತೆಗಳನ್ನು ನಾನು ಎಷ್ಟೆಂದು ಹೇಳುತ್ತಹೋಗಲಿ ? ನನಗೆ ಎರಡನೆಯವರ ಬೆಂಬಲ ಯಾವಾಗಲೂ ಬೇಕು. ಒಬ್ಬನೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಎಲ್ಲರೂ ಒಟ್ಟಾಗಿ ಪ್ರತಿಯೊಬ್ಬರೂ ತಮಗೆ ತಕ್ಕುದಾದ ಕೆಲಸಗಳನ್ನು ಮಾಡಲಿ ಎಂದು ನಾನು ಬಯಸುತ್ತೇನೆ. ಆದರೆ ಜನರು ಆಸಕ್ತಿ ಉಂಟುಮಾಡಿಕೊಳ್ಳುವುದಿಲ್ಲ.



ಈಶ್ವರ ಸಂಬಂಧಿತ (ಆಧ್ಯಾತ್ಮಿಕ) ವಿಷಯಗಳಲ್ಲಿ ಅಭಿರುಚಿ ಇಲ್ಲದವರು, ಮಿಷನ್ನಿನ ಕಾರ್ಯದಲ್ಲಿಯಾದರೂ ಆಸಕ್ತಿವಹಿಸಲಿ, ಅದಾದರೂ ನಡೆಯುತ್ತದೆ. ಏಕೆಂದರೆ ನಿಷ್ಕಪಟತೆ ಇದ್ದರೆ ಆಗ ಅವರಿಗೆ ಈಶ್ವರನ ವಿಷಯದಲ್ಲಿಯೂ ಆಸಕ್ತಿ ಬೆಳೆಯುವುದು. ಈ ಧ್ಯೇಯ (ಮಿಷನ್ನು) ನನ್ನದಾಗಿರುವಾಗ ಯಾರಾದರೂ ಯಾಕೆ ಶ್ರಮ ತೆಗೆದುಕೊಂಡಾರು ? ಮತ್ತೆ, ಹಾಗಿರುವುದಂತೂ ವಾಸ್ತವವೇ. ಅದಕ್ಕೋಸ್ಕರವೇ ನಾನು ಎಲ್ಲರನ್ನೂ ತುಷ್ಟಿಪಡಿಸಲು ಯತ್ನಿಸುತ್ತೇನೆ. ಯಾಕೆಂದರೆ, ಅವರ ಸ್ತುತಿಯೂ ಫಲಕಾರಿಯಾಗಬಹುದು ಮತ್ತು ಯಾರಾದರೂ ಅದರಿಂದ ಲಾಭಾನ್ವಿತರಾಗಬಹುದು. ನಾನು ಹೀಗೆ ಬರೆದುದನ್ನು ನೋಡಿದವರು ನಕ್ಕಾರು. ನನ್ನ ಹೃದಯ ಇರುವುದೇ ಹಾಗೆ; ನಾನು ಎಲ್ಲರೊಳಗೂ ಎಲ್ಲವನ್ನೂ ಸುರಿಯಲು ಇಚ್ಛಿಸುತ್ತೇನೆ. ಜನರು ಸ್ವೀಕರಿಸಲು ಸಿದ್ಧರಾಗದಿರುವುದಕ್ಕೆ ಇದೇ ಕಾರಣವಿದ್ದಿರಬಹುದು. ನಾನು ಸುರಿಯುವುದಂತೂ ಖಂಡಿತ; ಅದು ಉಕ್ಕಿ (ತುಳುಕಿ) ಚೆಲ್ಲಿಹೋದರೂ ಸರಿಯೆ. ಯಾರಲ್ಲಿ ಸುರಿದುಹೋಗುವೆನೋ ಅವರಿಂದ ತುಳುಕಿದ್ದುದರಿಂದ ಇತರರೂ ಒಂದಿಷ್ಟು ಪಡೆಯಬಹುದು. ಅದಕ್ಕಾಗಿಯೇ ನಾನು ಎಲ್ಲರೊಳಗೂ ಸುರಿದುಬಿಡಲು ಬಯಸುತ್ತೇನೆ. ಈ ಸಮಯದಲ್ಲಿ ಸ್ಥಿತಿಯು ಎಂತಿದೆಯೆಂದರೆ, ಎಲ್ಲರಲ್ಲಿಯೂ ಅಥವಾ ಯಾರು ಅದಕ್ಕಾಗಿ ಹಂಬಲಿಸುವರೋ ಅವರಲ್ಲಿ ನೈಜ (ಆಧ್ಯಾತ್ಮಿಕ) ಸ್ಥಿತಿಯನ್ನು ಸುರಿದುಬಿಡಬಹುದು.

ಇಲ್ಲಿಯವರೆಗೆ ಇತರರ ವಿಷಯ ಹೇಳಿ ಆಯಿತು. ಈಗ ನನ್ನ ಬಗ್ಗೆ ಹೇಳುತ್ತೇನೆ. ನಾನು ಎಷ್ಟು ಶಿಥಿಲ ಮತ್ತು ನಿಷ್ಪ್ರಯೋಜಕ (ನಿಷ್ಕ್ರಿಯ) (ಆಲಸಿ) ಆಗಿದ್ದೇನೆಂದರೆ, ನನ್ನಂಥ ಬೇರೆ ಉದಾಹರಣೆ ಸಿಗಲಾರದು. ಜೀವವೇ ಇಲ್ಲವೇನೋ ಎಂಬಷ್ಟು ನಿತ್ರಾಣನಾಗಿದ್ದೇನೆ. ಮಂಚದಮೇಲೆ ಮಲಗಿದೆನೆಂದರೆ ಮತ್ತೆ ಆರು ತಿಂಗಳು ಏಳಬೇಕೆಂದು ಮನಸ್ಸಾಗದು. ಊಟ ತಯಾರಿದ್ದರೂ, ಈಗ ತಿನ್ನುವುದೇಕೆ, ಆಮೇಲೆ ನೋಡಿದರಾಯಿತು ಎನ್ನುವಷ್ಟು ಆಲಸ್ಯ ಉಂಟಾಗಿದೆ. ನೀರಡಿಕೆಯಾಗುತ್ತದೆ, ಆದರೆ ಈಗ ಆರಾಮವಾಗಿ ಮಲಗಿದರಾಯಿತು; ಎದ್ದಾಗ ಕುಡಿಯೋಣ ಎಂದುಕೊಳ್ಳುತ್ತೇನೆ. ಮಾಡಬೇಕಿದ್ದ ಕೆಲಸಗಳು ಹಾಗೇ ಬಿದ್ದಿವೆ, ಮಾಡಲು ಮನಸ್ಸಾಗುವುದಿಲ್ಲ. ಈಶ್ವರನೆಡೆಯಲ್ಲಿ ನ್ಯಾಯ ಇದ್ದೇ ಇದೆ. ಇಂಥ ನಿರ್ಬಲ, ಆಲಸಿ ಮನುಷ್ಯನಿಗೆ ನಿರ್ಬಲರಾದವರು ಮತ್ತು ಆಲಸಿಗಳೇ ಸಿಗುತ್ತಾರೆ. ನಮ್ಮ ಮಿಷನ್ನಿನಲ್ಲಿರುವ ಆಲಸ್ಯ ಮತ್ತು ಬಲಹೀನತೆಗೆ ಹೊಣೆಗಾರ ನಾನು ಎಂದು ನನಗೆ ಗೊತ್ತಿದೆ. ಜನರು ಹೆಚ್ಚುಪಕ್ಷ ನನ್ನ ಮಾತಿಗೆ ಕಿವಿಗೊಡದಿರುವುದಕ್ಕೆ ಕಾರಣ ಎಂದು ತೋರುತ್ತದೆ. ಆಲಸ್ಯದಿಂದ ಚೈತನ್ಯತೆಯನ್ನು, ಮೃತನಿಂದ ಜೀವವನ್ನು ಪಡೆದವರು ಯಾರು ? ಅವೆರಡೂ ಪರಸ್ಪರ ವಿರುದ್ಧ.

ಈಗ ವಿಷಯಕ್ಕೆ ಬರುತ್ತೇನೆ. ನಾನು ‘ಪಿ’ (P) ಬಿಂದುವಿನ ಮೇಲೆ ಹೆಚ್ಚು ಶಕ್ತಿಯನ್ನು (ಪ್ರಾಣಾಹುತಿ) ಕೇಂದ್ರಿತಗೊಳಿಸಿದ್ದೆ; ಅದರ ಸರಿಯಾದ ಅಂದಾಜು ಮಾಡಲಾಗಲಿಲ್ಲ; ತ್ವರೆ ಮಾಡುವ ನನ್ನ ರೂಢಿಯಿಂದಾಗಿ ಈ ತಪ್ಪು ಘಟಿಸುತ್ತದೆ.

P-4-Books-PM-7-Anantyatre-77



ಪದೇ ಪದೇ ಅದೇ ಕೆಲಸಕ್ಕೆ ಗಮನ ಕೊಡಬೇಕಾಗಿ ಬರದಂತೆ, ಶೀಘ್ರವಾಗಿ ಕೆಲಸವನ್ನು ಪೂರ್ಣಗೊಳಿಸಬೇಕೆಂಬ ಆತುರ ನನಗೆ ರೂಢಿಯಾಗಿಬಿಟ್ಟಿದೆ. ಕೆಲಸ ಪೂರ್ಣಗೊಳಿಸಲು ನಾನು ಅನೇಕ ಸಾರಿ ನನ್ನ ವಿಶೇಷ ಇಚ್ಛಾಶಕ್ತಿಯನ್ನು ವಿನಿಯೋಗಿಸುತ್ತೇನೆ. ತ್ವರೆಯ ಕಾರಣ, ಎಷ್ಟು ತೀವ್ರತೆ (ಗಾಢತೆ) ಇರಬೇಕು ಎಂಬುದರ ಅಂದಾಜು ಸಿಗುವುದಿಲ್ಲ. ನಾನು ಬಹಳ ಪ್ರಯತ್ನಮಾಡುತ್ತೇನೆ; ಆದರೂ ಇದು ಸರಿಹೋಗುತ್ತಿಲ್ಲ. ನಾನು 'ಪಿ' (P) ಬಿಂದುವಿನ ಮೇಲೆ ಹೆಚ್ಚು ಪ್ರಾಣಾಹುತಿ ನೀಡಿದುದರಿಂದ ನೀನು ಅರಗಿಸಿಕೊಳ್ಳಲಾರದಷ್ಟು ಶಕ್ತಿ ಅಲ್ಲಿ ಉಂಟಾಯಿತು. ನೀನು ಅರಗಿಸಿಕೊಳ್ಳಲಾಗುತ್ತಿಲ್ಲವೆಂಬುದು ಗಮನಕ್ಕೆ ಬಂದ ಮೇಲೆ, ನಾನು ಅದು ಅರಗುವಂತೆ ಮಾಡಬೇಕಾಯಿತು. ಅದೇ ಸಮಯದಲ್ಲಿ ಇನ್ನೊಂದು ವಿಚಾರ ಬಂದಿತು; ನೀನು ಮುಂದಿನ ಬಿಂದುವಿಗೆ ಸ್ವತಃ ನೀನಾಗಿ ತಲುಪುವಂತಹ 'ಮನಸ್ಸು' (Mind) ಎನ್ನು ಅಥವಾ 'ಚೈತನ್ಯತೆ'ಎನ್ನು ಅದನ್ನು ಉಂಟುಮಾಡಿದೆ. ಹಾಗಾಗಿ ಮುಂಜಾನೆ ೧೧-೪೫ರ ಹೊತ್ತಿಗೆ ನೀನು ಮುಂದೆ ಕ್ರಮಿಸಲು ಪ್ರಾರಂಭಿಸಿದೆ. ಇಂದು ಅಲ್ಪಪ್ರಮಾಣದಲ್ಲಿ ನನ್ನ ಬೆಂಬಲ ಅಗತ್ಯವಾಯಿತು ಮತ್ತು ಅದನ್ನು ನೀಡಿದಾಗ ನೀನು 'ಕ್ಯೂ' (Q) ಬಿಂದುವನ್ನು ತಲುಪಿದೆ.

'ಆಧ್ಯಾತ್ಮಿಕತೆಯ ಸುಗಂಧ ನಿನ್ನಿಂದ ಸದಾ ಹೊಮ್ಮುತ್ತಿದೆ' ಎಂಬ ನಿನ್ನ ವಿಚಾರ ಸರಿ ಇದೆ. 'ಅದು ಉಂಟುಮಾಡಲ್ಪಡುತ್ತಿದೆ' ಎಂದು ನೀನು ಬರೆದಿದ್ದೀಯೆ; ಹಾಗಲ್ಲ. ಅದು ಎಲ್ಲರಲ್ಲಿಯೂ ನಿಹಿತವಾಗಿ ಇದೆ. ಆದರೆ ಮನುಷ್ಯ ತಾನೇ ನಿರ್ಮಿಸಿಕೊಂಡ ಆವರಣಗಳ ಕಾರಣ, ಅದು ಅನುಭವಕ್ಕೆ ಬರುವುದಿಲ್ಲ. 'ಎಲ್ಲ ಕಡೆಗೂ ಶುದ್ಧತೆಯೊಂದೇ ಅನುಭವಕ್ಕೆ ಬರುತ್ತಿದೆ' ಎಂದು ನೀನು ಬರೆದಿದ್ದೀಯೆ ಅದು ಸರಿಯೇ ಇದೆ. ಮನುಷ್ಯನು ಯಾವಾಗ ಬಹಿರ್ಮುಖನಾಗಿ ಇರದೆ, ಅಂತರ್ಮುಖಿಯಾಗುತ್ತಾನೋ ಅಗ ಒಳಗೆ ಇರುವ ಸ್ಥಿತಿ ಹೊರಗೆ ವ್ಯಕ್ತವಾಗಲಾರಂಭಿಸುತ್ತದೆ. ವೈರಾಗ್ಯ ಅತ್ಯಂತ ಆವಶ್ಯಕ. ಯಾಕೆಂದರೆ ಯಾವುದೊಂದು ವಸ್ತುವಿನ ಮೇಲೆ ಒಂದು ವೇಳೆ ರಾಗ ಉಂಟಾದರೆ ಚಿತ್ತದಲ್ಲಿ ಪೂರ್ಣ ವೈರಾಗ್ಯವಿದ್ದಾಗ, ಆ ವಸ್ತುವಿನ ಮೇಲಿನ ರಾಗದ ಭಾರ ಉಂಟಾಗುವುದಿಲ್ಲ ಮತ್ತು ವಸ್ತುವೂ ನಮ್ಮ ದೃಷ್ಟಿಯಿಂದ ಮತ್ತು ಚಿತ್ತದಿಂದ ದೂರ ಸರಿಯುತ್ತದೆ. ಈ ಸ್ಥಿತಿ ಉಂಟಾದಾಗ ಕೇವಲ ಈಶ್ವರನೊಬ್ಬನೇ (ಚಿತ್ತದಲ್ಲಿ) ಉಳಿಯುತ್ತಾನೆ. ಮತ್ತು ಅರಣ್ಯಕ್ಕೆ ಹೋಗಿ ಕುಳಿತು ತಪಸ್ಸು ಮಾಡುವ ಅಗತ್ಯ ಉಳಿಯುವುದಿಲ್ಲ. 'ಯಾರಿಂದಾಗಿ ನಾನು ನನ್ನ ಸ್ವಂತದ ದರ್ಶನ ಪಡೆಯುತ್ತಿದ್ದೇನೋ ಮತ್ತು ಯಾರಿಂದಾಗಿ ನನ್ನನ್ನೇ ನಾನು ಗುರುತಿಸಿಕೊಳ್ಳುತ್ತಿದ್ದೇನೋ' ಎಂದು ನೀನು ಬರೆದಿದ್ದೀಯೆ. ಇದರಲ್ಲಿ 'ಯಾರಿಂದಾಗಿ ನನ್ನನ್ನೇ ನಾನು ಗುರುತಿಸಿಕೊಳ್ಳುತ್ತಿದ್ದೇನೋ' ಎಂಬುದರ ಅರ್ಥ ನನಗೆ ಆಗಲಿಲ್ಲ. 'ನೀನು ಏನನ್ನು ಗುರುತಿಸಿಕೊಳ್ಳಲು ಪ್ರಾರಂಭಿಸಿದೆ' ಎಂದು ಬರೆದು ತಿಳಿಸು. ಗುರುವಿನಲ್ಲಿ ಲಯ ಹೊಂದಲು ಪ್ರಾರಂಭಿಸಿದಾಗ 'ಸ್ವಂತಿಕೆ' ಎಂಬುದು ಮರೆಯಾಗಿ ಹೋಗುತ್ತದೆ, ಮತ್ತು ಗುರುವೇ ಎಲ್ಲವನ್ನೂ



ಮಾಡುತ್ತಿರುವವನೆಂಬ ಭಾವ ಬೆಳೆಯುತ್ತದೆ. ಆದರೆ ಇದು ಇನ್ನೂ ಲಯಾವಸ್ಥೆಯ ಅಪಕ್ವ ಸ್ಥಿತಿ. ಯಾರು ಕೆಲಸ ಮಾಡುತ್ತಿದ್ದಾರೆ ಎಂಬ ವಿಚಾರವು ಮರೆಯಾಗಿ ಹೋದಾಗ ಮತ್ತು ಯಾರು ಮಾಡುತ್ತಿರುವವರೆಂಬುದರ ಭಾರ ಇಲ್ಲದಾದಾಗ, ಅದು ಉತ್ತಮ (ಪಕ್ವ) ಲಯಾವಸ್ಥೆ. ಆದರೆ ಅದರ ಆಚೆಗೂ ಏನೋ ಉಂಟು. ನೀನು ನಿನ್ನ ಮೇಲೆಯೇ ಧ್ಯಾನ ಮಾಡುತ್ತಿದ್ದೀಯೆ. ಈ ಮಾತಿನ ಅರ್ಥ 'ನೀನು ನಿನ್ನ ಸ್ವಂತ ಆತ್ಮವನ್ನು ಗುರುತಿಸಿದ್ದೀಯೆ' ಎಂದಾಗುತ್ತದೆಯೆಂದು ನಾನು ತಿಳಿಯುತ್ತೇನೆ.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೭ **ಪತ್ರ ಸಂಖ್ಯೆ – ೩೦೪** ಷಾಹಜಹಾನಪುರ
೨೨-೦೪-೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಏಪ್ರಿಲ್ ೧೬ರ ಪತ್ರ ತಲುಪಿತು. ಅಂತಃಸತ್ತೆಯಲ್ಲಿ (Inner Being) ನಾವು ಲಯಹೊಂದುವುದೇ ಯೋಗಮಾರ್ಗ. 'ನರ-ನರಗಳಲ್ಲಿಯೂ ನಾನು ಸಮಾವಿಷ್ಟನಾಗಿದ್ದೇನೆ' ಎಂದು ನೀನು ಬರೆದಿದ್ದೀಯೆ. ನೀನು ಇನ್ನೂ ಅದರಲ್ಲಿ ಸಮಾವಿಷ್ಟಳಾಗಿ ಲಯಹೊಂದುವುದು ಉಳಿದಿದೆ; ಇನ್ನೂ ದೀರ್ಘ ಪಯಣ, ಮುಂದೆ ಮಾಡುವುದಿದೆ. ಈ ಮಾರ್ಗದಲ್ಲಿ ನಿನ್ನ ಪ್ರಯಾಣ ರೂಪಾಯಿಯಲ್ಲಿ ಒಂದೆರಡು ಪೈಸೆಯಷ್ಟು ಮಾತ್ರ ಆಗಿದೆ. ನಿನ್ನ ಶರೀರದ ಪ್ರತಿಯೊಂದು ಕಣ ಕಣದಲ್ಲಿಯೂ ನಿನ್ನದೇ ಸೌಂದರ್ಯ ಕಾಣುತ್ತಿದ್ದೀಯೆ ಎಂದಿರುವುದು ಸರಿ ಇದೆ. ನೀನು ಇನ್ನೂ ನಿನ್ನ ಪೂರ್ಣ ಸೌಂದರ್ಯವನ್ನು ಕಾಣಲು ಶಕ್ತಳಾಗಿಲ್ಲ. ನೋಡುವುದು ಇನ್ನೂ ತುಂಬಾ ಇದೆ. ನಮಗೆ ಆದಿಯಿಂದ ಅಂತ್ಯದವರೆಗೆ ಎಂಥ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕಿದೆಯೆಂದರೆ ಕೇವಲ ಪ್ರಕಾಶ ಮತ್ತು ಪ್ರಕಾಶವೇ ಉಳಿಯಬೇಕು; ಮತ್ತು ಒಂದು ಕಣ್ಣು ಇನ್ನೊಂದು ಕಣ್ಣನ್ನು ನೋಡಲಾರದಂತಿರಬೇಕು.

ನಿನ್ನ ಹೃದಯ ಇನ್ನೂ ತೆರೆದುಕೊಂಡಿಲ್ಲ ಎಂದು ನಿನಗೆ ಅನಿಸಿರುವುದು ಸರಿ ಇದೆ. ಅದನ್ನು ನಾನು ಈ ಹಿಂದೆ ಬರೆದೂ ಇದ್ದೆ. ನಮ್ಮ ಪದ್ಧತಿಯಲ್ಲಿ, ಹಾಗೆನ್ನುವುದಾದರೆ, ಯಾವ ಸೀಮೆಯೂ (ಮಿತಿ) ಇರದಂತೆ ಹೃದಯ ತೆರೆದುಕೊಳ್ಳುತ್ತದೆ. ನಾನು ನಿನ್ನ ಹೃದಯ ತೆರೆದುಕೊಳ್ಳುವಂತೆ ಮತ್ತು ರೂಪುಗೊಳ್ಳುವಂತೆ ಮಾಡಬೇಕೆಂದು ನೀನು ನೆನಪಿಸಿರುವುದು ಒಳ್ಳೆಯದಾಯಿತು. ನಾನು ನಿನ್ನನ್ನು ಉನ್ನತ ಹಂತಕ್ಕೆ ಕೊಂಡೊಯ್ದಿರುವೆ; ಅದು ಸರಿಯೆ; ಆದರೆ ಹೃದಯವನ್ನು ಕುರಿತು ಕಾಳಜಿ ತೆಗೆದುಕೊಳ್ಳಲಿಲ್ಲ. 'ಪ್ರಭುವು (ಸದ್ಗುರು) ಸ್ವತಂತ್ರನಾಗಿದ್ದರೂ, ಈಗ ಅವನು ಬಂಧನದಲ್ಲಿ ಬರುತ್ತಾನೆ' ಎಂದು ನೀನು

P-4-Books-PM-7-Anantyatre-78



ಬರೆದಿದ್ದೀಯೆ. 'ಅವನ' ಶಕ್ತಿ ನಿನ್ನೊಳಗೆ ಸಮಾವಿಷ್ಟವಾಗುತ್ತಿದೆ, ಮತ್ತು ಅದರಲ್ಲಿ ಅವನ ಅನುಭವವಾಗುತ್ತಿದೆ ಎಂಬುದು ಇದರ ಅರ್ಥ. ನಿನ್ನಲ್ಲಿ ಬಂಧನ ಇನ್ನೂ ಉಳಿದಿರುವುದರಿಂದ ಅವನೂ ಬಂಧನದಲ್ಲಿದ್ದಾನೆಂದು ನಿನಗೆ ಅನಿಸುತ್ತದೆ. ತಾನು ಸ್ವತಃ ಬಂಧನದಲ್ಲಿರುವ ಮನುಷ್ಯನಿಗೆ ಈಶ್ವರನೂ ಬಂಧನದಲ್ಲಿರುವಂತೆ ತೋರುತ್ತದೆ. ಈಶ್ವರನ ಸ್ಮರಣೆ ಬಂದಾಗ ಅವನೂ ನಮ್ಮಂತೆಯೇ ಇರುವನೆಂದು ನಾವು ಭಾವಿಸುವುದು. ಮೂರ್ತಿಪೂಜೆಯ ಆರಂಭವೂ ಈ ಕಾರಣದಿಂದಲೇ ಆಯಿತು. ನೀನು 'ಸಮತೆ'ಯ ಬಗ್ಗೆ ಬರೆದಿದ್ದೀಯೆ. 'ಬ್ರಹ್ಮ'ದ ಒಂದು ನೋಟ ತೋರಿಬಂದಿದೆ ಮತ್ತು ನೀನು ಅದರಲ್ಲಿ ನೇರವಾಗಿ ಪ್ರವೇಶಿಸುತ್ತಿದ್ದೀಯೆ ಎಂಬುದನ್ನು ಈ ಅನುಭವ ತೋರಿಸುತ್ತದೆ.

ಶರೀರದ ಪ್ರತಿಯೊಂದು ಅಂಗವೂ ಸ್ಫಟಿಕದಂತೆ ಪಾರದರ್ಶಕವಾಗಿದೆ ಎಂದು ನೀನು ಬರೆದಿದ್ದೀಯೆ. ನೀನೆಲ್ಲೋ ತಪ್ಪಿದೆ ಅಥವಾ ಈ ಸ್ಥಿತಿಯನ್ನು ಅರ್ಥಮಾಡಿಕೊಳ್ಳದಾದೆ ಎಂದು ನನಗೆ ಅನಿಸುತ್ತದೆ. ನಿನ್ನ ಶರೀರದ ಪ್ರತಿಯೊಂದು ಕಣದಲ್ಲಿ ನಿನಗೆ ಪ್ರಭುವಿನ (ಗುರುವಿನ) ರೂಪ ಅನುಭವಕ್ಕೆ ಬಂದಿರಬಹುದು ಇದು ಒಂದು ಒಳ್ಳೆಯ ಸ್ಥಿತಿ.

*"ನಾನು ಎಂದಾಗ ನನ್ನತನದ ಅರಿವೂ ಬರುವುದಿಲ್ಲ, 'ನೀನು' ಎಂದಾಗ 'ನೀನು' ಎಂಬ ಅರಿವೂ ಬರುವುದಿಲ್ಲ"* ಎಂದೂ ನೀನು ಬರೆದಿದ್ದೀಯೆ. ಇನ್ನೂ ದೇಹ–ಪ್ರಜ್ಞೆ ನಿನ್ನಲ್ಲಿ ಉಳಿದಿದೆ, ಅದು ಮರೆಯಾಗಿ ಹೋಗಲು ಇನ್ನೂ ಸಮಯ ಬೇಕು. 'ನಿನ್ನ ಶರೀರವನ್ನು ಗುರುವಿನ ಶರೀರ' ಎಂದು ತಿಳಿದು ಧ್ಯಾನ ಮಾಡುತ್ತಿರಬಹುದೆಂಬುದರ ಚಿಹ್ನೆ ಇದು; ಇದು ಲಯಾವಸ್ಥೆಯ ಎರಡನೆಯ ಹಂತ. ಆದರೆ ಮುಂದಿನ ನೆಲೆ ತನ್ನಿಂದ ತಾನೇ ಪ್ರಕಟವಾಗುವ ವರೆಗೆ ನೀನು ಇದನ್ನು ಮಾಡುತ್ತ ಹೋಗು.

ಅಮ್ಮಾಜಿಯವರಿಗೆ ನನ್ನ ವಂದನೆಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೮ **ಪತ್ರ ಸಂಖ್ಯೆ – ೩೦೬** ಷಾಹಜಹಾನಪುರ
೨೫–೦೪–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ದಿನಾಂಕ ೪–೧–೧೯೫೩ರ ನಿನ್ನ ಪತ್ರ ತಲುಪಿದೆ. ಓದಿ ನನಗಾದ ಸಂತೋಷ ಅಷ್ಟಿಷ್ಟಲ್ಲ. ಗಾಜು ಮತ್ತು ರತ್ನಗಳು ಒಂದೇ ಬೆಲೆಗೆ ಮಾರಾಟವಾಗುವುದು ಈ ಕಾಲದ ವಿಶೇಷತೆಯಾಗಿದೆ. ತಪ್ಪು ಕಾಲದ್ದಲ್ಲ, ಕಾಲವನ್ನು ಕೆಡಿಸಿದವರದು. ಇಲ್ಲಿ



(ಈ ಕಾಲದಲ್ಲಿ) ಒಂದಿಷ್ಟು ಓದಿಕೊಂಡವರು, ಧಾರ್ಮಿಕ ವಿಚಾರಗಳನ್ನು ತಿಳಿದವರು 'ಗುರು' ಆಗಿ ಬಿಡುತ್ತಾರೆ; ಮತ್ತು ಅವರಿಗೆ ಬೋಧಿಸುವವರೂ (ಕಲಿಸುವವರೂ) ಹೆಚ್ಚುಪಕ್ಷ ಅಂಥವರೇ ಆಗಿರುತ್ತಾರೆ. ಸಂತನ (ಸಂನ್ಯಾಸಿಯ) ವೇಷ ಧರಿಸಿದರಾಯಿತು, ಅವರು ಜಗದ್ಗುರುಗಳಾಗಿಬಿಟ್ಟರು; ಮತ್ತು ಜನರಿಗೆ ದೊಡ್ಡ–ದೊಡ್ಡ ಪೂಜೆಗಳನ್ನು ಕಲಿಸಲು ತೊಡಗಿದರು. ಅವರ ಬಾಹ್ಯವೇಷದ ಕಾರಣ ಜನರು ಅವರಲ್ಲಿ ವಿಶ್ವಾಸವಿಡತೊಡಗಿದರು, ಮತ್ತು ಅವರು ಆ ಪೂಜಾದಿಗಳನ್ನು ಮಾಡಲು ಪ್ರಾರಂಭಿಸಿದರು. ನನ್ನಲ್ಲಿ ವೇಷ ಒತ್ತಟ್ಟಿಗಿರಲಿ, ಬಣ್ಣವೂ ಉಳಿಯದಿರುವಾಗ, ನನ್ನನ್ನು ಯಾರು ತಾನೆ ಕೇಳುತ್ತಾರೆ! ಒಂದು ವೇಳೆ ನಾನು ಹೀಗಿರುವುದು ಯಾಕೆ ಎಂದರೆ, 'ಸಾಧು'ಗಳಲ್ಲಿ (ಸಾಧುಗಳೆನಿಸಿದವರಲ್ಲಿ) ಕಂಡುಬರುವ ಚಾತುರ್ಯಗಳ ಲೇಶವೂ ನನ್ನಲ್ಲಿಲ್ಲವಲ್ಲ! *'ಯಾರ ದೃಷ್ಟಿ ಅಂತರ್ಮುಖಿಯಾಗುವುದೋ ಮತ್ತು ಯಾರು (ನಿಜವಾದ) ತಮ್ಮನ್ನು ತಮ್ಮೊಳಗೆ ಕಾಣತೊಡಗುವರೋ ಮತ್ತು ಅಂಥ ಇಪ್ಪತ್ತು ಜನರನ್ನು ಒಂದು ವೇಳೆ ನಾನು ತಯಾರು ಮಾಡಬಲ್ಲೆನಾದರೆ, ನನ್ನ ಕಾರ್ಯ ಪೂರ್ಣಗೊಂಡಂತೆಯೇ'* ಎಂದು ಸ್ವಾಮಿ ವಿವೇಕಾನಂದರು ಅವರ ಒಂದು ಭಾಷಣದಲ್ಲಿ ಹೇಳಿದ್ದಾರೆ. ಅವರಿಗೆ ಒಬ್ಬಿಬ್ಬರಾದರೂ ಸಿಕ್ಕಿರುವುದೂ ಕಷ್ಟವೇ ಇರಬೇಕು ಎಂದು ನನಗೆ ಅನಿಸುತ್ತದೆ. ನಾನಾದರೋ ನೂರಾರು ಜನರನ್ನು (ಹಾಗೆ ಆಗಬೇಕೆಂದು) ಬಯಸುತ್ತೇನೆ. ಅಂದಮೇಲೆ ಅಂಥ ಕಾರ್ಯ ಈಶ್ವರನ ಸಹಾಯವಿಲ್ಲದೆ ಸಾಧ್ಯವಾಗದು; ಎಲ್ಲವೂ ಅವನ ಇಚ್ಛೆಯನ್ನು ಅವಲಂಬಿಸಿದೆ. ಅದಕ್ಕೆ ತಕ್ಕಂತೆ ನಾವು ಕೆಲಸ ಮಾಡುತ್ತ ಹೋಗುತ್ತೇವೆ ಅಷ್ಟೆ.

ನಮ್ಮ 'ಗುರು ಸಂದೇಶ' ಕರಪತ್ರದಲ್ಲಿ, ಈಶ್ವರ ದರ್ಶನದ (ಈಶ್ವರ ಸಾಕ್ಷಾತ್ಕಾರದ) ಸ್ಥಿತಿ ಎಂದರೇನು ಎಂಬುದನ್ನು ನೀನು ಓದಿರಬಹುದು; ನಮಗೆ ಅದೇ ಸ್ಥಿತಿ ಬೇಕಾಗಿದೆ. ಶಂಖ, ಚಕ್ರ, ಗದಾ, ಪದ್ಮಗಳುಳ್ಳವನೇ 'ಸತ್ಯವಸ್ತು' ಎಂದು ತಿಳಿದವರಿಗೆ, ಈಶ್ವರನು ನಮ್ಮಂತೆ ಶರೀರ ಹೊಂದಿದವನೆಂದು ತಿಳಿದವರಿಗೆ ಅವನೇ ಶುಭಾಶಯ ಹೇಳಲಿ. ಈಶ್ವರನು 'ಭೌತಿಕ' (Material) ಎಂದು ತಿಳಿಯುವುದರಿಂದ ಆಧ್ಯಾತ್ಮಿಕ ಲಾಭವೇನೂ ಆಗದು, ಅಲ್ಲದೆ ಅದು ಈಶ್ವರನಿಗೆ ಅಪಮಾನ ಮಾಡಿದಂತೆ. ಇದರಿಂದ ಆಗುವ ಹಾನಿ ಎಂದರೆ, ನಮ್ಮ ದೃಷ್ಟಿ ಭೌತಿಕ ಪದಾರ್ಥಗಳ ಮೇಲೆಯೇ ಸ್ಥಿರವಾಗಿ ನೆಲೆಗೊಳ್ಳುತ್ತದೆ. ಮತ್ತು ಈಶ್ವರನು ಅಪ್ರಸನ್ನನಾಗುವುದಕ್ಕೆ ಇದು ಒಂದು ಅವಕಾಶ ಉಂಟು ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ಒಬ್ಬ ಸ್ವಚ್ಛ, ಶುದ್ಧ ವ್ಯಕ್ತಿಯನ್ನು ಹೊಲಸು ವ್ಯಕ್ತಿ ಎಂದು ಕರೆದರೆ ಅವನು ಬೇಸರಪಟ್ಟುಕೊಳ್ಳುತ್ತಾನೆ. ನೀನು ಈಶ್ವರ ದರ್ಶನದ ಸ್ಥಿತಿಯನ್ನು ಅದಾಗಲೇ ಈ ಮೊದಲು ಪಡೆದಿದ್ದೆ; ಆದರೆ ಸ್ಫುಟವಾಗಿರಲಿಲ್ಲ. ಆದರೆ ಈಗ ನೀನು ಅದಕ್ಕಿಂತ ಮುಂದಕ್ಕೆ ಹೋಗಬೇಕಿದೆ. ಅದನ್ನು ಒಂದು ಮಕ್ಕಳ ಆಟಿಗೆ ಎಂಬಂತೆ ತಿಳಿ, ನಾವು ನಮ್ಮೊಳಗೆ ಮುಳುಗುತ್ತ (ಕರಗುತ್ತ) ಹೋಗಬೇಕು ಮತ್ತು ನಾವು (ಅಂತಃ) ಸೌಂದರ್ಯವನ್ನು ಕಾಣಬೇಕು.

P-4-Books-PM-7-Anantyatre-79



ಅಂತರ್ಮುಖಿಯಾಗುವುದರ ಲಾಭ ಇದೇ ಆಗಿದೆ. ಆದರೆ ಈ ಸ್ಥಿತಿಯು, ಇದೇ ಸಾಕಷ್ಟಾಯಿತು ಎಂದು ತಿಳಿದು ಅಲ್ಲಿಯೇ ದೀರ್ಘ ಸಮಯ ನಿಲ್ಲಲು ಯೋಗ್ಯವಾದುದಲ್ಲ. ಇದು ನಿಜವಾದ ಬ್ರಹ್ಮ ವಿದ್ಯೆಯ ಪ್ರಾರಂಭಮಾತ್ರ. ನೀನು ಇನ್ನೂ ಮುಂದಕ್ಕೆ, ಮುಂದಕ್ಕೆ ಕ್ರಮಿಸಬೇಕು. ಈ ದೃಶ್ಯ ನೋಡುತ್ತಿರುವ (ಈ ಅನುಭವದ) ಪರಿವೆಯೂ ಇಲ್ಲದಾದಾಗ, ಅದು ನಿಜವಾದ ಸ್ಥಿತಿಯ ಕಡೆಗಿನ ಎರಡನೆಯ ಹೆಜ್ಜೆ. ನೀನು ಮುಂದಕ್ಕೆ ಹೋದಂತೆ ಅದರ ಸ್ವರೂಪ (ಅನುಭವ) ಕೂಡ ಬದಲಾಗುತ್ತ ಹೋಗುತ್ತದೆ. ಇನ್ನೂ ನಾವು ಸೇರಬೇಕಾದ ಆಗಾಧ ಸಮುದ್ರ ಮೈಲುಗಟ್ಟಲೆ ದೂರವಿದೆ.

*‘ಈಗ, ಯಾವುದೇ ಆಸಕ್ತಿ, ಬಂಧ ಇಲ್ಲದಂಥ ಸ್ಥಿತಿ ಇದೆ, ಮತ್ತು ಯಾವುದೇ ರೀತಿಯ ಭಾರವೂ ಇಲ್ಲ’* ಎಂದು ನೀನು ಬರೆದಿದ್ದೀಯೆ. ಅಂದರೆ ಸ್ಥೂಲತರ ‘ಅಹಂ’ (self) ಈಗ ಮರೆಯಾಗಿ ಹೋಯಿತು. ಹಾಗೂ ನೀನು ಯಾವುದೇ ಕಾರ್ಯದ ಕರ್ತ ಅಲ್ಲ, ಮತ್ತು ಸಂಸ್ಕಾರಗಳು ಉಂಟಾಗುತ್ತಿಲ್ಲ ಎಂದು ಅರ್ಥ. *‘ನನ್ನ ವೃತ್ತಿಗಳು (ಇಂದ್ರಿಯಗಳು) ಅಳಿದು ಹೋಗಿವೆ’* ಎಂದೂ ಬರೆದಿದ್ದೀಯೆ; ಅದು ಬಹುಮಟ್ಟಿಗೆ ಸರಿ ಇದೆ. ಆದರೆ ವೃತ್ತಿಗಳಲ್ಲಿ (ಇಂದ್ರಿಯ) ಇನ್ನೂ ಮಂದತ್ವ ಇದೆ, ಇನ್ನೂ ಅವು ಶುದ್ಧ (ಪರಿಷ್ಕೃತ)ವಾಗಿಲ್ಲ. ಲಯಾವಸ್ಥೆ ಬೆಳೆಯುತ್ತಹೋದಹಾಗೆ ಇಂದ್ರಿಯಗಳು (ವೃತ್ತಿಗಳು) ಶುದ್ಧವಾಗುತ್ತ ಹೋಗುತ್ತವೆ; ಮತ್ತು ನಿರಸನದ ಸಂಪೂರ್ಣಗೊಂಡ ಸ್ಥಿತಿಯಲ್ಲಿ ಅವೂ ಸಂಪೂರ್ಣ ಶುದ್ಧವಾಗುವಾಗುತ್ತವೆ. ನನ್ನ ದೃಷ್ಟಿಗೆ ಏನು ಮಾಡಲಿ, ನೀನು ಎಲ್ಲಿಯವರೆಗೆ ಉನ್ನತಿ ಹೊಂದಿ ತಲುಪಿದ್ದೀಯೋ, ಅದು ನನಗೆ ಇನ್ನೂ ಆರಂಭದ ಬಿಂದು ಎಂದೇ ಅನಿಸುತ್ತದೆ.

‘ಸಾಕ್ಷಾತ್ಕಾರ’ವನ್ನು ಕುರಿತು ನನ್ನ ಕಲ್ಪನೆ ಬಹಳ ಎತ್ತರದ್ದಿದೆ. ಈಶ್ವರನಲ್ಲಿ ಸಂಪೂರ್ಣ ಲಯಾವಸ್ಥೆಯನ್ನು ಹೊಂದುವವರೆಗೂ (ಅಲ್ಲಿಯವರೆಗೆ) ಅಭ್ಯಾಸಿಯು (ಸಾಧಕ) ಪೂರ್ಣರೀತಿಯಲ್ಲಿ ಸಾಕ್ಷಾತ್ಕಾರ ಹೊಂದಿದವನೆಂದು ನಾನು ಹೇಳಲಾರೆ. ಸದ್ಯದಲ್ಲಿ, ಅಂಥ ಯಾವೊಬ್ಬ ವ್ಯಕ್ತಿಯೂ ನನ್ನ ಕಣ್ಣಿಗೆ ಬೀಳುತ್ತಿಲ್ಲ. ನಮ್ಮ ಗುರುಮಹಾರಾಜರು ಯಾರನ್ನಾದರೂ ಹಾಗೆ ತಯಾರು ಮಾಡಿದ್ದಿರಬಹುದೆಂಬುದು ಬೇರೆ ಮಾತು. ಮಗಳೆ, ನಾನು ಆಧ್ಯಾತ್ಮಿಕ ವಿಷಯದಲ್ಲಿ, ಸಮೀಪ ದೃಷ್ಟಿ (short sighted)ಯುಳ್ಳವನಾಗಿರಲಿಕ್ಕಿಲ್ಲವಷ್ಟೆ? ಒಂದು ಕತೆ ಹೇಳುತ್ತೇನೆ. ‘ನೀನು ಅರ್ಜುನನ್ನೇ ಏಕೆ ಅಷ್ಟು ಪ್ರೀತಿಸುತ್ತೀಯೆ, ನಾನೂ ನಿನ್ನ ಬಂಧುವೇ ಸರಿ, ಆದರೆ ನನ್ನನ್ನು ಯಾಕೆ ಪ್ರೀತಿಸುವುದಿಲ್ಲ?’ ಎಂದು ದುರ್ಯೋಧನ ಶ್ರೀಕೃಷ್ಣನನ್ನು ಪ್ರಶ್ನಿಸಿದನಂತೆ. ಶ್ರೀಕೃಷ್ಣ ಕೆಲಸಮಯದ ನಂತರ ಇದಕ್ಕೆ ಮಾರುತ್ತುರ ಕೊಟ್ಟ: ಇಡೀ ಅರ್ಜುನನ ರಾಜ್ಯದಲ್ಲಿ ಕೆಟ್ಟವರು ಯಾರು ಇದ್ದಾರೆ ಎಂಬ ಪಟ್ಟಿ ಮಾಡುವಂತೆ ಅರ್ಜುನನಿಗೆ ಮತ್ತು ದುರ್ಯೋಧನನ ರಾಜ್ಯದಲ್ಲಿ ಯಾರು ಒಳ್ಳೆಯವರಿದ್ದಾರೆ ಎಂದು ಪಟ್ಟಿ ಮಾಡುವಂತೆ ದುರ್ಯೋಧನನಿಗೆ ಹೇಳಿದ. ಇಬ್ಬರೂ ಹೊರಟರು.... ಮರಳಿ



ಬಂದು ‘ನನಗೆ ಒಬ್ಬನೂ ಕೆಟ್ಟ ಮನುಷ್ಯ ಕಾಣಲಿಲ್ಲ’ ಎಂದು ಅರ್ಜುನ ಹೇಳಿದರೆ ಹೇಳಿದರೆ, ‘ನನಗೆ ಒಬ್ಬನೂ ಒಳ್ಳೆಯ ಮನುಷ್ಯ ಕಾಣಲಿಲ್ಲ’ ಎಂದು ದುರ್ಯೋಧನ ಹೇಳಿದನು. ಆಗ ಕೃಷ್ಣ ‘ಈ ಕಾರಣದಿಂದಲೇ ನಾನು ಅರ್ಜುನನ್ನು ಪ್ರೀತಿಸುವುದು. ಅರ್ಜುನ ಎಷ್ಟು ಒಳ್ಳೆಯವನೆಂದರೆ, ಪ್ರತಿಯೊಬ್ಬರೂ ಅವನಿಗೆ ಒಳ್ಳೆಯವರಾಗಿಯೇ ಕಾಣುತ್ತಾರೆ. ನೀನು ಕೆಟ್ಟವನಾದ್ದರಿಂದ ನಿನಗೆ ಯಾರೂ ಒಳ್ಳೆಯವರಾಗಿ ಕಾಣುವುದೇ ಇಲ್ಲ’ ಎಂದು ಹೇಳಿದನಂತೆ. ನಾನೆಲ್ಲಿ ದುರ್ಯೋಧನನ ದೃಷ್ಟಿ ಬೆಳೆಸಿಕೊಂಡಿರುವೆನೆ? ಎಂದು ನನಗೆ ಭಯವಾಗುತ್ತದೆ.

*‘ನನ್ನಷ್ಟು ಚಿಕ್ಕವರು ಜಗತ್ತಿನಲ್ಲಿ ಯಾರೂ ಇಲ್ಲ’* ಎಂದು ನೀನು ಬರೆದಿದ್ದೀಯೆ. ಇದು ಒಂದು ಗತಿ. ಅದು ಬ್ರಹ್ಮಗತಿಯೊಂದಿಗೆ ಸಂಬಂಧಹೊಂದಿದೆ. ಇದರಲ್ಲಿ ಕೂಡ ಇದಕ್ಕಿಂತ ಉತ್ತಮ ಸ್ಥಿತಿಯು ಉಂಟಾಗುವುದು; ಆದರೆ ಇದರ ಮುಂದಿನ ಸ್ಥಿತಿಯೂ ಚರಮಗತಿ (ಸ್ಥಿತಿ) ಆಗಿರುವುದಿಲ್ಲ. ಇದರ ನಂತರ ಯಾವ ಸ್ಥಿತಿ ಉಂಟಾಗುವುದೆಂಬುದನ್ನು ನಾನು ಹೇಳಿಬಿಡುತ್ತಿದ್ದೆ. ಆದರೆ, ಪೂರ್ವಭಾವಿಯಾಗಿಯೇ ಅದನ್ನು ಕುರಿತ ಕಲ್ಪನೆಯನ್ನು ನೀನು ಗಟ್ಟಿಗೊಳಿಸಿಕೊಳ್ಳಬಾರದೆಂದು ಅದನ್ನು ಹೇಳಬಯಸುವುದಿಲ್ಲ. ಈಶ್ವರೇಚ್ಛೆಯಿದ್ದರೆ, ಆ ಸ್ಥಿತಿಯೂ ಉಂಟಾಗುವುದು. *‘ಮೊದಲು ನನ್ನ ಮನಸ್ಸು, ಬುದ್ಧಿ, ವ್ಯವಹಾರ ಎಲ್ಲವೂ ನನ್ನ ವಶದಲ್ಲಿತ್ತು, ಆದರೆ ಈಗ ನಾನು ಎಲ್ಲವನ್ನೂ ಮರೆತಂತೆ ಇರುತ್ತೇನೆ’* ಎಂದು ಬರೆದಿದ್ದೀಯೆ. ಅಂದರೆ ಎಲ್ಲ ಬಣ್ಣಗಳೂ ಮಿಲಿತಗೊಳ್ಳಲು ಪ್ರಾರಂಭಿಸಿವೆ, ಆದರೆ ಇನ್ನೂ ಎಲ್ಲ ಬಣ್ಣಗಳೂ ಪೂರ್ಣವಾಗಿ ಸೇರಿ ಒಂದಾಗಿ ಬಿಳಿಯ ಬಣ್ಣವಾಗಲು ಶಕ್ಯವಾಗಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಈಶ್ವರನ ಕೃಪೆಯಿಂದ ಅದೂ ಆಗುವುದು. **‘ನನ್ನ ಸೌಂದರ್ಯ, ನನ್ನ ಆನಂದೋನ್ಮಾದ, ಎರಡೂ ನನ್ನದೇ ಆದ ಒಂದು ವಿನಮ್ರ ಚಮತ್ಕಾರ’ವಾಗಿದೆ’–** ಎಂದು ಬರೆದಿದ್ದೀಯೆ. ‘ಅದ್ವೈತ’ದ ಅವಸ್ಥೆ ಆರಂಭವಾಗಿದೆಯೆಂದು ಇದರ ಅರ್ಥ. ಅದರ ಪೂರ್ಣಗತಿ ಉಂಟಾದಾಗ ಅದರ ಪ್ರವೃತ್ತಿ (ಸ್ವರೂಪ) ಕೊಂಚ ಬದಲಾಗುವುದು; ಅದನ್ನು ನಾನು ಪೂರ್ವಭಾವಿಯಾಗಿ ಹೇಳಬಯಸುವುದಿಲ್ಲ; ಅದು ಈಶ್ವರ ದರ್ಶನದ ಸ್ಥಿತಿಗಿಂತ ಬಹಳೇ ಉನ್ನತ ಸ್ಥಿತಿಯಾಗಿರುವುದು. ಪತ್ರದಲ್ಲಿ ನೀನು ಮುಂದೆ ಕೊಟ್ಟ ಉದ್ಧೃತವಾಕ್ಯವೂ ‘ಅದ್ವೈತ’ದ ಸ್ಥಿತಿ ಬಂದಾಗಿನ ಶುಭ ಸಮಾಚಾರವನ್ನು ಕೊಡುತ್ತದೆ. ಆದರೆ, ನಿನ್ನ ‘ಅಹಂ’ (Ego) ಭಾವವು ಇನ್ನೂ ಪೂರ್ತಿಯಾಗಿ ಅಳಿದುಹೋಗಿಲ್ಲ. ನಿನ್ನ ಸ್ಥಿತಿ ಇದೇ ರೀತಿ ಮುಂದುವರಿದರೆ ಈಶ್ವರಕೃಪೆಯಿಂದ ಅದೂ ಕೂಡ ಉಂಟಾಗುವುದು.

ಈ ಸ್ಥಿತಿಗಳು ಯೋಗಮಾರ್ಗದಲ್ಲಿ ನಡೆಯದ ಹೊರತು ಪ್ರಾಪ್ತವಾಗಲಾರವು; ಅದರೊಂದಿಗೆ ನಮ್ಮ ಗುರುಮಹಾರಾಜರಂಥ ಮಾರ್ಗದರ್ಶಕರು ಇರಬೇಕು. ನಮಗೆಲ್ಲರಿಗೂ ಅವರೇ ಮಾರ್ಗದರ್ಶಕರು, ಅವರಿಗೆ ಸಾಟಿ ಅವರೇ. ನಾನು ಈ

ಎಲ್ಲ ಸ್ಥಿತಿಗಳನ್ನು ಜನರ ಮುಂದೆ ಇಟ್ಟರೂ ಕೂಡ, ಅವುಗಳನ್ನು ಪಡೆಯಲು ಹಾತೊರೆಯುವವರು ಬಹಳ ಕಡಿಮೆ ಸಿಗಬಹುದು. ಒಬ್ಬಿಬ್ಬರು ಈ ವಿಷಯದ ಬಗ್ಗೆ ನನ್ನೊಂದಿಗೆ ಮಾತನಾಡಿದರು; ಆದರೆ ನನ್ನ ಮೂಲಕ ಅವುಗಳನ್ನು ಪಡೆಯಬಹುದು ಎಂಬ ಬಗ್ಗೆ ಅವರಿಗೆ ಭರವಸೆಯಿಲ್ಲ. ಯಾಕೆಂದರೆ, ಅವರ ವ್ಯಾಖ್ಯೆಯ ಪ್ರಕಾರ ನಾನು ಮಹಾತ್ಮನಾಗಿರಲಿಲ್ಲ. ಇದೂ ಸರಿಯೆ, ನಾನೊಬ್ಬ ಸಾಮಾನ್ಯ ಮನುಷ್ಯ. ಮತ್ತು ನನ್ನ ಗುರುಮಹಾರಾಜರು ನನ್ನನ್ನು ಹಾಗೆಯೇ ಮಾಡಿದ್ದಾರೆ. ಆದರೆ ಬಂಧು, ನಿನೊಬ್ಬ 'ಮಹಾತ್ಮ' ಅಥವಾ 'ಸಂತಳು'. ನನ್ನ ಅಭಿಪ್ರಾಯದಲ್ಲಿ ಮಹಾತ್ಮನಾಗುವುದು ಒಳ್ಳೆಯದಿದ್ದೀತು, ಯಾಕೆಂದರೆ ಅದೊಂದು ದೊಡ್ಡ ಸಾಧನೆಯೇ ಸರಿ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೭೯ **ಪತ್ರ ಸಂಖ್ಯೆ – ೩೧೧** ಷಾಹಜಹಾನಪುರ
೧೨–೦೫–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ದಿನಾಂಕ ಮೇ ೫ರ ನಿನ್ನ ಪತ್ರದ ಉತ್ತರವಿಷ್ಟೆ; ನಿನ್ನ ಲಯಾವಸ್ಥೆ (ಅದನ್ನು ಫನಾಯಿಯತ್ ಎಂದೂ ಕರೆಯುತ್ತಾರೆ) ವೃದ್ಧಿಗೊಳ್ಳುತ್ತಿದೆ. ಸೌಭಾಗ್ಯಶಾಲಿಗಳಾದ ಅಭ್ಯಾಸಿಗಳಲ್ಲಿ ಈ ಸ್ಥಿತಿ ಉಂಟಾಗುತ್ತದೆ. ಆದರೆ ತುತ್ತತುದಿಯು ಇನ್ನೂ ಬಹು ದೂರವಿದೆ ಮತ್ತು ಅಂತರ್ಬಾಹ್ಯದಲ್ಲಿ ಅದೇ ಸ್ಥಿತಿ ಅನುಭವಕ್ಕೆ ಬರುತ್ತದೆ. ತನ್ನೊಳಗೆ ಕರಗಿಹೋಗಿ, ತನ್ನನ್ನೇ ಕಳೆದುಕೊಳ್ಳುವುದೇ ಆಧ್ಯಾತ್ಮಿಕತೆ.

ಒಂದು ಮಾತು ನಿನಗೆ ಬರೆಯಲು ಮರೆತಿದ್ದೆ. ನೀನು ಧಾರ್ಮಿಕ ಗ್ರಂಥಗಳ ಅಧ್ಯಯನ ಮಾಡಬೇಕು. ನೀನು ಉಪನಿಷತ್ತುಗಳು ಮುಂತಾದ ಪ್ರತಿಯೊಂದು ಗ್ರಂಥವನ್ನೂ ಓದಬಲ್ಲೆ. ಈಶ್ವರೇಚ್ಛೆಯಿದ್ದರೆ, ನೀನು, ಜಂಬಕೊಚ್ಚಿಕೊಳ್ಳುವ ಅನೇಕ ಢೋಂಗಿ ವ್ಯಕ್ತಿಗಳಿಗಿಂತಲೂ ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆ. ನಾನು ಓದತೊಡಗಿದೆ, ಆದರೆ ಮರೆತುಬಿಡುತ್ತೇನೆ. ಪಂಡಿತರುಗಳ ಮುಂದೆ ನಾನು ಹಗುರನೆಂಬ ಭಾವನೆ ಬರುತ್ತದೆ. ಆದರೆ ನಿನ್ನಲ್ಲಿ ಈ ಕೊರತೆಯಿರಲು ಬಿಡಬೇಡ.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೮೦ **ಪತ್ರ ಸಂಖ್ಯೆ – ೩೧೪** ಷಾಹಜಹಾನಪುರ
೨೫–೦೫–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ಮೇ ೧೯ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. ನಿನ್ನೆ ಸುಮಾರು (ಬೆಳಗಿನ) ೧೧ ಗಂಟೆಗೆ ನಿನ್ನನ್ನು 'ಆರ್' (R) ಬಿಂದುವಿನಿಂದ 'ಎಸ್'(S) ಬಿಂದುವಿನವರೆಗೆ ತಲುಪಿಸಿದ್ದೇನೆ. ನೀನು ಅಧ್ಯಯನ ಮಾಡಬೇಕು; ನಿನ್ನ ಸ್ವಂತಕ್ಕೋಸ್ಕರ ಅಲ್ಲ; ಇತರರಿಗೋಸ್ಕರ. ಚೌಬೇಜಿಯವರ ಬಳಿ ಕೆಲವು ಪುಸ್ತಕಗಳಂತೂ ಇದ್ದೇ ಇರಬಹುದು. ನಾನು ನನ್ನಲ್ಲಿ ಈ ಕೊರತೆಯನ್ನು ಅನುಭವಿಸುತ್ತಿದ್ದೇನೆ. ನಿನ್ನೆ ರಾತ್ರಿ ನಾನು (ನಿನ್ನ) ಕೆಲವು ಬಂಧನ (ಸೀಮಿತತೆ)ಗಳನ್ನು ಸಡಿಲಗೊಳಿಸಿದ್ದೇನೆ. ಆದರೆ ಅವುಗಳನ್ನು ಖಂಡಿತ ಕಡಿದು ಹಾಕಿಲ್ಲ; ಆದರೆ ಇದರಿಂದಾಗಿ ನೀನು ಪುಸ್ತಕಗಳನ್ನು ಗ್ರಹಿಸಲು ನಿಶ್ಚಿತವಾಗಿಯೂ ಸಹಾಯವಾಗುತ್ತದೆ. ಮತ್ತು ಅರ್ಥಗ್ರಹಣ ಶೀಘ್ರವಾಗಿ ಸಿಗುತ್ತದೆ. ಯಾವ ಸ್ಥಿತಿಯನ್ನು ಕುರಿತು ನೀನು ಬರೆದಿರುವಿಯೋ ಅದು ಒಳ್ಳೆಯದಿದೆ. ಪ್ರತಿಯೊಂದು ಸ್ಥಳ, ಪ್ರತಿಯೊಂದು ವಸ್ತು – ಎಲ್ಲವೂ ಶೂನ್ಯವೆಂದೆನಿಸುತ್ತದೆ ಎಂದು ನೀನು ಬರೆದಿದ್ದೀಯೆ. ನೀನು 'ಸತ್ಯ'ಕ್ಕೆ ಅಂಟಿಕೊಳ್ಳಲು ಪ್ರಾರಂಭಿಸಿದ್ದೀಯೆ ಎಂದು ಇದರ ಅರ್ಥ. ಈ ಸ್ಥಿತಿಯು ಇನ್ನೂ ಬೆಳೆಯುವುದು. ಮನಸ್ಸು ಆಕುಂಚನಗೊಳ್ಳುತ್ತಿದೆ' ಎಂದು ಬರೆದಿದ್ದೀಯೆ. ನಿನ್ನ ಮನಸ್ಸಿನ ಪ್ರವೃತ್ತಿಯು ಸಾಕಷ್ಟು ಊರ್ಧ್ವಮುಖಿಯಾಗಿದೆ ಮತ್ತು ಅದರಲ್ಲಿ ಇರಬಾರದಂಥ ಅನೇಕ ವಸ್ತುಗಳು ಹೊರಟು ಹೋಗಿವೆ ಎಂಬುದನ್ನು ಇದು ಸೂಚಿಸುತ್ತದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೧ **ಪತ್ರ ಸಂಖ್ಯೆ – ೩೨೦** ಷಾಹಜಹಾನಪುರ
೦೬–೦೬–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿವೆ. ನೀನು ಕೆಲವು ಧಾರ್ಮಿಕ ಗ್ರಂಥಗಳನ್ನು ಓದು ಎಂದು ನಾನು ಯಾಕೆ ಹೇಳುತ್ತೇನೆಂದರೆ, ನಿನ್ನ ಅನುಭವಶಕ್ತಿ ಚೆನ್ನಾಗಿದೆ (ನಿಶಿತವಾಗಿದೆ). ನಿನ್ನ ಅನೇಕ ಸೀಮಿತತೆಗಳನ್ನು ನಾನು ಸಡಿಲ ಮತ್ತು ಮಂದಗೊಳಿಸಿದ್ದೇನೆ. ಇದರಿಂದ ಅವು ತನ್ನಿಂದ ತಾನೇ ಶೀಘ್ರವಾಗಿ ಇಲ್ಲವಾಗಲು ಸಾಧ್ಯ. ಅವು ತುಂಬಾ ಹಗುರಾಗುವುದು ಪ್ರಾರಂಭವಾಗಿದೆ; ನಿನ್ನಲ್ಲಿ ಜ್ಞಾನವು ತನ್ನಿಂದ ತಾನೇ ವರ್ಧಿಸುತ್ತಿರುವಂತೆ ಕಂಡುಬರುತ್ತಿದೆ. ನೀನು ಮಿಷನ್ನಿನ ಒಂದು ಸ್ತಂಭವಾಗುವುದು ಸಾಧ್ಯ. ನೀನು ಮಾತನಾಡುವ ರೂಢಿಯನ್ನು ಬೆಳೆಸಿಕೊಳ್ಳಬೇಕೆಂದು ಬರೆಯಲು ಬಯಸುತ್ತೇನೆ, ಆದರೆ ಸಂಕೋಚವೆನಿಸುವುದೇಕೆಂದರೆ, ನೀನು

P-4-Books-PM-7-Anantyatre-81



(ಶರೀರದಲ್ಲಿ) ದುರ್ಬಲಳಾಗಿದ್ದೀಯೆ, ಮತ್ತು ಮಾತನಾಡುವದು ನಿನಗೆ ಕಷ್ಟವೆನಿಸುತ್ತದೆ.

ನಿನ್ನ ಕಿರುಪುಸ್ತಕ 'ಸಹಜ ಸಮಾಧಿ' ಮುದ್ರಣಗೊಂಡಿದೆ. ನಾನು ನಿನಗೆ ೫೦ ಪ್ರತಿಗಳನ್ನು ಕಳುಹಿಸುತ್ತಿದ್ದೇನೆ. ನಿನ್ನ ಪ್ರತಿಯೊಂದು ಪತ್ರಕ್ಕೂ ಉತ್ತರ ಬರೆಯಲು ಬಯಸುತ್ತೇನೆ; ಯಾರಾದರೂ ಬರೆದುಕೊಳ್ಳುವವರು ದೊರೆತರೆ ಹೇಳಿ ಬರೆಸುತ್ತೇನೆ. ನೀನು ಎಲ್ಲ ಪತ್ರಗಳನ್ನು ಮತ್ತು ಅವುಗಳ ಉತ್ತರಗಳನ್ನು ಒಂದು ರಿಜಿಸ್ಟರಿನಲ್ಲಿ ಪ್ರತಿಮಾಡಿ ಇಡಬೇಕೆಂಬುದು ನನ್ನ ಇಚ್ಛೆ. ಈ ಎಲ್ಲ ಪತ್ರಗಳನ್ನೂ ಪ್ರಕಟಿಸುವುದು ಆವಶ್ಯಕವೆನಿಸುವ ಸಮಯವೊಂದು ಬಂದೇ ಬರುತ್ತದೆ.

ಮೇ ೨೭ಕ್ಕೆ ಬಂದ ಪತ್ರದಲ್ಲಿ ನೀನು 'ಶೂನ್ಯ' (Zero)ವನ್ನು ಸುಮಾರು ಅರು ವಾಕ್ಯಗಳಲ್ಲಿ ವಿವರಿಸಿದ್ದೀಯೆ. ಶೂನ್ಯ (Zero)ವಾದರೋ ಇನ್ನೂ ಬಲುದೂರ ಇದೆ. ಅಭ್ಯಾಸಿಯು ಎಲ್ಲವನ್ನು ಸಾಧಿಸಿ ಪಡೆದ ಮೇಲೆ ಆವಶ್ಯಕವೆಂದೆನಿಸುವಂಥದು ಏನೂ ಖಂಡಿತ ಉಳಿಯುವುದಿಲ್ಲ. ಮತ್ತು ಆ 'ಸ್ಥಿತಿ'ಗೆ 'ಶೂನ್ಯ' (Zero) ಸ್ಥಿತಿಯೆಂದು ಕರೆಯಲಾಗುತ್ತದೆ. ಸದ್ಯವಂತೂ ನೀನು ಸೇರಿನಲ್ಲಿ ಒಂದು ಚಟಾಕಿನಷ್ಟು ಕೂಡ ಪಡೆದಿಲ್ಲ. ಆದರೆ ಈಶ್ವರನ ಅನುಗ್ರಹದಿಂದ ಪ್ರಗತಿ ಹೊಂದುತ್ತೀಯೆ.

ವೈರಾಗ್ಯದ ಪೂರ್ಣಾವಸ್ಥೆಯನ್ನು ತಲುಪಿದ ಶುಭ ಸಂತೋಷದ ಸಮಾಚಾರವನ್ನು ನಿನ್ನ ಪತ್ರ ತಂದಿದೆ. ವೈರಾಗ್ಯದ ಪೂರ್ಣಾವಸ್ಥೆ ಪ್ರಾಪ್ತವಾದಾಗ ಈಶ್ವರನನ್ನುಳಿದು ಇನ್ನಾವ ವಸ್ತುವಿನ ಭಾವವೂ ಉಳಿಯುವುದಿಲ್ಲ. ಈಗ ನಿನ್ನೊಳಗೆ ಈ ಸ್ಥಿತಿ ಬರುತ್ತದೆ. ಒಮ್ಮೊಮ್ಮೆ ಇದಕ್ಕಿಂತ ಉನ್ನತವಾದ ಸ್ಥಿತಿಯೂ ಬರುತ್ತದೆ, ಯಾಕೆಂದರೆ ನನ್ನ ಸ್ಥಿತಿಯ ಪ್ರತಿಫಲನವು ಅದರಲ್ಲಿ ಮಿಳಿತವಾಗಿರುತ್ತದೆ.

ಮೇ ೨೯ರ ನಿನ್ನ ಪತ್ರದಲ್ಲಿ ನೀನು 'ಶೂನ್ಯಗತಿ'ಯ ಬಗ್ಗೆ ಬರೆದುದು ಸರಿ ಇದೆ. ಇದು ಎಂಥ ಸ್ಥಿತಿಯೆಂದರೆ, ಅಭ್ಯಾಸಿಯೂ 'ಸತ್ಯ'ವನ್ನು ತಲುಪಲು ಇದರ ಮೂಲಕವೇ ಹಾದು ಹೋಗಬೇಕು. ಮತ್ತು ಇನ್ನೂ ಉನ್ನತತರವಾದ 'ಸ್ಥಿತಿ'ಯ ಪ್ರವಾಣಪತ್ರವನ್ನು ಬರೆದ ಹಲಗೆ (ಪಾಟಿ) ಇದು ಎಂದು ನೀನು ತೆಗೆದುಕೊಳ್ಳಬಹುದು. ಈ ಸ್ಥಿತಿ ಬಹು ದೂರದವರೆಗೆ ಹೊಗುತ್ತದೆ. ಇದು ಕೂಡ ಯಾವುದೋ ಒಂದು ಸಮಯದಲ್ಲಿ ಮರೆಯಾಗಿ ಹೋದಂತೆನಿಸಬಹುದು; ಆದರೆ ಅದು ನಿಜವಾದ ಗುರಿಯನ್ನು (ಗಂತವ್ಯವನ್ನು) ತಲುಪುವವರೆಗೂ ಬಿಟ್ಟು ಹೋಗುವುದಿಲ್ಲ.

'ಎಸ್' (S) ಬಿಂದುವಿನ ನಿನ್ನ ಯಾತ್ರೆ ಇನ್ನೂ ಪೂರ್ತಿಯಾಗಿಲ್ಲ. ನಾನು ಉತ್ತರಕಾಶಿಗೆ ಹೋಗಿ ತಲುಪುವಷ್ಟರಲ್ಲಿ ನಿನ್ನ ಈ ಯಾತ್ರೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತೇನೆ. ಇದಾದನಂತರ ನಾನು ನಿನ್ನನ್ನು 'ಟಿ' (T) ಬಿಂದುವಿನಲ್ಲಿ ಇಡುತ್ತೇನೆ.

ನಿನ್ನ ಹಿತೈಷಿ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೮೨ **ಪತ್ರ ಸಂಖ್ಯೆ – ೩೨೨** ಉತ್ತರಕಾಶಿ
೧೩–೦೬–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ.

ಜೂನ್ ೧೨ಕ್ಕೆ ನಿನ್ನ ಪತ್ರ ತಲುಪಿತು. ಇಲ್ಲಿ ಚಳಿ ಇಲ್ಲ. ಇಲ್ಲಿ ನಾಲ್ಕಾರು ದಿನ ಉಳಿದುಕೊಳ್ಳುವ ಇಚ್ಛೆ ಇದೆ. ಇಲ್ಲಿ ಅನೇಕ ವೇದಾಂತಿಗಳು ಮತ್ತು ಹಠಯೋಗಿಗಳಿದ್ದಾರೆ. 'ಪ್ರಾಣಾಹುತಿ'ಯನ್ನು ಬಯಸುವವರು ಇಲ್ಲಿ ಯಾರೂ ಇದ್ದಂತೆ ಕಾಣುವುದಿಲ್ಲ. ಇನ್ನೂ ನಾನು ಇಲ್ಲಿಯ ಜನರನ್ನು ಭೇಟಿಮಾಡಲು ಸಾಧ್ಯವಾಗಿಲ್ಲ. ನೀನು ಯಾವ ಪುಸ್ತಕವನ್ನು ಓದುವಿಯೋ ಅದರ ಟಿಪ್ಪಣಿ ಮಾಡಿಕೊಳ್ಳುತ್ತ ಹೋಗುವುದು ಒಳ್ಳೆಯದು. ಇಂದು ನಾನು 'ಟಿ' (T) ಬಿಂದುವಿನಲ್ಲಿ ತಂದು ಇಟ್ಟಿದ್ದೇನೆ. ಇಲ್ಲಿಯ ಜನರು ಯಾವ ಲಾಭವನ್ನು ಬಯಸದಿದ್ದಮೇಲೆ, ನಮ್ಮವರೇ ಆಗಿರುವವರಾದರೂ ಲಾಭಾನ್ವಿತರಾಗಲಿ ಎಂದು ನಾನು ಯೋಚಿಸಿದೆ. ಮಾಸ್ಟರ್ ಸಾಹೇಬರಿಗೆ ತೀರ್ಥಯಾತ್ರೆಯ ಫಲ ದೊರಕಿತು, ಮತ್ತು ನನ್ನೊಂದಿಗೆ ಇರುವವರಿಗೆಲ್ಲರಿಗೂ ಒಂದಿಷ್ಟು ಪ್ರಕಾಶವೂ ದೊರೆಯಿತು.

ಆಧ್ಯಾತ್ಮಿಕವಾಗಿ ಈ ಸ್ಥಳಕ್ಕೆ ನಾನು ಏನು ಮಾಡಬೇಕೆಂಬುದನ್ನು ಇನ್ನೂ ನಿರ್ಧರಿಸಿಲ್ಲ. ಹೇಗಿರುವುದೋ ಹಾಗೆಯೇ ಬಿಟ್ಟುಬಿಡಬಹುದು ಅಥವಾ ಈ ಸ್ಥಳದಲ್ಲಿ ಯಾವುದೇ 'ಮಹಾತ್ಮ' ತನ್ನ ಯೋಗಸಿದ್ಧಿ (ಪವಾಡ) ತೋರಿಸಲಾಗದಂಥ ಸ್ಥಿತಿಗೆ ತಂದು ಬಿಡಬಹುದು.

ನನ್ನ ಆರೋಗ್ಯ ಚೆನ್ನಾಗಿದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೩ **ಪತ್ರ ಸಂಖ್ಯೆ – ೩೨೬** ಷಾಹಜಹಾನಪುರ
೧೧–೦೭–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

ಜುಲೈ ೩ ಮತ್ತ ೫ ರ ನಿನ್ನ ಪತ್ರಗಳು ತಲುಪಿದವು. ಓದಿ ಬಹಳ ಸಂತೋಷವಾಯಿತು. 'ನನ್ನೊಳಗಿನ (ಹೃದಯದ) ಪರದೆಗಳು ಹಗುರ ಮತ್ತು ಮಂದವಾಗುತ್ತಿವೆ. ಯಾಕೆ ಎಂದು ತಿಳಿಯದು' ಎಂದು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಜಗತ್ತಿನ ಜನರು ಪ್ರಕಾಶವನ್ನು ನೋಡುವುದರ ಹೆಣಗಾಟದಲ್ಲಿ ಗೋಗರೆಯುತ್ತಾರೆ. ಒಬ್ಬರು ಸೂರ್ಯನಂಥ ಪ್ರಕಾಶವನ್ನು ನೋಡಬಯಸಿದರೆ, ಇನ್ನು ಕೆಲವರು ಚಂದ್ರನಂಥ ಪ್ರಕಾಶವನ್ನು ನೋಡಲು ಬಯಸುತ್ತಾರೆ. ಕೆಲವರಂತೂ ಈ ಪ್ರಕಾಶವನ್ನು

P-4-Books-PM-7-Anantyatre-82



ಇನ್ನೂ ಹಿಗ್ಗಿಸಿ ಸಹಸ್ರಾರು ಸೂರ್ಯರ ಪ್ರಕಾಶ ಎಂದೆನ್ನುತ್ತಾರೆ. ಮತ್ತು ಅದಕ್ಕೋಸ್ಕರ ಪ್ರಯತ್ನಿಸುತ್ತಾರೆ. ಯೋಗದ ಆರಂಭ ಸಮಯದಲ್ಲಿ ಪ್ರಕಾಶವು ಕಂಡುಬರುವ ಸ್ಥಿತಿಯೊಂದು ಅವಶ್ಯ ಬರುತ್ತದೆ; ಆದರೆ, ಅದು ವಾಸ್ತವವೆಂದು ತಿಳಿಯಬಾರದು. ಪ್ರಕಾಶವೂ ಭೌತ (Matter) ವಾದುದು. 'ಸತ್ಯವಸ್ತು' ಯಾವುದಿದೆಯೋ ಅಲ್ಲಿ ಪ್ರಕಾಶವೂ ಇಲ್ಲ, ಅಂಧಕಾರವೂ ಇಲ್ಲ. ಅದನ್ನು (ಉಷಃಕಾಲದ) ಮಸಕು ಎಂದು ಕರೆಯುವುದು ಸೂಕ್ತವಾಗುವುದು. ನಮ್ಮ ಎಲ್ಲ ಇಂದ್ರಿಯಗಳೂ ಈ ಮಸಕು ಪ್ರಕಾಶದ ಸ್ವರೂಪ ಪಡೆಯುವುದನ್ನು 'ಮೂಲವಸ್ತು' (Originality) ಎನ್ನಬಹುದು.

ನಿನ್ನ ಪತ್ರದ ಪ್ರತಿಯೊಂದು ವಾಕ್ಯಕ್ಕೂ ಉತ್ತರ ಕೊಡುವುದಾದರೆ ಪತ್ರವು ಬಹಳ ದೀರ್ಘವಾಗುವುದು. ಆದುದರಿಂದ ಸಂಕ್ಷೇಪದಲ್ಲಿ ಇಷ್ಟೇ ಹೇಳುತ್ತೇನೆ : ನಿನ್ನ 'ದೇಹ–ಭಾವ' ( Body consciousnenss) ಮುಗಿದುಹೋಗಿದೆ. 'ಆತ್ಮ–ಭಾವ' (ಅಥವಾ ಚೇತನ–ಭಾವ–Soul consciousness) ಶುರುವಾಗಿದೆ. ಇದು ಕೊನೆಗೊಳ್ಳುವುದಕ್ಕೆ ಸಮಯ ಬೇಕಾಗುತ್ತದೆ. ಈಶ್ವರೇಚ್ಛೆಯಿಂದ ಅದೂ ಇದೇ ರೀತಿ ಆಗಬಹುದು.

ಇಂದು, ಮಧ್ಯಾಹ್ನ ೩.೨೫ (p.m.) ಕ್ಕೆ ನಿನ್ನನ್ನು 'ಟಿ' (T) ಬಿಂದುವಿನಿಂದ 'ಯು' (U) ಬಿಂದುವಿಗೆ ತಂದು ಇಡಲಾಗಿದೆ. ಇದಕ್ಕೂ ಒಂದು ಗಂಟೆ ಮೊದಲು, ನಿನ್ನನ್ನು 'ಟಿ' (T) ಬಿಂದುವಿನಲ್ಲಿಯೇ ನಿಲ್ಲಿಸಿಕೊಳ್ಳುವ ಆವಶ್ಯಕತೆಯಿದ್ದಂತೆ ಕಂಡುಬಂದಿತ್ತು. ಆದರೆ ಈಗ ಹಾಗನಿಸುತ್ತಿಲ್ಲ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೪ **ಪತ್ರ ಸಂಖ್ಯೆ – ೩೩೪** ಷಾಹಜಹಾನಪುರ
೦೭–೦೮–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

ನಿನ್ನ ಎಲ್ಲ ಪತ್ರಗಳೂ ತಲುಪಿದವು, ನಾನು ಆರೋಗ್ಯದಿಂದಿದ್ದೇನೆ. ನಿನ್ನ ಸ್ಥಿತಿಯು ಈಶ್ವರ–ಕೃಪೆಯಿಂದ ಚೆನ್ನಾಗಿಯೇ ಇದೆ. ನೀನು 'ಯು' (U) ಬಿಂದುವಿನಲ್ಲಿ ಇದ್ದೀಯೆ. ಈ ಸ್ಥಾನ (ಬಿಂದು) ಎಷ್ಟು ಚೆನ್ನಾಗಿದೆಯೆಂದು ತೋರುತ್ತದೆಯೆಂದರೆ – ಯಾಕೋ ಗೊತ್ತಿಲ್ಲ – ಈ ಸ್ಥಾನದಿಂದ (ಮುಂದಕ್ಕೆ) ಕರೆದೊಯ್ಯಲು ಮನಸ್ಸಾಗುತ್ತಿಲ್ಲ. ನಿನ್ನ 'ಯು' (U) ಬಿಂದುವಿನ ಕಡೆಗೆ ಲಕ್ಷ್ಯಕೊಟ್ಟಾಗ ನನಗೆ ಬಹಳ ಶಾಂತಿಯೆನಿಸುತ್ತದೆ ಮತ್ತು ನನ್ನ ಸ್ಥಿತಿ ಉತ್ತಮವಾಗುತ್ತದೆ.

ನಿನ್ನ ಹಿತೈಷಿ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೮೫ **ಪತ್ರ ಸಂಖ್ಯೆ – ೩೩೭** ಷಾಹಜಹಾನಪುರ
೩೧–೦೮–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಾನು ದಿನಾಂಕ ೦೭–೦೮–೧೯೫೩ ರಂದು ಕಾನಪುರ ವಿಳಾಸಕ್ಕೆ ನಿನಗೆ ಒಂದು ಪತ್ರ ಕಳುಹಿಸಿದ್ದೆ. ಅದು ನಿನಗೆ ಸಿಗಲಿಲ್ಲವೆಂದು ತೋರುತ್ತದೆ, ನಿನ್ನ ಎಲ್ಲ ಪತ್ರಗಳೂ ನನ್ನ ಕೈ ಸೇರಿವೆ. ಇಂದು ಜನ್ಮಾಷ್ಟಮಿ. ನಾನು ನಿನ್ನನ್ನು 'ಯು' (U) ಬಿಂದುವಿಗಿಂತ ಮುಂದಕ್ಕೆ ಈಗಲೇ ಕೊಂಡೊಯ್ಯುವುದಿಲ್ಲವೆಂದು ಬರೆದಿದ್ದೆ; ಆ ವಿಷಯ ಈಗಲೂ ಅಂತೆಯೇ ಇದೆ, ಈ ಸ್ಥಾನ (ಬಿಂದು) ಎಷ್ಟು ಉಲ್ಲಾಸಕರವಾಗಿದೆಯೆಂದರೆ, ನೋಡಿದಷ್ಟೂ ಹೆಚ್ಚು ಹೆಚ್ಚು ಸಂತೋಷವಾಗುತ್ತದೆ. ನಿನ್ನ ಅಂಚೆ–ಕಾರ್ಡು ಇಂದು ತಲುಪಿತು. ಅದರಿಂದ ತಿಳಿದುಬರುವುದೇನೆಂದರೆ. 'ಯು' (U) ಸ್ಥಾನದಿಂದ ಅದಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳು (ರಹಸ್ಯಗಳು) ನಿನಗೆ ತೆರೆದು ಪ್ರಕಟಗೊಳ್ಳುವವರೆಗೆ ನಿನ್ನನ್ನು ಆ ಸ್ಥಾನದಿಂದ ಕದಲಿಸಲಾಗದು. ಈಶ್ವರನ ಕೃಪೆಯಿಂದ ಆ ಬಿಂದುವು ತೆರೆದುಕೊಳ್ಳುವುದು ಆರಂಭವಾಗಿಬಿಟ್ಟಿದೆ. ಅದು ಹಾಗೆ ತೆರೆದುಕೊಳ್ಳಲೆಂದೇ ನಾನು ಒಂದೆರಡು ಬೈಠಕ್‌ಗಳನ್ನು ನಿನಗೆ ನೀಡಿದ್ದೆ. ಮತ್ತು ಇನ್ನೂ ಕೊಡುತ್ತೇನೆ.

ನಿನ್ನ ಅಂತರಂಗವೂ ನಿನಗೆ ಕಾಣುತ್ತಿಲ್ಲವೆಂದು ಬರೆದಿದ್ದೀಯೆ. ಅಂತರ್ಬಾಹ್ಯಗಳು ಏಕಾಕಾರವಾಗತೊಡಗಿದೆ ಎಂದು ಇದರಿಂದ ಸೂಚಿತವಾಗುತ್ತದೆ. ಆದರೆ, ಇನ್ನೂ ಸಾಕಷ್ಟು ಉಳಿದಿದೆ. ಸಂತ ತುಕಾರಾಮರು ಭಗವಂತನನ್ನು ಹೀಗೆ ಸುಂದರವಾಗಿ ವರ್ಣಿಸಿದ್ದಾರೆ– 'ಗೂಡ್ ಸೇ ಮೀಠಾ ಹೈ ಭಗವಾನ್ । ಬಾಹರ್ ಭೀತರ ಏಕಸಮಾನ್ ॥ (ಭಗವಂತ ಬೆಲ್ಲಕಿಂತ ಸವಿ, ಅಂತರ್ಬಾಹ್ಯಗಳು ಒಂದೇ ಸಮಾನ).

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೬ **ಪತ್ರ ಸಂಖ್ಯೆ – ೩೩೯** ಷಾಹಜಹಾನಪುರ
೧೬–೦೯–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ತಲುಪಿದೆ. ನನ್ನ ಆರೋಗ್ಯ ಈಗ ಚೆನ್ನಾಗಿದೆ. ಈಶ್ವರ ಕೃಪೆಯಿಂದ ನಿನ್ನ ಸ್ಥಿತಿ ತುಂಬಾ ಚೆನ್ನಾಗಿದೆ. ಆದರೆ, 'ಯು' (U) ಸ್ಥಾನದಿಂದ ಮೇಲಕ್ಕೆ ನಿನ್ನನ್ನು ಕರೆದೊಯ್ಯಲು ನನ್ನ ಮನಸ್ಸಾಗುತ್ತಿಲ್ಲ. ಪ್ರಾಯಶಃ ಇದು ಸದ್ಗುರುವಿನ ಇಚ್ಛೆ ಇದ್ದಂತೆ ತೋರುತ್ತದೆ; ಮತ್ತು ಈ ಸ್ಥಾನ ನನಗೆ ಎಷ್ಟು ಆಹ್ಲಾದಕರವಾಗಿದೆಯೆಂದರೆ,

ಅದನ್ನು ನೋಡಿದಷ್ಟೂ ಅತೀವ ಶಾಂತಿ ಮತ್ತು ಸಂತೋಷ ಉಂಟಾಗುತ್ತದೆ. ಇದು ಇನ್ನೂ ಹೆಚ್ಚು ವಿಕಸಿತವಾಗಿ ಶಾಂತಿ, ಸಾಮ್ಯಾವಸ್ಥೆ ಮತ್ತು ಸರಳತೆ– ಸಹಜತೆಗಳು ಅನುಭವಕ್ಕೆ ಬರುವುವು. ನೀನು ಪತ್ರ ಬರೆದು ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೭ **ಪತ್ರ ಸಂಖ್ಯೆ – ೩೪೩** ಷಾಹಜಹಾನಪುರ
೨೮–೦೯–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರಗಳು ಬಂದು ತಲುಪಿವೆ. ದಿನಾಂಕ ೨೪–೯–೧೯೫೩ ರಂದು ಬೆಳಿಗ್ಗೆ ೮–೩೦ಕ್ಕೆ ನಿನ್ನನ್ನು 'ವಿ' (V) ಬಿಂದುವಿನ ಸ್ಥಾನದಲ್ಲಿ ತಂದು ಇರಿಸಿದ್ದೇನೆ. ಈಗ ನಿನ್ನ ಆರೋಗ್ಯ ಚೆನ್ನಾಗಿರಬಹುದು. ಸಾಧ್ಯವಾದರೆ ನೀನು ಅಲಹಾಬಾದಿಗೆ ಹೋಗು. ಅಲ್ಲಿ ಎಲ್ಲರೂ ಲಾಭಾನ್ವಿತರಾಗುವರು. ಮತ್ತೆ, ಜಡ್ಜ್ ಸಾಹೇಬರಿಗೂ ಬೈಠಕ್ ನೀಡು. ಅವರ ಹೃದಯದ ಮೇಲೆ ಜೇಡರ ಬಲೆಯಂಥದು ಏನೋ ಇರುವಂತೆ ನನಗೆ ಕಾಣುತ್ತದೆ. ಅದು ಅವರು ಹಿಂದೆ ಅಸಮರ್ಪಕ ಪೂಜಾವಿಧಾನವನ್ನು ಅನುಸರಿಸಿರುವುದರ ಪರಿಣಾಮವಾಗಿದೆ. ಅವರು 'ಪಾರ್ವತಿ'ಯ ರೂಪದ ಮೇಲೆ ಧ್ಯಾನ ಮಾಡುತ್ತಿದ್ದರು.

ನೀನು ಅನಾರೋಗ್ಯದ ನಿವಾರಣೆಗೋಸ್ಕರ ಧ್ಯಾನ ಮಾಡಿದರೆ ಒಳ್ಳೆಯದು. ನಿನಗೆ ಅದರ ವಿಧಾನವನ್ನು ಹಿಂದೊಮ್ಮೆ ಹೇಳಿದ್ದೆ. ಅದು ಹೀಗೆ– 'ಎಲ್ಲ ರೋಗಗಳು ಹೊಗೆಯ ರೂಪದಲ್ಲಿ ಹಿಂಭಾಗದಿಂದ ಹೊರಟು ಹೋಗುತ್ತಿವೆ, ಮತ್ತು ಬ್ರಹ್ಮಾಂಡ ಮಂಡಲದಿಂದ ಶಕ್ತಿಬರುತ್ತಿದ್ದು, ಎಲ್ಲ ರೋಗಗಳನ್ನೂ ದೂರಮಾಡುತ್ತಿದೆ' ಎಂದು ಧ್ಯಾನ ಮಾಡುವುದು.

ಅಮ್ಮಾಜಿಯವರಿಗೆ ವಂದನೆಗಳು.

ನಿನ್ನ ಶುಭಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೮೮ **ಪತ್ರ ಸಂಖ್ಯೆ – ೩೫೦** ಷಾಹಜಹಾನಪುರ
೩೧–೧೦–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಅಕ್ಟೋಬರ್ ೨೬, ೧೯೫೩ರ ನಿನ್ನ ಪತ್ರ ಈಗ ತಾನೆ ಬಂದಿತು. ಆ ಪತ್ರದಲ್ಲಿ ಇದ್ದ ವಿಷಯಗಳನ್ನು ಗಮನಿಸಿ ನಾನು ಸಂತೋಷದಿಂದ ಉಬ್ಬಿಹೋದೆ.



ನನ್ನ ಜೀವಿತಕಾಲದಲ್ಲಿಯೇ ಇಂಥ ಸುಂದರ ಸ್ಥಿತಿಗಳು ನನ್ನೆದುರಿಗೆ ಕಾಣಲು ಸಿಗುತ್ತಿವೆ. ಇಲ್ಲಾದರೋ ನಮ್ಮ ಮಿಷನ್ನಿನ ಸದಸ್ಯರು, ತಮ್ಮಿಂದಲೇ ತಾವು ಬಿಡುವು ಪಡೆಯಲಾಗದಂತಿದ್ದಾರೆ. ಇನ್ನು ಕೆಲವರು, ಅವರಿಗೆ ನಾನು ಒಮ್ಮಿಂದೊಮ್ಮೆಗೇ ಎಲ್ಲವನ್ನೂ ಕೊಡುವೆನೆಂಬ ಆಕಾಂಕ್ಷೆಗೆ ಜೋತುಬಿದ್ದು ಕುಳಿತಿದ್ದಾರೆ. ಲಕ್ಷಾಂತರ ಜನ್ಮಗಳೇ ಕಳೆದುಹೋದವು, ಇದುವರೆಗೂ ಅವರು ತಮ್ಮ ನಿಜವಾದ ಧಾಮಕ್ಕೆ ಮರಳಲು ಸಾಧ್ಯವಾಗಿಲ್ಲ; ಇಷ್ಟಾದರೂ ಅವರಿಗೆ ಮರಳುವ ಮನಸ್ಸು ಉಂಟಾಗುತ್ತಿಲ್ಲ. ಯಾರೂ ಮುಂದೆ ಸಾಗಲು ಬಯಸದಿರುವಾಗ, ನಾನಾದರೂ ಏನು ಮಾಡಲಿ ? ಇವೆಲ್ಲವೂ ಈಶ್ವರನ ಕೈಯಲ್ಲಿದೆ. ಅವನು ಯಾವಾಗ ಬಯಸುವನೋ, ಆಗ ಇದೂ ಆಗುವುದು. ನನಗೆ ಏನು ಅಲ್ಪಮಟ್ಟಿಗೆ ಗೊತ್ತಿದೆಯೋ, ಅದನ್ನು ಜನರೂ ಕಲಿಯಲಿ, ಎಂದು ನಾನು ಹಾರೈಸುತ್ತೇನೆ; ಅಷ್ಟು ಕಲಿತು ಆದ ಮೇಲೆ, ಹೇಗೆ ಆಗಬೇಕೋ ಹಾಗೆ ಅವರ ತೃಷೆ (ತಳಮಳ) ಶಾಂತವಾಗದಿದ್ದರೆ, ನನಗಿಂತಲೂ ಹೆಚ್ಚು ಬಲ್ಲವರನ್ನು ಅವರು ಅರಸಿಕೊಂಡು ಹೋಗಲು ಅವರಿಗೆ ಸ್ವಾತಂತ್ರ್ಯ ನೀಡಲು ನಾನು ಸಿದ್ಧ. ಯಾಕೆಂದರೆ, ಜನರು ನನಗಿಂತಲೂ ಉತ್ತಮರಾಗುವುದೇ ನನ್ನ ಸಂತೋಷ. ನಾನು ಏನಿದ್ದೇನೆ, ನನ್ನ (ಆಧ್ಯಾತ್ಮಿಕ) ಸ್ಥಿತಿ ಏನು ಎಂಬುದು ಗುರುಮಹಾರಾಜ(ಪೂಜ್ಯ ಲಾಲಾಜಿ)ರಿಗೇ ಗೊತ್ತು. ನನಗೆ ತಿಳಿದಿರುವುದು ಇಷ್ಟು ಮಾತ್ರ – ಏನೆಂದರೆ, ನಾನು ಅನಂತದಲ್ಲಿ (Infinite) ನಿಶ್ಚಿತವಾಗಿಯೂ ಈಜುತ್ತಿದ್ದೇನೆ, ಮತ್ತು ಅದಕ್ಕೆ ಎಲ್ಲೆ ಇಲ್ಲ. ಹಾಗಿರುವಾಗ, ಇನ್ನೂ ಎಷ್ಟು ಈಜುವುದಿದೆ ಎಂಬುದು ನನಗೆ ಗೊತ್ತಿಲ್ಲದಿರುವಾಗ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ಯಾವ ಅಭಿಪ್ರಾಯ ಹೊಂದಿರುವುದು ಸಾಧ್ಯ ? ಆದರೆ ಒಂದು ಮಾತು ಸತ್ಯ. ನನ್ನ ಸ್ಥಿತಿ ಅದೇನೇ ಇರಲಿ, ಒಂದು ವೇಳೆ, ಯಾವುದಾದರೂ ರೀತಿಯಿಂದ ಯಾರಾದರೂ ನನ್ನ (ಆಧ್ಯಾತ್ಮಿಕ) ಸ್ಥಿತಿಯನ್ನು ಅರಿಯಲು ಶಕ್ತನಾದರೆ, ಮತ್ತು ಜನರಿಗೆ, ವಿಶೇಷವಾಗಿ ಮಿಷನ್ನಿನ ಸದಸ್ಯರಿಗೆ ಅದು ತಿಳಿದು ಬಂದರೆ, ಅವರು ಜೀವನವಿಡೀ ಪಶ್ಚಾತ್ತಾಪದಿಂದ ಕೈ–ಕೈ ಹಿಸುಕಿಕೊಳ್ಳುತ್ತ ಕಳೆಯಬೇಕಾದೀತು.

ಪ್ರಿಯ ಪುತ್ರಿ, ನಾನು ಬಾಯಿಮಾತಿನಲ್ಲಿ ಹೇಳುತ್ತಲೂ ಇದ್ದೇನೆ, ಬರೆಯುತ್ತಲೂ ಇದ್ದೇನೆ. ಇಷ್ಟಾದರೂ ಜನರು ನನ್ನ ಮಾತಿನಕಡೆಗೆ ಲಕ್ಷ್ಯ ನೀಡುವುದಿಲ್ಲ; ಅದೇಕೆಂದು ತಿಳಿಯದು; ಮತ್ತೆ, ನಾನಾದರೋ ಇದು ನನ್ನದೇ ನ್ಯೂನತೆ, ಮತ್ತು ವಾಸ್ತವದಲ್ಲಿ ತಪ್ಪು ಎಂದು ತಿಳಿಯುತ್ತೇನೆ. ಇನ್ನೊಂದು ಸಾಧ್ಯತೆ ಉಂಟು, ನನ್ನಲ್ಲಿ ಕೆಲಮಟ್ಟಿಗೆ ಅಪರಿಪಕ್ವತೆಯಿರಬಹುದು, ಆ ಕಾರಣ ನಾನು ಹೇಳಿಕೇಳಿ ಮಾಡುವುದರ ಹಾಗೂ ಬೈಠಕ್ ಕೊಡುವುದರ ಪರಿಣಾಮ ಅವರ ಮೇಲೆ ಆಗದಿರಬಹುದು. ಇನ್ನು ಕೆಲವರು, ತಮ್ಮ ಜಾತಿಯ ಅಭಿಮಾನವನ್ನು ಹೇಗಿದೆಯೋ ಹಾಗೆಯೇ ಇಟ್ಟುಕೊಂಡಂಥವರೂ ಇದ್ದಾರೆ, ಆ ಕಾರಣದಿಂದ, ಉಚ್ಚಜಾತಿಯವರು ಕೀಳಜಾತಿಯವರನ್ನು ನೋಡುವ ದೃಷ್ಟಿಯಿಂದಲೇ ನನ್ನನ್ನು ನೋಡುತ್ತಾರೆ. ನಾನಾದರೋ, ಉಚ್ಚ ಜಾತಿಯವರು ಯಾರನ್ನು ನಿಮ್ನ (ನೀಚ) ಎಂದು

P-4-Books-PM-7-Anantyatre-84



ಪರಿಗಣಿಸಬೇಕೋ, ಆ ಪಂಗಡದಲ್ಲಿ ಹುಟ್ಟಿ ಬಂದಿದ್ದೇನೆ. ಅವರ ದೃಷ್ಟಿ ನನ್ನ ದೇಹ ಮತ್ತು ಜಾತಿಗಳ ಮೇಲೆ ಇರುತ್ತದೆ, ಯಾವ (ಆಧ್ಯಾತ್ಮಿಕ) ಸ್ಥಿತಿಯಿಂದ ಅವರು ಲಾಭಪಡೆಯಬೇಕಿದೆಯೋ ಅದರ ಮೇಲೆ ಇರುವುದಿಲ್ಲ. ಇದರ ಬಗ್ಗೆ ನನಗೇನೂ ಖೇದವಿಲ್ಲ. ನಾನು ಜನರ ಕಾಲ್ತುಳಿತಕ್ಕೆ ಹೊಸಕಿ ಹಾಕಲ್ಪಡುವ ಇರುವೆಯೇ ಹೊರೆತು, ಹಿಡಿದ ಕೂಡಲೇ ಕಚ್ಚಿ ನೋವು ಉಂಟುಮಾಡುವ ಕಣಜದಹುಳು ಅಲ್ಲ. ಉಚ್ಚ ಜಾತಿಯ ಅಭಿಮಾನ ಒಂದು ದೊಡ್ಡ ಅಡ್ಡಿ; ಮತ್ತು ಇಂದಲ್ಲ ನಾಳೆ ತೊಲಗಿಹೋಗುವಂತೆ ಮಾಡಲೇಬೇಕಾದ ಮೊದಲ ಕೇಡು ಅದು, ನಾನು ಎಲ್ಲರಿಗಿಂತ ಉಚ್ಚ ಕುಲದಲ್ಲಿ ಹುಟ್ಟಿಲ್ಲ, ಆದ್ದರಿಂದ ಈ ದೌರ್ಬಲ್ಯ ನನ್ನಲ್ಲಿ ಇಲ್ಲ. ಅದಕ್ಕೋಸ್ಕರ ಈಶ್ವರನಿಗೆ ಸಹಸ್ರ-ಸಹಸ್ರ ಧನ್ಯವಾದಗಳು. ಕಬೀರನು ಸ್ಪಷ್ಟವಾಗಿ (ಚೆನ್ನಾಗಿ) ಬರೆದಿದ್ದಾನೆ-

ನೀಚ-ನೀಚ ಸಬ್ ತರ ಗಯೇ ಸಂತಚರಣ ಲವಲೀನ ।
ಜಾತಿ ಕೇ ಅಭಿಮಾನ ಸೇ ಬೂಡೇ ಸಕಲ ಕುಲೀನ ॥

ನೀಚ ಜಾತಿಯಲ್ಲಿ ಹುಟ್ಟಿದವರು ಸಂತರ ಚರಣ ಧೂಳಿಯಿಂದ ಮುಕ್ತಿ ಹೊಂದಿದರು. ಜಾತಿಯ ಅಭಿಮಾನದಿಂದ ಕುಲಜರೆಲ್ಲರೂ ಮುಳುಗಿದರು.

ನಿನ್ನ ಪತ್ರವನ್ನು ಉತ್ತರಿಸುವ ಮೊದಲು ನಾನು 'ಜೀವ' ಮತ್ತು 'ಬ್ರಹ್ಮ' ಇವುಗಳ ಕುರಿತು ಸಂಕ್ಷೇಪವಾಗಿ ಒಂದಿಷ್ಟು ಬರೆಯಲಿಚ್ಛಿಸುತ್ತೇನೆ. ಪುಸ್ತಕಗಳಲ್ಲಿ ಅವುಗಳ ಬಗ್ಗೆ ಏನು ಬರೆದಿದೆಯೋ ಗೊತ್ತಿಲ್ಲ. ನನ್ನ ತಿಳಿವಳಿಕೆಯಂತೆ ನಾನು ಬರೆಯುತ್ತೇನೆ. ಪುಸ್ತಕಗಳೊಂದಿಗೆ ತಾಳೆಹಾಕಿ ನೋಡಿಕೊಳ್ಳುವವರು, ಬೇಕಾದರೆ ನೋಡಿಕೊಳ್ಳಲಿ.

ಜೀವಕ್ಕೆ ಜೀವತ್ವ ('ನಾನು' ಎಂಬ) ಅನಿಸಿಕೆ ಯಾವಾಗ ಆಯಿತು ? ಅದು ತಾನು ನಿಂತಕೊಳ್ಳಲು (ನೆಲೆಸಲು) ಒಂದು ನೆಲೆಯನ್ನು ಮಾಡಿಕೊಂಡಾಗ (ಕಂಡುಕೊಂಡಾಗ); ಅದು ಬ್ರಹ್ಮವೇ ಇತ್ತು, ಬ್ರಹ್ಮವೇ ಇದೆ. ಅದು ತನ್ನ ಜೀವತ್ವದ ('ನಾನು', ಅಸ್ಮಿತೆ) ಬೋಧವನ್ನು ಪಡೆಯಿತೇಕೆಂದರೆ; ಅದು ಯಾವುದರಮೇಲೆ ತನ್ನ 'ನೆಲೆ'ಯನ್ನು ಮಾಡಿಕೊಂಡಿತ್ತೋ ಅದರಲ್ಲಿ, ಅದರದೇ (ಅಸ್ಮಿತೆಯ) ಗಂಧ ಬರುತ್ತಿತ್ತು. ಇದು (ಈ ಅಸ್ಮಿತೆಯ ಸತ್ತೆ) ಮತ್ತು ಅದರ ಅನುಭವ (ಬೋಧ)ಗಳು ಅದರ (ಜೀವದ)ನ ಆಸಕ್ತಿ (ರುಚಿ)ಯನ್ನು ಮತ್ತೂ ಹೆಚ್ಚಿಸಿದವು. ಯಾಕೆಂದರೆ ಒಂದು ಬಣ್ಣದ ಅನುಭೂತಿ ಇನ್ನೊಂದು ಬಣ್ಣವನ್ನು ಹುಡುಕುವಂತೆ ಮಾಡಿತು, ಮತ್ತು ಅದರಲ್ಲಿ ಅನೇಕತೆಯು ಹುಟ್ಟಿ ಬಂದಿತು. ತತ್ಪರಿಣಾಮವಾಗಿ ಲಾಲಸೆ, ಮೋಹ, ಪ್ರತಿಯೊಂದು ವಸ್ತುವಿನ ಬಗ್ಗೆ ಇಚ್ಛೆ ಮುಂತಾದವು ಅದರಲ್ಲಿ ಉಂಟಾಗಲು ಪ್ರಾರಂಭವಾಯಿತು. ಒಟ್ಟಿನಲ್ಲಿ ಒಂದು ಬಂಗಾರದ ಕಾಗೆ, ಕಬ್ಬಿಣದ ಪಂಜರದಲ್ಲಿ ಬಂದಿಯಾಯಿತು. ಮತ್ತು ಅದರ ಜೀವಿತಕ್ಕೋಸ್ಕರ ಆಹಾರ - ನೀರುಗಳ ಅಗತ್ಯ ಉಂಟಾಯಿತು.



ಎಷ್ಟು ಹೆಚ್ಚೇನು ಹೇಳುವುದು; ಇದೆಲ್ಲವೂ 'ಜೀವತ್ವ'ವನ್ನು ಕುರಿತಾಯಿತು. ಅದಕ್ಕೆ, ನೀನು 'ಸತ್ಯವಸ್ತು' (Real)ವೇ ಇದ್ದೀಯೆ ಎಂಬ ಎಚ್ಚರವನ್ನು ತಂದುಕೊಡುವವ ಒಬ್ಬ ಅಕಸ್ಮಾತ್ ದೊರೆತರೆ, ಅದರ ಬಾಹ್ಯ ಆವರಣ (ಪರದೆ)ಗಳು ಹರಿದು ಹೋಗಲು ತೊಡಗುತ್ತವೆ. ನಾವು 'ಜೀವ'ವಾಗಿರಲಾಗಿ, ನಮಗೆ ಉನ್ನತ ತರವಾದ ಸ್ಥಿತಿಯ ಅರ್ಥಾತ್ 'ಬ್ರಹ್ಮ'ದ ಅರಿವನ್ನು ಅವನೇ ಕೊಟ್ಟನು. ವಾಸ್ತವದಲ್ಲಿ ಇವೆರಡೂ (ಜೀವ-ಮತ್ತು-ಬ್ರಹ್ಮ) ಒಂದೇ. ಈಗ ಪಾಮರ ಭಾಷೆಯಲ್ಲಿ, ತುಸು ಬೆಳಕು ಚೆಲ್ಲುತ್ತೇನೆ, ಜೀವವು ಚಲನೆ (ಗತಿ)ಯುಳ್ಳದ್ದು. ಆದ್ದರಿಂದ ಯಾವುದು ಚಲಿಸುತ್ತದೋ ಅದನ್ನು ಅದು ಅರಿಯಬಲ್ಲದು. ಅದು ಯಾವುದು ? ಅದೇ (ಅವನೇ) 'ಬ್ರಹ್ಮ'. ಬ್ರಹ್ಮ ಶಬ್ದ 'ಬೃಹ್' ಮತ್ತು 'ಮನ್' ಈ ಎರಡರಿಂದುಂಟಾಗಿದೆ, ಅವು 'ಗತಿ' ಮತ್ತು 'ಚಿಂತನ' (ಮನನ) ಗಳ ಅರ್ಥಕೊಡುತ್ತವೆ. 'ಜೀವ'ದ ಪುಟ್ಟ ಶರೀರದಲ್ಲಿ ಯಾವ 'ಕ್ರಿಯೆ'ಗಳು ಇವೆಯೋ ಅವೇ 'ಬ್ರಹ್ಮ'ದ ಬೃಹತ್ತಾದ ಶರೀರದಲ್ಲಿಯೂ ಇವೆ. ಬಂಧನ 'ಜೀವ'ಕ್ಕೂ ಇದೆ, 'ಬ್ರಹ್ಮ'ದಲ್ಲಿಯೂ ಇದೆ. ಅಂತರವಿಷ್ಟೇ; ಜೀವದ ಬಂಧನಗಳು ಹೆಚ್ಚು ಸಂಖ್ಯೆಯಲ್ಲಿ ಮತ್ತು ಹೆಚ್ಚು ಸ್ಥೂಲವಾಗಿರುತ್ತವೆ; ಬ್ರಹ್ಮದ ಬಂಧನಗಳು 'ಸೂಕ್ಷ್ಮ'ವಾಗಿವೆ. ಆದರೆ ಎರಡಕ್ಕೂ ತಮ್ಮದೇ ದೃಷ್ಟಿಯಲ್ಲಿ ಬಂಧನಗಳುಂಟು. ವೇದಗಳಲ್ಲಿ ೨೪ ಅಥವಾ ೨೬ ಪ್ರಕಾರದ 'ಬ್ರಹ್ಮ'ದ ಬಗ್ಗೆ ಹೇಳಲಾಗಿದೆ ಎಂದು ನನಗೆ ಒಬ್ಬ ವಿದ್ವತ್ತೆಯುಳ್ಳ ಸನ್ಯಾಸಿ ಹೇಳಿದ್ದರು. ಕೊನೆಯದಾದ ಬ್ರಹ್ಮಕ್ಕೆ 'ಭೂಮಾ' ಎಂದೆನ್ನಲಾಗಿದೆ. 'ಪರ-ಬ್ರಹ್ಮ'ವು 'ಬ್ರಹ್ಮ'ನ(ದ) ಸ್ಥಿತಿಗಿಂತ ಉನ್ನತತರವಾದುದೆಂದು ಮಹಾತ್ಮರು ಹೇಳಿದ್ದಾರೆ. ಆದರೆ ಈ 'ಸತ್ಯವಸ್ತು' (Real)ವಿಗೆ ಅದೆಷ್ಟು ಸ್ಥಿತಿಗಳು ಆಗುತ್ತ ಬಂದಿವೆ ಎಂಬುದು ಯಾರಿಗೆ ಗೊತ್ತು ? ಅವು ಅದಕ್ಕೆ ಸಂಬಂಧಿಸಿದ ಉಪಾಧಿಗಳನ್ನು ಅವಲಂಬಿಸಿದೆ.

ನಮ್ಮ ಪ್ರಗತಿಯಾತ್ರೆಯಲ್ಲಿ ಅಡ್ಡಿಗಳು, ಅಂತರಾಯ (ಬಾಧಕ)ಗಳು ಯಾವಯಾವ ಪ್ರಮಾಣದಲ್ಲಿ ಇವೆಯೋ ಆ ಮಟ್ಟದಲ್ಲಿ ನಾವು ಅದೇ ಪ್ರಕಾರದ ಬಂಧನದಲ್ಲಿ ಇರುತ್ತೇವೆ. ನಾನು ಈ ಎಲ್ಲ ಸ್ಥಿತಿಗಳನ್ನೂ 'ಬಂಧನ'ಗಳೆಂದೇ ಕರೆಯುತ್ತೇನೆ. ನಮ್ಮ ಅಂತಿಮ ಧಾಮ ಎಲ್ಲಿ ಇರುವುದೋ ಅಲ್ಲಿ ವಾತವಾಗಲಿ, ಪ್ರಕಾಶವಾಗಲೀ ಪ್ರವೇಶಿಸದು. ಅದೊಂದು ಆರಿ ಹೋದ ದೀಪದ ಸ್ಥಾನದಂತಿದೆ- ಅಲ್ಲಿ ಯಾವ ಚಮತ್ಕಾರವಿಲ್ಲ, ಯಾವ ಚಟುವಟಿಕೆ (ಚೇಷ್ಟಾ) ಕೂಡ ಇಲ್ಲ. ಎಲ್ಲರೂ 'ಪ್ರಕಾಶ', 'ಪ್ರಕಾಶ' ಎಂದು ಹಪಹಪಿಸುತ್ತಾರೆ. ಮತ್ತು ನಾನೂ ಇದನ್ನು ಹೇಳುತ್ತೇನೆ. ಯಾಕೆಂದರೆ, ಮಾರ್ಗದಲ್ಲಿ ಇವೆಲ್ಲವೂ ಅನುಭವಕ್ಕೆ ಬರುತ್ತವೆ, ಆದರೆ ಅಂತಿಮ ನೆಲೆಯನ್ನು ತಲುಪಿದಾಗ ಮುಗಿದುಹೋಗುತ್ತವೆ. ಪ್ರಕಾಶವನ್ನೇ ನಾವು ಬಯಸುವುದಾದರೆ ತನ್ನ ಪ್ರಕಾಶವನ್ನು ಇತರರಿಗೆ ಬೀರಿ, ತನ್ನ ಬಳಿ ಪ್ರಕಾಶ ಉಂಟೆಂದು ಪ್ರಮಾಣೀಕರಿಸುವ ಮಿಂಚುಹುಳು ಕೂಡ ಮಹಾತ್ಮ ಎಂದೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. *'ನಾವು ಎಲ್ಲಿರುವೆವೋ ಅಲ್ಲಿಂದ ನಮ್ಮ ಇರುವಿಕೆಯ ಸಮಾಚಾರ ನಮಗೇ ಬಂದು ತಲುಪುವುದಿಲ್ಲ' (ಹಮ್ ಜಹಾಂ*

P-4-Books-PM-7-Anantyatre-85



ಹೈಂ, ವಹಾಂ ಸೇ ಕುಛ್ ಹಮಾರೀ ಖಬರ್ ನಹೀ ಆತೀ) ಎಂದು ಯಾರೋ ಹೇಳಿದುದು ಸರಿಯೇ ಇದೆ.

ಈಗ ನಾನು ನಿನ್ನ (ಆಧ್ಯಾತ್ಮಿಕ) ಸ್ಥಿತಿಯ ಬಗ್ಗೆ ಬರೆಯುತ್ತೇನೆ. 'ಬ್ರಹ್ಮ'ವೂ ಅಮಿಶ್ರ (ಶುದ್ಧ)ವಲ್ಲ, 'ಅದರಲ್ಲಿಯೂ ಏನೋ ಉಂಟು' ಎಂದು ನೀನು ಬರೆದಿದ್ದೀಯೆ. ಇದರ ಉತ್ತರವನ್ನು ಹೆಚ್ಚು ಕಡಿಮೆ, ಮೇಲೆ ಈಗಾಗಲೇ ಕೊಟ್ಟಿದ್ದೇನೆ. ಮತ್ತು ಅದರಲ್ಲಿ 'ರಮ್ಯತೆ' ಮತ್ತು 'ಗಂಧ' (बू) ಉಂಟು ಎಂದೂ ನೀನು ಬರೆದಿದ್ದೀಯೆ. ಎಲ್ಲಿಯವರೆಗೆ 'ರಮ್ಯತೆ' ಇರುವುದೋ ಅದನ್ನು ನಿಜವಾದ 'ಬ್ರಹ್ಮ' ಎನ್ನಲಾಗದು, ಯಾಕೆಂದರೆ ಮಾಯೆಯ ಜಾಲ ಸೂಕ್ಷ್ಮರೂಪದಲ್ಲಿ ಇದೆ ಎಂದಾಗುತ್ತದೆ. ನಾನು ನಿಮ್ಮನ್ನೆಲ್ಲ ಎಂಥ ಪರಿಸರಕ್ಕೆ (ಸ್ಥಿತಿಗೆ) ಒಯ್ಯಬೇಕೆಂದಿದ್ದೇನೆಂದರೆ ಅಲ್ಲಿ ಶೂನ್ಯತೆ (सूनापन) ಕೂಡ ಸಾವಿರ ಪಟ್ಟು ಭಾರದ್ದೆನಿಸುತ್ತದೆ; ಆದರೆ ವಾಸ್ತವವಾಗಿ ಮನುಷ್ಯನಿಗೆ ಸಂಭವವಿರುವ 'ಪರಿಪೂರ್ಣತೆ' ಅದೇ ಆಗಿದೆ. ನಮ್ಮ ಮಿಷನ್ನಿನಲ್ಲಿ ಪರಿಪೂರ್ಣತೆಯನ್ನು ಎಲ್ಲರೂ ಬಯಸುತ್ತಾರೆ. ಆದರೆ ಅವರು ಮಾಡಬೇಕಾದ ಪ್ರಯತ್ನ ಮತ್ತು ಭಕ್ತಿ (ನಿಷ್ಠೆ)ಗಳನ್ನು ಮಾಡಲು ಅವರ ಆಲಸ್ಯ ಅನುವು ಮಾಡಿಕೊಡುವುದಿಲ್ಲ. ಯಾವ ಪರಿಶ್ರಮವಿಲ್ಲದೆ ಈ ಸ್ಥಿತಿ ಅವರಿಗೆ ಈಶ್ವರಕೃಪೆಯಿಂದ ದೊರೆಯಿತೆಂದೇ ಇಟ್ಟುಕೊಳ್ಳೋಣ. ಆದರೆ ಅದರ ಪರಿಣಾಮ (ಫಲ) ಏನಾದೀತು ? ಅವರು ನನ್ನ ಮುಖ ನೋಡಲೂ ಬೇಸರ ಪಟ್ಟುಕೊಳ್ಳಬಹುದು, ಯಾಕೆಂದರೆ ಅಲ್ಲಿ, ಆನಂದವಂತೂ ದೂರ ಉಳಿಯಿತು, ಅದರ ಲವಲೇಶವೂ ಇಲ್ಲವೆಂಬ ಅನುಮಾನ ಅವರಿಗೆ ಬಂದೀತು. ಬಂಧು, ಆನಂದದ ಸ್ಥಿತಿ ನನಗೆ ಅನೇಕ ಸಲ (ಆಗಾಗ) ಪ್ರಕಟವಾಗುತ್ತಿತ್ತು. ಆದರೆ ನನ್ನ ಸ್ಥಿತಿ ಈಗ (ಪ್ರಸ್ತುತದಲ್ಲಿ) ಏನಿದೆಯೋ, ಅದು 'ಆನಂದರಹಿತ' ಆಗಿದೆ. ಅದರಿಂದ ಒಂದು ಸೆಕೆಂದಿನಮಟ್ಟಿಗೂ ನಾನು ಅಗಲಲು ಬಯಸುವುದಿಲ್ಲ. ಜನರು ಆನಂದದ ಸ್ಥಿತಿಯನ್ನು ಪಡೆಯುತ್ತ 'ಆನಂದರಹಿತ' ಸ್ಥಿತಿಗೆ ತಲುಪಿದರೆ ಆಗ ಅವರ ಸ್ಥಿತಿ ನನ್ನ ಸದ್ಯದ ಸ್ಥಿತಿಯಂತೆಯೇ ಆದೀತು, ಅಂದರೆ ಆನಂದರಹಿತ ಸ್ಥಿತಿಯನ್ನು ಬಿಟ್ಟುಹೋಗಲು ಅವರ ಮನಸ್ಸು ಒಪ್ಪಲಿಕ್ಕಿಲ್ಲ. ನನ್ನ ಈಗಿನ ಸ್ಥಿತಿಯನ್ನು ಬಿಟ್ಟುಬಿಡು ಅಥವಾ ಪ್ರಾಣ ತ್ಯಾಗಮಾಡು ಎಂದು ಯಾರಾದರೂ ನನಗೆ ಹೇಳಿದರೆ, ನಾನು ಪ್ರಾಣವನ್ನೇ ಬಲಿಕೊಟ್ಟೇನೆಯೇ ಹೊರತು, ಈ ಸ್ಥಿತಿಯನ್ನು ಬಿಟ್ಟಬಿಡಲಾರೆ. ಈಗ ಆ ರುಚಿರಹಿತ ಸ್ಥಿತಿ ಇರುವುದಾದರೂ ಏನು ? ಅದಕ್ಕೆ ಶಬ್ದಗಳಿಲ್ಲ, ಅದನ್ನು ವರ್ಣಿಸಲು ನಾಲಿಗೆಯಿಲ್ಲ.

ನಿನ್ನ ಸದ್ಯದ ಸ್ಥಿತಿಯನ್ನು ನೀನು 'ಬ್ರಹ್ಮದರ್ಶನ'ದ ಸ್ಥಿತಿ ಎಂದು ಬರೆದಿದ್ದೀಯೆ. ಪ್ರತಿಯೊಂದು ಸ್ಥಾನದಲ್ಲಿ (ಹಂತದಲ್ಲಿ) 'ಬ್ರಹ್ಮ'ದ ಸ್ಥಿತಿ ಸೂಕ್ಷ್ಮತರವಾಗುತ್ತ ಹೋಗುತ್ತದೆ ಎಂಬ ಅರ್ಥದಲ್ಲಿ ಇದು ಸರಿ ಇದೆ. ಆದರೆ ಈ ಸ್ಥಾನದಲ್ಲಿ (V ಬಿಂದುವಿನಲ್ಲಿ) 'ಬ್ರಹ್ಮ'ದ ಅನುಭವವೇನಿರುವುದೋ ಅದರಲ್ಲಿ ಲಯಾವಸ್ಥೆ ಇನ್ನೂ ಉಂಟಾಗಿಲ್ಲ. ಆ ಸ್ಥಿತಿಯು ಕ್ರಮೇಣ ಸಾವಕಾಶವಾಗಿ



ವಿಕಸಿತವಾಗುವುದರ ಸುಳುಹನ್ನು ನಾನು ಕೊಡುತ್ತಿರುತ್ತೇನೆ. ನೀನು ಈಗ ಅನಾರೋಗ್ಯದಿಂದಿರುವುದರ ಕಾರಣ, ಈ ಹಂತದಲ್ಲಿ ನೀನು ದೃಢ ಆರೋಗ್ಯವನ್ನು ಪಡೆಯುವುದು ನಿನ್ನ ಕರ್ತವ್ಯವಾಗುತ್ತದೆ. ನೀನು 'ಬ್ರಹ್ಮ'ವೇ ಆಗಿರುವೆಯೆಂದು ಕೂಡ ಬರೆದಿದ್ದೀಯೆ. ನೀನು 'ಬ್ರಹ್ಮ' ರೂಪವಾಗಿರುವುದಂತೂ ಸರಿಯೆ, ಅಲ್ಲದೆ, ಇದನ್ನು (ಹೀಗೆ) ಪ್ರತಿಯೊಬ್ಬನೂ ಹೇಳಿಕೊಳ್ಳಬಹುದು. ಆದರೆ, ನಿನ್ನ ಮಟ್ಟಿಗೆ ಹೇಳುವುದಾದರೆ, ನೀನು 'ಹಿರಣ್ಯಗರ್ಭ'ದ ಸ್ಥಿತಿಗಿಂತ ಬಹಳ ಉನ್ನತತರ ಸ್ಥಿತಿಗೆ ತಲುಪಿದ್ದೀಯೆ ಎಂದು ಬರೆಯುತ್ತೇನೆ. ನೀನು ಇರುವ 'ಸ್ಥಿತಿ' (ಬಿಂದು)ಯಲ್ಲಿ 'ಶುದ್ಧತೆ' (Purity) ಬಹಳ ಇದೆ. ನಾನು ಈ ಸ್ಥಿತಿಯನ್ನೂ ಬಂಧನದ ಸ್ಥಿತಿ ಎಂದೇ ಕರೆಯುತ್ತೇನೆ. 'ಶುದ್ಧತೆ' ಮತ್ತು 'ಅಶುದ್ಧತೆ'ಗಳ ಭಾವವೆರಡೂ ಹೊರಟು ಹೋದಾಗ, ವಾಸ್ತವಿಕತೆ (ಸತ್ಯತೆ – Reality) ಆರಂಭವಾಯಿತೆಂದು ತಿಳಿಯಬೇಕು; ಮತ್ತು ಅದರಾಚೆಗೆ ಅಸಂಖ್ಯ ಹಂತಗಳುಂಟು; ಅವುಗಳನ್ನು ಎಣಿಸುವುದು ಅಸಾಧ್ಯ. ಆದರೆ ಒಂದು ಮಾತು ಜ್ಞಾಪಕವಿಟ್ಟುಕೊಳ್ಳಬೇಕು, ಅದೆಂದರೆ, ಶುದ್ಧತೆ (Purity) ಮತ್ತು ಅಶುದ್ಧತೆ (Impurity)ಗಳು ಅಳಿದುಹೋಗಬೇಕೆಂಬ ವಿಚಾರವನ್ನು ಸ್ಥಿರಗೊಳಿಸಿ ಇಟ್ಟುಕೊಳ್ಳಕೂಡದು; ಸ್ವಾಭಾವಿಕ ರೀತಿಯಲ್ಲಿ ಯಾವ ಸ್ಥಿತಿಗಳು ಬರುತ್ತಹೋಗುವವೋ, ಅವುಗಳ ಅನುಭವ ಪಡೆಯುತ್ತ ಸಾಗಬೇಕು. ಸಾವಕಾಶವಾಗಿ, ಈ ಸ್ಥಿತಿಯನ್ನೂ ಈಶ್ವರನು ನಿನಗೆ ಅನುಗ್ರಹಿಸುತ್ತಾನೆ. ನಿನ್ನ ಸ್ಥಿತಿಯು 'ಅಹಂ ಬ್ರಹ್ಮಾಸ್ಮಿ' ಎಂಬುದಾಗಿದೆಯೆಂದೂ ನೀನು ಬರೆದಿದ್ದೀಯೆ. ಅದು ಸರಿಯೇ ಇರಬಹುದು. ಆದರೆ ಪುತ್ರಿ, ಈ ಸ್ಥಿತಿಯು ಪ್ರತಿಯೊಂದು ಸ್ಥಾನದಲ್ಲಿಯೂ ಅನುಭವಕ್ಕೆ ಬರುತ್ತದೆ. ಸ್ಥಿತಿಯು ಯಾವ ಪ್ರಮಾಣದಲ್ಲಿ ಉನ್ನತತರದ್ದಾಗುತ್ತ ಹೋಗುವುದೋ, ಅದೇ ಪ್ರಮಾಣದಲ್ಲಿ ಈ ಸ್ಥಿತಿಯು ಚೆನ್ನಾಗಿ ಪ್ರಕಟಗೊಳ್ಳುತ್ತ ಹೋಗುತ್ತದೆ. ಅದರ ಬಗ್ಗೆ ನಾನು ಏನು ಬರೆಯಲಿ ? ನನ್ನ ಮಾತು ಕೇಳಿ ಒಪ್ಪುವವರಾದರೂ ಯಾರಿದ್ದಾರೆ ? ನಾನು ಹೇಳುತ್ತಿರುವುದು ತಪ್ಪು, ಪ್ರಾಯಶಃ ವೇದವಾಕ್ಯಕ್ಕೆ ವಿರುದ್ಧವಾದುದು ಎಂದು ವೇದಾಂತಿಗಳು ಹೇಳಬಹುದು. 'ಅಹಂ ಬ್ರಹ್ಮಾಸ್ಮಿ' ಎಂಬುದು ನಮಗೆ ಭಾಸವಾಗುವಾಗ, ಯಾವುದೋ ಬೇರೊಂದು ವಸ್ತುವಿನಿಂದ ಅದನ್ನು ವಿಭಿನ್ನವೆಂದೆಣಿಸಿ ತುಲನೆ ಮಾಡುವುದು ಆವಶ್ಯಕವಾಗುತ್ತದೆ, ಅಥವಾ 'ಭೇದ'ದ ಭಾವವನ್ನು ಅದು ಉಂಟುಮಾಡುತ್ತಿದೆ ಎಂದಾಗುತ್ತದೆ. ಇದು ದರ್ಶನಶಾಸ್ತ್ರರೀತ್ಯಾ ತಿಳಿವಳಿಕೆಗೋಸ್ಕರ ಹೇಳುವ ಮಾತಾಗುತ್ತದೆ. ಎಲ್ಲಿ 'ಭೇದ' ಅಳಿದುಹೋಗುವುದೋ ಮತ್ತು 'ಅಹಂ ಬ್ರಹ್ಮಾಸ್ಮಿ' ಅಥವಾ ಅಹಂ ನ ಬ್ರಹ್ಮಾಸ್ಮಿ' ಎಂಬುದು ಭಾಸವಾಗುವುದೂ ಇಲ್ಲವೋ, ಅಥವಾ ಅದಕ್ಕೆ ವಿರುದ್ಧವಾದ ಭಾವವೂ ಇರುವುದಿಲ್ಲವೋ ಅಲ್ಲಿ ಅದರ ವಾಸ್ತವಿಕ ಸ್ವರೂಪವಿದೆ, ಅಥವಾ ಅಲ್ಲಿಯೇ 'ಸತ್ಯ' ಸ್ಥಿತಿ (Reality) ಇರುವುದು. ಹಾಗೆನ್ನುವ ಮಟ್ಟಿಗೆ ಪೂರ್ಣತೆಯನ್ನು ಪಡೆದಂತಾಯಿತು. ಅದಕ್ಕೆ ಮುಂದೆ ಏನುಂಟು ಎಂಬುದು (ಯಾರಿಗೂ) ಗೊತ್ತಿಲ್ಲ. ನಾನಂತೂ ಹೇಳುವುದಿಷ್ಟೇ; ಇಲ್ಲಿಗೆ ತಲುಪಿದ ನಂತರವೂ 'ದಿಲ್ಲಿ' (ಗಂತವ್ಯ)

ದೂರವೇ ಉಳಿದಿರುತ್ತದೆ. ಪ್ರಿಯ ಪುತ್ರಿ, ನಾನೇನು ಬರೆಯಲಿ? ಇದಕ್ಕೂ ಮುಂದೆಯೂ ಒಂದಿಷ್ಟು ಬರೆಯಬಹುದು, ಆದರೆ ಅದನ್ನು ಅರ್ಥಮಾಡಿಕೊಳ್ಳುವವರು ಯಾರು ? ನಂಬುವವರು ಯಾರು ? ಇರಲಿ, ಇದಕ್ಕಿಂತ ಮುಂದಿನ ಒಂದು ಮಾತನ್ನು ಬರೆಯುತ್ತೇನೆ. ಅದೇನೆಂದರೆ, ಅಲ್ಲಿಗೆ ತಲುಪಿದನಂತರ 'ಸೂಕ್ಷ್ಮತೆ' ಕೂಡ ಮುಗಿದು ಹೋಗುತ್ತದೆ – ಆದರೆ, ಬಹಳ ಪ್ರಗತಿಹೊಂದಿದ ನಂತರ. ಸಾಕು, ಇದಕ್ಕೂ ಮುಂದೆ ಅಭಿವ್ಯಕ್ತಿಗೆ ಶಬ್ದಗಳು ಸಿಗುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು; ಈ ಸ್ಥಿತಿ (ಸೂಕ್ಷ್ಮತೆಯ ಅಂತ)ಯನ್ನು ಪಡೆಯಲು ಸಾವಿರಾರು ವರ್ಷ ಬೇಕಾಗುವುದಷ್ಟೇ ಅಲ್ಲ, ಮುಂದೆ ಭೂಮಾದ ಸಮೀಪ ಹೋಗಲು ಎಷ್ಟು ಸಾವಿರ ಮೆಟ್ಟಿಲುಗಳನ್ನು ದಾಟಿ ಹೋಗಬೇಕೆಂಬುದು ಗೊತ್ತಿಲ್ಲ. ನನಗೆ ಗೊತ್ತಿರುವುದಿಷ್ಟು, ಈ ಎಲ್ಲ ಸ್ಥಿತಿಗಳನ್ನು ದಾಟಿಸಿ ಕೊಂಡೊಯ್ಯುವ ಸಾಮರ್ಥ್ಯ ನಮ್ಮ ಗುರುಮಹಾರಾಜರಲ್ಲಿ ಬಿಟ್ಟರೆ, ಬೇರೆಲ್ಲೂ ಕಾಣಸಿಗುವುದಿಲ್ಲ. ಮತ್ತು ಶರೀರ ಇರುವಾಗಲೇ ಈ ಹಂತಗಳನ್ನು ಕ್ರಮಿಸುವಂತೆ ಮಾಡಿ, ಅವುಗಳಾಚೆಗೆ ಕರೆದೊಯ್ಯಲು ಸಾಧ್ಯ ಎಂಬ ಸಂಶೋಧನೆಯೂ ಅವರದೇ ಆಗಿದೆ.

ಯೌಗಿಕ ಪ್ರಾಣಾಹುತಿಯ ಮೂಲಕ ಒಂದು ಸೆಂಕೆಂದಿನಲ್ಲಿಯೇ ಅಂತಿಮ ಸ್ಥಿತಿಯವರೆಗೆ ತಲುಪಿಸುವುದನ್ನು ಸಾಧ್ಯಗೊಳಿಸಿದ ಅಂಥ ಮಹಾವ್ಯಕ್ತಿಗೆ ನಾವು ಧನ್ಯವಾದವನ್ನು ಎಷ್ಟೆಂದು ಹೇಳೋಣ ? ವಾಸ್ತವವಾಗಿ ನಾವು ಕುರುಡರು; ಈ ಕಾರ್ಯವನ್ನು ಮಾಡಿ ತೋರಿಸಿದ ಆ ಮಹಾವ್ಯಕ್ತಿಯ ಕಡೆಗೆ ದೃಷ್ಟಿಹಾಕುವುದಿಲ್ಲ; ಆಧ್ಯಾತ್ಮಿಕತೆಯ ಇತಿಹಾಸ ಅಂಥ ವ್ಯಕ್ತಿಯ ವಿಷಯದಲ್ಲಿ ಮೂಕವಾಗಿದೆ.

ನಮಗೆಲ್ಲರಿಗೂ ಈ ಸ್ಥಿತಿ ಪ್ರಾಪ್ತವಾಗುವಂತೆ ಈಶ್ವರ ಅನುಗ್ರಹಿಸಲಿ. ಲಖೀಂಪುರಕ್ಕೆ ಹೋಗುವಾಗ, ಈ ಪತ್ರವನ್ನು ತೆಗೆದುಕೊಂಡು ಹೋಗು, ಇದು ಮಾಸ್ಟರ್ ಸಾಹೇಬರ ಕಡತದಲ್ಲಿರಲಿ.

ನಿನ್ನ ಶುಭಚಿಂತಕ
ರಾಮಚಂದ್ರ



೭

# ಅನಂತ ಯಾತ್ರೆ

## ಭಾಗ – ೩

(೨೨ ನವೆಂಬರ್ ೧೯೫೩ ರಿಂದ ೧೪ ಜುಲೈ ೧೯೫೫ರ ವರೆಗೆ)

P-4-Books-PM-7-Anantyatre-88



## ಎರಡು ಮಾತು
### (ಭಾಗ ೩ಕ್ಕೆ) (ಹಿಂದಿ ಆವೃತ್ತಿಗೆ ಬರೆದದ್ದು)

ಪ್ರಿಯ ಅಭ್ಯಾಸಿ ಬಂಧುಗಳೆ,

ಇಂದು, 'ಅನಂತ–ಯಾತ್ರೆ'ಯ ಮೂರನೆಯ ಭಾಗವನ್ನು ತಮ್ಮ ಕೈಯಲ್ಲಿಡಲು ಅತೀವ ಹರ್ಷವಾಗುತ್ತದೆ. 'ಅನಂತ'ಕ್ಕೆ ತಲುಪುವ ಯಾತ್ರೆಯೂ ಅನಂತವೇ. ಮಾನವ ಕುಲಕ್ಕೆ "ಸಹಜ ಮಾರ್ಗ"ವನ್ನು ಅನುಗ್ರಹಿಸಿದ ಶ್ರೀ ಬಾಬೂಜಿ ಮಹಾರಾಜರು 'ಅನಂತ ಶಕ್ತಿ' ಅರ್ಥಾತ್ 'ಆತ್ಯಂತಿಕ ಶಕ್ತಿ'ಯ ಮೇಲೆ ಪ್ರಭುತ್ವ ಹೊಂದಿ ಪೃಥ್ವಿಯ ಮೇಲೆ ಅವತರಣಗೊಂಡಿದ್ದಾರೆ. ಅಲ್ಲದೆ, ಇಂದಿಗೂ ಕೂಡ, ವಾತಾವರಣದಲ್ಲಿ ವ್ಯಾಪ್ತವಾಗಿರುವ ಅವರ ದಿವ್ಯ ಪ್ರಕಾಶ, ಅರಿತಂತೆಯೋ ಅಥವಾ ಅರಿಯದಂತೆಯೋ ಪ್ರಾಣಿಮಾತ್ರರೆಲ್ಲರ ಹೃದಯವನ್ನು ಅದರಲ್ಲಿ ಮುಳುಗಿಸಿ ಇಡುವುದರಲ್ಲಿ ಪ್ರಯತ್ನಶೀಲವಾಗಿದೆ. 'ಒಂದು ಆರಿಹೋದ ಇದ್ದಲಿಗೆ ಉರಿಯುತ್ತಿರುವ ಇದ್ದಲಿಯನ್ನು ಪುನಃ ಪುನಃ ಸಂಯೋಗಗೊಳಿಸುವ ಪ್ರಯತ್ನ ಮಾಡುತ್ತ ಹೋದರೆ, ಆ ಆರಿದ ಇದ್ದಲಿಯೂ ಒಂದಿಲ್ಲೊಂದು ದಿನ ಪ್ರಕಾಶಿತವಾಗಲೇಬೇಕು'– ಎಂಬ ಮಾತಿನ ನಿತಾಂತ ಸತ್ಯವನ್ನು ಶ್ರೀ ಬಾಬೂಜಿಯವರ ಹೇಳಿಕೆಯು ಪ್ರತ್ಯಕ್ಷಗೊಳಿಸಿ ತೋರಿಸಿದೆ. 'ಸಹಜ ಮಾರ್ಗ ಸಾಧನಾ ಪದ್ಧತಿ'ಯು ಅವರ ಈ ಮಾತಿನ ಯಾಥಾರ್ಥವನ್ನು ಸುಸ್ಪಷ್ಟಗೊಳಿಸಿ ಅಭ್ಯಾಸಿಗಳ ಹೃದಯದಲ್ಲಿ ಸಾರ್ಥಕಭಾವ ಮೂಡಿಸಿದೆ. ಈಶ್ವರೀಯ ಪ್ರಕಾಶ ನಮ್ಮೊಳಗೆ ಸ್ಥಿತವಾಗಿದೆಯೆಂಬ ಭಾವವು ಧ್ಯಾನದಲ್ಲಿ ನಮ್ಮ ಸತತ ಯತ್ನವಾಗತೊಡಗಿದಾಗ ಮತ್ತು ನಮ್ಮ ಹೃದಯವನ್ನು, ಅದರಲ್ಲಿಯೇ ಮುಳುಗಿರುವಂತೆ ಮಾಡುವ ಪ್ರಯತ್ನ ನಡೆಸಿದಾಗ, ನಮ್ಮ ಅಸ್ತಿತ್ವದ ಕಣ–ಕಣವೂ ಈಶ್ವರೀಯ ಪ್ರಕಾಶದಿಂದ ದೀಪ್ತವಾಗುತ್ತದೆ ಮತ್ತು ಕ್ರಮೇಣ ಮುಂದುವರಿದಂತೆ, ಸಹಜವಾಗಿಯೇ ಅನಂತ ಶಕ್ತಿಯ ಭಾಸವಾಗತೊಡಗುತ್ತದೆ.

'ಅನಂತ–ಯಾತ್ರೆ' ಪುಸ್ತಕ, ನನ್ನ ಪ್ರಿಯ ಸದ್ಗುರು ಶ್ರೀ ಬಾಬೂಜಿಯವರ ಕೃಪೆ, ಮತ್ತು ಅಭ್ಯಾಸಿಗಳ ಬಗ್ಗೆ ಅವರಿಗಿರುವ ಶಿಶುವತ್–ಪ್ರೇಮಗಳ ದಿವ್ಯ ಉದಾಹರಣೆಯಾಗಿದೆ. ದೈವಿಕ ಸೌಂದರ್ಯದೊಂದಿಗೆ ನನ್ನನ್ನು ಜೋಡಿಸಿ, ಅಂತಿಮ ಸತ್ಯದ ಹೊಸ್ತಿಲಲ್ಲಿ ನನಗೆ ಪ್ರವೇಶ ದೊರಕಿಸಿ, ಅವರು ಸರ್ವ–ಸಮಸ್ತರಿಗೂ 'ಅನಂತ–ದೇಶ' (ಭೂಮಾ)ದ ದ್ವಾರವನ್ನು ತೆರೆದಿಟ್ಟರೆನ್ನಬಹುದು. ಈಗ ಇದರಲ್ಲಿ ಪ್ರವೇಶ ಮಾಡಿ ತಾವೆಲ್ಲರೂ ಜೀವನದ ಪರಮ ಲಕ್ಷ್ಯ ಪ್ರಾಪ್ತ ಮಾಡಿಕೊಳ್ಳಲಿ ಎಂಬುದೇ ನನ್ನ ಶುಭಕಾಮನೆಯಾಗಿದೆ.

**– ಕಸ್ತೂರಿ ಚತುರ್ವೇದಿ**



ಕ್ರಮ ಸಂಖ್ಯೆ – ೮೯ **ಪತ್ರ ಸಂಖ್ಯೆ – ೩೫೪** ಷಾಹಜಹಾನಪುರ
೨೨–೧೧–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಮತ್ತು ಕೇಸರ್‌ಳ ಪತ್ರಗಳು ತಲುಪಿವೆ, ನಾನು ದೀಪಾವಳಿಯಲ್ಲಿ ಕುಕರಾ (ಹಳ್ಳಿ)ದಲ್ಲಿದ್ದೆ, ಲಖೀಂಪುರಕ್ಕೆ ಹೋಗುವುದು ಸಾಧ್ಯವಾಗಲಿಲ್ಲ. ಚೌಬೇಜಿ, ಮಾಸ್ಟರ್ ಸಾಹೇಬ್ ಮತ್ತಿತರರು ಅಲ್ಲಿಗೆ ಬಂದಿದ್ದರು. ಇಂಗ್ಲಿಷ್ ಪುಸ್ತಕದ ಕರಡು ಪ್ರತಿ ಅಲಹಾಬಾದಿನಿಂದ ಬರಲಿದೆ. ಆ ಕಾರಣ ಬಿಡುವಿಲ್ಲ. ಪತ್ರ ತಲುಪಿದ ವಿಷಯ ತಿಳಿಸಿದೆ, ಆದರೆ ಅದಕ್ಕೆ ಉತ್ತರ ಬರೆಸುವುದಾದರೆ ತುಂಬಾ ದೀರ್ಘವಾಗುವುದು. ಈ ಸಮಯದಲ್ಲಿ ನೀನು ಉಳಿದೆಲ್ಲ ಚಿಂತೆ ಬಿಟ್ಟು, ನಿನ್ನ ಆರೋಗ್ಯ ಸುಧಾರಿಸಿಕೊಳ್ಳಲು ಲಕ್ಷ್ಯ ಕೊಡಬೇಕು. ಷಾಹಜಹಾನಪುರಕ್ಕೆ ನಿನ್ನೊಂದಿಗೆ ಬಂದು ನಿಂತು ಲಖೀಂಪುರಕ್ಕೆ ಹೋಗುವುದಾಗಿ ಚೌಬೇಜಿ ಹೇಳಿದ್ದರು. ನೀನು ಇಲ್ಲಿಗೆ ಬಂದರೆ ತುಂಬಾ ಒಳ್ಳೆಯದು. ನಾನು ಒಬ್ಬ ಹಕೀಮನ (ಯುನಾನಿ ವೈದ್ಯ) ಔಷಧದ ಮೇಲೆ ಇದ್ದೇನೆ, ಅದರಿಂದ ಪ್ರಯೋಜನವಾಗುತ್ತಿದೆ. ನಿಜ ಹೇಳಬೇಕೆಂದರೆ, ನೀನು ಸ್ವತಃ ನೀನಾಗಿ ಆಧ್ಯಾತ್ಮಿಕವಾಗಿ ನಿನ್ನ ಉನ್ನತಿ ಮಾಡಿಕೊಂಡಿದ್ದೀಯೆ. ನಾನು ಅಲ್ಪಮಟ್ಟಿಗೆ ಸಹಾಯ ನೀಡಿದ್ದೇನೆಂಬುದು ಸರಿಯೆ, ಮುಂದೆಯೂ ಕೊಡುತ್ತಲೇ ಇರುತ್ತೇನೆ. ನನ್ನಲ್ಲಿ ಯೋಗ್ಯತೆ ಇದ್ದುದಾದರೆ ಎಲ್ಲ ಅಭ್ಯಾಸಿಗಳೂ ಪ್ರಗತಿ ಹೊಂದುತ್ತಿದ್ದರು. ಈಶ್ವರನು ನಿನಗೆ ಬೇಗ ಆರೋಗ್ಯವನ್ನು ಕೊಡಲಿ, ಕೇಸರ್‌ಳಿಗೆ, ಫೂಲೊ ಮತ್ತು ಅವಳ ಮಕ್ಕಳಿಗೆ ಆಶೀರ್ವಾದ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೦ **ಪತ್ರ ಸಂಖ್ಯೆ – ೩೫೭** ಷಾಹಜಹಾನಪುರ
೦೭–೧೨–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ಕೈಸೇರಿದೆ. ನಿನ್ನ ಪತ್ರದಲ್ಲಿ ಅನೇಕ ಸಲ ಅಳಿದು ಹೋಗುವ ವಿಷಯ ಪ್ರಸ್ತಾಪಿಸಿದ್ದೀಯೆ. 'ಅಳಿದು ಹೋಗ'ಬೇಕೆಂಬುದರ ಅರ್ಥ ಶರೀರ ಬಿಡುವ ಪ್ರಯತ್ನ ಮಾಡಬೇಕೆಂದಲ್ಲ; ನಮ್ಮ ಸ್ಥೂಲ ಅಹಂಕಾರ ಮತ್ತು ಶುದ್ಧ (ಸೂಕ್ಷ್ಮ) ಅಹಂಕಾರಗಳನ್ನು ಅಳಿಸಿಹಾಕುವುದು ಎಂದು ಅರ್ಥ. ಮತ್ತು ಅಹಂಕಾರ ಅಳಿದುಹೋದಾಗ ಮನುಷ್ಯ ಏನಿದ್ದಾನೋ ಅದೇ ಆಗಿರುತ್ತಾನೆ (ಶುದ್ಧ ಮಾನವನಾಗಿ ಉಳಿಯುತ್ತಾನೆ). ಎಲ್ಲ ಮಹಾತ್ಮರೂ ಇದೇ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಈಗ, ಅಳಿದು ಹೋಗುವುದು ಎಂದರೇನು ಎಂಬುದು ನಿನಗೆ ತಿಳಿದಿರಬಹುದು. ಈ ಸಮಯದಲ್ಲಿ ನೀನು ಆರೋಗ್ಯವಂತಳಾದರೆ, ಅದು ನಿನಗೆ, ಧ್ಯಾನಾಭ್ಯಾಸದಲ್ಲಿ

P-4-Books-PM-7-Anantyatre-89



ಮತ್ತು ಮಿಷನ್ನಿನ ಕೆಲಸಮಾಡುವುದರಲ್ಲಿ ಎಷ್ಟು ಸಹಾಯಕವಾದೀತೆಂಬುದನ್ನು ನೀನು ಯೋಚಿಸಬೇಕು. 'ಎಲ್ಲ ರೋಗಗಳೂ ನಿನ್ನನ್ನು ಬಿಟ್ಟು ಹೋಗುತ್ತಿವೆ ಮತ್ತು ನೀನು ಆರೋಗ್ಯವಂತಳಾಗುತ್ತಿದ್ದೀಯೆ' ಎಂಬ ವಿಚಾರದ ಮೇಲೆ ನಿನ್ನ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಈ ಅಭ್ಯಾಸದಿಂದ ನೀನು ಶೀಘ್ರ ಆರೋಗ್ಯವಂತಳಾಗುತ್ತೀಯೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೧ **ಪತ್ರ ಸಂಖ್ಯೆ – ೩೫೯** ಷಾಹಜಹಾನಪುರ
೧೪–೧೨–೧೯೫೩

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ೫–೧೨–೧೯೫೩ರ ಪತ್ರ ತಲುಪಿತು. ಶರೀರವನ್ನು ಆರೋಗ್ಯದಿಂದಿಟ್ಟುಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯ. ಶರೀರವು ಸ್ವಾಸ್ಥ್ಯದಿಂದಿದ್ದಾಗ ಸೂಕ್ಷ್ಮಶರೀರವೂ ಆರೋಗ್ಯಪೂರ್ಣವಾಗಿರುತ್ತದೆ ಮತ್ತು ಮನಸ್ಸು (ಮೆದುಳು) ಸರಿಯಾಗಿ ಆಲೋಚಿಸಲು, ವಿಮರ್ಶನ ಮಾಡಲು ಶಕ್ತವಾಗುತ್ತದೆ. ಹಿಂದಿನ ಪತ್ರದಲ್ಲಿ, 'ಅಳಿದುಹೋಗುವುದು' ಎಂದರೆ ಅಹಂಕಾರ ಉಳಿಯಬಾರದು ಎಂದು ಅರ್ಥ ಎಂಬುದನ್ನು ನಾನು ಬರೆದಿದ್ದೆ. ಶರೀರದ ಮೇಲಿನ ಕಾಳಜಿಯಿರಬಾರದು ಮತ್ತು ಅದು ದುರ್ಬಲವಾಗಿ ಶೀಘ್ರ ಬಿದ್ದುಹೋಗಬೇಕೆಂದು ಅದರ ಅರ್ಥವಲ್ಲ, ಈ 'ಅಹಂಕಾರ'ವನ್ನು ಅಳಿಸಿಹಾಕಲಿಕ್ಕೋಸ್ಕರವೇ ಜನರು ದೊಡ್ಡ ಪರಿಶ್ರಮ ಮಾಡುತ್ತಾರೆ, ಮತ್ತು ನಮ್ಮಲ್ಲಿ ಅದು ಬಹಳ ಸಹಜರೀತಿಯಲ್ಲಿ ಅಳಿದು ಹೋಗಬಲ್ಲುದು; ಅದರ ವಿಧಾನ, ನೀನು ಈಗ ಮಾಡುತ್ತಿರುವುದೇ ಆಗಿದೆ. ಹಾಗೆನ್ನುವುದಾದರೆ ಇನ್ನೂ ಅನೇಕ ವಿಧಾನಗಳುಂಟು, ಆದರೆ ಅವು ಕಷ್ಟಕರವಾಗಿವೆ. ಜನರಿಗೆ ಇದರಲ್ಲಿ ಆಸಕ್ತಿ ಇಲ್ಲ. ಆದ್ದರಿಂದ ಯಾರು ತಾನೆ ಅದನ್ನು ಮಾಡುತ್ತಾರೆ ? ಅಲ್ಲದೆ, ವಿಧಾನದಲ್ಲಿ ಪೂರ್ಣ ಶ್ರದ್ಧೆ ಇಲ್ಲದ ಪ್ರತಿಯೊಬ್ಬರಿಗೂ ಇದನ್ನು (ವಿಧಾನವನ್ನು) ತಿಳಿಸಲಾಗುವುದಿಲ್ಲ. ತಿಳಿಸಿದರೂ ಕೂಡ ಮಾಡುವವರು ಯಾರು ? ಕಲಿಸುವವನು (ಪ್ರಶಿಕ್ಷಕ) ಅಹಂಕಾರದಿಂದ ಬಹುಮಟ್ಟಿಗೆ ಮುಕ್ತನಾಗಿರಬೇಕು, ಅದಿಲ್ಲವಾದರೆ ವಿಧಾನಗಳು ಒಳ್ಳೆಯ ಫಲ ನೀಡಲಾರವು. ನನ್ನ ಬಗ್ಗೆ ಚಿಂತೆ ಬೇಡ. ನಾನು ಈಗಲೇ (ಸದ್ಯದಲ್ಲಿಯೇ) ಮರಣ ಹೊಂದುವುದಿಲ್ಲ.

ಪುಸ್ತಕದ ಕರಡು ಪ್ರತಿ (ತಿದ್ದುವುದು) ನಿರಂತರವಾಗಿ ಬರುತ್ತಿದೆ.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೯೨ **ಪತ್ರ ಸಂಖ್ಯೆ – ೩೬೮** ಷಾಹಜಹಾನಪುರ
೦೨–೦೨–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ನಿನ್ನ ಪತ್ರ ಕೈಸೇರಿತು. 'ನನ್ನ ಬಳಿ ಏನೆಲ್ಲ ಇರುವುದೋ, ಅದೆಲ್ಲವೂ ನಿಮ್ಮಿಂದ ಕೊಡಮಾಡಲ್ಪಟ್ಟಿದ್ದಿದೆ' – ಎಂದು ಚೆನ್ನಾಗಿ ಬರೆದಿದ್ದೀಯೆ. ಒಂದು ವೇಳೆ ಕೊಡು–ಕೊಳ್ಳುವ ಪ್ರಶ್ನೆ ಇದೆಯೆಂದಾದರೆ, ನಾನು ಆಲೋಚನೆ ಮಾಡಿದಾಗ, ನನ್ನ ಬಳಿ ಇರುವುದೆಲ್ಲವೂ ನಿನ್ನಿಂದ ಕೊಡಲ್ಪಟ್ಟಿದೆ ಎಂದು ನನಗೆ ಗೊತ್ತಾಗಿದೆ. ನಿನ್ನ ಆಧ್ಯಾತ್ಮಿಕ ಸ್ಥಿತಿಯನ್ನು ನಾನು ವೀಕ್ಷಿಸಿದಾಗ ನೀನು ಬಂಧನಗಳಿಂದ ಮುಕ್ತಳಾಗಿದ್ದೀಯೆ ಎಂದು ನನಗೆ ತೋರುತ್ತದೆ; ಈಶ್ವರನಿಗೇ ಅದು ಚೆನ್ನಾಗಿ ಗೊತ್ತು. ಈ ಸ್ಥಿತಿಯಲ್ಲಿ ಇನ್ನೂ ಈಜುವುದು ಬಹಳ ಇದೆ. ನೀನು ನಿನ್ನ ಧ್ಯೇಯವನ್ನು ಪೂರೈಸಿಕೊಂಡಿದ್ದೀಯೆ. ಅತಿಶಯ ಫಲ (ಪ್ರಯೋಜನ) ಬಯಸುವ ವ್ಯಕ್ತಿಯ ಎಲ್ಲ ಪ್ರಯತ್ನ, ಹೆಣಗಾಟಗಳೂ ಇಲ್ಲಿ ಸಮಾಪ್ತವಾಗುತ್ತವೆ, ಆದರೆ, ನನ್ನ ಕಣ್ಣುಗಳು ನನ್ನ ಕಣ್ಣುಗಳಾಗಿ ಉಳಿದಿಲ್ಲ. ಈಗ ನೋಡಬೇಕೆಂದರೆ ಯಾವುದರಿಂದ ನೋಡಲಿ ? ನನ್ನ ಸ್ಥಿತಿ ಏನೆಂದು ನನಗೆ ಗೊತ್ತಿಲ್ಲ. ಆದರೆ, ಪ್ರತಿಯೊಂದು ಸ್ಥಿತಿಯಲ್ಲಿಯೂ ನಾನು ಕೃತಜ್ಞನಾಗಿದ್ದೇನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೩ **ಪತ್ರ ಸಂಖ್ಯೆ – ೩೭೩** ಷಾಹಜಹಾನಪುರ
೨೭–೦೨–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ತುಲಸೀದಾಸ (ಬಹೆನ್‌ಜಿಯವರ ತಮ್ಮ) ಬಂದಿದ್ದರು, ನನ್ನ ಬಳಿ ಸುಮಾರು ನಲವತ್ತು ನಿಮಿಷ ಇದ್ದರು. ಅವರು ನಿನ್ನ ೧೬–೦೨–೧೯೫೪ರ ಪತ್ರ ಕೊಟ್ಟರು. ಈ ಪತ್ರ ಪೂರ್ತಿ ನಮ್ಮ ಗುರುಮಹಾರಾಜ ಲಾಲಾಜಿಯವರ ಗುಣಗಾನವೇ ತುಂಬಿತ್ತು, ಅವರು ನಿಜಕ್ಕೂ ಸ್ತುತ್ಯರ್ಹರು. ಬಸಂತಪಂಚಮಿ ಉತ್ಸವದಲ್ಲಂತೂ ಅವರದೇ ಅನುಗ್ರಹದ ಚಮತ್ಕಾರ ನಡೆಯುತ್ತದೆ. ನಿನ್ನ ವೀಕ್ಷಣೆ (Reading) ಸರಿ ಇದೆ. ವಾಸ್ತವವಾಗಿ ನನ್ನ ಮೂಲಕ ಏನೆಲ್ಲ ನಡೆಯುತ್ತದೆಯೋ ಅದರ ಕುರಿತು ನನಗೆ ಗೊತ್ತಿಲ್ಲ. ಇಲ್ಲಿ ವಿಶೇಷವೆನ್ನುವಂಥದೇನೂ ಇಲ್ಲ. ಆದರೆ, ಯಾತ್ರೆ (Tour)ಯ ಸಮಯದಲ್ಲಿ ನನಗೆ ಅನೇಕ ಬಾರಿ ಗದರಿಕೆ (ಆಕ್ಷೇಪ) ದೊರೆಯಿತು, ಯಾಕೆಂದರೆ, ಕೆಲಸದ ಅಂದಾಜು ಸರಿಯಾಗಿ ಮಾಡಲಿಕ್ಕೆ ಸಾಧ್ಯವಾಗದೆ, ಅಚೇತನ ವಸ್ತುಗಳಲ್ಲಿ ಶಕ್ತಿ ತುಂಬುವಾಗ ನಾನು ಹೆಚ್ಚು ಸಲ ಆವಶ್ಯಕತೆಗಿಂತ ಹೆಚ್ಚು ಮಾಡಿಬಿಡುತ್ತಿದ್ದೆ.

P-4-Books-PM-7-Ananthyatre-90



ಮನೆಯಲ್ಲಿ ಚಿಕ್ಕ ಮಕ್ಕಳೂ ಇರುತ್ತಾರೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿದ್ದುದೇನೋ ಸರಿಯೆ. (ಆದರೂ ಅಧಿಕ ಶಕ್ತಿಯನ್ನು ಆ ಸ್ಥಳಗಳಲ್ಲಿ ತುಂಬಿಬಿಡುತ್ತಿದ್ದೆ.) ಗೋವರ್ಧನ ಪರ್ವತದ ಮೇಲೆ, ಒಂದು ತಪ್ಪು ನನ್ನಿಂದ ಮೊದಲಬಾರಿಗೆ ಘಟಿಸಿತ್ತು. ಅದು ನನಗೆ ದೊರೆತ ಮೊದಲ ಅವಕಾಶವಾಗಿದ್ದುದರಿಂದ, ಅಂಥ ಕಾರ್ಯವನ್ನೂ ನಾನು ಎಸಗಬಲ್ಲೆನೆಂಬ ಅಂದಾಜು ನನಗೆ ಇರಲಿಲ್ಲ. ಈ ವಿಷಯ ಕುರಿತು ಹೆಚ್ಚು ಬರೆಯಬೇಕಾದುದಿಲ್ಲ; ನನ್ನ ಟಿಪ್ಪಣಿಗಳಲ್ಲಿ ಎಲ್ಲವೂ ಇವೆ.

ಜನರು ನನ್ನ ಬಳಿಗೆ ಬರುತ್ತಾರೆ. ನಾನು ಸತ್ಸಂಗವನ್ನು ನಡೆಸುವುದಂತೂ ಸರಿಯೆ; ಆದರೆ, ಯಾರಾದರೂ ಕೆಲದಿನಗಳ ಮಟ್ಟಿಗೆ ಇಲ್ಲಿ ಉಳಿದುಕೊಂಡರೆ, ಅವರಿಗೆ ಯಾವ ಕೆಲಸ (ಆಧ್ಯಾತ್ಮಿಕವಾಗಿ) ಮಾಡಬೇಕಿದೆ ಎಂಬುದು ನನಗೆ ಖಚಿತವಾಗುತ್ತದೆ; ಮತ್ತು ಅದನ್ನು ತಿಳಿದುಕೊಂಡು ನಾನು ಕೆಲಸಮಾಡಿದಾಗ ಪರಿಣಾಮ ಬಹಳ ಒಳ್ಳೆಯದಾಗುತ್ತದೆ. ನಿನ್ನ ವಿಷಯದಲ್ಲಿ ಅದು ಹೀಗೆಯೇ ಆಯಿತು. ಅದರ ಪರಿಣಾಮವಾಗಿ ಆತ್ಮದ (soul) ಬಂಧನಗಳು ಬಹಳಷ್ಟು, ಎಷ್ಟೆಂದರೆ, ಅವುಗಳ ಅನುಭೂತಿಯೂ ಬಹಳ ಕಷ್ಟಸಾಧ್ಯವಾಗುವಷ್ಟು ಶಿಥಿಲವಾದವು.

ಫೆಬ್ರುವರಿ ೧೮ ಮತ್ತು ೨೨ರ ಪತ್ರದಲ್ಲಿ ನೀನು ಬರೆದಿರುವ ಸ್ಥಿತಿಯ ಬಗ್ಗೆ ಸಂಕ್ಷೇಪವಾಗಿ ಉತ್ತರಿಸುತ್ತೇನೆ. ನಿನ್ನಲ್ಲಿರುವ ಶುದ್ಧತೆ ಎಂಥದೆಂದರೆ, ನನ್ನ ಹೃದಯವೂ ಅದಕ್ಕೋಸ್ಕರ ಹಾತೊರೆಯುತ್ತದೆ. ನನ್ನಲ್ಲಿ ಏನಾದರೂ ಇದ್ದುದಾದರೆ, ಅದು ಲಾಲಾಜಿ ಸಾಹೇಬರು ಅನುಗ್ರಹಿಸಿರುವುದೇ ಆಗಿದೆ. ಇನ್ನುಳಿದ ಬಗ್ಗೆ ನನ್ನನ್ನು ನೀನು ಹೀಗೆ ತಿಳಿದುಕೊಳ್ಳಬಹುದು : ಹಾಗೆನ್ನುವುದಾದರೆ, ಇಡೀ ವಿಶ್ವವೇ ನನ್ನ ಉದರದಲ್ಲಿ ಇದೆಯೋ ಎಂಬಂತೆ, ವಿಶ್ವದಲ್ಲಿ ಏನೆಲ್ಲ ಆಘಾತಗಳು ಘಟಿಸುತ್ತಿರುವುವೋ ಅವೆಲ್ಲವೂ ನನ್ನೊಳಗೆ ಬಂದು ತಟ್ಟುತ್ತಿರುತ್ತವೆ; ಅದರಲ್ಲಿ ಶುದ್ಧತೆ, ಅಶುದ್ಧತೆಗಳೆರಡೂ ಒಳಗೊಂಡಿವೆ. ಆ ಕಾರಣದಿಂದಲೇ ನಿನ್ನಲ್ಲಿ ನಾನು ಶುದ್ಧತೆಯನ್ನು ಕಂಡಾಗ, ನನಗೆ ಬಹಳೇ ಸಂತೋಷವಾಗುತ್ತದೆ. ನಾನು ಏನೆಂದು ಹೇಳಲಿ ? ಈಶ್ವರನಿಗೆ ಕೃತಜ್ಞತೆಗಳನ್ನು ಹೇಳಲು ಶಬ್ದಗಳೇ ಸಿಗುವುದಿಲ್ಲ. ತನ್ನ ಚರಮ ಸ್ತರವನ್ನು ತಲುಪಿದ ಆಧ್ಯಾತ್ಮಿಕ ಉನ್ನತಿಯ ನಿಲುಕಿನ ಲಕ್ಷಣವೇ ಅಂತಿದೆ; ಅದನ್ನು ವರ್ಣಿಸಿ ಮುಗಿಸಲಾಗದು, ಅಲ್ಲದೆ ಅದೊಂದು ರಹಸ್ಯವೂ ಹೌದು. ಅದನ್ನು ಪೂರ್ತಿಯಾಗಿ ಬಹಿರಂಗಪಡಿಸುವುದೇ ಇಲ್ಲ; ಯಾಕೆಂದರೆ ಇದನ್ನು ಒಪ್ಪಲು ಯಾವನೂ ಸಿದ್ಧನಾಗುವುದಿಲ್ಲ. ಒಂದು ವೇಳೆ ಸಿದ್ಧನಾದರೂ ಆ ಆಧ್ಯಾತ್ಮಿಕ ಉನ್ನತಿಯನ್ನು ಮೆಚ್ಚಿಕೊಳ್ಳುವದಿಲ್ಲ. ಆ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಲು ಈಶ್ವರನು ಯಾರಿಗಾದರೂ ಸಹಾಯ ಮಾಡಿದರೆ, ಆ ಸ್ಥಿತಿ ಎಂಥದಿದೆಯೆಂದರೆ ಆ ವ್ಯಕ್ತಿಯು ಅದನ್ನು ದೂರವಿಡಲು ಅವನ ಹೃದಯ ಒಪ್ಪಲಿಕ್ಕಿಲ್ಲ. ವ್ಯಕ್ತಪಡಿಸಲು



ನಾನು ಬಹಳ ಪ್ರಯತ್ನ ಮಾಡುತ್ತೇನೆ. ಆದರೆ ನಾಲಿಗೆ (ಬಾಯಿ) ತೆರೆಯಲು ಮನಸ್ಸು ಒಪ್ಪುವುದಿಲ್ಲ. ಹೃದಯ ತಡೆಯುತ್ತದೆ. ಇರಲಿ ಬಿಡು. ಇದು ದೊಡ್ಡ ರಹಸ್ಯ. ಯಾವನು ಆ ಹಂತವನ್ನು ತಲುಪಿರುವನೋ ಅಂಥ ಯಾರಾದರೊಬ್ಬನಿಗೆ ನಾನು ಇದರ ಸುಳುಹು ಕೊಡಬಹುದು. ಅವನು ಅದನ್ನು ಅರ್ಥಮಾಡಿಕೊಳ್ಳಬಲ್ಲ. ಆದರೆ ನನ್ನ ಜೀವಿತಕಾಲದಲ್ಲಿಯೇ ಅಂಥ ಇನ್ನೊಬ್ಬ ಆ ಸ್ಥಿತಿಯನ್ನು ಪಡೆದವನಾಗ ಬಹುದಾದರೆ ನನಗೆ ಸಂತೋಷವಾದೀತು. 'ಎಲ್ಲಿ ನೋಡಿದರೆ ಅಲ್ಲಿ ನನ್ನದೇ ರೂಪ ಕಣ್ಣಿಗೆ ಬರುತ್ತಿದೆ' ಎಂದು ನೀನು ಬರೆದಿದ್ದೀಯೆ. ಇದು ಬಹಳ ಒಳ್ಳೆಯ ಸ್ಥಿತಿ. ಇದನ್ನೇ ಮಹಾತ್ಮರು 'ಸಾಕ್ಷಾತ್ಕಾರ' ಎಂದು ಕರೆದಿದ್ದಾರೆ. ಸಾಮಾನ್ಯ ಸಹಜಗತಿಯಲ್ಲಿ ಈ ಸ್ಥಿತಿಯನ್ನು ಪಡೆದವರು ಪ್ರಾಯಶಃ ಅಪರೂಪವಾಗಿ ಸಿಗಬಹುದು. ಒಂದು ವೇಳೆ ಸಿಕ್ಕರೆ, ಇದಕ್ಕಿಂತ ಒಂದು ಹೆಜ್ಜೆ ಮುಂದೆ ಇರುವವನು ಸಿಕ್ಕಬಹುದು – ಅದನ್ನು 'ಪರಿಪೂರ್ಣತೆ' (Perfection) ಎಂದು ಕರೆಯಲಾಗಿದೆ. ಎಲ್ಲರ ಆಧ್ಯಾತ್ಮಿಕ ಸಾಧನೆಯ (ಪ್ರಯತ್ನದ) ಹೆಣಗಾಟ ಇಲ್ಲಿಗೆ ಮುಗಿದುಹೋಗುತ್ತದೆ; ಮತ್ತೆ, ನನ್ನ ಅಭಿಪ್ರಾಯದಲ್ಲಿ, ಇದು ಸಾಕ್ಷಾತ್ಕಾರದ ಮೊದಲನೆಯ ಮೆಟ್ಟಿಲಾಗಿದೆ. ನಾನು 'ಸಾಕ್ಷಾತ್ಕಾರ'ವನ್ನು ಮಾಪನ ಮಾಡಿ ಹೇಳುವುದಾದರೆ, ನೀನು ಅದರ ಅ, ಆ, ಇ, ಈ (A, B, C, D) ಶುರು ಮಾಡಿದ್ದೀಯೆ ಎಂದು ನನ್ನ ಹೃದಯ ಹೇಳುತ್ತದೆ. ನಾನು ಇದನ್ನು ಯಾರಿಗಾದರೂ ಹೇಳಿದರೆ ನನ್ನನ್ನು ಹುಚ್ಚನೆಂದು ಕರೆದಾರು, ಮತ್ತು ನಾನು ಕೂಡ ಆಧ್ಯಾತ್ಮಿಕತೆಯಲ್ಲಿ ಕಾಲಿರಿಸಿದ್ದೇನೆ ಎಂಬುದು ಅವನಿಗೆ ತಿಳಿದುಬಂದರೆ ನಾನು ನನ್ನ ದೊಡ್ಡಸ್ತಿಕೆಯ ಜಂಬಪಡುತ್ತಿದ್ದೇನೆ, ಈ ಮನುಷ್ಯನಿಗೆ ಏನೂ ಗೊತ್ತಿಲ್ಲ, ಎಂದು ಹೇಳಬಹುದು. ಆದರೆ ನನ್ನ ಪುಸ್ತಕಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ನಾನು ಎಲ್ಲವನ್ನೂ ಹೇಳಿದ್ದೇನೆ. ನೀನು ಸದ್ಯ ಇರುವ ಸ್ಥಿತಿಯನ್ನು ನಿಖರವಾದ ತುರೀಯಾವಸ್ಥೆ ಎಂದು ಕರೆಯಬಹುದು.

ಫೆಬ್ರುವರಿ ೨೧, ೧೯೫೪ರ ನಿನ್ನ ಪತ್ರದಲ್ಲಿ ನೀನು 'ಶರಣಾಗತ ಸ್ಥಿತಿ' (ಬಂದಗಿ – ವಿನೀತಸ್ಥಿತಿ) ಕುರಿತು ಬರೆದಿದ್ದೀಯೆ. ಇದು ಬಹಳ ಉನ್ನತ ಸ್ಥಿತಿ. ಭಕ್ತನಾದವನು ಭಕ್ತನಾಗಿಯೇ ಉಳಿಯುತ್ತಾನೆ; ಮತ್ತು 'ಅವನ'ನ್ನು (ಸದ್ಗುರು / ಈಶ್ವರ) ತನ್ನ ಸರ್ವಸ್ವವೆಂದು ತಿಳಿಯುತ್ತಾನೆ. ಆದ ಕಾರಣ, ನಾವು ಯಾವಾಗಲೂ ಭಕ್ತನ (ಶರಣಾಗತನ) ಭಾವದಲ್ಲಿರುವುದು ಬಹಳೇ ಒಳ್ಳೆಯದು. ಇಂದು ದಿನವಿಡೀ ಈ ವಿಚಾರ ನನ್ನಲ್ಲಿ ಸುಳಿಯುತ್ತಿತ್ತು. ಅದು ಒಳ್ಳೆಯದೆಂಬ ಕಾರಣದಿಂದ, ನಾನು ಆ ಭಾವವನ್ನು ಕಾಯ್ದಿಟ್ಟುಕೊಳ್ಳಲು ಪ್ರಯತ್ನಮಾಡಿದೆ. ನನಗೆ ಅದರ ಅನುಭೂತಿ ಉಂಟಾಗಲಿಲ್ಲ. ಅಥವಾ ಯಾವಾಗಲಾದರೂ ಉಂಟಾಗಿತ್ತೋ ಎಂಬುದು ನೆನಪಿಲ್ಲ. ಸಾಧ್ಯವಿದ್ದಮಟ್ಟಿಗೆ, ವಿನೀತ (ಶರಣಾಗತ) ಭಾವವನ್ನು ಬಿಡಬಾರದು; ಈಗ, ಅದೇ ನಮ್ಮನ್ನು ಮುಂದಕ್ಕೆ ಕರೆದೊಯ್ಯುತ್ತದೆ. ನೀನು ವಿಚಾರ ಮಾಡಿ ಬರೆದು ತಿಳಿಸು; ಅಥವಾ ಮಾಸ್ಟರ್ ಸಾಹೇಬರೊಂದಿಗೆ ಸಮಾಲೋಚನೆ ಮಾಡಿ (ಸಲಹೆ ಪಡೆದು)

ನಾನು ಹೇಗೆ ಈ ಶರಣಾಗತ ಭಾವವನ್ನು ಪಡೆಯಬಹುದೆಂಬುದನ್ನು ತಿಳಿಸು. ನಿಜಕ್ಕೂ ಇದು ತುಂಬ ಒಳ್ಳೆಯದು.

ಅಮ್ಮಾಜಿಯವರಿಗೆ ವಂದನೆಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

**ಅನಂತರ ಬರೆದುದು :** (P.S.): ನಾನು ನಿನ್ನ ಹಿಂದಿನ ಪತ್ರಕ್ಕೆ ಉತ್ತರ ಬರೆದು ಮುಗಿಸಿದ ನಂತರ ನಿನ್ನ, ೨೨–೦೨–೧೯೫೪ರ ಪತ್ರ ತಲುಪಿತು. "ನನ್ನ ಬಟ್ಟೆ ಬರೆಗಳನ್ನು ಹರಿದು ಚಿಂದಿಮಾಡಿ ಎಸೆಯಬೇಕು, ಮುಂತಾಗಿ ಅನಿಸುತ್ತದೆ ಎಂದು ಬರೆದಿದ್ದೀಯೆ. ನನಗನಿಸುವ ಮಟ್ಟಿಗೆ, ಈ ಭಾವನೆಗಳು, ತಳಮಳವನ್ನು ಶಮನಗೊಳಿಸುವ ಉದ್ದೇಶದಿಂದ ಬಂದವುಗಳಾಗಿವೆ. ಇದು 'ವೇದನೆ'ಯ ಸ್ಥಿತಿಯೂ ಆಗಿದೆ. 'ಈ ರೀತಿಯ ಕ್ರಿಯೆಗಳು ಘಟಿಸಬಾರದೆಂದು ಯಾರೋ ನಿನ್ನ ಹೃದಯವನ್ನು ಹಿಡಿದುಕೊಂಡಿರುವಂತೆ ತೋರುತ್ತದೆ' ಎಂದು ಕೂಡ ಬರೆದಿದ್ದೀಯೆ. ಇವೆಲ್ಲವೂ ನಮ್ಮ ಲಾಲಾಜಿ ಸಾಹೇಬರ ಚಮತ್ಕಾರವೇ ಆಗಿವೆ.... ಅದಿಲ್ಲದ್ದರೆ, ವಿಶೇಷವಾಗಿ ಕೆಲವು ತಿಂಗಳ ಹಿಂದೆ ಪಡೆದ ಸ್ಥಿತಿಯಲ್ಲಿ 'ಅವಧೂತ' ಆಗಿಬಿಡುವ ಭಯವಿತ್ತು ನಮ್ಮ ಮಿಷನ್ನಿನಲ್ಲಿ ಯಾರೂ 'ಅವಧೂತ' ರಾಗುವುದಿಲ್ಲ.

ನೀನು 'ಭಯ'ದ ವಿಷಯ ಬರೆದಿದ್ದೀಯೆ. ಇದು ಒಳ್ಳೆಯ ಸ್ಥಿತಿ. ನನಗೆ ಜ್ಞಾಪಕವಿರುವಮಟ್ಟಿಗೆ, ಏಳೆಂಟು ತಿಂಗಳುಗಳ ಹಿಂದೆ ನನ್ನ ಕೆಲವು ಪತ್ರಗಳಲ್ಲಿ, 'ನಿನಗೆ ಭಯದ ಅನುಭೂತಿಯಾಗಿತ್ತೋ' ಎಂದು ಬರೆದಿದ್ದೆ, ಅಥವಾ ಮೌಖಿಕವಾಗಿ ಕೇಳಿದ್ದೆ. ನೀನು ಬಹುಶಃ 'ಹೌದು' ಎಂದು ಉತ್ತರಿಸಿದ್ದೆ. ಆಗ ಈ ಸ್ಥಿತಿಯು ಪೂರ್ತಿ ಮೇಲೆದ್ದು ಬಂದಿರಲಿಲ್ಲ; ಈಗ ಪೂರ್ತಿಯಾಗಿ ಬಂದಿದೆ. ಈ ಸ್ಥಿತಿಯನ್ನು 'ದೈವ ಭಯ'ದ (ಖುದಾ–ತರಸಿ) ಸ್ಥಿತಿಯೆಂದು ಕರೆಯುತ್ತಾರೆ. ಈ ಸ್ಥಿತಿಯು ಉಂಟಾದ ನಂತರ, ಶಾಸ್ತ್ರವಿರುದ್ಧ ಕರ್ಮಗಳನ್ನು ಮಾಡಲು ಮನಸ್ಸು ಬಯಸಿದರೂ, ದೈವಭಯವು ಅದನ್ನು ಮಾಡಗೊಡುವುದಿಲ್ಲ. ಸಂತರು ಈ ಸ್ಥಿತಿಯನ್ನು ಬಹುವಾಗಿ ಶ್ಲಾಘಿಸಿದ್ದಾರೆ. ಈಶ್ವರ ನಿನಗೆ ಈ ಸ್ಥಿತಿಯನ್ನು ಅನುಗ್ರಹಿಸಲಿ. ಅದನ್ನು ನಾನು ತಗ್ಗಿಸುವುದಿಲ್ಲ. ಕಾಲಕ್ರಮೇಣ ಅದು ಸರಿಹೋಗುತ್ತದೆ. ಹೊರಡುವಾಗ ನಾನು ಒಪ್ಪಿಸಿದ ಕೆಲಸವನ್ನು ಮನಸ್ಸಿನಲ್ಲಿ ಇಟ್ಟುಕೋ. ಅದು ಮಾಸ್ಟರ್ ಸಾಹೇಬರಿಗೂ ಜ್ಞಾಪಕದಲ್ಲಿದ್ದಿರಬಹುದು.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೯೪ **ಪತ್ರ ಸಂಖ್ಯೆ – ೩೭೬** ಷಾಹಜಹಾನಪುರ
೦೬–೦೩–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

೨೭–೦೨–೧೯೫೪೪ ನಿನ್ನ ಪತ್ರ ತಲಪಿದೆ. ನನ್ನ ಈ ಹಿಂದಿನ ಪತ್ರದಲ್ಲಿ ಇನ್ನೊಂದು ಮಾತನ್ನು ನಿನ್ನ ತಿಳಿವಳಿಕೆ ಮತ್ತು ಅನುಭವಕ್ಕೋಸ್ಕರ ಬರೆಯುವುದು ಉಳಿದಿತ್ತು. ಅದೇನೆಂದರೆ, 'ದೈವ–ಭೀರುತ್ವ'ದ (ಈಶ್ವರೀಯ ಭಯ) ಸ್ಥಿತಿ ಶುರುವಾದಾಗ. 'ಭಯ' ವೇನೋ ಅನುಭವಕ್ಕೆ ಬರುತ್ತದೆ, ಆದರೆ ಯಾರಿಂದ (ಯಾವುದರಿಂದ) ಭಯ ಉಂಟಾಗುತ್ತದೆ ಎಂಬುದು ತಿಳಿದುಬರುವುದಿಲ್ಲ. ಸಾಮಾನ್ಯ ಭಯ ಮತ್ತು 'ದೈವ–ಭಯ'ಗಳ ನಡುವಿನ ವ್ಯತ್ಯಾಸವೇ ಇದು.

ನಿನ್ನ ಇಡೀ ಪತ್ರ ಮತ್ತು ಈ 'ಸ್ಥಿತಿ'ಗಳು, ಯಾವುದಕ್ಕೋಸ್ಕರ ನೀನು ಹಂಬಲಿಸುತ್ತ, ಪರಿಶ್ರಮ ಪಡುತ್ತ ಇದ್ದಿಯೋ ಆ 'ಸಾಕ್ಷಾತ್ಕಾರ'ದ 'ಸ್ಥಿತಿ' ನಿನಗೆ ಉಂಟಾಗಿದೆ ಎಂಬ ಸೂಚನೆ ಕೊಡುತ್ತವೆ. ಯಾರಾದರೊಬ್ಬರಿಗೆ ಸಾಕ್ಷಾತ್ಕಾರದ ಸ್ಥಿತಿ ಉಂಟಾಯಿತಲ್ಲ, ಎಂದು ನನಗೆ ಸಂತೋಷವೆನಿಸುತ್ತದೆ. ಪುತ್ರಿ, ನಾನೇನು ಮಾಡಲಿ ? ನನಗೆ ಕಿವಿಗೊಡುವವರು ಯಾರೂ ಇಲ್ಲ. ಅದಿಲ್ಲವಾದರೆ ನನ್ನ ಬಳಿ ಇರುವ, ಎಷ್ಟೊಂದು ಹಿಂದಿನ ಅಭ್ಯಾಸಿಗಳು ಸಾಕ್ಷಾತ್ಕಾರದ ಸ್ಥಿತಿಯನ್ನು ಪಡೆದಿರುತ್ತಿದ್ದರು. ನಾನು ಮುತ್ತುಗಳನ್ನು ಚೆಲ್ಲಿಬಿಡಲು ಬಯಸುತ್ತೇನೆ, ಆದರೆ ಯಾರೂ ಅವುಗಳನ್ನಾಯ್ದುಕೊಳ್ಳಲು ತಮ್ಮ ಸೆರಗು ಒಡ್ಡುವುದಿಲ್ಲ. ಇದು ನನ್ನ ದೈವ (ವಿಧಿ). ಇದರಲ್ಲಿ ಅವರ ನ್ಯೂನತೆ ಏನಿರಲು ಸಾಧ್ಯ! ನಿನ್ನ ಮಟ್ಟಿಗೆ ಹೇಳುವುದಾದರೆ, ನಿನ್ನದು ಸಾಕ್ಷಾತ್ಕಾರ ಹೊಂದಿದ ಸ್ಥಿತಿಯಾಗಿದೆ ಎಂದು ಖಂಡಿತ ಹೇಳಬಲ್ಲೆ; ಆದರೆ ಅಷ್ಟೇ ಪರ್ಯಾಪ್ತವಾಯಿತೆಂದು ಕುಳಿತುಬಿಡಬೇಡ. ಇನ್ನೂ ಕ್ರಮಿಸಬೇಕಾದ ದೂರ ಬಹಳಷ್ಟಿದೆ. ನನಗಂತೂ ಅದರ ಕೊನೆಯ ಎಲ್ಲೆ ಎಲ್ಲಿದೆಯೆಂಬುದೇ ತಿಳಿಯದು. ಜನರು ತಮ್ಮನ್ನು ತಾವೇ ಮಹಾ ಸಂತರೆಂದೂ, ಪರಮಹಂಸರೆಂದೂ ಅದೆಂತು ಭಾವಿಸಿಕೊಳ್ಳುತ್ತಾರೋ ತಿಳಿಯದು, ಸಂನ್ಯಾಸಿಗಳ ಮತ್ತು ಇತರ ಸಂಪ್ರದಾಯದಲ್ಲಿಯೂ ಅವರು ಇರಬಹುದು. ಪುಸ್ತಕಗಳನ್ನು ಓದಿ, ಓದಿಸಿ, ಕೀರ್ತನೆಗಳನ್ನು ಹಾಡುತ್ತ, ಹಾಗೂ ವಿವಿಧ ರೀತಿಯ ಪೂಜೆಗಳನ್ನು ಮಾಡುತ್ತ ತಮ್ಮನ್ನು ತಾವೇ 'ಬ್ರಹ್ಮ' ಎಂದು ಭಾವಿಸಿಕೊಳ್ಳುವವರನ್ನು ನಾನು ಕಂಡಿದ್ದೇನೆ. ನಾನು ನಿನ್ನನ್ನು 'ಡಬ್ಲ್ಯು' (W) ಸ್ಥಾನಕ್ಕಿಂತ ಮುಂದಕ್ಕೆ ಕರೆದೊಯ್ಯಲಿಲ್ಲ; ಅದಕ್ಕೆ ನಿನ್ನ ಆರೋಗ್ಯದ ಕಾಳಜಿಯೇ ಕಾರಣ; ಅದು ಇನ್ನೂ ಸ್ವಲ್ಪ ಸುಧಾರಿಸಲಿ. ಈ ಬಿಂದುವಿನ (ಸ್ಥಾನದ) ಯಾತ್ರೆ ಕೊನೆಗೊಳ್ಳುವುದರಲ್ಲಿದೆ. ನೀನು ಬರೆದಿರುವ ಸ್ಥಿತಿಗಳೆಲ್ಲವೂ ಇದೇ ಬಿಂದುವಿಗೆ (ಸ್ಥಾನಕ್ಕೆ) ಸಂಬಂಧಿಸಿರುವುವೇ ಅಗಿವೆ. ನಿನ್ನ ಆರೋಗ್ಯ ಎಂತಿದೆ ಎಂಬುದು ನನಗೆ ತಿಳಿದಿದೆ.

ನಿನ್ನ ವಿಷಯದಲ್ಲಿ, ನನಗೆ ಆಧ್ಯಾತ್ಮಿಕತೆಯ ಕುರಿತು ಚಿಂತೆ ಇಲ್ಲ. ಯಾಕೆಂದರೆ, ಲಾಲಾಜಿಯವರಿಗೆ ಅದು 'ಎಡಗೈ–ಆಟ' ಎನ್ನುವಷ್ಟು ಸುಲಭದ ಕೆಲಸ.

ಇಂದು ನಿನ್ನ ೦೨–೦೩–೧೯೫೪ರ ಪತ್ರ ಬಂದಿದೆ. ಲಯಾವಸ್ಥೆ ಪ್ರಾಪ್ತವಾದ ನಂತರ, ಅದರ ಬಗ್ಗೆ ಪ್ರಯತ್ನ ಪಡುವುದೂ ಒಂದು ಬಂಧನವಾಗಿ ತೋರುತ್ತದೆ. 'ಸಾಕ್ಷಾತ್ಕಾರ'ದ ನಂತರ 'ಅವನ' ಸ್ಮರಣೆಯಲ್ಲಿ ಪ್ರಯತ್ನ ಮುಂದುವರಿಸಲು (ಕೂಡ) ಹೃದಯ ಗಾಬರಿಗೊಳ್ಳುತ್ತದೆ. ಈಗ ನೀನು ಸಾಕ್ಷಾತ್ಕಾರದ ಎರಡನೆಯ 'ಅಧ್ಯಾಯ'ದಲ್ಲಿದ್ದೀಯೆ ಎಂದು ನಿನ್ನ ಪತ್ರದಿಂದ ತಿಳಿದುಬಂದಿತು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೫ **ಪತ್ರ ಸಂಖ್ಯೆ – ೩೭೮** ಷಾಹಜಹಾನಪುರ
೧೩–೦೩–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಅಮ್ಮನ ಆರೋಗ್ಯದ ವಿಷಯದಲ್ಲಿ ನಾನು ಹೆಚ್ಚು ಸಲ ಚಿಂತಿತನಾಗುತ್ತೇನೆ. ಈಶ್ವರ ಅವರಿಗೆ ಬೇಗ ಸ್ವಾಸ್ಥ್ಯವನ್ನು ನೀಡಲಿ. 'ಎಕ್ಸ್' (X) ಮತ್ತು 'ವಾಯ್' (Y) ಬಿಂದುಗಳ ನಡುವೆ ಒಂದಿಷ್ಟು ಅಡ್ಡಿ ಇತ್ತು; ಆದರೆ ಅದು ನಿವಾರಣೆಯಾಗಿದೆ. ಎಡ ಮೂಲೆಯಲ್ಲಿ ಅಲ್ಪ ಮಾತ್ರ ಉಳಿದಿದೆ. ಅದೂ ಕೂಡ ಒಂದೆರಡು ದಿನಗಳಲ್ಲಿ ಹೊರಟು ಹೋಗುವುದು. ೩–೩–೧೯೫೪ರ ನಿನ್ನ ಪತ್ರದಲ್ಲಿ ನೀನು ಬರೆದು ತಿಳಿಸಿದುದು– ಅದೇ ಸ್ಥಾನದ ಸ್ಥಿತಿಯಾಗಿದೆ. ಈ ಬಿಂದುವಿನ ಆಧ್ಯಾತ್ಮಿಕ ಯಾತ್ರೆ ಶುರುವಾಗಿದೆ; ಆದರೆ ಇದು 'ಎಕ್ಸ್' ಮತ್ತು 'ವಾಯ್' ಸ್ಥಾನಗಳ ಸಂಮಿಲಿತ ಸ್ಥಿತಿಯ ಯಾತ್ರೆಯಾಗಿದೆ. "ಯಾರಾದರೂ 'ವ್ರತ'ದ ನೆನಪು ಮಾಡಿದರೆ, ನಾನು 'ವ್ರತ' ನಿರತಳಾಗಿದ್ದೇನೆ– ಎಂದೆನಿಸುತ್ತದೆ" ಎಂದು ಬರೆದ್ದೀಯೆ. ಇದೊಂದು ಬಹಳ ಒಳ್ಳೆಯ ಸ್ಥಿತಿ. ನೀನು ನಿನ್ನ ಸ್ಥಿತಿಯಿಂದ 'ಸತ್ಯ' (Reality) ದೊಂದಿಗೆ ಅರ್ಥಾತ್ ಈಶ್ವರನೊಂದಿಗೆ ಸಂಬಂಧಿತಳಾಗಿದ್ದೀಯೆ ಎಂಬುದನ್ನು ಇದು ತೋರಿಸುತ್ತದೆ. ಈಶ್ವರ ಎಂದೂ ಏನನ್ನೂ ತಿನ್ನುವುದಿಲ್ಲ, ಅದು ಅವನ ಲಕ್ಷಣ. ಯಾರಾದರೂ ತಿನ್ನುವ ಬಗ್ಗೆ ಹೇಳಿದರೆ, ನೀನು ಈಗಾಗಲೇ ತಿನ್ನುತ್ತಿದ್ದೀಯೆ ಎಂದೆನಿಸುತ್ತದೆ. ಇದರ ಅರ್ಥವೇನೆಂದರೆ, ಆ ಗುಣ–ಲಕ್ಷಣವುಳ್ಳವನೊಂದಿಗೆ ನೀನು ಸಂಬದ್ಧಳಾಗಿದ್ದೀಯೆ. ಮೇಲೆ ಹೇಳಿದಂತೆ, ತಿನ್ನದಿದ್ದರೂ ತಿಂದಿರುವಂತೆ ಅನುಭೂತಿ ಹೊಂದುತ್ತೀಯೆ; ಅರ್ಥಾತ್ ಎರಡೂ ಸ್ಥಿತಿಗಳು ಅವನಿಗೆ ಸಮಾನವಾಗಿವೆ (ಒಂದೇ ಆಗಿವೆ).

ಮುಂದೆ ನೀನು ಶರಣಾಗತ ಸ್ಥಿತಿ ಸೇವಕಭಾವ (ಬಂದಗಿ)ಯ ಬಗ್ಗೆ ಬರೆಯುತ್ತ, ಅದರಲ್ಲಿ ನಿರಂತರ ಲೀನತೆ ಬೆಳೆಯುತ್ತಿದೆ ಎಂದು ಹೇಳಿದ್ದೀಯೆ. ಈ ಸ್ಥಿತಿಯಲ್ಲಿ ಸಂಪೂರ್ಣ ಕರಗಿ ಹೋಗುವುದು ಸತ್ಯದ (Reality) ಒಂದು ಒಳ್ಳೆಯ ಅವಸ್ಥೆ. ಇನ್ನೊಂದು ಮಾತು ಬರೆಯುತ್ತೇನೆ, ಆದರೆ ಅದು ಸುಳುಹು ಮಾತ್ರ. ಈ



ಲೇಖನಗಳ ಕುರಿತು ಎಂದಾದರೊಂದು ದಿನ ಜನರು ವಿಚಾರ ಮಾಡುವುದು ಸಾಧ್ಯ. ಎಲ್ಲಿಯ ತನಕ ಶರಣಾಗತ ಸ್ಥಿತಿ (ಬಂದಗಿ) ಇರುವುದೋ ಅಲ್ಲಿಯ ವರೆಗೆ ನಾವು ಸೇವಕ (ಬಂದೇ)ರಾಗಿ ಇರುತ್ತೇವೆ, ಮತ್ತು ಅದರಲ್ಲಿ ಲೀನರಾಗಿ ಹೋದಾಗ ಸಾಧಕರಾಗಿ (ಅಭ್ಯಾಸಿ) ಉಳಿಯುವುದಿಲ್ಲ. ಆದರೆ ಒಡೆಯನನ್ನು (ಪ್ರಭು, ಸದ್ಗುರು) ಒಡೆಯನೆಂದು ನಿಜವಾದ ಅರ್ಥದಲ್ಲಿ ಭಾವಿಸುತ್ತಿರುವುದು ಮಾನವೀಯ ಸೌಜನ್ಯ, ಶರಣಾಗತರಾಗಿರುವುದರಿಂದ ನಾವು ಸೇವಕರಾಗಿಯೇ ಉಳಿಯುತ್ತೇವೆ ಎಂದು ತಿಳಿದು, ಸೇವಕರಾಗಿ (ಬಂದಾ) ಇರುವುದನ್ನೇ (ಶರಣಾಗತ ಅಥವಾ ಸೇವಕ ಭಾವವನ್ನೇ) ಬಿಟ್ಟುಬಿಡಬೇಕೆಂದು ಇದರ ಅರ್ಥವಲ್ಲ. ಇದೊಂದು ಅವಸ್ಥೆ; ಅದು ಸೇವಕನಾಗಿ ಇರುವ ಮೂಲಕ ಮಾತ್ರವೇ ಪ್ರಾಪ್ತವಾಗಬಹುದಾದದ್ದು. 'ಝೆಡ್'(Z) ಬಿಂದುವಿಗೆ (ಸ್ಥಾನಕ್ಕೆ) ಬರುವಷ್ಟರಲ್ಲಿ ಇದಕ್ಕಿಂತಲೂ ಹೆಚ್ಚು ಉತ್ತಮ ಸ್ಥಿತಿ ಉಂಟಾಗುವುದು ಸಾಧ್ಯ. 'ಆಧ್ಯಾತ್ಮಿಕತೆ (Sprituality)ಗಿಂತಲೂ ನಿನ್ನ ಹೆಜ್ಜೆ ಮುಂದಿದೆ' ಎಂಬ ನಿನ್ನ ಭಾವನೆ ಸರಿ ಇದೆ. ನಾನು ಸತ್ಯೋದಯದಲ್ಲಿ (Reality at dawn) ಬರೆದಂತೆ, ಶುದ್ಧತೆಯ ಅನುಭೂತಿಯೂ ಇಲ್ಲದೆ ಇರುವುದೇ ನಿಜವಾದ ಶುದ್ಧತೆ. ಮತ್ತು, ಎಲ್ಲವೂ ಮರೆಯಾಗಿ ಹೋದಾಗ ಕೇವಲ 'ಸತ್ಯ' (Reality)ವೊಂದೇ ಉಳಿಯುತ್ತದೆ.

ಇದೆಲ್ಲವೂ ನಿನ್ನ ಗುಣವರ್ಣನೆ (ಶ್ಲಾಘನೆ)ಯಾಯಿತು. ಮುಂದೇನು ಬರೆಯಲಿ ? ನಿನ್ನಂತೆಯೇ ಎಲ್ಲ ಅಭ್ಯಾಸಿಗಳೂ ಈ ಸೂಕ್ಷ್ಮ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಿ ಎಂದು ನಾನು ಬಯಸುತ್ತೇನೆ. ಈ ವಿದ್ಯೆಯ (ಬ್ರಹ್ಮ ವಿದ್ಯೆಯ) ವಿಸ್ತಾರಕ್ಕೆ ಕೊನೆ ಎಂಬುದಿಲ್ಲ; ಮತ್ತು ನಿಜಹೇಳಬೇಕೆಂದರೆ, ನನಗೂ ಗೊತ್ತಿಲ್ಲ. ಈ ಸ್ಥಿತಿಗಳೆಲ್ಲವನ್ನೂ ಪಡೆದು ದಾಟಿ ಹೋದವನಿಗೆ ಮಾತ್ರ ತಿಳಿಯುವುದು. ಸ್ವಯಂ ಚಿಂತನೆ ಮಾಡುವುದರಿಂದ ಬುದ್ಧಿಮತ್ತೆ ಬೆಳೆಯುತ್ತದೆ. ಆದರೆ, ಇಲ್ಲಿ ಜನರಿಗೆ ಬಿಡುವೇ ಇಲ್ಲ. ಜನರು ಅಭಿರುಚಿ (ಆಧ್ಯಾತ್ಮಿಕತೆಯಲ್ಲಿ) ಬೆಳೆಸಿಕೊಳ್ಳಲಿ ಎಂದು ನಾನು ಬಯಸುತ್ತೇನೆ; ಹಾಗೆ ಅವರು ಬೆಳೆಸಿಕೊಂಡರೆ, ನನಗೆ ತಿಳಿದುದೆಲ್ಲವನ್ನೂ, ನನ್ನ ಜೀವಿತ ಕಾಲದಲ್ಲಿ ಅಭ್ಯಾಸಿಗಳಿಗೂ ಕೊಡುತ್ತ ಹೋಗುತ್ತೇನೆ; ಮತ್ತೆ, ಅವರು ಅನಂತರ ಅದಕ್ಕೂ ಮುಂದಿನ ಪ್ರಗತಿ ಸಾಧಿಸಲಿ. ಆದರೆ ಒಬ್ಬಿಬ್ಬರನ್ನು ಬಿಟ್ಟರೆ ಯಾರೂ ಧೈರ್ಯದಿಂದ ಮುಂದೆ ಬರುವವರು ಕಣ್ಣಿಗೆ ಬೀಳುತ್ತಿಲ್ಲ. ಇದು ಎಂಥ ಸರಳ ಮತ್ತು ಸಹಜ ಸುಲಭ ವಿಧಾನವಿದೆ ! ಆದರೂ ಆವಶ್ಯಕ ಪ್ರಗತಿಯನ್ನು ಹೊಂದುವವರು. ಒಬ್ಬಿಬ್ಬರು ಮಾತ್ರವೇ ಕಂಡು ಬಂದಿದ್ದಾರೆಂಬುದಂತೂ ಖಂಡಿತ ಸತ್ಯ.

ಅಮ್ಮಾಜಿಯವರಿಗೆ ಪ್ರಣಾಮಗಳು

ನಿನ್ನ ಹಿತೈಷಿ
ರಾಮಚಂದ್ರ

* * * *

P-4-Books-PM-7-Anantyatre-93



ಕ್ರಮ ಸಂಖ್ಯೆ – ೯೬ **ಪತ್ರ ಸಂಖ್ಯೆ – ೩೮೧** ಷಾಹಜಹಾನಪುರ
೨೬–೦೩–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದ,

ಈಗ ಮಧ್ಯಾಹ್ನ ಎರಡು ಗಂಟೆಯಿಂದ ನಿನ್ನ ನೆನಪು ನನಗೆ ಬರುತ್ತಲೇ ಇದೆ. ಮತ್ತು ಸ್ಮರಣೆ (ವಿಚಾರ) ಕೂಡ ಅನೇಕಸಲ ಕೆಲಸ ಮಾಡುತ್ತದೆ. ನಾಲ್ಕು ಗಂಟೆಯ ಹೊತ್ತಿಗೆ ನನ್ನ ಸ್ಥಿತಿ ಹೇಗಿತ್ತೆಂದರೆ, ಅಲಹಾಬಾದಿಗೆ ಹೋಗಲು ನನ್ನ ಜೀವ ಚಡಪಡಿಸುತ್ತಿತ್ತು. ವಿಷಯ ಅಲ್ಲಿ ಏನು ಎಂಬುದನ್ನು ಮರುಟಪಾಲಿಗೆ ಬರೆದು ತಿಳಿಸು. ನಾನು ತುಂಬ ಕಾತರನಾಗಿದ್ದೇನೆ. ಅಮ್ಮನ ಸ್ಥಿತಿಯನ್ನೂ ತಿಳಿಸು.

ಅಮ್ಮಾಜಿಗೆ ಮತ್ತು ನಿನ್ನ ಚಾಚಾಜಿಗೆ ವಂದನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೭ **ಪತ್ರ ಸಂಖ್ಯೆ – ೩೮೩** ಷಾಹಜಹಾನಪುರ
೩೧–೦೩–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ದಿ. ೨೪–೩–೧೯೫೪ರ ನಿನ್ನ ಪತ್ರ ತಲುಪಿತು. ಸಂಭಾವ್ಯ ಘಟನೆಗಳು, ನೀನು ಶೀಘ್ರದಲ್ಲಿ ಘಟಿಸಲಿ ಎಂದು ಬರೆದಂಥವು, ಸರಿಯಾಗಿಯೇ ಆಗುವವು. ಇಂದು ನಿನ್ನ ೨೯–೩–೧೯೫೪ರ ಪತ್ರ ಬಂದಿದೆ. ಅಲಹಾಬಾದಿಗೆ ಬರಲು ನಾನು ಅದೇಕೆ ಅಷ್ಟು ಕಾತರಗೊಂಡೆನೆಂದು ನನಗೇ ಆಶ್ಚರ್ಯವಾಗುತ್ತದೆ. ಅದರ ಕಾರಣವನ್ನು ನೀನು ಕೇಳಿದಾಗ, ಈ ಸೆಳೆತ ನಿನ್ನ ಕಡೆಯಿಂದಲೇ ಬಂದಿತೆಂದೆನಿಸುತ್ತದೆ. ಯಾವುದೇ ಕಾರಣದಿಂದ ನಿನಗೆ ನನ್ನ ನೆನಪು ತೀವ್ರವಾಗಿ ಬಂದಿರಬಹುದು. ಸ್ಮರಣೆಯು ಅವಪ್ರಜ್ಞೆ (Sub-conscious) ಯನ್ನು ತಲುಪಿದಾಗ ಅದರಲ್ಲಿ ಬಹಳ ತೀವ್ರತೆ ಮತ್ತು ಆಕರ್ಷಣ ಉಂಟಾಗುತ್ತದೆ. ಅವಪ್ರಜ್ಞೆ (ಸುಪ್ತ ಮನಸ್ಸು)ಯ ಸಂಶೋಧನೆಯ ವಿಚಾರ ನನಗೆ ಇದೀಗ ಹೊಳೆಯಿತು. ಎಷ್ಟರ ಮಟ್ಟಿಗೆ ಸಂಶೋಧನೆ ಮಾಡಬೇಕೆಂಬುದನ್ನು ನೀನೇ ವಿಚಾರಮಾಡಿ ಹೇಳು. ಇಷ್ಟುಮಾತ್ರ ಸುಳುಹು ಕೊಡುತ್ತೇನೆ : ಸುಪ್ತಮನಸ್ಸು ಎಂಥ ಸ್ಥಾನ (ವಲಯ)ವೆಂದರೆ, ಅಲ್ಲಿ ಒಂದು ರೀತಿಯ ವಿದ್ಯುತ್ತು ಹುಟ್ಟಿಕೊಳ್ಳುತ್ತದೆ. ಯಾರ ಸ್ಮರಣೆ ಮಾಡುವೆವೋ ಅವನ ದಿಶೆಯಲ್ಲಿ ತೀವ್ರತೆ ಅತಿಶಯ ಹೆಚ್ಚಾಗುತ್ತದೆ. ಮಂತ್ರ ಜಪವನ್ನು ನಿಃಶಬ್ದವಾಗಿ (ಶಾಂತತೆಯಿಂದ) ಮಾಡಬೇಕೆಂದು ಆದೇಶಿಸಲಾಗಿದೆ; ಆ ಸನ್ನಿವೇಶದಲ್ಲಿ; ಅದು (ಆ ವಿದ್ಯುತ್ತು ಅಥವಾ ಶಕ್ತಿ) ಬರುತ್ತದೆ ಮತ್ತು ಅದರ ಪ್ರಭಾವವು ಅದರ ಪರಿಣಾಮ (ಫಲಿತ)ಗಳ ಮೇಲೆ ಹೆಚ್ಚು ಅಗುತ್ತದೆ. ಮತ್ತು ಈ ಹಂತದಲ್ಲಿ



ಇಚ್ಛಾಶಕ್ತಿಯೂ ಬಹಳ ರಭಸದಿಂದ ಕೆಲಸಮಾಡುತ್ತದೆ. ವಿಶೇಷ ಇಚ್ಛಾಶಕ್ತಿ ಬರುವುದು ಸುಪ್ತಮನಸ್ಸಿನಿಂದಲೇ. ಇದಕ್ಕಿಂತ ಉನ್ನತತರವಾದ ಹಂತವೊಂದು ಇದೆ, ಅದು ಇಡೀ ಜಗತ್ತಿನ ಸ್ವರೂಪವನ್ನು ನಿಮಿಷ ಅಥವಾ ಸೆಕೆಂದುಗಳಲ್ಲಿ ಬದಲಾಯಿಸಬಲ್ಲದು. ಸರ್ವಶಕ್ತನ ಆದೇಶದಂತೆ ವಿಭೂತಿಪುರುಷನು ಭೂಮಿಯ ಮೇಲೆ ಇಳಿದು ಬಂದಾಗ, ಅವನು ಈ ಉನ್ನತ ವಲಯದ ಇಚ್ಛಾಶಕ್ತಿಯನ್ನು ಹೊಂದಿರುತ್ತಾನೆ. ಈಶ್ವರನ ಅನುಕಂಪೆಯು ಯಾರ ಮೇಲಾದರೂ ಅತಿಶಯವಾಗಿದ್ದು ಅವನಿಂದ ವಿಶೇಷ ಕಾರ್ಯವಾಗತಕ್ಕದ್ದಿದ್ದರೆ, ಇನ್ನೂ ಮೂರು ವಿಶೇಷ ಇಚ್ಛಾಶಕ್ತಿಯ ಸ್ಥಾನಗಳುಂಟು; ಅವುಗಳಲ್ಲಿ ಅದ್ಭುತ ಶಕ್ತಿ ಇದೆ. ಇಲ್ಲಿಯವರೆಗೆ ಈಶ್ವರನ ಸೇವಕನಾದ ಮಾನವನು ತಲುಪಬಹುದು. ಇದಕ್ಕೂ ಮುಂದೆ ಒಂದೇ ಸ್ಥಾನವಿದೆ. ಅದು ಕೇವಲ ಈಶ್ವರನ ಇಚ್ಛಾಶಕ್ತಿಯ ಸ್ಥಾನವಾಗಿದೆ, ಮತ್ತು ಅದು ಅವನ (ಈಶ್ವರನ) ವಶದಲ್ಲಿ ಮಾತ್ರ ಇರುತ್ತದೆ. ಈ ವಸ್ತುವಿನ ಹಕ್ಕುದಾರ ಪ್ರಾಯಶಃ ಇದುವರೆಗೆ ಯಾರೂ ಆಗಿಹೋಗಿರಲಿಕ್ಕಿಲ್ಲ. ಆದರೆ ಅದರ ಹಕ್ಕುದಾರನಾಗುವ ವಿಧಾನ ಇದೇ ಇರಲು ಸಾಧ್ಯ. ಏನೆಂದರೆ, ನಮ್ಮನ್ನು ನಾವು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು, ಸತ್ಯವಸ್ತುವಿನಲ್ಲಿ ಸಂಪೂರ್ಣ ಲಯಗೊಳಿಸುವುದು. ನಾನು ಒಂದು ಸಾಧಾರಣ ವಿಷಯವನ್ನು ಬರೆಯುತ್ತೇನೆ; ಅದು ಅವಗತವಾದರೆ, ಜನರು ಸಾಮಾನ್ಯವಾಗಿ ಕೇಳುವ, ಜೀವ ಮತ್ತು ಈಶ್ವರ ಇವರ ನಡುವಿನ ವ್ಯತ್ಯಾಸ ಅಳಿಸಿಹೋಗುತ್ತದೆ. ಹವೆ ಎಲ್ಲ ಕಡೆಗೂ ಒಂದೇ ಇದೆ. ಆದರೆ ಅದರ ಒತ್ತಡ ಪೃಥ್ವಿಯ ಕಡೆಗೆ ಹೆಚ್ಚು ಇದೆ; ಮತ್ತು ಮೇಲು–ಮೇಲಕ್ಕೆ ಹೋದಂತೆ ಒತ್ತಡ ಕಡಿಮೆಯಾಗುತ್ತ ಹೋಗುತ್ತದೆ. ಮತ್ತೂ ಮೇಲಕ್ಕೆ ಹೋದ ಹಾಗೆ ಒತ್ತಡವೇ ಇಲ್ಲವೆನ್ನುವಷ್ಟು ನಿರ್ವಾತವಾಗಿ ಬಿಡುತ್ತದೆ. ನಾನು ನಿನಗೆ 'ಬ್ರಹ್ಮ ಮತ್ತು ಜೀವ' ಕುರಿತು ಒಂದು ಲೇಖನ ಕಳುಹಿಸಿದ್ದೆ. ಈಗ ಇನ್ನೆರಡು ಮಾತುಗಳನ್ನೂ ಬರೆದಿದ್ದೇನೆ. ಹೆಚ್ಚು ಒತ್ತಡವಿದ್ದರೆ ಅದು ಜೀವ–ಗತಿ, ಒತ್ತಡ–ಕಡಿಮೆಯಿದ್ದರೆ ಅದು ಬ್ರಹ್ಮಗತಿ; ವಸ್ತು ಒಂದೇ ಇದೆ. ವೇದದಲ್ಲಿ ಹೇಳಲಾದ ಇಪ್ಪತ್ತಾಲ್ಕು 'ಬ್ರಹ್ಮ'ಗಳನ್ನು ಇದರಲ್ಲಿಯೇ ಅಡಕಗೊಳಿಸು. ಎಷ್ಟು ಹಗುರ ವಾತವಿದೆಯೋ ಬ್ರಹ್ಮಗತಿಯೂ ಅಷ್ಟು ಪ್ರಮಾಣದಲ್ಲಿರುತ್ತದೆ. ಇದೊಂದು, ನಿನಗೆ ಸುಳುಹು ಮಾತ್ರ. ಯಾರಾದರೂ ವಿದ್ವತ್ತೆಯುಳ್ಳವರು ಭವಿಷತ್ತಿನಲ್ಲಿ ಜೀವ ಮತ್ತು ಬ್ರಹ್ಮದ ಬಗ್ಗೆ ನಿನ್ನನ್ನು ಪ್ರಶ್ನಿಸಬಹುದು.

ನಿನ್ನಿಂದ ಯಾವ ತಪ್ಪೂ ನಡೆದಿಲ್ಲ, ಆ ವಿಚಾರ ದೂರ ಸರಿಸು. ಈಗ ನಿನಗೆ ಧ್ಯಾನಮಾಡುವುದು ಕಷ್ಟವೆನಿಸುತ್ತದೆ. ಅದಕ್ಕೋಸ್ಕರವೇ, ನೀನು ನಿಯಮಿತವಾಗಿ ಧ್ಯಾನಮಾಡುವುದನ್ನು ನಿರಾಕರಿಸಿದ್ದೆ. ಧ್ಯಾನದ ಬೇರೆ ಬೇರೆ ಹೊಸ ರೀತಿಗಳನ್ನು ಕಂಡುಹಿಡಿಯುತ್ತ ಹೋಗು; ಆದರೆ ಅವು ಕೆಲವೇ ದಿನಗಳಮಟ್ಟಿಗೆ ಪ್ರಯೋಜನ ಕೊಡಬಲ್ಲವು; ಕೊನೆಯಲ್ಲಿ ಪರಿಣಾಮ ಮೇಲಿನದರಂತೆಯೇ ಆಗುವುದು. ತನ್ನನ್ನು ತಾನೇ ನೋಡುವಂತೆ ನಿನ್ನ ಕಣ್ಣಿಗೆ ಹೇಳು; ಅದು ಹೇಗೆ ಸಾಧ್ಯವಾದೀತು ? ಅಂತೆಯೇ ಕನ್ನಡಿ ತನ್ನ ಮುಖವನ್ನೇ ತಾನು ನೋಡುವುದು ಸಾಧ್ಯವಿಲ್ಲ. ದೀನತೆ,

P-4-Books-PM-7-Anantyatre-94



ನಮ್ರತೆ, ದಾರಿದ್ರ್ಯಗಳ ಅನುಭೂತಿಯೂ ಬರುವುದಿಲ್ಲ ಎಂದು ಬರೆದಿದ್ದೀಯೆ. ಇವೆಲ್ಲವೂ ಮಾರ್ಗಕ್ರಮಣದಲ್ಲಿ ಬರುವ ತಾತ್ಕಾಲಿಕ ವಸ್ತುಗಳು. ಸಂಸಾರದಲ್ಲಿರುವಾಗ ಮನುಷ್ಯ ಎಲ್ಲ ವಸ್ತುಗಳಲ್ಲಿ ಪ್ರೀತಿ ಹೊಂದಿರುತ್ತಾನೆ, ಆದರೆ, ಮೃತ್ಯುಹೊಂದಿದ ನಂತರ ಯಾವುದೂ ಅವನ ಜೊತೆಗೆ ಬರುವುದಿಲ್ಲ. ಅದೇ ರೀತಿಯಲ್ಲಿ ಇದನ್ನೂ ತಿಳಿದುಕೊಳ್ಳಬೇಕು. ಇದರಂತೆಯೇ, ಲಯಾವಸ್ಥೆಯಲ್ಲಿ ಮನುಷ್ಯನು ಏನನ್ನೂ ತನ್ನ ಬಳಿ ಇಟ್ಟುಕೊಳ್ಳುವುದಿಲ್ಲ. ಏನೂ ಉಳಿಯುವುದಿಲ್ಲ ಎಂಬುದೇ 'ಮಹಾಪ್ರಳಯ'ದ ವರ್ಣನೆ (ಸೌಂದರ್ಯ) ಯಾಗಿದೆ. 'ಇಲ್ಲಿ, ಗತಿ ಮಂದವಾದಂತೆ ತೋರುತ್ತದೆ' ಎಂದು ಬರೆದಿದ್ದೀಯೆ. ಗತಿಯು ಮಂದವಾಗಿಲ್ಲ. ಆದರೆ ಅಲ್ಲಿಯ (ಆ ಸ್ಥಿತಿಯು) ಅನುಭೂತಿಯು ಬಹಳ ಲಘುವಾಗಿರುವುದರಿಂದ, ಸ್ಥಗಿತತೆಯುಂಟಾದಂತೆ ಭಾಸವಾಗುತ್ತದೆ. ಈಶ್ವರನ ಕೃಪೆಯಿಂದ, ನಿನ್ನ ಸ್ಥಿತಿಯಲ್ಲಿ ಯಾವ ನ್ಯೂನತೆಯೂ ಇಲ್ಲ, ಬದಲಿಗೆ ಪ್ರಗತಿಹೊಂದುತ್ತಲೇ ಇದೆ.

ಅಮ್ಮಾಜಿ ಸ್ವಸ್ಥಳಾಗುತ್ತಿದ್ದುದಕ್ಕೆ ಈಶ್ವರನಿಗೆ ಧನ್ಯವಾದ, ಪಂಡಿತ ಲಕ್ಷ್ಮೀಚಂದ್ರ, ಪಂಡಿತ ರಾಮೇಶ್ವರ ಪ್ರಸಾದರವರ ಜನ್ಮದಿನವನ್ನು ತಮ್ಮ ಊರಿನಲ್ಲಿ ೧೫ನೆಯ (ಏಪ್ರಿಲ್) ತಾರೀಖಿಗೆ ಆಚರಿಸುತ್ತಾರೆ. ಎಲ್ಲ ಸತ್ಸಂಗಿಗಳನ್ನೂ ಆಮಂತ್ರಿಸಿದ್ದಾರೆ.

ಈಗ ಹಿಂದಿಯಲ್ಲಿ ಬರೆಯುವವರು ಇಬ್ಬರು ದೊರೆತಿದ್ದಾರೆ; ಅವರಲ್ಲಿ ಒಬ್ಬ ಒಳ್ಳೇ ಸಮರ್ಥನಿದ್ದಾನೆ. ಈಗ ಪತ್ರಗಳಿಗೆ ಹಿಂದಿಯಲ್ಲಿ ಸುಲಭವಾಗಿ ಉತ್ತರ ದೊರೆಯುವುವು. ನಿನ್ನ ಪತ್ರವನ್ನು ನಿನ್ನ ಚಿಕ್ಕಪ್ಪನಿಗೆ ಓದಿಹೇಳು, ಅವರಿಗೆ ಒಂದಿಷ್ಟು ಪ್ರಯೋಜನ ಸಿಗಬಹುದು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೮ **ಪತ್ರ ಸಂಖ್ಯೆ – ೩೮೪** ಷಾಹಜಹಾನಪುರ
೦೬–೦೪–೧೯೩೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷದಿಂದಿರು,

ನಿನ್ನ ೪–೪–೧೯೩೪ರ ಪತ್ರ ಇಂದು ತಲುಪಿದೆ, ಧ್ಯಾನಮಾಡುವುದು ನಿನಗೆ ಈಗ ಕಷ್ಟಸಾಧ್ಯ. ಆ ನಿಯಮವನ್ನು ನಿನಗೆ ವಿನಾಯಿತಿ ಮಾಡಿದ್ದೇನೆ. ಇತರರು ನಿನ್ನ ಮೇಲೆ ಧ್ಯಾನಮಾಡತಕ್ಕದ್ದೆನಿಸುವ ಸ್ಥಿತಿ ಈಗ ನಿನ್ನದಿದೆ. ಆದರೆ ಇದರಿಂದ ಅಹಂಕಾರ ಉಂಟಾಗಬಾರದು, ಯಾಕೆಂದರೆ, ಹಾಗೆ ಆಗುವುದು (ಅಂಥ ಸ್ಥಿತಿಯನ್ನು ತಲುಪಬೇಕಾದುದು) ಪ್ರತಿಯೊಬ್ಬನ ಧರ್ಮ (ಕರ್ತವ್ಯ)ವಾಗಿದೆ. ಅಹಂಕಾರ ನಿನ್ನಲ್ಲಿ ಎಂದೂ ಸುಳಿಯದು. ನಾವು ಯಾರ ಮೇಲಾಗಲಿ ಧ್ಯಾನ ಮಾಡಿದರೆ ದ್ವೈತವು ಬೆಳೆಯುತ್ತದೆ, ನಿನ್ನ 'ಸ್ಥಿತಿ'ಯು 'ಅದ್ವೈತ'ದ್ದಿದೆ; ಮತ್ತು ಇಂಥ ಸ್ಥಿತಿಯಲ್ಲಿ ಧ್ಯಾನಮಾಡಿದರೆ 'ದ್ವೈತ'ದ ಕಡೆಗೆ ಸಾಗಬೇಕಾಗುತ್ತದೆ, ಆದ್ದರಿಂದ



ಗಾಬರಿ ಉಂಟಾಗುತ್ತದೆ. ಯಾಕೆಂದರೆ, ನನಗಿಂತ ಭಿನ್ನ (ಬೇರೆ) ಎಂದು ಒಪ್ಪಿಕೊಂಡಾಗ ಮಾತ್ರವಷ್ಟೇ ನಾವು ಪೂಜೆ (ಧ್ಯಾನ) ಮಾಡುವುದು ತಾನೆ! ನೀನು ಬೇರೆಯವರಿಗೋಸ್ಕರ ಸತ್ಸಂಗ ನಡೆಸುವಾಗ, ನೀನು 'ದ್ವೈತ' ಭಾವವನ್ನು ತಳೆಯುತ್ತಿದ್ದಿರಬೇಕು. ಆ ಕಾರಣವೇ ನಿನ್ನಲ್ಲಿ ಗಾಬರಿ ಉಂಟಾಗುವುದು. ನೀನು ಬರೆದ ಹಾಗೆ, ನೀನು ಸ್ಮರಣೆ ಮಾಡಿದಾಗ ಸ್ಮರಿಸಲ್ಪಡುವವನ ಸ್ಪರ್ಶದ ಅನುಭೂತಿ ಆಗುತ್ತಿಲ್ಲ. ಯಾಕೆಂದರೆ ನೀನು ಯಾರನ್ನು ಸ್ಮರಿಸುತ್ತೀಯೋ, ಅವನು (ಅದು) ನೀನೇ ಅಲ್ಲದೆ ಬೇರೆ ಅಲ್ಲ. ಆದುದರಿಂದ, ನೀನು ಸ್ಮರಿಸುತ್ತಿರುವವನ ಸ್ಪರ್ಶವೇ ಅನುಭವಕ್ಕೆ ಸಿಗುತ್ತಿಲ್ಲ ಎಂದು ಭಾವಿಸುತ್ತೀಯೆ. 'ನನಗೆ ಎಲ್ಲಾದರೂ ಸ್ಥಗಿತತೆ (Static condition) ಉಂಟಾಗಿಲ್ಲವಷ್ಟೆ!' ಎಂದು ನೀನು ಬರೆದಿದ್ದೀಯೆ. ಇದು ಅಸಂಭವವೇ ಆಗಿದ್ದಾಗ್ಯೂ, ಇವೆರಡೂ ಸಂಗತಿಗಳು ಸರಿಯೇ ಇವೆ. ನಿನ್ನ ಸ್ಥಿತಿ ಸ್ಥಿರವೂ ಆಗಿದೆ, ಗತಿಶೀಲವೂ ಆಗಿವೆ. ನಾನು ಹೇಳುವುದೇನೆಂದರೆ, 'ಎಕ್ಸ್' (X) ಮತ್ತು 'ವಾಯ್' (Y)ಗಳ ವಿಶಾಲ ಪ್ರದೇಶದಲ್ಲಿ, ಖಾಲಿ ಬಯಲು ಇದೆ; ಅದರ ಸ್ಪರ್ಶದಲ್ಲಿ ನೀನಿದ್ದೀಯೆ. ಅದರ ವಿಸ್ತಾರ ಎಷ್ಟಿದೆಯೆಂದರೆ, ಮತ್ತು ಅದು ಎಷ್ಟು ತೆರೆದು ಹಾಸಿಬಿದ್ದಿದೆಯೆಂದರೆ, ನೀನು ಅದರಲ್ಲಿ ಇದ್ದೀಯೆ ಆದರೆ ನಿನ್ನ ದೃಷ್ಟಿ ಒಳಗಡೆಗೆ ಸಾಗುತ್ತಿದೆ; ಆದರೂ ಬಯಲನ್ನು ಬಿಟ್ಟರೆ ನಿನಗೆ ಏನೂ ತೋರಿಬರುವುದಿಲ್ಲ. ಅದನ್ನು ನೀನು ಸ್ಥಗಿತತೆಯ ಸ್ಥಿತಿ ಎಂದು ಕರೆಯಬಹುದು. ಇದು ನಿಂತುಹೋದ ಸ್ಥಿತಿ ಎಂದು ಕರೆಯುವುದು ತಪ್ಪಾದೀತು. ಯಾಕೆಂದರೆ ಮುಂದೆ ಸಾಗುವ ಧೈರ್ಯ ಮತ್ತು ಸಾಮರ್ಥ್ಯ ನಿನ್ನಲ್ಲಿ, ಈ ಬಯಲಿನಲ್ಲಿರುವಾಗಲೇ ಬೆಳೆಯುತ್ತವೆ. ಧೈರ್ಯ ಮತ್ತು ಸಾಮರ್ಥ್ಯಗಳು ಬೆಳೆಯದ ಹೊರತು ನಾನು ನಿನ್ನನ್ನು ಮುಂದಕ್ಕೆ ಒಯ್ಯಲಾಗುವುದಿಲ್ಲ. ಈಶ್ವರೇಚ್ಛೆಯಿದ್ದರೆ ಅವು ನಿನ್ನಲ್ಲಿ ಬೆಳೆಯುವುವು ಮತ್ತು ನಾನೂ ನಿನಗೆ ನೆರವಾಗುತ್ತೇನೆ. ಈ ಸ್ಥಾನದಲ್ಲಿ ಅಪಾರ ಶಕ್ತಿ ಇದೆ; ಮತ್ತು ಕೆಲದಿನ ತಂಗುವುದು ಒಳ್ಳೆಯದು. ಲಖನೌರ್ ಉತ್ಸವಕ್ಕೆ ನೀನು ಬರೆಯಬೇಕಿದ್ದುದನ್ನು ಬರೆದು ಕಳುಹಿಸು. ನಾನು ಅದನ್ನು ಅಲ್ಲಿ ಓದಿಸುತ್ತೇನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೯೯ **ಪತ್ರ ಸಂಖ್ಯೆ – ೩೮೬** ಷಾಹಜಹಾನಪುರ
೨೫–೦೪–೧೯೩೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ಅಲಹಾಬಾದಿನಿಂದ ಕಳುಹಿಸಿದ ಪತ್ರ ಹಾಗೂ ೧೫–೪–೧೯೩೪ ರಂದು ಲಖೀಂಪುರದಿಂದ ಕಳುಹಿಸಿದ ಪತ್ರ ಕೈಸೇರಿದವು. ಅವುಗಳಿಗೆ ಉತ್ತರ ಬರೆಯುತ್ತಿದ್ದೇನೆ. ಪ್ರೊ. ರಾನಡೆಯವರಿಗೆ Efficacy of Raj yoga ಪುಸ್ತಕ ಕಳುಹಿಸು.

P-4-Books-PM-7-Anantyatre-95



ಈಗ ನಾನು ನಿನ್ನ ಸ್ಥಿತಿಯ ಬಗ್ಗೆ ಬರೆಯುತ್ತೇನೆ. ಬರೆಯುವುದಕ್ಕೆ ಮೊದಲು, ಸಂತ ತುಕಾರಾಮರ ಒಂದು ಪದ್ಯ ನೆನಪಿಗೆ ಬಂದಿತು **'ಗೂಡ್ ಸೇ ಮೀಠಾ ಹೈ ಭಗವಾನ್, ಬಾಹರ ಭೀತರ ಏಕ ಸಮಾನ್'** ('ಭಗವಂತ ಬೆಲ್ಲಕ್ಕಿಂತ ಸಿಹಿ, ಒಳಗೂ ಹೊರಗೂ ಒಂದೇ ಸಮ') ಈಗ ನಿನ್ನ ಸ್ಥಿತಿ ಕೂಡ ಇದೇ ಎಂದು ಕಂಡುಬರುತ್ತದೆ. ದೇಹಭಾವವು ಇಲ್ಲದೆ ಹೋದಾಗ, ಮತ್ತು ಜೀವಭಾವವೂ ಹೆಚ್ಚು ಕಡಿಮೆ ಸಮಾಪ್ತವಾದಾಗ, ಇಂಥದೇ ಸ್ಥಿತಿ ಉಂಟಾಗತೊಡಗುತ್ತದೆ. 'ದ್ವಿತ್ವ'ವು ನಿನ್ನಲ್ಲಿ ಲೇಶವೂ ಉಳಿದಿಲ್ಲ. 'ಅದ್ವೈತ'ವಿದೆ, ಆದರೆ ಅದರ ಭಾವವೂ ಕಡಿಮೆ ಇದೆ. ಮತ್ತೆ, ಈ ಸ್ಥಿತಿ ಇನ್ನೂ ವರ್ಧಿಸಬೇಕು. ಈ ಹಂತವು ಒಂದು ಪಾರವಿಲ್ಲದ ಸಮುದ್ರವಾಗಿದೆ. ಇದರಲ್ಲಿ ಎಷ್ಟು ಈಜುವುದಿದೆಯೋ ತಿಳಿಯದು. ವೇದಗಳಲ್ಲಿಯೂ 'ಅದ್ವೈತ' ಸ್ಥಿತಿಯನ್ನು ವರ್ಣಿಸಲಾಗಿದೆ. ಇದಕ್ಕೂ ಮುಂದೆ ಯಾರಾದರೂ ಒಂದಿಷ್ಟು ಹೇಳಿದ್ದಾರೋ, ಇಲ್ಲವೋ ತಿಳಿಯದು. ಆ ಸಾಧ್ಯತೆ ಬಹಳ ಕಡಿಮೆ ಇದೆ. ಯಾಕೆಂದರೆ ಅನೇಕ ವಿಷಯಗಳನ್ನು ಸ್ವಾನುಭವಕ್ಕೋಸ್ಕರ (ಹೇಳದೆ) ಬಿಟ್ಟು ಬಿಡಲಾಗುತ್ತದೆ. ಆದರೆ ನಾನು ಹೇಳದೆ ಇರಲಾರೆ. ಜನರು ನನ್ನೊಂದಿಗೆ ಸಹಮತರಾಗದೆ ಇರುವ ಸಂಭವವೂ ಇದೆ. ದ್ವೈತವೋ–ಅದ್ವೈತವೋ ಎರಡೂ ಅನುಭವಕ್ಕೆ ಬರದಿರುವ ಸ್ಥಿತಿಯನ್ನು ತಲುಪಿದಾಗ, ಅದರ ಮೇಲೆ, ಅರ್ಥಾತ್ ನೂರು ವರ್ಷ ಅಥವಾ ಸಾವಿರ ವರ್ಷ 'ದ್ವೈತ–ಅದ್ವೈತ'ದ ಮೇಲೆ ಧ್ಯಾನ ಮಾಡಿದಾಗಲೂ, ಅದು ದ್ವೈತವೋ ಅದ್ವೈತವೋ ಎಂಬ ವಿಚಾರವೂ ಬರದಿದ್ದರೆ, ಆಗ ಈ ಸ್ಥಿತಿ ಸಿದ್ಧಗೊಳ್ಳುತ್ತದೆ, ಇದು ಅದರ ಕುರುಹು. ಅಂದರೆ, ಅದರ ಮೇಲೆ ಪ್ರಭುತ್ವ ಪ್ರಾಪ್ತವಾಗುತ್ತದೆ. ಮೊದಲನೆಯದಾಗಿ ಈ ಸ್ಥಿತಿಯಲ್ಲಿ ನಿಜವಾಗಿಯೂ ಇರುವವನಿಗೆ, ಅದರ ಮೇಲೆ ಧ್ಯಾನ ಮಾಡುವ ಶಕ್ತಿಯೇ ಇರುವುದಿಲ್ಲ. ಧ್ಯಾನ ಮಾಡುವುದರಿಂದ, ಒಂದು ನಿಮಿಷದಲ್ಲಿಯೇ ಹೃದಯ ವಿಹ್ವಲವಾಗುತ್ತದೆ. ಮನುಷ್ಯನು ಈ ಸ್ಥಿತಿಯನ್ನು ತಲುಪಿದಾಗ ಅವನು 'ಸತ್ಯ' (Reality)ದ ಸ್ಥಿತಿಯಲ್ಲಿ ತಲುಪಿದಂತಾಯಿತು ಎನ್ನಬಹುದು. ಆದರೂ ಸಾಕಷ್ಟು ಈಜುವುದು ಉಳಿದಿರುತ್ತದೆ, ಅದಕ್ಕೆ ಮೇರೆ ಇಲ್ಲ. ಪುತ್ರಿ, ವಾಗ್ಮಿಗಳಾದ ಜ್ಞಾನಿಗಳಂತೆ ಕೆಲವೊಮ್ಮೆ ನಾನು ಹೇಳಿಬಿಡುತ್ತೇನೆ; ಆದರೆ ನಿಜ ಹೇಳಬೇಕೆಂದರೆ, ನನಗೆ ಅದರ ಅರಿವೂ ಇಲ್ಲ. ಯಾವನಾದರೊಬ್ಬ ಅಭ್ಯಾಸಿ ಆ ಸ್ಥಿತಿಗೆ ತಲುಪಿದಾಗ ನನಗೆ ಅದು ತಿಳಿದುಬರತೊಡಗುತ್ತದೆ. ನನಗೆ ಗೊತ್ತಿರುವುದು ಏನೂ ಇಲ್ಲ, ಆದರೆ, ಏನೋ ಒಂದಿಷ್ಟು ತಿಳಿದುದನ್ನು ಜನರು ಕಲಿಯಲಿ (ತಿಳಿದುಕೊಳ್ಳಲಿ) ಎಂದು ಬಯಸುತ್ತೇನೆ. ಅವರು ಬೇರೆಯವರನ್ನು ಈ ಸ್ಥಿತಿಯವರೆಗೆ ತಲುಪಿಸಲು ಶಕ್ತರಾಗದಿದ್ದರೂ ತಾವು ಸ್ವತಃ ಆ ರೀತಿ ಆಗಲಿ. ನನಗೆ ನಿನ್ನೆ ಈ ವಿಚಾರ ಸುಳಿದಿತ್ತು. ನನ್ನ ಭಾಗ್ಯ ಅನುಕೂಲಕರವಾಗಿದ್ದರೆ, ಒಬ್ಬಿಬ್ಬರು ಅಭ್ಯಾಸಿಗಳು ಈ ಸ್ಥಿತಿಯನ್ನು ತಲುಪಬಹುದು. ಆದರೆ, ಶರೀರದ ಕಣ – ಕಣವೂ 'ಭೂಮಾ'ದ ನಿಜವಾದ ಸ್ಥಿತಿಯನ್ನು ತುಂಬಿಕೊಂಡಿರದಿದ್ದ ಹೊರತು ಇತರರು ಈ ಸ್ಥಿತಿಯನ್ನು ಮುಟ್ಟುವಂತೆ ಮಾಡುವುದು ಬಹಳ ಕಷ್ಟವಾಗಬಹುದು.



ಆದರೆ ಅದು ಸಾಧ್ಯವಿದೆ. ಇದನ್ನು ನಾನು ದೃಢವಾಗಿ ಹೇಳಬಲ್ಲೆ, ಯಾಕೆಂದರೆ, ನಮ್ಮ ಗುರು–ಮಹಾರಾಜರಲ್ಲಿ ಯಾವುದೇ ನ್ಯೂನತೆಯೂ ಇಲ್ಲವೆಂದ ಮೇಲೆ, ನನ್ನಲ್ಲಿಯೂ ಇರಲು ಸಾಧ್ಯವಿಲ್ಲ. ಜನರು ಇದು ನನ್ನ ಅಹಂಕಾರವೆಂದು ಬೇಕಾದರೆ ತಿಳಿಯಲಿ, ಚಿಂತೆ ಇಲ್ಲ. ಶರೀರದಲ್ಲಿ ನಾನು ದುರ್ಬಲನಿದ್ದೇನೆ, ಸರಿಯೆ; ಆದರೆ ಧೈರ್ಯ ಮತ್ತು ಸಾಮರ್ಥ್ಯಗಳಲ್ಲಿ ಎಂದಿಗೂ ಹಾಗಿಲ್ಲ. ಇದು ಒಂದು ಸೆಕೆಂದಿನ ಕೆಲಸ, ಅಷ್ಟೆ. ಪುತ್ರಿ, ನನಗೆ ಅನಿಸುವುದು ಹೀಗೆ – ಆಧ್ಯಾತ್ಮಿಕ ಸಂಬಂಧದಲ್ಲಿ, ಯಾವುದೇ ಸ್ಥಿತಿಯನ್ನು ಉಂಟುಮಾಡಲು ನಾನು ಒಂದು ಸೆಕೆಂದಿನಲ್ಲಿ ಪೂರೈಸಲು ಬಯಸಿದಾಗ ಒಂದು ಸೆಕೆಂದಿಗೆ ಬದಲಾಗಿ ಎರಡನೆಯ ಸೆಕೆಂದು ಬೇಕಾಯಿತೆಂದರೆ, ನಾನು ಕೆಳಕ್ಕೆ ಬಿದ್ದಂತೆಯೇ ಸರಿ; ಮತ್ತು ಬೇರೆಯವರಿಗೆ ಆಧ್ಯಾತ್ಮಿಕ ತರಬೇತಿ ನೀಡಲು ಸಮರ್ಥನಾಗಿ ಉಳಿಯುವುದಿಲ್ಲ. ಜನರು, ಇದನ್ನು ಅಹಂಕಾರವೆಂದು ತಿಳಿಯಬಹುದು, ಅವರು ಹಾಗೆ ಬೇಕಿದ್ದರೆ ತಿಳಿದುಕೊಳ್ಳಲಿ. ಆದರೆ ಒಂದು ಸೆಕೆಂದಿನಲ್ಲಿ ಎಲ್ಲವನ್ನೂ ಮಾಡಿ ಮುಗಿಸುವ ಆಘಾತವನ್ನು ತಡೆದುಕೊಳ್ಳಬಲ್ಲವರು ಯಾರಾದರೂ ಇರುವರೇ ಎಂಬುದೇ ಪ್ರಶ್ನೆ. ಈ ವಿಷಯದಲ್ಲಿ ನನಗೆ ಅನೇಕ ಸಲ ಖೇದವೆನಿಸುತ್ತದೆ. ಇದಕ್ಕೂ ಹೆಚ್ಚಲ್ಲದಿದ್ದರೂ, ಇಷ್ಟನ್ನಾದರೂ (ಆಧ್ಯಾತ್ಮಿಕ) ಶಿಕ್ಷಣ ನೀಡಬಲ್ಲವರು ನಮ್ಮ ಮಿಷನ್ನಿನಲ್ಲಿ ಹುಟ್ಟಿಬರಲಿ. ಆದರೆ ಎಲ್ಲವೂ ಸದ್ಗುರುವಿನ (ಮಾಲಿಕ್) ಕೈಯಲ್ಲಿದೆ. ಅವರ ಇಚ್ಛೆ ಏನಿದೆಯೋ ಅಂತೆಯೇ ಆಗುವುದು. ಕೊನೆಯದಾಗಿ ಇಷ್ಟೇ ಹೇಳಬಹುದು. ನಾವು ಅವನ ಸೇವಕರು; ನಾವು ಸೌಜನ್ಯವನ್ನು ಕಾಪಾಡಿಕೊಂಡು ಹೋಗುವುದು ಅಗತ್ಯ, ನಮ್ಮಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ, ನಾನು ವಿಶೇಷ ಇಚ್ಛಾಶಕ್ತಿಯಿಂದ ಕೆಲಸ (ಆಧ್ಯಾತ್ಮಿಕ ತರಬೇತಿ) ಮಾಡಲು ಬಯಸಿದರೂ ಜನರು ತಮ್ಮ ಸಂಕೋಲೆಗಳನ್ನು (ಬಂಧನಗಳನ್ನು) ನನ್ನ ಇಚ್ಛೆಯ ಮೇಲೆ ಎಸೆಯುತ್ತಾರೆ. ಈಗ, ಇದು ನನ್ನ ವಿಧಿಯೋ ಅಥವಾ ಅವರದೊ ?

ಧ್ಯಾನ ಸಮಯದಲ್ಲಿ ನಿನಗೆ ದ್ವೈತಭಾವ ಉಂಟಾಗುವುದರಿಂದ ಆಗುವ ಗಾಬರಿಯ ಬಗ್ಗೆ, ನಾನು ಅಲಹಾಬಾದಿನಿಂದ ಬರೆದ ಪತ್ರದಲ್ಲಿ ಉತ್ತರ ಕೊಟ್ಟಿದ್ದೇನೆ. ಪೂಜೆ (ಧ್ಯಾನ) ಮಾಡಿಸುತ್ತಿರುವ ಭಾವನೆ ನಿನಗೆ ಉಂಟಾಗುವುದಿಲ್ಲವಷ್ಟೇ ? ಮತ್ತು ಆ ಕಾರಣ ಈ ಗಾಬರಿ ಅನುಭವಕ್ಕೆ ಬರುತ್ತಿಲ್ಲ ತಾನೆ ? ಮುಂದುವರಿದ ಮೇಲೆ ಈ ತೊಂದರೆ ತನ್ನಿಂದ ತಾನೇ ಇಲ್ಲವಾಗುವುದು ಸಾಧ್ಯ. ನಾನು ನಿನ್ನನ್ನು 'ಎಕ್ಸ್' ಮತ್ತು 'ವಾಯ್' ಸ್ಥಾನದಿಂದ ಮುಂದಕ್ಕೆ ಇನ್ನೂ ಒಯ್ದಿಲ್ಲ. ಶಕ್ತಿಯೇನೋ (ನಿನ್ನಲ್ಲಿ) ಸಾಕಷ್ಟು ಬೆಳೆದಿದೆ ಆದರೂ, ಇನ್ನೂ ಬೆಳೆಯುವುದು ಅಪೇಕ್ಷಣೀಯ. ಇದರ ಪ್ರಭಾವ ಇಡೀ ಶರೀರದಲ್ಲಿ ಇನ್ನೂ ಪಸರಿಸಿಲ್ಲ. ಈಶ್ವರೇಚ್ಛೆಯಿದ್ದರೆ, ಇದೂ ಕೂಡ ಆಗುತ್ತದೆ; ಸ್ಥಗಿತತೆ ಇಲ್ಲ. ಶಕ್ತಿ ಬೆಳೆಯುತ್ತಿದೆ.

ಸಹೋದರ – ಸಹೋದರಿಯರಿಗೆ ಆಶೀರ್ವಾದ.

ನಿನ್ನ ಹಿತೈಷಿ
ರಾಮಚಂದ್ರ

P-4-Books-PM-7-Anantyatre-96



* * * *

ಕ್ರಮ ಸಂಖ್ಯೆ – ೧೦೦ **ಪತ್ರ ಸಂಖ್ಯೆ – ೩೮೯** ಷಾಹಜಹಾನಪುರ

೨೯–೦೪–೧೯೫೫

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

ನಿನ್ನ ಏಪ್ರಿಲ ೨೪ ಮತ್ತು ೨೮ರ ಪತ್ರಗಳು ಕೈಸೇರಿವೆ. ನಾನು ಮೊದಲನೆಯ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. 'ನಾನು ಎಂದೂ ಇದ್ದಿಲ್ಲ ಎಂಬುದಿಲ್ಲ, ನಾನು ಇಲ್ಲ ಎಂಬುದು ಎಂದೂ ಬರಲಿಕ್ಕಿಲ್ಲ' ಎಂಬ ನಿನ್ನ ವಿಚಾರ ಸರಿ ಇದೆ. ಇದನ್ನು ಓದಿ ನಾನು ಹರ್ಷದಿಂದ ಗದ್ಗದಿತನಾದೆ, ಆದರೆ ಪುತ್ರಿ, ಪೂರ್ಣತೆ ಇರುವುದಾದರೂ ಇದು 'ಸತ್ಯ' (Reality)ದ ಎ.ಬಿ.ಸಿ.ಡಿ. (ಆರಂಭ) ಆಗಿದೆ. ನಿನ್ನ ಉತ್ತಮ ಸ್ಥಿತಿಯನ್ನು ಬಾಬೂಜಿಯವರು ಎ.ಬಿ.ಸಿ.ಡಿ. ಎಂದೆನ್ನುತ್ತಾರಲ್ಲ ಎಂದು ಎಲ್ಲಿಯೂ ಹೇಳಿಬಿಡಬೇಡ. ನನ್ನ ದೃಷ್ಟಿಗೆ ನಾನೇನು ಮಾಡಲಿ, ನನಗೆ ಹಾಗೆಯೇ ಅನಿಸುತ್ತದೆ, ಇದು ಯಾವ 'ಸತ್ಯ' (Reality) ದ ಎ.ಬಿ.ಸಿ.ಡಿ. ಎಂದು ಕರೆದಿರುವೆನೋ, ಅದನ್ನು ನೀನು ತಲುಪುವ ದಿನವನ್ನು ಈಶ್ವರನು ತರಲಿ. ಆಗ, ನನ್ನ ದೃಷ್ಟಿ ಸರಿ ಇದೆ ಎಂಬುದು ನಿನಗೆ ತಿಳಿದುಬಂದೀತು. ಈ ವಲಯಕ್ಕಿಂತ ಮುಂದೆ ಒಂದು ವಲಯ ಬರುತ್ತದೆ; ಅಲ್ಲಿ ಈಶ್ವರೀಯ ಸೂಕ್ಷ್ಮ ಸಂಗತಿಗಳು ಬರುತ್ತವೆ. 'ಈಶ್ವರೀಯ ಸಂಗತಿಗಳು' ಎಂದು ನಾನು ಹೇಳುವುದರ ಅರ್ಥವೇನೆಂದರೆ, ಅಲ್ಲಿ ವೈದಿಕ ಋಷಿಗಳ ಸಮೀಪದಲ್ಲಿ ಈಶ್ವರನ ರಹಸ್ಯಗಳು ತೆರೆದುಕೊಂಡಿದ್ದವು ಮತ್ತು ಅದಕ್ಕೂ ಮೇಲಿನ ವಲಯದಲ್ಲಿ 'ಶ್ರುತಿ'ಯ ದರ್ಶನ ಮೂಡಿ ಬರುವುದು ಪ್ರಾರಂಭವಾಗುತ್ತದೆ. ಯಾರು ಯಾರು ಈ ಸ್ಥಿತಿಯ (ವಲಯದ) ವರೆಗೆ ತಲುಪಿದ್ದರು ಎಂಬುದನ್ನು ನಾನು ಈಗ ಹೇಳುವುದಿಲ್ಲ. ನಾನು ಜ್ಯೋತಿರ್ಮಯ ಲೋಕದಲ್ಲಿ ಅರಸಿದರೆ, ನಮ್ಮ ಗುರುಮಹಾರಾಜ (ಲಾಲಾಜಿ ಸಾಹೇಬ)ಯವರನ್ನು ಬಿಟ್ಟರೆ, ಕೇವಲ ಒಬ್ಬ ವ್ಯಕ್ತಿ ಮಾತ್ರ ಇದಕ್ಕಿಂತ ಮೇಲಿನ ಸ್ಥಿತಿಯನ್ನು ತಲುಪಿದ್ದನು. ಬಹುಶಃ 'ನಾಸದೀಯ ಸೂಕ್ತ' (ಋಗ್ವೇದದಲ್ಲಿಯದು)ವನ್ನು ದರ್ಶಿಸಿದ ಋಷಿ ಅವನೇ ಆಗಿರಲೂ ಬಹುದು. ಮತ್ತೆ ಇಬ್ಬರು, ಅವರಿಗಿಂತ (ನಾಸದೀಯ ಸೂಕ್ತದ ಋಷಿಗಿಂತ) ಕೆಳಗಿನ ವಲಯವನ್ನು ತಲುಪಿದವರು ಇದ್ದಾರೆ. ನನ್ನ ಲೇಖನಗಳನ್ನು ನಾನು ಇಲ್ಲಿ ಬಿಟ್ಟು ಹೋಗುತ್ತೇನೆ. ಅವು ಮುದ್ರಿತವಾದರೆ, ಒಂದಿಲ್ಲೊಂದು ಸಮಯದಲ್ಲಿ ಯಾರಾದರೊಬ್ಬರು, ನಾಸದೀಯ ಸೂಕ್ತದ ಋಷಿಯು ಸಂಭವತಃ ಕೇಂದ್ರ ಮಂಡಲದ ಏಳು ಜ್ಯೋತಿರ್ವೃತ್ತಗಳನ್ನು ದಾಟಿ ಹೋಗಲು ಶಕ್ತನಾಗಲಿಲ್ಲ, ಮತ್ತು ಆ ಕಾರಣವೇ ಅವನ ಅಭಿವ್ಯಕ್ತಿಯಲ್ಲಿ ಅಸ್ಪಷ್ಟತೆ ಇದೆ ಎಂಬುದನ್ನು ತಿಳಿಯಬಹುದು. ಕೇಂದ್ರವನ್ನು ತಲುಪಿದವರು ಮತ್ತು ಅಲ್ಲಿಯವರೆಗೆ ಬೇರೆಯವರನ್ನು ತಲುಪಿಸಲು ಮಾರ್ಗವನ್ನು ತೆರೆದವರು ನಮ್ಮ ಗುರುಮಹಾರಾಜರೇ ಆಗಿದ್ದಾರೆ. ಅಂಥ ಮಹಾಪುರುಷ ಈಗ (ಮತ್ತೆ) ಬರುವುದು ಕಠಿಣ. ನಾನು ಅನೇಕ ಸಾರಿ ನಿನ್ನ



ಪತ್ರಗಳಲ್ಲಿ ಅನಾವಶ್ಯಕ ವಿಷಯಗಳನ್ನು ಬರೆಯುತ್ತೇನೆ; ಅದರಿಂದ ಜನರು ಒಂದಿಷ್ಟು ಆಸಕ್ತಿಯನ್ನಾದರೂ ಬೆಳೆಸಿಕೊಳ್ಳಲಿ.

ಅದಕ್ಕೂ ಮುಂದಕ್ಕೆ ನಿನ್ನ ಪತ್ರದಲ್ಲಿ, ನೀನಿರುವ ಸ್ಥಿತಿಯಲ್ಲಿ ಯಾವುದೇ ಸ್ಪಂದನವಿಲ್ಲ ಎಂದು ಬರೆದಿರುವುದು ಸರಿ ಇದೆ. 'ಎಕ್ಸ್' (X), ವಾಯ್ (Y) ಸ್ಥಾನದ್ದು ಇದೇ ಸ್ಥಿತಿ ಇದೆ. 'ವಿಭೂತಿ ಪುರುಷನ ಕಾರಣದಿಂದಾಗಿ, ಜೀವನ್–ಮೃತ್ಯುವಿನ ಸ್ಥಿತಿಯನ್ನು ಆಸ್ವಾದಿಸುತ್ತಿದ್ದೇನೆ' ಎಂದೂ ಬರೆದಿದ್ದೀಯೆ. ನೀನು ನಿನ್ನದೇ ಕಾರಣದಿಂದ ಆನಂದವನ್ನು ಅನುಭವಿಸುತ್ತಿದ್ದೀಯೆ ಎಂದು ನಾನು ಹೇಳುತ್ತೇನೆ.

ಈಗೊಂದು ಸಂತೋಷದ ಸಮಾಚಾರ ಬರೆಯುತ್ತೇನೆ. ನೀನು 'ಸಾಕ್ಷಾತ್ಕಾರ'ದ ಸ್ಥಿತಿಯನ್ನು ಪಡೆದಾಗ ಚೌಬೇಜಿ (ಬಹೆನ್‌ಜಿಯ ತಂದೆ) ನನಗೆ ಮಿಠಾಯಿ ಕೊಟ್ಟಿಲ್ಲ. ಈಗ ನಿನ್ನದು ಜೀವನ್–ಮೋಕ್ಷದ ಸ್ಥಿತಿ ಇದೆ. ಈಗ ಇದು ಎರಡನೆಯ ಉಚಿತ ಸಂದರ್ಭ. ನಾನು ಬಂದಾಗ ನಮ್ಮ ಅಮ್ಮಾ ನನಗೆ ಖಂಡಿತ ಮಿಠಾಯಿ ತಿನ್ನಿಸುವಳು. ನಿನ್ನ ಎಡ ಅಂಗಾಲಿನ ಮಧ್ಯದಿಂದ ತುಸು ದೂರದಲ್ಲಿ ನಿನಗೆ ಸ್ವಲ್ಪಮಟ್ಟಿಗೆ ಸ್ಪಂದನವನ್ನು ಅನುಭವಿಸುತ್ತಿದ್ದೀಯೆ ಎಂದೂ ಬರೆದಿದ್ದೀಯೆ. ಆ ಬಿಂದುವಿನ ಮೇಲೆ ಧ್ಯಾನಮಾಡುವುದರಿಂದ ಬ್ರಹ್ಮ ರಂಧ್ರ ತೆರೆದುಕೊಳ್ಳುವಂತೆ ಮಾಡಬಹುದು. ಆ ಸ್ಥಳದಲ್ಲಿ ಸ್ಪಂದನವಾಗುತ್ತಿದೆಯೆಂದರೆ, ಅದರ ಸಮೀಪವಿರುವ ಬಿಂದುವು ತೆರೆದುಕೊಳ್ಳಬಹುದು ಎಂದು ಅರ್ಥ. ಬ್ರಹ್ಮ ರಂಧ್ರದ ಸ್ಥಾನವೆಂತಿದೆಯೆಂದರೆ, ಈಶ್ವರನು ಏನಾದರೊಂದು ವಿಷಯವನ್ನು (ಮಾತನ್ನು) ತಿಳಿಸಲು ಬಯಸಿದರೆ, ಅದು ಈ ಸ್ಥಾನದಲ್ಲಿಯೇ ಸ್ವೀಕರಿಸಲ್ಪಡುತ್ತದೆ. (ಅದೊಂದು Receiver ಇದ್ದಂತೆ) ಮತ್ತು ಭಕ್ತನು (ಅಭ್ಯಾಸಿ) ಒಂದು ವಿಷಯ (ಸಮಾಚಾರ) ಕಳುಹಿಸುವುದಿದ್ದರೆ, ಅದನ್ನು ಸಹಸ್ರದಲಕಮಲದ ಮಧ್ಯದ ದಳದಿಂದ ಕಳುಹಿಸಲಾಗುತ್ತದೆ. ಹೀಗೆ ಒಂದು ಈಶ್ವರನ ಕಾರ್ಯಕ್ಕೋಸ್ಕರ ಮತ್ತು ಇನ್ನೊಂದು ಅಭ್ಯಾಸಿ (ಸಾಧಕ)ಯ ಕಾರ್ಯಕ್ಕೋಸ್ಕರ; ಅರ್ಥಾತ್ ಸಹಸ್ರದಲ ಕಮಲವು ಒಂದು ಪ್ರೇಷಕಯಂತ್ರ (Transmitter) ಆಗಿದೆ. ಇನ್ನೊಂದು ಮಾತು. ಈಶ್ವರನು ಬ್ರಹ್ಮರಂಧ್ರದ ಮೂಲಕ ಕೊಡುತ್ತಾನೆ, ಆದರೆ ಅದರ ಅನುಭೂತಿಯಾಗುವುದು ಸಹಸ್ರದಲ ಕಮಲದಲ್ಲಿ. ಇದು ನನ್ನ ಸಂಶೋಧನೆ. ಯಾವುದೋ ಒಂದು ಪ್ರಶ್ನೆಗೆ ಉತ್ತರವಾಗಿ ನಾನು ಇದನ್ನೇ ತಿಳಿಸಿದ್ದೆ. ಈಗ ಎರಡನೆಯ ಪತ್ರದ ಸಂಬಂಧದಲ್ಲಿ ಸ್ವಲ್ಪ ಬರೆಯುತ್ತೇನೆ.

'ಎಕ್ಸ್' (X), 'ವಾಯ್' (Y) ಸ್ಥಾನದಲ್ಲಿ ಲಯಾವಸ್ಥೆ ಈಗ ಶುರು ಆಗಿದೆ ಎಂದು ಬರೆದಿದ್ದೀಯೆ. ಆದರೆ, ಇನ್ನೂ ಪೂರ್ಣರೂಪದಲ್ಲಿ ಅದು ಆರಂಭವಾಗಿಲ್ಲ. ಅದು ಆದಾಗ ನಾನು ಅದನ್ನು ಹೆಚ್ಚಿಸುತ್ತೇನೆ. ಅದರಲ್ಲಿ ಲಯಾವಸ್ಥೆಯು ಕಣ–ಕಣದಲ್ಲಿಯೂ, ನರ–ನರದಲ್ಲಿಯೂ ಆಗಲಿ ಎಂದು ನಾನು ಬಯಸುತ್ತೇನೆ;

P-4-Books-PM-7-Anantyatre-97



ಅದರಿಂದ ಜೀವನ್–ಮೋಕ್ಷದ ಸ್ಥಿತಿಯು ಪರಿಪಕ್ವವಾಗುವುದು. ನಾನು ಕೆಲವು ಬೈಠಕ್‌ಗಳನ್ನು ಅರೋಗ್ಯ ವರ್ಧನೆಗೋಸ್ಕರ ನೀಡಿರುವ ಕಾರಣವೂ ನಿದ್ರೆ ಬರಬಹುದು. ಕಸಿವಿಸಿಯು (ಅಸಹನೆ) ಶಾರೀರಿಕ ಶಕ್ತಿಹೀನತೆಯ ಕಾರಣ ಬರಬಹುದು; ಅದಕ್ಕೆ ಯಾವುದೇ ಆಧ್ಯಾತ್ಮಿಕ ಕಾರಣವಿಲ್ಲ. 'ಎಕ್ಸ್' (X), 'ವಾಯ್' (Y) ಬಿಂದುಗಳ ಮೇಲೆ ಶಕ್ತಿ ಉಂಟಾಗುವುದೆಂದು ನಾನು ಹೇಳಿದುದರ ಅರ್ಥವೇನು ಎಂದು ಕೇಳಿದ್ದೀಯೆ. ಆ ಬಿಂದುಗಳ ಸ್ಥಿತಿಗಳು ಪೂರ್ಣಪ್ರಮಾಣದಲ್ಲಿ ಇಳಿದು ಬರಲಿ ಮತ್ತು ಅದರ ಮೇಲೆ ಪ್ರಭುತ್ವ ಉಂಟಾಗಲಿ ಎಂಬುದೇ ನನ್ನ ಅಬಿಪ್ರಾಯವಾಗಿತ್ತು. ಈಗ ಅದರ ಶಕ್ತಿಯನ್ನು ಕುರಿತು ಹೇಳುತ್ತೇನೆ. ಅವುಗಳ ಶಕ್ತಿಗಳನ್ನು ಯಾವುದಾದರೊಂದು ನಕ್ಷತ್ರದ ಮೇಲೆ ಎಸೆದು ಚೆಲ್ಲಿದರೆ ಸಾಕು, ಅದು ಚೂರು ಚೂರಾಗಿ ಹೋಗುವುದು, ಆದರೆ ಆ ಮಟ್ಟದವರೆಗೆ ಅವುಗಳ ಶಕ್ತಿಯು ಅನುಭೂತಿಗೆ ಬರಲು ನಾನು ಬಿಡುವುದಿಲ್ಲ. ಇದನ್ನು ಯಾರಾದರೂ ಪ್ರಯೋಗಿಸಲು ಬಯಸಿದರೆ ಅವನು ಮೊದಲಿಗೆ ಎಲ್ಲ ಸೀಮಿತತೆಗಳನ್ನೂ ಭಗ್ನಗೊಳಿಸುವುದು ಆವಶ್ಯಕವಾಗುತ್ತದೆ. ಇದರ ದುರುಪಯೋಗದಿಂದ ಕೆಲವೊಮ್ಮೆ ಹಾಗೆ ಕೂಡ ಆಗುತ್ತದೆ. ಇದರ ಮೂಲಕ ನಮ್ಮ ಸಂಸ್ಥೆಯಲ್ಲಿ, ಬೇರೆಯವರಲ್ಲಿ ಇದೇ ಸ್ಥಿತಿಯನ್ನು ಉಂಟುಮಾಡಬಹುದು. ನೀನು ಬರೆದ ಇನ್ನೊಂದು ವಿಷಯ, ಕಿವಿಯಿಲ್ಲದೆ ಕೇಳುವುದು, ಕೈಕಾಲುಗಳಿಗಲ್ಲದೆ ಚಲಿಸುವುದು.... ಇತ್ಯಾದಿ. ಇದು 'ಬ್ರಹ್ಮ'ದ ಅವಸ್ಥೆ. ಇನ್ನೂ ನೀನು ಮಾರ್ಗದಲ್ಲಿ ಕ್ರಮಿಸುತ್ತಿದ್ದೀಯೆ, ಮತ್ತು ನೀನು ಬರೆದಿರುವಂತೆ ನಿನಗೆ ನಿನ್ನ ಮೇಲೆ ಎಚ್ಚರವಿಲ್ಲವೆಂಬುದೇ ತಿಳಿದು ಬರುವುದಿಲ್ಲ. ಹಣೆಯ ಮಧ್ಯದಲ್ಲಿ ಒಂದು ದೊಡ್ಡ ತಗ್ಗು ಉಂಟಾದಂತೆ ಯಾವಾಗಲೂ ಅನಿಸುತ್ತದೆ ಎಂದು ನೀನು ಬರೆದಿರುವುದು ನನಗೆ ಅರ್ಥವಾಗಲಿಲ್ಲ. ನೀನು ಇದರ ಕಾರಣವನ್ನು ಯೋಚಿಸಿ, ಬರೆದು ತಿಳಿಸು. ಮೇ ತಿಂಗಳಲ್ಲಿ ಮೊರಾದಾಬಾದಿನಲ್ಲಿ ಮಿಷನ್ನಿನ ಸ್ಥಾಪನಾದಿನ ಆಚರಿಸಲ್ಪಡುವುದಿತ್ತು. ಯಾವುದೋ ಕಾರಣಕ್ಕೆ ಅದನ್ನು ಮುಂದೂಡಲಾಗಿದೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೧ **ಪತ್ರ ಸಂಖ್ಯೆ – ೩೯೪** ಷಾಹಜಹಾನಪುರ
೨೧–೦೫–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಎಲ್ಲ ಪತ್ರಗಳೂ ಕೈಸೇರಿದವು. ಮೇ ೧೦ ಮತ್ತು ೧೭, ೧೯೫೪ರ ಪತ್ರಗಳಿಗೆ ಉತ್ತರ ಬರೆಯುತ್ತಿದ್ದೇನೆ. ನೀನು 'ಎಕ್ಸ್' (X), 'ವಾಯ್' (Y) ಸ್ಥಾನದಲ್ಲಿದ್ದೀಯೆ; ಆ ಸ್ಥಿತಿಯಲ್ಲಿ ಲಯವಾಗುವುದೂ ಚೆನ್ನಾಗಿ ನಡೆದಿದೆ. ಆದರೆ



ಇನ್ನೂ ಪಿಂಡದೇಶದಲ್ಲಿ ವಿಸ್ತಾರವಾಗುವುದು ಉಳಿದಿದೆ. ಝೆಡ್ (Z) ಸ್ಥಾನದ ಸ್ಥಿತಿಯವರೆಗೆ ನಿನ್ನನ್ನು ತುಲುಪಿಸಿಲ್ಲವೆಂದು ನೀನು ಬರೆದಿದ್ದೀಯೆ. ಈಗ ಜೀವನ್ ಮೋಕ್ಷ ಸ್ಥಿತಿಯು ಲಯವಾಗಿ (ಲೀನವಾಗಿ) ಹೋಗುವುದನ್ನು ನಿರೀಕ್ಷಿಸುತ್ತಿದ್ದೇನೆ. 'ಅದ್ವೈತ' (ಭಾವ) ನಿನ್ನಲ್ಲಿ ತಾನೇ ತಾನಾಗಿದೆ ಎಂದು ನೀನು ಬರೆದಿದ್ದೀಯೆ. ನಿನ್ನಲ್ಲಿ ಕಣ–ಕಣವೂ ಸಹಜ ರೂಪ ತಳೆಯುತ್ತಿದೆ ಎಂದು ಕೂಡ ಬರೆದಿದ್ದೀಯೆ. ಇದರಲ್ಲಿ ನಿನ್ನ ಅಭಿಪ್ರಾಯವೇನೆಂದು ತಿಳಿಯಲಿಲ್ಲ. ನಿನ್ನ ವೃತ್ತಿಗಳೆಲ್ಲವೂ ಲುಪ್ತವಾಗಿ ಹೋಗಿವೆ; ಮತ್ತೆ, ಇದು ಲಯಾವಸ್ಥೆಯ ಪ್ರಾರಂಭವಾಗಿದೆ; ಆದರೆ, ಇನ್ನೂ ವೃತ್ತಿಗಳು ಪೂರ್ಣ ಶುದ್ಧರೂಪದಲ್ಲಿ ಬಂದಿಲ್ಲ. ನಾನು ಅವುಗಳನ್ನು ಶುದ್ಧೀಕರಿಸಬೇಕಾಗುವುದು. ಈ ಸಮಯದಲ್ಲಿ ನನಗೆ ನಿನ್ನ ಆರೋಗ್ಯದ ಬಗ್ಗೆ ಚಿಂತೆ ಇದೆ. ಇನ್ನೂ ಬಹಳಷ್ಟು (ಬಾಕಿ) ಉಳಿದಿದೆ, ಆದ್ದರಿಂದ ಆರೋಗ್ಯವು ಇನ್ನೂ ಹೆಚ್ಚು ಅಗತ್ಯ.

ಮೇ, ೧೭ರ ಪತ್ರದಲ್ಲಿ 'ಮೊದಲು ನಾನು ನನ್ನನ್ನೇ ದೂರವಾಗಿ ಕಾಣುತ್ತಿದ್ದೆ. ಈಗ, ದೂರ – ಹತ್ತಿರಗಳ ಕಲ್ಪನೆ ಉಳಿದಿಲ್ಲ' ಎಂದು ಬರೆದಿದ್ದೀಯೆ. ಈಶ್ವರನೊಂದಿಗೆ ಸಾಮೀಪ್ಯ ಮತ್ತು ಸ್ವಲ್ಪ ಹೆಚ್ಚಿದೆ ಎಂದು ಇದರ ಅರ್ಥ. ತ್ರಿಕುಟಿಯಲ್ಲಿ ಒಂದು ತಗ್ಗು ಇದ್ದಂತೆ ಅನಿಸುತ್ತಿದ್ದ ಬಗ್ಗೆ ನೀನು ನನಗೆ ಬರೆದು ಕೇಳಿದ್ದೆಯಲ್ಲ; ನೀನು ಅದನ್ನು ಕುರಿತು ಬರೆದುದು ಸರಿ ಇದೆ. ಜುಟ್ಟು (ಚಂಡಿಕೆ) ಇಟ್ಟುಕೊಳ್ಳುವ ಸ್ಥಾನದಲ್ಲಿ, ಸ್ವಲ್ಪಮಟ್ಟಿಗೆ ವಿಸ್ತಾರದ ಅಥವಾ ತಗ್ಗಿನ ಅನುಭೂತಿಯಾಗುತ್ತಿಲ್ಲವಷ್ಟೆ ಎಂಬುದನ್ನು ನೋಡಿ, ತಿಳಿಸು.

ನಾನು ಅಲ್ಲಿಗೆ ಬರುವ ದಿನಾಂಕವನ್ನು ಇನ್ನೂ ನಿರ್ಧರಿಸಲಾಗುವುದಿಲ್ಲ. ಎರಡು–ಮೂರು ದಿನಗಳಲ್ಲಿ ಗೊತ್ತಾಗುವುದು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೨ **ಪತ್ರ ಸಂಖ್ಯೆ – ೩೯೮** ಷಾಹಜಹಾನಪುರ
೨೪–೦೫–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಾನೊಂದು ಪತ್ರ ಕಳುಹಿಸಿದ್ದೆ, ಅದು ನಿನಗೆ ಈಗಾಗಲೇ ತಲುಪಿರಬಹುದು. ನೀನು ನಿರೋಗಿಯಾಗಬೇಕೆಂದು ನಾನು ಹಾರೈಸುತ್ತೇನೆ. ಪ್ರಾಪಂಚಿಕ ವ್ಯವಹಾರದಲ್ಲಿ ಜನರು ತಮ್ಮ ಸ್ವಹಿತಾಸಕ್ತಿಗೋಸ್ಕರ ಇತರರನ್ನು ಪ್ರೀತಿಸುತ್ತಾರೆ. ನಿನ್ನಿಂದ ಜನರಿಗೆ ಆಧ್ಯಾತ್ಮಿಕ ಲಾಭವಾಗಬೇಕೆಂಬುದೇ ನನ್ನ ಆಶಯವಾಗಿದೆ; ಆದರೆ ವಾದ್ಯದ (ಢೋಲಕ್) ಹುರಿ ಸರಿಯಾಗಿ ಬಿಗಿದಿರದಿದ್ದರೆ ಅದರಿಂದ ಒಳ್ಳೆಯ ಶಬ್ದ ಉಂಟಾಗುವುದಿಲ್ಲ.

P-4-Books-PM-7-Anantyatre-98



ಈಗ ವಿಷಯಕ್ಕೆ ಬರುತ್ತೇನೆ. ೧೯೫೪ಳ ಮೇ ೨೨ರ ನಿನ್ನ ಪತ್ರದಲ್ಲಿ 'ಜ್ಯೋತಿರ್ಮಯ ಲೋಕದಲ್ಲಿ ನನ್ನ ಇರವು ಬಹುಶಃ ಆರಂಭವಾಗಿದೆ' ಎಂದು ಬರೆದಿದ್ದೀಯೆ. ಅಂತರವಿರುವುದು ಇಷ್ಟೇ. ಏನೆಂದರೆ, ನೀನು 'ಬಹುಶಃ' ಎಂದು ಹೇಳಿದ್ದೀಯೆ. ಆದರೆ ಈ ಸ್ಥಿತಿಯು ನಿನ್ನಲ್ಲಿ ವಾಸ್ತವವಾಗಿ ಬಂದಿದ್ದರೆ, 'ಬಹುಶಃ' ಎಂಬ ಶಬ್ದ ನಿನ್ನ ಮನಸ್ಸಿನಲ್ಲಿ ಬರುತ್ತಿರಲಿಲ್ಲ. ಈಗ ನಾನು ನಿನಗೆ ತಿಳಿಸುತ್ತೇನೆ : ಜ್ಯೋತಿರ್ಮಯ ಲೋಕ ಇನ್ನೂ ಬಲು ದೂರವಿದೆ; ಎಷ್ಟೆಂದರೆ, ನೀನು ಅದರ ಕಡೆಗೆ ನೋಡಲು ಕಣ್ಣು ಹಾಯಿಸಿದರೆ ಕಣ್ಣುಗಳು ದಣಿದು ಹೋಗುತ್ತವೆ. ಆದರೆ ಒಂದು ಮಾತು ಸರಿ. ಈಗ ನೀನಿರುವ ಸ್ಥಿತಿಯು ಜ್ಯೋತಿರ್ಮಯ ಲೋಕದ ಅತ್ಯಂತ ಸ್ಥೂಲರೂಪವಾಗಿದೆ.

ಆ ಲೋಕ ('ಜ್ಯೋತಿರ್ಮಯ ಲೋಕ) ಕೇವಲ ಹೇಳುವುದಕ್ಕೋಸ್ಕರ ಇದೆ. ಯಾಕೆಂದರೆ ಅದನ್ನು ಅಭಿವ್ಯಕ್ತಪಡಿಸಲು ಯೋಗ್ಯ ಶಬ್ದ ಯಾವುದು ಇರಲು ಸಾಧ್ಯ ? 'ಜ್ಯೋತಿರ್ಮಯ' (Brighter) ಎಂಬ ಶಬ್ದವನ್ನು ತೆಗೆದುಕೊಳ್ಳುವುದೇಕೆಂದರೆ, ಅದು ಆಧ್ಯಾತ್ಮಿಕ ಉನ್ನತಿಯನ್ನು ಹೊಂದಿದ ವ್ಯಕ್ತಿಗಳಿಗೋಸ್ಕರ ಉದ್ದಿಷ್ಟವಾಗಿದೆ, ಅಲ್ಲಿ ಮಹಾತ್ಮರು ನೆಲೆಸಿರುತ್ತಾರೆ. ಆ ಸ್ಥಾನದ ಹೆಸರನ್ನು ದೊಡ್ಡದು ಮಾಡಿ ವರ್ಣಿಸಲಾಗಿದೆ. ನೀವು ಅದನ್ನು ಯಾವ ಹೆಸರು ಇಟ್ಟು ಕರೆಯಬಯಸುತ್ತೀರಿ ? ಎಂದು ಯಾರಾದರೂ ನನ್ನನ್ನು ಕೇಳಿದರೆ, ನಾನು ಅದನ್ನು 'No world' 'ಅ–ಲೋಕ' (ಲೋಕವಲ್ಲದ್ದು) ಎಂದು ಕರೆದೇನು. ಇರಲಿ, ನಿನ್ನ ಮನಸ್ಸಿನಲ್ಲಿ ಈ ಶಬ್ದ Brighter world (ಜ್ಯೋತಿರ್ಮಯ ಲೋಕ) ಇರುವುದರಿಂದ ಮತ್ತು ಅಭಿರುಚಿ ಆ ಕಡೆಗೆ ಇದೆ. ಒಳ್ಳೆಯದು. ಆದರೆ ಯಾವನಾದರೂ ಬುದ್ಧಿವಂತ ಮನುಷ್ಯ ಅಲ್ಲಿಯವರೆಗೆ ತಲುಪಿದ್ದಾನೆಯೆ? ಮೂರ್ಖರಂತೂ ಅದರಿಂದ ಗಾವುದ– (ಮೈಲುಗಟ್ಟಲೆ) ದೂರವಿದ್ದಾರೆ. ಯಾರಾದರೊಬ್ಬ ಬುದ್ಧಿವಂತ ಮನುಷ್ಯ ಇದುತನಕ ಅಲ್ಲಿಗೆ ಮುಟ್ಟಿದ್ದಾನೆಯೇ ಎಂಬುದನ್ನು ವಿಚಾರದಲ್ಲಿಡಬೇಕು. ಒಂದು ವೇಳೆ ಅದರ ಅಭಿಪ್ರಾಯ ಹಾಗಿದ್ದರೆ, 'ಜ್ಞಾನಿ'ಗಳಿಗೆ ಅಲ್ಲಿ ಪ್ರವೇಶವಿಲ್ಲ ಎಂದು ನಾನು ಹೇಳುತ್ತೇನೆ. ಆನೆಗೆ ಒಂದು ಇಕ್ಕಟ್ಟಾದ ಓಣಿಯಲ್ಲಿ ಬಂದಿಯಾಗು ಎಂದು ಹೇಳಿದರೆ, ಅದಾಗದು. ಮೂರ್ಖನು ಅಲ್ಲಿಗೆ ತಲುಪಲಾರ, ಯಾಕೆಂದರೆ ಅವನ ಬಳಿ ಒಂದಿಷ್ಟು ಸಾಮಾನು (ಸಂಸ್ಕಾರ) ಇದ್ದೇ ಇದೆ; ಅವನು ಆ ವಸ್ತುಗಳ ಮೂಟೆಯನ್ನು (ಸಂಸ್ಕಾರ) ಒಳಗೊಂಡು ಅಲ್ಲಿಗೆ ಹೋಗಬಯಸುತ್ತಾನೆ; ಆದರೆ ಅಲ್ಲಿ ಅವುಗಳನ್ನು ಇಡಲು ಸ್ಥಳವಿಲ್ಲ. ಈಗ ಜ್ಞಾನಿಗಳ ಬಗ್ಗೆ ಕೇಳು. ಅವರು ಅಲ್ಲಿ (ಪ್ರಾಪಂಚಿಕ) ವಸ್ತುಗಳನ್ನೂ ತ್ಯಾಗ ಮಾಡಿ, ಮಾಡಿ, ತಮ್ಮನ್ನು 'ಖಾಲಿ' ಎಂದು ತಿಳಿದುಕೊಳ್ಳುತ್ತಾರೆ. ಆದರೆ ಅವರ ಬಳಿ 'ಜ್ಞಾನದ ಮೂಟೆ' ಇದ್ದೇ ಇದೆ. ಅದು ಎಂಥ ವಸ್ತು ಎಂದರೆ, ಅದರೊಂದಿಗೆ ಅಲ್ಲಿಗೆ ಹೋದರೆ 'ಲೋಕ' (ಪ್ರಪಂಚ) ಮತ್ತು 'ಜ್ಯೋತಿರ್ಮಯ ಲೋಕ' (Brighter World)ಗಳ ನಡುವೆ ವ್ಯತ್ಯಾಸವೇ ಇರಲಾರದು. ಅಂದ ಮೇಲೆ ಅಲ್ಲಿಗೆ



ಹೋಗಿ ಮುಟ್ಟುವವರು ಯಾರು ? ಯಾರ (ಸೃಜನ) ಶಕ್ತಿ (Creative Power) ಅಳಿದುಹೋಗಿ ತನ್ನ ಮೂಲ (ನೈಜ–Real) ರೂಪದಲ್ಲಿ ಮರಳಿ ಹೋಗುವಂತಾಗುವ ರೀತಿಯಲ್ಲಿ, ಈ ಎರಡೂ (ಜಗತ್ತು ಮತ್ತು ಜ್ಯೋತಿರ್ಮಯ ಲೋಕ) ಲಯವಾಗಿ ಹೋಗಿವೆಯೋ ಅವನು (ಅಂಥವನು) ಮಾತ್ರ ಹೋಗಬಲ್ಲ. ಅದು ಸಂಭವಿಸುವುದೆಂತು ? ನಮ್ಮ ದೃಷ್ಟಿ ನಮ್ಮ ಜ್ಞಾನ (ತಿಳಿವಳಿಕೆ)ದ ಮೇಲಿರದೆ, ಎಲ್ಲಿ ನಮಗೆ ನಮ್ಮ ಮೂಲ ನೆಲೆಯ (Real Base) ಪರಿಜ್ಞಾನ ಪ್ರಾಪ್ತವಾಗುವುದೋ ಅಲ್ಲಿ ನೆಲೆಸಿರಬೇಕು; ಆಗ ಮಾತ್ರ ಅದು ಸಾಧ್ಯ. ಅದನ್ನು ಸಾಧಿಸುವ ಭಾಗ್ಯ ನಮ್ಮದಾಗುವುದು ಯಾವಾಗ ? ಮನುಷ್ಯ ತನ್ನ (ಪ್ರಪಂಚದ – Worldly) ಪ್ರಾಪಂಚಿಕ ನೆಲೆಗಟ್ಟನ್ನು ಬಿಟ್ಟುಕೊಟ್ಟಾಗ. ಈಗ, ನೆಲೆಯೇ ಇಲ್ಲದ, ತನ್ನ ನೆಲೆಯನ್ನೇ ಬಿಡಬೇಕಿದ್ದ ಸ್ಥಾನವನ್ನು ತಲುಪಲು ಯಾರಾದರೂ ಯಾಕೆ ಅಪೇಕ್ಷೆಪಟ್ಟಾರು? ಎಂದು ನೀನು ನನ್ನನ್ನು ಕೇಳಬಹುದು. ಇದಕ್ಕೋಸ್ಕರವೇ ಜನರು ಅಲ್ಲಿಗೆ ಜ್ಯೋತಿರ್ಮಯ ಲೋಕಕ್ಕೆ ಹೋಗಲು ಬಯಸುವುದಿಲ್ಲ ಎಂದು ನಾನು ತಿಳಿಯುತ್ತೇನೆ.

ಮೇ ೨೧ರ ನಿನ್ನ ಪತ್ರದಲ್ಲಿ ನೀನು ಸಂತೋಷದ ಬಗ್ಗೆ ಬರೆದಿದ್ದೀಯೆ. ಪ್ರಸನ್ನನಾಗಿರುವವನಿಗೆ ಸಂತೋಷದ ಅನುಭೂತಿ ಆಗುತ್ತದೆ. ಮದುವೆ ಮುಂತಾದ ಸಮಾರಂಭಗಳಲ್ಲಿ ಜನರು ಸಂತೋಷದಿಂದಿರುವುದು ಕಂಡುಬರುತ್ತದೆ. ಪರಿಸರವೂ ತನ್ನ ಪ್ರಭಾವ ಬೀರುತ್ತದೆ. ಇಂದ್ರಿಯಗಳು ವಿಷಯ (ವಸ್ತು)ಗಳ ಸ್ಪರ್ಶದಲ್ಲಿ ಬಂದಾಗ ಅದೇ ಪ್ರಭಾವ ಮನಸ್ಸಿನ ಮೇಲೆ ಆಗುತ್ತದೆ. ಇಂದ್ರಿಯಗಳು ಶುದ್ಧವಾದಾಗ (ನಾನು 'ಮೂಲಸ್ಥಿತಿ' Originality ಎಂಬ ಶಬ್ದವನ್ನು ಅದಕ್ಕೆ ಇನ್ನೂ ಬಳಸುವುದಿಲ್ಲ), ಮನಸ್ಸು ಅದರ (ಶುದ್ಧತೆಯ) ರುಚಿಯನ್ನು ಪಡೆಯುತ್ತದೆ. ಆಗ ಯಾವುದರ ರುಚಿ ಅದರ ಅನುಭವಕ್ಕೆ ಬಂದಿತೋ ಅದನ್ನೇ ಅದು ಬಹಿರಂಗದಲ್ಲಿಯೂ ನೋಡತೊಡಗುತ್ತದೆ. ಮತ್ತು, ಮನಸ್ಸು ನೋಡಲು ಯೋಗ್ಯವಾದ ವಸ್ತು ಅದೇ ಆಗಿದೆ. ಎಲ್ಲ ಆಧ್ಯಾತ್ಮಿಕ ಸ್ಥಿತಿಗಳ ಅವಸ್ಥೆಯೂ ಇದೇ ಆಗಿದೆ. ನಾವು ಆ ಆಧ್ಯಾತ್ಮಿಕ ಸ್ಥಿತಿಯಲ್ಲಿ ಮಗ್ನರಾದರೆ, ಅದರ ಪ್ರಭಾವ ಮನಸ್ಸಿನ ಮೇಲೆ ಆಳವಾಗಿ ಉಂಟಾಗುತ್ತದೆ. ಮತ್ತು ಅದೇ ನಮಗೆ ಕಂಡುಬರುತ್ತದೆ. ಉದಾಹರಣೆಗೆ, ಒಬ್ಬ ಕಳ್ಳ ತನ್ನ ಸಾಮಾನುಗಳನ್ನು ಜೋಪಾನದಿಂದ ನೋಡಿಕೊಳ್ಳುತ್ತಾನೆ. ಯಾಕೆಂದರೆ, ತಾನು ಸ್ವತಃ ಕಳ್ಳನಾಗಿರುವುದರಿಂದ, ಅವನು ಎಲ್ಲರನ್ನೂ ಕಳ್ಳರೆಂದೇ ತಿಳಿಯುತ್ತಾನೆ. ಇದೇ ರೀತಿ, ಒಳ್ಳೆಯ ವ್ಯಕ್ತಿಯೊಬ್ಬನು ಎಲ್ಲರನ್ನೂ ಒಳ್ಳೆಯವರೆಂದು ಭಾವಿಸುತ್ತಾನೆ. ಆದರೆ, ಇಂದ್ರಿಯಗಳಲ್ಲಿ ಮೂಲಸ್ಥಿತಿ (Originality) ಬರಲು ಶುರುವಾದಾಗ ದೃಶ್ಯ ಬದಲಾಗುತ್ತದೆ. ಈಗ ಸದ್ಯದಲ್ಲಿ ಇರುವ ಸಂತೋಷ – ಅಥವಾ ತಿಳಿವಳಿಕೆಗೋಸ್ಕರ 'ಪ್ರಸನ್ನತೆ' (Happiness) ಎಂದು ಕರೆಯೋಣ – ಅದು ಆನಂದ (Bliss) ಆಗಿ ಪರಿವರ್ತಿವಾಗುತ್ತದೆ. ಜ್ಯೋತಿರ್ಮಯ ಲೋಕಕ್ಕೆ (Bighter World) ಅರ್ಹರಾದವರ ಸ್ಥಿತಿ ಎಂಥದಿರುತ್ತದೆಯೆಂದರೆ, ಅಲ್ಲಿ 'ಆನಂದ' (Bliss)

P-4-Books-PM-7-Anantyatre-99



ಕೂಡ ಲುಪ್ತವಾಗಿ ಹೋಗುತ್ತದೆ. ಇದು ನಿನ್ನ 'ಸಂತೋಷ'ದ ಕತೆಯಾಯಿತು. ನಾನು ಲಖೀಂಪುರಕ್ಕೆ ಬಂದಮೇಲೆ, ನನ್ನ ಆರೋಗ್ಯ ಚೆನ್ನಾಗಿದ್ದರೆ, ಬಹುಶಃ ಮುಂದಿನದರ ಕತೆಯನ್ನೂ ಬರೆಯುತ್ತೇನೆ. ಮೂಲಸ್ಥಿತಿ (Originality) ನಮ್ಮಲ್ಲಿ ಉಂಟಾಯಿತೆನ್ನೋಣ; ಅಂದರೆ ಆಗ, ನಮ್ಮಲ್ಲಿ ಯಾವ ವಿಶೇಷತೆ ಉಂಟಾಯಿತು ? ನಾವು ಯಾವಾಗ ಪ್ರಥಮತಃ ಅಸ್ತಿತ್ವದಲ್ಲಿ ಬಂದೆವೋ ಆಗಲೇ ಅದು ನಮ್ಮಲ್ಲಿ ಇತ್ತು. ಒಂದು ಮಾತು ಸರಿಯೆನಿಸದಿದ್ದರೂ (ಪಥ್ಯವಾಗದಿದ್ದರೂ) ನಾನು ಹೇಳುತ್ತೇನೆ. ಏನೆಂದರೆ, ಅದರಲ್ಲಿ (ನಾವು ಪ್ರಥಮತಃ ಮೂಲ ಸ್ಥಿತಿಯಲ್ಲಿ ಇದ್ದುದರಲ್ಲಿ ಈಶ್ವರನ ಉಪಕಾರ (ಹಂಗು) ಏನೂ ಖಂಡಿತವಾಗಿ ಇರಲಿಲ್ಲ. ನಾವು 'ಮೂಲಸ್ಥಿತಿ'ಗಿಂತ ಮುಂದಕ್ಕೆ ಪ್ರಗತಿ ಹೊಂದಿದರೆ ನಮ್ಮ ಮೂಲ (ಪ್ರಥಮದಲ್ಲಿ), ಅಸ್ತಿತ್ವದಲ್ಲಿ ಬಂದಾಗಿನ ಸ್ಥಿತಿ)ಯ 'ಸಾರ–ರೂಪ' (Essence form) ಪಡೆದೆವೆಂದು ಹೇಳಬಹುದು. ಇನ್ನೊಂದು ಮಾತು ನಾನು ಹೇಳಬಹುದು : ಈ ರೀತಿಯಲ್ಲಿ ನಾವು 'ಜ್ಯೋತಿರ್ಮಯ ಲೋಕ'ದ ಹಕ್ಕುದಾರರು (ಅರ್ಹರು) ಆಗುತ್ತೇವೆ. ಎಂಬುದನ್ನು ವಿಚಾರವಂತ ಜನರು ನನ್ನ ಕಾಲಾನಂತರ ಒಂದಾನೊಂದು ಸಮಯದಲ್ಲಿ ಯೋಚಿಸಬಹುದು. ಆದರೆ, ನಮ್ಮನ್ನು ಜ್ಯೋತಿರ್ಮಯ ಲೋಕಕ್ಕೆ ಹೋಗಲು ಶಕ್ತರನ್ನಾಗಿ ಮಾಡಬಲ್ಲ ತಂತ್ರ (technique) ವೊಂದು ಕೈಗೆ ಸಿಗಬಹುದೇ ಎಂಬ ಹುಡುಕಾಟ (ಶೋಧನೆ)ದಲ್ಲಿ ನಾನಿದ್ದೇನೆ. ಇದಕ್ಕೂ ಮುಂದೆ ಹೇಳಲು ನನಗೆ ತಡೆ ಉಂಟಾಗಿದೆ.

ನೀನು ತಳಮಳದ (Craving) ಬಗ್ಗೆ ಬರೆದಿದ್ದೀಯೆ. ಅದು ಇರಲೇಬೇಕು. ಅದು ಒಂದು ಮಂಜು ಹನಿಯಂತೆ ಇರುತ್ತದೆ. ಇಚ್ಛಾಶಕ್ತಿಯ ಕಾವಿನಿಂದ ಅದು ಬಾಷ್ಪೀಕರಣಗೊಳ್ಳುತ್ತದೆ. ನಮ್ಮನ್ನು ಗುರಿಯವರೆಗೆ ಕೊಂಡೊಯ್ಯುವುದು ಇದೇ ಆಗಿದೆ. ಚ್ಯುತಿಗೊಳ್ಳದ ಏಕೈಕ ಸಾಧನ ಅದಾಗಿದೆ. ಅದು ಚಡಪಡಿಕೆಯಿಂದ (Restlessness) ಆರಂಭವಾಗಿ ಮುಂದುವರಿದ ಹಂತದಲ್ಲಿ ತಳಮಳದ (Craving) ರೂಪವನ್ನು ಪಡೆಯುತ್ತದೆ. 'ನಾನು ನನ್ನ ಎಚ್ಚರ (ಪ್ರಜ್ಞೆ)ಯನ್ನೇ ಮರೆತುಬಿಟ್ಟಿದ್ದೇನೆ' ಎಂದು ನೀನು ಬರೆದಿದ್ದೀಯೆ. ಇದು ಸರಿ ಇದೆ. 'ಸತ್ಯ (Reality) ಆರಂಭವಾದಾಗ ಇದು ಉಂಟಾಗುತ್ತದೆ. 'ನನಗೆ ನನ್ನ ಆತ್ಮ (Soul)ದ ಅರಿವೂ ಇಲ್ಲ' ಎಂದು, ಒಂದು ಕಡೆಗೆ ಬರೆದಿದ್ದೀಯೆ. ನಿನ್ನ ಲಕ್ಷ್ಯ ಸಂಪೂರ್ಣವಾಗಿ ಬೇರೆ ಕಡೆಗೆ ತಿರುಗಿರುವುದರ ಕಾರಣ, ಅದು ನಿನ್ನ ಅರಿವಿಗೆ ಬರುತ್ತಿಲ್ಲ. ಈ ಸ್ಥಿತಿಯು ಸಿದ್ಧಗೊಳ್ಳುವ (ಪೂರ್ಣತೆ ಪಡೆಯುವ) ರೀತಿಯೂ ಇದೇ ಆಗಿದೆ. ಆದರೆ, ಇದು ಘಟಿಸುವುದು ಇನ್ನೂ ಉಳಿದಿದೆ. 'ಬ್ರಹ್ಮ ಮತ್ತು ಅಹಂ ಬ್ರಹ್ಮಾಸ್ಮಿ'ಗಳು ಸ್ವಪ್ನದಂತೆ ಆಗಿವೆ. ಎಂದು ನೀನು ಬರೆದದ್ದು ಬಹುಮಟ್ಟಿಗೆ ಸರಿ ಇದೆ; ಆದರೆ ಅದರ ಅಂಕುರ ಇನ್ನೂ ಉಳಿದಿದೆ. ಸ್ಥಿತಿ ಬದಲಾಗಿದೆ, ಇವೆಲ್ಲ ಆಧ್ಯಾತ್ಮಿಕ ಯಾತ್ರೆಯಲ್ಲಿ ಬರತಕ್ಕವುಗಳು. 'ಅಹಂ–ಬ್ರಹ್ಮಾಸ್ಮಿ' ಪ್ರತಿಪಾದಕರನ್ನು ನಾನು, ಮನುಷ್ಯರಲ್ಲಿ ಪೈಲವಾನರಿದ್ದಂತೆ ಎಂದು ಪರಿಗಣಿಸುತ್ತೇನೆ. 'ಸ್ಯಾಂಡೋ' ಬಹಳ ಶಕ್ತಿವಂತನಾಗಿದ್ದ, ರಾಮಮೂರ್ತಿ



(ಒಬ್ಬ ಕುಸ್ತಿಪಟು) ಪೈಲವಾನರಲ್ಲಿ ಅಗ್ರಗಣ್ಯನಾಗಿದ್ದ – ಎಂದಷ್ಟೇ ಶ್ಲಾಘಿಸುತ್ತೇನೆ. ನಿನ್ನ ಪತ್ರಗಳಿಗೆ ಇಷ್ಟು ಉತ್ತರ ಸಾಕು. ಇನ್ನೊಂದು ವಿಷಯ ದೃಷ್ಟಿಗೆ ಬಿತ್ತು, 'ನನ್ನ ಬಳಿ ಇರುವುದೆಲ್ಲವೂ ನಿಮ್ಮ ವರದಾನವಾಗಿದೆ' ಎಂದು ಬರೆದಿದ್ದೀಯೆ. ಅದಕ್ಕೆ ನಾನು 'ನೀನು ಕೊಟ್ಟಿದ್ದುದೆಲ್ಲವೂ ನನ್ನ ಬಳಿ ಇದೆ' ಎಂದು ಹೇಳುತ್ತೇನೆ. ಅಂದರೆ, ಯಾರ ಮೇಲೂ ಋಣಭಾರ ಉಳಿದಿಲ್ಲ. ಧನ್ಯವಾದ ಹೇಳಬೇಕಾದುದೂ ಇಲ್ಲ.

ಅಮ್ಮಾಜಿಯವರಿಗೆ ಪ್ರಣಾಮಗಳು,

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೩ **ಪತ್ರ ಸಂಖ್ಯೆ – ೪೦೩** ಷಾಹಜಹಾನಪುರ
೨೭–೦೬–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ತಲುಪಿತು. ಚುಚ್ಚುಮದ್ದಿನಿಂದ ನಿನಗೆ ನೋವು ಆಗದಿರುವುದು ನಿನ್ನದೇ ವಿಶೇಷತೆಯಾಗಿದೆ. ನಾನು ಹೇಳುವುರಲ್ಲಿ ನಿನಗೆ ಭರವಸೆಯಿರುವಾಗ, ನಿನ್ನದೇ ಶಕ್ತಿ ಕೆಲಸಮಾಡಿದೆ (ಎಂದು ಹೇಳುತ್ತೇನೆ). ಮತ್ತು ನಿನ್ನ ಆಧ್ಯಾತ್ಮಿಕ ಉನ್ನತಿಯು ನಿನ್ನದೇ ಭಕ್ತಿ ಮತ್ತು ಅಭ್ಯಾಸಗಳ ಫಲವಾಗಿದ್ದು, ನಿನ್ನ ಕಾರಣದಿಂದಲೇ ಆಗಿದೆ ಎಂದು ಅನೇಕ ಸಲ ನಿನಗೆ ಬರೆದಿದ್ದೇನೆ. ಒಂದು ವೇಳೆ ನನ್ನಲ್ಲಿ ಅಂಥ ವಿಶೇಷತೆ ಅಥವಾ ಶಕ್ತಿ ಇದ್ದುದಾದರೆ, ಎಲ್ಲ ಸತ್ಸಂಗಿಗಳೂ ಆಧ್ಯಾತ್ಮಿಕತೆಯ ಉಚ್ಚ ಶ್ರೇಣಿಯನ್ನು ಪಡೆದುಬಿಡುತ್ತಿದ್ದರು. 'ನನಗೆ ಮುಕ್ತಿಯ ಬಯಕೆಯೂ ಇಲ್ಲ, ಅಥವಾ ಸಾಕ್ಷಾತ್ಕಾರದ ಆಕಾಂಕ್ಷೆಯೂ ಇಲ್ಲ' ಎಂದು ನೀನು ಬರೆದಿದ್ದೀಯೆ, ಇದು ಅತೀವ ಒಳ್ಳೆಯ ಅವಸ್ಥೆಯಾಗಿದೆ. ನಿನಗೆ ಸಾಕ್ಷಾತ್ಕಾರ ಈಗಾಗಲೇ ಅಭ್ಯವಾಗಿದೆ, ಮತ್ತು ಈಗ ಜೀವನ್ಮೋಕ್ಷಗತಿಯಲ್ಲಿದ್ದೀಯೆ. ವಸ್ತುವು ಲಭ್ಯವಾದ ಮೇಲೆ ಅದರ ಬಗ್ಗೆ ಆಕಾಂಕ್ಷೆಯಿರುವುದಾದರೂ ಹೇಗೆ ? ಇಷ್ಟವಸ್ತು ಸಿಗದಿರುವವರೆಗೆ ಮಾತ್ರ ಮನುಷ್ಯನಿಗೆ ಅದರ ಬಯಕೆ ಇರುತ್ತದೆ; ಈಗ, ದೊರೆಯಿತೆಂದ ಮೇಲೆ, ಬಯಕೆ ಯಾರಿಗಿರುತ್ತದೆ ? 'ಶರೀರದ ಕಣ–ಕಣವೂ, ನರ–ನರವೂ ನಿದ್ರಾವಸ್ಥೆಯಲ್ಲಿದ್ದಂತೆ ತೋರುತ್ತದೆ' ಎಂದು ಬರೆದಿದ್ದೀಯೆ. ಅಂದರೆ, ಲಕ್ಷಾಂತರ ಜನ್ಮಗಳಿಂದ ಸಂಚಿತವಾದ ಕೃತ್ರಿಮತೆಯೆಲ್ಲವೂ ಅಳಿದು ಹೋಗಿ, ಸತ್ಯಾವಸ್ಥೆ ಉಂಟಾಗಿದೆ ಎಂದು ಅರ್ಥ. ಅರ್ಥಾತ್, ಕೃತ್ರಿಮತೆ ಉಂಟಾಗುವ ಪೂರ್ವದಲ್ಲಿ ಯಾವ ಅವಸ್ಥೆ ಇತ್ತೋ ಅದು ಪುನಃ ಪ್ರಾಪ್ತವಾಗಿದೆ. ಆದರೆ ಇದರಲ್ಲಿ ಇನ್ನೂ ಸಾಧಿಸಬೇಕಾದುದು ಉಳಿದಿದೆ.

ನಿನ್ನೊಳಗಿನ ಇಂದ್ರಿಯಗಳು ಲುಪ್ತವಾಗಿ ಹೋಗಿವೆಯೇನೋ ಎಂಬಂತಿದೆ ಎಂದು ಬರೆದಿದ್ದೀಯೆ. ನಿನ್ನ ಅನುಭವ ಸರಿ ಇದೆ; ಮತ್ತು ನೀನು ಬರೆದ

P-4-Books-PM-7-Ananthyatre-100



ನಿದ್ರಾಮಗ್ನವಾಗಿರುವಂಥ ಸ್ಥಿತಿಯು ಈ ಕಾರಣದಿಂದಲೇ ಆಗಿದೆ. ನಾನು ಸಂಶೋಧನೆ ಮಾಡಿ, ಇಂದ್ರಿಯಗಳನ್ನು ಮೂಲಸ್ಥಿತಿಗೆ ತರುವ ಮೂರು ಬಿಂದುಗಳನ್ನು (Points) ತಿಳಿಸಿದ್ದೇನೆ. ಅವು ಸರಿ ಇವೆಯೆಂದು ನನ್ನ ಅನುಭವಕ್ಕೆ ಬಂದಿವೆ; ನೀನೂ ಕೂಡ ಅವುಗಳನ್ನು ಅನುಭವಿಸಿ ಮನಗಂಡಿದ್ದೀಯೆ. ಈಗ, ಈ ಮೂರು ಬಿಂದುಗಳಾಚೆಗೆ ಅದೇ ನೇರದಲ್ಲಿ ಮತ್ತೂ ಮೂರು ಸೂಕ್ಷ್ಮ ಬಿಂದುಗಳಿವೆ; ಪತ್ರ ಬರೆಸುತ್ತಿದ್ದ ಹಾಗೆ ಅವು ನನ್ನ ಲಕ್ಷ್ಯದಲ್ಲಿ ಬಂದವು. ಅವುಗಳಾಚೆಗೆ ಬಿಂದುಗಳಿಲ್ಲ, ಅದರೆ ಏನೋ ಒಂದು ಇದೆ. ನೀನು ಸ್ವಾಸ್ಥ್ಯಕ್ಕೆ ಮರಳಿದ ನಂತರ ಈ ಮೂರು ಸೂಕ್ಷ್ಮ ಬಿಂದುಗಳ ಮೇಲೆ ಮತ್ತು ಮುಂದೆ ಇರುವ ವಸ್ತುವಿನ ಮೇಲೆ ಲಕ್ಷ್ಯಕೊಡುತ್ತೇನೆ. ನೀನು ಅವುಗಳನ್ನು ಕುರಿತು ಬರೆದಿದ್ದೀಯೆ; ಅದಾಗುವುದು ಪ್ರೇಮದ ಕಾರಣದಿಂದ. ನಾನಂತೂ ಪ್ರೇಮ–ತೃಷೆಯುಳ್ಳವನಾಗಿದ್ದೇನೆ, ಯಾರಾದರೂ ನನಗೆ ಪ್ರೇಮ ಕೊಟ್ಟರೆ, ನಾನು ಅವನಿಗೆ ನೂರಾರು, ಸಾಧ್ಯವಿರುವ ದೈವೀ ಸ್ಥಿತಿಗಳನ್ನು ಕೊಟ್ಟುಬಿಡಲು ಸಿದ್ಧನಿದ್ದೇನೆ. ನಾನು ವಿವಶನಾದಾಗ, ಅರ್ಥಾತ್ ನನ್ನ ಹತೋಟಿ ಮೀರಿದಾಗ, ಹಾಡು ಹಾಡಿ, ದ್ವೈತವನ್ನು ತಳೆಯುತ್ತೇನೆ; ಅದರಿಂದಾದರೂ ಏನಿಲ್ಲೆಂದರೂ ಒಂದಿಷ್ಟು ಪ್ರೇಮದ ತರಂಗಗಳು ಬರಬಹುದು ಎಂಬ ಕಾರಣದಿಂದ. 'ಸೂಕ್ಷ್ಮತೆ ಕೂಡ ಸತ್ತು ಹೋಗಲು ಪ್ರಾರಂಭಿಸಿದೆ' ಎಂದು ನೀನು ಬರೆದಿದ್ದೀಯೆ. ಲಯಾವಸ್ಥೆಯ ದೆಸೆಯಿಂದ ಇವೆಲ್ಲ ಸಂಭವಿಸುತ್ತವೆ. ವಾಸ್ತವವಾಗಿ ನನಗೆ (ನಿನ್ನಲ್ಲಿ) ಆ ಸ್ಥಿತಿ ಪ್ರತೀತವಾಗುತ್ತಿಲ್ಲ. ಸೂಕ್ಷ್ಮತೆಯೂ ಅಳಿದು ಹೋದಾಗ, 'ಆತ್ಮದ' ಅಸ್ತಿತ್ವದ ಭಾಸವೂ ಇರುವುದಿಲ್ಲ; ಎಷ್ಟರಮಟ್ಟಿಗೆ ಎಂದರೆ, ಈ ಸ್ಥಿತಿಯನ್ನು ತಲುಪಿದ ಮನುಷ್ಯ ಸಾವಿರ ವರ್ಷಕಾಲ ಇದರ ಮೇಲೆ ಧ್ಯಾನ ಮಾಡಿದರೂ 'ಆತ್ಮ'ದ ಭಾಸವಾಗುವುದಿಲ್ಲ. ಈ ಅವಸ್ಥೆ ಬಂದರೆ, ಅಭ್ಯಾಸಿಯು 'ನಿರಸನ' (ಆತ್ಮ–ನಿರಸನ)ಕ್ಕೆ ಸಿದ್ಧನಾಗಿದ್ದಾನೆ ಎಂದು ಅರ್ಥ. ಇದರಲ್ಲಿಯೂ ಅನೇಕ ಹಂತಗಳಿವೆ. ನನಗೆ ಏನಾಗಿದೆಯೋ ತಿಳಿಯದು; ನನ್ನಲ್ಲಿ, ಅಗಣಿತ ಹಂತಗಳ ವಿಚಾರ ಸ್ಥಿರವಾಗಿ ನಿಂತುಬಿಟ್ಟಿದೆ. ನನ್ನ ಈ ಲೇಖನಗಳನ್ನು ಓದಿ ಜನರು ಏನೆಂದು ಭಾವಿಸುತ್ತಾರೋ ತಿಳಿಯದು. ನನಗಂತೂ ಅದರ ತೀರ ಕಂಡಿಲ್ಲ. ಇಲ್ಲಿ, ಬಹು ಬೇಗ ಪರಮಹಂಸ, ಜೀವನ್ಮುಕ್ತ ಸ್ಥಿತಿಯನ್ನು ತಾವು ಪಡೆದರೆಂದು ಹೇಳಿಕೊಳ್ಳುವ ಜನರಿದ್ದಾರೆ. ವಿರಲವಾಗಿ, ಯಾರಿಗಾದರೂ ಆ ಸ್ಥಿತಿ ಪ್ರಾಪ್ತವಾದುದಿದ್ದರೆ, ಅವರ ಪ್ರಗತಿಯಾತ್ರೆಯನ್ನು ಅಲ್ಲಿಗೇ ಸಮಾಪ್ತಗೊಳಿಸಿಬಿಡುತ್ತಾರೆ. ಅದು ಸರಿಯೇ ಎನ್ನು. ಯಾಕೆಂದರೆ, ತನ್ನನ್ನು ತಾನೇ ಅಳಿಸಿಹಾಕಿಕೊಂಡವನೊಬ್ಬನು (ತನ್ನನ್ನು ತಾನು 'ಶೂನ್ಯ' ಗೊಳಿಸಿಕೊಂಡವನು) ದೊರೆತಾಗ ಮಾತ್ರ, ಅದಕ್ಕೂ (ಮೇಲೆ ಹೇಳಿದ ಸ್ಥಿತಿಗಿಂತ) ಮುಂದಕ್ಕೆ ಹೋಗುವುದು ಸಾಧ್ಯವಾದೀತು. ಬಂಧು, ನನಗಂತೂ ಈ ಗತಿಯೇ (ಸ್ಥಿತಿಯೇ) ಮೆಚ್ಚುಗೆಯಾಗುತ್ತದೆ. ಅದೇ 'ಪರಿಪೂರ್ಣ ಅಜ್ಞಾನ'ದ ಸ್ಥಿತಿ ಮತ್ತು 'ನಿರಸನ'ದ ಅವಸ್ಥೆ.

ಕೆಲವೊಮ್ಮೆ ಇಡೀ ಶರೀರದಲ್ಲಿ ಮತ್ತು ಕಣ್ಣುರೆಪ್ಪೆಗಳ ಮೇಲೆ ನೀರು ಚಿಮುಕಿಸಿದಂತೆ ಅನಿಸುತ್ತದೆ ಎಂದು ಬರೆದಿದ್ದೀಯೆ. ನಾನು 'ಇಸ್ನೊಫ಼ೆಲಿಯಾ'



(ಒಂದು ಕಾಯಿಲೆ)ವನ್ನು ಗುಣಪಡಿಸಲು ಆ ತೆರನಾದ ಬೈಠಕ್ (ಪ್ರಾಣಾಹುತಿ–ತವಜ್ಜೋಹ) ನೀಡುತ್ತಿರುವುದೇ ಇದಕ್ಕೆ ಕಾರಣವಾಗಿದೆ. 'ನಿನ್ನ ಹೃದಯವು ಗುರುವಿನ ಹೃದಯದೊಂದಿಗೆ ಜೋಡಿಸಲ್ಪಟ್ಟಿದೆ' ಎಂದು ನೀನು ಬರೆದುದು ಕೆಲಮಟ್ಟಿಗೆ ಸರಿ ಇದೆ, ಇನ್ನೂ ನೀನು ಆಧ್ಯಾತ್ಮಿಕತೆಯ ಬಯಲಿನಲ್ಲಿ ನಡೆಯುತ್ತಿದ್ದೀಯೆ. ಸಮುದ್ರದ ಅನ್ವೇಷಣೆಯಲ್ಲಿ ಹೃದಯವು 'ಇನ್ನೂ ಬೇಕು ಬೇಕು' ಎಂದು ತಡಪಿಸುತ್ತಿರಬೇಕಾದುದು ಆವಶ್ಯಕ, ವ್ಯಷ್ಟಿ (Individuality) ಮತ್ತು ಸಮಷ್ಟಿ (The Whole)ಗಳ ಭೇದ ಅನುಭೂತಿಗೆ ಬರದಂತಾದಾಗಲೇ ಅಭ್ಯಾಸಿಯು (ಸಾಧಕ) ತೃಪ್ತನಾಗುವುದು.

ಅಮ್ಮಾಜಿಯವರ (ಬಹೆನ್‌ಜಿಯವರ ತಾಯಿ) ಇಚ್ಛಾ ಶಕ್ತಿ ಬಲಿಷ್ಠವಾಗಿದೆ. ಅದು, ನನಗೆ ಒಂದು ರೀತಿಯ ಭಯ ಉಂಟು ಮಾಡುತ್ತದೆ. ತಮ್ಮ ನಾಲಿಗೆಯ ಮೇಲೆ ಸಾಧ್ಯವಿದ್ದಮಟ್ಟಿಗೆ ನಿಯಂತ್ರಣ ಇಟ್ಟುಕೊಳ್ಳಲು ಅವರಿಗೆ ಹೇಳು. ಅವರಿಗೆ ನನ್ನ ಪ್ರಣಾಮ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೪ **ಪತ್ರ ಸಂಖ್ಯೆ – ೪೦೪** ಷಾಹಜಹಾನಪುರ
೨೯–೦೬–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ದಿನಾಂಕ ೨೫–೬–೧೯೫೪ರ ನಿನ್ನ ಪತ್ರ ತಲುಪಿತು. 'ಒಳಗಾಗಲಿ, ಹೊರಗಾಗಲಿ, ಸ್ಪಂದನ ಅನುಭವವಾಗುತ್ತಿಲ್ಲ' ಎಂದು ಬರೆದಿದ್ದೀಯೆ. ನಾವು ಕಡಿಮೆ ಕಡಿಮೆ ಒತ್ತಡದ ದಶೆಯಲ್ಲಿ ತಲುಪಿದಾಗ ಶುದ್ಧತೆ ಹೆಚ್ಚಾಗುತ್ತ ಹೋಗುತ್ತದೆ. ಮತ್ತು ಒತ್ತಡವೂ ಕಡಿಮೆಯಾಗುತ್ತ ಹೋಗುತ್ತದೆ; ಇದೇ ಅದಕ್ಕೆ ಕಾರಣ. ನಾನು ಒಂದು ಪತ್ರದಲ್ಲಿ 'ಜೀವ' ಮತ್ತ 'ಬ್ರಹ್ಮ' ಕರಿತು ಬರೆದಂತೆ, ನಾವು ಮುಂದುವರಿಯುತ್ತ ಹೋದಹಾಗೆ ಒತ್ತಡ (Pressure) ಕಡಿಮೆಯಾಗುತ್ತ ಹೋಗುತ್ತದೆ; ಮತ್ತು ಈ ರೀತಿಯಾಗಿಯೇ ನಾವು ಕ್ರಮೇಣ 'ಬ್ರಹ್ಮಗತಿ'ಯನ್ನು ಪಡೆಯುತ್ತೇವೆ. ಬಹಳ ದೂರ (ಎತ್ತರಕ್ಕೆ) ಕ್ರಮಿಸಿದಾಗ, ಒತ್ತಡ ನಾಮಮಾತ್ರಕ್ಕೆ ಇರುತ್ತದೆ. ಅದನ್ನು ಗ್ರಹಿಸುವುದೂ ದುಃಸಾಧ್ಯ, ನಾವು ಅದಕ್ಕೂ ಆಚೆಗೆ ತಲುಪಿದಾಗ, ಅದೂ ಇರುವುದಿಲ್ಲ. ನಿನ್ನ 'ಸ್ಥಿತಿ'ಯನ್ನು ಅರ್ಥಮಾಡಿಕೊಳ್ಳಲು ಉಚಿತವೆನಿಸುವಷ್ಟನ್ನು ಮಾತ್ರ ಬರೆದಿದ್ದೇನೆ.

ನಿನ್ನ ಹಿತೈಷಿ
ರಾಮಚಂದ್ರ

* * * *

P-4-Books-PM-7-Anantyatre-101



ಕ್ರಮ ಸಂಖ್ಯೆ – ೧೦೫ **ಪತ್ರ ಸಂಖ್ಯೆ – ೪೦೬** ಷಾಹಜಹಾನಪುರ
೦೫–೦೭–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

೨೯ ಜೂನ್ ೧೯೫೪ರ ನಿನ್ನ ಪತ್ರ ಕೈಸೇರಿತು. ಅದರ ಉತ್ತರ ಬರೆಯುತ್ತಿದ್ದೇನೆ. 'ನನ್ನ ರೂಪವು ಆನಂದಮಯವಾಗುತ್ತಿದೆ' ಎಂದು ಬರೆದಿದ್ದೀಯೆ. ನಿನ್ನ ಅನಿಸಿಕೆ ಸರಿ ಇದೆ. ಆದರೆ ನಾನು ನಿನ್ನ ಸ್ಥಿತಿಯನ್ನು 'ಸರ್ವಾನಂದಮಯಿ ಸ್ಥಿತಿ'ಗೆ ತರಲು ಬಯಸುತ್ತೇನೆ. ನೀನು ನಿರೋಗಿಯಾಗುವುದರ ನಿರೀಕ್ಷೆಯಲ್ಲಿದ್ದೇನೆ. ಆ ಕಾರಣವೇ ನಿನ್ನನ್ನು ಆ ಸ್ಥಿತಿಗೆ ಮುಂದಕ್ಕೆ ಒಯ್ದಿಲ್ಲ. ನೀನು ಇರುವ ಜೀವನ್ ಮೋಕ್ಷ ದಶೆಯ ಸಂಪೂರ್ಣ ಆನಂದದ ಅನುಭವ ನಿನಗೆ ಬರುವಂತೆ ಮಾಡಲಿಚ್ಛಿಸುತ್ತೇನೆ. ಆ ಸ್ಥಿತಿಯಲ್ಲಿ ನಿನ್ನ ಮೇಲೆ ಪೂರ್ಣ ಕಣ್ಗಾವಲಿಡಬೇಕಾಗುವುದು. ಈಶ್ವರ ಕೃಪೆಯಿಂದ ಅದು ಸಾಧ್ಯವಾಗುವುದು; ಯಾಕೆಂದರೆ ಎಲ್ಲರನ್ನೂ ಕಣ್ಣಿಟ್ಟು ರಕ್ಷಿಸುತ್ತಿರುವವರು ಪೂಜ್ಯ ಲಾಲಾಜಿ ಮಹಾರಾಜರೇ ಆಗಿದ್ದಾರೆ. ಜೀವನ್ಮೋಕ್ಷ ಸ್ಥಿತಿಯನ್ನು ಪಡೆದವರು ಅನೇಕರು ಆಗಿ ಹೋಗಿರಬಹುದು; ಮತ್ತು ಅದು ಬರುವ ಪೂರ್ವದಲ್ಲಿಯೇ ಅಥವಾ ಅದು ಶುರುವಾಗುವ ಮುನ್ನವೇ ಎನ್ನಬಹುದು – ತಮ್ಮನ್ನು ತಾವೇ ಜೀವನ್ಮುಕ್ತರೆಂದು ತಿಳಿದುಕೊಂಡು ಕುಳಿತಿರಲೂಬಹುದು. ಅವರು ಅಲ್ಲಿಯವರೆಗೆ ಮಾತ್ರ ತಲುಪಿರಬಹುದು, ಮತ್ತು ಯಾರಾದರೂ ಕೊನೆಯ ವರೆಗೆ ತಲುಪಿದರೋ ಇಲ್ಲವೋ ಹೆಚ್ಚು ತಿಳಿಯದು. ಇದು ಮೋಕ್ಷದ ಅತ್ಯುಚ್ಚ ಸ್ಥಿತಿಯೆಂಬುದೇನೋ ನಿಜವೇ. ಆದರೆ ಇದರ ನಂತರ ಇನ್ನೊಂದು ಸ್ಥಿತಿ ಪ್ರಾರಂಭವಾಗುತ್ತದೆ. 'ಸ್ಪಂದನ' ಮತ್ತು 'ಒತ್ತಡ'ವನ್ನು ಕುರಿತು ಕೂಡ, ಈಗಾಗಲೇ ಬರೆದಿದ್ದೇನೆ. ಈ ಕ್ಷೇತ್ರದಲ್ಲಿ ಸ್ಪಂದನವಿಲ್ಲ. ಏನಿದೆಯೋ ಅದು ನೀರವ, ನಿಸ್ತರಂಗವಾಗುತ್ತಲಿದೆ; ಅದೂ ಕೂಡ ಒಳ್ಳೆಯ 'ಬ್ರಹ್ಮ–ಗತಿ'ಯಾಗಿದೆ. ಈ ಸ್ಥಿತಿಯನ್ನೇ ನಾನು ವಿಕಸಿತಗೊಳಿಸಿ ವೃದ್ಧಿಗೊಳಿಸುತ್ತೇನೆ.

ನೀನು ಲಯಾವಸ್ಥೆಯ ಮೂರು ಮಜಲುಗಳನ್ನು ದಾಟಿಬಿಟ್ಟಿದ್ದೀಯೆ. ನಾಲ್ಕನೆಯದಿನ್ನೂ ಪ್ರಾರಂಭವಾಗಿಲ್ಲ. ನನಗೆ ಜ್ಞಾಪಕವಿದ್ದಮಟ್ಟಿಗೆ ಒಟ್ಟು ನಾಲ್ಕು ಮಜಲುಗಳುಂಟು, ನಾಲ್ಕನೆಯ ಮಜಲು ದಾಟಲು ಬಹಳ ಸಮಯ ಬೇಕಾಗುವುದು. ಅದನ್ನು ದಾಟಿದ ನಂತರ ಏನಾಗುವುದೆಂಬುದನ್ನು ನಾನು ಅದೆಂತು ಹೇಳಲಿ ? ಪೂಜ್ಯ ಲಾಲಾಜಿಯವರು ನನಗೆ (ಲಯಾವಸ್ಥೆಯ) ನಾಲ್ಕನೆಯ ಮಜಲಿನ ಬಗ್ಗೆ ತಿಳಿಸಿದ್ದರು. ಅದಾಗಲೇ ಅವರ ಪ್ರೇರಣೆಯಿಂದ ನಾನು ಅದನ್ನು ದಾಟಿದ್ದೆ; ಆದರೆ ಅದರ ವಿಧಾನವನ್ನು ಸ್ವಪ್ನದಲ್ಲಿ ರುಜುವಾತು ಪಡಿಸಲಾಗಿತ್ತು. ಅದನ್ನು ಲಾಲಾಜಿಯವರ ಕೃಪೆಯಿಂದ ನಾನು ದಾಟಿದ ನಂತರ ಅದರ ಐದನೆಯ ಮಜಲು (ಹಂತ) ನನ್ನ ಅರಿವಿಗೆ ಬಂದಿತು. ಆ ಐದನೆಯ ಮಜಲನ್ನು ಅರಿಯುವುದಕ್ಕೆ ಉಪಾಯ (ವಿಧಾನ) 'ನಿರಸನದ ನಿರಸನವೇ' (Negation of Negation) ಆಗಿತ್ತು. ಆದರೆ ಅದನ್ನು ಮಾಡಲು ನನಗೆ ಲಾಲಾಜಿಯವರು ಅನುಮತಿ ಕೊಡಲಿಲ್ಲ, ಅಷ್ಟೇ ಅಲ್ಲ,



ಅದರಿಂದ ನನ್ನ ಲಕ್ಷ್ಯವನ್ನು ದೂರ ಸರಿಸಿದರು, ಮತ್ತು ಇದ್ದ ಸ್ಥಿತಿಯಲ್ಲಿಯೇ ನಿಲ್ಲಿಸಿದರು. 'ನೀನು ಐದನೆಯ ಮಜಲಿನ ಅನ್ವೇಷಣೆಯಲ್ಲಿದ್ದುದು ತಿಳಿದಾಗ ನಾನು ನಿನ್ನ ಸ್ಥಿತಿಯನ್ನು ತೆರೆದಿಟ್ಟೆ; ಯಾಕೆಂದರೆ ನನ್ನ ಕಾರ್ಯಕ್ಕೆ ನೀನು (ಸಂಪೂರ್ಣ ನಿಷ್ಕ್ರಿಯನಾಗಿ) ನಿರುಪಯೋಗಿಯಾಗಿ ಬಿಡುತ್ತಿದ್ದೆ' ಎಂದು ಲಾಲಾಜಿಯವರು ಹೇಳಿದರಲ್ಲದೆ, 'ನೀನು ಐದನೆಯ ಮಜಲಿನ ಅನ್ವೇಷಣೆಯನ್ನು ಆರಂಭಿಸಿರದಿದ್ದರೆ, ಇನ್ನೂ ಸ್ವಲ್ಪ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದೆ' ಎಂದೂ ಹೇಳಿದರು.

ಅಮ್ಮಾಜಿಗೆ ನನ್ನ ವಂದನೆ,

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೬ **ಪತ್ರ ಸಂಖ್ಯೆ – ೪೧೦** ಷಾಹಜಹಾನಪುರ
೨೦–೦೭–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸುಖಿಯಾಗಿರು,

ಇಂದು ಇಡೀ ರಾತ್ರಿ ಬರೆದುಕೊಳ್ಳುವವರೊಬ್ಬರು ದೊರೆತದ್ದರಿಂದ, ರಾತ್ರಿ ಒಂದು ಗಂಟೆಯ ನಂತರ ನಿನ್ನ ಪತ್ರಕ್ಕೆ ಉತ್ತರ ಬರೆಸಲು ಪ್ರಾರಂಭಿಸಿದೆ. ನಿನ್ನ ೧–೭–೫೪ ಮತ್ತ ೧೬–೭–೫೪ರ ಪತ್ರಗಳು ಬಂದಿವೆ. ಅವೆರಡೂ ಪತ್ರಗಳಿಗೆ ಉತ್ತರ ಬರೆಯುತ್ತಿದ್ದೇನೆ.

ಜನ್ಮಾಷ್ಟಮಿಗೆ ನಾನು ಅಲ್ಲಿಗೆ ಬರುವುದು ಇನ್ನೂ ನಿಶ್ಚಿತವಿಲ್ಲ. ನಾನು ಅಲ್ಲಿಗೆ ಬರುವುದನ್ನು ನಿರ್ಧರಿಸಿದರೆ ನಾಲ್ಕೈದು ದಿನ ಮುಂಚಿತವಾಗಿ ನಿನಗೆ ತಿಳಿಸುತ್ತೇನೆ. ಈಗ ಇರುವ ನಿನ್ನ 'ಸ್ಥಿತಿ'ಯ ಯಾತ್ರೆಯನ್ನು ಪೂರ್ತಿಗೊಳಿಸಿ, ಆ ಮಜಲಿನ ಸಂಪೂರ್ಣ ಆನಂದವನ್ನು ನೀನು ಪಡೆಯುವಂತೆ ಮಾಡಬೇಕೆಂದು ನಾನು ಬಯಸುತ್ತೇನೆ. ನಾನು ಹೀಗೆ ಬಯಸುತ್ತಿರುವ ಸಂದರ್ಭದಲ್ಲಿ, ನಿನ್ನ ಸ್ಥಿತಿಯು ಕ್ರಮೇಣ ತೆರೆದುಕೊಳ್ಳುತ್ತ ಹೋಗುತ್ತದೆ. ನೀನು ನಿನ್ನ ಜುಲೈಯ ಒಂದು ಪತ್ರದಲ್ಲಿ ಸರಿಯಾಗಿಯೇ ಬರೆದಿದ್ದೆ– ನಿನ್ನ ಪ್ರಗತಿಯ ಸೂತ್ರ (ಕಡಿವಾಣ) ನನ್ನ ಕೈಯಲ್ಲಿದೆ. ಅದು ನಿಯಂತ್ರಣ ತಪ್ಪಿ, ಮಿತಿಮೀರಿದ ಶೀಘ್ರತೆಯಿಂದ ನಡೆಯದಂತೆ ಹತೋಟಿಯಲ್ಲಿಡಬೇಕೆಂಬುದೇ ಅದರ ಹಿಂದಿನ ಉದ್ದೇಶ. 'ಎತ್ತರದಲ್ಲಿ ಕುಳಿತವನಿಗೆ, ಸಂಕಟ (ಅಪಾಯ) ಕೂಡ ಹೆಚ್ಚು' ಎಂದು ಯಾರೋ ಹೇಳಿದ್ದಾರೆ.

ನೀನು ತೀವ್ರ ವ್ಯಾಕುಲತೆಯ ಬಗ್ಗೆ ಬರೆದಿದ್ದೀಯೆ, ಅದು ಇನ್ನೂ ಮುಂದುವರಿಯುತ್ತಿರುತ್ತದೆ; ಅದು ವ್ಯಾಕುಲತೆಯಲ್ಲಿಯೇ ಲಯವಾಗುವ ವರೆಗೂ ಮುಂದುವರಿಯುತ್ತದೆ. ಈಗ ನೀನು ಇರುವ ಸ್ಥಿತಿಯ ಆನಂದ ಹೊರಹೊಮ್ಮುತ್ತಿದೆ (ತೆರೆದುಕೊಳ್ಳುತ್ತಿದೆ). ಆ ಸ್ಥಿತಿಯ ಎಲ್ಲ ಕಣಗಳೂ ಕರಗುತ್ತಿವೆ; ಅಭ್ಯಾಸಿಯ ಆ ಸ್ಥಿತಿಯ ಆನಂದವನ್ನು ತಾಳಿಕೊಳ್ಳಲು ಸಾಧ್ಯವಾಗುವ ಮಟ್ಟಿಗೆ ಅವು ತೆರೆದುಕೊಳ್ಳುತ್ತವೆ.

ನೀನು ಅಂತರ್ಮುಖಿಯಾಗಿರುವುದು ಮತ್ತು ಆ ಸ್ಥಿತಿಯಲ್ಲಿ ಮಗ್ನವಾಗಿರುವುದು, ಮತ್ತು ನಿನ್ನ ಪ್ರಗತಿಯ ಬಗ್ಗೆ ನೀನು ಜಾಗ್ರತಳಾಗಿರುವುದು– ಇವೆಲ್ಲವೂ ನಿನ್ನ ಮುಂದಿನ ಪ್ರಗತಿಗೆ ಬೇಕಾದಷ್ಟಾಯಿತು. ಆಧ್ಯಾತ್ಮಿಕ ಉನ್ನತಿಯು ನಿನ್ನದೇ ಆಗಿದೆ; ನೀನು ಬಯಸಿದ್ದಷ್ಟೂ ಪ್ರಗತಿ ಹೊಂದು.

ನಿನ್ನ ಅನುಭವಕ್ಕೋಸ್ಕರ ಒಂದು ಮಾತು ಬರೆಯುತ್ತೇನೆ. ಮಳೆಯಲ್ಲಿ ವ್ಯತ್ಯಾಸವಾಗಿತ್ತು; ಮಳೆ ಬೀಳಲು ಇನ್ನೂ ತಡವಾಗುವುದೆಂದು ತೋರುತ್ತಿತ್ತು. ನಾನು ಚಿಂತಾಕುಲನಾಗಿದ್ದೆ, ನಿಸರ್ಗವನ್ನು ಮುಟ್ಟಿ (ಪರೀಕ್ಷಿಸಿ) ನೋಡಿದರೆ ಮಳೆಬರುವಂತೆ ಮಾಡುವ ಕೆಲಸಕ್ಕೆ ಮನಸ್ಸು ಬರುತ್ತಿರಲಿಲ್ಲ. ಸ್ವಲ್ಪ ತರ್ಕಿಸಿ ಮತ್ತು ನನ್ನ ಅಧಿಕಾರದ ನೆನಪು ಮಾಡಿ ಒತ್ತಾಯದಿಂದಲೇ ಒಪ್ಪಿಗೆ ಪಡೆದೆ (ಮಳೆ ತರಿಸಲು). ಆದರೆ ಮಳೆಗೆ ಬೇಕಾದ ಸಾಮಗ್ರಿ (ಮೂಲವಸ್ತು) ಇರಲಿಲ್ಲ. ನನ್ನ ಶ್ರಮ ಉಳಿಸಿಕೊಳ್ಳಲೋಸುಗ ನಾನು ಅತ್ರಿ ಋಷಿಗೆ ಈ ಕಾರ್ಯ ಒಪ್ಪಿಸಿದೆ. ಆದ್ದರಿಂದ ಅವರು ಸಮುದ್ರದಲ್ಲಿ ಮನ್ಸೂನನ್ನು ಎಬ್ಬಿಸುವ ಕೆಲಸದಲ್ಲಿ ನಿರತರಾದರು. ಮೂರನೆಯ ದಿನ ಮಳೆ ಬಂತು– ಅವರ ಶಕ್ತಿ–ಸಾಮರ್ಥ್ಯ ಮತ್ತು ಕಾರ್ಯರೀತಿಯ ಅಂದಾಜು ನನಗೆ ಸಿಕ್ಕಿತು. ಅತ್ರಿ ಋಷಿಗಳು ಇನ್ನೂ ಜೀವಿಸಿದ್ದಾರೆ, ಮತ್ತು ಗಂಗಾ–ಯಮುನಾ ನದಿಗಳ ನಡುವಿನ ಸ್ಥಳದಲ್ಲಿ ಉತ್ತರಕ್ಕೆ ಅವರ ಉಪಸ್ಥಿತಿಯಿರುವುದು ತಿಳಿಯುತ್ತದೆ. ಅವರ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಮುಖತಃ ಹೇಳುತ್ತೇನೆ. ನಾವು ಮುಂದಿನ ಸಲ ಭೆಟ್ಟಿಯಾದಾಗ ಕೇಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೦೭ **ಪತ್ರ ಸಂಖ್ಯೆ – ೪೧೪** ಷಾಹಜಹಾನಪುರ
೩೧–೦೭–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಎರಡು ಪತ್ರಗಳು ಕೈಸೇರಿದವು. ದಿ. ೨೨–೭–೧೯೫೪ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. 'ಸದ್ಗುರುವಿನ ವಿಚಾರದಲ್ಲಿದ್ದಾಗ ಆ ಮಹಿಮೆಯು (Greatness) ತನ್ನಿಂದ ತಾನೆ ಪ್ರತೀತವಾಗುತ್ತದೆ' ಎಂದು ಮಹಿಮೆಯ (greatness) ಬಗ್ಗೆ ಬರೆದಿದ್ದೀಯೆ. ಇದು ತುಂಬ ಒಳ್ಳೆಯ ಸಂಗತಿ. ಇದಕ್ಕೆ ಸರಿಯಾದ ಉತ್ತರವಿಷ್ಟೇ ಅದೀತು : ಈಶ್ವರನಲ್ಲಿ (ಅಭ್ಯಾಸಿಯ) ಲಯಾವಸ್ಥೆ ವರ್ಧಿಸುತ್ತ ಹೋದಂತೆ 'ಅವನಲ್ಲಿ'ರುವುದೆಲ್ಲವೂ ಅಭ್ಯಾಸಿಯಲ್ಲಿ ಇಳಿದು ಬರುತ್ತದೆ. ಯಾರ ಮೇಲೆ ನೀನು ಧ್ಯಾನ ಮಾಡುತ್ತೀಯೋ ಅವನ ಗುಣಗಳು ನಿನ್ನಲ್ಲಿಯೂ ಪ್ರಕಟಗೊಳ್ಳುತ್ತವೆ. ಪರಿಪೂರ್ಣನಲ್ಲದ ಗುರುವಿನ ಮೇಲೆ ಧ್ಯಾನ ಮಾಡಕೂಡದು, ಎಂಬುದಕ್ಕೆ ಇದೇ ಕಾರಣ.



'ದೃಷ್ಟಿಯೇ ಆತ್ಮ ಎಂದು ತೋರಿ ಬರುತ್ತದೆ; ಅದೇ ಲಕ್ಷ್ಯವೂ ಕೂಡ. ಆತ್ಮವು ದೃಷ್ಟಿಯಲ್ಲಿಯೇ ಸಮಾವಿಷ್ಟಗೊಂಡಿದೆ' ಎಂದು ಬರೆದಿದ್ದೀಯೆ. ವ್ಯಕ್ತಿಯು ತನಗಿಂತ ತಾನೇ ಮೇಲೆ ಹೋದಾಗ, ದೃಷ್ಟಿಯ (ಕಣ್ಣುಗಳು) ದೃಶ್ಯವೂ ಬದಲಾಗುತ್ತದೆ. ಅದೇ ದೃಷ್ಟಿಯು ಸ್ಥೂಲತೆಯಿಂದ ಸೂಕ್ಷ್ಮತೆಯಾಗಿ ಪರಿವರ್ತಿತವಾಗುತ್ತದೆ. ಅದನ್ನೇ 'ಸೂರತ್' ಎಂದೂ ಕರೆಯಲಾಗಿದೆ. ಆದರೆ ಎಲ್ಲಿಯವರೆಗೆ ದೃಷ್ಟಿ (ಕಣ್ಣು) ಇರುವುದೋ, ಅಲ್ಲಿಯವರೆಗೂ ಅವನನ್ನು ಅಪೂರ್ಣ ಎಂದೇ ಹೇಳಬೇಕು. ನಾವು ಎಲ್ಲವನ್ನೂ ದೈವೀ ಸ್ಥಿತಿಯಲ್ಲಿ ಕೊಂಡೊಯ್ಯಬೇಕಿದೆ. ಇದು ತುಂಬಾ ಉನ್ನತವಾದ ಮಜಲು ಇದೊಂದು ರಹಸ್ಯವೂ ಹೌದು.

ವೇದಗಳ ಬೆಳವಣಿಗೆ ಮುಂದಕ್ಕೆ ಇದುವರೆಗೆ ಆಗಿಲ್ಲ. ಯಾಕೆಂದರೆ ಅವರು ಅದ್ವೈತದವರೆಗೆ ಸಾಗಿ, ಅಲ್ಲಿಗೆ ನಿಂತರು, ಅದೇ ಆತ್ಯಂತಿಕ ಸ್ಥಿತಿ ಎಂದೆನ್ನಲಾಯಿತು. ಅದಕ್ಕಿಂತಲೂ ಆಚೆಗೆ ಏನೂ ಇರಲಾರದೆ ? ಅದೂ ಅದ್ವೈತದ ಸ್ಥಿತಿಯಲ್ಲಿ (ಅವಸ್ಥೆಯಲ್ಲಿ)ಯೇ ಇರುವುದು ನಿಶ್ಚಿತ. ನಾನು ಮೇಲೆ ವರ್ಣಿಸಿದ ಸ್ಥಿತಿಯಲ್ಲಿ ಬಹು ಮೇಲಕ್ಕೆ ಹೋಗಬೇಕಾಗುತ್ತದೆ. ವೇದಗಳಲ್ಲಿ 'ನೇತಿ', 'ನೇತಿ' ಎಂದು ಸಾರಿ ಸಾರಿ ಹೇಳಲಾಗಿದೆ. ಅಂದರೆ, 'ಇನ್ನೂ ಮುಂದೆ ಏನೋ ಉಂಟು' ಎಂಬುದನ್ನು ಇದು ಬೊಟ್ಟಿಟ್ಟು ಸೂಚಿಸುತ್ತದೆ. ವೇದದ (ಈ) ಅಂತಿಮ ಘೋಷಣೆಯನ್ನು, ಕೊನೆಯ ಗಡಿ (ಪರಿಮಿತಿ) ಎಂದು ಜನರು ಏಕೆ ತಿಳಿಯುತ್ತಾರೋ ನನಗೆ ಅರ್ಥವಾಗುವುದಿಲ್ಲ. ಪ್ರಿಯ ಪುತ್ರಿ, ನಾನು ಪಣವಿಟ್ಟು ಹೇಳುತ್ತೇನೆ– ಇನ್ನೂ ಮುಂದಿನ ಸಾಧ್ಯತೆ ಇದೆ. ಜನರು ಇದನ್ನು ಅಹಂಕಾರವೆಂದು ಭಾವಿಸಲಿ, ಅಥವಾ ಇನ್ನೇನನ್ನು ಬೇಕಾದರೂ ಹೇಳಲಿ; ಇದು (ನಾನು ಹೇಳುವುದು) ಸತ್ಯವೇ ಇದೆ; ಅದನ್ನು ಹೇಳುವ ಧೈರ್ಯವೂ ನನ್ನಲ್ಲಿ ಖಂಡಿತ ಬರುತ್ತದೆ. ಒಂದು ವೇಳೆ ನನಗೆ ಮತ್ತು ತಾಲೀಮು (ಆಧ್ಯಾತ್ಮಿಕ ಶಿಕ್ಷಣ) ಪಡೆಯುವವರಿಗೆ ಅಷ್ಟು ಆಯುಷ್ಯವಿರುವುದಾದರೆ, ಅತ್ಯಂತ ಚಿಕ್ಕ ಬಿಂದುವನ್ನು ಕುರಿತು ಕೂಡ ನಾನು ಸಾವಿರ ವರ್ಷಗಳ ವರೆಗೆ ತರಬೇತಿ ಕೊಡಬಲ್ಲೆ. ನಾನೇನೋ ಚಿಕ್ಕದಾದುದಕ್ಕಿಂತ ಚಿಕ್ಕ ಬಿಂದು ಎಂದು ಹೇಳಿದೆ. ಮಾನವನಲ್ಲಿ ಅಂಥ ಕೋಟ್ಯಂತರ ಬಿಂದುಗಳುಂಟು; ಅಂಥ ಚಿಕ್ಕ ಬಿಂದುವಿನಲ್ಲಿಯೂ ಏನೆಲ್ಲ ಉಂಟು ಎಂಬ ಅದ್ಭುತವನ್ನು ಜನರು ನೋಡಿದರೆ ಅವರು ಚಕಿತರಾಗಿ ಹೋಗಬಹುದು. ಇದನ್ನು ಇತರರೂ ಯೋಚಿಸಲಿಕ್ಕಿದೆ ಮತ್ತು ಯಾವುದನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿಯಬಹುದೋ ಅದನ್ನು ಮಾತ್ರವೇ ಅರಿಯಲು ಎಲ್ಲರೂ ಪ್ರಯತ್ನಿಸಬೇಕೆಂಬ ಆದೇಶವೂ ಇದೆ. ಪುಸ್ತಕದ ದೇವರನ್ನು ಎಲ್ಲರೂ ನೋಡುತ್ತಾರೆ. ಆದರೆ ಜೀವಂತ ದೇವರನ್ನು ನೋಡಲು ಪ್ರಯತ್ನಿಸುವ ಯಾವನಾದರೂ ವಿಶೇಷ ಅಥವಾ ಅಪರೂಪದ ವ್ಯಕ್ತಿ ಪ್ರಾಯಶಃ ಇದ್ದರೂ ಇರಬಹುದು. ವಾಸ್ತವದಲ್ಲಿ ಯಾವನು (ಈಶ್ವರ)

P-4-Books-PM-7-Anantyatre-103



ಇರುವನೋ (ಆ ನಿಜವಾದ ದೇವರು) ಅವನು ಈ ಎರಡೂ ದೇವರ ಪ್ರಾಣವಾಗಿದ್ದಾನೆ. ಯಾವನು ತನ್ನನ್ನು ಅವನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವನೋ ಅವನು ಮಾತ್ರ ಈ (ನಿಜವಾದ) ದೇವರನ್ನು ನೋಡಲು ಸಾಧ್ಯ. ಎಷ್ಟು ಹೆಚ್ಚು ಅವನಿಗೆ ಅಂಟಿಕೊಂಡು (ಸಂಲಗ್ನನಾಗಿ) ಇರುವನೋ ಅಷ್ಟೇ ಹೆಚ್ಚು ಪ್ರಮಾಣದಲ್ಲಿ ಅವನು ಯಶಸ್ವಿಯಾಗುತ್ತಾನೆ. ಅಂಟಿಕೊಂಡಿರುವುದು ಎಂದರೇನು ? ತನ್ನ ಅಸ್ಮಿತೆಯನ್ನೇ (ಸತ್ತೆಯನ್ನೇ) ಮರೆತುಬಿಡುವ ಮಟ್ಟಿಗೆ ಅವನಲ್ಲಿ ಲಯವಾಗುವುದು.'ಸತ್ತೆ' ಎಂಬುದನ್ನು ನಾನು ಇಲ್ಲಿ ಯಾವ ಅರ್ಥದಲ್ಲಿ ಬಳಸಿದ್ದೇನೆಂದರೆ, ವಿಚಾರವು 'ಇರುವಿಕೆ' (Being) ಮತ್ತು 'ಇಲ್ಲದಿರುವಿಕೆ' (Non-being) ಇವುಗಳಲ್ಲಿ ಯಾವುದರ ಮೇಲೆಯೂ ನೆಲೆಸಿರದೆ, ಬದಲಿಗೆ, ಅವನು ಅವೆರಡನ್ನೂ ಮರೆತುಬಿಡಬೇಕು ಎಂಬುದೇ ಆಗಿದೆ.

'ಮರಳು – ಮೈದಾನ'ದ ಬಗ್ಗೆ ನೀನು ಬರೆದಿರುವಿಯಲ್ಲ; ಅದು ಬಹಳ ಉತ್ತಮ ಸ್ಥಿತಿಯನ್ನು ಕಣ್ಮುಂದೆ ತಂದು ನಿಲ್ಲಿಸಿತು. ನಾನು ಅನೇಕ ಬಾರಿ ಹೇಳಿದೆ 'ಬಂಜರು–ಬಯಲು' (ಚಟಿಯಲ್ ಮೈದಾನ್) ಎಂಬುದರ ಸೂಕ್ಷ್ಮ ಗತಿ ಇದು ಅಥವಾ, ಏನೂ ಬೆಳೆದಿರದ ಪಾಳುಭೂಮಿಯ ಸ್ವರೂಪದ್ದಾಗಿದೆ. ಈಶ್ವರೇಚ್ಛೆಯಿದ್ದರೆ, ಇದಾದ ನಂತರ ಇನ್ನೂ ಹೆಚ್ಚು ಪಾಳು ಬಿದ್ದ (ಖಾಲಿಯಾಗಿದ್ದ) ಬಯಲು ಮುಂದೆ ಬರುವುದು. ಆ ಸ್ಥಿತಿ ಬಂದಾಗ ಅದನ್ನು ನೀನು ನೋಡುವಿಯಂತೆ.

ನೀನು ಬರೆದ, ಜುಲೈ ೨೫ರ ಪತ್ರ ಶ್ರದ್ಧೆ ಮತ್ತು ಭಕ್ತಿಗಳ ರುಜುವಾತು ಕೊಡುತ್ತದೆ. ಉತ್ತರ ಕೊಡುವಂಥ ಮತ್ತಾವ ವಿಷಯ ಅದರಲ್ಲಿಲ್ಲ.

೩೧–೭–೧೯೫೪ರ ರಾತ್ರಿ ೧೨–೧೦ರ ಹೊತ್ತಿಗೆ, ನಿನ್ನ ಮುನ್ನಡೆಯುವಿಕೆ ಒಮ್ಮೆಲೆ ಸ್ತಬ್ಧವಾದಂತೆನಿಸಿತು, ಮತ್ತು ನಿನ್ನ ಸ್ಥಿತಿಯು ಮೃತ್ಯುಹೊಂದಿದ ವ್ಯಕ್ತಿಯಂತೆ ಇರುವದು ಗಮನಕ್ಕೆ ಬಂದಿತು. ಆದರೆ ಐದು ನಿಮಿಷ ನಂತರ ನೋಡಿದಾಗ ಮತ್ತೆ ನಿನ್ನ ಮುಂದುವರಿಕೆ ಶುರು ಆಗಿತ್ತು. ಆ ಕ್ಷೇತ್ರ ಬಲಭಾಗದ ಒಂದು ಮೂಲೆಯಲ್ಲಿದೆ. ನಡುರಾತ್ರಿಯಾಗಿದ್ದು ನನ್ನ ಮೆದುಳೂ ದಣಿದಿತ್ತಾದ್ದರಿಂದ, (ನಿನ್ನ) ಸ್ಥಿತಿಯು ಅಷ್ಟು ಸರಿಯಾಗಿ ಕಣ್ಣೆದುರಿಗೆ ಬರಲಿಲ್ಲ. ನಾನು ಯೋಚಿಸಿ, ನಂತರ ಈ ಕುರಿತು ಬರೆಯುತ್ತೇನೆ. ಮತ್ತು ನೀನೂ ವಿಚಾರಮಾಡಿ, ಬರೆದು ತಿಳಿಸು. ಮೃತ–ಸದೃಶ ಅವಸ್ಥೆ ಈಗ ಇದ್ದಿರಲಾರದು.

ಅಮ್ಮಾಜಿಗೆ ಪ್ರಣಾಮ.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೦೮ **ಪತ್ರ ಸಂಖ್ಯೆ – ೪೧೮** ಶಾಹಜಹಾನಪುರ
೧೮–೦೮–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಾನು, ನಿನ್ನ ೨೫ ಜುಲೈ ೧೯೫೪ರ ಪತ್ರಕ್ಕೆ ಉತ್ತರ ಬರೆಯಿಸುತ್ತಿದ್ದೇನೆ. ನೀನು ಪತ್ರದ ಎರಡನೆಯ ಪರಿಚ್ಛೇದದಲ್ಲಿ ಬಹಳಷ್ಟು ವಿಷಯಗಳನ್ನು ಬರೆದಿದ್ದೀಯೆ, 'ಸದ್ಗುರುವಿನ ಸ್ಮರಣೆ ಯಾವಾಗಲೂ ಚಿತ್ತದಲ್ಲಿರುತ್ತದೆ, ಮತ್ತು ಆ ಸ್ಮರಣೆ ನನ್ನಲ್ಲಿ ಸ್ಪಂದನ ಉಂಟುಮಾಡುತ್ತದೆ' ಎಂದು ಒಂದು ಕಡೆ ಬರೆದಿದ್ದೀಯೆ. ಲಯಾವಸ್ಥೆಯು ವೃದ್ಧಿಯಾದಾಗ 'ಪ್ರಭು' ಮತ್ತು 'ಸೇವಕ'ರ ನಡುವಿನ ಸಂಬಂಧವೂ ಗಾಢವಾಗುತ್ತದೆ. ಮತ್ತು ಅಭ್ಯಾಸಿಯು 'ಖಾಲಿ'ಗೊಳ್ಳತೊಡಗಿದಾಗ, 'ಪ್ರಭು' (ಸದ್ಗುರು)ವಿನಲ್ಲಿ ಏನಿದೆಯೋ ಅದು ಅಭ್ಯಾಸಿಯಲ್ಲಿಯೂ ಇಳಿದು ಬರತೊಡಗುತ್ತದೆ. ಬರು–ಬರುತ್ತ, ಅವರಿಬ್ಬರ ಸ್ಥಿತಿಯೂ ಹೆಚ್ಚು ಕಡಿಮೆ ಸಮ–ಸಮನಾಗಿಬಿಡುತ್ತದೆ. ಇದನ್ನು ಲಯಾವಸ್ಥೆಯ ಉತ್ತಮ ಸ್ಥಿತಿ ಎಂದು ಕರೆಯಲಾಗಿದೆ. ನಿನ್ನಲ್ಲಿ ಈ ಅವಸ್ಥೆ ಶುರುವಾಗಿದೆ. ಅದಕ್ಕೋಸ್ಕರ ಈಶ್ವರನಿಗೆ ನಾನು ಋಣಿಯಾಗಿದ್ದೇನೆ. ನನಗೂ ನನ್ನ ಅಭ್ಯಾಸ ಕಾಲದಲ್ಲಿ ಹೀಗೆಯೇ ಅನುಭವಕ್ಕೆ ಬಂದಿತ್ತು. ವಾಸ್ತವವಾಗಿ, 'ಭಕ್ತಿ' ಎಂದು ಕರೆಯುವುದು ಇದನ್ನೇ; ಅಂದರೆ, ಪ್ರಭುವಿನ ಸ್ಮರಣೆಯಲ್ಲಿ, ತನ್ನ ಪರಿವೆಯೇ ಇಲ್ಲದಾಗುವುದು. ನಮ್ಮ ಪರಿವೆಯೇ ಇಲ್ಲದಿರುವುದು ಎಂದರೆ, ನಮ್ಮ ಬಳಿ ಇರುವುದೆಲ್ಲವೂ ಲುಪ್ತವಾಗಿ ಹೋಗುವುದು. ಮತ್ತು ನಮ್ಮ ಸ್ಥಾನದಲ್ಲಿ ಪ್ರಭು (ಸದ್ಗುರು)ವೇ ಉಳಿಯುತ್ತಾನೆ. ಅದು ಯಾವಾಗ ? ನಮ್ಮ ಎಚ್ಚರದ ಅರಿವೂ ಹೊರಟು ಹೋದಾಗ; ಆದರೆ, ಆಗ ಒಂದು ಉತ್ತಮ ಸ್ಥಿತಿ ಉಂಟಾಗುತ್ತದೆ, ಆ ಸಮಯದಲ್ಲಿ ಮೈಮರೆಯುವಿಕೆಯಲ್ಲಿಯೂ ಒಂದು (ರೀತಿಯ) ಎಚ್ಚರ (ಪ್ರಜ್ಞೆ) ಉಂಟಾಗುತ್ತದೆ. (ಅಪ್ರಜ್ಞೆಯಲ್ಲಿರುವ ಈ ಪ್ರಜ್ಞೆ ವಿಶೇಷ ಪ್ರಕಾರದ್ದಾಗಿದೆ. ಆದರೆ ಅದರ ಅಂತಿಮ ಸೀಮೆ ಬಹಳ ನಂತರ ಬರುತ್ತದೆ). ಅದನ್ನೇ ಒಂದು ಪ್ರಕಾರದ 'ಸ್ಮರಣೆ' ಎಂದು ತಿಳಿದುಕೊಳ್ಳಬಹುದು. ಅದು ಸ್ಮರಣಮಾತ್ರವೆನ್ನಬಹುದೆ ? ಅದುವೇ ಜೀವನದ ವಾಸ್ತವಸ್ಥಿತಿಯಾಗುತ್ತದೆ. ಅನಂತರ ಆಗುವುದೇನು ? ತನ್ನ ಸ್ಮರಣೆಯೂ ಇಲ್ಲ, ಪ್ರಭುವಿನ ಸ್ಮರಣೆಯೂ ಇಲ್ಲ ! ನಾನು ಪತ್ರಗಳಲ್ಲಿ ಬಹಳ ಮುಂದಿನ ವಿಷಯಗಳನ್ನೂ ಬರೆದು ಬಿಡುತ್ತೇನೆ. 'ನೀವು ಏನನ್ನು ತಿಳಿಸುತ್ತೀರೋ, ಅದನ್ನೇ (ಅಷ್ಟು ಮಾತ್ರವೇ) ತಿಳಿದುಕೊಳ್ಳುತ್ತೇನೆ' ಎಂದು ನೀನು ಬರೆದಿದ್ದೀಯೆ. ನೀನು ಆತ್ಮ ಸಮರ್ಪಣವನ್ನು ಪೂರ್ಣವಾಗಿ ಮಾಡಿದ್ದೀಯೆ ಎಂದು ಇದರ ಅರ್ಥ. ಮತ್ತೆ, 'ಮನನ ಶಕ್ತಿ ನನ್ನಲ್ಲಿ ಏನಿದೆಯೋ ಅದನ್ನು ಪ್ರಭುವು ತನ್ನತ್ತ ಸೆಳೆದು ಕೊಂಡುಬಿಟ್ಟಿದ್ದಾನೆ'– ಎಂದು ಕೂಡ ಬರೆದಿದ್ದೀಯೆ. ಇದರ ಅರ್ಥ ಇಷ್ಟೆ: ಈಶ್ವರೇಚ್ಛೆಯಿದ್ದರೆ, ಕಬೀರರು ಹೇಳಿದಂತೆ ಈ ಸ್ಥಿತಿಯೂ ಉಂಟಾಗುವುದು :

**'ಮನ ಥಿರ, ಚಿತ್ತ ಥಿರ, ಸೂರತ ಸ್ಥಿರ, ಥಿರ ಭಯಾ ಸಕಲ ಶರೀರ**
**ತಾಕೇ ಪೀಛೇ ಹರಿ ಫಿರೈ, ಕಹತ ಕಬೀರ ಕಬೀರ'**

P-4-Books-PM-7-Anantyatre-104



(ಚಿತ್ತ–ಮನಗಳಲುಗವು, ಧ್ಯಾನ ಸ್ಥಿರ, ಸ್ಥಿರವಾಯ್ತು ಸಕಲ ತನುವು
ಕಬೀರ, ಕಬೀರ ಎನ್ನುತ ತಿರುಗಿದ, ಅವನ ಹಿಂದೆ ಹರಿ ತಾನು ॥)

'ನನ್ನ ಸ್ಪಂದನೆ (ಅಲೆ), ಪ್ರಭುವಿನ ಸ್ಪಂದನವೇ ಆಗಿದೆ' ಎಂದೂ ಬರೆದಿದ್ದೀಯೆ, ಇದಂತೂ ಬಹಳೇ ಉತ್ತಮ ಸ್ಥಿತಿ, ಇದನ್ನು ಸೂಫಿ ಪದ್ಧತಿಯಲ್ಲಿ 'ತಸ್ಲೀಮ್ ಬರಜಾ' ಎಂದು ಕರೆಯುತ್ತಾರೆ.

ಈಗ ನಿನ್ನ ಅಗಸ್ಟ್ ೫ರ, ನನಗೆ ೧೪ರಂದು ದೊರಕಿದ ಪೋಸ್ಟ ಕಾರ್ಡಿಗೆ ಉತ್ತರ ಬರೆಯುತ್ತೇನೆ. ನಾನು ಹಿಂದೊಂದು ಪತ್ರದಲ್ಲಿ, ರಾತ್ರಿ ೧೨–೧೦ಕ್ಕೆ, ನಿನ್ನಲ್ಲಿ ಮೃತಾವಸ್ಥೆ ಅನುಭವವಾಯಿತು, ಮತ್ತು ನಿನ್ನ ಶಿರಸ್ಸಿನಿಂದ ಒಂದು ಶಕ್ತಿಯು ಎಡಗಡೆಗೆ ತನ್ನ ಸ್ಥಾನದಿಂದ ಇಳಿದು ಬರುತ್ತಿರುವುದು ತಿಳಿಯಿತು ಎಂದು ಬರೆದಿದ್ದೆಯಲ್ಲ; ಆ ಪತ್ರದ ಉತ್ತರ ಇದು. ಯಾವುದೇ ಅಭ್ಯಾಸಿಯಲ್ಲಿ ಸ್ವತಃ ಪ್ರಗತಿಯಾಗುವ ಶಕ್ತಿಯಿರುವುದನ್ನು ನಾನು ಕಂಡಿಲ್ಲ; ಇಲ್ಲಿ ನಾನು 'ಗುರು' ಶಬ್ದವನ್ನು ಪ್ರಯೋಗಿಸಲು ಬಯಸುತ್ತೇನೆ. ಗುರುವಿನ ಶಕ್ತಿಯೊಂದೇ ನಮ್ಮನ್ನು (ಅಭ್ಯಾಸಿಯನ್ನು) ಮುನ್ನಡೆಸಬಲ್ಲದು ಎಂಬ ವಿಚಾರ ನನ್ನಲ್ಲಿ ಉಂಟಾಗಿಲ್ಲವಾದರೂ, ಈಗ ಗುರು ಯಾರು ? ಅದು ಲಾಲಾಜಿಯವರೇ ಮತ್ತು ಅವರ ಶಕ್ತಿಯೇ. ಒಂದು ಆಘಾತ (ನೂಕು) ಕೊಟ್ಟರೆ, ಈ ಮಜಲಿನಿಂದ ನೀನು ಮುಂದೆ ದಾಟುತ್ತೀಯೆ. ಈಗ ಯಾಕೆ ಶಕ್ತಿಯು ಎಡಗಡೆಯಿಂದ ಇಳಿದು ಬರುವ ಅನುಭವವಾಯಿತು ಎಂಬ ಪ್ರಶ್ನೆ. ಅದನ್ನು ನೀನು ಹೀಗೆ ತಿಳಿಯಬಹುದು.... ನದಿಯಲ್ಲಿ ಮಹಾಪೂರ ಬಂದಾಗ, ನೀರು ನಾಲೆಗಳಲ್ಲಿ, ಉಪನದಿಗಳಲ್ಲಿ, ಎಲ್ಲೆಲ್ಲಿ ಸ್ಥಳವಿದೆಯೋ ಅಲ್ಲಿ ತುಂಬಿಕೊಳ್ಳುತ್ತದೆ. ನೀನು ಕ್ರಮಶಃ 'ಜೀವನ್ಮೋಕ್ಷ' ದಶೆಯ ಯಾತ್ರೆಯನ್ನು ಪೂರೈಸಿದ್ದೆ; ಆದರೆ ಅದರಲ್ಲಿ ಲಯಹೊಂದುವುದು ಇನ್ನೂ ಉಳಿದಿದೆ. ನಿನ್ನ ಸ್ವಾಸ್ಥ್ಯ ಸರಿ ಇಲ್ಲದ ಕಾರಣ, ನೀನು ಈ ದಶೆಯ ಆನಂದವನ್ನು ಮತ್ತೊಮ್ಮೆ ಸವಿಯಲಿ ಎಂದು ನಾನು ಬಯಸುತ್ತೇನೆ. ವೇದದ ಗುಲಾಮರೆನಿಸಿಕೊಂಡವರು, ಆ ಗುಲಾಮತನದ ಆವರಣವನ್ನು ತೆಗೆದುಹಾಕುವ ವರೆಗೆ, ಈ ಸ್ಥಿತಿಯನ್ನು ಪಡೆಯಲಾರರು. ಯಾರು ತನ್ನನ್ನೇ ಬೇರೊಬ್ಬರಿಗೆ ಮಾರಿಕೊಂಡು (ಸಮರ್ಪಿಸಿಕೊಂಡು) ಬಿಟ್ಟಿರುವನೋ (ಸದ್ಗುರು), ಅವನಿಗೆ ಯಾವುದೇ ಮೂಲ್ಯಕ್ಕೆ ಆಶೆಪಡದೆ ತನ್ನನ್ನು ಯಾವನು ಮಾರಿಕೊಳ್ಳುವನೋ (ಅಭ್ಯಾಸಿ) ಅವನ ಭಾಗ್ಯವಿದು.

ಅಗಸ್ಟ್ ೪ರ ನಿನ್ನ ಪತ್ರಕ್ಕೆ ದೀರ್ಘ (ಸವಿವರ) ಉತ್ತರವನ್ನು ನಾನು ಕೊಡುತ್ತಿಲ್ಲ. 'ಈಶ್ವರನ ನಾಮ ಕೂಡ ಕಸಿವಿಸಿ ಮತ್ತು ಉದ್ವೇಗ ಉಂಟು ಮಾಡುತ್ತಿದೆ; ಎಂದು ನೀನು ಬರೆದಿದ್ದೀಯೆ. ಅವನ ಧ್ಯಾನ ಅಥವಾ ವಿಚಾರ ಮಾಡುವಾಗ 'ದ್ವೈತ' ಉಂಟಾಗುತ್ತದೆ. ಆದರೆ ನಿನ್ನ ಸ್ಥಿತಿ 'ಸಮರಸ ಸ್ಥಿತಿ'ಯಾಗಿದೆ; ಆದುದರಿಂದ ನಿನ್ನಲ್ಲಿ ಉದ್ವೇಗ ಉಂಟಾಗುತ್ತದೆ.

'ಪ್ರತಿಯೊಬ್ಬನ ಸ್ಥಿತಿಯೂ ನಿನ್ನ ಸ್ಥಿತಿಯಂತೆಯೇ ಇದೆಯೆಂದು ಭಾಸವಾಗುತ್ತದೆ' ಎಂದು ಬರೆದಿದ್ದೀಯೆ. ನೀನು ಬಹುತೇಕ 'ಆತ್ಮಮಯಿ' ಎಂದು



ಇದು ತೋರಿಸುತ್ತದೆ. (ಅಂದರೆ ನೀನು 'ಆತ್ಮ'ದ ಅವಸ್ಥೆಯಲ್ಲಿ ಲೀನಳಾಗಿದ್ದೀಯೆ). ಆದುದರಿಂದ ನೀನು ಅದನ್ನೇ ಎಲ್ಲರಲ್ಲಿಯೂ ಕಾಣುತ್ತಿದ್ದೀಯೆ.

ಈಗ, ನಿನ್ನ ಅಗಸ್ಟ್ ೧೦ರ ಪತ್ರಕ್ಕೆ ಉತ್ತರ ಕೊಡುತ್ತಿದ್ದೇನೆ. ಈ ಪತ್ರದ ಎರಡನೆಯ ಪರಿಚ್ಛೇದಕ್ಕೆ, ನಿನ್ನ ಅಗಸ್ಟ್ ೫ರ ಪತ್ರಕ್ಕೆ ಬರೆದುದರಲ್ಲಿ ಉತ್ತರ ಕೊಟ್ಟಿದ್ದೇನೆ. ಅದರಲ್ಲಿ ನೀನು 'ನಾನು ನಿಜಕ್ಕೂ ನನ್ನ ಪ್ರಭುವನ್ನು (ಸದ್ಗುರುವನ್ನು) ಪಡೆಯುವೆನೆ ?' ಎಂದು ಬರೆದಿದ್ದೀಯೆ. ಇದನ್ನು ಓದಿ ನನಗೆ ನಗು ಬಂದಿತು. ಒಬ್ಬ ಕವಿಯ ಪದ್ಯದ ಸಾಲು ನನಗೆ ನೆನಪಿಗೆ ಬಂದಿತು :

**'ರಾಹೇ ತಲಬ್ ಮೇ ಐಸೇ ಖುದ್ ರಫ್ತಾ ಹೋಗಯೇ ಹೈಂ ।**
**ಮಂಜಿಲ್ ಪರ್ ಹಮ್ ಪಹುಂಚ್‌ಕರ್ ಮಂಜಿಲ್ ಕೋ ಢೂಂಢತೇ ಹೈಂ**

[ಗುರಿಯ ಹುಡುಕುವುದರೊಳು ನಾವು ಮೈಮರೆತು
ಗುರಿಯನ್ನು ತಲುಪಿಯೂ ಅದನರಸುತಿಹೆವು ।]

ಇದರ ಅರ್ಥವೇನೆಂದರೆ, ಈಶ್ವರ ಪ್ರಾಪ್ತಿಗೋಸ್ಕರ ನಾವು ಎಷ್ಟು ಮೈಮರೆತಿದ್ದೇವೆ. ಇದು, ಒಬ್ಬನಿಗೆ ಸಕ್ಕರೆಯ ಬೊಂಬೆಯನ್ನು ತಿನ್ನಿಸಿದ ನಂತರವೂ ಅವನು ಸಕ್ಕರೆಯ ರುಚಿಯನ್ನು ಅರಸುವನೆಂಬುದಕ್ಕೆ ಸದೃಶವಾಗಿದೆ. ಇವೆರಡರಲ್ಲಿ ವ್ಯತ್ಯಾಸವೇನು ? ಈ ವ್ಯಕ್ತಿ ಸಕ್ಕರೆಯನ್ನು ಆಟಿಗೆಯ ರೂಪದಲ್ಲಿ ತಿಂದಿದ್ದಾನೆ; ಆದರೂ ಅವನಿಗೆ ಸಕ್ಕರೆ ತಿನ್ನುವ ಲಾಲಸೆ ಬಿಡದೆ ಇದೆ. ವಸ್ತುವು ಬಹುತೇಕ ಒಂದೇ ಇದೆ. ಆದರೂ ಭೇದ ಇರುವುದು ಅವನ ಆಸ್ವಾದನೆಯಲ್ಲಿ. ಆಟಿಗೆಯ ಬೊಂಬೆಯ ಸಂತೋಷವೇ ಬೇರೆ, ಸಕ್ಕರೆಯ ಸಂತೋಷವೇ ಬೇರೆ. ಅರ್ಥದಲ್ಲಿ ವಿಭಿನ್ನವಾದ ಒಂದು ಮಾತು ಬರೆಯುತ್ತೇವೆ. ಏನೆಂದರೆ, ಸಕ್ಕರೆ ಬೊಂಬೆಯಾಗುವುದಿಲ್ಲ, ಬೊಂಬೆಯಲ್ಲಿ ಸಕ್ಕರೆ ಇದೆ. ಅರ್ಥಾತ್ 'ಬ್ರಹ್ಮ' ಮತ್ತು 'ಜೀವ'ರಲ್ಲಿ ಇರುವ ವ್ಯತ್ಯಾಸ ಇದೇ ಆಗಿದೆ. ಬೊಂಬೆಯು 'ಜೀವ' ಮತ್ತು ಸಕ್ಕರೆಯೇ 'ಬ್ರಹ್ಮ'. ನೀನು ಹೃದಯದ ವ್ಯಾಕುಲತೆಯ ಬಗ್ಗೆ ಬರೆದಿದ್ದೀಯೆ. ಅದು ಚಡಪಡಿಕೆಯನ್ನು ಉಂಟುಮಾಡುತ್ತದೆ. ಭಕ್ತ ಮತ್ತು ಪ್ರಭು (ಗುರು) ಹಾಲಿನಲ್ಲಿ ಸಕ್ಕರೆ ಕರಗಿದಂತೆ ಒಂದಾಗುವವರೆಗೂ ವ್ಯಾಕುಲತೆ ಒಂದಿಲ್ಲೊಂದು ರೂಪದಲ್ಲಿ ಇದ್ದೇ ಇರುತ್ತದೆ. ನಾನು ೧೨ ವರ್ಷಗಳ ನಂತರ, ನನ್ನ ಸ್ಥಿತಿಯು ವಿಕಾಸಗೊಳಿಲ್ಪಟ್ಟಾಗ, ಶಾಂತಿ ಮತ್ತು ನೆಮ್ಮದಿಗಳನ್ನು ಹೊಂದಿದೆ. ನಾನು ನಿನ್ನ ಪ್ರತಿಯೊಂದು ಪತ್ರಕ್ಕೂ ಉತ್ತರ ಬರೆಯಲು ಬಯಸುತ್ತೇನೆ. ನಿನ್ನ ಪತ್ರಗಳು ಮತ್ತು ನನ್ನ ಉತ್ತರಗಳು ಮುದ್ರಿತವಾಗಬೇಕೆಂಬುದು ನನ್ನ ಬಯಕೆ, ಅದು ಸಾಮಾನ್ಯ ಜನತೆಗೆ (ಇಡೀ ಮಾನವತೆಗೆ) ಅತಿಶಯ ಪ್ರಯೋಜನಕಾರಿಯಾಗಿದೆ.

ನಿನ್ನ ಹಿತೈಷಿ
ರಾಮಚಂದ್ರ

P-4-Books-PM-7-Anantyatre-105



* * * *

ಕ್ರಮ ಸಂಖ್ಯೆ – ೧೧೯ **ಪತ್ರ ಸಂಖ್ಯೆ – ೪೨೧** ಷಾಹಜಹಾನಪುರ
೦೧–೦೯–೧೯೫೪

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ, ಅಗಸ್ಟ್ ೨೩–೨೪ರ ಪತ್ರ ಪ್ರಾಪ್ತವಾಯಿತು. ಓದಿ ಹರ್ಷವಾಯಿತು. ನಿನಗೆ 'ಬಿದ್ದುಹೋದ ಪಾಳುಮನೆಯ' (ಉಜಡೀಹುಯಿ ಬಸ್ತಿ) ದೃಶ್ಯ ಪ್ರತೀತವಾಗತೊಡಗಿದೆಯೆಂದಾಯಿತು; ಬಹಳ ಒಳ್ಳೆಯದು. 'ವಸಂತ' ಮತ್ತು ಉದ್ಯಾನವನಗಳ ತಿರುಗಾಟ ಎಲ್ಲರಿಗೂ ಮೆಚ್ಚುಗೆಯಾಗುತ್ತದೆ. ಶಾಂತ ಸ್ವಭಾವವುಳ್ಳವರು, ನಿಃಶಬ್ದವಾಗಿ ತಿರುಗಾಟಮಾಡಿ ವಿಹರಿಸುತ್ತಾರೆ. ಮತ್ತು ಚಂಚಲಚಿತ್ತರು ಚಪ್ಪಾಳೆ ಮತ್ತು ಸಂಗೀತವಾದ್ಯ ವಾದನಗಳಿಂದ ತೃಪ್ತಿಪಡೆದು, ವಿಹಾರ ಮಾಡದಂತಾಯಿತಲ್ಲ ಎಂದು ತಿಳಿಯುತ್ತಾರೆ. ಆದರೆ ಯಾರಿಗೆ ತಮ್ಮ ಪ್ರಿಯತಮನ (ಈಶ್ವರ) ಸ್ಮರಣೆ ಇದೆಯೋ ಅವರ ವಿಹಾರವು ಇದಕ್ಕೆ ತೀರಾ ವಿರುದ್ಧವಾಗಿರುತ್ತದೆ. ಪ್ರೇಮಿಸುವವರಿಗೆ (ತಮ್ಮ ಪ್ರಭುವನ್ನು, ಸದ್ಗುರುವನ್ನು) ವಾದ್ಯಗಳ ಝುಂಕಾರ ಮತ್ತು ಗದ್ದಲಕ್ಕೆ ಯಾವ ಅರ್ಥವುಂಟು ? ಅವರಿಗೆ, ತಮ್ಮ ಪ್ರಭುವಿನ (ಗುರುವಿನ) ನೆಲೆಯ ಸಮಾಚಾರವನ್ನು ಕೊಡುವ ವಸ್ತುವೊಂದೇ ಮೆಚ್ಚುಗೆಯಾದೀತು. ನಮ್ಮ ಎಲ್ಲ ಮನೋರಂಜನಗಳು ಸಮಾಪ್ತವಾಗಿ, ನಾವು ಅವುಗಳ ಚಮತ್ಕಾರಗಳಿಗಿಂತಲೂ ಮೇಲೆದ್ದಾಗ ಮಾತ್ರ ಅವನ (ಪ್ರಭುವಿನ) ನೆಲೆ ಸಿಗುವುದು. ಚಮತ್ಕಾರಗಳಿಗಿಂತಲೂ ಆಚೆಗಿರುವ ಪ್ರದೇಶದಲ್ಲಿ ನೀನು ವಿಹರಿಸಲು ತೊಡಗಿದ್ದೀಯೆ ಎಂಬುದನ್ನು ನಿನ್ನ 'ಸ್ಥಿತಿ' ಖಂಡಿತವಾಗಿ ತಿಳಿಸುತ್ತದೆ. ನಿನ್ನ ಸ್ಥಿತಿ ಇಂತಿರುವಾಗ (ಆಧ್ಯಾತ್ಮಿಕ) ವಿಹಾರಯಾತ್ರೆ ನಿನ್ನ ಭಾಗ್ಯಕ್ಕೆ ದಕ್ಕದಿರಲು ಕಾರಣ ಕಾಣುವುದಿಲ್ಲ. ನಿನ್ನ ಹೃದಯದ ಸೆಳೆತ (ಒಲವು) ಆ ದಿಕ್ಕಿನಲ್ಲಿ ತಿರುಗಿದೆಯೆಂಬುದು ನಿನ್ನ ಪತ್ರಗಳಿಂದ ವ್ಯಕ್ತವಾಗುತ್ತದೆ. ಆದರೆ ದಿಲ್ಲಿ (ಗುರಿ) ಇನ್ನೂ ಬಲುದೂರ ಉಂಟು. ನಿಜ ಹೇಳುತ್ತೇನೆ, (ನಿನ್ನ ಯಾತ್ರೆಯ) ಕಾಲುಭಾಗವೂ ಕಳೆದಿಲ್ಲ. ಆದರೆ ನೀನು ಅಲ್ಲಿಗೆ ನಿಶ್ಚಿತವಾಗಿಯೂ ತಲುಪುತ್ತೀಯೆ ಎಂಬ ಭರವಸೆ ಇದೆ; ನಿನ್ನ ಪತ್ರದಲ್ಲಿ ವ್ಯಕ್ತವಾದ ಎಲ್ಲ ಲಕ್ಷಣಗಳೂ ಇವೇ ಆಗಿವೆ. 'ನಾನು ನೋಡಿದರೂ ನೋಡದಂತಿರುತ್ತೇನೆ' ಎಂದು ನೀನು ಬರೆದಿದ್ದೀಯೆ. ನಿರಸನ (Negation) ಸ್ಥಿತಿಯು ಆರಂಭವಾಗುತ್ತದೆಯೆಂಬುದು ಇದರಿಂದ ತಿಳಿದು ಬರುತ್ತದೆ, ಇವು ಅದರ ಲಕ್ಷಣಗಳೇ ಸರಿ. ಆ ಸ್ಥಿತಿ ಇನ್ನೂ ಹಾಗೆ ಮೈಲಿಗಟ್ಟಲೆ ದೂರದಲ್ಲಿರುವುದೇನೋ ನಿಜವೆ; ಆದರೆ ನಾನು ಹಾಗೆ ಹೇಳುತ್ತಿದ್ದೇನೆಂದು ನೀನು ಭಯ ಪಡಬೇಕಾಗಿಲ್ಲ. ಯಾಕೆಂದರೆ ಪಯಣ ಮಾಡಬೇಕು ಎಂದು ಮನುಷ್ಯನು ನಿರ್ಧರಿಸಿ, ನಡೆಯಲಾರಂಭಿಸಿದಮೇಲೆ ಮೈಲುಗಟ್ಟಲೆ ದೂರವಿದ್ದ ಸ್ಥಳವನ್ನೂ ತಲುಪಿಯೇ ತಲುಪುತ್ತಾನೆ.



'*ನೀವು ಬರುವವರಿದ್ದೀರಿ, ಎಂದರೆ ಶೀಘ್ರ ಬರಲಿ ಎಂಬ ಕಾತರ, ನೀವು ಹೊರಟುಹೋದಾಗ, ಅಗಲಿಕೆಯ ಬೇಸರ*' ಎಂದು ನೀನು ಬರೆದಿರುವುದು, 'ಪ್ರೇಮ'ದ ಕೈವಾಡವಾಗಿದೆ. ಒಂದು ಸಮಯದಲ್ಲಿ (ನನ್ನ ಸಾಧನಾ ಕಾಲದಲ್ಲಿ) ನನ್ನ ಸ್ಥಿತಿಯೂ ಇದೇ ತೆರನಾಗಿ ಆಗತ್ತು; ಅದು ಎಂಥ ಸ್ಥಿತಿಯಾಗಿತ್ತೆಂಬುದು ನಿನಗೆ ಚೆನ್ನಾಗಿ ಅರ್ಥವಾಗಬಹುದು. ಇದಕ್ಕೆ ಒಂದು ಚೆಂದವಾದ ಶ್ಲೋಕ ಇದೆ. ಅದರ ಅರ್ಥ ಹೀಗಿದೆ : "*ದರ್ಶನದ ಯೋಗ್ಯತೆ ನನಗಿಲ್ಲ, ಅರ್ಥಾತ್ ದರ್ಶನ ಸಿಕ್ಕರೆ ತಾಳಿಕೊಳ್ಳಲಾಗುವುದಿಲ್ಲ. ಒಂದು ವೇಳೆ ವಿರಹವಾದರೆ ಅದನ್ನು ಸಹಿಸಲೂ ಸಾಧ್ಯವಿಲ್ಲ !*" ಈ ಸ್ಥಿತಿಯಲ್ಲಿ ನಾನೆಷ್ಟು ದಿನಗಳಿಂದ ಇದ್ದೇನೋ ತಿಳಿಯದು, ಈ ಸಂಕಟವನ್ನು ಸಹಿಸುತ್ತಿದ್ದೇನೆ. ಈ ಸಂಕಟ ಕೊನೆಗೊಂಡಾಗ, ಸಂಕಷ್ಟ ಇನ್ನೊಂದು ರೂಪದಲ್ಲಿ ಬಂದಿತು. ಯಾರಾದರೂ ಈಶ್ವರನ ಹೆಸರೆತ್ತಿದರೆ ಸಾಕು, ಎದೆ ಒತ್ತಿ ಹಿಡಿದುಕೊಂಡು ಅಯ್ಯೋ–ಅಯ್ಯೋ ಎಂದು ಅಳಬೇಕಾಯಿತು. ಇದೊಂದು ವಿಚಿತ್ರ ? ಯಾರನ್ನು ನಾನು ಪ್ರೇಮಿಸುತ್ತೇನೆಯೋ, ಅವನ ಹೆಸರೆತ್ತಿದರೆ ನೋವು ಉಂಟಾಗಬೇಕೆ !" ಮಗಳೆ, ಅವನನ್ನು ಕರುಣಾಳು ಎನ್ನಲೆ ಅಥವಾ ನಿರ್ದಯಿ ಎನ್ನಲೆ ? ಯಾಕೆಂದರೆ ಅವನು ನನ್ನನ್ನು ಕೊಂದುಹಾಕಿ, ತನ್ನೊಳಗೆ ನಾನು ಕುಳಿತುಕೊಳ್ಳಲು (ಲೀನವಾಗಲು) ಅನುವು ಮಾಡಿಕೊಟ್ಟ! ಇವೆಲ್ಲವೂ ತುಂಬ ಅಗ್ಗವಾಗಿಯೇ ದೊರೆಯುತ್ತವೆ ಎಂಬುದು ಖಂಡಿತವಾಗಿಯೂ ನಿಜ. ಹೌದು, ಮಾಸ್ಟರ್ ಸಾಹೇಬರು (ಈಶ್ವರ್ ಸಹಾಯ್) ನಿಜವಾಗಿ ಅದೃಷ್ಟವಂತರು, ಯಾಕೆಂದರೆ ಅವರಿಗೆ ಖಂಡಿತ ಗೊತ್ತಿಲ್ಲ; ಆ ಸ್ಥಿತಿಗಳು ಯಾವ ಕಷ್ಟವೂ ಇಲ್ಲದೆ ದೊರೆತವು. ಆದರೆ ಪಾಪ ! ಅವರಲ್ಲಿ ಅವುಗಳು ಉಂಟೆಂಬುದು ಅವರಿಗೆ ಖಂಡಿತ ಗೊತ್ತಿಲ್ಲ; ಆ ಸ್ಥಿತಿಗಳು ಕ್ರಮೇಣ ತೆರೆದುಕೊಳ್ಳಬಹುದು. ಅವರು ಬಹುದೂರ ಮುಂದಕ್ಕೆ ತಲುಪಿದ್ದಾರೆ. ದೀಪ ಹಚ್ಚಿ ಹುಡುಕಿದರೂ ಅಂಥ ಆಧ್ಯಾತ್ಮಿಕ ಉನ್ನತಿ ಹೊಂದಿದ ವ್ಯಕ್ತಿ ಕಾಣಸಿಗಲಿಕ್ಕಿಲ್ಲ. ಹೌದು, ಯಾರು ಆಧ್ಯಾತ್ಮಿಕ ಸ್ಥಿತಿಗಳ ಮತ್ತು ಅವುಗಳ ಅನುಭವಗಳ ನಮೂನೆಯ ಒಂದು ಮಾದರಿಯಾಗಿರುವರೋ ಅಂಥ ವ್ಯಕ್ತಿ ನಮ್ಮ ಮಿಷನ್ನಿನಲ್ಲಿ ನೀನೇ ಆಗಿದ್ದೀಯೆ.

"ಪ್ರತಿಯೊಬ್ಬ ಮನುಷ್ಯ, ಅಷ್ಟೇಕೆ ಒಂದು ಮಗುವಿನ ಸ್ಥಿತಿಯು ಕೂಡ ನಿನ್ನ ದಶೆಯಂಥದಲ್ಲ, ಅದಕ್ಕಿಂತಲೂ ಉನ್ನತವಾದುದೆಂದು ನನಗೆ ಅನಿಸುತ್ತದೆ"– ಎಂದು ನೀನು ಬರೆದಿದ್ದೇಯೆ. ಇದೆಂಥ ಸ್ಥಿತಿಯಾಗಿದೆಯೆಂದರೆ ಅದೊಂದು ಈಶ್ವರನ ರಹಸ್ಯವೇ ಆಗಿದೆ. ನಮ್ಮ ಗುರುಮಹಾರಾಜ ಲಾಲಾಜಿ ಸಾಹೇಬರು ಕೇವಲ ಸುಳುಹು ಕೊಟ್ಟು ಒಂದಿಷ್ಟು ತಿಳಿಸಿದ್ದರು. ನಾನು ಕೂಡ ಒಂದು ಸೂಚನೆ (ಸುಳುಹು) ಎಂದು ಇಷ್ಟು ಮಾತ್ರ ಬರೆಯುತ್ತೇನೆ....! 'ಪ್ರಾಣಾಹುತಿ' ನೀಡುವ ಸಮಯದಲ್ಲಿ ಸಮಸ್ತ ಈಶ್ವರೀಯ ಶಕ್ತಿ ಆಧ್ಯಾತ್ಮಿಕ ಪ್ರಶಿಕ್ಷಣ ಪಡೆಯುತ್ತಿರುವವನ ಒಳಗೆ (ಅಭ್ಯಾಸಿಯೊಳಗೆ) ಇಳಿದು ಬರಬಹುದು, ಮತ್ತು ಅವನ ನರವ್ಯೂಹ (Nervous system) ಭಗ್ನವಾಗಿ ಅವನು ಪ್ರಾಣಬಿಡಬಹುದು. ನನ್ನದು ಇದೇ

P-4-Books-PM-7-Anantyatre-106



ಸ್ಥಿತಿಯಾಗಿತ್ತು. ಮತ್ತೆ, ತರಬೇತಿ ಪಡೆಯುತ್ತಿರುವ ಅಭ್ಯಾಸಿಯು ಅರ್ಧನಿಮಿಷಕ್ಕಿಂತ ಹೆಚ್ಚು ಸಮಯ ಪ್ರಾಣಾಹುತಿಯನ್ನು ಭರಿಸಿಕೊಳ್ಳಲಾಗುತ್ತಿರಲಿಲ್ಲ. ಗುರುಮಹಾರಾಜರು, ತಮ್ಮ ಸಜ್ಜನಿಕೆಯ ಕಾರಣ ಯಾವುದೇ ಪರಿಮಿತಿಯನ್ನು ಹಾಕಿರಲಿಲ್ಲ. ಇಂಥ ಸ್ಥಿತಿಯಲ್ಲಿ ನಾನು ಯಾರಿಗೂ ಆಧ್ಯಾತ್ಮಿಕ ತರಬೇತಿ ನೀಡುವುದು ಅಸಾಧ್ಯವೆಂದು ನನಗೆ ಕಂಡಿತು. ಹಾಗಾಗಿ ವಿವಶನಾಗಿ ನಾನು ಗುರುಮಹಾರಾಜರನ್ನು ಪ್ರಾರ್ಥಿಸಿದೆ. ಅವರು ಆವಶ್ಯಕವೆನಿಸಿದ ಬಂಧನವನ್ನು ಹಾಕಿದರು. ಮತ್ತು ನಾನು ಕೇಳಿಕೊಂಡಾಗ ಅದನ್ನು ಕಡಿದು ಹಾಕುವುದಾಗಿಯೂ ಹೇಳಿದರು. ಆದರೆ ಅದು ನನಗೆ ಎಂದೂ ಅಗತ್ಯ ಕಾಣಲಿಲ್ಲ.

ಗುರುವು ಜಗತ್ತಿನಿಂದ ಕಣ್ಮರೆಯಾದ ನಂತರ ಗುರುವಿನ ಎಲ್ಲ ಆಧ್ಯಾತ್ಮಿಕ ಸಂಪತ್ತು ಅವನ ಶಿಷ್ಯರಿಗೆ, ವಿಶೇಷವಾಗಿ, ದೀಕ್ಷೆಹೊಂದಿದ ಅಭ್ಯಾಸಿಗಳಿಗೆ ಹೋಗಿ ತಲುಪುತ್ತದೆ. ಸಂತ್ಸಂಗಿಗಳಿಗೆ, ಗುರುವಿನ ದೇಹಾವಸಾನದ ನಂತರವೂ ಲಭ್ಯವಾಗುವ ಲಾಭ ಇದು. ಇದಲ್ಲದೆ, ಇನ್ನೊಂದು ಮಾತು ಹೇಳತಕ್ಕದ್ದೇನೆಂದರೆ ಯಾರಲ್ಲಿ ಪ್ರೇಮ ಮತ್ತು ಲಯಾವಸ್ಥೆಗಳು ಹೆಚ್ಚು ಇದೆಯೋ, ಅಷ್ಟು ಹೆಚ್ಚು ಪಾಲು ಅವರಿಗೆ ಮುಟ್ಟುತ್ತದೆ. ಮತ್ತು ಅಂಥ ಅಭ್ಯಾಸಿಗಳು, ಗುರುವು ಈ (ಪಾರ್ಥಿವ) ಜಗತ್ತಿನಿಂದ ಹೊರಟುಹೋದ ನಂತರ ಬಹುಕಾಲದವರೆಗೆ ಅವನಿಂದ ಆಧ್ಯಾತ್ಮಿಕ ಲಾಭ ಪಡೆಯುತ್ತಿರುತ್ತಾರೆ, ಹಾಗೂ ಅವರ ವಿಚಾರದ (ಸ್ಮರಣೆಯ) ತಂತಿಯ ಝುಂಕಾರವು ಅವನಿಗೆ ಹೋಗಿ ಮುಟ್ಟಬಲ್ಲದು. ಲಯಾವಸ್ಥೆಯಿಂದ ಆಗುವ ಲಾಭ ಬಹಳ, ಯಾಕೆಂದರೆ ತನ್ನತನವನ್ನು ಅಭ್ಯಾಸಿಯು ಅಳಿಸಿಹಾಕಿದಾಗ ಆ ಸ್ಥಳದಲ್ಲಿ 'ಅವನೇ'– ಯಾರನ್ನು ಅನ್ವೇಷಿಸುತ್ತಿರುವನೋ ಅವನೇ (ಗುರುವೇ)– ಉಳಿಯುತ್ತಾನೆ. ಅಭ್ಯಾಸಿಯು ಯಾವ ಮಟ್ಟದವರೆಗೆ ಲಯಾವಸ್ಥೆಯನ್ನು ಉಂಟು ಮಾಡಿಕೊಳ್ಳುತ್ತಾನೋ, ಆ ಮಟ್ಟದಲ್ಲಿ ಅದೇ ಪ್ರಮಾಣದಲ್ಲಿ ಅವನು ಯಶಸ್ಸು ಪಡೆಯುತ್ತಾನೆ. ಅದಕ್ಕೋಸ್ಕರವೇ ನಾನು 'ಲಯಾವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳಿರಿ' ಎಂದು ಕೂಗಿ ಕರೆದು ಹೇಳುತ್ತೇನೆ. ಆದರೆ ಜನರಿಗೆ ತಮ್ಮ ವ್ಯಸ್ತತೆಯಿಂದಲೇ ಬಿಡುವಿಲ್ಲ, ಇತ್ತ ತಿರುಗುವವರು (ಕಿವಿಗೊಡುವವರು) ಯಾರು? ನಾನು ನನ್ನ ಶಕ್ತಿಯಿಂದಲೇ ಎಲ್ಲವನ್ನೂ ಮಾಡಬೇಕೆಂದು ಪ್ರತಿಯೊಬ್ಬನೂ ಬಯಸುತ್ತಾನೆ. ಆದರೂ ಸೌಜನ್ಯದ ಕಾರಣ, ಹಾಗೆ ನಾನು ಮಾಡಿದೆ ಕೂಡ. (ಲಯಾವಸ್ಥೆಯನ್ನಲ್ಲ, ಯಾಕೆಂದರೆ, ಅದು ಅಭ್ಯಾಸಿಯ ಕರ್ತವ್ಯ); ಆದರೆ ತಿರುಗಿ ನೋಡಿದಾಗ, ಜಗತ್ತಿನಲ್ಲಿ ಇದ್ದು ಬಿದ್ದ ಪ್ರಾಪಂಚಿಕತೆಯ ಹೊಲಸನ್ನೆಲ್ಲ ತುಂಬಿಕೊಂಡಿರುವುದನ್ನು ಕಂಡೆ. ಈಗ, ಬಂಧು, ನಾನು ಅವರನ್ನು ಶುದ್ಧಗೊಳಿಸುತ್ತಲೇ ಹೋಗುತ್ತೇನೆ, ಅವರು ಮತ್ತೆ ಹೊಲಸು ತುಂಬಿಕೊಳ್ಳುತ್ತಾರೆ ಎಂದಾದರೆ, ನನ್ನ ಪರಿಶ್ರಮದಿಂದಾದ ಪ್ರಯೋಜನವೇನು? ಅಭ್ಯಾಸಿಗಳು ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡುತ್ತ ಹೋದರೆ ನಾನು ತುಂಬಿದ ಪ್ರಕಾಶದಲ್ಲಿ ಮತ್ತೆ ಅಂಧಕಾರ ಬರಲಾರದು. ಲಯಾವಸ್ಥೆಯನ್ನು ಉಂಟು ಮಾಡಿಕೊಳ್ಳುವುದು ಅಭ್ಯಾಸಿಯ ಕರ್ತವ್ಯವೇ ಆಗಿದೆ.



ಅದರ ವಿಧಾನವನ್ನು ನಾನು ತಿಳಿಸುತ್ತಲೇ ಇದ್ದೇನೆ. ಗುರು ದೇಹ ಬಿಟ್ಟ ನಂತರ ಶಿಷ್ಯನಿಗೆ (ಅಭ್ಯಾಸಿಗೆ) ಆಗುವ ಎರಡನೆಯ ಲಾಭವೆಂದರೆ, ಅತ್ಯಂತ ಶುದ್ಧವಾದ ಅನುಗ್ರಹವು ಅಭ್ಯಾಸಿಗೆ ದೊರೆಯುವುದು ಅಲ್ಲದೆ, ಹೆಚ್ಚು ಪಕ್ಷ ದೇಹಾವಸಾನದ ನಂತರ, ಯಾವ ಆಧ್ಯಾತ್ಮಿಕ ತರಬೇತಿಯ ಮಾಹಿತಿಯು ಗುರುವಿಗೆ ಲಭ್ಯವಾಗುವುದೋ ಅಂಥ ಪ್ರಕಾರದ ತರಬೇತಿಯೂ ಅಭ್ಯಾಸಿಗೆ ಲಭ್ಯವಾಗುವುದು. ಇನ್ನೂ ಒಂದೆರಡು ವಿಷಯಗಳಿವೆ. ಅವುಗಳನ್ನು ವಿವರಿಸಲು ಯುಕ್ತ ಶಬ್ದಗಳು ಸಿಗುವುದಿಲ್ಲ. ಈಗ ನನ್ನ ಕತೆ ಹೇಳುತ್ತೇನೆ. ಗುರು ಮಹಾರಾಜರು (ಲಾಲಾಜಿ ಸಾಹೇಬರು), ತಾವು ದೇಹ ಬಿಟ್ಟ ನಂತರ, ನನ್ನನ್ನು ಸದ್ಯ ನಾನಿರುವ ಸ್ಥಿತಿಗೆ ತರಲು ಹನ್ನೆರಡು ವರ್ಷ ತೆಗೆದುಕೊಂಡರು. ಮತ್ತು ಹೇಳಿದರು–"ನಾನು ಇನ್ನೂ ಸಮಯ ತೆಗೆದುಕೊಳ್ಳುತ್ತಿದ್ದೆ, ಆದರೆ, ಕೆಲದಿನಗಳ ನಂತರ ನೀನು ಬೇರೆಯವರಿಗೆ ತರಬೇತಿ ನೀಡಲು ಯೋಗ್ಯನಾಗಿರುವುದಿಲ್ಲ ಎಂಬುದನ್ನು ಕಂಡು ನಾನು ವಿವಶನಾದೆ". ವಿಷಯ ಏನೆಂದರೆ, ನನಗೆ ನೆನಪಿರುವಂತೆ, ನಾನು 'ನಿರಸನದ ನಿರಸನ' (Negation of negation)ವನ್ನು ಮಾಡಲು ಪ್ರಾರಂಭಿಸಿದ್ದೆ. ಅದು ನನ್ನನ್ನು ವಸ್ತುತಃ ಶೂನ್ಯ (Nil)ಗೊಳಿಸುವುದರಲ್ಲಿ ಪರಿಣಮಿಸುತ್ತಿತ್ತು. ಹಾಗೂ, 'ನಿರಸನದ ನಿರಸನವೂ ಮರೆತು ಹೋಗುವ ಸ್ಥಿತಿ'– ಎನ್ನಬಹುದಾದ ಮುಂದಿನದಕ್ಕೆ ನಾನು ಬಂದರೆ,– ಅದಕ್ಕೆ ತಲುಪುವುದು ಕಠಿಣವಿತ್ತೇನೋ ಸರಿಯೆ– ನನ್ನ ಶರೀರ ಬಿದ್ದು ಹೋಗುತ್ತಿತ್ತು.

ಈಗ ನಾನು ನಿನ್ನ ಪತ್ರಗಳಿಗೆ ಉತ್ತರ ಬರೆಯುತ್ತೇನೆ. 'ಮನಸ್ಸಿನ ಮೇಲೆ ಒಂದು ರೀತಿಯ ನಶೆ ಆವರಿಸಿದಂತಿರುತ್ತದೆ'–ಎಂದು ನೀನು ಬರೆದಿದ್ದೀಯೆ. 'ನಶೆ' ಇರುವುದು (ಉಂಟಾಗುವುದು) ಭೌತದ್ರವ್ಯ (Matter)ದಲ್ಲಿ. ಅದರ ತೀವ್ರತೆ ಕಡಿಮೆಯಾಗುತ್ತದೆ, ಅದರ ನಶೆಯ ಪ್ರಭಾವ ಉಳಿದಿರುತ್ತದೆ. ನೀನು ಸೂಕ್ಷ್ಮವಾಗಿ ಗಮನಿಸಿ ನೋಡಿದರೆ, ನಶೆ ಇರುವುದಿಲ್ಲ, ಬದಲಿಗೆ ಒಂದು ನದಿಯ ಸಮೀಪ ಇರುವಂಥ ಶೀತಲತೆ ಇರುವುದು ಕಂಡು ಬಂದೀತು. ಈಗ ನಿನ್ನ ಸ್ಥಿತಿಯು ಶೀತಲತೆಗಿಂತ ಭಿನ್ನವಾಗಿರಬಹುದಾದದ್ದು ನಿಶ್ಚಿತ; ಏಕಾಗ್ರತೆಯೂ ಇರುವ ಕಾರಣದಿಂದ ಹಾಗೆ ಆಗುವುದು. ಇದನ್ನು ಮುಂದೆ ವಿವರಿಸಲು ಶಬ್ದಗಳು ಸಿಗುವುದಿಲ್ಲ. ಈಗ, ನಶೆಯಂಥ ಸ್ಥಿತಿ ಏಕೆ ಉಂಟು ಎಂಬ ಪ್ರಶ್ನೆ. ಇದಕ್ಕೆ ಕಾರಣವೇನೆಂದರೆ, ಈಗ ನೀನು 'ಝೆಡ್' (Z) ಸ್ಥಾನದ ಪ್ರಭಾವದಲ್ಲಿ ಬಂದಿದ್ದೀಯೆ, ಮತ್ತು ಅದರಲ್ಲಿ ನಿನ್ನ ಯಾತ್ರೆ ಆರಂಭವಾಗಲಿಕ್ಕಿದೆ. ಅದನ್ನು ನಾನು ಶೀಘ್ರ ಶುರು ಮಾಡುತ್ತೇನೆ. ಈಗ ಅಕ್ಕ–ಪಕ್ಕದಲ್ಲಿ ಕೆಲಮಟ್ಟಿಗೆ ಶುದ್ಧಗೊಳಿಸುವುದು ಉಳಿದಿದೆ. ನೀನು ಬರೆದಂತೆ, 'ನಿನ್ನ ಹೃದಯವು, ಎಲ್ಲಾದರೂ ಓಡಿ ದೂರ ಹೋಗಬೇಕೆಂಬ ತಲ್ಲಣದಲ್ಲಿರುತ್ತದೆ, ನೆಲೆಯನ್ನು (ಗುರಿಯನ್ನು) ಮುಟ್ಟುವ ತಳಮಳದಲ್ಲಿರುತ್ತದೆ' ಈ ತಳಮಳ ಪ್ರತಿಯೊಬ್ಬ ಅಭ್ಯಾಸಿಯಲ್ಲಿಯೂ ಇರಬೇಕಾದದ್ದು. ನೀನು ಬರೆದು ತಿಳಿಸಿದ 'ಸ್ಥಿತಿ'ಯು ಝೆಡ್ (Z) ಸ್ಥಾನದ್ದಾಗಿದೆ. ತನ್ನ ವ್ಯಕ್ತಿತ್ವವನ್ನು ಎಲ್ಲರದಕ್ಕಿಂತ

ಕಡಿಮೆಯದೆಂದು ಭಾವಿಸುವುದು ಸಭ್ಯತೆಯಾಗಿದೆ. ನಿನಗೆ ಶೀತಲತೆಯು ಭಾಸವಾಗುವುದು, ಯಾಕೆಂದರೆ ಭೌತದ್ರವ್ಯದ (Matter) ಉಷ್ಣತೆ ಬಹುತೇಕ ಸಮಾಪ್ತವಾಗಿ ಹೋಗಿದೆ. ಇದನ್ನು ನಾನು 'ಸಹಜ ಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ'–ಪುಸ್ತಕದಲ್ಲಿ ವಿವರಿಸಿದ್ದೇನೆ. ಬೆನ್ನು ಹುರಿಯಲ್ಲಿ ಸ್ಪಂದನ ಮತ್ತು ರೋಮಾಂಚನದ ಅನುಭೂತಿಯಾಗುವುದು, ಅಲ್ಲಿಯ ಬಿಂದುಗಳು ಸಾವಕಾಶವಾಗಿ ತೆರೆದುಕೊಳ್ಳುತ್ತಿವೆ ಎಂಬುದನ್ನು ಸೂಚಿಸುತ್ತದೆ. ಒಂದು ಕ್ಷಣ ಮಾತ್ರವೇ ಆದರೂ ಸರಿಯೆ, ಮೃತ–ಸದೃಶ ಅವಸ್ಥೆಯ ಅನುಭೂತಿಯಾಗುವುದು ಒಳ್ಳೆಯದು. ನೀನು ಈ ಸ್ಥಿತಿಯನ್ನು ಹೊಂದಲು ಪ್ರಾರಂಭಿಸಿದ್ದೀಯೆ ಎಂಬುದನ್ನು ಇದು ಸೂಚಿಸುತ್ತದೆ. ನಾನು ಹೆಚ್ಚು ಸಂದರ್ಭಗಳಲ್ಲಿ, ಉನ್ನತ ತರವಾದ ಹಂತಗಳ ಪ್ರಾಣಾಹುತಿಯನ್ನು ಕೊಡುತ್ತಿರುತ್ತೇನೆ. ಆದ್ದರಿಂದ, ಆ ಉನ್ನತ ಸ್ಥಿತಿಗಳು ಅಭ್ಯಾಸಿಗಳಲ್ಲಿ ಆಗಾಗ ಕಂಡು ಬರುತ್ತವೆ. ಮೃತ–ಸದೃಶ ಸ್ಥಿತಿಯು ತುಂಬಾ ಉನ್ನತವಾದುದಾಗಿದೆ. ಆದರೆ ಅದು ನಿನ್ನಲ್ಲಿ ಇನ್ನೂ, ಉಂಟಾಗಿಲ್ಲ (ವರ್ಧಿಸಿಲ್ಲ).

ನಿನ್ನ, ೭–೧೧–೧೯೫೪ರ ಪತ್ರವೂ ತಲುಪಿದೆ. ಈಶ್ವರನ ಹೃದಯವು ನಿನ್ನೊಳಗೆ ಸಮಾವಿಷ್ಟಗೊಂಡಂತೆ ಅನುಭೂತಿಯಾಗುವುದೆಂದರೆ, ನೀನು ಹೃದಯ ಮಂಡಲವನ್ನು ದಾಟಿ ಹೋಗುವ ಸಿದ್ಧತೆಯಲ್ಲಿದ್ದೀಯೆ ಎಂದು ಅರ್ಥ. ಈ ಕ್ಷಣದಲ್ಲಿಯೇ ನೀನು ಅದನ್ನು ದಾಟುವಂತೆ ಮಾಡಬೇಕೆಂದು ನನಗೆ ಬಯಕೆ ಉಂಟಾಗುತ್ತದೆ, ಆದರೆ, ಹಾಗೆ ಮಾಡುವುದಿಲ್ಲ. ನಿನ್ನನ್ನು ಅದರ ಎಲ್ಲ ಬಿಂದುಗಳ ಯಾತ್ರೆಯನ್ನು ಪೂರೈಸುವಂತೆ ಮಾಡುತ್ತೇನೆ. ಶುರುವಿನಲ್ಲಿ ನಾನು ಆತುರದಿಂದ ಕೆಲಸ ಮಾಡಿದೆ. ಕೇವಲ ಎರಡೇ ದಿನಗಳಲ್ಲಿ ನಿನಗೆ ಪಿಂಡಾಂಡ ಮತ್ತು ಬ್ರಹ್ಮಾಂಡ ಎರಡರ ಮೇಲೆಯೂ ಪ್ರಭುತ್ವ ಬರುವಂತೆ ಮಾಡಿದೆ. ನಿನ್ನ ಸಮಯ ಬಹಳಷ್ಟು ಉಳಿತಾಯವಾಯಿತು. ಮತ್ತು ಈಶ್ವರನ ಸೃಷ್ಟಿಯಲ್ಲಿ ಬಹಳಷ್ಟು ಹಸ್ತಕ್ಷೇಪವಾಯಿತು. ಆದರೆ ಈಗ, ನೀನು ಎಲ್ಲ ಬಿಂದುಗಳ ಜ್ಞಾನವನ್ನು ಪಡೆಯಲು ಅನುವಾಗುವಂತೆ, ಅವುಗಳಲ್ಲಿಯ ಆಧ್ಯಾತ್ಮಿಕ ಯಾತ್ರೆಯನ್ನು ನಡೆಸಿದ ನಂತರ ನಿನ್ನನ್ನು ಮುಂದಕ್ಕೆ ಒಯ್ಯುತ್ತಿದ್ದೇನೆ. ಇನ್ನೂ ಎಷ್ಟು ಬಿಂದುಗಳಿವೆಯೋ ನಿಖರವಾಗಿ ತಿಳಿಯದು. ಅವು ಸಾವಿರಾರು ಇರದಿದ್ದರೂ, ನೂರಾರು ಅಂತೂ ಇವೆ. ಅಸಂಖ್ಯ ಬಿಂದುಗಳಿರುವುದು ನನ್ನ ಮನಸ್ಸಿನಲ್ಲಿ ಬಂದರೆ, ಆಗ ಶೀಘ್ರವಾಗಿ ಕೆಲಸ ಮಾಡಬೇಕಾಗುವುದು ಮತ್ತು ಇಡೀ ಯಾತ್ರೆಯನ್ನು ನಿಮಿಷಗಳಲ್ಲಿ ಅಥವಾ ಸೆಕೆಂದುಗಳಲ್ಲಿ ಪೂರ್ತಿಗೊಳಿಸಬೇಕಾಗುವುದು. ಯಾಕೆಂದರೆ, ನನ್ನ ಜೀವಿತಾವಧಿಯಲ್ಲಿಯೇ ನೀನು ಎಲ್ಲ ಬಿಂದುಗಳನ್ನು ಕ್ರಮಿಸುವಂತೆ ಮಾಡಬೇಕಾಗಿದೆ. ಯಾವುದಕ್ಕೋಸ್ಕರ ನೀನು ಪ್ರಯತ್ನಪಡುತ್ತಿರುವಿಯೋ ಅದು ಹೃದಯ ಮಂಡಲಕ್ಕಿಂತಲೂ ಬಹಳೇ ಎತ್ತರದಲ್ಲಿದೆ ಎಂಬ ನಿನ್ನ ವಿಚಾರ ಸರಿ ಇದೆ. ನಿನ್ನನ್ನು ನೀನು ತೊಡಗಿಸಿಕೊಂಡು ಯಾವುದಕ್ಕೆ ಯತ್ನಿಸುತ್ತಿರುವಿಯೋ ಅದನ್ನು ನೀನು ಪಡೆಯಬೇಕಾಗಿದೆ.



ನಿಜ ಹೇಳಬೇಕೆಂದರೆ, ನನ್ನ ಅಭಿಪ್ರಾಯದಲ್ಲಿ ಹೃದಯ ಮಂಡಲವು ಮಕ್ಕಳ ಆಟದ ಮೈದಾನದಂತಿದೆ; ನನಗೆ ಇದು ಹಾಗೆಯೇ ತೋರುತ್ತದೆ. ಆದರೆ ಖೇದದ ವಿಷಯವೆಂದರೆ, ಜನರು ಇದನ್ನು ಕೂಡ ದಾಟುವುದಿಲ್ಲ. ಕೀರ್ತನ–ಭಜನಗಳ ಮೂಲಕ ಸ್ವಾಮಿಗಳು ಜೀವನವಿಡೀ ಶಿಷ್ಯರಿಗೆ ಹೇಳುತ್ತಲೇ ಇರುತ್ತಾರೆ. ಸ್ವಾಮಿಗಳಿಗೇ ಇದರ ವಿಷಯ ಗೊತ್ತಿಲ್ಲವೆಂದು ನನಗೆ ಅನಿಸುತ್ತದೆ. ವರ್ಣರಹಿತರಾಗುವ ಬದಲಿಗೆ, ಬಣ್ಣವೇ ಅವರ ವ್ಯಸನವಾಗುತ್ತದೆ. ಅವರ ವಸ್ತ್ರದ ಬಣ್ಣ ಸಂನ್ಯಾಸದ್ದಲ್ಲ. ಸಂನ್ಯಾಸದ ವರ್ಣವು ನಿಜವಾಗಿಯೂ ವರ್ಣರಹಿತವಾದುದು. ವರ್ಣರಾಹಿತ್ಯ ಎಂದರೇನು?– ಯಾವ ಬಣ್ಣದ ಛಾಯೆಯೂ ಇಲ್ಲದಿರುವುದು. ಬಣ್ಣ ಇಲ್ಲದಾಗ ಅದನ್ನು 'ಬಿಳಿ' ಎನ್ನಲಾಗುತ್ತದೆ. ಎಲ್ಲ ಬಣ್ಣಗಳೂ ಮಿಲಿತವಾದಾಗ ಬಿಳಿಯದಾಗುತ್ತದೆ. ಅವರು ಬಿಳಿಯದನ್ನು ಧರಿಸಿದರೆ, ಗೃಹಸ್ಥ ಮತ್ತು ಸ್ವಾಮಿ(ಸಾಧು)ಗಳಲ್ಲಿ ಅಂತರವೇ ಇರದು. ಸಾಮಾನ್ಯ ಜನರಿಗೆ ಗುರುತಿಸಲು ಅನುವಾಗಲೆಂದು, ಯಾವ ಬಣ್ಣವು ನಮ್ಮ ದೃಷ್ಟಿಗೆ ಮಣ್ಣಿನ ಬಣ್ಣವಾಗಿ ಕಾಣುವುದೋ ಆ ಬಣ್ಣವನ್ನು (ಕಾವಿ) ಬಟ್ಟೆಗಳಿಗೆ (ಸಾಧು–ಸಂನ್ಯಾಸಿಗಳ ಬಟ್ಟೆಗೆ) ಕೊಡಲಾಗುತ್ತಿತ್ತು. ನಾವು ನಮ್ಮನ್ನು ಅಳಿಸಿ ಹಾಕಿಕೊಂಡು ಮಣ್ಣಾಗಿಸಿ (ಬೂದಿಯಾಗಿಸಿ) ಕೊಂಡಿದ್ದೇವೆ ಎಂದು ಇದರ ಅರ್ಥ. ಮತ್ತು ಜನರು ಈ ಚಿಹ್ನದಿಂದ ಅವರನ್ನು ಗುರುತಿಸುತ್ತಿದ್ದರು. ಈಗ, ಕೇವಲ (ಕಾವಿ) ಬಟ್ಟೆ ಧರಿಸಿ ಪ್ರತಿಯೊಬ್ಬನೂ ಸಂನ್ಯಾಸಿ ಎಂದು ಹೇಳಿಕೊಳ್ಳುತ್ತಾನೆ; ಅದೇ ಸಂಪ್ರದಾಯವಾಗಿಬಿಟ್ಟಿದೆ. ಇದುವರೆಗೂ ಜನರಲ್ಲಿ ಜಾಗ್ರತಿ ಬೆಳೆಯಲಿಲ್ಲ. ಪ್ರೇಮ, ವಿಶ್ವಾಸಗಳೂ ಹೆಚ್ಚಲಿಲ್ಲ ಎಂದು ನನಗೆ ಅನಿಸುತ್ತದೆ. ಹಾಗಿದ್ದರೆ ಈ ಬಣ್ಣದ ಎತ್ತನ್ನೂ ಸಂನ್ಯಾಸಿ ಎಂದು ತಿಳಿಯಬೇಕಾಗುತ್ತದೆ. ಅವರಲ್ಲಿರುವ ಒಂದು ವಿಶೇಷತೆ ಎಂದರೆ, ಅವರಲ್ಲಿ, ಆ ಬಣ್ಣದ ದೆಸೆಯಿಂದಾಗಿ ಸಂನ್ಯಾಸಿಗಳು ಹುಟ್ಟುತ್ತಾರೆ. ಈ ಮೇಲಿನ ಹೇಳಿಕೆಗಳಿಂದ, ಸಂನ್ಯಾಸಿಗಳನ್ನು ದೂಷಿಸುವುದು ನನ್ನ ಉದ್ದೇಶವಲ್ಲ; ಬದಲಿಗೆ, ಅವರು ತಮ್ಮ ವಿವೇಕಶಕ್ತಿಯನ್ನು ಉಪಯೋಗಿಸಲಿ, ಮತ್ತು ಅದರಿಂದ ವಿವಾದವು ಬಗೆಹರಿದು, ನಿಜವಾದ ಸಂನ್ಯಾಸದ ಅರ್ಥಕ್ಕೆ ತಕ್ಕಂತೆ ಅವರು ಆಗಲಿ ಎಂಬುದೇ ಆಗಿದೆ, ಯೋಚಿಸುವುದರಿಂದಲೇ ಕಲಂಕ ಅಂಟಿಕೊಳ್ಳುತ್ತದೆ ಎಂಬುದರ ಅರ್ಥ ನಿನ್ನಿಂದ ಭೇದವನ್ನು ಸಹಿಸಲಾಗುತ್ತಿಲ್ಲ ಎಂದೇ ಆಗುತ್ತದೆ. ಏಕತೆ ಮತ್ತು ದ್ವೈತ (ಭಿನ್ನತೆ)ಗಳ ನಡುವಣ ಅಂತರವೇ ಅರಿವಿಗೆ ಬಾರದ ಸ್ಥಿತಿಯು ಇನ್ನೂ ಬಂದಿಲ್ಲ. ಸ್ವಪ್ನದಲ್ಲಿ ಮನುಷ್ಯ ಬಡಬಡಿಸುತ್ತಾನೆ, ಆದರೆ, ಅವನಿಗೆ ಹೆಚ್ಚು ಸಲ ಅದರ ಅರಿವೇ ಇರುವುದಿಲ್ಲ. ಒಂದು ವೇಳೆ ಬಡಬಡಿಸುವುದು ಗೊತ್ತಾದರೆ ಅವನು ಬಡಬಡಿಸುವುದಿಲ್ಲ. ಅದೇ ರೀತಿ ನಿಮಗೆ 'ಏಕತೆ'ಯ ಅರಿವಿದ್ದರೆ, ದ್ವೈತ (ಅನೇಕತೆ)ದಿಂದ ಕಷ್ಟ ಉಂಟಾಗುವುದಿಲ್ಲ. ವಾಸ್ತವವಾಗಿ ನಾವು ಏಕತೆ (ಅದ್ವೈತ) ಮತ್ತು ದ್ವೈತ ಎರಡರಿಂದಲೂ ಬಿಡುಗಡೆ ಪಡೆಯಬೇಕಿದೆ. ಆಗ, ಅದು 'ಎಂತಿದೆಯೋ ಅಂತೆಯೇ ಇದೆ' (ಜೋ ಹೈ ಸೋ ಹೈ) ಎಂಬ ಸ್ಥಿತಿ ಬರುವುದರ ಶುಭ ಸಂದೇಶ ಬರುತ್ತದೆ. ಬರೆಯುತ್ತ ಹೋದ ಹಾಗೆ ಒಂದು ವಿಚಾರ ಬಂದಿತು. ಈಶ್ವರನು ಸೃಷ್ಟಿ ಮಾಡುವ ಸಮಯದಲ್ಲಿ ತನ್ನಲ್ಲಿರುವುದನ್ನೆಲ್ಲ

P-4-Books-PM-7-Ananyatre-108



ಕೊಟ್ಟನು; ಮತ್ತು ತಾನು ದಿವಾಳಿ (ರಿಕ್ತಹಸ್ತ)ಯಾದನು. ಈಗ ನಾವು ನಮ್ಮಲ್ಲಿರುವುದೆಲ್ಲವನ್ನೂ ಈಶ್ವರನಿಗೆ ಅರ್ಪಿಸಿದರೆ, ನಾವೂ ಕೂಡ ಅವನಂತೆಯೆ ದಿವಾಳಿ (ರಿಕ್ತ ಹಸ್ತ)ಯಾಗಬಹುದು. ಜನರು ತಮ್ಮ ಹೆಸರು ದಿವಾಳಿಯಾದವರ ಪಟ್ಟಿಯಲ್ಲಿ ಬರಬಾರದೆಂದು ತಮ್ಮ ಬಳಿ ಇರುವುದನ್ನು ಕೊಡುವುದಿಲ್ಲ, ಮತ್ತು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಎಲ್ಲವನ್ನೂ ಪಡೆದುಕೊಳ್ಳಲು ಯತ್ನಿಸುತ್ತಾರೆ. 'ನಮ್ರತೆಯು ಕೂಡ ನನಗೆ ಅಸಂತುಷ್ಟಿಯ ಭಾವನೆಯನ್ನುಂಟು ಮಾಡುತ್ತದೆ'– ಎಂದು ಬರೆದಿದ್ದೀಯೆ. ಯಾಕೆಂದರೆ ನೀನು ನಮ್ರತೆಯನ್ನು 'ಸತ್ಯ'ದಿಂದ ಬೇರ್ಪಟ್ಟದ್ದು ಎಂದು ತಿಳಿದಿದ್ದೀಯೆ. ಆದ್ದರಿಂದ ಆ ಭಾವನೆ ಇನ್ನೂ ಉಳಿದಿದೆ. 'ನಮ್ರತೆ' ಎಂದರೆ ಏನೂ ಉಳಿಯದಿರುವುದು ಮತ್ತು ಅದು ನಮಗೆ 'ಶೂನ್ಯ'ವನ್ನು ನೆನಪಿಗೆ ತರುತ್ತದೆ. ಕೊನೆಯಲ್ಲಿ ನೀನು–'ಹತ್ತಿರ ಹೋಗಲೂ ಬಯಸುವುದಿಲ್ಲ, ಬೇರ್ಪಟ್ಟಿರಲೂ ಬಯಸುವುದಿಲ್ಲ–ಎಂದು ಬರೆದಿದ್ದೀಯೆ. ಆಧ್ಯಾತ್ಮಿಕ ತರಬೇತಿ ಕೊಡುವವನು (ಗುರು/ಮಾರ್ಗದರ್ಶಿ) ಅಭ್ಯಾಸಿಗೆ ಈಶ್ವರೀಯ (ದೈವೀ) ಸ್ಥಿತಿಯನ್ನು ಹೆಚ್ಚು ಕೊಟ್ಟಾಗ ಹತ್ತಿರ ಹೋಗುವ ಒಲವು ಇರುವುದಿಲ್ಲ. ಬೇರ್ಪಟ್ಟಿರಲು ಮನಸ್ಸಾಗದಿರುವುದು ಪ್ರೇಮದ ಒತ್ತಡವನ್ನು ತೋರಿಸುತ್ತದೆ. ಅದರಲ್ಲಿ ಲಜ್ಜೆ ಪಡುವಂಥದೇನೂ ಇಲ್ಲ. ಹಾಗೆ ಆಗುತ್ತಿರುತ್ತದೆ. ಅದರಿಂದ ಯಾವುದೇ ತೊಂದರೆ ಅಥವಾ ಹಾನಿ ಇಲ್ಲ.

ಅಮ್ಮಾಜಿಗೆ ಪ್ರಣಾಮ.

ನಿನ್ನ ಹಿತೈಷಿ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೦ **ಪತ್ರ ಸಂಖ್ಯೆ – ೪೩೮** ಷಾಹಜಹಾನಪುರ<br>
೨೧–೧೧–೧೯೫೪

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

ನಿನ್ನ ಎರಡು ಪತ್ರಗಳು ನವೆಂಬರ್ ೧೩ ಮತ್ತು ೧೫ಕ್ಕೆ ಕೈ ಸೇರಿದವು. ಡಾ. ಎ. ಎನ್. ಸಿನ್ಹಾರವರು ಔಷಧದ ವಿವರಗಳೊಂದಿಗೆ ನಿನ್ನ ಸ್ಥಿತಿಯನ್ನು ತಿಳಿಸಿದರು. ನಿನಗೂ ಕೂಡ ಅವರು ಔಷಧವನ್ನು ಬರೆದು ತಿಳಿಸಿರಬಹುದು. ಅವುಗಳನ್ನು ಉಪಯೋಗಿಸಬೇಕು. ಒಂದು ಮಾತು (ನೀನು ಅನುಸರಿಸಿದರೆ) ನಿನ್ನ ಸ್ವಾಸ್ಥ್ಯವನ್ನು ಸುಧಾರಿಸಬಹುದು. ನಿನ್ನ ಎಲ್ಲ ಕಾಯಿಲೆಗಳೂ ದೂರವಾಗುತ್ತಿವೆಯೆಂದು ನೀನು ದೃಢವಾಗಿ ಸಂಕಲ್ಪ ಮಾಡಬೇಕು, ನೀನು ಇದರ ಧ್ಯಾನವನ್ನು ದಿನಾಲು ಒಂದರ್ಧ ಗಂಟೆ ಮಾಡು. ನೀನು ಇದನ್ನು ಎಡೆಬಿಡದೆ ಮಾಡಿದರೆ (ನಿನಗೆ) ಗುಣವಾಗದಂಥ ಯಾವ ಕಾಯಿಲೆಯೂ ಇಲ್ಲ. ನೀನು



ಹಾಗೆ ಮಾಡಲು ಪ್ರಾರಂಭಿಸುತ್ತೀಯೆಂದು ನನಗೆ ಭರವಸೆ ಇದೆ. ಇದರಿಂದ ಒಂದೆರಡು ತಿಂಗಳುಗಳಲ್ಲಿ ಎಲ್ಲ ತೊಂದರೆಗಳೂ ದೂರವಾಗುವುವು.

ಈ ಹಿಂದಿನ ನನ್ನ ಎರಡು ಪತ್ರಗಳಲ್ಲಿ, ನನ್ನ ಕಾಯಿಲೆಗಳಿಂದ ಮತ್ತು ನಾನು ಈ ಲೋಕ ಬಿಟ್ಟು ತೆರಳಿದ ನಂತರ ಅಭ್ಯಾಸಿಗಳಿಗೆ ಯಾವ ರೀತಿಯಲ್ಲಿ (ಆಧ್ಯಾತ್ಮಿಕ) ಲಾಭ ಆಗುವುದೆಂಬುದನ್ನು ಬರೆದಿದ್ದೆ. ಒಂದು ಮಾತನ್ನು ಹಿಂದಿನ ಪತ್ರದಲ್ಲಿ ಬರೆದಿದ್ದೆನಾದರೂ, ಸಂಕ್ಷೇಪವಾಗಿ ಇದರಲ್ಲೂ ಬರೆದುಬಿಡುತ್ತೇನೆ; ಅದರಿಂದ ವಿಷಯ ಪೂರ್ತಿಯಾದಂತಾಗುವುದು. ಉಚ್ಚ ಯೋಗ್ಯತೆಯ ಗುರುವು ತನ್ನ ಪ್ರತಿನಿಧಿಯನ್ನು (ಉತ್ತರಾಧಿಕಾರಿಯನ್ನು) ನಿರ್ಧರಿಸಬೇಕಾಗುವುದು. ಒಂದು ವೇಳೆ, ಅವನ ಜೀವಿತ ಕಾಲದಲ್ಲಿ, ಅವನ ಶಿಷ್ಯರ ಪೈಕಿ ಯಾವೊಬ್ಬನೂ ಸಿದ್ಧ (ತಯಾರು)ನಾಗಿರದಿದ್ದರೆ, ಅವನು ಪ್ರತೀಕ್ಷೆ ಮಾಡಬೇಕಾಗುವುದು. ಒಬ್ಬ ಸಂತನು ತಾನು ದೇಹ ಬಿಟ್ಟ ನೂರೈವತ್ತು ವರ್ಷಗಳ ನಂತರ ತನ್ನ (ಆಧ್ಯಾತ್ಮಿಕ) ಉತ್ತರಾಧಿಕಾರಿಯನ್ನು ಸ್ಥಾಪಿತಗೊಳಿಸಿದನೆಂಬುದನ್ನು ಒಂದು ಲೇಖನದಲ್ಲಿ ನಾನು ನೋಡಿದ್ದೇನೆ. ಸ್ವಾಮಿ ವಿವೇಕಾನಂದರು, ತಮ್ಮ ಮಹಾ ಸಮಾಧಿಯಾದ ನಂತರ, ತಮ್ಮ ಪ್ರತಿನಿಧಿಯನ್ನು ಸ್ಥಾಪಿಸಲು ಎಷ್ಟು ಸಮಯ ತೆಗೆದುಕೊಂಡರೆಂಬ ವಿಷಯ ನಿನಗೆ ಗೊತ್ತಿದೆ, ಮತ್ತು ತಮ್ಮ ಸಂಸ್ಥೆಯಲ್ಲಿ ತಮ್ಮ ಮನಸ್ಸಿಗೆ ಒಪ್ಪುವ ವ್ಯಕ್ತಿ ದೊರೆಯದಿದ್ದಾಗ ಅವರು ತಮ್ಮ ಸಂಬಂಧ (connection)ವನ್ನು ಬೇರೊಂದು ಸಂಸ್ಥೆಗೆ ಜೋಡಿಸಿ ಸ್ಥಾಪಿತಗೊಳಿಸಿದರು. ಇದರ ಹಿಂದಿರುವ ವಿಚಾರ(ಕಾರಣ) ಏನೆಂದರೆ, ಪ್ರತಿನಿಧಿಯಾಗುವವನು ಗುರುವಿನ ಸಂಪೂರ್ಣ ಶಕ್ತಿಯನ್ನು ತನ್ನಲ್ಲಿ ಹೀರಿ ಅರಗಿಸಿಕೊಳ್ಳಲು ಶಕ್ತನಾಗಿರಬೇಕು. ಯಾಕೆಂದರೆ, ಗುರುವು ತನ್ನ ಜೀವಿತ ಕಾಲದಲ್ಲಿ ಗಳಿಸಿದ ಸಂಪೂರ್ಣ ಶಕ್ತಿಗಳು ಅವನ ಕಾಲಾನಂತರ (Power) ಇಲ್ಲಿಯೇ (ಈ ಲೋಕದಲ್ಲಿಯೇ) ಉಳಿಯುವುವು. ಅರ್ಹತೆಯುಳ್ಳ ಶಿಷ್ಯನು ದೊರೆಯದಿದ್ದಾಗ, ಅದನ್ನು ಅವನು ಎಲ್ಲಿಯೋ ನಿಹಿತಗೊಳಿಸಿ (store) ಇಟ್ಟಿರುತ್ತಾನೆ. ಇದರಿಂದ ಅರ್ಥ ಹೊರಡುವುದೇನೆಂದರೆ ಗುರುವಿನ ಜೀವಿತ ಕಾಲದಲ್ಲಿಯೇ ಶಿಷ್ಯರು ಯೋಗ್ಯತೆಯನ್ನು ಗಳಿಸಿಕೊಳ್ಳಬೇಕು; ಅವರಲ್ಲಿ ಯಾರಾದರೊಬ್ಬನನ್ನು ತನ್ನ ಪ್ರತಿನಿಧಿಯಾಗಿ ಅವನು ಆಯ್ಕೆ ಮಾಡಿಕೊಳ್ಳಬಹುದು. ನಾನಾದರೋ ನನ್ನ ಸ್ಥಿತಿಯನ್ನೇ ನನ್ನ ಡೈರಿಯಲ್ಲಿ ಬರೆದಿಟ್ಟಿದ್ದೇನೆ. ಫತೇಹ್‌ಗಡದ, ಸಮರ್ಥ ಗುರು ರಾಮಚಂದ್ರಜಿ ಮಹಾರಾಜರು ಮಹಾಸಮಾಧಿ ಹೊಂದಿದಾಗ, ಸಂಪೂರ್ಣ (ಅವರ) ಶಕ್ತಿಯು ನನ್ನ ಒಳಗೂ ಹೊರಗೂ ಅನುಭೂತಿಯಾಗತೊಡಗಿದುದು, ಅವರ ಮಹಾಸಮಾಧಿಯಾದ ನಂತರವಷ್ಟೇ ನನಗೆ ಅರಿವಿಗೆ ಬಂದಿತು. ಮತ್ತು ಈ 'ಸ್ಥಿತಿ'ಯನ್ನು ನನಗೆ ಅವರಿಂದ ಹಸ್ತಾಂತರಗೊಳಿಸಲಾಯಿತು ಎಂಬುದು ತಿಳಿಯಿತು. ಅವರು ಮಹಾಸಮಾಧಿ ಹೊಂದಿದ ಸಮಾಚಾರ ಅದರ ನಂತರವಷ್ಟೇ ನನಗೆ ತಲುಪಿದುದು. ಇದನ್ನು (ಹಸ್ತಾಂತರಗೊಂಡ ಶಕ್ತಿಯನ್ನು) ನನ್ನೊಳಗೆ ಹೀರಿಕೊಳ್ಳುವಾಗ ನನ್ನ ನರಮಂಡಲದಲ್ಲಿ ಅಸ್ತವ್ಯಸ್ತತೆ ಉಂಟಾಯಿತು, ಮತ್ತು ಆ

P-4-Books-PM-7-Anantyatre-109



ಕಾರಣದಿಂದುಂಟಾದ ತೀವ್ರ ಕಾಯಿಲೆಯ ನಂತರವೇ ಅದನ್ನು ನನ್ನಲ್ಲಿ ಧಾರಣ ಮಾಡಿಕೊಳ್ಳಲು ಸಾಧ್ಯವಾಯಿತು. ಈಗ ಅವರ (ಆಧ್ಯಾತ್ಮಿಕ) ಗಳಿಕೆಯು ನನ್ನ ಬಳಿ ಇದೆ; ಮತ್ತು ನನ್ನದೇ ಆದ ಗಳಿಕೆ ಏನುಂಟೋ ಅದೂ ಕೂಡ ಇದೆ; ಯಾಕೆಂದರೆ ಶುರುವಿನಲ್ಲಿ ಅವರು ನನಗೆ ಕೊಟ್ಟಿರುವುದನ್ನು ನಾನು ವೃದ್ಧಿಗೊಳಿಸಿದೆನೇ ಹೊರತು, ಅದನ್ನು ಕಮ್ಮಿ ಮಾಡಿಲ್ಲ. ನನ್ನ ನಂತರ ಅದು ಎಲ್ಲಿಗೋ (ಯಾವನೋ ಒಬ್ಬ ಅಭ್ಯಾಸಿಗೆ) ಹಸ್ತಾಂತರಗೊಳ್ಳುವುದು, ಮತ್ತು ಈ ಕುರಿತು ನಾನು ಚಿಂತೆಗೀಡಾಗಿದ್ದೇನೆ. ಇದುವರೆಗೂ, ಪೂರ್ಣ ಶಕ್ತಿಯನ್ನು ಧಾರಣ ಮಾಡಿ ಭರಿಸಿಕೊಳ್ಳಬಲ್ಲ ಒಬ್ಬ ಅಭ್ಯಾಸಿಯೂ ನನಗೆ ಕಂಡು ಬಂದಿಲ್ಲ. ಅದು ಯಾಕೆಂದರೆ ಹಾಗೆ ತಯಾರಾಗಲು ಯಾರೂ ಪ್ರಯತ್ನ ಪಡುತ್ತಿಲ್ಲ. ನಾನೂ ಕೂಡ ವರ್ಷಗಟ್ಟಲೆ ಪ್ರತೀಕ್ಷೆ ಮಾಡಬೇಕಾಗುವ ಸಂದರ್ಭ ಬಾರದಿರಲಿ. ಈಗ ವಿಷಯಕ್ಕೆ ಬರುತ್ತೇನೆ.

ಪ್ರತಿನಿಧಿಯಲ್ಲಿ ಸಂಪೂರ್ಣ (ಗುರುವಿನ) ಸಂಪತ್ತು ಹೋಗಿ ಸೇರುತ್ತದೆ. ಮತ್ತು ಅವನ ಮೂಲಕ ದೀಕ್ಷೆ ಹೊಂದಿದ ಅಭ್ಯಾಸಿಗಳಿಗೆ ಪಾಲು ಸಲ್ಲುತ್ತದೆ. ಪ್ರತಿನಿಧಿಯು ಶಕ್ತಿಯ ಕೇಂದ್ರವಾಗಿರುತ್ತಾನೆ. ಗುರುವಿನ ಆಜ್ಞೆಗೆ ಅನುಸಾರವಾಗಿ ಕಾರ್ಯಗೈಯಲು ಸಾಧ್ಯವಾಗುವ ಹಾಗೆ, ಪ್ರತಿನಿಧಿಯು ಅವನೊಂದಿಗೆ ಅಂತಃ ಸಂಬಂಧ ಕಾಯ್ದುಕೊಳ್ಳಬೇಕಾಗುತ್ತದೆ. ಉನ್ನತ ಮಜಲುಗಳನ್ನು ಪಡೆದ ಇತರ ಶಿಷ್ಯರೂ ಕೂಡ ಅವನ ಆಜ್ಞೆಗಳನ್ನು ಕಾರ್ಯಗತಗೊಳಿಸುತ್ತಾರೆ, ಅವರಿಗೆ ಸುಳುಹು ದೊರೆಯುತ್ತಿರುತ್ತದೆ. ಇತರ ಅಭ್ಯಾಸಿಗಳೂ ಪ್ರತಿನಿಧಿಯು ಪಡೆದ ಔನ್ನತ್ಯವನ್ನು ತಲುಪಬಹುದು. ಆದರೆ ವ್ಯತ್ಯಾಸವೇನೆಂದರೆ, ಪ್ರತಿನಿಧಿಯಾದವನು ತನ್ನ ಗುರುವಿನ ಶಕ್ತಿಯ ಕೇಂದ್ರವಾಗಿರುತ್ತಾನೆ ಮತ್ತು ಗುರುವು ಅವನಲ್ಲಿ ಸ್ವತಃ ಲಯ ಹೊಂದಿರುತ್ತಾನೆ. ಗುರುವು ಹೊರಟು ಹೋದ ನಂತರ ಆಗುವ ಪ್ರಯೋಜನ ಇದಾಗಿದೆ.

ಚೌಬೇಜಿಯವರ ಸ್ಥಿತಿಯನ್ನು ತಿಳಿದು ಸಂತೋಷವಾಯಿತು. ಬಂಧು, ನಾನು ಎರಡು ಮೂರು ವರ್ಷಗಳಿಂದ ತಲೆ ಜಜ್ಜಿಕೊಳ್ಳುತ್ತಿದ್ದೇನೆ, ಆದರೆ ನನ್ನ ಕೈಯಿಂದ ಏನೂ ಆಗಲಿಲ್ಲ. ಯಾವಾಗ ಸದ್ಗುರುವಿನ ಇಚ್ಛೆ (ಅನುಗ್ರಹ) ಆಯಿತೋ, ಅವರ ಸಂಸ್ಕಾರಗಳು ಮೇಲೆದ್ದು ಬಂದವೋ ಆಗ ಒಳ್ಳೆಯ ಸ್ಥಿತಿಗೆ ಬಂದು ನಿಂತರು. ಆದರೆ ಸತ್ಸಂಗ ಹಾಗೂ ಸ್ವಪ್ರಯತ್ನಗಳನ್ನು ಅವರು ಸರಿಯಾಗಿ ಮಾಡುತ್ತ ಹೋಗಬೇಕು. ಮತ್ತು ಈಶ್ವರೀಯ ಪ್ರೇಮದೊಂದಿಗೆ ಸದಾ ಸಂಬಂಧ ಹೊಂದಿರಬೇಕು; ಅದು ನಿರಂತರ ಸ್ಮರಣೆಯಿಂದ ಸಾಧ್ಯವಾಗುತ್ತದೆ.

ನವೆಂಬರ್ ೧೩ರ (೧೯೫೪) ನಿನ್ನ ಪತ್ರದಲ್ಲಿ, 'ಒಂದು ತೆರನಾದ ಕಾವು ಕೊಟ್ಟಂತಿರುತ್ತದೆ' ಎಂದು ಬರೆದಿದ್ದೀಯೆ. ಇದು ಪ್ರೇಮದಿಂದ ಉಂಟಾಗುವ ಒಂದು ಪ್ರಕಾರದ ಅವಸ್ಥೆ. ಪ್ರೇಮ ಶುದ್ಧಗೊಂಡಾಗ ಇದರ ಅನುಭೂತಿ ಆಗುತ್ತದೆ. ಮೃತ-ಸದೃಶ ಅವಸ್ಥೆ ಬರುತ್ತಿರುವುದರ ಸೂಚನೆ ಏನೆಂದರೆ, ಭವಿಷ್ಯತ್ತಿನಲ್ಲಿ-



ಅದು ಎಷ್ಟು ದಿನಗಳ ನಂತರ ಬಂದರೂ ಸರಿಯೆ ಬರಲಿಕ್ಕಿರುವ ಸ್ಥಿತಿಯ ಸಮಾಚಾರವನ್ನು ತರುತ್ತದೆ. ಈ ಮೃತ-ಸದೃಶ ಅವಸ್ಥೆಯು ಲಯಾವಸ್ಥೆಯಾಗಿ ಸ್ಥಾಯಿಯಾಗಿ ನಿಂತರೆ ಅದು ಒಳ್ಳೆಯ ಅವಸ್ಥೆಯಾಗಿದೆ. ಸರಳ ಸ್ಥಿತಿಯಿರುವುದು ಒಂದು ಒಳ್ಳೆಯ ಸ್ಥಿತಿ; ಅದು ಆತ್ಮದೊಂದಿಗೆ ಸಂಬಂಧ ಹೊಂದಿದೆ. ಸ್ಥಿರತೆಯು ಅರಿವಿಗೆ ಬರದಂತಿರುವುದು ಇದಕ್ಕೂ ಉನ್ನತತರವಾದ ಸ್ಥಿತಿ. ಮೌನವಾಗಿರುವುದು ಹಿತಕರವೆಂದೆನಿಸುತ್ತದೆ. ಯಾಕೆಂದರೆ ಅದರಲ್ಲಿ ಆನಂದದ ಭಾನವಾಗುತ್ತದೆ, ಮತ್ತು ಆ ಕಾರಣವೇ ಮಾತನಾಡುವ ವ್ಯವಧಾನವಿರುವುದಿಲ್ಲ. "ಎಲ್ಲ ಬಣ್ಣಗಳೂ ಸೇರಿ ಬಿಳಿಯ ಬಣ್ಣವಾಗುತ್ತದೆ, ಆದರೆ, ಅದರಲ್ಲಿ ಒಂದು ಬಣ್ಣ ಎಂಥದು ಎಂದರೆ ಅದು ಇರುವುದೇ ಗೊತ್ತಾಗುವುದಿಲ್ಲ"-ಎಂದು, ಒಂದು ಅತಿಶಯ ಉತ್ತಮವಾದ ಸ್ಥಿತಿಯ ಬಗ್ಗೆ ಬರೆದಿದ್ದೀಯೆ. ಗೊತ್ತಾಗದಿರುವ ಆ ಬಣ್ಣ 'ಸತ್ಯ'ದ ಚರಟವಾಗಿದೆ. ತಿಳಿವಳಿಕೆಗೋಸ್ಕರ ಅದನ್ನು ಉಷಃಕಾಲದ ವರ್ಣವೆಂದೆನ್ನಲಾಗಿದೆ. ೧೬ನೆಯ ದಿನಾಂಕ (ನವೆಂಬರ್ ೧೯೫೪)ದ ಪತ್ರದಲ್ಲಿ ಉತ್ತರ ಕೊಡಬೇಕಾದುದೇನೂ ಇಲ್ಲ. ಒಂದು ಮಾತು ಬರೆದಿದ್ದೀಯೆ-"ಪ್ರಭು (ಸದ್ಗುರು) ನನ್ನಲ್ಲಿ ಲೀನನಾಗಿ ಹೋದರೆ, ಯಾವುದೇ ಅನುಭೂತಿ ಆಗುವುದಿಲ್ಲ" ಇದರ ಅರ್ಥವೇನೆಂದರೆ, ಆ ವಸ್ತುವಿನ ಸಾನ್ನಿಧ್ಯ ಇದೆ, ಅದು, ಇವರೆಡರ ವಿಚಾರಗಳ ಮೇಲೆ ಲಕ್ಷ್ಯವಿಟ್ಟಾಗ ಅರಿವಿಗೆ ಬರುತ್ತದೆ. ಅತಿಥಿಯು ಮನೆಗೆ ಬಂದ ಮೇಲೆ ಅವನ ಪ್ರತೀಕ್ಷೆ ಇರುವುದಿಲ್ಲ. 'ಝೆಡ್' (Z) ಬಿಂದುವಿನಲ್ಲಿ ನಿನ್ನ ಯಾತ್ರೆ ಮುಗಿಯಿತು ಎಂದು ನನಗೆ ಪ್ರತೀತವಾಗುತ್ತದೆ; ಆದರೆ ಅದು ಹಗುರಾಗಿ ಮತ್ತು ಮಂದ ರೀತಿಯಲ್ಲಿ ಪೂರ್ತಿಗೊಂಡಿರುವುದರಿಂದ ಅದರ ಅಂದಾಜು ನಿನಗೆ ಸಿಗಲಿಲ್ಲ; ಅಲ್ಲದೆ, ಉನ್ನತ ಸ್ಥಾನಗಳಲ್ಲಿ ಯಾತ್ರೆ ನಡೆಯುವ ರೀತಿಯೇ ಹೀಗಿದೆ. ಉನ್ನತ ಸ್ಥಾನಗಳ ಯಾತ್ರೆ ಆರಂಭವಾದಾಗ ಅಭ್ಯಾಸಿಯು ಆ ಕಡೆಗೇ ಲಕ್ಷ್ಯವನ್ನು ಎಡೆಬಿಡದೆ ನೆಟ್ಟಿರುವುದು ಆವಶ್ಯಕ. ಅದರಿಂದ, ಅದರಲ್ಲಿ ಲೀನತೆ ಉಂಟಾಗಿ ಅದರ ಮೇಲೆ ಪ್ರಭುತ್ವ ಉಂಟಾಗುವುದು. ನಾನು ಈಗ ಈ ಸ್ಥಾನದಲ್ಲಿ ಯಾವುದೇ ಕೊರತೆ ಉಳಿದಿಲ್ಲವೆಂಬುದನ್ನು ಯೋಚಿಸಿ ನಂತರ, ಮುಂದಕ್ಕೆ ಒಯ್ಯುತ್ತೇನೆ.

ಡಿಸೆಂಬರ್ ೬, ೧೯೫೪ರ ಸಂಜೆ ನಾನು ಜೌನ್‌ಪುರಕ್ಕೆ ಹೋಗುವ ಆಲೋಚನೆ ಮಾಡಿದ್ದೇನೆ. ಹೊಟ್ಟೆನೋವು ಮೊದಲು ಇದ್ದುದಕ್ಕಿಂತ ಕಡಿಮೆ ಇದೆ, ಆದರೂ ಹೆಚ್ಚೇ ಇದೆ. ಉಸಿರಾಟದ ತೊಂದರೆ ಸುಮಾರು ಕಡಿಮೆಯಾಗಿದೆ. ಜೌನ್‌ಪುರಕ್ಕೆ ಹೋಗುವುದಕ್ಕೆ ಎರಡು ಮೂರು ದಿನ ಮೊದಲು ಡಾಕ್ಟರರಿಂದ ಔಷಧ ಪಡೆದು ಸೇವಿಸಿಬಿಡುತ್ತೇನೆ, ಅಂದರೆ ಒಂದಿಷ್ಟು ಪ್ರಯೋಜನವಾಗಬಹುದು. ಖರ್ಚಿನ ಬಗ್ಗೆ ಕಾಳಜಿಯಾಗುವುದರಿಂದ, ನೋವು ಸಹಿಸಿಕೊಳ್ಳುತ್ತಿದ್ದೇನೆ; ಡಾಕ್ಟರರ ಬಳಿ ಹೋಗುವುದಿಲ್ಲ. ನವೆಂಬರ್ ೧೮ ರಂದು (೧೯೫೪), ಹಗಲು ೧೨-೩೦ರ ಸುಮಾರಿಗೆ ನಿನ್ನಲ್ಲಿ ದಣಿವು ಉಂಟಾಗಿರುವುದು ಗಮನಕ್ಕೆ ಬಂದಿತು; ಕೂಡಲೇ

ನಾನು ಅದನ್ನು ಸರಿಪಡಿಸಿದ್ದೇನೆ. ಬಹುಶಃ ನಿನಗೂ ಇದರ ಅನುಭೂತಿಯಾಗಿರಬಹುದು. ಯಾತ್ರೆ ಮಾಡುವುದರಿಂದ ಇದು ಉಂಟಾಗುತ್ತದೆ; ಮತ್ತು ಶೀಘ್ರವಾಗಿ ದಾರಿ ಕ್ರಮಿಸುವ ಅಭ್ಯಾಸಿಗಳಲ್ಲಿ ಉಂಟಾಗುತ್ತದೆ. ಹೀಗೆ ದಣಿವುಂಟಾಗುವುದೂ ಶುಭಕಾರಕವೇ ಆಗಿದೆ. ಯಾಕೆಂದರೆ, ಅದು, ವೇಗವಾಗಿ ಕ್ರಮಿಸುತ್ತಿರುವುದರ ಸಂತೋಷದ ಸಮಾಚಾರ ತರುತ್ತದೆ. ಆದರೆ, ದಣಿವು ಇರುವವರೆಗೂ ಅಭ್ಯಾಸಿಯು ಮುಂದಕ್ಕೆ ಕ್ರಮಿಸಲು ಸಾಧ್ಯವಾಗುವುದಿಲ್ಲವೆಂಬುದೂ ಸರಿಯೆ. ಆದ್ದರಿಂದ ದಣಿವುಂಟಾದುದು ಗೊತ್ತಾದಾಗ ಅಭ್ಯಾಸಿಯ ಸಮಯ ವ್ಯರ್ಥವಾಗಬಾರದೆಂದು ಅದನ್ನು ಕೂಡಲೇ ದೂರ ಮಾಡುವುದು, ಮಾರ್ಗದರ್ಶಿಯ (ಗುರುವಿನ) ಕಾರ್ಯವಾಗಿದೆ. ಚೌಬೇಜಿಯವರಿಗೆ ಪ್ರಣಾಮ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೧ **ಪತ್ರ ಸಂಖ್ಯೆ – ೪೪೨** ಷಾಹಜಹಾನಪುರ
೨೯–೧೧–೧೯೫೪

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

ನಿನ್ನ ಮೂರು ಪತ್ರಗಳು, ನವೆಂಬರ್ ೧೯, ೨೨ ಮತ್ತು ೨೫ರವು, ಬಂದು ತಲುಪಿವೆ. ನಾನು ಡಾಕ್ಟರಿಂದ ಚಿಕಿತ್ಸೆ ಪಡೆಯಲು ಶುರು ಮಾಡಿದ್ದೇನೆ, ಈಗ ನೋವು ಸಾಮಾನ್ಯ ಸ್ಥಿತಿಗೆ ಬಂದಿದೆ. ಶ್ವಾಸೋಚ್ಛ್ವಾಸದ ತೊಂದರೆಯೂ ಮೊದಲೇ ಸಾಮಾನ್ಯವಾಗಿತ್ತು. ನೀನು ಆರೋಗ್ಯದಿಂದಿರಬೇಕಾದುದು ಅಗತ್ಯ. ನಿನ್ನ ವಿಚಾರ ಮತ್ತು ಇಚ್ಛಾ ಶಕ್ತಿಗಳಿಂದ ಹಾಗೆ ಆಗಲೇ ಬೇಕು. ಮತ್ತು ಅದನ್ನೇ ನೀನು ಮಾಡುವ ಪೂಜೆ ಎಂದು ತಿಳಿ. ಆರೋಗ್ಯ ಲಾಭಕ್ಕೋಸ್ಕರ ಎರಡು ರೀತಿಯ ಧ್ಯಾನಗಳನ್ನು ನಾನು ಬರೆಯುತ್ತೇನೆ. ಅವುಗಳನ್ನು ನೀನು ಮಾಡಬೇಕು. ಇದನ್ನು ನನ್ನ ಸಲಹೆ ಎಂದಾದರೂ ತಿಳಿ ಅಥವಾ ಪ್ರಾರ್ಥನೆ ಎಂದಾದರೂ ತಿಳಿ.

ಒಂದು, ಕನಿಷ್ಠ ಪಕ್ಷ ಹದಿನೈದು ನಿಮಿಷಗಳಷ್ಟು ಕಾಲ, ಎಲ್ಲ ರೋಗಗಳು ನಿನ್ನ ಶರೀರದಿಂದ, ಹೊಗೆಯ ರೂಪದಲ್ಲಿ ಅಥವಾ ಆವಿಯ ರೂಪದಲ್ಲಿ ಹಿಂಭಾಗದಿಂದ ಹೊರಟು ಹೋಗುತ್ತಿವೆ ಎಂದು ಧ್ಯಾನ ಮಾಡಬೇಕು. ಅದಕ್ಕೆ ಸಮಯ ನಿಗದಿಪಡಿಸಿಕೊಳ್ಳಬೇಕು.

ಎರಡನೆಯದು, ನೀನು ಆರೋಗ್ಯವಂತಳಾಗುತ್ತಿದ್ದೀಯೆ ಮತ್ತು ರೋಗಗಳೆಲ್ಲ ಬಿಟ್ಟು ಹೋಗುತ್ತಿವೆ ಎಂದು ಧ್ಯಾನಿಸಬೇಕು. ಮೊದಲನೆಯದನ್ನು ಮಾಡಿದ ನಂತರ ಎರಡನೆಯದನ್ನು ಮಾಡಬಹುದು. ಬೆಳಿಗ್ಗೆ, ಸಾಯಂಕಾಲ ಅಥವಾ ರಾತ್ರಿ ಹೊತ್ತಿನಲ್ಲಿ ಮಾಡಬಹುದು.



ಈಗ ನಾನು ನಿನ್ನ ನವೆಂಬರ್ ೧೯ರ ಪತ್ರಕ್ಕೆ ಸಂಕ್ಷೇಪವಾಗಿ ಉತ್ತರ ಬರೆಯುತ್ತಿದ್ದೇನೆ. ಮನಸ್ಸಿನ ಬಂಧನವು ಬಹಳ ಸಡಿಲಗೊಂಡಿದೆ. ಆದ್ದರಿಂದ ಅದು ನಿನ್ನ ಅನುಭೂತಿಗೆ ನಿಲುಕದಾಗಿದೆ. ಇನ್ನೂ ಸ್ವಲ್ಪ ಉಳಿದಿದೆ. ಯಾಕೆಂದರೆ ನಾನು ನಿನ್ನ ಮನೋಮಯ ಕೋಶವನ್ನು ಭಗ್ನಗೊಳಿಸಿಲ್ಲ. ನೀನು ಇನ್ನೂ ಹೃದಯ ಮಂಡಲವನ್ನು ದಾಟಿ ಹೋಗಿಲ್ಲ; ಇನ್ನೂ ಸ್ವಲ್ಪ ಉಳಿದಿದೆ. ಆದರೆ ಹೆಚ್ಚು ಕಡಿಮೆ ಅದರ ಕೊನೆಯ ತುದಿಯವರೆಗೆ ಮುಟ್ಟಿದ್ದೀಯೆ. *'ಈಶ್ವರೀಯ ಹೃದಯ ಅರಗಿಸಿಕೊಂಡು ಬಿಟ್ಟಿದೆ'* ಎಂದು ನೀನು ಬರೆದಿದ್ದೀಯೆ. –ಅದರಲ್ಲಿ ನೀನು ಓತ–ಪ್ರೋತವಾಗಿ ಕರಗಿ ಬಿಟ್ಟಿದ್ದೀಯೆ ಎಂದು ಇದರ ಅರ್ಥ. ತಲ್ಲೀನವಾಗುವುದರ ಸಾಮರ್ಥ್ಯ ನಿನ್ನ ಅನುಭೂತಿಗೆ ಬರುತ್ತಿಲ್ಲ, ಯಾಕೆಂದರೆ ನೀನು ಈಗಾಗಲೇ ತಲ್ಲೀನಳಾಗಿದ್ದೀಯೆ, ಮತ್ತು ಆಗುತ್ತಲೇ ಇದ್ದೀಯೆ. ಇನ್ನೊಂದು ಮಾತೆಂದರೆ, ನಿನ್ನ ಲಯಾವಸ್ಥೆಯ ದೆಸೆಯಿಂದ 'ದ್ವೈತ'ವು ಹೆಚ್ಚು ಕಡಿಮೆ ದೂರವಾಗಿ ಬಿಟ್ಟಿದೆ. *'ಹೃದಯವು ಒಂದು ಬಂಜರು ಭೂಮಿಯಾಗಿ ಬಿಟ್ಟಿದೆ'*–ಎಂಬ ನಿನ್ನ ಅಭಿವ್ಯಕ್ತಿಯಿಂದ ನಾನು ಬಹಳ ಸಂತೋಷಗೊಂಡೆ. ಯಾರೊಬ್ಬರ ಹೃದಯ ಈಶ್ವರೀಯ ಹೃದಯವಾಗಿ ಹೋದ ಮೇಲೆ, ಅದರಲ್ಲಿ ತೇವ ಇರುವುದೆಂತು? ತೇವವನ್ನು ನಮ್ಮದೇ ವಿಚಾರಗಳಿಂದ ಹುಟ್ಟಿಸಿಕೊಳ್ಳುತ್ತೇವೆ. ಮತ್ತು ಅದರಿಂದ ವಿವಿಧ ವರ್ಣಮಯ ಪುಷ್ಪಗಳು ಬೆಳೆಯುತ್ತವೆ, ಹಾಗೂ ಮನುಷ್ಯನು ತಾನೇ ಬೆಳೆಸಿದ ತೋಟದಲ್ಲಿ, ಆನಂದೋನ್ಮಾದಪಡುತ್ತಿರುತ್ತಾನೆ. ಅಂದ ಮೇಲೆ, ಈಗ ನಿನಗೆ ಅದರ ಸಂಬಂಧವೇನಿದೆ? ವಿಚಾರವು ಸೂಕ್ಷ್ಮವಾದಾಗ ಅದರ ಅನುಭೂತಿಯಾಗುವುದಿಲ್ಲ.

ಈಗ ನಾನು ನಿನ್ನ, ೨೨ ನವೆಂಬರ್, ೧೯೫೪ರ ಪತ್ರಕ್ಕೆ ಪ್ರತ್ಯುತ್ತರ ಕೊಡುತ್ತೇನೆ. 'ಈಗ ನಿನ್ನ ಸ್ಥಿತಿಯಲ್ಲಿ 'ಮಾಲಿಕ'ನ (ಪ್ರಭು, ಗುರು) ಶಕ್ತಿ ಅಥವಾ ಪರಿಗಣನೆಯ ಅವಕಾಶವಿಲ್ಲ'– ಎಂದು ಬರೆದಿದ್ದೀಯೆ. ಇದರ ಅಭಿಪ್ರಾಯವೇನೆಂಬುದು ತಿಳಿಯಲಿಲ್ಲ. ಆದರೆ ನಿನ್ನ ಅನಿಸಿಕೆಯು ಭಾಸವಾಯಿತು; ಇದು ಲಯಾವಸ್ಥೆಯ ಪರಿಣಾಮವಾಗಿದೆ. ಬಡಬಡಿಸುವುದು ಅಂಥ ಕೆಟ್ಟದ್ದೇನಲ್ಲ. ನಮ್ಮ ವಿಚಾರವು ಪ್ರಭುವಿನೊಂದಿಗೆ (ಗುರುವಿನೊಂದಿಗೆ) ಸಂಪರ್ಕ (ಸಂಸ್ಪರ್ಶ)ದಲ್ಲಿದ್ದಾಗ, ಅದು ತನ್ನ ಬಣ್ಣ (ಗುಣ–ಲಕ್ಷಣ)ವುಳ್ಳ ಮಾತನ್ನು, ಗುರುವಿನೊಂದಿಗೆ ಅವಲಂಬನೆ ಹೊಂದಿ, ತನ್ನಿಂದ ತಾನೇ ಹೇಳಿಬಿಡುತ್ತದೆ. ನಿನ್ನ ವಿಚಾರದ ಲಕ್ಷಣ (ಗುಣ) ಏನೆಂಬುದನ್ನು ಇಡೀ ಪತ್ರವೇ ವ್ಯಕ್ತಪಡಿಸುತ್ತದೆ; ಮತ್ತು ನೀನು ಸಂಪೂರ್ಣವಾಗಿ ಗುರುವಿಗೆ ಸಮರ್ಪಿತಳಾಗಿರುವುದನ್ನು ಸೂಚಿಸುವಂತೆನಿಸುತ್ತದೆ. ನಾನು 'ಗುರು ಸಂದೇಶ' ಕಿರು ಲೇಖನದಲ್ಲಿ 'ದರ್ಶನದ ಸ್ಥಿತಿ'ಯನ್ನು ಕುರಿತು ಹೇಳಿದುದು ನಿನ್ನಲ್ಲಿ ತೆರೆದುಕೊಂಡು ಬಿಟ್ಟಿದೆ. ಈಶ್ವರನ ದರ್ಶನವಾಗುವುದು ಇದೇ ರೀತಿಯಲ್ಲಿಯೇ.

P-4-Books-PM-7-Anantyatre-111



ನವೆಂಬರ್ ೨೩ರ ನಿನ್ನ ಪತ್ರವೂ ಬಂದಿದೆ. ಅದಕ್ಕೆ ಪ್ರತ್ಯುತ್ತರ ಕೊಟ್ಟು, ಆಮೇಲೆ ನವೆಂಬರ್ ೨೬ರ ಪತ್ರಕ್ಕೆ ಉತ್ತರ ಬರೆಯುತ್ತೇನೆ. ಇದರಲ್ಲಿ ನೀನು ಅದೆಂಥ ಒಳ್ಳೆಯ 'ಸ್ಥಿತಿ'ಯನ್ನು ಕುರಿತು ಬರೆದಿದ್ದೀಯೆ ! ಈಶ್ವರ ನಿನ್ನನ್ನು ಹರಸಲಿ. ನಾನೂ ಈ ಸ್ಥಿತಿಯಲ್ಲಿದ್ದೆ. ಮತ್ತು ನಮ್ಮ ಗುರು ಮಹಾರಾಜರೂ ಬಹಳ ದೀರ್ಘ ಸಮಯ ಇದ್ದರು. ಯಾರಲ್ಲಿ ಈ ಸ್ಥಿತಿ ಉಂಟಾಗುವುದೋ ಅವನು ಕೊನೆಯವರೆಗೆ ಹೋಗಿ ತಲುಪಿದ ಶುಭ ಸಮಾಚಾರವನ್ನು ಖಂಡಿತ ತರುತ್ತಾನೆ ಎಂದು ಹೇಳಬಹುದು. ನಿನಗೆ ಇರುವ ಅನುಭವ ಸಾಮರ್ಥ್ಯದ (ಸಂವೇದನಾಶೀಲತೆ) ಬಗ್ಗೆ ಎರಡು ಮಾತಿಲ್ಲ. ಹಾಗೆನ್ನುವುದಾದರೆ ಜನರು ಈ ದಾರಿಯನ್ನು ಕ್ರಮಿಸಿ ಹೋಗುತ್ತಾರೆ, ಆದರೆ ಅವರಿಗೆ ಈ ಸಂಗತಿಗಳು ಅನುಭವಕ್ಕೆ ಸಿಗುವುದಿಲ್ಲ (ಅವರು ಗ್ರಹಿಸಲಾರರು). ನಾನು ಪ್ರಶಂಸಿಸಿದ ಸ್ಥಿತಿ ಇರುವುದಾದರೂ ಏನು?– *ಈಶ್ವರನ ಹೆಸರು ತೆಗೆದುಕೊಂಡ ಮಾತ್ರಕ್ಕೆ ಹೃದಯವನ್ನು ಒತ್ತಿ ಹಿಡಿದುಕೊಂಡಿರುವಂತಾಗುವುದು. ಯಾರಾದರೂ ಈಶ್ವರ ಹೆಸರೆತ್ತಿದರೆ ಸಾಕು, ಆ ಅಭ್ಯಾಸಿ, ಹೃದಯವನ್ನು ಒತ್ತಿ ಹಿಡಿದುಕೊಳ್ಳುವಷ್ಟು ವಿರಹ ವೇದನೆಯನ್ನು ಅನುಭವಿಸುತ್ತಾನೆ. ಮತ್ತು ಪ್ರೇಮದ ದೆಸೆಯಿಂದಾಗಿ ವಿರಹವನ್ನು ಸಹಿಸುವುದು ದುಃಸಾಧ್ಯವಾಗುತ್ತದೆ.* ಇದು ಎಂಥ ಉತ್ತಮ ಸ್ಥಿತಿ ಎಂದರೆ, ವ್ಯಕ್ತಪಡಿಸಲು ಶಬ್ದಗಳು ಸಿಗುವುದಿಲ್ಲ.

ಈಗ ನವೆಂಬರ್ ೨೬ರ ಪತ್ರಕ್ಕೆ ಸಂಕ್ಷೇಪವಾಗಿ ಉತ್ತರಿಸುತ್ತೇನೆ. ಈ ಪತ್ರ ಇನ್ನೂ ವಿಶಿಷ್ಟವಾದದ್ದು, ಮತ್ತು ಇಡೀ ಪತ್ರದ ಉತ್ತರವನ್ನು ಒಂದೇ ಶಬ್ದದಲ್ಲಿ ವ್ಯಕ್ತಪಡಿಸಬಹುದು. ಒಟ್ಟಿನಲ್ಲಿ, 'ಏಕಾತ್ಮತೆ'ಯನ್ನು ಪಡೆದ ಸಮಾಚಾರವನ್ನು ಇದು ಅರುಹುತ್ತದೆ, ಇನ್ನೂ ಇಂಥ ಎಷ್ಟೊಂದು ಅವಸ್ಥೆಗಳು ಬರುವುವೆಂದರೆ, ನೀನೇ ಇಲ್ಲವೆಂಬಂತೆ ಅನಿಸುವಷ್ಟು, ಎಲ್ಲವೂ ಲಘು (ಹಗುರ)ವಾಗಿ ಬಿಡುತ್ತದೆ. ಅವಿಕಾರ (ಬದಲಾವಣೆಗೊಳ್ಳದ) ಸ್ಥಿತಿ ಉಂಟಾಗಲಿರುವುದರ ಪೂರ್ವ ಚಿಹ್ನೆ ಇದು. ನಿನ್ನಲ್ಲಿ ಲಯಾವಸ್ಥೆ ದಿನ ದಿನಕ್ಕೆ ವರ್ಧಿಸುತ್ತಿದೆ. ಈ ಪತ್ರಕ್ಕೆ ಉತ್ತರವಾಗಿ ಇಷ್ಟು ಸಾಕು.

ನಿನ್ನ ಪತ್ರಗಳನ್ನು, ಓದಲು ಮತ್ತು ಅಭ್ಯಾಸಿಗಳಿಗೆ ಓದಿ ಹೇಳಲೋಸುಗ ಆಸಾಮದಿಂದ ಕಾಶೀರಾಮ ಬೇಡುತ್ತಿದ್ದಾರೆ. ಅವುಗಳನ್ನು ಕಳುಹಿಸಲು ನನಗೆ ಇಷ್ಟವಿಲ್ಲ. ಅವರು ನಿನ್ನನ್ನೂ ಕೇಳಲೂಬಹುದು. ನೀನು ಅವರಿಗೆ ಇಷ್ಟು ಬರೆದು ತಿಳಿಸು : 'ಕೆಲವನ್ನು ರಾಮಚಂದ್ರಜಿಯವರು ನನಗೆ ನಕಲು ಮಾಡಲು ಕಳುಹಿಸಿದ್ದಾರೆ. ಇನ್ನು ಕೆಲವು ಅವರ ಬಳಿ ಇವೆ, ಅವುಗಳನ್ನು ಅವರು ಮುದ್ರಿಸಲು ಬಯಸುತ್ತಾರೆ. ಆಗ ಪ್ರತಿಯೊಬ್ಬರೂ ಅವುಗಳನ್ನು ಓದಬಹುದು. ಈ ವಿಷಯದಲ್ಲಿ ಏನು ಹೇಳಬೇಕಿದೆಯೋ ಅದನ್ನು ರಾಮಚಂದ್ರರಿಗೆ ಹೇಳಿರಿ'.

೨೯–೧೧–೧೯೫೪ ರಂದು, ರಾತ್ರಿ ೧೦–೩೦ಕ್ಕೆ, ನಿನ್ನನ್ನು 'ಝೆಡ್' (Z) ಬಿಂದುವಿನಿಂದಾಚೆಗೆ ಒಯ್ದಿದ್ದೇನೆ. ಈಗ, ಈ ಸ್ಥಾನಗಳನ್ನು ಎ–೧, ಬಿ–೧ ಎಂದು ಹೆಸರಿಟ್ಟಿದ್ದೇನೆ. ಈಗ ನಿನ್ನ ಆಧ್ಯಾತ್ಮಿಕ ಯಾತ್ರೆ ಎ–೧ (A1)ನಲ್ಲಿದೆ. ನಾನು ನಿನ್ನನ್ನು



ಮೇಲಕ್ಕೆಳೆದಾಗ, ನೀನು ಮೂರು ಸಾರೆ ಜಾರಿ ಝೆಡ್ (Z) ಬಿಂದುವಿಗೆ ತಿರುಗಿ ಬಂದೆ. ಆಗ ಲಾಲಾಜಿ ಸಾಹೇಬರು, ಒಂದು ಆಘಾತ ಕೊಡುವಂತೆ ನನಗೆ ಹೇಳಿದರು. ನಾನು ಹಾಗೆ ಆಘಾತ (jerk) ಕೊಟ್ಟ ಮೇಲೆ ನೀನು ಎ–೧(A1) ಬಿಂದುವಿನಲ್ಲಿ ನಿಂತೆ. ಮೇಲಿನಿಂದ ಹರಿದು ಬರುತ್ತಿರುವ ಶಕ್ತಿಯು ನಿನ್ನನ್ನು ಕೆಳಕ್ಕೆ ಎಸೆಯುತ್ತಿತ್ತು. ಅಭ್ಯಾಸಿಯು ಮೇಲುಮೇಲಕ್ಕೆ ಹೋದ ಹಾಗೆ, ಪ್ರಕೃತಿಯ ಶಕ್ತಿಯೂ ಹೆಚ್ಚುತ್ತದೆ; ಆದ್ದರಿಂದ ಇನ್ನೊಬ್ಬರ (ಗುರುವಿನ) ಸಹಾಯ ಅಗತ್ಯವಾಗುತ್ತದೆ.

ನಿನ್ನ ಸೋದರರಿಗೆ, ಸೋದರಿಯರಿಗೆ ಆಶೀರ್ವಾದ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೨ **ಪತ್ರ ಸಂಖ್ಯೆ – ೪೪೫** ಜೌನ್‌ಪುರ
೮–೧೨–೧೯೫೪

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

ಡಿಸೆಂಬರ್ ೨, ೧೯೫೪ರ ನಿನ್ನ ಪತ್ರ ಡಿಸೆಂಬರ್ ೬ಕ್ಕೆ ನಾನು ಪ್ರಯಾಣದಲ್ಲಿರುವಾಗ ತಲುಪಿತು. ನಾರಾಯಣ (ಒಬ್ಬ ಅಭ್ಯಾಸಿ) ನನ್ನನ್ನು ಷಾಹಜಹಾನಪುರ ಸ್ಟೇಷನ್ನಿನಲ್ಲಿ ಭೆಟ್ಟಿಯಾದನು. ಅವನು ನನ್ನ ಜೊತೆಗಿದ್ದಾನೆ. ತಾ ॥ ೧೧–೧೨–೫೪ರ ಮಧ್ಯಾಹ್ನದ ಗಾಡಿಯಿಂದ ಹೊರಟು, ರಾತ್ರಿ ಹನ್ನೊಂದು ಗಂಟೆಗೆ ಷಾಹಜಹಾನಪುರ ತಲುಪುವ ಉದ್ದೇಶ ಇಟ್ಟುಕೊಂಡಿದ್ದೇನೆ. ನಾನು ಜೌನ್‌ಪುರಕ್ಕೆ ಬರುವುದು ಅಗತ್ಯವಿತ್ತು, ಯಾಕೆಂದರೆ, ನಾನು ಅಲಹಾಬಾದಿನಲ್ಲಿ ಶುಕ್ಲಾಜಿಯವರ ಜಟಿಲತೆಗಳನ್ನು ಬಹಳಷ್ಟು ಮಟ್ಟಿಗೆ ದೂರ ಮಾಡಿದ್ದೆ. ಷಾಹಜಹಾನಪುರದಲ್ಲಿ ಕೂಡ, ನನ್ನ ನೋವು ಅನುವು ಮಾಡಿ ಕೊಟ್ಟ ಮಟ್ಟಿಗೆ ಅವರ ಕಡೆ ಗಮನ ಕೇಂದ್ರೀಕರಿಸಿದ್ದೆ. ಈಶ್ವರೇಚ್ಛೆಯಿದ್ದರೆ ೨–೩ ದಿನಗಳಲ್ಲಿ ಅವರನ್ನು ಇನ್ನೂ ಉತ್ತಮ ಸ್ಥಿತಿಗೆ ತರುತ್ತೇನೆ. ನಿನ್ನ ಅನುಭವಕ್ಕೋಸ್ಕರ ಬರೆಯುತ್ತೇನೆ. ಇದು ನನ್ನ ಜೀವನದಲ್ಲಿ ಈ ತೆರನಾದ ಮೊದಲ ಅನುಭವ. ಪ್ರಾಣ ಶಕ್ತಿಯೇ ಹೊರಟು ಹೋಗುತ್ತಿರುವುದೆಂಬಂತೆ (ಅವರ) ಹೃದಯದ ಸ್ಥಿತಿ ಇತ್ತು. ಈಗ ಪ್ರಾಣಶಕ್ತಿಯು ಸಾಕಷ್ಟು ಉಂಟಾಗಿದೆ. ಆದರೆ, ಅವಸರದ ಕಾರಣ ನನ್ನಿಂದ ತಪ್ಪು ಆಗಿ ಹೋಗುತ್ತದೆ; ಮತ್ತು ನಾನು ನನ್ನ ವಿಶೇಷ ಸಂಕಲ್ಪ ಶಕ್ತಿಯನ್ನು ಉಪಯೋಗಿಸಿ ಬಿಡುತ್ತೇನೆ. ಅದರಿಂದಾಗಿ, ಪ್ರಾಣ ಶಕ್ತಿಯನ್ನು ಎಷ್ಟು ಕೊಡಬೇಕಿತ್ತೋ, ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕೊಟ್ಟು ಬಿಟ್ಟೆ, ಮತ್ತು ಅದು ನನಗೆ ಕೂಡಲೇ ಗೊತ್ತಾಯಿತು. ಅದರ ಭಾರವನ್ನೇನೋ ದೂರ ಮಾಡಿದೆ, ಈಗ ಸಮಸ್ಥಿತಿ ಉಂಟಾಗಲು ಇನ್ನೂ

P-4-Books-PM-7-Anantyatre-112



ಎಷ್ಟು ಕಡಿಮೆ ಮಾಡಬೇಕೆಂದು ನೋಡಬೇಕು. ಒಂದು ನಾಡಿಯು ಹೃದಯ ಹಿಂಭಾಗದ ಬೆನ್ನು ಹುರಿಗೆ ಸಂಬಂಧವುಳ್ಳದ್ದಾಗಿದೆ; ಅದರಲ್ಲಿರುವ ಕಪ್ಪು (ಕಾಲಿಮೆ) ದೂರ ಮಾಡಿದೆ, ಆದರೆ ಭಾರವನ್ನು ತೆಗೆದು ಹಾಕಲು ಸಾಧ್ಯವಾಗಲಿಲ್ಲ. ಅದನ್ನು ದೂರ ಮಾಡುವ ವಿಧಾನವನ್ನು ಯೋಚಿಸುತ್ತಿದ್ದೇನೆ. ಶುಕ್ಲಾಜಿಯವರು ಲಖೀಂಪುರದಿಂದ ಷಾಹಜಹಾನಪುರಕ್ಕೆ ಬಂದಾಗ, ಅವರು ತಮ್ಮನ್ನು ತಾವೇ ಮರೆಯುವುಂತಾಗುವುದಕ್ಕೆ ನೆರವಾಗಲು ಬೆರಳಿನಿಂದ ಬೆನ್ನು ಹುರಿಯ ಮೇಲೆ ತಟ್ಟಿದ್ದೆ; ಅದು ನನ್ನ ಸಂಶೋಧನೆಯಾಗಿತ್ತು. ಅವರು ಅದನ್ನು ಭಾರವುಳ್ಳದ್ದಾಗುವಂತೆ ಹೇಗೆ ಮಾಡಿಕೊಂಡರೋ ತಿಳಿಯದು. ಇದನ್ನು ಸರಿಪಡಿಸುವುದು ಇನ್ನೂ ಉಳಿದಿದೆ. ಬೇರೆ ಉಳಿದುದೆಲ್ಲವೂ ಸರಿ ಹೋಗಿದೆ. ಈಶ್ವರನು ತಯಾರು ಮಾಡಿಯೇ ಕಳಿಸುವಂಥ, ವಿಶೇಷ ತರಬೇತಿಗೆ ಯೋಗ್ಯರಾದವರು ಅವರಾಗಿದ್ದರೆ ಎಂದು ನನಗೆ ಅನಿಸುತ್ತದೆ. ನೀವು ಏನನ್ನು ನೋಡುತ್ತೀರೋ, ಅದರ ದೋಷಗಳ ಸರಿಯಾದ ನಿವಾರಣೋಪಾಯವು ನಿಮ್ಮ ಮನಸ್ಸಿನಲ್ಲಿ ಸಹಜವಾಗಿಯೇ ಗೊತ್ತಾಗಿ ಬಿಡುವಷ್ಟು, Super conscious stateನ್ನು (ಪರಾಪ್ರಜ್ಞೆಯನ್ನು) ನೀವೆಲ್ಲರೂ ಬೆಳೆಸಿಕೊಳ್ಳಬೇಕೆಂಬುದು ನನ್ನ ಬಯಕೆ. ನನಗೆ ಅನಿಸುವುದನ್ನು (ಗೊತ್ತಾಗುವುದನ್ನು) ನಾನು ಹೇಳುತ್ತೇನೆ; ಆದರೆ ಅದನ್ನು ಮಾಡಲು ಕೂಡ ಇಷ್ಟು ಅನುಭೂತಿ ಮತ್ತು ಅಂದಾಜು ಇದುವರೆಗೆ ಯಾರಲ್ಲಿಯೂ ಕಾಣಸಿಗುವುದಿಲ್ಲ. ಒಂದು ಗಾದೆ ಪ್ರಸಿದ್ಧವಿದೆ : "ಕಲಿಸಲ್ಪಟ್ಟ ಮಕ್ಕಳು ದರಬಾರಿಗೆ ಹೋಗುವುದಿಲ್ಲ". ಅಲ್ಲದೆ, ನನ್ನ ಮನಸ್ಸಿನಲ್ಲಿ (ತಿಳುವಳಿಕೆಯಲ್ಲಿ) ಇಲ್ಲದ ಅನೇಕ ಸಂಗತಿಗಳಿವೆ, ಆದರೆ, ಅಗತ್ಯ ಬಿದ್ದಾಗ ಈಶ್ವರನು ಅವುಗಳನ್ನು ನನಗೆ ಖಂಡಿತವಾಗಿಯೂ ತಿಳಿಸುತ್ತಾನೆ. ನಾನು ಎಷ್ಟು ಸುಸ್ತಾಗಿ ಹೋಗಿದ್ದೇನೆಂದರೆ, ನನ್ನ ಶ್ರಮ ಉಳಿಸಲು ನಾನು ಅವಸರ ಮಾಡುತ್ತೇನೆ. ಅದರ ಪರಿಣಾಮವಾಗಿ, ಆವಶ್ಯಕತೆಗಿಂತಲೂ ಹೆಚ್ಚು ಶಕ್ತಿಯನ್ನು ವ್ಯಯಿಸಿ (ಪ್ರಯೋಗಿಸಿ) ಬಿಡುತ್ತೇನೆ. ಇದರಲ್ಲಿ ಇಬ್ಬರ ಹಿತಾಸಕ್ತಿಯ ಪರಿಗಣನೆಯೂ ಇದೆ– ನನ್ನ ಸಮಯವೂ ಉಳಿಯುತ್ತದೆ, ಅಭ್ಯಾಸಿಯ ಸಮಯವೂ ಉಳಿಯುತ್ತದೆ. ತರಬೇತಿಯ ವಿಧಾನವು ಎಷ್ಟು ವಿಶಾಲವಿದೆಯೆಂದರೆ, ಅದಕ್ಕೆ ಹೋಲಿಸಿದರೆ ನಾನು ತಿಳಿದಿರುವುದೂ ಅಲ್ಪವೇ ಸರಿ. ನಾನು ಕಾಶೀರಾಮ ಅವರಿಗೆ ಪತ್ರ ಬರೆದು ತಿಳಿಸಿದ್ದೇನೆ. ಕಸ್ತೂರಿಯ ಪತ್ರಗಳಲ್ಲಿ ಅವರ ಮನೆತನದ ಆಪ್ತ ವಿಷಯಗಳೂ ಇರುವುದರ ಕಾರಣ, ಅವುಗಳನ್ನು ಇದ್ದ ಹಾಗೆಯೇ ನಾನು ಕಳುಹಿಸಲು ಇಚ್ಛಿಸುವುದಿಲ್ಲ. ಕಂಡವರಿಗೆಲ್ಲ ಅದು ತಿಳಿಯಬೇಕೆಂದು ನಾನು ಬಯಸುವುದಿಲ್ಲ– ಎಂದು ಬರೆದಿದ್ದೇನೆ.

ನಿನ್ನ ಆಧ್ಯಾತ್ಮಿಕ ಯಾತ್ರೆಯ ಸ್ಥಾನ ಈಗ ಎ–೧ (A1) ಬಿಂದುವಿನಲ್ಲಿದೆ. ನಿನ್ನ ಪತ್ರದಲ್ಲಿ 'ಎ' (A) ಎಂದು ಬರೆದಿದ್ದೀಯೆ. ಅದನ್ನು ನಾನು ಸರಿಪಡಿಸಿದ್ದೇನೆ. ಎ (A)– ದಿಂದ ಝೆಡ್ (Z)ವರೆಗಿನ ಯಾತ್ರೆಯನ್ನು ನೀನು ಕ್ರಮಿಸಿ ಮುಗಿಸಿದ್ದೀಯೆ. ವರ್ಣಮಾಲೆಯಲ್ಲಿ ಇನ್ನೂ ಹೆಚ್ಚು ಅಕ್ಷರಗಳಿಲ್ಲವಾದ್ದರಿಂದ, ಎ–೧, ಬಿ–೧, ಸಿ–೧ ಇತ್ಯಾದಿ ಬಳಸಬಹುದು. ಈಗ ನೀನು A1 ಸ್ಥಾನದಲ್ಲಿ ಇದ್ದೀಯೆ. ನನ್ನ ದೃಷ್ಟಿ



A1 ಸ್ಥಾನದಲ್ಲಿದ್ದಾಗ ನಾನು ಹರ್ಷದಿಂದ ಗದ್ಗದಿತನಾಗುತ್ತೇನೆ. ಅದರ ಸುಗಂಧ ನನಗೂ ಸ್ವಲ್ಪ ಬಂದು ಮುಟ್ಟುತ್ತದೆ. ಮತ್ತು ನನ್ನ ಹೃದಯ ಸಂತೋಷಭರಿತವಾಗುತ್ತದೆ. ಈ ಸ್ಥಾನದಲ್ಲಿ ಅದೆಂಥ ಸುಗಂಧವಿದೆಯೆಂದರೆ ಅದನ್ನು ಸುವಾಸನೆಯೆಂದು ಕರೆಯುವುದೂ ಆ ಸ್ಥಾನಕ್ಕೆ (ಬಿಂದುವಿಗೆ) ಭಾರವಾಗಿ ಬಿಡುತ್ತದೆ. ಆದರೆ, ಬಂಧು, ಅದರಲ್ಲಿ ಏನೋ ವಿಶೇಷವಾದ ಸಂತೋಷವಿದೆ. ನಿನ್ನ ಈ ಸ್ಥಿತಿಯನ್ನು ನೋಡುತ್ತಲೇ ಇರಬೇಕೆಂದು ನನ್ನ ಮನಸ್ಸು ಬಯಸುತ್ತದೆ; ನೋಡುತ್ತಿದ್ದರೆ ದೃಷ್ಟಿ ದಣಿಯುವುದಿಲ್ಲ. ಅದರಲ್ಲಿ ಅದೆಂಥ ಶುದ್ಧತೆ (ನಿರ್ಮಲತೆ) ಇದೆಯೆಂದರೆ, ಅದನ್ನು ಕನ್ನಡಿಗೆ ಹೋಲಿಸುವುದೂ ತಪ್ಪಾದೀತು. ಅದನ್ನು ಪ್ರಕಾಶ ಎಂದು ಕರೆದರೂ, ಅದೂ ಇದಕ್ಕಿಂತ ಭಾರವೆನಿಸುವುದು. ನನಗೆ ನನ್ನದೇ ಸ್ಥಾನವು ಹುಡುಕಿದರೂ ಸಿಗುವುದಿಲ್ಲ. ನಾನು ನಿರಸನದ ಸುಳಿಯಲ್ಲಿ ಸಿಕ್ಕಿಬಿದ್ದಿದ್ದೇನೆ (ಅದರಲ್ಲಿಯೇ ತಲ್ಲೀನನಾಗಿದ್ದೇನೆ); ಅದರಿಂದ ಒಂದು ಕ್ಷಣವೂ ಅಗಲಿರಲಾರೆ. ಅದಕ್ಕಾಗಿಯೇ ಈ ಸ್ಥಾನದ 'ಗತಿ'ಯನ್ನು ನೋಡಿ ನೋಡಿ ಸಂತೋಷಭರಿತನಾಗುತ್ತೇನೆ. ನನ್ನ ಸ್ಥಿತಿಯಾದರೋ ಉಪ್ಪಿನ ರುಚಿಯಿಲ್ಲದ ಉಪ್ಪಿನ ಹರಳಿನಂತಿದೆ. ಈಗ, ಸ್ವಾದ ಬದಲಿಸಲು ನಾನು ಮಸಾಲೆ ತಿನ್ನುವುದಿಲ್ಲವಾದರೆ, ಅದರ ಪರಿಮಳದಿಂದಲೇ ಮನಸ್ಸಿಗೆ ಮುದ ತಂದುಕೊಳ್ಳುತ್ತೇನೆ. ಇಲ್ಲಿಯ (A1ದಲ್ಲಿ) ಸ್ಥಿತಿ ಎಷ್ಟು ಸಾಂತ್ವನ (ನೆಮ್ಮದಿ) ಉಂಟು ಮಾಡುವುದೆಂದರೆ, ಅದನ್ನು ನೋಡಿ ನೋಡಿ ಹೃದಯ ಶಾಂತವಾದಂತೆನಿಸುತ್ತದೆ. ಅವಿಕಾರ (unchangeable) ಸ್ಥಿತಿಯ ಬಗ್ಗೆ ಬರೆಯುತ್ತ ನಿನ್ನೊಳಗೆ ಒಂದು ರೀತಿಯ ಧೂಮಮಯ (ಮಂದ ಪ್ರಕಾಶದ) ಸ್ಥಿತಿಯಿರುವಂತೆ ತೋರುತ್ತದೆ ಎಂದು ಹೇಳಿದ್ದೀಯೆ. ಈ ಸ್ಥಾನದೊಂದಿಗೆ (A1) ಅದರ ಸಂಬಂಧವಿಲ್ಲ. ಆದರೆ, ಊಹಿಸಿ ನೋಡಿದಾಗ ಅದೂ ಒಂದು 'ಸ್ಥಿತಿ' ಎಂದು ಅನ್ನಿಸುತ್ತದೆ. ಬದಲಾವಣೆ ಎಲ್ಲಿ ಮುಕ್ತಾಯಗೊಳ್ಳುವುದೋ ಅಲ್ಲಿಂದ ಅವಿಕಾರ (ಅಪರಿವರ್ತನೀಯ) ಸ್ಥಿತಿ ಆರಂಭವಾಗುತ್ತದೆ. ಇದು ಸಂಪೂರ್ಣವಾಗಿಯೂ ಒಂದು ದೈವೀ–ಸ್ಥಿತಿ; ಮತ್ತು ದೊಡ್ಡ–ದೊಡ್ಡ ಮಹಾತ್ಮರು, ಯೋಗಿಗಳು ಇದಕ್ಕೋಸ್ಕರ ಹಪಹಪಿಸುತ್ತಲೇ ಗತಿಸಿ ಹೋದರು. ಕಬೀರರು ಅಷ್ಟು ದೊಡ್ಡವರಾಗಿದ್ದರೇನೋ ಸರಿಯೆ; ಆದರೆ ಅವರಿಗೂ ಕೂಡ ಈ 'ಸ್ಥಿತಿ'ಯ ಗಾಳಿಯೂ ಸೋಂಕಿಲ್ಲ. ಸ್ವತಃ ಆ ಸ್ಥಿತಿಗೆ ತಲುಪಿದುದಲ್ಲದೆ, ಬೇರೆಯವರಿಗೂ ಅದರ ಬಾಗಿಲ ತೆರೆದುದು, ನಮ್ಮ ಗುರು ಮಹಾರಾಜರ (ಸಮರ್ಥ ಗುರು ಶ್ರೀ ರಾಮಚಂದ್ರಜೀ ಮಹಾರಾಜ, ಫತೇಹ್‌ಗಢ್) ಧೀರತನವಾಗಿತ್ತು. ಯಾವುದೇ ಸಮಯದಲ್ಲಿ, ಆ ಸ್ಥಿತಿಯನ್ನು, ಈಶ್ವರೇಚ್ಛೆಯಿದ್ದರೆ, ಪಡೆಯದ ಭಾಗ್ಯ ನಿನ್ನದಾಗಬಹುದು ಎಂಬುದನ್ನು ನಿನ್ನ ಪ್ರಗತಿ ಮತ್ತು ನಿನ್ನ ಉಪಕ್ರಮದ ರೀತಿಗಳು ತಿಳಿಸುತ್ತವೆ. ಲಖೀಂಪುರ ಖೇರಿಯ ಶ್ರೀ ಈಶ್ವರ ಸಹಾಯ್ ಮಾಸ್ತರರ ವಿಷಯದಲ್ಲಿಯೂ ಈ ಹಾರೈಕೆ ನನಗಿದೆ, ಮತ್ತು ಅವರು ಹೆಚ್ಚು ಕಡಿಮೆ ಆ ಸ್ಥಿತಿಗೆ ತಲುಪಿದ್ದಾರೆ. ನಮ್ಮ ಸಂಸ್ಥೆಯಲ್ಲಿ ಒಬ್ಬನಾದರೂ ಅಂಥವನು ಮೇಲೆದ್ದು ಬಂದರೆ, ಈಶ್ವರನಿಗೆ ಧನ್ಯವಾದ ಹೇಳಲೇ ಬೇಕು. ಆದರೂ, ಯಾವಾಗ

P-4-Books-PM-7-Ananthyatre-113



ಎಲ್ಲ ಅಭ್ಯಾಸಿಗಳೂ ಆ ಸ್ಥಿತಿಯನ್ನು ತಲುಪುವಂಥ ಸಮಯ ಬರಲಿ ಎಂದು ನಾನು ಹಾರೈಸುತ್ತೇನೆ. ಒಂದು ವೇಳೆ ಎಲ್ಲರೂ ಅಲ್ಲದಿದ್ದರೂ ನಾಲ್ಕಾರು ಜನರಾದರೂ ಆ ಸ್ಥಿತಿಯನ್ನು ತಲುಪಲಿ. ಆದರೆ ಈ ಮಟ್ಟದವರೆಗೆ ಆಸಕ್ತಿ ಯಾರಲ್ಲಿಯೂ ಉಂಟಾಗುತ್ತಿಲ್ಲವೆಂಬುದು ಖೇದದ ಸಂಗತಿ. ಅಪರಿವರ್ತನೀಯ ಸ್ಥಿತಿಯೇ ನಿಜವಾದ ಸ್ಥಿತಿ. ನಾವು ಅದನ್ನು ಪಡೆಯಲು ಪ್ರಯತ್ನಿಸಬೇಕು ಎಂಬುದನ್ನು ನಾನು ಹೇಳುತ್ತಲೇ ಇರುತ್ತೇನೆ, ಪ್ರಿಯ ಪುತ್ರಿ, ನಿಜ ಹೇಳಬೇಕೆಂದರೆ, ಈಶ್ವರನ ಸಹಾಯವಿದ್ದರೆ, ಆ ಸ್ಥಿತಿಯನ್ನು ಪಡೆಯುವುದು ಏನೂ ಕಷ್ಟವಲ್ಲ; ಅದೂ ಕೂಡ, ಪ್ರಕೃತಿಯು ಎರಡೂ ಕೈಗಳಿಂದ ತನ್ನ ಸಂಪತ್ತನ್ನು ಸೂರೆ ಗೈಯ್ಯುತ್ತಿರುವ ಈ ಸುಸಂದರ್ಭದಲ್ಲಿ, ಕಷ್ಟವೇ ಅಲ್ಲ. ಆಧ್ಯಾತ್ಮಿಕತೆಯ ಸಂದರ್ಭದಲ್ಲಿ ಕಷ್ಟಕರ (ಅಸಾಧ್ಯ) ಎಂಬ ಶಬ್ದವನ್ನು ತೆಗೆದು ಹಾಕಿ ಬಿಡಬೇಕು. ಯಾಕೆಂದರೆ, ನಮ್ಮೊಳಗೆ ಯಾವ ವಸ್ತು ಇರುವುದೋ ಅದನ್ನೇ ತಾನೆ ನಾವು ಸಾಕ್ಷಾತ್ಕರಿಸಿಕೊಳ್ಳ ಬಯಸುವುದು ! ಅಂದ ಮೇಲೆ, ನಮಗೆ ಸೇರಿದ ವಸ್ತುವನ್ನು ನೋಡುವುದು ಮತ್ತು ಅರಿತುಕೊಳ್ಳುವುದು ಕಷ್ಟ ಎಂದರೆ ಆಶ್ಚರ್ಯವಾಗುತ್ತದೆ. ಜೌನ್‌ಪುರಕ್ಕೆ ಬರಬೇಕೆಂದು ನನ್ನ ಇಚ್ಛೆ ಇತ್ತು, ಬಂದೂ ಬಿಟ್ಟೆ. ಪ್ರಯಾಣದ ತೊಂದರೆಯ ಚಿಂತೆ ನನಗೇನಾದರೂ ಇದ್ದಿದ್ದರೆ, ಬರುವ ಇಚ್ಛೆಯೂ ಆಗುತ್ತಿರಲಿಲ್ಲ; ನಾನು ಬರುವುದಾದರೂ ಹೇಗೆ ಸಾಧ್ಯವಿತ್ತು?

'ಅಜ್ಞಾನತೆ' (Ignorance-condition)ಯನ್ನು 'ಮೃತ–ಸದೃಶ ಅವಸ್ಥೆ' ಎಂದೂ ಕರೆಯಬಹುದು; ಆದರೆ ಮೃತಾವಸ್ಥೆಯ ಸ್ವರೂಪ ಅನುಭೂತಿಗೆ ಸಿಗುತ್ತಿಲ್ಲ'– ಎಂದು ನೀನು ಬರೆದಿದ್ದೀಯೆ. 'ಮೃತಾವಸ್ಥೆ' ಎಂದರೆ 'ಜೀವರಹಿತ' ಎಂದರ್ಥ. ಅರ್ಥಾತ್, ತನ್ನನ್ನು ತಾನು ಬೇರೊಬ್ಬನ ಕೈಗೆ (ಗುರುವಿಗೆ),– ಅವನು ಹೇಗೆ ಬೇಕೆಂದ ಹಾಗೆ ಆಡಿಸಲಿ, ಉರುಳಿಸಲಿ– ಎಂಬ ಮಟ್ಟಿಗೆ– ಸಂಪೂರ್ಣವಾಗಿ ಒಪ್ಪಿಸಿಕೊಂಡು ಬಿಡುವುದು. ಅದು ಸಾಧ್ಯವಾಗುವುದು, ಎಚ್ಚೆತ್ತ ಮನುಷ್ಯನ ಎದುರಿನಲ್ಲಿ ಸ್ವಪ್ನಗಳು ಸರಿದು ಹೋಗುವ ಹಾಗೆ, ಪ್ರಪಂಚದ ಎಲ್ಲ ಆಡಂಬರಗಳು, ಅದರ ಅನುಭೂತಿಗಳು ಹೊರಟು ಹೋದಾಗ ಮಾತ್ರ. ಈ ಸ್ಥಿತಿಯು 'ಅಜ್ಞಾನತೆ'ಯೊಂದಿಗೆ ಸಂಬಂಧಿತವೆಂದು ಹೇಳಬಹುದು; ಆದರೆ, ಸಂಪೂರ್ಣ ನಿರಸನ ಎಂದು ಯಾವುದಕ್ಕೆ (ಮಾತ್ರವೇ) ಹೇಳಬಹುದೆಂದರೆ, ಈಶ್ವರನ ಹಾಗೂ ನಮ್ಮ ಪತ್ತೆಯೇ ಇರದ ಮಟ್ಟಿಗೆ ಅವನಲ್ಲಿ ನಾವು ಲಯವಾಗಿ ಹೋಗುವುದು. ಅಥವಾ, ಇಬ್ಬರೂ ಕಳೆದು ಹೋಗಿರುತ್ತಾರೆಂದೂ ಹೇಳಬಹುದು. ಇದಕ್ಕೆ ಸೂಫಿ ಸಂತರು 'ಫನಾ–ಫಿಲಾಹ್' ಆಗಿಬಿಡುವುದು ಎಂದು ಕರೆದಿದ್ದಾರೆ ಮತ್ತು ಇದಕ್ಕೋಸ್ಕರವೇ ಜೀವನವಿಡೀ ಪ್ರಯತ್ನಪಡುತ್ತಲೇ ಕಳೆದರು. ಹಾಗೂ, ಎಷ್ಟರಮಟ್ಟಿಗೆ ಸಂಪೂರ್ಣ ಸಮರ್ಪಿತ ಸೇವಕನು (ಭಕ್ತ, ಬಂದಾ) ಹಾಗೆ ಆಗಿಬಿಡಬಹುದೋ, ಆ ಮಟ್ಟಿಗೆ ಆಗದೆ ಹೋಗಿರಲೂಬಹುದು. ಯಾಕೆಂದರೆ, ಊರ್ಧ್ವಮುಖಿಯಾದ ಧಾರೆಯಲ್ಲಿ ನಮ್ಮನ್ನು ಕರೆದೊಯ್ಯುವ ಯಾರಾದರೂ ಗುರುವೊಬ್ಬ ಲಭ್ಯನಾಗದಿದ್ದರೆ, ಆ ಸ್ಥಿತಿಗೆ ಹೋಗುವುದು ಬಹಳ ಕಷ್ಟ; ಅಷ್ಟೇಕೆ, ಅಸಂಭವವೇ ಸರಿ. ಯಾವನಾದರೊಬ್ಬನು



ತನ್ನನ್ನು ತಾನೇ ಅದರಲ್ಲಿ ಎಷ್ಟರಮಟ್ಟಿಗೆ ಕರಗಿಸಿ ಬಿಡುವನೋ ಅಥವಾ ಅಳಿಸಿಕೊಂಡು ಬಿಡುವನೋ, ಆ ಹಂತಗಳು ಮಾತ್ರ ಅದರಲ್ಲಿರುತ್ತವೆ. ಅಲ್ಲಿ ಆಗುವುದು ಹೇಗೆಂದರೆ, ಅದರಲ್ಲಿ ಒಬ್ಬನು ಬಾಲವನ್ನು ಹಿಡಿದುಕೊಳ್ಳುತ್ತಾನೆ, ಇನ್ನೊಬ್ಬ ಸೊಂಡಿಲನ್ನು ಮತ್ತೊಬ್ಬನು ಅದರ ಕಾಲನ್ನು ಹಿಡಿದುಕೊಂಡು, ತಾವು ಹಿಡಿದುಕೊಂಡದ್ದಷ್ಟೇ 'ಆನೆ' ಎಂದು ಭಾವಿಸುತ್ತಾನೆ. ಅದೇ ರೀತಿ, ಒಂದಿಷ್ಟು ಅಲ್ಲಿಯ (ಆ ಸ್ಥಿತಿಯ) ಗಾಳಿ ಸೋಂಕಿದರೆ ಸಾಕು, ಅಭ್ಯಾಸಿಯು ತಾನು ಈಶ್ವರನಲ್ಲಿ ಪೂರ್ಣವಾಗಿ ಲಯ ಹೊಂದಿಬಿಟ್ಟೆ ಎಂದು ತಿಳಿಯುತ್ತಾನೆ. ಇಲ್ಲಿ ನಾನು ಕಠಿಣ ಶಬ್ದಗಳನ್ನು ಅವಶ್ಯ ಬಳಸಿದ್ದೇನೆ. ಯಾಕೆಂದರೆ, ಅಭ್ಯಾಸದ ಆರಂಭದಲ್ಲಿಯೇ ತನ್ನ ವಿಚಾರಧಾರೆಯು ಮೂಲ ಸ್ರೋತದ ಮೇಲೆ ಹೋಗಿ ಬೀಳುವಂಥ ಮತ್ತು ಅದೇ ಅವನು ಸಾಗುವ ಮಾರ್ಗವಾಗಿಬಿಡುವಂಥ ಅಭ್ಯಾಸಿ ಸಿಗುವುದು ಬಹಳ ಕಠಿಣ. ಧೈರ್ಯ ಇದ್ದರೆ ಇದೂ ಸಾಧ್ಯವಾಗುವುದು. ಯಾವನು ಅಲ್ಲಿಯವರೆಗೆ ಹೋಗಿ ಮುಟ್ಟಿದ್ದಾನೋ ಅಂಥವನನ್ನು ನಮ್ಮ ಮಾರ್ಗದರ್ಶಿ (ಗುರು)ಯಾಗಿ ಒಪ್ಪಿಕೊಂಡಾಗ ಅದು ಸುಲಭಸಾಧ್ಯವಾಗುತ್ತದೆ. ಈ ಸ್ಥಿತಿಯು ಒಂದು ವೇಳೆ ಜೀವಿತ ಕಾಲದಲ್ಲಿ ಲಭ್ಯವಾಗದೆ ಹೋದರೆ, ಅದರಿಂದ ಅವನ ಮುಕ್ತಿಯ ಮೇಲೆ ಯಾವ ಪ್ರಭಾವ ಬೀಳುವುದಿಲ್ಲ (ಅದಕ್ಕೆ ಬಾಧಕವಿಲ್ಲ), ಅಂಥ ಸ್ಥಿತಿ ಇದಾಗಿದೆ. ಹೆಚ್ಚು ಪಕ್ಷ ಜನರ ಉದ್ದೇಶವೂ ಅಷ್ಟು ಮಾತ್ರವೇ (ಮುಕ್ತಿ) ಆಗಿದೆ. ಹಾಗೆನ್ನುವುದಾದರೆ, ನಿಜವಾದ ಯೋಗಿಯ ಗುರಿ ಪ್ರಕೃತಿಯ ಮೇಲೆ ಸಂಪೂರ್ಣ ನಿಯಂತ್ರಣ ಹೊಂದುವುದೇ ಆಗಿರುತ್ತದೆ. ಮತ್ತು, ಮುಖ್ಯವಾಗಿ, ಈಶ್ವರನಲ್ಲಿ ಸಂಪೂರ್ಣ ಲಯ ಹೊಂದಿದಾಗ ಮಾತ್ರವೇ ಅವನು ಪೂರ್ಣ ನಿಯಂತ್ರಣ ಪಡೆದನೆಂದು ಹೇಳಬಹುದು.

ನೀನು, ನವೋಲ್ಲಾಸದ ಅನುಭೂತಿಯಾಗುವುದರ ಕುರಿತು ಬರೆದಿದ್ದೀಯೆ; ಅದು ಸರಿ ಇದೆ. ಉಷ್ಣತೆ ಮತ್ತು ಶೀತಲತೆಯ ಬಗ್ಗೆ ಈ ಹಿಂದಿನ ಪತ್ರದಲ್ಲಿ ಬರೆದಿದ್ದೇನೆ. ಈಗ ಒತ್ತಡವು ಅವಶ್ಯ ಕಡಿಮೆಯಾಗುತ್ತಿದೆ, ಬಹಳ ಕಡಿಮೆ ಇದೆ– ಎಂಬ ಅನಿಸಿಕೆ ಸರಿ ಇದೆ. ಉಳಿದ ಸ್ಥಿತಿಯಲ್ಲಿ ಸಮರ್ಪಕವಾಗಿದೆ, ಅದಕ್ಕೆ ಉತ್ತರ ಎಷ್ಟು ಬರೆಯಲಿ? ಶುಕ್ಲಾಜಿ ಮತ್ತು ನಾರಾಯಣ ಎಲ್ಲರಿಗೂ ನಮಸ್ಕಾರ ತಿಳಿಸುತ್ತಿದ್ದಾರೆ.

ಬರೆಯಬೇಕಿದ್ದ ಒಂದು ಮಾತು ಮರೆತಿದ್ದೆ; ಈಗ ಬರೆಯುತ್ತಿದ್ದೇನೆ. ಅಭ್ಯಾಸಿಗಳು ನನ್ನ ಸಹಾಯವಿಲ್ಲದೆಯೇ ಪ್ರಕೃತಿಯ ಶಕ್ತಿಯನ್ನು ದಾಟಿ ಪ್ರಗತಿ ಹೊಂದುತ್ತ ಹೋಗಬೇಕೆಂದು ನಾನು ಬಯಸುತ್ತೇನೆ. ಇದರಿಂದ, ಈ ಸಮಸ್ಯೆ ಸುಲಭವಾಗಿಬಿಡುವುದು. ಅಭ್ಯಾಸಿಗಳು ತಮಗೆ ತಾವೇ ಹೇಗೆ ಶಕ್ತಿ ಸಂವಹನ (ಪ್ರಾಣಾಹುತಿ Transmission) ಮಾಡಿಕೊಳ್ಳಬೇಕೆಂಬುದನ್ನು ನಾನು ಮೊದಲೇ ಬರೆದಿದ್ದೇನೆ. ಅದರಿಂದ ನನ್ನ ಮೇಲಿನ ಅವಲಂಬನೆ ಹೆಚ್ಚು ಇರಲಾರದು. ಆದರೆ

ಈ ಮೇಲಿನ ಮಾತನ್ನು ಕುರಿತು ಯೋಚಿಸಬೇಕು. ನೀನು ಪ್ರಯತ್ನ ಮಾಡು. ಮಾಸ್ಟರ್ ಸಾಹೇಬರಿಗೂ ಅದು ತಿಳಿದಿರಲಿ. ಎಲ್ಲ ವಿಷಯಗಳೂ ನನಗೆ ಮಾತ್ರ ತಿಳಿದಿವೆ, ನಾನು ಮಾತ್ರವೇ ಕೆಲಸ ಒಳ್ಳೆಯದಾಗಿ ಮಾಡಬಲ್ಲೆನೆಂಬುದು ಅನಿವಾರ್ಯವಲ್ಲ. ವಿಮಲಾ ಸೋದರಿಯ ಉದಾಹರಣೆ ನಿನ್ನೆದುರಿಗಿದೆ. ನಾನು ತಿಂಗಳುಗಟ್ಟಲೆ ಕಠಿಣ ಪರಿಶ್ರಮ ವಹಿಸಿದೆ. ಆದರೆ ನಿನ್ನಿಂದ ಆಗಿರುವಷ್ಟು ಫಲಿತಾಂಶ (ಪರಿಣಾಮ), ಪ್ರಾಯಶಃ ನನ್ನಿಂದ ಆಗಿಲ್ಲ. ವಾಸ್ತವವಾಗಿ ನೀನು ಅವಳನ್ನು ಸಂಪೂರ್ಣ ಪರಿವರ್ತಿಸಿದ್ದೀಯೆ. ವಿಮಲಾ ಕೂಡ ಉತ್ಸವಕ್ಕೆ (ಬಸಂತ ಪಂಚಮಿ), ತನ್ನ ತಂದೆಯವರೊಂದಿಗೆ (ಜಡ್ಜ್ ಸಾಹೇಬ) ಬರುವವಳಿದ್ದಾಳೆ. ಜಡ್ಜ್ ಸಾಹೇಬರು ನನಗೆ ಇದನ್ನು ಹೇಳಿದ್ದರು.

ಈಗ ವಿಷಯಕ್ಕೆ ಬರುತ್ತೇನೆ. ಇಂಥ ಒಂದು ಸಾಧ್ಯತೆ ಉಂಟು. ಏನೆಂದರೆ, ಅಭ್ಯಾಸಿಯು ಪ್ರಕೃತಿಯ ಊರ್ಧ್ವಮುಖೀ ಧಾರೆಯೊಂದಿಗೆ ತೇಲಿಕೊಂಡು ಹೋಗುವಂತೆ ಮಾಡುವ ಶಕ್ತಿಯನ್ನು ಶುರುವಿನಲ್ಲಿಯೇ ಉಂಟುಮಾಡಿಕೊಡುವ ವಿಶೇಷ ಇಚ್ಛಾಶಕ್ತಿಯನ್ನು (ಸಂಕಲ್ಪವನ್ನು) ಪ್ರಯೋಗಿಸಬೇಕು. ಆದರೆ, ಈ ಶಕ್ತಿಯನ್ನು ಭರಿಸಿಕೊಳ್ಳಲಾಗದಿರುವ ಸಂಭಾವ್ಯತೆ ಇದೆ. ಆ ಕಾರಣ ಈ ವಿಧಾನ ಉಪಯುಕ್ತವಾಗಲಾರದು. ಒಂದು ಬಿಂದು ಇರಬೇಕು, ಎಂಥದೆಂದರೆ, ಅದರ ಮೇಲೆ ಧ್ಯಾನ ಮಾಡುವುದರಿಂದ ಅಭ್ಯಾಸಿಯು ಗುರಿಯನ್ನು ತಲುಪುವಂತಾಗಬೇಕು. ಅಂಥ ಒಂದು ಪ್ರಭುತ್ವಪೂರ್ಣ ವಿಧಾನವಿರಬಲ್ಲುದು. ಈ ಪತ್ರ ಬರೆಸುತ್ತ ಇದ್ದಂತೆ ನನಗೆ ಒಂದು ವಿಚಾರ ಹೊಳೆಯಿತು– ಅದನ್ನು ಇದುವರೆಗೆ ಹೆಚ್ಚು ಯೋಚಿಸಿಲ್ಲವೆಂಬುದೇನೋ ನಿಜ– ಮಾನವ ಮೆದುಳಿನ ಒಂದು ಕೇಂದ್ರವಿದೆ; ಅದಕ್ಕೆ 'ರಾಜಯೋಗದ ಪ್ರಭಾವ'ದಲ್ಲಿ 'ಹಿಂದಲೆಯ ಅಸ್ಥಿ' (occipetal bone) ಎಂದು ಕರೆಯಲಾಗಿದೆ. ಅದರಲ್ಲಿ, ಆಕರ್ಷಣ ಶಕ್ತಿಯನ್ನು ಉಂಟು ಮಾಡಿ, ಒಂದು ಸಮಯಾವಧಿ ನಿಗದಿಪಡಿಸಬೇಕು. ಅದು ಅಭ್ಯಾಸಿಯನ್ನು ತನ್ನೆಡೆಗೆ ಎಳೆದು ತರಬೇಕು. ಇದು ಈಶ್ವರನ ಅನುಗ್ರಹದಿಂದ ಮಾತ್ರ ಸಾಧ್ಯ. ಆದರೆ ಇದು ನನ್ನ ಕಾರ್ಯವಾಗಿದೆ. ಮತ್ತು, ವಿಶೇಷ ಸಂಕಲ್ಪ ಶಕ್ತಿಯನ್ನು ಈಶ್ವರನು ಯಾವನಿಗೆ ದಯಪಾಲಿಸುವನೋ ಅವನು ಎಲ್ಲವನ್ನೂ ಮಾಡಬಲ್ಲ. ಆದರೆ ಅಭ್ಯಾಸಿಯು ಏನು ಮಾಡಿದರೆ ಈ ಕಠಿಣ ಕಾರ್ಯ ಸುಲಭವಾದೀತು ಎಂಬುದನ್ನು ಯೋಚಿಸಬೇಕಿದೆ. ಬರೆಯುತ್ತ ಬರೆಯುತ್ತ ಅದರ ವಿಧಾನವೂ ನನ್ನ ಮನಸ್ಸಿನಲ್ಲಿ ಸುಳಿಯಿತು. ಅಭ್ಯಾಸಿಯು ಯಾವುದಾದರೊಂದು ಸ್ಥಾನದಲ್ಲಿದ್ದು, ಅದರ ಯಾತ್ರೆಯನ್ನು ಪೂರೈಸಿದ್ದರೆ, ಅವನು ಅದರ ಮುಂದಿನ ನೆಲೆ (ಮಜಲು)ಯ ಮೇಲೆ ಧ್ಯಾನ ಮಾಡುವಂತೆ ಮಾಡಬೇಕು. ಈ ವಿಧಾನವನ್ನು ಇದೀಗ ಲಾಲಾಜಿ ಸಾಹೇಬರು ನನಗೆ ತಿಳಿಸಿದರು. ಲಾಲಾಜಿಯವರ ಅನುಮತಿಯಿಂದ ನಾನು ಇದರಲ್ಲಿ ಒಂದು ಪರಿಷ್ಕರಣೆ ಮಾಡಿದೆ. ಅದೇನೆಂದರೆ, ಅಭ್ಯಾಸಿಯು 'ಪ್ರಧಾನ ಕೋಶ'ದ (Master Cell) ಮೇಲೆ ಧ್ಯಾನ ಮಾಡುವುದು. 'ಪ್ರಧಾನ ಕೋಶ'ವು ಶಕ್ತಿಯು ಸಾಂದ್ರಗೊಂಡಿರುವ ಸ್ಥಾನ. ಈಗ ಇದು ಬಹಳ ಸುಲಭವಾಯಿತು. ಆದರೆ ಅದರಲ್ಲಿ ಒಂದು ಅಪಾಯದ ಸಾಧ್ಯತೆ ಇದೆ. ಒಬ್ಬ ಅಭ್ಯಾಸಿ ಬ್ರಹ್ಮಾಂಡ ಮಂಡಲದಲ್ಲಿದ್ದು, ಅದರ ಯಾತ್ರೆಯನ್ನು ಪೂರ್ತಿ ಮಾಡಿರದಿದ್ದಾಗ, ಪರಬ್ರಹ್ಮಾಂಡ ಮಂಡಲವನ್ನು ತಲುಪಲೋಸುಗ ಧ್ಯಾನ ಮಾಡಬಾರದು.



ಈ ಎರಡನೆಯ ಪತ್ರವನ್ನು ಮಾಸ್ಟರ್ ಸಾಹೇಬರಿಗೆ ಕೊಡು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೩ **ಪತ್ರ ಸಂಖ್ಯೆ – ೪೪೬** ಜೌನ್‌ಪುರ
೧೦–೧೨–೧೯೫೪

ಪ್ರಿಯ ಪುತ್ರಿ ಕಸ್ತೂರಿ,

ಆಶೀರ್ವಾದ.

ನಾನು ಇಲ್ಲಿಂದಲೇ ಒಂದು ಪತ್ರವನ್ನು ಕಳುಹಿಸಿದ್ದೇನೆ. ಅದು ತಲುಪಿರಬಹುದು. ನಿನ್ನೆ ಅಜಮ್‌ಗಡದಿಂದ ನನ್ಹಿ ಬಂದಿದ್ದಾಳೆ. ಮತ್ತು ಮುಂಜಾನೆ ಡಾಕ್ಟರ್ ಸಾಹೇಬರೂ ಬಂದರು. ಆದ್ದರಿಂದ ನಾವೂ ಉಳಿದುಕೊಂಡೆವು. ಈಗ ೧೨–೧೨–೧೯೫೪ರ ರಾತ್ರಿ ಷಾಹಜಹಾನಪುರ ತಲುಪುವೆವು. ನಿನ್ನೊಳಗೆ, 'ಲಯಾವಸ್ಥೆ' ಒಳ್ಳೆಯ ರೀತಿಯಲ್ಲಿ ನೆಲೆಗೊಂಡಿದೆ, ಮತ್ತು ಅದು ಹೀಗೆಯೇ ಮುಂದುವರಿಯುತ್ತಿರುತ್ತದೆ.

ಪ್ರಕೃತಿಯ ಬಹುತೇಕ ಸಂಬಂಧಗಳು ಕಡಿದು ಹೋದಾಗ, ಅದರ ಪರಿಣಾಮವಾಗಿ ಬರುವ, ಉಷ್ಣದ ಅನುಭೂತಿಯಾಗುವುದಿಲ್ಲ; ಬದಲಿಗೆ ಪ್ರಕೃತಿಗಿಂತ ಮೇಲಿನದಾದ ಒಂದು ವಸ್ತುವಿನ, ಉಷ್ಣಕ್ಕೆ ವಿರುದ್ಧವಾದ ಪ್ರಭಾವ ಅನುಭವಕ್ಕೆ ಬರುತ್ತದೆ. ಬೈತಲೆ ಮುಗಿಯುವಲ್ಲಿ, ಅದರ ಅಡಿಯಲ್ಲಿ ನಿನಗೆ ಸ್ಪಂದನ ಅನುಭವಕ್ಕೆ ಬರುತ್ತಿದೆ ಎಂದು ಬರೆದಿದ್ದೀಯೆ. ಎ–೧ (A1) ಬಿಂದು, ಹತ್ತಿರ–ಹತ್ತಿರ ಅಲ್ಲಿಯೇ ಇದೆ. ಅದರಲ್ಲಿ ಜಾಗ್ರತಗೊಳ್ಳಲು ಆರಂಭಿಸಿರುವ ಕ್ರಿಯೆಗಳು ಸ್ಪಂದನದ ರೂಪದಲ್ಲಿ ಅನುಭವಕ್ಕೆ ಬರುತ್ತವೆ. ಬೆನ್ನು ಹುರಿಯಲ್ಲಿ ಪೊಳ್ಳು ಇರುವಂತೆ, ಮತ್ತು ಅದರಲ್ಲಿ ಸರ್ಪದ ಇರುವಿಕೆಯ ಭಾವನೆಯು, ಕುಂಡಲಿನಿಯದೆಂದು ತೋರುತ್ತದೆ. ಪುತ್ರಿ; ಯಾವ ಸ್ಮರಣೆ ಬರುವುದಿಲ್ಲವೋ ಅದೇ ಸರಿಯಾದುದಾಗಿದೆ. ಅದರ ಬಗ್ಗೆ ಕೇಳಿದ ನಂತರವೇನಾದರೂ ಅದು ಬಂದರೆ, ಅದು ನಿನ್ನನ್ನು ಮೇಲೆ ಹೇಳಿದ ಮುಂದಿನ ಹಂತಕ್ಕೆ ಒಯ್ಯಲು ಬಯಸುತ್ತದೆ ಎಂದು ತಿಳಿಯಬೇಕು.

P-4-Books-PM-7-Anantyatre-115



ಮಾಸ್ಟರ್ ಸಾಹೇಬರ ಎರಡು ಪತ್ರಗಳು ಮತ್ತು ಚೌಬೇಜಿಯವರ ದಿನಚರಿ ನನಗೆ ತಲುಪಿದವು. ಮಾಸ್ಟರ್ ಸಾಹೇಬರ ಅಭಿಪ್ರಾಯ ಸರಿ ಇದೆ ಮತ್ತು ನಾನು ಅದನ್ನು ಅನುಸರಿಸಿದೆ ಎಂದು ಅವರಿಗೆ ತಿಳಿಸು. ಅವರು ತಮ್ಮ 'ಸ್ಥಿತಿ'ಯ ಬಗ್ಗೆ ಕೂಡ ಬರೆದಿದ್ದಾರೆ. ಈಶ್ವರೇಚ್ಛೆಯಿದ್ದರೆ, ಈ ಪತ್ರ ತಲುಪುವ ಹೊತ್ತಿಗೆ, ಹೆಚ್ಚು ಮಟ್ಟಿಗೆ ಶುದ್ಧವಾಗುವುದು. ಈ ಹಿಂದಿನ ಪತ್ರದೊಂದಿಗೆ ಲಕೋಟೆಯಲ್ಲಿ ಒಂದು ಪತ್ರವನ್ನು ಮಾಸ್ಟರ್ ಸಾಹೇಬರಿಗೆ ಕಳುಹಿಸಿದ್ದೆ; ಅದನ್ನು ನೀನು ಅವರಿಗೆ ತಲುಪಿಸಿರಬಹುದು.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ಪ್ರಣಾಮ. ನಾರಾಯಣ ಎಲ್ಲರಿಗೂ ವಂದನೆ ಹೇಳುತ್ತಿದ್ದಾನೆ.

ನಿನ್ನ ಹಿತೈಷಿ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೪ **ಪತ್ರ ಸಂಖ್ಯೆ – ೪೫೨** ಷಾಹಜಹಾನಪುರ<br>
೦೧–೦೧–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸದಾ ಸಂತೋಷಿಯಾಗಿರು.

ನಿನ್ನ ಅನೇಕ ಪತ್ರಗಳು ಬಂದಿವೆ. ಈಗ ನಾನು ನಿನ್ನ ೧೬–೧೨–೧೯೫೪ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. ಶುಕ್ಲಾಜಿಯವರನ್ನು (ಒಬ್ಬ ಅಭ್ಯಾಸಿ) ಅನ್ವಯಿಸಿ, ನಾನು ನಿನಗೆ ಒಂದಿಷ್ಟು ಬರೆಯುತ್ತಿದ್ದೇನೆ; ಅದರಿಂದ ಪ್ರತಿಯೊಂದು ವಿಷಯವೂ ಸುಸ್ಪಷ್ಟವಾಗಬಹುದು. ಶುಕ್ಲಾಜಿ ಪ್ರೇಮಲ ಸ್ವಭಾವದ, ಶುದ್ಧ ಹೃದಯದ ವ್ಯಕ್ತಿ. ಅವರು ಲಖೀಂಪುರದಲ್ಲಿರುತ್ತಿದ್ದರು. ಅವರ ಹೃದಯ ಮತ್ತು ಶರೀರ ಮಂಡಲಗಳೆರಡೂ ಶುದ್ಧವಾಗಿದ್ದುವು. ಇದನ್ನು ನೋಡಿ ನಾನು ಅವರಿಗೆ ಹೊಸ ರೀತಿಯಲ್ಲಿ ತರಬೇತಿ ನೀಡಲು ಯೋಚಿಸಿದೆ. ಮತ್ತು ಆರಂಭಿಸಿಯೂ ಬಿಟ್ಟೆ. ಅದು ನನ್ನಿಂದಾದ ತಪ್ಪು ಎಂದು ಅನುಭವ ತೋರಿಸಿತು. ಪ್ರತಿಯೊಂದಕ್ಕೂ ಪ್ರತ್ಯೌಷಧವು ಆ ವಸ್ತುವಿನ ಸನಿಹದಲ್ಲಿಯೇ ಇರುತ್ತದೆ ಎಂಬುದು ನಿಸರ್ಗದ ನಿಯಮ. ಅಣು–ಬಾಂಬಿಗೆ ಪ್ರತ್ಯಸ್ತ್ರವನ್ನು ಜನರು ಹುಡುಕುತ್ತಿದ್ದಾರೆ. ಆದರೆ ಇದುವರೆಗೂ ಅವರಿಗೆ ಅದು ತಿಳಿದಿಲ್ಲ. ವಿಜ್ಞಾನಿಗಳು 'ಅಣು'ವನ್ನು ವಿದಲನಗೊಳಿಸುತ್ತಾರೆ. ('ಅಣು'ವನ್ನು ಪ್ರಧಾನ ವಸ್ತು Master piece ಎಂದು ತಿಳಿವಳಿಕೆಗೋಸ್ಕರ ಕರೆಯೋಣ). ಅದರ ಪರಿಣಾಮವಾಗಿ ವಿನಾಶ ಸಂಭವಿಸುತ್ತದೆ. ಅದರ ಪ್ರತ್ಯಸ್ತ್ರ (Antidote) ಅದರ ಬಳಿಯೇ ಇದೆ. ಅದು ಚಿಕ್ಕ ಉಂಗುರದ (ಬಳೆ) ಆಕಾರದಲ್ಲಿರುತ್ತದೆ. ಈ ಶಕ್ತಿಯನ್ನುಪಯೋಗಿಸಿ ಅಣು–ಬಾಂಬನ್ನು



ನಿಷ್ಕ್ರಿಯಗೊಳಿಸಬಹುದು. ಈ ನನ್ನ ಸಂಶೋಧನೆಯ ಬಗ್ಗೆ ನನಗೆ ಪೂರ್ಣ ಆತ್ಮವಿಶ್ವಾಸ ಮತ್ತು ಖಚಿತತೆ ಉಂಟು. ಯಾವುದೇ ವಿಜ್ಞಾನಿ ಸಂಶೋಧನೆ ನಡೆಸಿ, ಫಲಿತಾಂಶವನ್ನು ಪರೀಕ್ಷಿಸಿ ನೋಡಬಹುದು. ತನ್ನನ್ನು ತಾನೇ ಅಧ್ಯಯನ ಮಾಡಿ (ಪರಿಶೀಲಿಸಿ) ಕೊಂಡವನಿಗೆ ಇನ್ನಾವುದೇ ವಸ್ತುವನ್ನು/ವಿಷಯವನ್ನು ಪರಿಶೀಲಿಸಿ ತಿಳಿಯುವುದು ಅಸಾಧ್ಯವಲ್ಲ. 'Know Thyself'–'ನಿನ್ನನ್ನು ನೀನು ತಿಳಿ' ಎಂದು ಸಾಕ್ರೆಟಿಸ್ ಹೇಳಿದ. ನಮ್ಮಲ್ಲಿ ಕೂಡ ಇದನ್ನೇ ಹೇಳುತ್ತಾರೆ. ಯೋಗ ಮಾರ್ಗದಲ್ಲಿ, ನಾವು ಕೊನೆಯಲ್ಲಿ ಯಾವುದನ್ನು ಮುಟ್ಟಬೇಕಿದೆಯೋ ಅವುಗಳನ್ನೇ ಸಾಧ್ಯವಿದ್ದ ಮಟ್ಟಿಗೆ ತೆಗೆದುಕೊಳ್ಳುತ್ತೇವೆ. ಇಂದು ನಾಳೆ, 'ಭಕ್ತಿಮಾರ್ಗ'ವೆಂದು ಕರೆಯಲಾಗುವ ವಿಧಾನದಲ್ಲಿ, ಯಾವುದನ್ನು ನಾವು ದೂರ ಸರಿಸಿ, ಅದರಿಂದ ತಪ್ಪಿಸಿಕೊಳ್ಳಬೇಕಿದೆಯೋ ಅದೇ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಅದಕ್ಕಾಗಿಯೇ ಅವರು (ಗುರಿಯಿಂದ) ದೂರ ದೂರ ಸರಿಯುತ್ತ ಹೋಗುತ್ತಿರುತ್ತಾರೆ. ಇದು ಹೇಗಿದೆಯೆಂದರೆ ಅಖಾಡದಲ್ಲಿ ಇಬ್ಬರು ಕುಸ್ತಿಪಟುಗಳು ಸೆಣಸಾಡುತ್ತ ಎರಡು ಗಂಟೆ ಕಳೆದರೆ ಕಸರತ್ತು ಪೂರ್ತಿಯಾದಂತಿರುತ್ತದೆ. ಕೆಲವರು ಎರಡು ಗಂಟೆ ಪೂಜೆ ಮಾಡುತ್ತಾರೆ. ಮತ್ತು ತಮ್ಮ ಮಾನಸಿಕ ಕಸರತ್ತು ಪೂರ್ತಿಯಾಯಿತು ಎಂದು ತಿಳಿಯುತ್ತಾರೆ. 'ಪೂಜೆ'ಯ 'ಪರೀಕ್ಷೆ' ಮುಗಿಯಿತು ಎಂದು ತೃಪ್ತರಾಗಿರುತ್ತಾರೆ.

ಈಗ ಮುಖ್ಯ ವಿಷಯಕ್ಕೆ ಬರುತ್ತೇನೆ. ಶುಕ್ಲಾಜಿಯವರ ಬೆನ್ನು ಹುರಿಯ ಯಾವ ಮಣಿಯ (गुरिया) ಮೇಲೆ ನಾನು ಆಘಾತ (Push) ಕೊಟ್ಟಿದ್ದೆನೋ ಅದು ಒಳ್ಳೆಯ ಪರಿಣಾಮ ಉಂಟು ಮಾಡುತ್ತಿತ್ತು. ಆದರೆ ಕಾಲದ (ಸಂದರ್ಭಗಳ) ಆಪತ್ತು ಮತ್ತು ವಿಚಾರಗಳು ತಂದ ಉದ್ವಿಗ್ನತೆಗಳಿಂದಾಗಿ, ಅವರು ಪ್ರಕಾಶಕ್ಕೆ ವಿರುದ್ಧವಾದ ಅಂಧಕಾರ ಇರುವ ಭಾಗದೊಂದಿಗೆ ಸಂಬಂಧ ಬೆಳೆಸಿಕೊಂಡರು. ಹೇಗೆ ಸೂಕ್ಷ್ಮ ಕಣದಂತಿರುವ ಅಣುವಿನ ಪ್ರಭಾವವು ಅದರ ಸಮೀಪವಿರುವ ವಸ್ತುವಿನಿಂದ ಕಪ್ಪಾಗಿ ಬಿಡುವುದೋ ಮತ್ತು ತನ್ನ ಬಣ್ಣವನ್ನು ತರುವುದೋ ಅದೇ ರೀತಿಯಲ್ಲಿ ಶುಕ್ಲಾಜಿಯವರು ಪ್ರಕಾಶದ ಬದಲಿಗೆ ಅಂಧಕಾರವನ್ನು ಒಳಗೊಳ್ಳಲಾರಂಭಿಸಿದರು ಮತ್ತು ಹೃದಯದ ಒಂದು ಕತ್ತಲೆಯ ಕೋಣೆಯಾಯಿತು; ಹಾಗೂ ಅದರಿಂದ ಅವರ ಇಡೀ ಶರೀರ ಮಂಡಲವೇ ಅಂಧಕಾರಮಯವಾಯಿತು. ನಾನು ಅಲಹಾಬಾದಿನಲ್ಲಿದ್ದಾಗ ಈ ಅಂಧಕಾರದ ಕೆಲ ಭಾಗವನ್ನು ತೆಗೆದು ಹಾಕಿದೆ. ಮತ್ತು ಉಳಿದುದನ್ನು ಇಲ್ಲಿ ಇರುವಾಗ ದೂರ ಮಾಡಿದೆ. ಶರೀರ ಮಂಡಲದ ಅಂಧಕಾರವನ್ನು ನಾನು ಜೌನ್‌ಪುರಕ್ಕೆ ಹೋಗುವಷ್ಟರಲ್ಲಿ ಶುದ್ಧಗೊಳಿಸಿದ್ದೆ. ಆದರೆ ಹೃದಯದ ಅಂಧಕಾರವನ್ನು, ಅಲ್ಲಿರುವಾಗ, ತೆಗೆದು ಹಾಕಲು ಪ್ರಯತ್ನಿಸಿದರೂ ಅದು ತೊಲಗಲಿಲ್ಲ. ಇಲ್ಲಿದ್ದಾಗ ಕೂಡ ಪ್ರಯತ್ನಿಸಿದೆ; ಆದರೆ ನಿರರ್ಥಕವಾಯಿತು. ಕೊನೆಗಂತೂ, ನನ್ನ ಹತಾಶೆಯನ್ನು ಕಂಡು ಈಶ್ವರ ನನ್ನ ಸಹಾಯಕ್ಕೆ ಬಂದನು. ಮಾಸ್ಟರ್ ಸಾಹೇಬರಿಗೆ ಪತ್ರ ಬರೆಯುತ್ತಿರುವಾಗ, ನನ್ನ ಗಮನ ಅತ್ತ ಹರಿಯಿತು. ಮತ್ತು ಯಾವಾಗ ನಾನು ಅದನ್ನು ತಡೆದು ನಿಲ್ಲಿಸಿದೆನೋ, ಆಗ ಅವರು

ಅಂಧಕಾರದಿಂದ ಬಿಡುಗಡೆ ಪಡೆದರು. ಈಗಲೂ ಕೂಡ, ಜೇಡರ ಜಾಲದಂಥದು ಒಂದಿಷ್ಟು ಉಳಿದಿದೆ. ಈಗ ಅದನ್ನು ತೆಗೆದುಹಾಕಬೇಕು. ಅಂಧಕಾರ ಈಗ ಇಲ್ಲ; ಆದರೆ ಪೂರ್ಣ ಪ್ರಮಾಣದಲ್ಲಿ ಪ್ರಕಾಶ ಇನ್ನೂ ಉಂಟಾಗಿಲ್ಲ. ಇದು ನನ್ನ ದಡ್ಡತನದ ಕತೆ. ಈ ಜೇಡರ ಜಾಲವನ್ನು ಯಾವಾಗ ತೆಗೆದು ಹಾಕುತ್ತೇನೆ ಎಂಬುದನ್ನು ನೋಡಬೇಕು. ಈಶ್ವರನು ನನಗೆ ಸಹಾಯ ಮಾಡಲಿ. ನೀನೂ (ಅವರ) ಹೃದಯದ ಸ್ಥಿತಿಯನ್ನು (ಆಗಾಗ) ನೋಡುತ್ತಿರು. ಮತ್ತು ಏನು ಕಂಡುಬರುತ್ತದೆಯೋ ಅದನ್ನು ಬರೆದು ತಿಳಿಸುತ್ತಿರು.

ಶ್ರದ್ಧೆ ಮತ್ತು ಪ್ರೇಮಗಳ ಕೊರತೆಯಿಂದಾಗಿ ಇದು ಉಂಟಾಗುತ್ತದೆ. "ಅದರಿಂದ ಅದರ ಪ್ರಾಣ (ಸತ್ತ್ವ)ವೇ ಹೊರಟು ಹೋಗುವಷ್ಟು, ಹೃದಯದ ಸ್ಥಿತಿ ಕೆಟ್ಟಿತ್ತಾದರೂ ಹೇಗೆ?" ಎಂದು ನೀನು ಕೇಳಿದ್ದೆ. ಅದರ ಉತ್ತರವನ್ನು ನಾನು, ಈ ಮೇಲೆ, ಕೊಟ್ಟಿದ್ದೇನೆ. ಪ್ರಕಾಶವು ಆಧ್ಯಾತ್ಮಿಕ ಪ್ರಾಣವಾಗಿದೆ. ಅದು ಸತ್ಯದ ಹೊಳಹು ತೋರಿಸುತ್ತದೆ; ಮತ್ತು ಅಂಧಕಾರವು ಆಧ್ಯಾತ್ಮಿಕ ಜೀವನದ ಮೃತ್ಯುವಾಗಿದೆ. ಅದು ಉಂಟಾಗುವುದರಿಂದ ತಮೋಗುಣ-ವೃತ್ತಿಗಳ ಪರಿಣಾಮಗಳಾಗುತ್ತವೆ; ಅಂದ ಮೇಲೆ 'ಜೀವನ' ಎಂಬುದು ಉಳಿಯುವುದೆಂತು?

ಪರಾಪ್ರಜ್ಞೆ (Super conscious State)ಯ ಬಗ್ಗೆ ನೀನು ಬರೆದಿರುವುದು ಸರಿ ಇದೆ; ಅದು ಉಂಟಾಗದಿರುವುದಕ್ಕೆ ಇದೇ ಕಾರಣ. ಉದಾಹರಣೆಗೆ ನಿನ್ನ ತಂದೆಯೇ ಇದ್ದಾರೆ, ಅವರ ಪರಾಪ್ರಜ್ಞೆಯು ಮಸ್ತಿಷ್ಕ(ಮೆದುಳು)ದವರೆಗೆ ಜಾಗ್ರತವಾಗಿದೆ; ಆದರೆ ಅವರು ಅದರಿಂದ ಕೆಲಸ ತೆಗೆದುಕೊಳ್ಳುತ್ತಿಲ್ಲ. ಅದಕ್ಕೆ ಕಾರಣ, ಭಕ್ತಿ ಮತ್ತು ಆಸಕ್ತಿಗಳ ಕೊರತೆ. ಪರಿಶ್ರಮವಿಲ್ಲದೆ ಸಿಗುವ ವಸ್ತುಗಳ ಅವಸ್ಥೆ ಹೀಗೆಯೇ ಆಗುತ್ತದೆ. ದೊಡ್ಡ ದೊಡ್ಡ ಜನರ ಆಯುಷ್ಯ ಕಳೆದು ಹೋಗುತ್ತದೆ; ಆದರೆ ಹೃದಯದ ಪರಾಪ್ರಜ್ಞೆ (Super conscious State) ಇನ್ನೂ ಜಾಗ್ರತವಾಗಿರುವುದಿಲ್ಲ. ನಾನು ಇಚ್ಛಿಸಿದರೆ ಇವರ ಕುಂಡಲಿನಿಯನ್ನೂ ಜಾಗ್ರತಗೊಳಿಸಬಹುದು. ಆದರೆ ಅದು ಕೇವಲ ಅವರಲ್ಲಿ ಉಂಟು ಎಂದು ಅವರನ್ನು ಸಂತುಷ್ಟಿಗೊಳಿಸಲಿಕ್ಕಷ್ಟೇ ಆದೀತು. ಅದರಿಂದ ಅವರ ಅಹಂಕಾರ ಬೆಳೆದೀತಷ್ಟೆ; ಆದರೆ ಅದರಿಂದ ಅವರು ಪ್ರಯೋಜನ ಪಡೆಯಲಾರರು. ಗುರುಗಳಾದವರು ಶಿಷ್ಯರ (ಅಭ್ಯಾಸಿಗಳ) 'ತಲೆ ತಿಕ್ಕಿ' (ಕಠಿಣ ಪರಿಶ್ರಮಕ್ಕೆ ಒಳಪಡಿಸಿ), ನಂತರವೇ ಎಲ್ಲೋ ಅವರ ಧ್ಯಾನಾಭ್ಯಾಸವನ್ನು ಪ್ರಾರಂಭಿಸುತ್ತಿದ್ದುದು, ಒಂದು ಪ್ರಾಚೀನ ನಿಯಮವೇ ಆಗಿದೆ; ಅದು ಯಾಕೆ ಹಾಗಿತ್ತೆಂದರೆ, ಆಗ ಅಭ್ಯಾಸಿಯಲ್ಲಿ ಎಷ್ಟು ಆಸಕ್ತಿ ಇದೆಯೆಂಬುದು ಗೊತ್ತಾಗುತ್ತಿತ್ತು. ಕಾಲ ಬದಲಾದಂತೆ ಗುರುಗಳೆನಿಸಿಕೊಂಡ ಜನರು ಇದರ ದುರುಪಯೋಗಪಡಿಸಿಕೊಳ್ಳಲು ಪ್ರಾರಂಭಿಸಿದರು, ಮತ್ತು ತಮ್ಮ ಸುಖಕ್ಕೋಸ್ಕರ ಶಿಷ್ಯರಿಗೆ ತೊಂದರೆ ಕೊಡಲು ಪ್ರಾರಂಭಿಸಿದರು. ಅವರಿಂದ ಸೇವೆ ತೆಗೆದುಕೊಳ್ಳುವುದು ತಮ್ಮ ಹಕ್ಕು ಎಂದು ಭಾವಿಸಿದರು, ಮತ್ತು ಶಿಷ್ಯರ ಸೇವೆ ಮಾಡುವುದು ಧರ್ಮ-ವಿರುದ್ಧ (ಪಾಪ)



ಎಂದು ತಿಳಿದರು. ಈ ಪದ್ಧತಿಯನ್ನು ಮುಂದುವರಿಸುವುದು ಯಾವ ರೀತಿಯಲ್ಲಿಯೂ ಅಪೇಕ್ಷಣೀಯವಲ್ಲ; ಬದಲಿಗೆ, ಗುರುವು ಶಿಷ್ಯನ ಸೇವೆ ಮಾಡಬೇಕು. ಇದನ್ನು ನಮ್ಮ ಲಾಲಾಜಿ ಮಹಾರಾಜರು ಪ್ರತ್ಯಕ್ಷ ತೋರಿಸಿ ಕೊಟ್ಟರು.

ನೀನು 'ಸ್ಮರಣೆ'ಯ ಬಗ್ಗೆ ಬರೆದ ಆಕ್ಷೇಪವು, ಆಕ್ಷೇಪವಲ್ಲ; ಅದೊಂದು ಒಳ್ಳೆಯ ವಿಚಾರವಾಗಿದೆ. ಕಬೀರ ಬರೆಯುತ್ತಾರೆ- "ಏಕ್ ಏಕ್ ಕಾ ಕರಯಿ ವಿಚಾರ, ಜಹಾಂ ಮಿಲೌನೀ ತಹಾಂ ವಿಚಾರ".

ನಿನ್ನಲ್ಲಿ ಇನ್ನೂ 'ದ್ವೈತ'ವು ಉಳಿದಿದೆ, ಆ ಕಾರಣವೇ 'ಸ್ಮರಣೆ'ಯ ಹಾರೈಕೆಯೂ ಉಳಿದಿದೆ. ತನ್ನ ಸ್ಮರಣೆ ಇಲ್ಲದಾಗ ಎರಡನೆಯವರ ಸ್ಮರಣೆ ಹೆಚ್ಚುತ್ತದೆ. ಮತ್ತು 'ಎರಡನೆಯ' ಎಂಬುವನು ಎದುರಿಗೆ ಉಳಿಯದಿದ್ದಾಗ ಸ್ಮರಣೆಯೂ ಉಳಿಯುವುದಿಲ್ಲ. ನಾನು ಸಹಜ ಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನದಲ್ಲಿ ಒಂದು ಮಾತು ಬರೆದಿದ್ದೇನೆ. ಈಗ ಅದು ಯಥಾವತ್ತಾಗಿ ನೆನಪಿಲ್ಲ, ಅದರ ಭಾವಾರ್ಥವನ್ನು ಬರೆಯುತ್ತೇನೆ : *"ಸ್ಮರಣೆ ಎಂತಿರಬೇಕೆಂದರೆ, ಸ್ಮರಣೆ ಎಂದೂ ಬರಬಾರದು, ಅರ್ಥಾತ್, ಸ್ಮರಣೆಯ ಸ್ಮರಣೆ ಹೊರಟು ಹೋಗಬೇಕು"* ನಿನಗೆ ಅನುಭವವಾಗುತ್ತಿರುವ ಶೂನ್ಯತೆ (ಏಕಾಂಗಿತನ), 'ಪಾಳು ಬಿದ್ದ ಮನೆಯ' (ಸ್ಥಳದ), ಒಂದು ಮಾದರಿಯಾಗಿದೆ; ನಮಗೆ ಅಲ್ಲಿಗೇ ಹೋಗಿ ತಲುಪಬೇಕಿದೆ.

ನೀನು ಕಳುಹಿಸಿದ ಡಿಸೆಂಬರ್ ೨೨ರ ಪತ್ರದಲ್ಲಿ ಕೆಲವು ಸ್ಥಿತಿಗಳ ಬಗ್ಗೆ ಇದೆ. ಅವುಗಳಲ್ಲಿ ಮೊದಲನೆಯದು 'ಸಂತೋಷ'. ಅದು ನಿನಗೆ ಬಂದಿಲ್ಲ. ಯಾವುದೇ ಸ್ಥಿತಿ ಇಲ್ಲದಾಗ ಇದರ ಅನುಭೂತಿ ಆಗಬೇಕು. "ಮೊದಲು 'ಮರೆವಿನ' ಸ್ಥಿತಿ ಇತ್ತು. ಈಗ ಅದು ಪ್ರತೀತವಾಗುವುದಿಲ್ಲ" ಎಂದು ಬರೆದಿದ್ದೀಯೆ. ಇದರ ಅರ್ಥವೇನೆಂದರೆ ನೀನು ಮರೆವಿನ ಸ್ಥಿತಿಯನ್ನೂ ಮರೆತು ಬಿಟ್ಟಿದ್ದೀಯೆ. ಇದು ಲಯಾವಸ್ಥೆಯ ಒಂದು ಒಳ್ಳೆಯ ಸ್ಥಿತಿ. ನೀನು ಈ ಪತ್ರದಲ್ಲಿ ಒಂದು ಉತ್ಕೃಷ್ಟವಾದ ಮಾತನ್ನು ಬರೆದಿದ್ದೀಯೆ. ಅದೇನೆಂದರೆ, ನಿನಗೆ ಬಂಧನ ಮತ್ತು ಮೋಕ್ಷಗಳೆರಡೂ ಅರ್ಥಹೀನವಾಗಿ ತೋರುತ್ತವೆ. ಇದು ಬಹಳ ಉನ್ನತ ವಿಚಾರ. ವಿಚಾರ ಮಾಡಿ ನೋಡಿದರೆ ಮುಕ್ತಿಯೂ ಸ್ವತಃ ಬಂಧನವೇ; ಯಾವ ಅರ್ಥದಲ್ಲಿ ಕೂಡ ಎಂದರೆ; ನಾವು ಅದರಲ್ಲಿ ಕಲ್ಪನೆಯ ಬಂಧನವನ್ನು ಹಾಕಿ ಬಿಡುತ್ತೇವೆ ಮತ್ತು ಒಂದು ಪರಿಧಿಯನ್ನು ಸೃಷ್ಟಿಸಿ ಬಿಡುತ್ತೇವೆ. ಅಸೀಮದ ಗತಿ ಅದರಲ್ಲಿ ಇರುವುದಿಲ್ಲ. ನಮ್ಮ ಕಲ್ಪನೆಗಳಿಗೂ ಮಿತಿ ಇಲ್ಲ, ಇದೊಂದು ದೋಷ. ಈ ಕಾರಣದಿಂದ ಕೂಡ, ನಾವು ಅಸೀಮದತ್ತ ಮುಂದುವರಿಯಲಾರೆವು. ಜಗತ್ತು ಮುಕ್ತಿಗೋಸ್ಕರ ಹಪಹಪಿಸುತ್ತಿದೆ. ಬಂಧನದಿಂದ ಬಿಡುಗಡೆಯಾಗುವುದು ಮುಕ್ತಿ. ಮುಕ್ತಿಯಿಂದ ಬಿಡುಗಡೆ ಪಡೆಯುವುದೇ 'ಸತ್ಯ'. (Reality). ನಾವು ಅವೆರಡನ್ನೂ ಬಿಟ್ಟು ಬಿಡಲೇಬೇಕಾಗುವುದು. ಆಗ ನಾವು ಅನಂತದೆಡೆಗೆ ಸಾಗಬಲ್ಲೆವು. ಅಷ್ಟೇ ಅಲ್ಲ. ನಮ್ಮ ಮನಸ್ಸಿನಲ್ಲಿ ಅನಂತದ ಕಲ್ಪನೆ ಇದ್ದುದಾದರೆ ನಮ್ಮಲ್ಲಿ ಸೀಮಿತತೆ ಇದೆ.

P-4-Books-PM-7-Anantyatre-117



(ಎಂದು ಅರ್ಥ). ಮತ್ತು ನಾವು ಅಸೀಮದ ಕಡೆಗೆ ಮುಂದುವರಿಯಲಾರೆವು. ನಮ್ಮ ಗುರು ಮಹಾರಾಜರ (ಆಧ್ಯಾತ್ಮಿಕ) ತರಬೇತಿಯ ಕಡೆಗೆ ಆಳವಾಗಿ ಗಮನ ಕೊಟ್ಟರೆ ಇದು ಅರ್ಥವಾದೀತು. ಆದರೆ ಯಾರಿಗೆ? ನಿಜವಾದ ಜಿಜ್ಞಾಸುಗಳಿಗೆ ಮಾತ್ರ. ಆ ಕಾರಣವೇ, ಆರಂಭದಿಂದಲೇ ನಾವು 'ಸೀಮಿತತೆ' ಮತ್ತು ಅನಂತ (ಅಸೀಮ)ತೆಗಳು ಕಲ್ಪನೆಯಲ್ಲಿ ಬರಗೊಡುವುದಿಲ್ಲ. ಹೇಳುವುದಕ್ಕೋಸ್ಕರ, ನಾವು ಅನಂತದ ಕಡೆಗೆ ಹೋಗುವುದಿದೆ ಎಂದು ಹೇಳುತ್ತೇವೆ; ಯಾಕೆಂದರೆ ನಾವು ಎಲ್ಲಿಗೆ ಹೋಗಿ ತಲುಪುವುದಿದೆಯೋ ಅದಕ್ಕೆ ಯಾವ ಶಬ್ದವೂ ಸಿಗುವುದಿಲ್ಲ. ಇನ್ನುಳಿದ ಮಾತು ಎಂದರೆ, ಈ (ನಿನ್ನ) ಪತ್ರದಲ್ಲಿ ಒಳ್ಳೆಯ ಲಯಾವಸ್ಥೆಯ ಪ್ರಸ್ತಾಪ ಇದೆ.

೨೭–೧೨–೧೯೫೪ರ ನಿನ್ನ ಪತ್ರದ ಪ್ರತಿಯೊಂದು ವಿಚಾರಕ್ಕೂ ವಿವರಣೆ ಕೊಡಬಹುದು. ಆದರೆ ಅದರ ಅಗತ್ಯವಿದೆಯೆಂದೆನಿಸುವುದಿಲ್ಲ. ಯಾಕೆಂದರೆ ಸಮಯ ಉಳಿಸುವುದೂ ಆವಶ್ಯಕ. ಆದರೆ, ನಿನ್ನ ಪತ್ರದಲ್ಲಿ ನನಗೆ ಅತಿಶಯ ಮೆಚ್ಚುಗೆಯಾದುದು,– 'ಜೀವನ ಮತ್ತು ಮೃತ್ಯುಗಳು ಒಂದೇ ಆಗಿ ಕಾಣುತ್ತವೆ'– ಎಂಬುದು, ಇದು ಮೌಲಿಕತೆಯ (Originality) ರುಜುವಾತು ಆಗಿದೆ. ಮತ್ತು ಅದನ್ನು ವಿವರಿಸುವುದು ಅಸಾಧ್ಯ. ೨೯–೧೨–೧೯೫೪ರ ನಿನ್ನ ಪತ್ರಕ್ಕೆ ಪ್ರತ್ಯುತ್ತರದ ಅಗತ್ಯವಿಲ್ಲ. ನೆತ್ತಿಯ ಮೇಲೆ ಗ್ಲಾಸಿನ ನೀರು ಸುರಿದಂತೆ, ಮತ್ತು ಅದರಿಂದ ಒಂದು ಛಿದ್ರವುಂಟಾಗದಂತೆ ಅನಿಸಿರುವುದರ ಅರ್ಥವೇನೆಂದರೆ, ಪ್ರಭುವು (ಸದ್ಗುರುವು) ತನ್ನ ಸಮಾಚಾರ ಕಳುಹಿಸಲು ಸ್ಥಾನವನ್ನು ಸಿದ್ಧಪಡಿಸಿದ್ದಾನೆ. ಆ ಸ್ಥಾನವನ್ನು ತಲುಪಿದ ನಂತರ ಅದರ 'ಸ್ಥಿತಿ'ಯು ಪ್ರಕಟಗೊಳ್ಳಬಹುದು. ಈಗ ನೀನಿರುವುದು ಎ1 (A1) ಸ್ಥಾನದಲ್ಲಿ. ಅದರ ಯಾತ್ರೆಯು ಆರಂಭವಾಗಿದೆ, ಆದರೆ, ಸಾವಕಾಶ ನಡೆಯುತ್ತಿದೆ. ಮಾಸ್ಟರ್ ಸಾಹೇಬರ ಮೂಲಕ ನಿನ್ನ ಸ್ವಾಸ್ಥ್ಯದ ಸಮಾಚಾರ ತಿಳಿಯಿತು. ಅದು ಅಭಿನಂದನೆಗೆ ಅರ್ಹವಾಗುವಷ್ಟು ಉತ್ತಮಗೊಂಡಿದೆ. ಈಗ ನಾನು ನಿನ್ನ (ಆಧ್ಯಾತ್ಮಿಕ) 'ಯಾತ್ರೆ'ಯ ಕಡೆಗೆ ಗಮನ ಕೊಡುತ್ತೇನೆ. ನನ್ನ ಆರೋಗ್ಯ ಕೂಡ ಈಗ ಒಳ್ಳೆಯ ಸ್ಥಿತಿಯಲ್ಲಿದೆ– ಒಳ್ಳೆಯದಾಗಿದೆ ಎಂದರೆ ಕೆಟ್ಟದಾಗಿಲ್ಲ ಎಂದಷ್ಟೇ ಅರ್ಥ.

ಅಮ್ಮಾಜಿಗೆ ನನ್ನ ಪ್ರಣಾಮ ತಲುಪಿಸುತ್ತೇನೆಂದು ಹೇಳಿದ್ದರಿಂದ ಇದರಲ್ಲಿ ಬರೆದಿಲ್ಲ. ಕೇಸರ್, ವಿಮಲಾ ಮತ್ತು ಉಮಾ ಅವರ ಪತ್ರಗಳು ಬರುತ್ತಿರುತ್ತವೆ. ಉತ್ತರ ಕಳುಹಿಸುವುದು ಕಷ್ಟ ಸಾಧ್ಯ. ತುಲಸೀದಾಸ ಅಲಹಾಬಾದಿಗೆ ಹೋಗಿ, ೩೦–೧೨–೫೪ಕ್ಕೆ ದಿಲ್ಲಿಯನ್ನು ತಲುಪಿರಬಹುದು. ಒಂದಿಷ್ಟು, ಪುಸ್ತಕ ರೂಪದಲ್ಲಿ ಬರೆಯಬೇಕೆಂದು ನನ್ನ ಮನಸ್ಸು ಹೇಳುತ್ತದೆ, ಮಾಸ್ಟರ್ ಸಾಹೇಬರೂ ಅದನ್ನೇ ಹೇಳುತ್ತಿದ್ದಾರೆ. ಯೋಚಿಸಿ ನೋಡಿದರೆ, ನನಗೆ ತಿಳಿದಿರುವುದನ್ನೆಲ್ಲ ಬರೆದುಬಿಟ್ಟಿದ್ದೇನೆ ಎಂದೆನಿಸುತ್ತದೆ. ಈಗ ವಿಚಾರ ಅತ್ತ ಹರಿಯುವುದಿಲ್ಲ; ವಿಷಯ ಎಲ್ಲವೂ ಮುಗಿದು



ಹೋಗಿದೆ ಎಂದು ಕಾಣುತ್ತದೆ. ನಾನು ಏನು ಬರೆಯಲಿ ಎಂದು ಈಗ ನೀನೇ ಹೇಳು.

ಶ್ರೀ ರಾಮಚಂದ್ರ ಮಿಷನ್ನಿನ ಮೂಲಕ ನಿನಗೋಸ್ಕರ ಬಂದ ಒಂದು ಪುಸ್ತಕವನ್ನು ಕಳುಹಿಸುತ್ತಿದ್ದೇನೆ. ಶಕ್ಯವಿದ್ದಷ್ಟು ಕಳುಹಿಸಲಿ ಎಂಬ ಉದ್ದೇಶದಿಂದ. ಅದರಲ್ಲಿ 'ಮನಿ-ಆರ್ಡರ್ ಫಾರ್ಮ್' ಕೂಡ ಇಡಲಾಗಿತ್ತು. ನಿನ್ನ ಪರವಾಗಿ ನಾನು ಒಂದು ರೂಪಾಯಿ ಕಳುಹಿಸಿದ್ದೇನೆ. ನಾನು ಚೌಬೇಜಿಯವರನ್ನು ಎರಡು ದಿನಗಳ ಮಟ್ಟಿಗೆ ಉಳಿಸಿಕೊಂಡಿದ್ದೇನೆ. ಅವರು ಮಂಗಳವಾರ ತಿರುಗಿ ಬರುತ್ತಾರೆ. ಅವರು ಚೆನ್ನಾಗಿದ್ದಾರೆ. ನಾರಾಯಣ ಎಲ್ಲರಿಗೂ ವಂದನೆ ಹೇಳುತ್ತಿದ್ದಾರೆ.

ನಿನ್ನ ಹಿತೈಷಿ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೫ **ಪತ್ರ ಸಂಖ್ಯೆ – ೪೫೬** ಷಾಹಜಹಾನಪುರ<br>
೧೫–೦೧–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸದಾ ಸಂತೋಷಿಯಾಗಿರು.

ನಿನ್ನ, ತಾ॥ ೪–೧–೧೯೫೫ ಮತ್ತು ೬–೧–೧೯೫೫ರ ಎರಡೂ ಪತ್ರಗಳು ಕೈ ಸೇರಿದವು. ಕಾಶೀರಾಮ ಅವರು ತಮ್ಮ ಧರ್ಮಪತ್ನಿಯೊಂದಿಗೆ ಉತ್ಸವದಲ್ಲಿ ಪಾಲುಗೊಳ್ಳಲು ಆಗಮಿಸಿದ್ದರು. ಕಾಶೀರಾಮ ಅವರ ಸ್ಥಿತಿ ತುಂಬ ಒಳ್ಳೆಯದಿದೆ, ನೋಡಿ ಸಂತೋಷವಾಯಿತು. ಅವರ ಧರ್ಮಪತ್ನಿಯೂ ಕೂಡ ಬ್ರಹ್ಮ ವಿದ್ಯೆಯನ್ನು ಕಲಿಯುವ ಆಕಾಂಕ್ಷೆಯುಳ್ಳವಳಾಗಿದ್ದಾಳೆ. ನಾನು ಅವರಿಗೆ, ಒಂದು ಅಭ್ಯಾಸ (ವಿಧಾನ)ವನ್ನು, ಆಸಾಮದಲ್ಲಿಯೇ ಮಾಡುತ್ತಿರಲು ಬರೆದಿದ್ದೆ, ಅದನ್ನು ಅವರು ಸಮರ್ಪಕವಾಗಿ ಮಾಡುತ್ತಿದ್ದಾರೆ. ಈಗ ವ್ಯವಸ್ಥಿತ ರೀತಿಯಲ್ಲಿ ಅಭ್ಯಾಸ (Practice) ಕೈಗೊಳ್ಳಲು ಬಯಸುತ್ತಿದ್ದಾರೆ. ಕಸ್ತೂರಿ ೨೬–೧–೫೫ಕ್ಕೆ ಇಲ್ಲಿಯೇ ಇರುತ್ತಾಳೆ, ಅವಳು ನಿಮಗೆ ತಿಳಿಸಿ ಕೊಡುತ್ತಾರೆ ಎಂದು ನಾನು ಅವರಿಗೆ ಹೇಳಿದ್ದೆ, ಕಾಶೀರಾಮ ಅವರಿಗೆ ನಮ್ಮ ಮಿಷನ್ನಿನ ಪ್ರಚಾರವನ್ನು ಆಸಾಮದಲ್ಲಿ ಬಹಳ ಚೆನ್ನಾಗಿ ಮಾಡಿದ್ದಾರೆ. ಚೀನೀಯರು ಮತ್ತು ಬರ್ಮೀಯರು ಕೂಡ ಕಲಿಯಲು ಬಯಸುತ್ತಾರೆ. ಆದರೆ ಅವರು ಅಲ್ಲಿಗೆ ಬರುವುದು ಕಠಿಣ.

ನಿನ್ನ ನಿಯಂತ್ರಣ ಸೂತ್ರ (ಲಗಾಮು) ನನ್ನ ಕೈಯಲ್ಲಿದೆ. ಯಾರು ಉತ್ತಮ ಪ್ರಗತಿ ಮಾಡಿದ್ದಾರೋ ಅವರ ಸೂತ್ರವನ್ನೂ ನನ್ನ ಕೈಯಲ್ಲಿ ಇಟ್ಟುಕೊಳ್ಳಲೇಬೇಕು. ಎಲ್ಲಾದರೂ ಅವರು ಪವಾಡಗಳ ಆಕರ್ಷಣೆಗೆ ಸಿಕ್ಕು ಅದರಲ್ಲಿ ಮುಳುಗಿ ಹೋಗಬಾರದಲ್ಲ ಎಂಬುದೇ ಇದಕ್ಕೆ ಕಾರಣ. ನಮ್ಮ ಗುರು ಮಹಾರಾಜರ

P-4-Books-PM-7-Anantyatre-118



(ಆಧ್ಯಾತ್ಮಿಕ) ತರಬೇತಿ ಎಂಥದಿದೆಯೆಂದರೆ, ಉಚ್ಚಮಟ್ಟದ ಪ್ರಗತಿ ಹೊಂದಿದವರು ಸಾವಿರಾರು ಜನರಿದ್ದರೂ, ಅವರ ನಿಯಂತ್ರಣ ಸೂತ್ರ ತನ್ನಿಂದ ತಾನೇ ನನ್ನ ಕೈಯಲ್ಲಿ ಬಂದಿರುತ್ತದೆ. ಇದರಿಂದಾಗುವ ಪ್ರಯೋಜನ ಬಹಳ ಉಂಟು. ಒಂದು, ಅವರ 'ಸ್ಥಿತಿ' ಏನೆಂಬುದರ ಸಮಾಚಾರ, ಅಗತ್ಯವಿದ್ದಾಗ ಪ್ರತಿ ನಿಮಿಷ ನಿಮಿಷಕ್ಕೂ ನನಗೆ ಗೊತ್ತಾಗುತ್ತಿರುತ್ತದೆ. ಎರಡನೆಯದಾಗಿ, ಅವರ ಪ್ರಗತಿಯ ವೇಗ ಸಹಜ ರೀತಿಯಲ್ಲಿ ನಡೆಯಬೇಕಾದರೆ ಎಷ್ಟು ಆವಶ್ಯಕವೋ ಅಷ್ಟೇ ಇರುತ್ತದೆ, ಮತ್ತು ಅವರು ಸ್ವತಃ ಮುಂದುವರಿಯುತ್ತಿರಲು ಬಲವನ್ನೂ ಅದು ಕೊಡುತ್ತಿರುತ್ತದೆ. ಅಭ್ಯಾಸಿಗೆ ದಣಿವಿನ ಅನುಭವವೂ ಆಗಬಹುದೆಂದು ನಾನು ಬರೆದುದು ಕೆಲಮಟ್ಟಿಗೆ ಸರಿ ಇದೆ. ಆದರೆ, ಈ ನಿಯಂತ್ರಣದ ಪರಿಣಾಮವಾಗಿ ಸಂಭವಿಸುವ ಸಂಗತಿಯನ್ನು ನೀನು ಗಮನಿಸಿಲ್ಲ. ಅದು, ನಮ್ಮ ಗುರು ಮಹಾರಾಜರ ಹಿರಿಮೆ ಮತ್ತು ಮಹಿಮೆಗಳನ್ನು ಹೊರಸೂಸಿ ತೋರಿಸುತ್ತದೆ; ಅದೇನೆಂದರೆ, ಗುರುವಿನ ಕೈಯಲ್ಲಿ ತಮ್ಮ ನಿಯಂತ್ರಣ-ಸೂತ್ರವುಳ್ಳ ಅಭ್ಯಾಸಿಗೆ, ಮುಂದುವರಿಯುತ್ತಿರುವಾಗ ಎಂಥ ನೆಮ್ಮದಿಯ ಅನುಭೂತಿ ಉಂಟಾಗುವುದೆಂದರೆ, ಅವನು ದಣಿವು ಅಥವಾ ಅಧೀರತೆಯನ್ನು ಅನುಭವಿಸುವುದಿಲ್ಲ. ಈಶ್ವರನು ದಯಪಾಲಿಸಿದ ಸ್ಥಿತಿಗೆ, ಬಿಡದೆ ಅಂಟಿಕೊಂಡಿರುವ ಅಭ್ಯಾಸಿಗಳಿಗೆ ಇದರ ಅನುಭೂತಿ ಆಗಲು ಶಕ್ಯ.

ನಿನ್ನ ಈ ಪತ್ರದಲ್ಲಿ ಮೈಮರೆಯುವುದನ್ನು (ಅಪ್ರಜ್ಞೆ) ಕುರಿತು ಪ್ರಸ್ತಾಪಿಸಿದ್ದೀಯೆ. ನನ್ನ ಒಂದು ಪತ್ರದಲ್ಲಿ, ನಿನ್ನಲ್ಲಿ ಮೈಮರೆತದ ಅವಸ್ಥೆ (बेहोशी) ಇದೆ, ಆದರೆ ಅದು ನಿನಗೆ ಅನುಭೂತಿಯಾಗುತ್ತಿಲ್ಲ ಎಂದು ಬರೆದಿದ್ದೆ. ಈಗ ಅದು ನಿನಗೆ ಅನುಭೂತಿಯಾಗುತ್ತಿದೆ. ವಾಸ್ತವವಾಗಿ, ಈ ಮೈಮರೆಯುವಿಕೆ ಎಂದರೇನು? ಇದು ಆತ್ಮದ ಒಂದು ಸ್ಥಿತಿ (ವರ್ಣ) ಆಗಿದೆ; ಜಗತ್ತು ನಮ್ಮ ಲಕ್ಷ್ಯದಿಂದ ಮರೆಯಾದಾಗ ಇದರ ಅನುಭವವಾಗುತ್ತದೆ; ನಾವು ಈಶ್ವರನಲ್ಲಿ ನಮ್ಮನ್ನು ಸಂಪೂರ್ಣ ಲಯಗೊಳಿಸುವವರೆಗೂ ಈ ಸ್ಥಿತಿ ವರ್ಧಿಸುತ್ತ ಹೋಗುತ್ತದೆ. ಇದಾದಮೇಲೆ, ನಾವು ಯಾವುದನ್ನು ನಮ್ಮ ಆಶ್ರಯವಾಗಿ ತೆಗೆದುಕೊಂಡಿದ್ದೇವೆಯೋ ಅದೇ ವಾತಾವರಣ ಮಾತ್ರವೇ ಉಳಿಯುತ್ತದೆ; ಅರ್ಥಾತ್, ಮೈಮರೆಯುವಿಕೆಯ ಎಚ್ಚರವೂ ಉಳಿಯುವುದಿಲ್ಲ. ನಾನು ನನ್ನ ಕತೆಯನ್ನೇ ಹೇಳುತ್ತೇನೆ, ಅದೊಂದು ವಿಚಿತ್ರ ಕತೆ; ಹಾಗೆನ್ನುವುದಾದರೆ, ನನ್ನ ಸ್ಥಿತಿಯೂ ಸಂಪೂರ್ಣ ಮೈಮರೆತ ಸ್ಥಿತಿ ಎಂದು ನಾನು ಹೇಳಬಲ್ಲೆ. ಅದು ನಿಜವಾಗಿಯೂ ಇರುವುದು ಹಾಗೆಯೇ. ಆದರೆ, ಅದು ನನ್ನ ಅನುಭೂತಿಗೆ ಸಿಗುವುದು ನಾನು ಬೇರೆಯವರೊಂದಿಗೆ ಮಾತನಾಡುವಾಗ, ಮತ್ತು ನಾನು ಅವರೊಂದಿಗೆ ಮಾತನಾಡುತ್ತಿದ್ದೇನೆ ಎಂಬ ಅರಿವು (ವಿಚಾರ) ಬಂದಾಗ ಮಾತ್ರವೇ. ಕೆಲವೊಮ್ಮೆ ಹೀಗೂ ಆದದ್ದುಂಟು. ಯಾರಿಗಾದರೂ ಮನದಟ್ಟು ಮಾಡಿಕೊಡುವುದಕ್ಕೋಸ್ಕರ ಅಥವಾ ಯಾರಿಗಾದರೂ ಉತ್ತರಿಸುವಾಗ ನಾನು ಪರಾಪ್ರಜ್ಞೆಯನ್ನು (Super conscious State), ಅಪ್ರಜ್ಞೆಯ ಸ್ಥಿತಿ ಇರುವ ಮಟ್ಟದವರೆಗೂ ಒಯ್ಯಬೇಕಾಗುತ್ತದೆ. ಪುತ್ರಿ, ವಾಸ್ತವವಾಗಿ ಅಪ್ರಜ್ಞೆಯ



ಸ್ಥಿತಿಯಲ್ಲಿಯೂ ಒಂದು ತೆರನಾದ ಪ್ರಜ್ಞೆ ಉಳಿದಿರುತ್ತದೆ. ಸಾಮಾನ್ಯ ಜನರು ಇದನ್ನು ಅರ್ಥಮಾಡಿಕೊಳ್ಳದಿರುವ ಸಂಭವವುಂಟು. ಯಾಕೆಂದರೆ, ಅವರ ನಿಲುಕು (ಪ್ರಗತಿ) ಆ ಮಟ್ಟದವರೆಗೆ ಇರುವುದಿಲ್ಲ.

ಅಭ್ಯಾಸಿಯು ತನ್ನ ಸ್ಥಿತಿಯಲ್ಲಿ ಲೀನನಾಗಿ ಇದ್ದಾಗ, ಮತ್ತು ಅಭಿರುಚಿ ಆಸಕ್ತಿಗಳು ಅವನ ಉನ್ನತಿಯನ್ನು ಮಾಡುತ್ತಿರುವಾಗ, ಅವನ (ಆಧ್ಯಾತ್ಮಿಕ) ಸ್ಥಿತಿ ಯಾವುದಿದೆಯೋ ಅದೇ ಜಗತ್ತಿನಲ್ಲಿಯೂ ಆವರಿಸಿರುವಂತೆ ಕಾಣುತ್ತದೆ. ಅವನು ನೋಡುವ ದೃಷ್ಟಿ ಬದಲಾಗಿರುವುದೇ ಅದಕ್ಕೆ ಕಾರಣ. ನಿನ್ನ ಸ್ಥಿತಿಯೂ ಇದೇ ಇದೆ, ನೀನು ಮೃತಾವಸ್ಥೆ (ಮುರ್ದಾಪನ್) ಎಲ್ಲೆಡೆಯಲ್ಲಿಯೂ ಇರುವುದೆಂಬಂತೆ ಕಾಣುತ್ತಿದ್ದೀಯೆ. ಒಂದು ನಿರ್ಜೀವ ಶವಕ್ಕೆ ಎಲ್ಲವೂ ನಿರ್ಜೀವವೇ. ಮೃತ ವ್ಯಕ್ತಿ ಯಾವುದರೊಂದಿಗೂ ಸಂಬಂಧ ಹೊಂದಿರುವುದಿಲ್ಲ. ಎಲ್ಲ ಪ್ರಕಾರದ ಬಂಧನಗಳು (ಮೋಹಗಳು) ನಶಿಸಿ ಹೋದಾಗ ಮಾತ್ರವೇ ಈ ಸ್ಥಿತಿ ಪ್ರಾಪ್ತವಾಗಬಲ್ಲುದು.

ಈಗ ನಾನು ನಿನ್ನ ೯-೧೦-೧೯೫೫ರ ಪತ್ರಕ್ಕೆ ಉತ್ತರ ಬರೆಯುತ್ತಿದ್ದೇನೆ. ನಾನು ೧೩-೧೧-೧೯೫೫ ರಂದು ಕಂಡ ಒಂದು ಕನಸಿನ ಬಗ್ಗೆ ಬರೆಯುತ್ತೇನೆ. ನೀನು ಮನೆಯಲ್ಲಿ ನಿನ್ನ ಸೋದರ-ಸೋದರಿಯರೊಂದಿಗೆ, ತಾಯಿಯೊಂದಿಗೆ ಇದ್ದಂತೆ ಮತ್ತು ನಾನು ನಿನ್ನ ಎ1 (A1) ಬಿಂದುವಿಗೆ ಪ್ರಾಣಾಹುತಿ ನೀಡುತ್ತಿರುವಂತೆ ಕನಸು ಕಂಡೆ. ನೀನು ಒಂದು ಸ್ಥಿತಿಯ ಬಗ್ಗೆ ಎಷ್ಟು ಚೆನ್ನಾಗಿ ಬರೆದಿದ್ದೀಯೆ ! ನನಗೆ ಅದರಿಂದ ಎಷ್ಟು ಸಂತೋಷವಾಗುತ್ತಿದೆಯೆಂದರೆ, ಪ್ರಾಯಶಃ ನಾನು ಆ ಸ್ಥಿತಿಯಲ್ಲಿದ್ದಿದ್ದರೆ ನನಗೆ ಅಷ್ಟು ಸಂತೋಷವಾಗುತ್ತಿರಲಿಲ್ಲ. ಅದೇ, ಮೃತಾವಸ್ಥೆಯೂ ಮೃತವಾಗಿ (ಅಳಿದು) ಹೋದ ಸ್ಥಿತಿ. ಒಬ್ಬ ಅಭ್ಯಾಸಿಯಿಂದ, ಇಂಥ ಸ್ಥಿತಿಯು ದೊರಕಿದ ಸಮಾಚಾರ ನನಗೆ ಬಂದಿರುವುದು ನನ್ನ ಭಾಗ್ಯ. ಇದು ಅತ್ಯಂತ ಒಳ್ಳೆಯ ಸ್ಥಿತಿ. ಇದನ್ನು ಲಯಾವಸ್ಥೆಯ-ಲಯಾವಸ್ಥೆ ಎಂದು ಕರೆಯುತ್ತಾರೆ. ಇದಾದ ನಂತರ 'ಬಕಾ' ಅವಸ್ಥೆ ಪ್ರಾರಂಭವಾಗಿ ಬಿಟ್ಟಿದೆ. ಈ 'ಬಕಾ' ಅವಸ್ಥೆಯನ್ನು ಲಾಲಾಜಿಯುವರು 'ತುರೀಯಾವಸ್ಥೆ' ಎಂದು ಕರೆದಿದ್ದಾರೆ. ಜನರು ತುರೀಯಾವಸ್ಥೆಯನ್ನು ಬಹಳ ಬಯಸುತ್ತಾರೆ. ತುರೀಯದ ಅನೇಕ ಪ್ರಕಾರಗಳುಂಟು. ನಿನ್ನಲ್ಲಿ ತುರೀಯಾವಸ್ಥೆ ಮೊದಲಿನಿಂದಲೇ ಇದೆ. ಆದರೆ ಈ ತುರೀಯಾವಸ್ಥೆಯು ಹೆಚ್ಚು ಸ್ಫುಟವಾಗಿರುತ್ತದೆ. ಅಭ್ಯಾಸಿಯಲ್ಲಿ ಲಯಾವಸ್ಥೆಯು ಹೆಚ್ಚು ವರ್ಧಿಸಿದರೆ, ಈಶ್ವರನ ವಿಚಾರ (ಸ್ಮರಣೆ) ಮಾಡಿದರೆ 'ಗಲಿಬಿಲಿ' (ಗಾಬರಿ)ಯಾಗುತ್ತದೆ; ಯಾಕೆಂದರೆ ಅಷ್ಟು ಸಮಯದ ಮಟ್ಟಿಗೆ ಅವನಿಂದ ಬೇರ್ಪಟ್ಟು ಇರುವುದನ್ನು ಹೃದಯವು ಸಹಿಸಿಕೊಳ್ಳಲಾರದು. ಈ ಕಾರಣದಿಂದಲೇ ನೀನು ಇನ್ನು ಪೂಜೆ ಅರ್ಥಾತ್ ಧ್ಯಾನ ಮಾಡುವ ಅಗತ್ಯವಿಲ್ಲ ಎಂದು ನಾನು ನಿನಗೆ ಹೇಳಿದ್ದೆ. ಉತ್ಸವಕ್ಕೆ ಬರುವ ವಿಚಾರ ಬಂದಾಗ ಕೂಡ ನಿನಗೆ ತಳಮಳವೆನಿಸುವುದು ಈ ಕಾರಣದಿಂದಲೇ; ಯಾಕೆಂದರೆ ಆ ವಿಚಾರದಿಂದ ದ್ವೈತ ಭಾವ ಉಂಟಾಗುತ್ತದೆ. ನೀನು ಏಕತ್ವದಲ್ಲಿಯೇ ಲೀನಳಾಗಿದ್ದೀಯೆ. ಈ ಪತ್ರದಲ್ಲಿ ಉತ್ತರಿಸಲು ಯೋಗ್ಯವಾದ ಅನೇಕ

P-4-Books-PM-7-Anantyatre-119



ವಿಷಯಗಳುಂಟು. ಆದರೂ, ನಾನು ಬರೆದಿರುವುದು ನಿನಗೆ ಪರ್ಯಾಪ್ತವಾಗಿದೆ 'ನನಗೆ ಸ್ವಯಂ ನನ್ನಿಂದಲೇ ಭಯವಾಗುತ್ತದೆ'-ಎಂದು ಬರೆದಿದ್ದೀಯೆ, ಇದು ಎಷ್ಟು ಒಳ್ಳೆಯ ಸ್ಥಿತಿಯೆಂದರೆ, ಅದನ್ನು ತಿಳಿಸಲು ಶಬ್ದಗಳು ಸಿಗುವುದಿಲ್ಲ. ಇದೊಂದು ರಹಸ್ಯ. ಇದನ್ನು ಬಹಿರಂಗಪಡಿಸಲು ಹೃದಯವೂ ಒಪ್ಪುವುದಿಲ್ಲ. ವಾಸ್ತವವಾಗಿ ಇದೊಂದು ಈಶ್ವರೀಯ ರಹಸ್ಯವಾಗಿದೆ.

ನೀವೆಲ್ಲರೂ ಬಸಂತ ಉತ್ಸವಕ್ಕೆ ಬರುತ್ತಿದ್ದೀರಿ ಎಂಬುದು ಸಂತೋಷದ ಸಂಗತಿ. ಕೇಸರ್, ವಿಮಲಾ ಮತ್ತು ಉಮಾ ಅವರ ಪತ್ರಗಳು ತಲುಪಿ ಎರಡು ದಿನಗಳಾದವು. ಸಾಧ್ಯವಾದರೆ ಅವರಿಗೂ ಸ್ವಲ್ಪ ಬರೆಯುತ್ತೇನೆ. ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೬ **ಪತ್ರ ಸಂಖ್ಯೆ – ೪೫೭** ಷಾಹಜಹಾನಪುರ
೦೫–೦೨–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

ಎರಡನೆಯ ತಾರೀಖಿಗೆ ನೀವೆಲ್ಲರೂ ತಿರುಗಿ ಮನೆಗೆ (ಊರಿಗೆ) ಹೊರಟಿರಿ. ನನಗೆ ಮಧ್ಯಾಹ್ನ ೧೨-೩೦ಕ್ಕೆ ಹರಿಯ ಮೂಲಕ ತಿಳಿಯಿತು. ನಾನೂ ಬಸ್ ನಿಲ್ದಾಣಕ್ಕೆ ಬರಲೇ ಎಂದು ಬಯಸಿದೆ. ಆದರೆ, ನಾನು ಕೆಲವು ಘಂಟೆಗಳ ಕಾಲ ಬಿಡುವು ಮಾಡಿಕೊಳ್ಳಬೇಕಿತ್ತು ಮತ್ತು ನಾನು ಸ್ಟೇಷನ್‌ದಿಂದ ಮರಳಿದ ಮೇಲೆ ನಿಮಗೆ ವಿದಾಯದ ನೋವು ಮತ್ತೆ ಉಂಟಾದೀತು. ಹಾಗಿದ್ದರಿಂದ ಬರಲು ಮನಸ್ಸು ಮಾಡಲಿಲ್ಲ, ಆ ಕಾರಣವೇ ಸ್ಟೇಷನ್ನಿಗೆ ಬರಲಿಲ್ಲ. ಸ್ಟೇಷನ್ನು ಕಛೇರಿಗೆ ಸಮೀಪವಿರುವುದೇನೋ ಸರಿ. ಆದರೆ, ನಾನು ಖಂಡಿತವಾಗಿಯೂ ನಿಮ್ಮೆಲ್ಲರನ್ನು ಮನೆಗೆ ತಲುಪಿಸುವ ಕೆಲಸ ಮಾಡಿದೆ ಮತ್ತು ಫೆಬ್ರುವರಿ ಮೂರನೆಯ ತಾರೀಖಿಗೆ ಮಧ್ಯಾಹ್ನ ಒಂದು ಗಂಟೆಯ ಸುಮಾರಿಗೆ ವಾಪಸು ಬಂದೆ. ರಾತ್ರಿ ಹೊತ್ತು ನಿಮಗೆ ಪ್ರಯಾಣದ ಕಷ್ಟ ಕಡಿಮೆಯೆಂದೆನಿಸಿರಬಹುದು. ರೋಗಕ್ಕೆ ಶುಶ್ರೂಷೆಯಂತೂ ಬೇಕೇ ಬೇಕು. ನಿನ್ನ ಹೊಟ್ಟೆಯಲ್ಲಿ ಬಾವು ಬರುತ್ತಿತ್ತೆಂದು ಚೌಬೇಜಿಯವರು ತಿಳಿಸಿದ್ದರು. ನೀನು ಮೇಣದ ಪಟ್ಟಿ ಕಟ್ಟುತ್ತಿರಬೇಕು. ಅದು ಪ್ರಯೋಜನಕಾರಿ ಯಾಗಬಹುದು. ನನಗೂ ಅದರಿಂದ ಪ್ರಯೋಜನವಾಗಿದೆ. ನೀನೂ ಕೂಡ ಒಂದೇ ರಾತ್ರಿಯಲ್ಲಿ ಅದರಿಂದ ಒಳ್ಳೆಯದಾಯಿತು ಎಂದು ತಿಳಿಸಿದ್ದೀಯೆ. ಇದಾದ ನಂತರ ಈಶ್ವರನು ಈ ಬಾವಿನ ಕಷ್ಟವನ್ನು ಉಂಟು ಮಾಡದಿರಲಿ. ಡಾಕ್ಟರಳು ನಿನಗೆ ಕೆಲವು ಔಷಧಗಳನ್ನು ತಿಳಿಸಿದ್ದಾಳೆ. ಅವುಗಳನ್ನು ತೆಗೆದುಕೊ ಮತ್ತು ಆರೋಗ್ಯದ



ಬಗ್ಗೆ ಏನು ಲಕ್ಷ್ಯ ಕೊಡಬೇಕೆಂದು ಹೇಳಿದ್ದಾರೋ ಅದನ್ನು ಮಾಡುತ್ತಿರು. ಅದರಿಂದ ಹೆಚ್ಚಿನ ಪ್ರಯೋಜನವಾದೀತು.

ಈಶ್ವರನ ಕೃಪೆಯಿಂದ ನೀನು ಬಿ-೧ ನ್ನಿನ ಸ್ಥಾನಕ್ಕೆ ಬಂದಿದ್ದೀಯೆ. ಆದರೆ, ಬಿ-೧ ಸ್ಥಾನದಲ್ಲಿ ಕೊಂಚ ಹೆಚ್ಚು ವೇಗವಿದ್ದಂತೆ ತೋರುತ್ತದೆ. ಅದರ ಕಾರಣವನ್ನು ನಿನಗೆ ತಿಳಿಸುತ್ತೇನೆ. ನೀನು ಬೇರೆಯುವರಿಗೂ (ಆಧ್ಯಾತ್ಮಿಕ) ಶಿಕ್ಷಣ ಕೊಡುತ್ತಿರುವೆಯಲ್ಲ; ಅದೇ ಇದಕ್ಕೆ ಕಾರಣ. ನೀನು ಎ-೧ (A1) ಸ್ಥಾನದಿಂದ ಕದಲಲು ಬಯಸದಿದ್ದಾಗ, ನಾನು ಆ ಬಿಂದುವಿನಲ್ಲಿ ಸ್ಪಂದನ ಉಂಟು ಮಾಡಿದ್ದೆ. ಈ ಸ್ಪಂದನ ಉಚಿತವಾಗಿದೆ ಮತ್ತು ಲಾಭಕಾರಿ ಎಂದು ಕಂಡು ಬಂದರೆ, ಅದನ್ನು ಬಿ-೧(B1) ಸ್ಥಾನದಲ್ಲಿ ಲೀನಗೊಳಿಸುತ್ತೇನೆ ಮತ್ತು, ಯಾತ್ರೆಯ ಅವಸ್ಥೆಯಲ್ಲಿ ಕೊಂಡೊಯ್ಯುತ್ತೇನೆ. ಈಗ ನಾನು ಆ ಸ್ಪಂದನವನ್ನು ಲೀನಗೊಳಿಸಲು ನಿರ್ಧರಿಸಿದ್ದೇನೆ. ಮತ್ತೆ ಯಾತ್ರೆಯ ಸ್ಥಿತಿಯನ್ನು ಉಂಟು ಮಾಡುತ್ತೇನೆ. ಮುಂದಿನ ನೆಲೆಯಲ್ಲಿ ಕೂಡ ಇದು ಮುಂದುವರಿಯುವಷ್ಟು ಬಿ-೧ ಸ್ಥಾನದಲ್ಲಿ ಖಂಡಿತ ಇಟ್ಟಿರುತ್ತೇನೆ. ಹಾಗೆ ಮಾಡುವುದರಿಂದ, ಮುಂದೆ ಯಾವುದೇ ನೆಲೆ (ನಿಲ್ದಾಣ)ಯಿಂದ ಕದಲಲು ನೀನು ಮನಸ್ಸು ಮಾಡದಿರುವಂತಾಗುವುದಿಲ್ಲ. ಯಾಕೆಂದರೆ ಈ ವಸ್ತು ಸಂಗಡ ಇದ್ದಾಗ ಸ್ಥಗಿತವಾಗಿ ನಿಲ್ಲುವ ವಿಚಾರ ಬರುವುದಿಲ್ಲ. ಗತಿ (ಚಲನೆ, ಪ್ರಯತ್ನ)ಯು ಸೂಕ್ಷ್ಮ ರೂಪದಲ್ಲಿ ಇದ್ದಾಗ, ಸ್ಥಗಿತತೆಯ ಸ್ಥಿತಿ ಉಂಟಾಗದು ಎಂಬುದೇ ಇದಕ್ಕೆ ಕಾರಣ. ಗತಿ ಮತ್ತು ಸ್ಥಗಿತತೆಗಳು (ನಿಲುಗಡೆ) ಪರಸ್ಪರ ವಿರುದ್ಧವಾದವುಗಳು. ಗತಿ ಎಲ್ಲಿದೆಯೋ ಅಲ್ಲಿ ನಿಲುಗಡೆ ಉಂಟಾಗದು. ಹಾಗೂ, ಗತಿಯನ್ನು, ಅದರ ಪ್ರಭಾವ (ಮಾತ್ರವೇ) ಉಳಿಯುವ ಹಾಗೆ ಸೂಕ್ಷ್ಮಗೊಳಿಸುತ್ತೇನೆ. ಮುಂದೆ ಹೋದ ನಂತರ, ನನಗೆ ಅವಶ್ಯ ಕಂಡದ್ದನ್ನು ಮಾಡುತ್ತೇನೆ. ಎಲ್ಲಿ ಅದರ ಆವಶ್ಯಕತೆ ಉಂಟಾಗುವುದೋ ಆ ಸ್ಥಾನಕ್ಕೆ ಸಂಬಂಧಿಸಿದ ಮಾತು ಇದು. ನಿನ್ನ ಹೊಟ್ಟೆನೋವು ಗುಣವಾಗುವುದರ ನಿರೀಕ್ಷೆಯಲ್ಲಿದ್ದೇನೆ; ಅದು ಅವಶ್ಯ ಸರಿಯಾಗುವುದು. ನಿನ್ನ ಆರೋಗ್ಯ ಸರಿಯಾಗಲೇ ಬೇಕು. ಅಮ್ಮಾಜಿಯವರಿಗೆ ವಂದನೆ ತಿಳಿಸು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೭ **ಪತ್ರ ಸಂಖ್ಯೆ – ೪೬೦** ಷಾಹಜಹಾನಪುರ
೧೩–೦೨–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ, ೪-೨-೫೫ ಮತ್ತು ೮-೨-೫೫ರ ಪತ್ರಗಳೆರಡೂ ಕೈ ಸೇರಿದವು. (ನಿನ್ನ) 'ಸ್ಥಿತಿ'ಗಳು ಎಷ್ಟು ಸೂಕ್ಷ್ಮವಾದವುಗಳೆಂದರೆ, ಅವುಗಳಿಗೆ ಉತ್ತರ ಕೊಡುವುದು

P-4-Books-PM-7-Anantyatre-120



ಕಠಿಣ. ಆದರೂ ಏನೋ ಒಂದು ಸ್ವಲ್ಪ ಬರೆಯುತ್ತೇನೆ. ಯಾರಾದರೂ ವಿವರಿಸಲು ಹೊರಟರೆ ಸೂಕ್ತವಾದ ಶಬ್ದಗಳೇ ಸಿಗದ ಹಾಗಿದೆ ನಿನ್ನ ನಿಜವಾದ ಸ್ಥಿತಿ. ನಿಜವಾದ 'ಸ್ಥಿತಿ' ಯಿಂದುಂಟಾದ ಬದಲಾದ ಸ್ಥಿತಿ ಏನಿದೆಯೋ ಅದನ್ನು ನೀನು ಚೆನ್ನಾಗಿ (ಸರಿಯಾಗಿ) ಬರೆಯುತ್ತೀಯೆ. ನನ್ನ ವೀಕ್ಷಣೆಗೆ (Reading) ತಿಳಿದು ಬಂದ ಮಟ್ಟಿಗೆ, ಅದು, ಒಬ್ಬನು ನಿದ್ರಿಸುತ್ತಲೂ ಇಲ್ಲದೆ, ಎಚ್ಚರವಾಗಿ ಕೂಡ ಇಲ್ಲದೇ, ಇದ್ದರೆ, ಅವೆರಡರ ನಡುವಿನ ಸ್ಥಿತಿ ಇದ್ದ ಹಾಗೆ ಇದೆ. ಈಗ ಸದ್ಯ ನನಗೆ ಅನುಭೂತಿಯಾಗುತ್ತಿರುವ (ನಿನ್ನ) ಬಿ-೧ (B1) ಬಿಂದುವಿನಲ್ಲಿ ಸಾಕಷ್ಟು ಶಕ್ತಿ (ರಭಸ) ಇದೆ. ನಾನು ಎ-೧ (A1) ಬಿಂದುವಿನಲ್ಲಿ ಹೆಚ್ಚು ಸ್ಪಂದನ ಉಂಟು ಮಾಡಿದ್ದೆ ಮತ್ತು ಅದನ್ನು ಬಿ-೧ (B1) ದಲ್ಲಿ ಇರಿಸಿದ್ದುದೇ ಅದಕ್ಕೆ ಕಾರಣವಾಗಿದೆ. ನಾನು ಹಾಗೆ ಮಾಡಿದುದರ ಕಾರಣವನ್ನು ನನ್ನ ಹಿಂದಿನ ಪತ್ರದಲ್ಲಿ ಬರೆದಿದ್ದೇನೆ. ಈ ಶಕ್ತಿಯನ್ನು ವಿಚಾರಪೂರ್ವಕ ಪರೀಕ್ಷಣೆ ಮಾಡು. ಫೆಬ್ರುವರಿ ನಾಲ್ಕರ ನಿನ್ನ ಪತ್ರದಲ್ಲಿ 'ಸಹಜ-ಚೇತನ'ದಂಥದು (Natural Consciousness) ನಿನ್ನೊಳಗೆ ಇದೆ ಎಂದು ಬರೆದಿದ್ದೀಯೆ. ನಮ್ಮಲ್ಲಿ (ಪದ್ಧತಿಯಲ್ಲಿ) ಎರಡು ಸ್ಥಿತಿಗಳು ಒಟ್ಟೊಟ್ಟಿಗೆ ಸಾಗುತ್ತವೆ- ಒಂದು, ಮೂಲತಃ ಯಾವ ಸ್ಥಿತಿ (ಯಾವುದೊಂದು ಬಿಂದುವಿನಲ್ಲಿ) ಇರುವುದೋ ಅದು; ಎರಡನೆಯದು, ಆ ಸ್ಥಿತಿಯ ಪರಿಣಾಮದಿಂದಾಗಿ ಉಂಟಾಗುವಂಥದು. ಮೂಲದ (ನಿಜವಾದ) ಸ್ಥಿತಿಯಿಂದುಂಟಾದುದು ನಮಗೆ ಮನಸ್ಸಿನ ಸ್ಥಿತಿಯಲ್ಲಿ ಆಗುವ ಬದಲಾವಣೆಯನ್ನು ಹೇಳುತ್ತದೆ, ಅರ್ಥಾತ್, ಆ ಕಾರಣದಿಂದ ಪ್ರಗತಿಯುಂಟಾಗುತ್ತಿದೆ, ಅಥವಾ ಉನ್ನತಿಯಾಗುತ್ತಿದೆ. 'ಉನ್ನತಿ' ಎನ್ನುವುದರ ಅರ್ಥ, ನಿಮ್ಮ ಸ್ಥಿತಿಯಿಂದ ಅದಕ್ಕಿಂತ ಮೇಲಿನ ಸ್ಥಿತಿಗೆ ಹೋಗುವುದೆಂಬುದೇ ಆಗಿದೆ. ಮತ್ತು, ಉನ್ನತಿಯಾಗುತ್ತ ಆಗುತ್ತ ಮನಸ್ಸು ತನ್ನ ನಿಜವಾದ ಸ್ಥಿತಿಯಲ್ಲಿ ಲಯವಾದಾಗ ಬದಲಾವಣೆ ಇಲ್ಲದ ಸ್ಥಿತಿ ಉಂಟಾಗುತ್ತದೆ. ಇದು ಈಶ್ವರನ ಭಾಗ್ಯದಲ್ಲಿಯೂ ಇಲ್ಲ. ಅದು ಕೇವಲ 'ಭೂಮಾ' (Ultimate)ಗೆ ಸೇರಿದೆ. ಇದು ತತ್ತ್ವಕ್ಕೆ ಸಂಬಂಧಿಸಿದುದಾಯಿತು. ಈಗ ಸ್ವಂತದ ಬಗ್ಗೆ ಕೇಳು. 'ಸಹಜ-ಚೇತನ'ವು ನಿನಗೆ ಸ್ಥಿತಿಯ ಅನುಭೂತಿ ಕೊಡುತ್ತದೆ ಎಂದು ನೀನು ಬರೆದಿದ್ದೀಯೆ. ಇದು ಮನಸ್ಸಿನ 'ಗತಿ' ಆಗಿದೆ. ಮತ್ತು ಇದು ಮನುಷ್ಯನು ಜೀವಿಸಿರುವವರೆಗೂ ಒಂದಿಷ್ಟು ಉಳಿಯುತ್ತದೆ; ಎಷ್ಟೇ ಉನ್ನತಿ ಹೊಂದಿದರೂ ಸರಿಯೆ. ತನ್ನ ನೈಜ ಸ್ಥಿತಿಯ ಅರಿವು ಉಳಿಯದ ಮಟ್ಟಿಗೆ ಮನಸ್ಸು ಮೂಲ ಸ್ಥಿತಿಯಲ್ಲಿ (ಅದರ ವರ್ಣದಲ್ಲಿಯೇ ಅದ್ದಿ) ಮಗ್ನವಾಗುವುದು ಅಗತ್ಯ. ನೀನು ಎಲ್ಲಿಗೆ ಹೋಗಿದ್ದೆ, ಯಾರನ್ನು ನೋಡಿದ್ದೆ ಎಂಬುದು ಸ್ಮರಣೆಗೆ ಬರುವುದಿಲ್ಲ, ಒಂದು ಸ್ವಪ್ನದಂತೆ ತೋರುತ್ತದೆ ಎಂದು ಬರೆದಿದ್ದೀಯೆ. ಮೂಲ ತತ್ತ್ವದಲ್ಲಿ, ಸತ್ಯದಲ್ಲಿ ಮನಸ್ಸು ಅಂಟಿಕೊಂಡು ಬಿಟ್ಟಿದೆ ಎಂಬುದು ಇದರ ಅರ್ಥ. ಸತ್ಯಕ್ಕೆ ಸಂಲಗ್ನವಾಗಿ ಹೆಚ್ಚು ಹೆಚ್ಚು ಸ್ಥಾಪಿತವಾದಾಗ, ದ್ವೈತ ಭಾವವು ಕಡಿಮೆಯಾಗುತ್ತ ಹೋಗಿ ಏಕತ್ವದ ಭಾವ ವರ್ಧಿಸುತ್ತದೆ. 'ಲಯ' ಎಂದರೆ ಇದೇ. ಮರಣದ



ನಂತರ ಹೊಸ ಜೀವನ ಶುರು ಆಗುವುದೆಂಬುದು ಸ್ಪಷ್ಟ. ಮರಣ ಹೊಂದಿದವನು ಮತ್ತೆ ಜನ್ಮ ತಳೆಯಲೇ ಬೇಕು. ಇದೇ ರೀತಿ, ನಾವು ಜೀವಿಸಿರುವಾಗಲೇ ಮರಣ ಹೊಂದಿದರೆ, ಅದೇ ರೀತಿಯ (ಹೊಸ) ಜೀವನ ಆರಂಭವಾಗುತ್ತದೆ. ಆ ರೀತಿಯ ಜೀವನ ಬಂದಾಗ, ಮರಣವೂ ಅದೇ ರೀತಿಯದಾಗುತ್ತದೆ, ಅಂದ ಮೇಲೆ ಮತ್ತೆ (ಹುಟ್ಟು) ಬರುವ ಪ್ರಶ್ನೆ ಏಳುವುದಿಲ್ಲ. ಯಾಕೆಂದರೆ, ಜೀವಿಸಿರುವಾಗಲೇ ಮರಣಿಸಿದ (ಮೃತಾವಸ್ಥೆಯನ್ನು ಹೊಂದಿದ) ಜೀವನದ ಮೃತ್ಯುವೂ ಆಗುತ್ತಿರುತ್ತದೆ. ಅದರ ರೀತಿ ಬೇರೆಯದಿರುತ್ತದೆ; ಮತ್ತು ಕೊನೆಯಲ್ಲಿ, 'ಶಾಶ್ವತ ಜೀವನ' ಎಂದು ಕರೆಯಲಾಗುವ ಜೀವನ ಬರುತ್ತದೆ; ಅಲ್ಲಿ ಹಗಲು-ರಾತ್ರಿಗಳಿರುವುದಿಲ್ಲ.

೮-೨-೫೫ರ ನಿನ್ನ ಪತ್ರದಲ್ಲಿ, ಎಲ್ಲೆಡೆಯಲ್ಲಿಯೂ ಪ್ರಕಾಶವೊಂದೇ ಅನುಭೂತಿಯಾಗುತ್ತಿದೆ ಎಂದು ಬರೆದಿದ್ದೀಯೆ. ಅದರಲ್ಲಿ ತೀವ್ರತೆ ಇದ್ದರೆ, (ಅದು ಇಲ್ಲವೆಂದು ನಾನು ಆಶಿಸುತ್ತೇನೆ), ಬಿ-೧ (B1) ಸ್ಥಾನದ ಸ್ಥಿತಿಯು ಇನ್ನೂ ತನ್ನ ನಿಜ ಸ್ವರೂಪಕ್ಕೆ ತಲುಪಿಲ್ಲ ಎಂದು ಅರ್ಥ. ನಿನ್ನ ಮೆದುಳಿನ ಮೇಲೆ ಒತ್ತಡದ ಅನುಭವವಾಗುತ್ತಿಲ್ಲವಷ್ಟೆ; ಬರೆದು ತಿಳಿಸು. ಅದು ಸ್ಪಂದಿತಗೊಂಡ ಸ್ಥಿತಿಯ ಕಾರಣ ಆಗಲು ಸಾಧ್ಯ. ಇಂದು ಸಂಜೆ, ನಿನ್ನ ಸ್ಥಿತಿಯನ್ನು ಸರಿಯಾಗಿ ನೋಡಿ, ಅದನ್ನು ಸರಿಯಾದ ಸ್ಥಿತಿಗೆ ತರುತ್ತೇನೆ. ವಿಶ್ವಾದ್ಯಂತ ಪ್ರಕಾಶ ಹೊಮ್ಮುತ್ತಿದೆಯೆಂಬ ಅನುಭೂತಿ ನಿನಗಾಗುವುದು, ಅದು ನಿಜವಾದ ಪ್ರಕಾಶವಾಗಿರದೆ, ಬಿ-೧ (B1) ಸ್ಥಾನದ ಮೇಲೆ ಆಗುವ ಒತ್ತಡ ಮತ್ತು ಕಂಪನಗಳ ತೀವ್ರತೆಯು ವಿಸ್ತಾರವಾಗಿದೆ. 'ಸತ್ಯ' ಇರುವಲ್ಲಿ ಪ್ರಕಾಶವೂ ಇಲ್ಲ, ಕತ್ತಲೆಯೂ ಇಲ್ಲ; ಅದು ಅನನ್ಯವಾಗಿದೆ. ಚೌಬೇಜಿಯವರ ದಿನಚರಿ (Diary) ಬಂದಿದೆ. ನನಗೆ ತಿಳಿಯುವ ಮಟ್ಟಿಗೆ ಅವರ ಸ್ಥಿತಿ 'ಶುದ್ಧ'ವಾಗಿದೆ; ಆದರೆ ಎದೆಯ ಬಲಭಾಗದಲ್ಲಿ ಸಾಧಾರಣ ಕಪ್ಪು ಇದ್ದಂತೆ ಕಂಡು ಬರುತ್ತದೆ. ಆತ್ಮದ ಬಂಧನಗಳನ್ನು ಸ್ವಲ್ಪ ತೆಗೆದುಹಾಕಿದ್ದೇನೆ, ಆದರೆ ಇನ್ನೂ ಸ್ವಚ್ಛಗೊಳಿಸುವ ಆವಶ್ಯಕತೆಯಿದೆ. ನೀನು ಕೂಡ ನೋಡಿ, ನನಗೆ ಕಂಡು ಬಂದಿರುವುದು ಸರಿಯಿದೆಯೇ ಎಂಬುದನ್ನು ಪರೀಕ್ಷಿಸು. ನಿನಗೆ ತಿಳಿದು ಬಂದರೆ, ಬರೆದು ತಿಳಿಸು.

ಕೋಪವನ್ನು ದೂರವಿಡಬೇಕು ಎಂದು ನಾನು ಮಾಸ್ಟರ್ ಸಾಹೇಬರಿಗೆ ಬರೆದಿದ್ದೇನೆ, ಆ ಬಡಪಾಯಿ ಪ್ರಯತ್ನವನ್ನೇನೋ ಮಾಡುತ್ತಿದ್ದಾರೆ. ಪ್ರತಿಯೊಬ್ಬನೂ ಇದರಿಂದ ತನ್ನನ್ನು ಕಾಪಾಡಿಕೊಳ್ಳಬೇಕು. ನನ್ನ ವಿಷಯವಾದರೋ, ನಾನು ಲಾಲಾಜಿಯವರಿಗೆ ಹೆಜ್ಜೆ-ಹೆಜ್ಜೆಗೂ, ಭಯ ಪಡುತ್ತೇನೆ. ನನ್ನ ಕೋಪದಿಂದ ಅವರಲ್ಲಿಯೂ ಕೋಪ ಕಾಣಿಸಿಕೊಳ್ಳಬಹುದೆಂದೂ ನನಗೆ ಹೆದರಿಕೆಯಾಗುತ್ತದೆ. ನಾನು ನನ್ನ ಕೋಪವನ್ನು ಪ್ರಾರ್ಥನೆಯ ಮೂಲಕ ದೂರ ಮಾಡಿಬಿಡುತ್ತೇನೆ. ನೀನೂ ಇದರ ಬಗ್ಗೆ ಪ್ರಾರ್ಥನೆ ಮಾಡು, ಮತ್ತು ಮಾಸ್ಟರ್ ಸಾಹೇಬರೊಂದಿಗೆ ಸತ್ಸಂಗ ನಡೆಸಿ ಈ ದೋಷವನ್ನು ದೂರ ಮಾಡು. ಇದರ ಪರಿಣಾಮ ಖಂಡಿತ

P-4-Books-PM-7-Anantyatre-121



ಆಗಿಯೇ ತೀರುವುದು. ಇದರಲ್ಲಿ, ಚಿಕ್ಕವರು–ದೊಡ್ಡವರು ಎಂಬುದರ ಗಣನೆ ಇಲ್ಲ. ಒಬ್ಬರಿಗೊಬ್ಬರು ಸಹಾಯ ಮಾಡಬೇಕು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೮ **ಪತ್ರ ಸಂಖ್ಯೆ – ೪೬೪** ಷಾಹಜಹಾನಪುರ
೨೨–೦೨–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸುಖಿಯಾಗಿರು.

ನಿನ್ನ ಅನೇಕ ಪತ್ರಗಳು ಕೈ ಸೇರಿದವು. ನಾನು ಅಲ್ಲಿಗೆ ಬರುವುದು ಅಥವಾ ಬರದಿರುವುದು ಎರಡೂ ನಿನಗೆ ಒಂದೇ ಎಂದು ಅನಿಸುವುದು, ನಿನ್ನ ಅಹಂಕಾರದ (ego) ಭಾರ ಬಹುಮಟ್ಟಿಗೆ ಕಡಿಮೆಯಾಗಿದೆಯೆಂಬುದರ ರುಜುವಾತು ಆಗಿದೆ. 'ನಾನು ಇದ್ದೇನೆ' ಎಂಬುದನ್ನೂ 'ಅಹಂಕಾರ'ದ ಅರ್ಥವಾಗಿ ತೆಗೆದುಕೊಳ್ಳಲಾಗುತ್ತದೆ ಮತ್ತು ಇದು ಅಹಂಕಾರದ ಪರಿಧಿಯೊಳಗೆ ಬರುತ್ತದೆ. ಇದು ಇದರ ಕತ್ತಲೆಯ ಪಾರ್ಶ್ವವಾಗಿದೆ. ಅದರ ಪ್ರಕಾಶಿತ ಪಾರ್ಶ್ವವೆಂದರೆ, ಬೇರೆಯವರ ಭಾವನೆಗಳ ಭಾರ ನಮ್ಮ ಹೃದಯದ ಮೇಲೆ ಆಗುವುದರ ಅನುಭೂತಿಯಾಗುವುದಾಗಿದೆ. ವಾಸ್ತವವಾಗಿ ಇದು ಅಹಂಕಾರದ ಸೂಕ್ಷ್ಮ ರೂಪ (ಹಂತ). ಇವೆರಡೂ ಹಾನಿಕಾರಕಗಳೇ ಹೌದು. ಮೊದಲನೆಯದರ ಭಾರ ಸ್ವಲ್ಪವೂ ಉಳಿದಿಲ್ಲ, ಮತ್ತು ಎರಡನೆಯದರ ಭಾರ ತೀರ ಕಡಿಮೆಯಾಗಿದೆ; ಅದಕ್ಕೆ, ಗುರುಮಹಾರಾಜರಿಗೆ ಧನ್ಯವಾದಗಳು ಸಲ್ಲಬೇಕು. ಆದರೆ, ಇನ್ನೂ ಇದೆಯೆಂಬುದೇನೋ ಸರಿ. ಅಕರ್ಮಣ್ಯ (inactivity)ದ ದಶೆಗೆ ನೀನು ಅಂಟಿಕೊಂಡಂತೆನಿಸುವುದು; ಆದರೆ, ನಿಜವಾಗಿ ಅದಕ್ಕೆ ಅಂಟಿಕೊಳ್ಳುವುದಲ್ಲ, ಬದಲಿಗೆ, ಮುಂದಿನ ಧೂಮ (ಹೊಗೆ)ದಂಥ ದಶೆಯಲ್ಲಿ ಇನ್ನೂ ಅಂಟಿಕೊಳ್ಳುವುದಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ನೀನು ಬಿಸಿ ನೀರಿನ ಹಬೆಗೆ ಅಂಟಿಕೊಂಡಿದ್ದೀಯೆ, ಹೊರತು ನೀನೇ ಬಿಸಿ ನೀರು ಇನ್ನೂ ಆಗಿಲ್ಲ. 'ಜಗತ್ತು ಅಲ್ಲೋಲ–ಕಲ್ಲೋಲವಾಗಲಿ, ಆದರೂ ನನ್ನ 'ಪರಿವರ್ತನರಹಿತ ಸ್ಥಿತಿ'ಯು ಇದ್ದೇ ಇರುತ್ತದೆ'– ಎಂದು ನೀನು ಬರೆದಿದ್ದೀಯೆ. ಇದಕ್ಕೆ 'ಅಪರಿವರ್ತನೀಯ ಸ್ಥಿತಿ' ಎಂದು ಕರೆಯುವುದಿಲ್ಲ; ಇದಕ್ಕೆ ದೃಢ ವೈರಾಗ್ಯ ಎಂದು ಕರೆಯಬೇಕು. ಅಥವಾ ವೈರಾಗ್ಯದ ಬಹಳ ಉನ್ನತ ಅವಸ್ಥೆ ಎಂದು ಕರೆಯಬೇಕು. 'ಅಪರಿವರ್ತನೀಯ'ನಾಗುವುದರಲ್ಲಿ ಕೂಡ ಈ ಸ್ಥಿತಿ ಉಂಟಾಗಿರುತ್ತದೆ; ಆದರೆ ಈ ಸ್ಥಿತಿ ಮತ್ತು ನಿಜವಾದ ಅಪರಿವರ್ತನೀಯ (changeless) ಸ್ಥಿತಿಗಳ ನಡುವೆ ಅಂತರವುಂಟು. ಈ ವೈರಾಗ್ಯದ ಸ್ಥಿತಿಯಲ್ಲಿ ಜಗತ್ತು ಒಳ್ಳೆಯದೋ, ಕೆಟ್ಟದ್ದೋ ಆಗುವುದರ ಮೇಲೆ ದೃಷ್ಟಿ ಇರುವುದಿಲ್ಲ. ಆದರೆ, ನಿಜವಾದ ಅಪರಿವರ್ತನೀಯ ಸ್ಥಿತಿಯಲ್ಲಿ ಅದರ ಮೇಲೆ ದೃಷ್ಟಿ ಇರುತ್ತದೆ. ನಾನು ಬರೆದ ಮೊದಲನೆಯದು,



ವೈರಾಗ್ಯದ ಉನ್ಮಾದದ ಪರಿಣಾಮವಾಗಿರುತ್ತದೆ. ಆದರೆ ಇದರಲ್ಲಿ (ನಿಜವಾದ ಅಪರಿವರ್ತನೀಯ ಸ್ಥಿತಿಯಲ್ಲಿ) ಉನ್ಮಾದದ ಲವಲೇಶವೂ ಇರುವುದಿಲ್ಲ.

**ಸ್ವಾಮೀ ವಿವೇಕಾನಂದ : (ಆದೇಶ) :**

*"ಎಂಥ ಸುಂದರ ಅಭಿವ್ಯಕ್ತಿ ! ಇದು ಸರಿಯೇ ಇದೆ. ಯಾರಾದರೂ ಸ್ವಾಮಿ (ಸಂನ್ಯಾಸಿ) ಇಂಥ ವಿವರಣೆ (ಅಭಿವ್ಯಕ್ತಿ) ಕೊಡಬಲ್ಲನೆ? ಯಾರಾದರೂ ಹೀಗೆ ಹೇಳುವ ಸಾಹಸ ಮಾಡಬಲ್ಲರೆ? ಇದು ದಿವ್ಯ ಜ್ಞಾನ. ನಿನ್ನ ಈ ವಾಕ್ಯಕ್ಕೆ ಪಾರಿತೋಷಕವಾಗಿ ನಾನು ನಿನಗೆ ಸಾವಿರ ಶಬ್ದಗಳನ್ನು ಕೊಟ್ಟೇನು; ಆದರೆ, ಇವುಗಳ ಬಗ್ಗೆ ನಿನ್ನ ಬಳಿ ನಿನ್ನದೇ ಆದ ಶಬ್ದಗಳಿವೆ; ಆದ್ದರಿಂದ ಅವುಗಳಿಗೆ ಬೆಲೆ ಇಲ್ಲ".*

**ಲಾಲಾಜಿ ಸಾಹೇಬರು : (ಆದೇಶ) :**

*"ಬಂಧು, ಈ ಪತ್ರ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂಥದು. ಇಂಥ ಒಳ್ಳೆಯ ಅಭಿವ್ಯಕ್ತಿಯನ್ನು ನಾನು ಎಲ್ಲಿಯೂ ಕಂಡಿಲ್ಲ"*

**ಸ್ವಾಮಿ ವಿವೇಕಾನಂದ : (ಆದೇಶ) :** *"ಇದು ಬಹಳ ಮಹತ್ವಪೂರ್ಣ ಪತ್ರ".*

ನೀನು, ಎಡಭಾಗದಲ್ಲಿ ಚಕ್ರಾಕಾರವಾಗಿ ಕಂಪನವಾಗುವುದನ್ನು ಬರೆದಿರುವೆಯಲ್ಲ; ಅದನ್ನು ಲಕ್ಷ್ಯಪೂರ್ವಕ ಗಮನಿಸಿ, ಆ ಕಂಪನದೊಂದಿಗೆ ಹೃದಯವೂ ಕಂಪಿಸುವುದೋ ಎಂಬುದನ್ನು ಬರೆದು ತಿಳಿಸು; ಅನಂತರ ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಒಳ್ಳೇದು; ಉತ್ತರ ಕೊಟ್ಟು ಬಿಡುತ್ತೇನೆ. ಹೃದಯವೂ ಕಂಪಿಸುತ್ತಿದೆಯೆಂದಾದರೆ, ಅಸೀಮ ಭಂಡಾರದಿಂದ ಸ್ಪಂದನ (Vibration) ಬಹಳ ಶಕ್ತಿಯುತವಾಗಿ ಬರುತ್ತಿವೆ, ಮತ್ತು ಅದರ ಪ್ರಭಾವ ಉಂಟಾಗುತ್ತಿದೆ ಎಂದು ಅರ್ಥ. ಆದರೆ, ಕೇವಲ ಕಚಗುಳಿಯಂಥ ಸಂವೇದನೆಯಾಗುತ್ತಿದೆಯೆಂದರೆ, ಹೃದಯವು ಅದರ ಸ್ವಭಾವವನ್ನು ಪೂರ್ತಿಯಾಗಿ ತೆಗೆದುಕೊಳ್ಳುತ್ತಿಲ್ಲ (ಹೀರಿಕೊಳ್ಳುತ್ತಿಲ್ಲ) ಎಂದು ಅರ್ಥ. ಇನ್ನು, ಪ್ರಜ್ಞೆ (Consciousness) ಮತ್ತು ಅಪ್ರಜ್ಞೆ (Unconsciousness) ಬರೆದಿರುವುದು, ಸಿ–೧ (C1) ಸ್ಥಾನದಲ್ಲಿ ನಡೆಯುತ್ತಿರುವ ಯಾತ್ರೆಯ ಪರಿಣಾಮವಾಗಿದೆ. ಅಲ್ಲಿಯ ಸ್ಥಿತಿ, ಒಂದು ನೆರಳಿನಂತಿದೆ, ಅರ್ಥಾತ್, ಅದರಲ್ಲಿ ಯಾವುದೇ ಭಾರ ಇಲ್ಲ.

ಎರಡನೆಯ ಪತ್ರದಲ್ಲಿ ವಿಚಾರಗಳ ಪ್ರವಾಹದ ಬಗ್ಗೆ ಬರೆದಿದ್ದೀಯೆ. ಅವು ಯಾವ (ಎಂಥ) ವಿಚಾರಗಳು ಎಂಬುದನ್ನು ಬರೆಯುತ್ತೀಯಾ? ವಾಸ್ತವದಲ್ಲಿ 'ನೈಜ ವಸ್ತುವಿನ' ಪ್ರಭಾವವು ಒರಟು (ಸ್ಥೂಲ) ಸ್ತರಗಳ ಮೇಲೆ ಬಿದ್ದಾಗ ಲಟಲಟಿಸುವಂಥ ಸದ್ದು ಉಂಟಾಗುತ್ತದೆ. ನಮ್ಮೊಳಗೆ ಪ್ರಾಣ ಇರುವುದರ ಕಾರಣ, ಅವುಗಳಿಗೆ 'ವಿಚಾರ'ಗಳ ಉಪಮೆ ಕೊಡುತ್ತೇವೆ. ಈಗ, ಇದನ್ನು ನಿನ್ನ ಸ್ಥಿತಿಗೆ ಅನುಗುಣವಾಗಿ ಅರ್ಥ ಮಾಡಿಕೊ.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳನ್ನು ತಿಳಿಸು. ಸೋದರ ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೧೯ **ಪತ್ರ ಸಂಖ್ಯೆ – ೪೬೭** ಷಾಹಜಹಾನಪುರ
೧೩–೦೩–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದ.

ನಿನ್ನ, ೮–೩–೫೫ರ ಪತ್ರ ಪ್ರಾಪ್ತವಾಯಿತು. ನಿನ್ನ ಆರೋಗ್ಯದ ಬಗ್ಗೆಯೂ ಬರೆಯುತ್ತಿರು. ಒಂದು ಚಿಕ್ಕ ಪತ್ರವನ್ನು ನಾನು ಡಾ. ಸಿನ್ಹಾರವರಿಗೂ ಬರೆದಿದ್ದೇನೆ; ಅದರ ನಕಲನ್ನು ಮಾಸ್ಟರ್ ಸಾಹೇಬರ ಮೂಲಕ ಕಳುಹಿಸಿದ್ದೆ, ನಾನಂತೂ ಬರೆದಿದ್ದೇನೆ. ಆದರೆ, ಅವರ ಮೇಲೆ ಅದರ ಪರಿಣಾಮ ಬೀಳಲೂಬಹುದು, ಮತ್ತು ಅವರ ಮಾಲಿಕ ಅವರೇ ಸೈ; ತಮಗೆ ಏನು ಸರಿ ಕಾಣುವುದೋ ಅದನ್ನು ಮಾಡಬಹುದು.

ಯಾರ ಪ್ರಭುತ್ವವು ಸರ್ವತ್ರ ವ್ಯಾಪಿಸಿದೆಯೋ ಅವನನ್ನು ತನ್ನ ಒಡೆಯ (ಗುರು) ಎಂದು, ಮತ್ತು ತನ್ನನ್ನು ತಾನು ಅವನೆದುರು ಒಬ್ಬ ಭಿಕ್ಷುಕನೆಂದು ಭಾವಿಸುವಂಥವನು ನಮಗೆ ಬೇಕು. ಬೇಡುವವನಿಗೆ ಒಡೆಯನೇ ಕೊಡುತ್ತಾನೆ; ಮತ್ತೆ ಯಾವ ವ್ಯಕ್ತಿಗೆ ಏನೂ ಆವಶ್ಯಕವಿಲ್ಲವೋ ಹಾಗೂ ತನ್ನದೇ ಒಡೆತನದ (ಭೌತಿಕ ಸಂಪತ್ತಿನ) ಜಂಜಾಟದಲ್ಲಿ ಸಿಕ್ಕಿಬಿದ್ದಿದ್ದಾನೋ ಅವನ ಹತ್ತಿರ (ನಿಜವಾದ) ಮಾಲಿಕನು (ಪ್ರಭುವು) ತುಂಬಬಹುದಾದ ಭಿಕ್ಷಾಪಾತ್ರೆಯಾದರೂ ಎಲ್ಲಿರುತ್ತದೆ?

ನೀನು ನಿನ್ನ ಪತ್ರದಲ್ಲಿ ಒಂದು ಮಾತು ಬಹಳ ಚೆನ್ನಾಗಿ ಬರೆದಿದ್ದೀಯೆ,– ‘ನೀನು ನಿದ್ರೆಯಿಂದೆದ್ದಾಗ ನೀನು ನಿನ್ನಿಂದಲೇ ಹೊರ ಹೊಮ್ಮಿ ಬಂದಿದ್ದೀಯೆಂದು ನಿನಗೆ ಅನುಭೂತಿಯಾಗುತ್ತದೆ’. ನಮ್ಮ (ಆಧ್ಯಾತ್ಮಿಕ) ತರಬೇತಿಯ ಒಂದು ವಿಶೇಷ ಲಕ್ಷಣವೆಂದರೆ, ಮನಸ್ಸನ್ನು ಅದರ ನೈಜ ಗತಿಯೊಂದಿಗೆ ಜೋಡಿಸಲಾಗುತ್ತದೆ. ಮನಸ್ಸಿನ ವಿಷಯದಲ್ಲಿ ಹೀಗೆ ಹೇಳಿರುವುದರ ಕಾರಣದಿಂದಲೇ, ಅಭ್ಯಾಸಿಯು ನಿದ್ರಿಸುತ್ತಿರುವಾಗ ಅವನನ್ನು ಒಮ್ಮೆಲೆ ಎಚ್ಚರಿಸಕೂಡದು; ಯಾಕೆಂದರೆ ಅವನಿಗೆ ಅದು ಆಘಾತ ಉಂಟಾಗುತ್ತದೆ. ಈಗ ನಿನ್ನಲ್ಲಿ ಈ ಸ್ಥಿತಿಯು ಬಹಳ ಉನ್ನತಿಗೇರಿದೆ, ಮತ್ತು ನಿದ್ರಿಸುತ್ತಿರುವಾಗ ನಿನ್ನ ವಿಸ್ತರಣೆಯು ಹೆಚ್ಚಾಗಿರುತ್ತದೆ; ಆದ್ದರಿಂದ, ನಿದ್ದೆಯಿಂದೆದ್ದಾಗ ನಿನ್ನೊಳಗಿಂದಲೇ ನೀನು ಹೊರಬಂದಂತೆ ಅನಿಸುತ್ತದೆ ಮತ್ತು ನೀನು ಲಕ್ಷ್ಯವಿಟ್ಟು ಗಮನಿಸಿದರೆ, ನಿದ್ರೆಯಲ್ಲಿದ್ದಾಗ ಯಾವುದೋ ಒಂದು ‘ಆನಂದ’



ಖಂಡಿತ ಇತ್ತು ಎಂಬುದರ ಅನುಭೂತಿ ನಿನಗೆ ಆಗುವುದು. ಆದಾಗ್ಯೂ, ಆ ಆನಂದವು ಯಾವ ರೀತಿಯದಿರುತ್ತದೆಯೆಂದರೆ, ನಿದ್ರಿಸುವಾಗಿನ ಹಾಗೂ ಎಚ್ಚರವಿರುವಾಗಿನ ಸ್ಥಿತಿಯನ್ನು ತುಲನೆ ಮಾಡಿದಾಗ ಸ್ವಲ್ಪ ಭೇದ (ಅಂತರ) ಇರುವುದು ಅರಿವಿಗೆ ಬಂದೀತು; ಮತ್ತು ಅದೂ ಕೂಡ, ಅನುಭೂತಿ ಪಡೆಯಲೂ ಕಷ್ಟಸಾಧ್ಯವೆಂಬಂತಿರುತ್ತದೆ. ನೀನು ಇದನ್ನು ಬರೆದು, ನನ್ನ ಸ್ಥಿತಿಯನ್ನು ಜ್ಞಾಪಿಸಿಕೊಳ್ಳಲು ನೀನು ನನಗೆ ನೆನಪು ಮಾಡಿ ಕೊಟ್ಟೆ. ಆದರೆ, ನಾನು ನನ್ನದೇ ಬಡಾಯಿ ಕೊಚ್ಚಿಕೊಳ್ಳುತ್ತಿದ್ದೇನೆಂದು ಯಾರೂ ತಿಳಿಯದಿರಲಿ. ಯಾಕೆಂದರೆ ನನ್ನ ನಾಲಿಗೆಗೆ ಲಗಾಮು ಇಲ್ಲ, ನನ್ನ ರೂಢಿಯನ್ನು ಹಾಗೇ ಮಾಡಿಕೊಂಡು ಬಿಟ್ಟಿದ್ದೇನೆ; ಅದೂ ಕೂಡ, ಯಾವ ಕಾರಣದಿಂದ ಎಂದರೆ, ನನ್ನ ಮಾತು ಕೇಳುತ್ತಲೇ ಜನರಿಗೆ ಆ ಸ್ಥಿತಿಯನ್ನು ತಲುಪಬೇಕೆಂಬ ಅಭಿಲಾಷೆ ಉಂಟಾಗಬೇಕಷ್ಟೆ! ಸರಿ, ಬರೆದೇ ಬಿಡುತ್ತೇನೆ. ಅಭ್ಯಾಸಿಯು ನಿದ್ರೆ ಮಾಡುವಾಗ, ಅವನು ಯಾವ ಸ್ಥಾನದ ಯಾತ್ರೆ ಮಾಡುತ್ತಿದ್ದಾನೋ ಅದರಲ್ಲಿಯೇ ಹೆಚ್ಚು ಪಕ್ಷ ವಿಚರಣ ಮಾಡುತ್ತಾನೆ. ಆದರೆ, ಸೀಮಿತತೆ ಮತ್ತು ಬಂಧನಗಳು ಕಡಿದು ಹೋದಾಗ ಅವನು ವಿಶಾಲವಾಗಿ ವಿಸ್ತಾರಗೊಳ್ಳುತ್ತಾನೆ. ಈಶ್ವರನೊಂದಿಗೆ ಸಂಧಿಸುವ ಸಮಯ ಇದೇ ಎಂದು ನಾನು ಹೇಳುತ್ತೇನೆ. ಎಲ್ಲ ಬಂಧನಗಳು ಕಡಿದು ಹೋದಾಗ ಹಾಗೆ ಆಗುವುದೇಕೆ, ಮತ್ತು ಯಾಕೆ ಅದು ಅನಿವಾರ್ಯ ಎಂದು ಒಂದು ಮಾತು ಹೇಳುತ್ತೇನೆ. ಹಾಗೆ ಆಗುವುದೇಕೆಂದರೆ, ‘ಕೇಂದ್ರ’ದ (Centre or Ultimate) ಅಡಿಯಲ್ಲಿ ಇರುವ ಶಕ್ತಿಯನ್ನು ಅವನು ಎಲ್ಲರಿಗೂ ತನ್ನ ವಿಸ್ತರಣದ ಮೂಲಕ ವಿತರಿಸುತ್ತಾನೆ. ಆಧ್ಯಾತ್ಮಿಕ ಶಕ್ತಿಯು (ಊರ್ಜೆ) ಕಡಿಮೆಯಾದಾಗ, ಈಶ್ವರನು ಅಂಥ ವ್ಯಕ್ತಿಯನ್ನು ಭೂಮಿಗೆ ಕಳುಹಿಸುತ್ತಾನೆ. ಈಗ ಆ ಸ್ಥಿತಿ ಏನು ಎಂಬುದನ್ನು ನಾನು ಬರೆದಿದ್ದೇನೆ; ನೀನು ಇದು ಯಾರ ಸ್ಥಿತಿ ಎಂಬುದನ್ನು ನೀನೇ ಪರಿಶೀಲಿಸಿ ಅರ್ಥ ಮಾಡಿಕೊಳ್ಳಬೇಕು. ನನಗಂತೂ ನಿದ್ರೆ ಮಾಡುವುದು ಬಹಳ ಸಂತೋಷ ಕೊಡುವ ಸಂಗತಿ,– ಕುಂಭಕರ್ಣನ ಹಾಗೆ. ಯಾಕೆಂದರೆ ಆಗ ನಾನು ನನ್ನ ನಿಜ ಧಾಮದಲ್ಲಿ ವಿಹರಿಸುತ್ತ, ಜ್ಯೋತಿರ್ಮಯ ಲೋಕದಲ್ಲಿ ಸಂಚರಿಸುತ್ತಿರುತ್ತೇನೆ; ಮತ್ತು ಅಲ್ಲಿಂದ ನನಗೆ ದೊರಕುವುದನ್ನು ನನ್ನ ಬಳಿ ಇಟ್ಟುಕೊಳ್ಳುವುದಿಲ್ಲ. ಈ ‘ಗತಿ’ಯು ನನ್ನದಿರಲಿ ಅಥವಾ ಯಾರದಾದರೂ ಆಗಿರಲಿ, ಕಾರಣ ಇದೇ ಇರುತ್ತದೆ. ಪ್ರತಿಯೊಂದು ಕಣ–ಕಣವೂ ಆಧ್ಯಾತ್ಮಿಕ ಶಕ್ತಿಯಿಂದ ತುಂಬಿ ತುಳುಕುತ್ತಿರುತ್ತದೆ. ಇದನ್ನು ಗ್ರಹಣ ಮಾಡುವ ಜನರು ಅಥವಾ ಮಹಾತ್ಮರು ಹೆಚ್ಚು ಲಾಭಾನ್ವಿತರಾಗುತ್ತಾರೆ. ಪುತ್ರಿ, ಸುಖ–ನಿದ್ರೆ ಪಡೆಯುವವರು ಯಾರು ಎಂದು ಈಗ ಹೇಳು. ವೇದಗಳಲ್ಲಿ ಇದನ್ನು ‘ತುರೀಯ’ ಅಥವಾ ‘ತುರೀಯಾತೀತ’ ಅವಸ್ಥೆ ಎಂದೋ ಅಥವಾ ಬೇರೆ ಏನೋ ಎಂದೋ ಕರೆಯುತ್ತಾರೋ ನನಗೆ ಗೊತ್ತಿಲ್ಲ. ಪ್ರಿಯ ಪುತ್ರಿ, ಇದಕ್ಕೆ ವೇದದಲ್ಲಿ ಯಾವ ಶಬ್ದ ಉಪಯೋಗಿಸಲಾಗಿದೆಯೆಂಬುದನ್ನು ಮತ್ತು ಇದಕ್ಕೆ ಯಾವ ತರಹದ ನಿದ್ರೆ ಎನ್ನುತ್ತಾರೆಂಬುದನ್ನು ನಿನ್ನ ತಂದೆಯವರಿಗೆ (ಚೌಬೇಜಿ)

P-4-Books-PM-7-Ananthyatre-123



ಕೇಳು; ಅವಶ್ಯ ಕೇಳು. ಅವರು ತಿಳಿಸಿ ಹೇಳಲೂಬಹುದು. ನಿನ್ನ ಒಂದು ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಇನ್ನುಳಿದ ಸಂಗತಿಗಳು ಸಿ–೧ (C1) ಸ್ಥಾನದ ಸ್ಥಿತಿಗೆ ಸಂಬಂಧಿಸಿದವುಗಳಾಗಿವೆ. ಆ ಸ್ಥಿತಿಯನ್ನು ನೀನು ಚೆನ್ನಾಗಿಯೇ ವಿವರಿಸಿದ್ದೀಯೆ, ಆದರೂ, ಅದು ಅನಿರ್ವಚನೀಯವೇ ಇದೆ. ನೀನು ಸಿ–೧ (C1) ಸ್ಥಾನದಲ್ಲಿ ನಿಲ್ಲಲು ಬಯಸುತ್ತಿರುವುದು ನನಗೆ ಕಾಣುತ್ತಿದೆ. ಆದರೆ, ಇನ್ನೂ ಮೇಲಕ್ಕೆ ಉಡ್ಡಯನ ಮಾಡುವ ನಿನ್ನ ಅಭೀಪ್ಸೆಯು ಜೀವಂತವಾಗಿರುವಂತಾಗುವಂತೆ ನಾನು ಬಿ–೧ (B1) ಸ್ಥಾನದಲ್ಲಿ ಉಂಟು ಮಾಡಿದ ಕಂಪನವು ಈಗ ಸಿ–೧ (C1)ದಲ್ಲಿ ಮತ್ತೆ ಹುಟ್ಟಿಕೊಂಡಿದೆ. ನಾನು ಲಖೀಂಪುರದಲ್ಲಿದ್ದಾಗ ಈ ಕಂಪನವನ್ನು ಬಹುತೇಕ ಶಾಂತಗೊಳಿಸಿದ್ದೆ, ಆದರೆ ಅದರ ಬೀಜವನ್ನು ನಷ್ಟಗೊಳಿಸಿರಲಿಲ್ಲ. ಈಗ, ಎಲ್ಲಾದರೂ ನೀನು ನಿಲ್ಲಲು ಬಯಸಿದರೆ, ಈ ಕಂಪನವು ನಿನ್ನನ್ನು ನಿಲ್ಲಗೊಡುವುದಿಲ್ಲ, ನಿಜ ಹೇಳಬೇಕೆಂದರೆ ಈಗ ನನ್ನ ಸಹಾಯದ ಆವಶ್ಯಕತೆ ಹೆಚ್ಚು ಉಳಿದಿಲ್ಲ. ಮತ್ತು ಆ ಕಂಪನವು ತನ್ನಿಂದ ತಾನೇ ನಿನ್ನ ಗತಿಯಲ್ಲಿ ವೇಗವನ್ನು ವೃದ್ಧಿಗೊಳಿಸಿದೆ. ನೀನು ಅದರಿಂದ ಹೊರ ಬರಲು ಇಚ್ಛಿಸದಿರಲಿ ಮತ್ತು ಆ ಕಂಪನವು ನಿನ್ನನ್ನು ಮೇಲಕ್ಕೆ ಎಳೆದುಕೊಳ್ಳಲಿ. ಆದರೆ ನಾನು ಕಣ್ಗಾವಲಿಡಬೇಕಾದುದು ಹೆಚ್ಚಾಯಿತು, ಇನ್ನೂ ಸ್ವಲ್ಪ ಕೆಲಸ ಮಾಡುವುದು ಉಳಿದಿದೆ; ಅಥವಾ ಆ ಕಂಪನವನ್ನು ನಿಯಂತ್ರಣದಲ್ಲಿಡಬೇಕಾದ ಕೆಲಸ ನನ್ನದಾಗಿ ಉಳಿಯಿತೆನ್ನಬಹುದು. ಅಗತ್ಯ ಬಿದ್ದಾಗ ನಾನು ಅದನ್ನು ಶಾಂತಗೊಳಿಸುತ್ತೇನೆ. ಯಾಕೆಂದರೆ ಈ 'ಕಾವಲುಗಾರ'ನಿಗೆ (ಬಾಬೂಜಿ) ಚೌಬೇಜಿ ತೀರ ಕಡಿಮೆ ಸಂಬಳ ಕೊಡುತ್ತಾರೆ; ಸ್ವಲ್ಪ ಮಟ್ಟಿಗೆ ಏನೋ ಕೊಡುತ್ತಿದ್ದಾರೆನ್ನು. ಇದು ತುಂಬಾ ದುಬಾರಿಯ ಕಾಲ, ಹೊಟ್ಟೆ ತುಂಬುವುದಿಲ್ಲ ! ಸಂಬಳ ಸ್ವಲ್ಪ ಹೆಚ್ಚು ಮಾಡುವಂತೆ (ನಿರಂತರ ಸ್ಮರಣೆ) ಮಾಡಲು ಹೇಳು. ದಕ್ಷಿಣ ಭಾರತದಲ್ಲಿ ಒಬ್ಬಿಬ್ಬರು ಅಭ್ಯಾಸ ಪ್ರಾರಂಭಿಸಿದ್ದಾರೆ. ಆದರೆ ಅವರು ಇಲ್ಲಿಗೆ ಬರುವುದು ಕಷ್ಟ. ಅಲ್ಲಿಂದಲೇ, ತರಬೇತಿ ಕೊಡಬೇಕೆಂದು ಬಯಸುತ್ತಾರೆ. ಅಭ್ಯಾಸದ ವಿಧಾನವನ್ನು ಅವರಿಗೆ ಬರೆಯುತ್ತೇನೆ. ಈಶ್ವರನು ಸರ್ವತ್ರ ಇದ್ದಾನೆ. ಅವನೇ ಸ್ವತಃ ಅವರನ್ನು ನೋಡಿಕೊಳ್ಳುತ್ತಾನೆ. ಈಶ್ವರನ ಕೃಪೆಯಿಂದ ಇದು (ಮಿಷನ್ನು) ಬೇಗ ಬೇಗ ಉನ್ನತಿ ಹೊಂದುವ ಸೂಚನೆಗಳು ಕಂಡು ಬರುತ್ತಿವೆ. ಅಮ್ಮಾ ನನ್ನ ಜನ್ಮದಿನವನ್ನು ಆಚರಿಸುತ್ತಾಳೆ. ಅದರ ಖರ್ಚು ನಾಲ್ಕೈದು ರೂಪಾಯಿಗೆ ಮೀರಬಾರದೆಂದು ಅವರಿಗೆ ಹೇಳು.

ನೀನು ಬರೆಯುತ್ತಿರುವ 'ಸಹಜ ಸಮಾಧಿ' ಪುಸ್ತಕವು ೪೦–೫೦ ಪುಟಗಳದಿರಲಿ ಎಂದು ನಾನು ಬಯಸುತ್ತೇನೆ. ನೀನು ಅದನ್ನು ಬರೆಯಲು ಇಚ್ಛಿಸಿದ ಮೇಲೆ, ನಿನಗೇ ಆಶ್ಚರ್ಯವೆನಿಸುವಷ್ಟು ಚೆನ್ನಾಗಿ ಬರೆಯಲಿ ಎಂದು ನಾನು ಆಶೀರ್ವದಿಸುತ್ತೇನೆ; ಈಶ್ವರನು ಅಂತೆಯೇ ಕೃಪೆ ಮಾಡಲಿ. ಸಾಧ್ಯವಿದ್ದ ಮಟ್ಟಿಗೆ ನನ್ನ ಪುಸ್ತಕಗಳಿಂದ ಮತ್ತು ಪತ್ರಗಳಿಂದ ವಾಕ್ಯಗಳನ್ನು ನೀನು ಉದ್ಧೃತಗೊಳಿಸಬಹುದು, ಈ ಭರವಸೆ ನನಗಿದೆ.



ಶಾಪದ ಪ್ರಭಾವವನ್ನು ನಾಶಪಡಿಸುವ ವಿಧಾನವನ್ನು ನಾನು ನಿನಗೆ ಹೇಳುತ್ತೇನೆ. ಈ ಎಲ್ಲ ವಿಧಾನಗಳನ್ನು ಲಾಲಾಜಿ ಸಾಹೇಬರು ನನಗೆ ತಿಳಿಸಿ ಕೊಟ್ಟಿದ್ದರು. ಸಾಮಾನ್ಯವಾಗಿ ಒಬ್ಬ ಮಹಾತ್ಮನು ಯಾವ 'ಸ್ಥಿತಿ'ಯಲ್ಲಿರುವನೋ ಅಲ್ಲಿಂದಲೇ ಆಶೀರ್ವಾದ ಅಥವಾ ಶಾಪ ಕೊಡುತ್ತಾನೆ. ಅದರ ಪ್ರಭಾವವನ್ನು ನಾಶಗೊಳಿಸಲು ನೀನು ಅದಕ್ಕಿಂತ ಮೇಲಿನ ಸ್ತರದಲ್ಲಿ (ಬಿಂದುವಿನಲ್ಲಿ) ನಿಂತು, ಶಾಪವನ್ನು ದೂರ ಮಾಡುವ ಸಂಕಲ್ಪವನ್ನು ಕೇಂದ್ರಿತಗೊಳಿಸಿ ನಿಲ್ಲಿಸಬೇಕು. ಯಾರಾದರೂ ಸಂಪೂರ್ಣ ಬ್ರಹ್ಮಗತಿಯನ್ನು ಪಡೆದವನಿದ್ದರೆ, ಅವನು ಯಾವುದೇ ಬಿಂದುವನ್ನು ಅರಸಬೇಕಿಲ್ಲ, ಕೇವಲ ಒಂದು (ಸಂಕಲ್ಪದ) ಅಘಾತದಿಂದ ಅದನ್ನು ನಿವಾರಿಸಬಲ್ಲನು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೦ **ಪತ್ರ ಸಂಖ್ಯೆ – ೪೭೦** ಷಾಹಜಹಾನಪುರ
೨೮–೦೩–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

ನಿನ್ನ ಎಲ್ಲ ಪತ್ರಗಳೂ ಕೈ ಸೇರಿದವು. ಇತ್ತೀಚೆಗೆ ಕೆಲಸ ಬಹಳ ಉಂಟು. ಮದ್ರಾಸಿನ ಅಭ್ಯಾಸಿಗಳಿಂದ ಪತ್ರಗಳು ಆಗಾಗ ಬರುತ್ತಿವೆ. ಅವುಗಳಿಗೆ ಮಾರುತ್ತರ ಬರೆಯುವುದಿದೆ, ಮಿಷನ್ನಿನ ಹೊಣೆಗಾರಿಕೆ ತಮ್ಮ ಮೇಲೆಯೂ ಇದೆ ಎಂದು ತಿಳಿಯುವ ಮೂರು–ನಾಲ್ಕು ಜನ ನಮ್ಮಲ್ಲಿದ್ದಾರೆ. 'ಮುಮುಕ್ಷು' ಆಶ್ರಮದಲ್ಲಿ ಉತ್ಸವ ಚೆನ್ನಾಗಿತ್ತು. ನಾನು ಮತ್ತು ಕಾಶೀರಾಮ ಅಲ್ಲಿಗೆ ಹೋಗಿ ಬಂದೆವು; ಎರಡು ರೂಪಾಯಿ ಖರ್ಚಾದವು. ಬಹಳ ಯೋಗ್ಯ ಜನರು ಬಂದಿದ್ದರು. ಈಗ ನಾವು ನಮ್ಮ ಮಿಷನ್ನಿನ ಬೆಳವಣಿಗೆಯ ವಿಚಾರ ಮಾಡಿದರೆ, ಅದು, ಸಾವಿರಾರು ನಕ್ಷತ್ರಗಳು ಅಳಿದ ಮೇಲೆ ಬೆಳಗಾಗುವಂತಿದೆ. ಅದೇ ತೆರನಾದ ಲಕ್ಷಣಗಳು ಇಂದು ಜಗತ್ತಿನಲ್ಲಿ ಗೋಚರಿಸುತ್ತವೆ. ಮತ್ತು, ನಾವು ಮುಂಜಾವಿನ ಮುಖ ನೋಡಬೇಕೆಂಬುದು ಈಶ್ವರ–ಸಂಕಲ್ಪವಾಗಿದೆ. ಅದಕ್ಕೋಸ್ಕರ ಪ್ರತಿಯೊಂದು ಸ್ಥಳದಲ್ಲಿಯೂ ಅವ್ಯವಸ್ಥೆ (ಕೋಲಾಹಲ) ಉಂಟಾಗಬಹುದು. ಬ್ರಹ್ಮಪುತ್ರ ನದಿಯು ಬಂಗಾಲದ ಕಡೆಗೆ ತನ್ನ ಮುಖ ತಿರುಗಿಸಬಹುದು. ಅಂಥ ಎಷ್ಟು ಸಂಗತಿಗಳು ಘಟಿಸುವುವೋ ಗೊತ್ತಿಲ್ಲ. ಪಾಕಿಸ್ತಾನದ ದೊಡ್ಡದೊಂದು ಭಾಗ ಬಂಜರು ಭೂಮಿಯಾಗಬಹುದು. ನದಿಗಳು ಬತ್ತಿ ಹೋಗಲಾರಂಭಿಸುವುವು. ದಾರಿದ್ರ್ಯ ಹೆಚ್ಚಾಗಬಹುದು. ಏನೆಲ್ಲ ಸಂಭವಿಸುತ್ತಿರುವುದೋ ಅವೆಲ್ಲ, ಗೋದಿಯನ್ನು ತೋರಿಸಿ ಬಾರ್ಲಿ ಮಾರುವ ಮಹಾತ್ಮರುಗಳ ಹೊಣೆಯಾಗಿದೆ. ಆದ್ದರಿಂದಲೇ ಅಂಧಕಾರವೂ

P-4-Books-PM-7-Anantyatre-124



ಹಬ್ಬುತ್ತಿದೆ. ನನಗೆ ಸಮಯವಿಲ್ಲವಾದುದರಿಂದ, ಈ ವಿಷಯಗಳ ಮೇಲೆ ಲಕ್ಷ್ಯ ಕೇಂದ್ರೀಕರಿಸಿಲ್ಲ. ನನಗೆ ತಲೆ ಸಿಡಿಯುವಷ್ಟು ಕೆಲಸದ ಒತ್ತಡವಿದೆ, ಬಿಡುವು ಸಿಗುತ್ತಲೇ ಇಲ್ಲ. ಮಾಸ್ಟರ್ ಸಾಹೇಬರಂಥ ಇನ್ನೊಬ್ಬ ವ್ಯಕ್ತಿ ನನಗೆ ದೊರೆತಿದ್ದರೆ, ಮುಖ್ಯವಾದ ಮತ್ತು ಮಹತ್ತ್ವಪೂರ್ಣವಾದ ಕೆಲಸಗಳ ಮೇಲೆ ನಾನು ಲಕ್ಷ್ಯ ಕೊಡುತ್ತಿದ್ದೆ. ನಾನು ಅವರಂಥ ಇನ್ನೊಬ್ಬನ್ನು ತಯಾರು ಮಾಡಿಕೊಳ್ಳುತ್ತಿದ್ದೆ. ಆದರೆ ಯಾರೂ ಅಂಥವರು (ಯೋಗ್ಯರು) ಸಿಗುತ್ತಿಲ್ಲ; ಮತ್ತು ಯಾರು ನನ್ನ ಬಳಿ ಲಭ್ಯರಿದ್ದಾರೋ ಅವರಿಗೆ ಹಾಗೆ ಆಗುವ ಆಕಾಂಕ್ಷೆ ಇಲ್ಲ. ಅನೇಕ ವಿಚಾರಗಳನ್ನು ಬರೆದೆ. ಕೆಲವು ಸಂತೋಷಜನಕ ಸಂಗತಿಗಳನ್ನೂ ಬರೆಯುತ್ತೇನೆ. ಹಿಂದುಸ್ತಾನದಲ್ಲಿ ಬಂಗಾರ ತಯಾರಾಗಲು ಪ್ರಾರಂಭವಾಗಿದೆ. ಅದೂ, ಈಗ ಕಾಶೀರಾಮ ಇರುವ ಪ್ರದೇಶದಲ್ಲಿ (ಆಸಾಮ). ಭಾರತಕ್ಕೆ ಒಳ್ಳೆಯ ದಿನಗಳು ಬರಲಿವೆ; ಮತ್ತೂ ಅನೇಕ ಕಡೆಗಳಲ್ಲಿ ಅದು ಪ್ರಾರಂಭವಾಗಿದೆ. ದಕ್ಷಿಣ ಭಾರತದಲ್ಲಿಯೂ ಕೂಡ ಒಂದು ವಿಶೇಷ ಧಾತು ತಯಾರಾಗುವುದರಲ್ಲಿದೆ.

ನೀನು ನಿನ್ನ ಪತ್ರದಲ್ಲಿ ಬರೆದುದನ್ನು ನಾನು ಮತ್ತೊಮ್ಮೆ ಓದುವುದಿಲ್ಲ. ‘ಸತ್ಯ’ದ ಪ್ರಕಾಶ ಚೆನ್ನಾಗಿ ಕಂಡು ಬರುತ್ತಿದೆ. ನಾನು ನಿನ್ನನ್ನು ಡಿ–೧ (D1) ಬಿಂದುವಿಗೆ, ನಿನ್ನೆ ರಾತ್ರಿ ೧೧–೦೦ ಗಂಟೆಗೆ ಮೇಲೆಳೆದಿದ್ದೇನೆ. ಜೀವನ ಮತ್ತು ಮೃತ್ಯುಗಳ ಪ್ರಭಾವ ಇಳಿದು ಹೋಗಿದೆ ಎಂದು ಬರೆದಿದ್ದೀಯೆ. ಇದು ಪೂರ್ತಿ ಇಳಿದು ಹೋದಾಗ ‘ಸತ್ಯ’ (Reality)ದ ಒಳ್ಳೆಯ ಸ್ಥಿತಿ ಬರುತ್ತದೆ.

ಕೆಲವೊಂದು ಈಶ್ವರೀಯ ಕಾರ್ಯಗಳನ್ನು ನಿನಗೆ ಒಪ್ಪಿಸಿದ್ದೆ. ಆದರೆ, ಈಗ, ಅವುಗಳನ್ನು ಮಾಡುವ ಅಗತ್ಯವಿಲ್ಲ. ಅವು ಮುಗಿದು ಹೋಗಿವೆ. ಮಿಷನ್ನಿನ ಪ್ರಗತಿಗೆ ನೀನು ಮಾಡುತ್ತಿರುವುದು ಸರಿಯಾಗಿದೆ; ಅದನ್ನು ಮುಂದುವರಿಸುತ್ತಿರು.

ನಿನ್ನ ಶುಭ ಚಿಂತಕ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೧ **ಪತ್ರ ಸಂಖ್ಯೆ – ೪೭೨** ಷಾಹಜಹಾನಪುರ<br>
೦೧–೦೪–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸಂತೋಷಿಯಾಗಿರು.

೨೮, ಮಾರ್ಚ್ ೧೯೫೫ರ ನಿನ್ನ ಪತ್ರ ಪ್ರಾಪ್ತವಾಯಿತು. ಇಂದು ರಾಮ ನವಮಿ, ಬಹಳ ಶುಭ ದಿನ. ಆದರೆ, ಬಂಧು, ರಾಮ ಜಪವನ್ನು ನಾವು ಲೆಕ್ಕ ಇಡುತ್ತ ಮಾಡಿದೆವು. ಪರಿಣಾಮವಾಗಿ, ನಾಮ ಜಪದ ಗಣನೆಯ ಲೆಕ್ಕವಿಡುತ್ತ ಕಷ್ಟದಲ್ಲಿ ಬಿದ್ದೆವು. ಕಷ್ಟಗಳು (ಗೊಂದಲಗಳು) ಉಳಿದವು, ರಾಮ ಕಣ್ಮರೆಯಾಗಿ



ಹೋದನು. ಈಗ, ನಾವು ರಾಮನನ್ನು ಪಡೆಯಬೇಕೆಂದಿದ್ದರೆ, ಲೆಕ್ಕದ ಜಂಜಾಟವನ್ನು ದೂರವಿಟ್ಟು; ಯಾವುದು ಗಣಿತ, ರೇಖಾಗಣಿತಗಳ ಆಧಾರವಾಗಿದೆಯೋ ಆ ಬಿಂದುವಿಗೆ ಬರಬೇಕು. ಅದು ಯಾವುದಿದ್ದೀತು? ಅದು, ಎಲ್ಲ ಸಂಖ್ಯೆ ಮತ್ತು ಲೇಖಗಳಲ್ಲಿ ಅಂತರ್ಗತವಾಗಿರುವ ‘ಶೂನ್ಯ’ವೇ ಇರಲು ಸಾಧ್ಯ. ಅದು ಪ್ರತಿಯೊಂದು ಸಂಖ್ಯೆ ಮತ್ತು ಗಣನೆಯಲ್ಲಿ ಸಂಮಿಲಿತವಾಗಿರುವವರೆಗೆ, ಅದರ ಮಹತ್ತ್ವವು ವ್ಯಕ್ತಗೊಳ್ಳುವುದಿಲ್ಲ. ಅರ್ಥಾತ್, ಪ್ರತಿಯೊಂದು ಸಂಖ್ಯೆ ಮತ್ತು ನಮ್ಮ ಪ್ರತಿಯೊಂದು ಪಾರ್ಶ್ವದಲ್ಲಿ (ಸುತ್ತಲೂ) ಇರುವುದರ ಗುರುತು ಮಾಡಿಸುವುದರಲ್ಲಿ ‘ಶೂನ್ಯ’ವೇ ಪ್ರಯೋಜಕವಾದುದು. ನಾವು ಈಗ ಶೂನ್ಯವನ್ನು ಮರೆತಿದ್ದೇವೆ. ಯಾವುದು ಸಂಮಿಲಿತವಾಗಿರುವುದೋ ಅವು ಮಾತ್ರ ನಮ್ಮೆದುರಿನಲ್ಲಿವೆ, ಮತ್ತು ನಮ್ಮ ನೆನಪಿನಲ್ಲಿವೆ. ಇದು, ಮನೆಯಲ್ಲಿ ಮನೆಯೊಡೆಯನನ್ನೇ ಇಲ್ಲವಾಗಿಸಿದಂತಾಯಿತು. ನಾವು ಮಂಡಲೇಶ್ವರರಾಗಬಹುದು, ಅಥವಾ ಮಹಾಮಂಡಲೇಶ್ವರರಾಗಬಹುದು, ಆದರೆ ನಮ್ಮ ಯೋಗ್ಯತೆಯಲ್ಲಿ ಬದಲಾವಣೆಯಾಗದಿದ್ದರೆ, ವಾಸ್ತವವಾಗಿ ನಾವು ನಮ್ಮನ್ನು (ನಮ್ಮ ಅಹಂಕಾರವನ್ನು) ಬೆಳೆಸಿಕೊಳ್ಳುತ್ತೇವೆ. ನಾವು ‘ಶೂನ್ಯ’ವನ್ನು ಅಡಗಿಸಿ ಮರೆ ಮಾಡಿದೆವು. ಮಂಡಲೇಶ್ವರ ಅಥವಾ ಮಹಾಮಂಡಲೇಶ್ವರರಾಗುವ ಬಯಕೆ ಹುಟ್ಟಿಕೊಂಡಿತು. ಆಗ ನಮ್ಮ ಎಲ್ಲ ಸಂಖ್ಯೆಗಳ ಗಣನೆಯಲ್ಲಿ ಎಲ್ಲವೂ ‘ವರ್ಗ’ (Square)ವಾಗಿಸಲ್ಪಟ್ಟವು. ಈಗ ಸಮಸ್ಯೆ ಇನ್ನೂ ಜಟಿಲವಾಯಿತು. ಈ ಅವಸ್ಥೆಯನ್ನು ಅಳಿಸಿ ಹಾಕಲು ನಾವು ‘ವರ್ಗ–ಮೂಲ’ (Square root)ದ ಸೂತ್ರವನ್ನು ನೆನಪಿಸಿಕೊಳ್ಳತೊಡಗಿದೆವು. ಹಾಗೆ ಅದನ್ನು ತಿಕ್ಕುತ್ತ ತಿಕ್ಕುತ್ತ ಎಚ್ಚರ ತಪ್ಪುವವರೆಗೂ ಓದಬೇಕಾದೀತು ಆದರೂ ಈ ಗಂಟು ಬಿಚ್ಚುವುದಿಲ್ಲ. ಅದನ್ನು ಮರೆಯುವುದು ಬಹಳ ಕಠಿಣ. ಯಾಕೆಂದರೆ, ನಮ್ಮ ಅಂತಸ್ತಿನ ಕನಸಿನ ವಿಚಾರ ಪದೇ ಪದೇ ಸುಳಿಯುತ್ತ ಮತ್ತೂ ಮತ್ತೂ ಜಟಿಲವಾಗುತ್ತ ಹೋಗುತ್ತದೆ. ಇದರಿಂದ ಬಿಡಿಸಿಕೊಳ್ಳಲು ಈಶ್ವರನ ಹೊರತು ಇನ್ನಾರು ನಮಗೆ ಸಹಾಯ ಮಾಡಲು ಶಕ್ಯ? ಅವನು, ಸೃಷ್ಟಿಸುವುದರಲ್ಲಿ ಅಥವಾ ಅದೇ ಶಕ್ತಿಯಿಂದ ನಾಶ ಮಾಡುವುದರಲ್ಲಿ ತೊಡಗಿಕೊಂಡವನು. ಆದರೆ, ಅವನಾದರೂ ಹಾಗೆ (ನಮ್ಮನ್ನು ಬಿಡಿಸುವ ಕೆಲಸ) ಮಾಡಬೇಕಾದುದಾದರೂ ಏಕೆ? ನೀವು ನಿಮ್ಮ ಇಚ್ಛೆಯು ಅವನ ಇಚ್ಛೆಯೆಂದು ತಿಳಿದಾಗ, ನಿಮ್ಮ ವಿಚಾರದ ಆಘಾತ ಅವನನ್ನು ತಲುಪುವುದು ಸಾಧ್ಯ.

ಈಗ, ನಿನ್ನ ಪತ್ರಕ್ಕೆ ಉತ್ತರ ಕೊಡುವಾಗ, ನಿನ್ನ ಸ್ಥಿತಿಯನ್ನು ಈ ಮೇಲೆ ಹೇಳಿದುದಕ್ಕೆ ಅನ್ವಯಗೊಳಿಸಿ ಹೇಳುತ್ತೇನೆ, ನೀನು ಲೆಕ್ಕಾಚಾರದ ಜಂಜಾಟವೇನೂ ನಿನ್ನಲ್ಲಿ ಇರಲಿಲ್ಲ. ಒಂದು ವೇಳೆ ಇದ್ದುದಾದರೂ, ಸಾಮಾನ್ಯ ಜನರ ಮೇಲೆ ಆಗುವ ಮಂಡಲೇಶ್ವರ, ಮಹಾಮಂಡಲೇಶ್ವರ ಮತ್ತಿತರ ಈ ಕಾಲದ ಮಹಾತ್ಮರ ಶಾಖದ ಪ್ರಭಾವ ಕೊಂಚಮಟ್ಟಿಗೆ ಆಗಿರಬಹುದು. ಅಥವಾ, ಅವರ ವ್ಯಾಖ್ಯಾನಗಳ ಒಂದಿಷ್ಟು ಹೊಗೆ ವಿಚಾರದ ತಳದಲ್ಲಿ ಬಂದಿರಬಹುದಾಗಿತ್ತು,– ಆದರೆ ಅದು ಈಗ ಉಳಿದಿಲ್ಲ. ಸಂಖ್ಯಾ ಗಣನೆ ಮುಗಿದು ಹೋಯಿತು. ‘ಶೂನ್ಯ’ದತ್ತ ದೃಷ್ಟಿ

P-4-Books-PM-7-Anantyatre-125



ಹೊರಳಿತು. ಸದ್ಯ, ಈಗ ನೀನು 'ಮಾಲಿಕ' (ಗುರು)ನನ್ನು ನಿನ್ನ ದೃಷ್ಟಿಯಲ್ಲಿ ತುಂಬಿಕೊಂಡು ಬಿಟ್ಟಿದ್ದೀಯೆ; ಅದಕ್ಕಾಗಿಯೇ, ಮನುಷ್ಯರ, ಮತ್ತು ಪ್ರಾಣಿಗಳ ಪಾದಗಳ ಮೇಲೆ ನಿನ್ನ ತಲೆ ಇರುತ್ತದೆ, ಈಗ ನೀನು ಎತ್ತರಕ್ಕೆ ಏರಬೇಕು. ಆಗ, ನೀನು ಬಯಸದ ಹೊರತು ನಿನ್ನ ದೃಷ್ಟಿಯು ಜನರ ಮತ್ತು ಪ್ರಾಣಿಗಳ ಪಾದದ ಮೇಲೆ ಇರುವುದಿಲ್ಲ. ಪ್ರತಿಯೊಬ್ಬನಲ್ಲಿಯೂ ಗುರುವಿನ ಸಾನ್ನಿಧ್ಯ ಇರುವುದರ ಅನುಭೂತಿ ಆಗುವ ಸ್ಥಿತಿ ಇದು. ಇದು 'ತತ್ ತ್ವಮಸಿ'ಯ ಸ್ಥಿತಿ. ಇದನ್ನು ಫ಼ಾರ್ಸಿ ಭಾಷೆಯಲ್ಲಿ 'ಹಮ್ ಓಸ್ತ' ಎಂದು ಕರೆಯುತ್ತಾರೆ. ಇದು 'ಅಹಂ ಬ್ರಹ್ಮಾಸ್ಮಿ' ಸ್ಥಿತಿಗಿಂತಲೂ ಉನ್ನತವಾದ ಸ್ಥಿತಿಯಾಗಿದೆ. ಬ್ರಹ್ಮವನ್ನು ಮೌನವಾಗಿ 'ಅಹಂ' ತಟ್ಟುತ್ತಿರುವುದು ಅವಶ್ಯವಾಗಿ ಇರುವುದು, ಯಾಕೆಂದರೆ, ಕೊನೆಯಲ್ಲಿ ಅದರದೇ ಪರಿವರ್ತಿತ ಸ್ಥಿತಿಗೆ ಬರಬೇಕಿದೆ. ಇನ್ನು, ಜನರಿಗಂತೂ 'ಅಹಂ ಬ್ರಹ್ಮಾಸ್ಮಿ'ಯ ನಿಜವಾದ ಸ್ಥಿತಿಗಲ್ಲ, ಅದರ ನಕಲಿ (ಕೃತ್ರಿಮ) ಸ್ಥಿತಿಗೆ ಬರುವುದೇ ಸಾಕಷ್ಟಾಗಿ ಬಿಟ್ಟಿದೆ. ಅದೇನಿದೆಯೆಂಬುದು ಈಶ್ವರನೇ ಬಲ್ಲ. ಯಾರಲ್ಲಿ ಜ್ಞಾನ ಇರುವುದಿಲ್ಲವೋ ಅವನು ಮಾತ್ರ ತಿಳಿಯಬಲ್ಲ; ಅಲ್ಲದೆ, ಇದು ಬಹಳ ಉನ್ನತ ಸ್ಥಿತಿಯಾಗಿದೆ. ಅದರ ನಂತರ ಏನೆಲ್ಲ ಸ್ಥಿತಿಗಳುಂಟೋ ಯಾವನು ಎಂದೂ ಹುಟ್ಟಿಯೂ ಇಲ್ಲವೊ, ಮರಣಿಸಿಯೂ ಇಲ್ಲವೋ ಅವನು ಮಾತ್ರ ಇದನ್ನು ತಿಳಿಯಬಲ್ಲನು. 'ಕಣ–ಕಣದಲ್ಲಿ ಇಣುಕಿ ನೋಡಿದರೂ, ಕಸ್ತೂರಿ ಕಾಣಸಿಗುವುದೇ ಇಲ್ಲ' –ಎಂದು ನೀನು ಬರೆದಿದ್ದೀಯೆ. ಈ ಮಾತಿಗೆ ಉತ್ತರ ಇಷ್ಟೆ : 'ಕಸ್ತೂರಿ ಎಲ್ಲೋ ಕಳೆದು ಹೋಗಿದ್ದಾಳೆ, ಆದರೆ ಅವಳ ಸುಗಂಧ ಇನ್ನೂ ಉಳಿದಿದೆ'. ಅದಕ್ಕಾಗಿಯೇ, –'ಒಡೆಯನೇ ಆಗಿ ನಾನು ಒಡೆಯ (ಗುರು)ನನ್ನು ಬಯಸುತ್ತಿದ್ದೇನೋ (ಪ್ರೀತಿಸುತ್ತಿದ್ದೇನೊ) ಎಂಬಂತೆ ಅನಿಸುತ್ತಿದೆ'– ಎಂದು ನೀನೇ ಸ್ವತಃ ಮುಂದೆ ಬರೆದಿದ್ದೀಯೆ. ಈ ಮಾತು ಮತ್ತು ಈ ಸುಗಂಧ ಇನ್ನೂ 'ಆತ್ಮದ ಮರೆವಿನ ಸ್ಥಿತಿ' ಆರಂಭಗೊಂಡಿಲ್ಲವೆಂಬುದನ್ನು ತೋರಿಸುತ್ತವೆ. 'ಅಪ್ರಜ್ಞೆ (unconsciousness) ಎಂದೂ ಆಗುವುದಿಲ್ಲ, ಪ್ರಜ್ಞೆಯೂ (consciousness) ಮರಳಿ ಬರುವುದಿಲ್ಲ' ಎಂದೂ ಬರೆದಿದ್ದೀಯೆ. ಇದು 'ಆತ್ಮ'ದ ನಿಜವಾದ ಸ್ಥಿತಿ. ಪತ್ರದಲ್ಲಿರುವ ಉಳಿದ ವಿಷಯಗಳೆಲ್ಲ ಇದೇ ಸ್ಥಿತಿಗೆ ಸಂಬಂಧ ಹೊಂದಿದವುಗಳಾಗಿವೆ. ಅವುಗಳಿಗೆ ಪ್ರತಿಯೊಂದಕ್ಕೂ ಉತ್ತರ ಎಷ್ಟೆಂದು ಕೊಡಲು ಸಾಧ್ಯ?

ಕಾಶೀರಾಮ ಈ ಆಸಾಮಕ್ಕೆ ಬೇಗ ಹೊರಡುವವರಿದ್ದಾರೆ. ಅಲ್ಲಿ ಅವರು ಸಾಕಷ್ಟು ಹಣ ಮಾಡಬಹುದು, ಮತ್ತು ಆಧ್ಯಾತ್ಮಿಕ (ಈಶ್ವರೀಯ) ಸಂಪತ್ತನ್ನೂ ಗಳಿಸುವರು. ಅಮ್ಮಾಜಿ ಮತ್ತು ಚೌಬೇಜಿಯವರಿಗೆ ವಂದನೆಗಳು. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದ.

ನಿನ್ನ ಹಿತೈಷಿ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೨೨ **ಪತ್ರ ಸಂಖ್ಯೆ – ೪೭೪** ಷಾಹಜಹಾನಪುರ
೦೭–೦೪–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸುಖಿಯಾಗಿರು.

ನಾನು ಒಂದು ಪತ್ರವನ್ನು ಮಾಸ್ಟರ್ ಸಾಹೇಬರ ವಿಳಾಸಕ್ಕೆ ಕಳುಹಿಸಿದ್ದೆ. ಅದು ತಲುಪಿರಬಹುದು. ಆ ಪತ್ರದಲ್ಲಿ ಏಪ್ರಿಲ್ ಒಂದನೆಯ ತಾರೀಖಿನ ಪತ್ರಕ್ಕೆ ಉತ್ತರ ಇತ್ತು. ಅದೇ ಸ್ಥಿತಿ ಈಗಲೂ ಇದೆ. ಡಿ–೧ (D1) ಸ್ಥಾನದ ಸ್ಥಿತಿ ಇನ್ನೂ ತೆರೆದುಕೊಂಡಿಲ್ಲ, ಆದರೆ ತೆರೆದುಕೊಳ್ಳಲು ಹವಣಿಸುತ್ತಿದೆ. 'ಆನಂದ ಭಂಡಾರವು ಕರಗಿ ನನ್ನ ಅಂತರ್ಬಾಹ್ಯದ ಕಣ–ಕಣದಲ್ಲಿ ವ್ಯಾಪಿಸಿದೆ'– ಎಂದು ಬರೆದಿದ್ದೀಯೆ. ಇದು, ವಾಸ್ತವವಾಗಿ 'ಆತ್ಮ'ದ ಸ್ಥಿತಿ. ಅದರಲ್ಲಿ ಸಂತೋಷವೂ ಇಲ್ಲ, ದುಃಖವೂ ಇಲ್ಲ, ತನ್ನವರೆಂಬವರು ಯಾರೂ ಇಲ್ಲ, ಪರಕೀಯರೆಂಬುವರೂ ಯಾರೂ ಇಲ್ಲ. ನೀನು ಬಯಲಿನಲ್ಲಿ ಬಂದಿದ್ದೀಯೆ, ಆದರೆ ಲಯಾವಸ್ಥೆ ಇನ್ನೂ ಆಗಿಲ್ಲ. ನೀನು ಅದೇ ಸ್ಥಿತಿಯನ್ನು ಬೇರೆ ಬೇರೆ ರೀತಿಗಳಲ್ಲಿ ಹೇಳಿದ್ದೀಯೆ.

'ಸದ್ಗುರುವಿನ ಗರಿಮೆ' ಹೃದಯದಲ್ಲಿ ಉಳಿದಿಲ್ಲ ಎಂದು ಬರೆದಿದ್ದೀಯೆ; ಈ ಸ್ಥಿತಿಯು ಈ ಹಿಂದಿನ ಸ್ಥಿತಿಗಿಂತ ಹೆಚ್ಚು ಚೆನ್ನಾಗಿದೆ. 'ಗರಿಮೆ'ಯ ಕಲ್ಪನೆ ಹೃದಯದಲ್ಲಿ ಇರುವವರೆಗೆ ನಾವು ಬಂಧನದಿಂದ ಮುಕ್ತರಾಗಿಲ್ಲ (ಎಂದರ್ಥ). ಆದರೆ ಅದಿಲ್ಲದೆ, ಪ್ರಾರಂಭದಲ್ಲಿ ಏನು ಮಾಡಲೂ ಸಾಧ್ಯವಿಲ್ಲ. (ಪತ್ರದಲ್ಲಿ) ಮಿಕ್ಕುಳಿದುದು ಆತ್ಮದ 'ಸ್ಥಿತಿ'ಯಾಗಿದೆ.

ಪತ್ರದ ವಿಷಯವನ್ನುಳಿದು, ಹೊಸತೊಂದು ವಿಷಯ ಹೇಳುತ್ತೇನೆ. ಗೋರಖಪುರದ 'ಗೀತಾ ಪ್ರೆಸ್', 'ಮನಸ್ಸಿನೊಂದಿಗೆ ಸಂಭಾಷಣೆ'–ಎಂಬ ಪುಸ್ತಕವನ್ನು ಪ್ರಕಟಿಸಿದೆ. ಸ್ವಾಮೀ ಶುಕದೇವಾನಂದರು ಇದಕ್ಕೆ ಈ ವಿಷಯಕ್ಕೆ ಬಹಳ ಒತ್ತು ಕೊಟ್ಟಿದ್ದಾರೆ. ಈ ಸ್ಥಿತಿಯಿಂದ ಜನರು ಎಂಥ ಸಂಕಟಕ್ಕೆ ಸಿಲುಕಿ ಬೀಳುತ್ತಾರೆಂಬುದರ ಅನುಭವ ನಿನ್ನ ಮನೆಯಲ್ಲಿಯೇ ನೀನು ಕಂಡಿದ್ದೀಯೆ. ಈ ಪುಸ್ತಕದಿಂದ ಸ್ವಾಮಿ ಶುಕದೇವಾನಂದರು ಸಾಕಷ್ಟು ಪ್ರಸಿದ್ಧಿ ಪಡೆದಿದ್ದಾರೆ. ಈ 'ಸ್ವಾಮಿ' ಜನರು ಸಾಮಾನ್ಯ ಜನತೆಗೆ ಎಷ್ಟು ಹಾನಿ ಉಂಟು ಮಾಡುತ್ತಿದ್ದಾರೆಂಬುದನ್ನು ನೀನೇ ಯೋಚಿಸು. ಆಧ್ಯಾತ್ಮಿಕತೆ ಹುಟ್ಟಿ ಬೆಳೆಯಲಿ ಎಂಬುದು ಈಶ್ವರನ ಇಚ್ಛೆ. ಆದರೆ ಈ 'ಸ್ವಾಮಿ'ಗಳು ಈಶ್ವರನ ಆಶಯ ಪೂರ್ತಿಯಾಗಲು ಬಿಡುವುದಿಲ್ಲ. ಏನಾಗುವುದೆಂಬುದನ್ನು ನೋಡಬೇಕು. ಇಂಥ 'ಸ್ವಾಮಿ'ಗಳಿಗೆ ಶಿಕ್ಷೆ ಕೊಟ್ಟರೂ, ಅದರ ಅನುಭವ ಅವರಿಗೆ ಅವರ ಜೀವನದ ನಂತರವೇ ಆದೀತು. ವಾಸ್ತವವಾಗಿ, ಇಂಥ ಜನರು ತಮಗೆ ತಾವೇ ಶಿಕ್ಷೆ ಕೊಟ್ಟುಕೊಳ್ಳುತ್ತಾರೆ. ಈ ಸ್ವಾಮಿಗಳ ಇಚ್ಛಾಶಕ್ತಿ ಹೆಚ್ಚು ಬೆಳೆದಿರುವುದಿಲ್ಲದಿರುವುದು ಒಳ್ಳೆಯದೇ ಆಯಿತು; ಅದಿಲ್ಲವಾದರೆ, ಈ ವಿಷ ಪ್ರಸಾರ ಇನ್ನೂ ಹೆಚ್ಚಾಗುತ್ತಿತ್ತು.

P-4-Books-PM-7-Anantyatre-126



ಅಮ್ಮಾಜಿಗೆ ನನ್ನ ವಂದನೆ ತಿಳಿಸು. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೩ **ಪತ್ರ ಸಂಖ್ಯೆ – ೪೭೭** ಷಾಹಜಹಾನಪುರ
೧೭–೦೪–೧೯೫೫

ಪ್ರಿಯ ಪುತ್ರಿ ಕಸ್ತೂರಿ,

೧೩–೪–೧೯೫೫ರ ನಿನ್ನ ಪತ್ರ ತಲುಪಿತು. ನಿನ್ನ ಸ್ಥಾನ ಡಿ–೧ (D1) ಬಿಂದುವಿನಲ್ಲಿದೆ. ಅದರಲ್ಲಿ ಸುಮಾರು ಅರ್ಧ ಅಥವಾ ಅರ್ಧಕ್ಕಿಂತ ತುಸು ಹೆಚ್ಚು ಕ್ರಮಿಸಿದ್ದೀಯೆ. ನಾನು ನಿನ್ನ (ಆಧ್ಯಾತ್ಮಿಕ) ಸ್ಥಿತಿಯ ಸಮಾಚಾರವನ್ನು ಕೊಡುತ್ತಿದ್ದೇನೆ. ನಿಜವಾಗಿ ಪ್ರಜ್ಞೆ (ಚೇತನತೆ) ಅಥವಾ ಅಪ್ರಜ್ಞೆ (ಅಚೇತನತೆ) ಈ ಎರಡರಲ್ಲಿ ಯಾವುದೂ ಇಲ್ಲ. ಒಂದು ವೇಳೆ ಚೇತನತೆಯ (ಪ್ರಜ್ಞೆಯ) ಭಾಸವು ಉಳಿದಿದ್ದರೆ, ಅದೂ ಒಂದು 'ಜಾಲ'ದಲ್ಲಿದ್ದಂತೆಯೇ ಸರಿ; ಮತ್ತು, ಅಚೇತನತೆಯ (ಅಪ್ರಜ್ಞೆಯ) ಭಾಸ ಉಳಿದಿದ್ದರೆ, ಮನಸ್ಸು ಚೇತನತೆಯ ಎರಡನೆಯ ರೂಪದಲ್ಲಿ ನಿಂತಿದೆ ಎಂದು ಅರ್ಥ, ಮತ್ತು ಆ ಕಾರಣದಿಂದಲೇ ಚೇತನತೆಯು ಉಳಿದಿದೆ ಎಂದಂತಾಯಿತು. ಇವೆರಡರಿಂದ ರಹಿತನಾಗಿ ಇರುವುದು ಒಳ್ಳೆಯದು; ಅದರಿಂದಾಗಿ, ಅವುಗಳ ಸಂಸ್ಕಾರ ನಮ್ಮ ಮೇಲೆ ಉಳಿಯುವುದಿಲ್ಲ. ಇದಾದ ನಂತರ ಒಂದು ಸ್ಥಿತಿ ಬರುತ್ತದೆ; ಅದನ್ನು Potentiality (ಸುಪ್ತ ಸಾಮರ್ಥ್ಯ) ಎಂದು ಕರೆಯಲಾಗಿದೆ, ನಾವು ಅದನ್ನೂ ದಾಟಿ ಬಂದೆವೆಂದರೆ, ನಾವು ದಡಕ್ಕೆ ಹತ್ತಿರವಿದ್ದೇವೆ ಎಂದು ತಿಳಿಯಬಹುದು, ಸಮಯದ ಉಳಿತಾಯಕ್ಕೋಸ್ಕರ ಸಂಕ್ಷೇಪವಾಗಿ ಸ್ವಲ್ಪ ಬರೆಯುತ್ತೇನೆ. ನಿನ್ನದು 'ಬ್ರಾಹ್ಮೀ–ದಶೆ' (ಬ್ರಹ್ಮದ–ದಶೆ) ಇದೆಯೆಂಬುದು ನಿಃಸಂಶಯ. ತಿಳಿವಳಿಕೆಗೋಸ್ಕರ, ಒಬ್ಬನು ಬ್ರಹ್ಮದ ವಾಸನೆಯ ಅನುಭವ ಪಡುತ್ತಿದ್ದಾನೆ, ಅಥವಾ ಅದರ ಗಾಳಿಯ ಸುಳಿಯಲ್ಲಿ ಅಥವಾ ಮಂಡಲದಲ್ಲಿ ಇದ್ದ ಹಾಗೆ ಎನ್ನಬಹುದು. ಇವೆಲ್ಲವೂ 'ಬ್ರಹ್ಮ'ಕ್ಕೆ ಸೇರಿದ ವಸ್ತುಗಳೇ ಸರಿ. ಈ ಅನುಭವವನ್ನು ನೀನು 'ಬ್ರಹ್ಮ–ಗತಿ' ಎಂದು ಕರೆದರೆ, ಅದು ಹೇಳುವುದಕ್ಕಷ್ಟೇ ಸರಿ. ಬ್ರಹ್ಮದ ಶುದ್ಧತೆಯ ಒಂದಿಷ್ಟು ಹೊಳಹು ನಿನಗೆ ನಿಲುಕಿದೆ ಎಂಬುದನ್ನು ಇದು ತೋರಿಸುತ್ತದೆ, ಮತ್ತು ಬ್ರಹ್ಮದ ಗಂಧ (ಸುವಾಸನೆ) ಇರುವ ಸ್ಥಿತಿಗಿಂತ ನೀನು ಮೇಲಕ್ಕೆ ಹೋಗುವಿಯೆಂಬ ಭರವಸೆ ಕೊಡುತ್ತದೆ. (ಆಧ್ಯಾತ್ಮಿಕತೆಯ) ಮಾರ್ಗ ಕ್ರಮಣ ಮಾಡುವವನಿಗೆ (ಅಭ್ಯಾಸಿಗೆ) ಇವೆಲ್ಲ ಸಂಗತಿಗಳೂ ಬರುತ್ತವೆ.

ಲಯಾವಸ್ಥೆ ಇತ್ಯಾದಿಗಳ ಕುರಿತು, ನಿನ್ನ ಪತ್ರದಲ್ಲಿ ಹೇಳಿದ ಇತರ ವಿಷಯಗಳಿಗೆ ಉತ್ತರ ಈ ಮೇಲೆ ಹೇಳಿದುದೇ ಆಗಿದೆ. 'ಗುರುವಿನೊಂದಿಗಿನ ಸಂಬಂಧ ಎಲ್ಲೋ ಕಡಿದು ಹೋಗಿಲ್ಲವಷ್ಟೆ !'– ಎಂಬ ಭಾವನೆಯಿಂದ ಹೊರಗೆ ಬಾ (ಬಿಟ್ಟು ಬಿಡು). ಗುರುವಿನ ದೇಹ (ಭೌತಿಕ ರೂಪ)ದೊಂದಿಗೆ ಸಂಬಂಧ ಕಡಿದು ಹೋಗಿದೆ, ಆದರೆ, 'ಗುರು'ವಿನೊಂದಿಗೆ (ದೈವಿಕತೆ) ('ಮಾಲಿಕ್') ಬಹಳ ಉತ್ಕಟವಾಗಿ ಬೆಸೆದುಕೊಂಡಿದೆ'–ಎಂದು ನಾನು ಭಾವಿಸುತ್ತೇನೆ. ಪಶ್ಚಿಮದಲ್ಲಿ Saint 'ಸೇಂಟ್' ಎಂದು ಹೇಳುತ್ತಾರೆ, ನಮ್ಮಲ್ಲಿ 'ಸಂತ' ಎಂದು ಹೇಳುತ್ತಾರೆ. ಆದರೆ 'ಸಂತ–ಗತಿ' ನಿನಗೆ ಇನ್ನೂ ಪ್ರಾಪ್ತವಾಗಿಲ್ಲ; ನನಗೆ (ನೀನು ಅಂತೆಯೇ ಆಗುವ) ಭರವಸೆ ಇದೆ; ಮತ್ತು ಆ ಕಾರಣ ನಾನು ನಿನ್ನನ್ನು 'ಸಂತ' ಎಂಬುದರ ಬದಲಿಗೆ 'ಸೇಂಟ್' ಎಂದು ಕರೆಯಲು ಪ್ರಾರಂಭಿಸಿದ್ದೇನೆ. ಅಂತರವಿರುವುದು ಒಂದಿಷ್ಟು (ಅಲ್ಪ) ಮಾತ್ರ, ಅದಕ್ಕೆಂತಲೇ 'ಸೇಂಟ್' ಎಂದು ನಾನು ಬರೆಯುವುದು ನಿನ್ನ ಬೆನ್ನು ಮತ್ತು ತಲೆಗಳನ್ನು ಗೆದ್ದಲು ತಿಂದಂತೆ ಅನಿಸುತ್ತದೆ ಎಂದು ನೀನು ಬರೆದಿರುವುದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ನಿನಗೆ ಇದರಿಂದ ತೊಂದರೆಯಾಗುತ್ತಿದೆಯೆ? ಏನೇ ಇರಲಿ, ಅದು ನಿನ್ನ ಬೆನ್ನು ಹುರಿಯಲ್ಲಿ ಮಾತ್ರವೋ ಅಥವಾ ಇಡೀ ಬೆನ್ನಿನಲ್ಲಿ ಅನುಭವವಾಗುತ್ತಿದೆಯೊ? ತಲೆಯಲ್ಲಿ ಹಾಗೆನಿಸುತ್ತಿದೆಯಾದರೆ ಎಲ್ಲಿ (ತಲೆಯ ಯಾವ ಭಾಗದಲ್ಲಿ)? ರೋಮಾಂಚನ ಅಥವಾ ಕಂಪನವಾಗುವುದನ್ನು ನೀನು ಗೆದ್ದಲು ಕಡಿದಂತೆ ಎಂದು ಭಾವಿಸಿಲ್ಲವಷ್ಟೆ?



ಅಮ್ಮಾಜಿಗೆ ವಂದನೆ. ಸೋದರ–ಸೋದರಿಯರಿಗೆ ಆಶೀರ್ವಾದ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೪ **ಪತ್ರ ಸಂಖ್ಯೆ – ೪೮೦** ಷಾಹಜಹಾನಪುರ
೨೩–೦೪–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ ಎರಡು ಪತ್ರಗಳು ದಿ. ೧೬ ಮತ್ತು ೧೯ ಏಪ್ರಿಲ್ ೧೯೫೫ರವು ಬಂದು ತಲುಪಿದವು. ಇವೆರಡಕ್ಕೂ ಒಟ್ಟಿಗೆ ಉತ್ತರ ಬರೆಯುತ್ತಿದ್ದೇನೆ. ನನ್ನ ಒಂದು ವಾಕ್ಯವನ್ನು ನೀನು ತಪ್ಪಾಗಿ ತಿಳಿದುಕೊಂಡಿದ್ದೀಯೆ. ಅದು ೧೯ರ ಪತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಅದೆಂದರೆ– 'ಗುರುವಿನೊಂದಿಗೆ (ಮಾಲಿಕ್) ಸಂಬಂಧ ಎಲ್ಲೋ ಕಡಿದು ಹೋಗಿಲ್ಲವಷ್ಟೆ !– ಎಂಬ ಭಾವನೆಯಿಂದ ಹೊರಗೆ ಬಾ' ಎಂದು ನಾನು ಬರೆದದ್ದು. ಇದರ ಅರ್ಥ, ಸಂಬಂಧ ಎಲ್ಲೂ ಖಂಡಿತ ಕಡಿದು ಹೋಗಿಲ್ಲ, ಕಡಿದು ಹೋಗಿದೆ ಎಂಬ ವಿಚಾರಕ್ಕೆ ಆಸ್ಪದ ಕೊಡಬಾರದು ಎಂಬುದಾಗಿದೆ. ಒಂದನೆಯದಾಗಿ, 'ದೀಕ್ಷೆ' ಪ್ರದಾನವಾದುದು ಉಂಟೇ ಉಂಟು, ಅದು ಪಕ್ಕಾ

P-4-Books-PM-7-Anantyatre-127



ಸಂಬಂಧ; ಯಾರಿಗೆ 'ದೀಕ್ಷೆ'ಯಾಗಿದೆಯೋ ಅವರ ಸಂಬಂಧ ಶಾಶ್ವತವಾದುದು. ಎರಡನೆಯದು,–ಇದಕ್ಕಿಂತ ಹೆಚ್ಚಿನದು ಪ್ರೇಮ ಮತ್ತು ಆಧ್ಯಾತ್ಮಿಕ ಮಾರ್ಗದ್ದು.

ಈಗ ನಿನಗೆ ತಿಳಿಸಿ ಹೇಳುತ್ತೇನೆ. ಪ್ರೇಮ ಮಾಡುತ್ತ ಮಾಡುತ್ತ ಅಭ್ಯಾಸಿಯು, ಭೌತಿಕ ರೂಪದಿಂದಾರಂಭಿಸಿ, ನಂತರ ಪ್ರಿಯತಮನ ಆಂತರಿಕ ಸ್ಥಿತಿಯೊಂದಿಗೆ ಜೋಡಿಸಲ್ಪಡುವುದು ಪ್ರಾರಂಭವಾಗುವ ಸ್ಥಿತಿಗೆ ತಲುಪುತ್ತಾನೆ; ಮತ್ತು ಅಭ್ಯಾಸಿಯ ದೃಷ್ಟಿಯು ಅದರ ಮೇಲೆಯೇ ಸ್ಥಾಪಿತಗೊಳ್ಳುತ್ತದೆ; ಅರ್ಥಾತ್, ಕೇವಲ ಪ್ರಿಯತಮನ ಆಂತರಿಕ ಸ್ಥಿತಿಯಲ್ಲಿ ಪ್ರವೇಶಿಸುವುದಷ್ಟೇ ಅಲ್ಲದೆ, ಅದರಲ್ಲಿ ಸಾಯುಜ್ಯವಾಗಿ ಏಕಾಕಾರ ಹೊಂದುತ್ತಾನೆ. ಅದರಲ್ಲಿ ತನ್ನನ್ನು ತಾನು ಲಯಗೊಳಿಸಿದಾಗ, ಸಂಬಂಧವು ಭೌತಿಕ ದೇಹವನ್ನು ಬದಿಗಿರಿಸಿ, ಆ ಆಂತರಿಕ ಸ್ಥಿತಿಯೊಂದಿಗೆ (ಗುರುವಿನ ದೈವಿಕತೆಯೊಂದಿಗೆ) ಸಂಬದ್ಧನಾಗುತ್ತಾನೆ. ಗುರುವು ದೇಹವಲ್ಲ; ಮತ್ತು ಅವನನ್ನು 'ದೇಹ' ಎಂದು ತಿಳಿದರೆ, ಕಬೀರ ಸಾಹೇಬರ ಹೇಳಿಕೆಯಂತೆ, ಆ ಅಭ್ಯಾಸಿಯು 'ಗುರು–ಪಶು' ಆಗುತ್ತಾನೆ. (ಗುರುವಿನ ಭೌತಿಕ ರೂಪಕ್ಕೆ ದಾಸನಾಗುತ್ತಾನೆ). ಗುರುವನ್ನು 'ಗುರು'ವಿನ ಸ್ತರದಲ್ಲಿಯೇ (ದೈವಿಕತೆಯೆಂದೇ) ಪೂಜಿಸಬೇಕು– ಎಂದು ಋಷಿ ಯಾಜ್ಞವಲ್ಕ್ಯ ತನ್ನ ಪತ್ನಿ ಮೈತ್ರೇಯಿಗೆ ನಿಷ್ಠುರ ಶಬ್ದಗಳಲ್ಲಿ ಹೇಳಿದ್ದಾನೆ. ಮೊದ ಮೊದಲಿಗೆ, ಗುರುವಿನ ಭೌತಿಕ ರೂಪದೊಂದಿಗೆ ಮಾಡಲಾಗುತ್ತದೆ, ನಂತರ, ಅಭ್ಯಾಸಿಯು ಗುರುವಿನ 'ಆತ್ಮ'ದಲ್ಲಿ ಸಂಮಿಲಿತನಾಗತೊಡಗುತ್ತಾನೆ. ನನ್ನ ಹಿಂದಿನ ಪತ್ರದಲ್ಲಿ,– 'ಭೌತಿಕ ರೂಪದೊಂದಿಗೆ ಸಂಬಂಧ ಕಡಿದು ಹೋಗಿದೆ, ಆದರೆ ನನ್ನೊಂದಿಗೆ. ಬಲವಾಗಿ (ಉತ್ಕಟವಾಗಿ) ಸಂಬದ್ಧಗೊಂಡಿದ್ದೆ'– ಎಂದು ನಾನು ನಿನಗೆ ಬರೆದಿದ್ದೆ; ಅದರ ತಾತ್ಪರ್ಯ ನಾನು ಈ ಮೇಲೆ ಬರೆದುದೇ ಆಗಿತ್ತು. ಅಭ್ಯಾಸಿಯ ಸಂಬಂಧ ಗುರುವಿನ ಭೌತಿಕ ರೂಪದೊಂದಿಗೆ ಅಲ್ಪ ಸ್ವಲ್ಪ ಇದ್ದೇ ಇರುತ್ತದೆ; ಆದರೆ ಅದು ಅನುಭವಕ್ಕೆ ಬರುವುದು ಅವನು ಆ 'ಸ್ಥಿತಿ'ಯೊಂದಿಗೆ ಸಂಬಂಧ ಸ್ಥಾಪಿಸಿಕೊಂಡಾಗ ಮಾತ್ರ. ಉನ್ನತ ಸ್ತರಕ್ಕೆ ಏರುವುದು ಎಂದರೆ, ಗುರುವಿನ ಅತ್ಯಂತ ಆಂತರಿಕ ಸ್ಥಿತಿಯಲ್ಲಿ ಲಯ ಹೊಂದುವುದೆಂದೇ ಅರ್ಥ. ಒಂದು ವೇಳೆ ಅದಾಗದಿದ್ದರೆ ಜೀವನದ ಉದ್ದೇಶ ಪ್ರಾಪ್ತಿಯಾಗುವುದು ಸಾಧ್ಯವಿಲ್ಲ. ನೀನು ಉನ್ನತಿ ಹೊಂದುತ್ತಿದ್ದೀಯೆ. ಅಂದ ಮೇಲೆ, ನೀನು ನನ್ನ ಮಾತನ್ನು ತಪ್ಪಾಗಿ ತಿಳಿದುದು ಹೇಗೆ? ನಿನಗೆ ಇದರ ಅನುಭೂತಿ ಈಗಾಗಲೇ ಆಗಿದೆ; ಈಗ ನೀನು ಸರಿಯಾಗಿ ತಿಳಿದುಕೊಂಡೆ ಎಂಬ ಭರವಸೆ ನನಗಿದೆ. ಒಂದು ವೇಳೆ, ತಿಳಿದಿರದಿದ್ದರೆ, ನಾನು ಇನ್ನೊಮ್ಮೆ ವಿವರಿಸಿ ತಿಳಿಸುವ ಪ್ರಯತ್ನ ಮಾಡುತ್ತೇನೆ. ನಾನು ೧೩–೦೪–೫೫ರ ಪತ್ರಕ್ಕೆ ಉತ್ತರವನ್ನು ಮೊದಲೇ ಕೊಟ್ಟಿದ್ದೆ. ಈ ಮುಂದಿನದು ೧೯–೪–೫೫ರ ಪತ್ರದ ಉತ್ತರವೆಂದು ತಿಳಿ. *'ನಿನಗೆ ಜೀವಿಸಿರುವುದಕ್ಕೆ ಸ್ವಲ್ಪವೂ ಮನಸ್ಸಾಗುವುದಿಲ್ಲ, ಅರ್ಥಾತ್, ಜೀವನದ ಬಗ್ಗೆ ಹೃದಯ ಉದಾಸೀನವಾಗಿರುತ್ತದೆ' ಎಂದು ಬರೆದಿದ್ದೀಯೆ, ಮುಂದಕ್ಕೆ, 'ಯಾರಾದರೂ ನಾನು ಸತ್ತಿರುವೆನೆಂದರೆ ಸತ್ತಿದ್ದೇನೆ, ಜೀವನದ ಬಗ್ಗೆ ಮಾತನಾಡಿದರೆ, ಅದರ ಬಗ್ಗೆ ಗಮನವೇ ಇರುವುದಿಲ್ಲ'–*



ಎಂದೂ ಬರೆದಿದ್ದೀಯೆ. ನೀನು ಹೇಗೆ ಇದ್ದೀಯೋ ಅಂತೆಯೇ ಇರು– ಎಂದು ಇದರ ಅರ್ಥ. ಇದಲ್ಲದೆ ಇನ್ನೊಂದು ಮಾತು ಇದರಿಂದ ಸಿದ್ಧವಾಗುವುದೇನೆಂದರೆ, ಈಶ್ವರೇಚ್ಛೆ ಇದ್ದರೆ, *'ನೀನು ಎಂದೂ ಹುಟ್ಟಿಯೂ ಇಲ್ಲ, ಎಂದೂ ಮರಣ ಹೊಂದಿಲ್ಲ'* ಎಂಬ ಸ್ಥಿತಿಯ ಅನುಭೂತಿಯಾಗುವ ಅವಸ್ಥೆ ನಿನಗೆ ಪ್ರಾಪ್ತವಾಗುವುದು. ಇದು ಒಂದು ಉತ್ತಮ ಸ್ಥಿತಿಯ ಆರಂಭವಾಗಿದೆ. ಇದೇ ಸ್ಥಿತಿಯ ಬಗ್ಗೆ ನಾನು ಯಾವಾಗಲೋ ಚೌಬೇಜಿಯವರಿಗೆ ಬರೆದಿದ್ದೆ. ಆದರೆ ನಿಜವಾಗಿ 'ಸ್ಥಿತಿ' (condition) ಎಂದರೆ, ಅಭ್ಯಾಸಿಗೆ ಅದರ (ಅದು ಇರುವುದರ) ಭಾವನೆಯೂ ಇರಬಾರದು, ಮತ್ತು ಬೇಕೆಂದಾಗ ಆ ಸ್ಥಿತಿಗೆ ಬರುವ ಪ್ರಭುತ್ವ ಹೊಂದಿರಬೇಕು. ಅಭ್ಯಾಸಿಯು ಗುರುವಿನ ಆಂತರಿಕ ಸ್ಥಿತಿಯನ್ನು ಮುಟ್ಟಲು ಪ್ರಾರಂಭಿಸಿದಾಗ, ಮತ್ತು ಅನಂತರ ಅದರಲ್ಲಿ ಹೋಗಿ ತಲುಪಿದಾಗ ಇಂಥ ಸ್ಥಿತಿಗಳು ಉಂಟಾಗಬಲ್ಲವು. ಗುರುವಿನ ದೇಹವನ್ನು ಗಣನೆಗೆ ತೆಗೆದುಕೊಂಡರೆ, ಅದು ಕೂಡ, ಪ್ರಾಣಿಗಳ ಶರೀರವು ಯಾವ ಭೌತ ಸಾಮಗ್ರಿಗಳಿಂದ ರಚಿತವಾಗಿದೆಯೋ ಅವುಗಳಿಂದಲೇ ರಚಿತವಾದದ್ದಿರುತ್ತದೆ. ಆದರೆ ನಿಜ ವಸ್ತು (ಗುರುವು) ಅದರ ಹಿಂದಿರುವ 'ಚೇತನತೆ'ಯೇ ಆಗಿದೆ. ನೀನು ನಿನ್ನ ಗುರಿಯ ಬಗ್ಗೆ ಕೇಳಿದ್ದೀಯೆ. ಪ್ರತಿಯೊಬ್ಬನ ಜೀವನದ ಉದ್ದೇಶವೂ, ತನ್ನ ಸತ್ಯತೆಯಲ್ಲಿ ತನ್ನನ್ನು ತಾನು ಲಯಗೊಳಿಸಿಕೊಳ್ಳುವುದೇ ಆಗಿದೆ. ಈ ಉದ್ದೇಶವು ಯಾವ ರೀತಿಯಲ್ಲಿ ಪ್ರಾಪ್ತವಾಗುವುದೋ, ಆ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳಲಿ. ಈ ಅರ್ಥವು ಸಿದ್ಧಿಸಲು ತನ್ನ ರುಚಿಯ (ಮನೋಧರ್ಮದ) ಅನುಸಾರವಾಗಿ ಬೇಕಾದ ವಿಧಾನವನ್ನು ತನ್ನದಾಗಿಸಿಕೊಳ್ಳುವುದು ಪ್ರತಿಯೊಬ್ಬನ ಮನಃಪ್ರವೃತ್ತಿಯ ಮೇಲೆ ಅವಲಂಬಿಸಿದೆ. ಅರಣ್ಯದಲ್ಲಿ ಇರುವುದರಿಂದ ಇದು ಪ್ರಾಪ್ತವಾಗುವುದು ಶಕ್ಯವೆನಿಸಿದರೆ, ಮತ್ತು ಅವನ ಮನಸ್ಸು (ವಿಚಾರ) ಇದಕ್ಕೆ ವಿವಶವಾಗಿದ್ದರೆ, ಇದನ್ನೇ ಮಾಡಬೇಕು. ಅವನ ಮನಸ್ಸು–ಹೃದಯಗಳಲ್ಲಿ, ತಾನು ಮನೆಯಲ್ಲಿದ್ದುಕೊಂಡೇ 'ಸತ್ಯ'ದ ಕಡೆಗೆ ಧಾವಿಸುತ್ತೇನೆಂಬುದು ಸ್ಥಿರ ಇದ್ದರೆ, ಮನೆಯಲ್ಲಿಯೇ ಉಳಿಯಲಿ. (ಗೃಹಸ್ಥನಾಗಿಯೇ ಉಳಿಯಲಿ). ಅವನು ಮನೆಯಲ್ಲಿಯೇ ಇದ್ದು, ಅವನ ಮನಸ್ಸು ಸಂನ್ಯಸ್ತನಾಗಿರುವುದರ ಕಡೆಗೆ ಒಲಿದರೆ, ಅದೇ ಸ್ಥಾನದಲ್ಲಿ (ಸಂನ್ಯಸ್ತ) ಅವನು ಮನೆಯಲ್ಲಿ ಇರಬೇಕು. ಕೆಲವರು ಮನೆಯಲ್ಲಿ ಇದ್ದರೂ, ಮದುವೆಯಾಗದೆ ಇರುತ್ತಾರೆ. ಯಾಕೆಂದರೆ ಹೀಗೆ ಮಾಡುವುದರಿಂದಲೇ, ಅವರ ಮನೋಧರ್ಮದ ಪ್ರಕಾರ ಫಲ ಪ್ರಾಪ್ತಿಯಾಗುತ್ತದೆ ಎನ್ನುವುದಾದರೆ, ಅದೂ ಸರಿಯೇ ಇದೆ. ಆದ್ದರಿಂದ, ನೀನು ಹೀಗೆ ಹೇಳಬಹುದು. ಜೀವನದ ಉದ್ದೇಶ ಪ್ರಾಪ್ತಿಗೋಸ್ಕರ, ನಿನ್ನ ಸಂಸ್ಕಾರಗಳ ದ್ವಾರಾ ಇಂಥ ವೃತ್ತಿ ಉಂಟಾಯಿತು. ನೀನು ಯಾವ ಸ್ಥಿತಿಯಲ್ಲಿದ್ದೀಯೋ ಅದು ಧ್ಯೇಯ ಪ್ರಾಪ್ತಿಗೆ ಅನುಕೂಲಕರವಾಗಿತ್ತು. ಯಾಕೆಂದರೆ ಮುಖ್ಯ ತಾತ್ಪರ್ಯವೆಂದರೆ ಜೀವನದ ಉದ್ದೇಶವನ್ನು ಈ ಮೇಲೆ ಹೇಳಿದಂತೆ ಪ್ರಾಪ್ತಮಾಡಿಕೊಳ್ಳುವುದು; ಮತ್ತು ಅದಕ್ಕೋಸ್ಕರ ಯಾವುದೇ ತ್ಯಾಗ ಮಾಡಬೇಕಾಗಿ ಬಂದರೆ, ತ್ಯಾಗ ಮಾಡುವುದು. ನೀನು ನಿನ್ನ ಉದ್ದೇಶ ಪ್ರಾಪ್ತಿಗೋಸ್ಕರ

P-4-Books-PM-7-Anantyatre-128



ಮಾಡಬೇಕಾದ ತ್ಯಾಗ ಮಾಡಿದ್ದೀಯೆ. ಪ್ರತಿಯೊಬ್ಬ ಪ್ರಜ್ಞಾವಂತ ಮನುಷ್ಯ ಇದಕ್ಕೋಸ್ಕರ ಸಂತೋಷ ಪಡಬೇಕು, ಮತ್ತು ನಿನ್ನನ್ನು ಗೌರವಿಸಬೇಕು.

ಡಿ–೧ (D1) ಸ್ಥಾನದಲ್ಲಿ ಎಲ್ಲೋ ಸ್ವಲ್ಪ ಕಠಿಣತೆ ಇದೆ ಎಂದು ನೀನು ಎಲ್ಲಿಯೋ ಬರೆದಿದ್ದೀಯೆ; ನಿನ್ನ ಅನುಭೂತಿ ಸರಿ ಇದೆ. ಈಶ್ವರೇಚ್ಛೆಯಿದ್ದರೆ; ಇದು ಸರಿ ಹೋಗುವುದು. ಡಾ. ಕೆ. ಸಿ. ವರದಾಚಾರಿಯವರ ಪತ್ರ ಬಂದಿದೆ. ಅದರ ನಕಲು ಕಳುಹಿಸುತ್ತಿದ್ದೇನೆ, ನೀನು ಇದನ್ನು ಓದಿ, ಅರ್ಥಮಾಡಿಕೊಂಡು, ಅನುಕೂಲವಿದ್ದ ಮಟ್ಟಿಗೆ, ಅವರಿಗೆ ಸಹಾಯ ಮಾಡು (ಆಧ್ಯಾತ್ಮಿಕ ಪ್ರಯೋಜನ ಉಂಟಾಗುವಂತೆ ಮಾಡು). ಅವರು ಪ್ರಕಾಶದ ದರ್ಶನವನ್ನು ಬಯಸುತ್ತಾರೆ. ನಾನು ನನ್ನ ಜನ್ಮ ದಿನಾಂಕ, ಮತ್ತು ಜೀವನದ ಮುಖ್ಯ ಘಟನೆಗಳ ದಿನಾಂಕಗಳನ್ನು ಅವರಿಗೆ ತಿಳಿಸಬೇಕೆಂದು ಬರೆದಿದ್ದಾರೆ. ನನ್ನ ಜನ್ಮಪತ್ರಿಕೆಯು ಚೌಬೇಜಿಯವರ ಬಳಿ ಇದೆ, ಅದರಲ್ಲಿರುವ ನನ್ನ ಜನ್ಮ ದಿನಾಂಕವನ್ನು ನೋಡಿ, ನನಗೆ ಬರೆದು ತಿಳಿಸು. ನನ್ನ ತಾಯಿ ಇಲ್ಲ, ಇಲ್ಲವಾದರೆ ಅವರನ್ನು ಕೇಳುತ್ತಿದ್ದೆ.

ಚೌಬೇಜಿಯವರಿಗೆ ಪ್ರಣಾಮಗಳು. ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಹಿತೈಷಿ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೫ **ಪತ್ರ ಸಂಖ್ಯೆ – ೪೮೨** ಷಾಹಜಹಾನಪುರ<br>
೦೪–೦೫–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭ ಆಶೀರ್ವಾದಗಳು.

ಮೇ ೧೨ರ ನಿನ್ನ ಪತ್ರ ತಲುಪಿತು. ಡಾ. ವರದಾಚಾರಿಯವರ ಪತ್ರ ಬಂದಿದೆ. ಅದರ ನಕಲನ್ನು ನಿನಗೆ ಕಳುಹಿಸುತ್ತಿದ್ದೇನೆ. ಅದನ್ನು ಓದಿ ನೋಡು. ಅರ್ಥವಾಗದ ಕಡೆಗಳಲ್ಲಿ ಚೌಬೇಜಿಯವರ ಸಹಾಯ ಪಡೆಯಬಹುದು. ನೀನು ಅವರಿಗೆ ಆಧ್ಯಾತ್ಮಿಕ ತರಬೇತಿ ಕೊಡುತ್ತಿರುವುದರ ಕಾರಣ, ಅವರ ಸ್ಥಿತಿ ನಿನಗೆ ತಿಳಿದಿರಬೇಕು, ಅದರಿಂದ ನೀನು ಅವರ ನ್ಯೂನತೆಗಳನ್ನು ಅರಿತು ಅವುಗಳನ್ನು ದೂರ ಮಾಡಲು ಪ್ರಯತ್ನಿಸಬೇಕೆಂದು, ಅವರ ಪತ್ರದ ನಕಲು ಕಳುಹಿಸುತ್ತಿದ್ದೇನೆ. ನಾನು ನಿನಗೆ ಅಭ್ಯಾಸಿಗಳ ಒಂದು ಪಟ್ಟಿಯನ್ನು ಕೊಟ್ಟಿದ್ದೆ. ಅದರಲ್ಲಿ ಕೆಲವು ಹೆಸರುಗಳನ್ನು ಸೇರಿಸಬೇಕು. ಈ ಕೆಳಗಿನ ಇಬ್ಬರ ಹೆಸರುಗಳನ್ನು ನಾನು ಸೇರಿಸಲು ಮರೆತಿದ್ದೆ :

೧. ಎಸ್. ಕೆ. ರಾಜಗೋಪಾಲನ್, ಇಂಜಿನಿಯರ್, ದಿಲ್ಲಿ<br>
೨. ಕುಮಾರಸ್ವಾಮಿ ಮತ್ತು ಅವರ ಪತ್ನಿ, ಮದ್ರಾಸ್.



ನಿನ್ನ ಪತ್ರಗಳಿಗೆ ಉತ್ತರ ಕೊಡುವುದು ಕಠಿಣವಾಗುತ್ತಿದೆ. ಎರಡು ಸ್ಥಿತಿಗಳು ನಿನ್ನೊಳಗೆ ಮತ್ತೂ ಮತ್ತೂ ಗಾಢವಾಗುತ್ತ ಹೋಗಿವೆ. ಒಂದು ಕಡೆಯಿಂದ ಕಡಿದುಕೊಳ್ಳುವುದು, ಇನ್ನೊಂದು ಕಡೆಗೆ ಜೋಡಿಸುವುದು. ನಿನ್ನನ್ನು ನೀನೇ ಕಳೆದುಕೊಳ್ಳುತ್ತ ಹೋಗುತ್ತಿರುವ ಮಟ್ಟಿಗೆ ನೀನು ಅಂಥ ಲಯಾವಸ್ಥೆಯಲ್ಲಿ ಮುಂದುವರಿಯುತ್ತಿದ್ದೀಯೆ. *"ಕಸ್ತೂರಿಯ ಹೆಸರಿಗೆ ಪತ್ರ ಬರೆದು ಕಳುಹಿಸಿರಿ. ನಾನು ಅವಳಿಗೆ ತಲುಪಿಸುತ್ತೇನೆ"*– ಎಂದು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಇದರಲ್ಲಿ ಎಂಥ ಸ್ಥಿತಿ ಅಡಗಿದೆಯೆಂದರೆ, ಅದನ್ನು ಎಷ್ಟು ಹೊಗಳಿದರೂ ಕಡಿಮೆಯೇ ಸರಿ. ನೀನು 'ಕಳೆದು ಹೋಗುತ್ತಿರುವುದರ' ಪೂರ್ಣ ರುಜುವಾತು ಇದು.

ಅಭ್ಯಾಸಿಯು ತನ್ನನ್ನು ತಾನು ಸಂಪೂರ್ಣ ಲಯಗೊಳಿಸಿದಾಗ, ಅವನ ನಿಜವಾದ ಜೀವನ ಪ್ರಾರಂಭವಾಗುತ್ತದೆ. ಮತ್ತು ಅದೇ ಸ್ಥಿತಿಯಲ್ಲಿ ಈ ಮೂರು ಸಂಗತಿಗಳು ಜರುಗುತ್ತವೆ : *೧. ದೈವೀ ವಿಚಾರ, ೨. ದೈವೀ ಕ್ರಿಯೆಗಳು, ೩. ದೈವೀ ಜ್ಞಾನ.* ಈ ಪತ್ರದಲ್ಲಿ ಬರೆದುದೆಲ್ಲ ಲಯಾವಸ್ಥೆಯ ಒಳ್ಳೆಯ ವಿವರಣೆಯಾಗಿದೆ. ಕೊನೆಯು ಇನ್ನೂ ದೂರ ಇದೆ. ಇದರ ನಂತರ ಬರುವ ಜೀವನವೂ 'ಲಯ'ವಾಗಲಾರಂಭಿಸುತ್ತದೆ. ಏಕತ್ವದ ಅವಸ್ಥೆಯನ್ನು ತಲುಪಿ, ಅದರ ಅರಿವೂ ಇಲ್ಲದಾಗುವುದೇ ಕೊನೆಯ–'ಗತಿ' ಎಂದು ನನಗೆ ಭಾಸವಾಗುತ್ತದೆ. ಉತ್ತರವಾಗಿ ಇಷ್ಟು ಪರ್ಯಾಪ್ತವೆಂದು ನನಗೆ ಅನಿಸುತ್ತದೆ. ಈಶ್ವರನ ಕೃಪೆಯಿಂದ ನೀನಂತೂ ಬಹಳೇ ಅರ್ಹಳಿದ್ದೀಯೆ. ಮಿಷನ್ನಿಗೆ ನಿನ್ನಿಂದ ಬಹಳ ಪ್ರಯೋಜನವಾಗುವುದು.

ಅಮ್ಮಾಜಿಗೆ ಪ್ರಣಾಮಗಳು.

ನಿನ್ನ ಶುಭ ಚಿಂತಕ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೬ **ಪತ್ರ ಸಂಖ್ಯೆ – ೪೮೫** ಷಾಹಜಹಾನಪುರ<br>
೨೦–೦೫–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ಮೇ ೧೨ ಮತ್ತು ೧೪ರ ನಿನ್ನ ಪತ್ರಗಳು ಕೈ ಸೇರಿದವು. ಕೇಸರ್‌ಳ ಓದನ್ನು (ಪರೀಕ್ಷೆಯನ್ನು) ಪರಿಗಣಿಸಿ, ನಾನು ಅವಳ ಲಕ್ಷ್ಯವನ್ನು ಆಧ್ಯಾತ್ಮಿಕತೆಯಿಂದ ತುಸು ತಿರುಗಿಸಿದೆ; ಆದರೆ ಅದರಿಂದಾಗಿ ಅವಳು ಲಾಭವಂಚಿತಳಾದಳು. ಈಗ, ಅವಳ ಪರೀಕ್ಷಾ ಪರಿಣಾಮ ಘೋಷಿತವಾದ ನಂತರ ನಾನು ಅದನ್ನು ಸರಿಪಡಿಸುತ್ತೇನೆ.

P-4-Books-PM-7-Anantyatre-129



ನಿನ್ನ ಪತ್ರಗಳಿಗೆ ಉತ್ತರಿಸುವುದು ಈಗ ಬಹಳೇ ಕಷ್ಟದ ಕೆಲಸವಾಗಿದೆ, ಯಾಕೆಂದರೆ ಈಗ ಲಯಾವಸ್ಥೆ ಮತ್ತು ತದನಂತರದ ಜೀವನ ಮರೆಯಾಗಿ ಹೋಗುತ್ತವೆ. ಜೀವನ ಎಂದರೆ 'ಬಕಾ' ಮತ್ತು 'ಬಕಾ'ವೇ 'ತುರೀಯ' ಎಂದು ಕರೆಯಲ್ಪಡುತ್ತದೆ, ನನ್ನ ತಿಳಿವಳಿಕೆಯ ಪ್ರಕಾರ ಪ್ರತಿಯೊಂದು ಲಯಾವಸ್ಥೆಯ ನಂತರವೂ ತುರೀಯಾವಸ್ಥೆ ಬರುತ್ತದೆ; ಮತ್ತು ಈ ಪ್ರಕ್ರಿಯೆ ಮುಂದುವರಿಯುತ್ತದೆ. ಲೆಕ್ಕ ಇರುವುದು 'ಸೂಕ್ಷ್ಮ' ಮತ್ತು 'ಅತಿ ಸೂಕ್ಷ್ಮ'ಗಳ (ಅಂತರದ)ಲ್ಲಿ. ನೀನು ನಿನ್ನ ಪತ್ರದಲ್ಲಿ ಲಿಖಿತಗೊಳಿಸಿದುದು ಲಯಾವಸ್ಥೆಯ ಲಯವನ್ನು ಸೂಚಿಸುತ್ತದೆ. ನೀನು ಯಾರ ಮೇಲೆ (ಆಧ್ಯಾತ್ಮಿಕ ತರಬೇತಿಯ) ಕೆಲಸ ಮಾಡುತ್ತಿರುವಿಯೋ ಅವರ ಸ್ಥಿತಿಗತಿಗಳು ಚೆನ್ನಾಗಿವೆ.

ಅಮ್ಮಾಜಿಯವರಿಗೆ ಪ್ರಣಾಮಗಳು; ನಿನ್ನ ಸೋದರ–ಸೋದರಿಯವರಿಗೆ ಆಶೀರ್ವಾದಗಳು.

ನಿನ್ನ ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೭ **ಪತ್ರ ಸಂಖ್ಯೆ – ೪೮೮** ಷಾಹಜಹಾನಪುರ
೦೩–೦೬–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ ಎರಡು ಪತ್ರಗಳು, ಮೇ ೨೩ ಮತ್ತು ೨೭ರವು ಬಂದಿವೆ. ಕೇಸರ್‌ಳ ಪತ್ರವೂ ಬಂದಿದೆ, ಅವಳ ಶರೀರ ಸಂರಚನೆಯಲ್ಲಿ (System) 'ದಾರ'ಗಳು ಈಗ ಇಲ್ಲ. ಆದರೆ 'ದಾರ'ಗಳು ಇದ್ದವು ಎಂಬುದು ತಿಳಿಯುತ್ತದೆ. ಇದರ ಅರ್ಥವೇನೆಂದರೆ, ಕೆಲವು ಸೂಕ್ಷ್ಮ ಅಥವಾ ಗಾಳಿಯ ರೂಪದಲ್ಲಿ ನಾಮ ಮಾತ್ರಕ್ಕೆ ಉಳಿದುಕೊಂಡಿವೆ. ಅವಳು ತನ್ನ ಪತ್ರದಲ್ಲಿ ಬರೆದ ಉಳಿದ ವಿಷಯಗಳಿಂದ, ಅವಳು ಸಾವಕಾಶವಾಗಿ ಒಳ್ಳೆಯ ಪ್ರಗತಿ ಹೊಂದುತ್ತಿದ್ದಾಳೆಂಬುದು ಗೊತ್ತಾಗುತ್ತದೆ. ಅದನ್ನು ವಿವರಿಸುತ್ತ ಸಮಯ ಯಾಕೆ ವ್ಯರ್ಥ ಮಾಡಬೇಕು? ಅವಳ ಸ್ಥಿತಿಯೇ ಸ್ವತಃ ಅವಳನ್ನು ಶ್ಲಾಘಿಸುತ್ತಿದೆ.

ನಿನ್ನ ಇ–೧ (E1) ಬಿಂದುವಿನ ಯಾತ್ರೆ ಮುಗಿದಿದೆ ಎಂಬ ನಿನ್ನ ವಿಚಾರ ಸರಿ ಇದೆ. ನಾನು ಇದನ್ನು ಅದಾಗಲೇ ಅವಲೋಕಿಸಿದ್ದೆ. ಆದರೆ ಈ ಸ್ಥಾನವನ್ನು ನೋಡಿ ನೋಡಿ, ವಿಶೇಷವಾಗಿ ಅದರಲ್ಲಿರುವ ಪಾವಿತ್ರ್ಯವನ್ನು ನೋಡಿ ಇನ್ನೂ ಕೆಲವು ದಿನ ನಿನ್ನನ್ನು ಅಲ್ಲಿಯೇ ಇರಿಸಬೇಕೆಂದು ನನ್ನ ಮನಸ್ಸು ಬಯಸುತ್ತಿತ್ತು. ಆ ಕಾರಣ, ನಿನ್ನನ್ನು ಮೇಲಕ್ಕೆ ಎತ್ತಿ ಕರೆದೊಯ್ಯಲಿಲ್ಲ. ಆದರೆ, ಇನ್ನೂ ಹೆಚ್ಚು ಸಮಯ ನಿನ್ನನ್ನು ನಾನು ಅಲ್ಲಿಯೇ ಇಡಲಾರೆ. "ಮಾಲಿಕ್ *(ಗುರು)* ಎಂಬ ಶಬ್ದಕ್ಕೆ ನಿನ್ನ



ಮಟ್ಟಿಗೆ ಯಾವುದೇ ಅರ್ಥ ಉಳಿದಿಲ್ಲ"– ಎಂದು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಇದು ಸರಿ ಇದೆ. ಯಾವ ವಸ್ತುವಿನ ಹುಡುಕಾಟ ಇತ್ತೋ, ಅಥವಾ ಯಾವ ಮಾಲಿಕ್ (ಗುರು)ನ ಆವಶ್ಯಕತೆ ನಿನಗೆ ಇತ್ತೋ, ಅದು ನೀನೇ ಆಗುತ್ತ ಹೋಗುತ್ತಿದ್ದೀಯೆ. ಈ 'ಮಾಲಿಕ್' ಅಥವಾ 'ಗುರು'ವಿನ ಕಲ್ಪನೆ ಮನಸ್ಸಿನಲ್ಲಿ ಉಳಿಯುವುದೂ ಒಂದು ಬಂಧನ. ನೀನು ಬರೆದದ್ದು ಇದನ್ನೇ. 'ಈಶ್ವರ ಇತ್ಯಾದಿಗಳು ಎಲ್ಲವೂ ಭ್ರಮೆಯಾಗಿತ್ತು'– ಎಂದು ನೀನು ಬರೆದಿದ್ದೀಯೆ; ಅದನ್ನು ಸರಿಯಾಗಿ ವ್ಯಕ್ತಪಡಿಸಲು ನಿನಗೆ ಶಕ್ಯವಾಗಲಿಲ್ಲ. ಈ ಸ್ಥಿತಿ ಬಹಳ ಒಳ್ಳೆಯದಿದೆ. ಎಲ್ಲ ವಸ್ತುಗಳೂ ನಾಶವಾಗಿ ಹೋಗುವ 'ಮಹಾಪ್ರಳಯದ' ಅವಸ್ಥೆಯ ಸ್ಥಿತಿಯೊಂದಿಗೆ ನೀನು ಸಂಬಂಧಿತಳಾಗತೊಡಗಿದ್ದೀಯೆ. ಆದರೆ ಈ ನೈಜ ಸ್ಥಿತಿ ಬರಲು ಇನ್ನೂ ಸಮಯ ಬೇಕಾಗುವುದು. ಯಾಕೆಂದರೆ ಇದರಲ್ಲಿ ಕೂಡ ಬಹಳಷ್ಟು ಸ್ಥಿತಿಗಳು ಬದಲಾಗುತ್ತ ಹೋಗುತ್ತವೆ. ಏಕತ್ವದ ಅನುಭೂತಿಯನ್ನು ಇಟ್ಟುಕೊಳ್ಳುತ್ತಲೇ, ಬಹಳಷ್ಟು ಸಂಗತಿಗಳು ಮುಗಿದು ಹೋಗಿವೆ (ಪೂರ್ತಿಯಾಗಿವೆ) ಎಂಬುದಂತೂ ಖಂಡಿತ. 'ಮಾಲಿಕ'ನನ್ನೆ (ಗುರುವನ್ನು) ನಾನು ಎಂದು ಹೊಂದುತ್ತೇನೆ ಮತ್ತು ಹೊಂದುವುದು ಹೇಗೆ?'– ಎಂದು ನೀನು ಬರೆದಿದ್ದೀಯೆ. ಪ್ರೇಮವು ವೃದ್ಧಿ ಹೊಂದಿದಾಗ ಇದು ಉಂಟಾಗುತ್ತದೆ. ಮತ್ತು ಮಾಡುತ್ತ ಮಾಡುತ್ತ, ಗುರಿಯನ್ನು ಮುಟ್ಟಿದ ನಂತರವೂ ನಾವು ಅದನ್ನು ಹುಡುಕುತ್ತಿರುವ ರೂಢಿ ಬೆಳೆದು ಬಿಡುತ್ತದೆ.

**"ಮುರೀದ್ ಖಾಲ್ ಖಾಲ್ ಹೋತೇ ಹೈಂ. ಔರ್ ಫಿದಾಯಿ ಹಜಾರೊಂಮೇ ಏಕ್" 'ಪೂಜೆ ಮಾಡುವವರು ಎಲ್ಲೆಡೆ ಸಿಗುತ್ತಾರೆ. ಆದರೆ ತನ್ನನ್ನು ತಾನೇ ಈಶ್ವರನಿಗೆ ಸಮರ್ಪಿಸಿಕೊಳ್ಳುವವರು ಸಾವಿರದಲ್ಲೊಬ್ಬ !'**

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೨೮ **ಪತ್ರ ಸಂಖ್ಯೆ – ೪೯೦** ಷಾಹಜಹಾನಪುರ
೧೧–೦೬–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ಜೂನ್ ೬ರ ನಿನ್ನ ಪತ್ರ ತಲುಪಿತು, ಓದಿ ಹರ್ಷವೆನಿಸಿತು. ನಮ್ಮಲ್ಲಿ ಯಾರಾದರೊಬ್ಬ 'ಕಲ್ಲಿನ ಕಣ್ಣುಗಳಿಂದ ನೋಡುವವ' (ಸ್ಥಿರ ದೃಷ್ಟಿಯುಳ್ಳ) ತಯಾರಾಗುತ್ತಿದ್ದಾರೆಂದು, ಗುರು ಮಹಾರಾಜರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ವಾಸ್ತವವಾಗಿ, ಬ್ರಹ್ಮವಿದ್ಯೆಯ ದೃಶ್ಯಗಳನ್ನು ನೋಡುವುದಕ್ಕೆ 'ಕಲ್ಲಿನಂಥ ಕಣ್ಣು'ಗಳೇ ಬೇಕು. ಜಗತ್ತನ್ನು ನೋಡುವ ಕಣ್ಣುಗಳು ಭಂಗವಾಗಿ ಹೋದಾಗ ಮಾತ್ರವೇ,

P-4-Books-PM-7-Anantyatre-130



ಎಲ್ಲೋ, ಮೇಲಿನ ದೃಶ್ಯ ಕಂಡು ಬಂದೀತು. 'ಕಣ್ಣುಗಳು ಭಂಗಗೊಳ್ಳುವುದೆಂದರೆ, ಸೂರದಾಸರ ರೀತಿ ಕಣ್ಣುಗಳನ್ನು ಒಡೆದು ಭಗ್ನಗೊಳಿಸಿಕೊಂಡು ಭಕ್ತಿಯಲ್ಲಿ ಮುಳುಗಿರಬೇಕೆಂದು ನನ್ನ ಅರ್ಥವಲ್ಲ. ಅವರಿಗೇನೋ ಆ ಕಾಲದಲ್ಲಿ ಅದೇ (ಹಾಗೆ ಮಾಡಿಕೊಳ್ಳುವುದೇ) ಅಪೇಕ್ಷಣೀಯವಾಗಿದ್ದಿರಬಹುದು. ಇದು ಬೇರೆಲ್ಲಾದರೂ ಆಗಿದ್ದಿದ್ದರೆ ಇದು ದೊಡ್ಡ ಹೇಡಿತನವೆಂದೂ, ಪಾಪವೆಂದೂ ಹೇಳಬೇಕಾದೀತು. ನಿನ್ನ ಇಡೀ ಪತ್ರವು, ನಿನ್ನದೀಗ 'ಮುಗ್ಧತೆ'ಯ 'ಗತಿ' ಎಂಬುದರ ರುಜುವಾತು ಕೊಡುವ ಸುದೀರ್ಘ ಕಥನವಾಗಿದೆ. ಇದು ಉಂಟಾಗುವುದು ಅತಿಶಯ ಪ್ರೇಮವಿದ್ದಲ್ಲಿ ಮಾತ್ರ. ಇನ್ನೊಂದು ಮಾತು ಹೇಳಬೇಕು– ಒಂದು ವೇಳೆ ಈ ಪ್ರೇಮದಲ್ಲಿ ಯಾರ ಕುರಿತಾಗಿಯಾದರೂ ಹುಚ್ಚು (ಮೋಹ) ಉಂಟಾಯಿತೆಂದರೆ, ಅದು ಆಧ್ಯಾತ್ಮಿಕ (ಆತ್ಮ ಸಂಬಂಧಿತವಾದ) ಪ್ರೇಮವೆಂದೆನಿಸಲಾರದು. ನಿಜವಾದ ಪ್ರೇಮ ಆಂತರ್ಯದಲ್ಲಿಯೇ ಜ್ವಲಿಸುತ್ತಿರುವುದು, ಮತ್ತು ಅದರ ಸುಳಿವೂ ಹೊರ ತೋರದಿರುವಂಥದು. ನೀನು ಶೂನ್ಯತೆಯ ಸ್ಥಿತಿಯ ಬಗ್ಗೆ ಬರೆಯುತ್ತ, ಈ ಶೂನ್ಯತೆಯ ಅನುಭೂತಿಯೂ ಆಗುತ್ತಿಲ್ಲ ಎಂದು ಹೇಳಿದ್ದೀಯೆ. ಈ ಸ್ಥಿತಿಗೆ 'ರಿಕ್ತತೆ' (ಖಾಲಿಯಾಗಿರುವುದು) (ಅಕಿಂಚನತೆ) ಎಂದು ಕರೆದರೆ ಹೆಚ್ಚು ಸರಿಯಾದೀತು.

ನೀನು ಎಫ್‌–೧ (F1) ಸ್ಥಾನದಲ್ಲಿ ಕಾಲಿಟ್ಟಿದ್ದೀಯೆ ಎಂಬ ನಿನ್ನ ಭಾವನೆ ಸರಿ ಇದೆ; ಅಲ್ಲದೆ, ಈ ಹೆಜ್ಜೆಯನ್ನು ನೀನೇ ನೀನಾಗಿ ಇಟ್ಟಿದ್ದೀಯೆ. ಆದರೆ, ನಿನ್ನ 'ಸ್ಥಿತಿ' ಹೇಗಿತ್ತೆಂದರೆ, ನಿನ್ನ ಒಂದು ಪಾದ ಇ–೧ (E1) ದಲ್ಲಿತ್ತು. ಇನ್ನೊಂದು ಪಾದ ಎಫ್‌–೧ (F1)ದಲ್ಲಿ. ನಿನ್ನೆ ಜೂನ್ ೧೦ ರಂದು ರಾತ್ರಿ ೧೧ ಗಂಟೆ ೫೩ ನಿಮಿಷವಾದಾಗ, ನಿನ್ನ ಎರಡನೆಯ ಪಾದವನ್ನುಎಫ್‌–೧ (F1) ದಲ್ಲಿ ಇರಿಸಿದ್ದೇನೆ. ಈಗ ನಿನ್ನ ಸ್ಥಾನ ಎಫ್‌–೧ (F1)ದಲ್ಲಿದೆ. ಕೇಸರ್‌ಳ ಪತ್ರವೂ ಬಂದಿದೆ. ಅವಳ 'ಸ್ಥಿತಿ'ಯೂ ದಿನ ದಿನಕ್ಕೆ ಬಹಳ ಒಳ್ಳೆಯದಾಗುತ್ತ ಸಾಗಿದೆ. ನೀನು ನಿನ್ನ ಪತ್ರದಲ್ಲಿ 'ರಾಮ–ಕಥೆ' (ಅನೇಕ ವಿವರಗಳುಳ್ಳ ದೀರ್ಘ ವಿವರಣೆ) ಬರೆದರೆ, ಅವಳು 'ಪ್ರೇಮ–ಕಥೆ' (ಪ್ರೇಮದ ಸ್ಥಿತಿಯ ಬಗ್ಗೆ) ಬರೆದಿದ್ದಾಳೆ. ಇತ್ತೀಚೆಗೆ ನನ್ನ ಆರೋಗ್ಯ ಚೆನ್ನಾಗಿದೆ. ಯಾವ ಅಸ್ವಾಸ್ಥ್ಯವೂ ನನಗೆ ತೊಂದರೆ ಕೊಡುತ್ತಿಲ್ಲ. ಎರಡೂ ಹೊತ್ತು ಊಟ ಮಾಡುತ್ತಿದ್ದೇನೆ. ಡಾ. ಸೇನ್ (ಒಬ್ಬ ಅಭ್ಯಾಸಿ) ನನಗೆ ಔಷಧ ಕೊಡುತ್ತಿದ್ದಾರೆ. ಎ. ಗಣೇಶನ್ ತ್ರಿಚನಾಪಳ್ಳಿಗೆ ಹೋಗಿದ್ದಾರೆ. ಅವರು ಸಂತುಷ್ಟರಾಗಿ ಮರಳಿದ್ದಾರೆಂದು ನಾನು ಆಶಿಸುತ್ತೇನೆ.

ಅಮ್ಮಾಜಿಯವರಿಗೆ ನನ್ನ ಪ್ರಣಾಮಗಳನ್ನು ತಿಳಿಸು. ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಶುಭ ಚಿಂತಕ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೨೯ **ಪತ್ರ ಸಂಖ್ಯೆ – ೪೯೩** ಷಾಹಜಹಾನಪುರ
೧೯–೦೬–೧೯೫೫

ಜೂನ್ ೧೨ ಮತ್ತು ೧೫ರ ನಿನ್ನ ಪತ್ರಗಳು ತಲುಪಿವೆ. ಅವೆರಡಕ್ಕೂ ಒಟ್ಟಾಗಿ ನಾನು ಉತ್ತರ ಬರೆಯುತ್ತಿದ್ದೇನೆ. ನಿನ್ನ ಪತ್ರಗಳನ್ನು ನೋಡಿ ನನಗೆ ಒಂದು ಸಾಲು ನೆನಪಾಯಿತು. ಅದು ಯಾರು ಹೇಳಿದುದೋ ಜ್ಞಾಪಕವಿಲ್ಲ. ಅದು ಕಬೀರ್ ಸಾಹೇಬರದೆಂದು ನನಗನಿಸುತ್ತದೆ– " 'ಇದೆ' ಮತ್ತು 'ಇಲ್ಲ'ಗಳ ನಡುವೆ ಹೇಗಿದೆಯೋ ಹಾಗೆ ಇದೆ". ಜಗತ್ತಿನಲ್ಲಿ ಉಷ್ಣ ಮತ್ತು ಶೀತ– ಈ ಎರಡು ಸ್ಥಿತಿಗಳು ಕಂಡು ಬರುತ್ತವೆ. ಇವುಗಳಲ್ಲಿ ಯಾವುದು ಪ್ರಧಾನವಾಗಿರುವುದೋ ಅದೇ ಸ್ವರೂಪದಲ್ಲಿ ನಾವಿದ್ದೇವೆ. ಅದರ ಪ್ರಾಧಾನ್ಯ ಹೊರಟು ಹೋದಾಗ ಅದೇ ವಸ್ತು ಅರ್ಥಾತ್ ಸತ್ಯ– ಉಳಿಯುತ್ತದೆ. ಅದರಲ್ಲಿ ನಿನ್ನ ಈಜುವಿಕೆ ಪ್ರಾರಂಭವಾಗಿದೆ, ನೀನು ಬರೆದ–"ನನಗೆ ರಾತ್ರಿಯಾಗುವುದೇ ಇಲ್ಲ. ಎಂದೂ ಬೆಳಗಾಗುವುದೂ ಇಲ್ಲ" ಎಂಬ ಮಾತು ನನಗೆ ತುಂಬಾ ಮೆಚ್ಚುಗೆಯಾಯಿತು. ಒಂದೇ ಸಾರರೂಪ ಸ್ಥಿತಿ–ಸಂತುಲಿತ ಸ್ಥಿತಿ ನಡೆಯುತ್ತಿದೆಯೆಂದು ಇದರ ಅರ್ಥ. 'ಸ್ಥಿತಿ'ಯನ್ನು 'ಏಕಸಾರ' ಅಥವಾ 'ಸಮ' ಸ್ಥಿತಿಯೆಂದು ಕರೆಯಬಹುದೇನೋ ಸರಿಯೆ, ಆದರೆ, ಬೂದಿಯಲ್ಲಿ ಉಷ್ಣತೆ–ಅದು ಅನುಭೂತಿಗೆ ನಿಲುಕುವುದು ಕಷ್ಟವೆಂದೆನಿಸಿದರೂ– ಇನ್ನೂ ಉಳಿದಿದೆ. ಹೃದಯದಲ್ಲಿ ಯಾವುದೋ ಸ್ಪಂದನದ ಆಘಾತದಂಥದು ಇದೆ ಎಂದು ನೀನು ಬರೆದಿದ್ದೀಯೆ. ನನ್ನ ಹೃದಯದ ಸ್ಪಂದನ ನಿನ್ನ ಹೃದಯವನ್ನು ಮುಟ್ಟುತ್ತಿರಬಹುದು ಮತ್ತು, ನನಗೆ ನನ್ನ ಗುರು ಮಹಾರಾಜರ ಕಡೆಯಿಂದ, ನಾನು ಆಧ್ಯಾತ್ಮಿಕ ಉನ್ನತಿ ಪಡೆದ ನಂತರ, ನಿರಂತರವಾಗಿ ಆಘಾತದ ರೂಪದಲ್ಲಿ ಬರುತ್ತಿರುವ ಸ್ಪಂದನದಂತೆಯೇ ಇದೆ; ಆದ್ದರಿಂದ ನಿನಗೆ ಇದನ್ನು ಹೇಳುತ್ತಿದ್ದೇನೆ. ನಿನ್ನ ಆತ್ಮವು ಸಂಪೂರ್ಣ ಕರಗಿಹೋಗಿದೆ ಎಂದು ನೀನು ಬರೆದಿದ್ದೀಯೆ. ಹಾಗೆ ಅನಿಸುತ್ತಿರುವುದಾದರೆ, ಆತ್ಮವು ಕರಗಿ ಇನ್ನೂ ಸಮಾಪ್ತವಾಗಿ ಹೋಗಿಲ್ಲ. ಇದು ಕೊನೆಯ ಮಜಲು. ಆದರೆ ಅದು ಇನ್ನೂ ಹೆಚ್ಚು ಹೆಚ್ಚು ಸೂಕ್ಷ್ಮತರದ್ದಾಗುವುದೆಂದು ನಾನು ಆಶಿಸುತ್ತೇನೆ; ಅದು ಇನ್ನೂ ಉಂಟಾಗಿಲ್ಲ. 'ಸಾಕ್ಷಾತ್ಕಾರ' ಶಬ್ದಕ್ಕೆ ನನ್ನ ಮಟ್ಟಿಗೆ ಯಾವ ಅರ್ಥ ಅಥವಾ ಮಹತ್ತ್ವ ಉಳಿದಿಲ್ಲವೆಂದು ಕೂಡ ಬರೆದಿದ್ದೀಯೆ. ಇದು ಸರಿಯೇ ಇದೆ, ಯಾಕೆಂದರೆ, ಪ್ರೇಮದಲ್ಲಿ ಮುಳುಗಿದ ವ್ಯಕ್ತಿಗೆ ತನ್ನ ಪ್ರೇಮದ ಉದ್ದೇಶವೇನಿತ್ತು ಎಂಬುದು ತಿಳಿದಿರುವುದಿಲ್ಲ.

ಜೂನ್ ೧೫ರ ನಿನ್ನ ಪತ್ರಕ್ಕೆ ಕೂಡ ಉತ್ತರ ಕೊಟ್ಟಂತಾಯಿತು. ನಿನ್ನ ಲಯಾವಸ್ಥೆ ವೃದ್ಧಿಯಾಗುತ್ತಿದೆ. ಅದು ಒಳ್ಳೆಯದಿದೆ; ಮತ್ತೂ ಮುಂದುವರಿಯುತ್ತಿದೆ.

ಅಮ್ಮಾಜಿಯವರಿಗೆ ಮತ್ತೂ ಚೌಬೇಜಿಯವರಿಗೆ ಪ್ರಣಾಮಗಳು. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಶುಭ ಚಿಂತಕ
ರಾಮಚಂದ್ರ

P-4-Books-PM-7-Anantyatre-131



* * * *

ಕ್ರಮ ಸಂಖ್ಯೆ – ೧೩೦ **ಪತ್ರ ಸಂಖ್ಯೆ – ೪೯೬** ಷಾಹಜಹಾನಪುರ
೦೩–೦೭–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸುಖಿಯಾಗಿರು.

ಜೂನ್ ೨೧ ಮತ್ತು ೨೯ರ ನಿನ್ನ ಪತ್ರಗಳು ತಲುಪಿದವು. ನಿನ್ನ ಎಫ್‌–೧ (F1) ಬಿಂದುವಿನ ಯಾತ್ರೆಯನ್ನು ನಾನು ಇನ್ನೂ ಪೂರ್ತಿಗೊಳಿಸಲಾಗಿಲ್ಲ. ಅಲ್ಪ–ಸ್ವಲ್ಪ ಅದನ್ನು ಕುರಿತು ಆಲೋಚನೆ ಅವಶ್ಯ ಮಾಡಿದ್ದೇನೆ. ಅದರ ಫಲವಾಗಿ ಅಲ್ಲಿ ಶಕ್ತಿ ಉಂಟಾಗಲು ಪ್ರಾರಂಭವಾಗಿದೆ. ಈಗ ಯಾತ್ರೆ ಶೀಘ್ರ ಶುರುವಾಗಬಹುದು. ನಿನ್ನಲ್ಲಿ ಒಳ್ಳೆಯ ಲಯಾವಸ್ಥೆ ಮತ್ತು ಅದರ ತುರೀಯ ಸ್ಥಿತಿ ಬರುತ್ತಿದೆ ಹಾಗೂ ಅದು ಶಬ್ದಗಳಿಂದ ವಿವರಿಸಲು ಬಾರದಂಥದಿರುವುದರ ಕಾರಣ, ನಿನ್ನ ಪತ್ರಗಳಿಗೆ ಉತ್ತರ ಕೊಡುವುದು ಬಹಳ ಕಠಿಣ ಕೆಲಸವಾಗಿ ಬಿಟ್ಟಿದೆ. ಶಿರಸ್ಸಿನಲ್ಲಿ ಅನೇಕ ಬಿಂದುಗಳುಂಟು. ಕಂಪನ ಅಥವಾ ರೋಮಾಂಚನ ಉಂಟಾಗುವುದೆಂದರೆ, ಅದು ಜಾಗ್ರತ ಸ್ಥಿತಿಗೆ ಬರುತ್ತಿರುವುದನ್ನು ಸೂಚಿಸುತ್ತದೆ. ಶಿರಸ್ಸಿನ ಎಡಭಾಗದಲ್ಲಿ ಐದು ಬೆರಳುಗಳಿರುವುದರ ಅನುಭವವಾಗುವುದು ಯಾವುದರ ಕಾರಣ ಎಂಬುದು ಈಗ ತಿಳಿಯಿತು. ಇಲ್ಲಿ ಒಂದು ಶಕ್ತಿ ಇದೆ; ಅದರಲ್ಲಿ ಕೋರೈಸುವಂಥ ಪ್ರಕಾಶ ಉಂಟು. ಅದು ಹತೋಟಿಯಲ್ಲಿ ಬರುವವರೆಗೂ, ಗುರುವಿನ ಹಸ್ತ ಅದರ ಮೇಲಿರುತ್ತದೆ. ಅದು ನಿಯಂತ್ರಣದಲ್ಲಿ ಬರುವ ಮೊದಲೇ ಸಡಿಲ ಬಿಟ್ಟರೆ, ಅದು ಅಭ್ಯಾಸಿಗೆ ಹಾನಿ ಉಂಟು ಮಾಡುತ್ತದೆ. ಅಲ್ಲಿ ಸ್ಪಂದನದ ಅನುಭವವಾಗುವುದು, ಅಲ್ಲಿ ಸುಪ್ತ ಸ್ಥಿತಿಯಲ್ಲಿರುವುದು ಈಗ ಜಾಗ್ರತವಾಗಿದೆಯೆಂಬುದನ್ನು ಸೂಚಿಸುತ್ತದೆ. ನೀನು, (ಅಲ್ಲಿರುವ) ಒಂದು ತಗ್ಗಿನ ಬಗ್ಗೆ ಬರೆದಿದ್ದೆ, ಅದಕ್ಕೆ ಉತ್ತರವನ್ನು ಹಿಂದಿನ ಯಾವುದೋ ಪತ್ರದಲ್ಲಿ ಕೊಟ್ಟಿದ್ದೇನೆ. ಶಿರಸ್ಸಿನ ಹಿಂಭಾಗದಲ್ಲಿ ಕಂಪನದ ಅನುಭವವಾಗುವುದು, ಅದೇ ‘ಕೇಂದ್ರ ಮಂಡಲ’ (Central Region) ನಮ್ಮ ವಿಧಾನದಲ್ಲಿ, ಕೆಲವು ಪ್ರತಿಫಲನಗಳ ಅನುಭವ ಬಹುತೇಕ ಎಲ್ಲ ಕಡೆಗಳಲ್ಲಿ ಆಗುತ್ತದೆ. ಎಲ್ಲವೂ ಒಂದೇ ಸತ್ತೆಯಾಗುವುದು (ಏಕರೂಪದ ಅಸ್ತಿತ್ವವಾಗುವುದು), ‘ಸತ್ಯ’ (Reality)ದಲ್ಲಿ ಸಾಕಷ್ಟು ಈಜುವುದರ ಸೂಚಕವಾಗಿದೆ. ‘ನೀನು ಎಂದಾದರೂ ಗುರುವಿನ ಸ್ಮರಣೆ ಮಾಡಿರುವೆಯೋ ಇಲ್ಲವೋ’, ಎಂದು ಒಂದು ವಿಚಿತ್ರ ಪ್ರಶ್ನೆ ಕೇಳಿದ್ದೀಯೆ. *‘ಕಳೆದು ಹೋದವನನ್ನು’ ಸ್ಮರಣೆ ಮಾಡುವುದು, ಸ್ಮರಣೆ ಮಾಡುವವನೂ ಕಳೆದು (ಕಣ್ಮರೆಯಾಗಿ) ಹೋಗುವಂತೆ ಮಾಡುತ್ತದೆ. ನಾಪತ್ತೆಯಾದವನನ್ನು ಹುಡುಕುತ್ತ ಹುಡುಕುತ್ತ, ಹುಡುಕುವವನೂ ನಾಪತ್ತೆಯಾಗಿ ಬಿಡುತ್ತಾನೆ, ಇದು ಶುಭ ಸಮಾಚಾರ. ‘ಅನಂತ’ವನ್ನು ಅಳೆದು ಅಂದಾಜು ಮಾಡುವ ತಯಾರಿ ನಡೆಯುತ್ತಿದೆಯೆಂಬುದರ ಸೂಚಕವಿದು.* ಮತ್ತೆ, ನೀನು ಈ ಪ್ರಶ್ನೆಯನ್ನು ನನಗೆ



ಕೇಳುವುದೆಂದರೆ, ಜನ್ಮಾಂಧನನ್ನೆ ಪ್ರಕಾಶದ ವಿವರಣೆ ಕೊಡಲು ಕೇಳಿಕೊಂಡಂತಾಯಿತು. ‘ನಾನು ಇದ್ದೇನೆ ಎಂಬುದಕ್ಕೆ ಕಾರಣವಾಗಲಿ, ಪ್ರಮಾಣವಾಗಲಿ ಇಲ್ಲ’– ಎಂದು ಬರೆದಿದ್ದೀಯೆ. ಇದು ಸರಿ. ಆದರೆ, ಕಾರಣ ಅಥವಾ ಪ್ರಮಾಣ ಅರ್ಥವಾಗಲಿ ಅಥವಾ ಅರ್ಥವಾಗದಿರಲಿ, ಇನ್ನೂ ‘ನೀನು ಇದ್ದೀಯೆ’ ಎಂಬುದು ನಿಶ್ಚಿತ. ಅಸ್ತಿತ್ವದ ಭಾವ ಬಹುತೇಕ ಅಳಿದು ಹೋಗಿದೆಯೆಂಬುದು ಬೇರೆ ಮಾತು. ಇದು ತನ್ನ ‘ಅಸ್ತಿತ್ವ’ವನ್ನೇ ಆಧ್ಯಾತ್ಮಿಕ ‘ಸ್ಥಿತಿ’. ಜೀವನದ ದಶೆಯಲ್ಲಿ ಇದ್ದವನು ಮಾತ್ರವೇ ‘ದರ್ಶನ’ ಮಾಡಲು ಸಾಧ್ಯ. ಯಾವನು ಅಳಿದು ಹೋದ ದಶೆಯಲ್ಲಿದ್ದಾನೋ ಅರ್ಥಾತ್ ‘ಮೃತ’ ಅವಸ್ಥೆಯಲ್ಲಿದ್ದಾನೋ ಅವನಿಗೆ ಎಲ್ಲ ‘ವರ್ಣ’ವೂ ತೊಳೆದು ಹೋದಂತೆ ಕಾಣುವುದು. ತಾನು ಸ್ವತಃ ಅಳಿದು (ಅಸ್ತಿತ್ವರಹಿತನಾಗಿ) ಹೋದರೆ, ಎಲ್ಲವೂ ಅಳಿದು ಹೋದಂತೆಯೇ ತಿಳಿಯಬಹುದು. ‘ತಾನು ಮುಳುಗಿ ಹೋದರೆ, ಜಗತ್ತೇ ಮುಳುಗಿದಂತೆ’.

ಶ್ರೀ ವಿಶ್ವನಾಥನ್‌ರು ಮಹರ್ಷಿ ರಮಣರ ‘ಮಹಾಯೋಗ’ವನ್ನು ಅಭ್ಯಾಸ ಮಾಡುತ್ತಿದ್ದಾರೆ ಮತ್ತು ಸಂಗಡವೇ ಸಹಜ ಮಾರ್ಗವನ್ನೂ ಅಭ್ಯಾಸ ಮಾಡುತ್ತಾರೆ. ನಾನು ಅವರಿಗೋಸ್ಕರವೂ ಸ್ವಲ್ಪ ನೆರವು ಮಾಡುತ್ತೇನೆ; ಆದರೆ ಅವರಲ್ಲಿ ಸಹಕಾರದ ಕೊರತೆಯಿದೆ. ಉಳಿದವರೆಲ್ಲರೂ ಪ್ರಗತಿ ಹೊಂದುತ್ತಿದ್ದಾರೆ. ಜುಲೈ ೫ಕ್ಕೆ ಡಾ. ಕೆ. ಸಿ. ವರದಾಚಾರಿಯವರ ಪತ್ರ ಬಂದಿದೆ. ಅದರ ನಕಲನ್ನು, ನಿನಗೆ, ಅವರ ಸ್ಥಿತಿಯ ತಿಳಿವಳಿಕೆಗೋಸ್ಕರ ಕಳುಹಿಸುತ್ತಿದ್ದೇನೆ. ಪತ್ರದಲ್ಲಿ ಬದ್ಧತೆಯಿಲ್ಲ, ಮತ್ತು ತುಂಬಾ ‘ಸುರಕ್ಷಿತ’ (ಧೋರಣೆ) ಇರುತ್ತದೆ.

ಇಂತೀ, ನಿನ್ನ ಶುಭ ಚಿಂತಕ
ರಾಮಚಂದ್ರ

ಕಸ್ತೂರಿಯವರ ಟಿಪ್ಪಣಿ : ಯಾವ ಸಮಯದಲ್ಲಿ ಎಫ್‌–೧(F1) ಎಂದು ಶ್ರೀ ಬಾಬೂಜಿಯವರು ತಿಳಿಸಿದ್ದರೋ ಅದೇ ಸಮಯದಲ್ಲಿ ನಾಲ್ಕನೆಯ ವೃತ್ತದಲ್ಲಿ ಪ್ರವೇಶ ಪ್ರಾರಂಭವಾಯಿತು.

* * * *

ಕ್ರಮ ಸಂಖ್ಯೆ – ೧೩೧ **ಪತ್ರ ಸಂಖ್ಯೆ – ೪೯೭** ಷಾಹಜಹಾನಪುರ
೧೪–೦೭–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಸುಖಿಯಾಗಿರು.

ದಿನಾಂಕ ೮–೭–೧೯೫೫ರ ನಿನ್ನ ಪತ್ರ ಕೈ ಸೇರಿತು. ಅದರಲ್ಲಿ, ಕೇಸರ್‌ಳೂ ತನ್ನ ಸ್ಥಿತಿಯ ಬಗ್ಗೆ ಬರೆದಿದ್ದಾಳೆ. ತರ್ಕಶಾಸ್ತ್ರ (Logic) ಮತ್ತು ಮನಃಶಾಸ್ತ್ರ (Psychology) ಪುಸ್ತಕಗಳು ಪ್ರಹ್ಲಾದನ ಬಳಿ ಇವೆ. ಅವುಗಳಲ್ಲಿ ನಾನು ಮನಃಶಾಸ್ತ್ರದ ಪುಸ್ತಕ ಓದುತ್ತೇನೆ. ಕೇಸರ್‌ಳ ಸ್ಥಿತಿ ಬಹಳ ಚೆನ್ನಾಗಿ ನಡೆಯುತ್ತಿದೆ. ಆದರೆ ಅವಳ

P-4-Books-PM-7-Anantyatre-132



ಶರೀರ ವ್ಯೂಹ (System)ದಲ್ಲಿ ಏನೋ ಸ್ವಲ್ಪ ತೊಂದರೆ ಇದೆ, ಅದು ಕ್ರಮೇಣ ಸರಿ ಹೋಗುವುದು. ನಿನ್ನ ಆರೋಗ್ಯ ಸರಿ ಇಲ್ಲವೆಂದು ಕೇಸರಳ ಪತ್ರದಿಂದ ತಿಳಿದು ಬಂದಿತು. ನೀನು ಬ್ರಹ್ಮಾಂಡ ಮಂಡಲದಿಂದ ಶಕ್ತಿಯ ಸೆಳೆದುಕೊಳ್ಳುವುದನ್ನು ನಿಲ್ಲಿಸಿದೆಯೇನು? ಒಂದು ವೇಳೆ ನಿಲ್ಲಿಸಿದ್ದರೆ, ಆ ವಿಧಾನವನ್ನು ಮತ್ತು ಪ್ರಾರಂಭಿಸು. ಒಂದು ವಾರದ ನಂತರ ನಿನ್ನ ಆರೋಗ್ಯದ ಬಗ್ಗೆ ಬರೆದು ತಿಳಿಸು. ಈಶ್ವರೇಚ್ಛೆಯಿದ್ದರೆ ಒಂದು ವಾರದೊಳಗೆ ಸಾಕಷ್ಟು ಸುಧಾರಿಸಿಕೊಳ್ಳಬಹುದು.

ನಿನಗೆ ನನ್ನ ಕೆಲಸದ ಬಗ್ಗೆ ಎಷ್ಟು ಕಾಳಜಿ ಇದೆಯೆಂದರೆ ನನ್ನ ಹೃದಯದಿಂದ ಶುಭ ಹಾರೈಕೆ ಹೊಮ್ಮಿ ಬರುತ್ತದೆ. ನೀನು ವೇತನಕ್ಕೋಸ್ಕರ ಹಣದ ಚಿಂತೆ ಮಾಡಬೇಡ. ಈಶ್ವರನು ಕೊಡಬೇಕೆಂದಿದ್ದರೆ ತಾನೇ ಕೊಡುತ್ತಾನೆ. ಅದಕ್ಕೋಸ್ಕರ ಯಾರನ್ನೂ ಕೇಳುವ ಅಗತ್ಯವಿಲ್ಲವೆಂದು ನಾನೆಣಿಸುತ್ತೇನೆ. ಯಾಕೆ ಎಂದರೆ, ಅವನ ಕಡೆಯಿಂದಲೇ ಪ್ರೇರಣೆಯಾಗುತ್ತಿರುವಾಗ, ಜನರ ಮನಸ್ಸಿನಲ್ಲಿ ತನ್ನಿಂದ ತಾನೇ ಆ ವಿಚಾರ ಉಂಟಾಗುವುದು.

'ಮಂಗ್‌ಬೋ ಭಲೋ ನ ಬಾಪ ಸೇ, ಜೋ ಬಿಧನಾ ರಾಖೇ ಲಾಜ್'

'ತಂದೆಯಿಂದ ಏನನ್ನೂ ಬೇಡಬೇಡ. ಅವನು ತನ್ನ ಆತ್ಮಗೌರವ ಕಾಪಾಡಿಕೊಳ್ಳಲಿ'

ನಿಮಗೋಸ್ಕರ, ನಾನಂತೂ ಕೇವಲ ಆಧ್ಯಾತ್ಮಿಕತೆಯೊಂದನ್ನೇ ಇದುವರೆಗೆ ಬೇಡುತ್ತೇನೆ. ಅದಕ್ಕೋಸ್ಕರ ಕೊಡಬೇಕಾದ ಬೆಲೆ ಯಾವುದೆಂದರೆ, ನಿಜವಾದ ಒಡೆಯನನ್ನು ಒಡೆಯನೆಂದು ತಿಳಿಯುವುದು, ಮತ್ತು ಅವನ ಕೊಡುಗೆಯಲ್ಲಿ ನೆಮ್ಮದಿಯಿಂದ (ಸಹಮತರಾಗಿ) ಇರುವುದು. ನೀನು ಸತ್ಸಂಗದಲ್ಲಿ ಒಂದು ಮಾತನ್ನು ಗಮನಿಸಿರಲಿಕ್ಕಿಲ್ಲ. ಅದೇನೆಂದರೆ, ಸ್ವಾರ್ಥಪರರಾದ ಜನರ ಸಂಖ್ಯೆಯೇ ಹೆಚ್ಚು ಇದೆ, ಮತ್ತು ಅವರು ಯಾವುದೇ ತ್ಯಾಗ ಮಾಡಲು ಇಚ್ಛಿಸುವುದಿಲ್ಲ. ಈಶ್ವರ ಇಚ್ಛಿಸಿದರೆ ಇದು ದೂರವಾಗುವುದು.

'ವಿಸ್ತಾರವಾಗುತ್ತಲೇ ಇಲ್ಲ'– ಎಂದು ನೀನು ಬರೆದಿದ್ದೀಯೆ. ಇದಕ್ಕೆ ಕಾರಣವೆಂದರೆ, ವಿಸ್ತಾರ ಪೂರ್ತಿಯಾಗಿದೆ, ಮತ್ತು ಅದು ಎಷ್ಟು ಸ್ವಾಭಾವಿಕವಾಗಿ ಹೋಗಿದೆಯೆಂದರೆ ಅದು ಅನುಭವಕ್ಕೆ ಬರುತ್ತಿಲ್ಲ. ಭೂಮಿ ಮತ್ತು ಆಕಾಶಗಳಂತೆ ಜಡವತ್ ಆಗಿ ಬಿಟ್ಟಿದ್ದೀಯೆ ಎಂದು ಬರೆದಿದ್ದೀಯೆ ಎಂದರೆ, ಎಲ್ಲ ವಿಚಾರಗಳು, ಕಲ್ಪನೆಗಳು ಅತ್ತ ಸೆಳೆಯಲ್ಪಟ್ಟಿವೆ. ಅದರಿಂದಾಗಿ, ದೇಹದ ಅನುಭೂತಿ ಲುಪ್ತವಾಗಿ ಹೋಗಿದೆ. ನಿನಗೆ ಅದರ ವಿಚಾರ(ನೆನಪು) ಬಂದರೆ, ದೇಹಕ್ಕೆ ಸಾಕಷ್ಟು ಪ್ರಾಣವಾಯು (Oxygen) ಸಿಗುವಂತಾಗಲು ಆಳವಾಗಿ ಉಸಿರಾಟ ಮಾಡು. ನನ್ನ ಸ್ಥಿತಿ ಹೇಗಿದೆಯೆಂದರೆ ಸಾಕಷ್ಟು ದೀರ್ಘ ಸಮಯ ನಾನು ಶ್ವಾಸ ತೆಗೆದುಕೊಳ್ಳುವುದೇ ಇಲ್ಲ. ಒಂದೆರಡು ತಿಂಗಳ ನಂತರ ನನಗೆ ಇದು ನೆನಪಿಗೆ ಬಂದರೆ ಒಂದಿಷ್ಟು ದೀರ್ಘ ಶ್ವಾಸ ತೆಗೆದುಕೊಳ್ಳುತ್ತಿರುತ್ತೇನೆ. ಈಗ, ನಾನೂ ಇದರ ಕಾಳಜಿ ಇಟ್ಟುಕೊಳ್ಳುತ್ತೇನೆ.



ಕೇಂದ್ರ ಮಂಡಲದ ಸಮೀಪ ಯಾವುದೋ ಒಂದು ಧಮನಿ ಒಡೆದು ಹೋದ ಬಗ್ಗೆ ಬರೆದಿದ್ದೀಯೆ. ನನಗೂ ಕೂಡ ಅಭ್ಯಾಸ ಕಾಲದಲ್ಲಿ ಇದು ಅನುಭವವಾಗಿತ್ತು. ಅಲ್ಲಿಯ ಶಕ್ತಿ ಜಾಗ್ರತವಾಗಿದೆಯೆಂದು ಇದರ ಅರ್ಥ. ಬಲಗಾಲಿನ ಅಂಗುಷ್ಠದ ತುದಿಯಲ್ಲಿ ಉರಿ (burning sensation) ಆಗುತ್ತಿದೆಯೆಂದು ಬರೆದಿರುವುದು, ಉರಿತವಲ್ಲ, ಬದಲಿಗೆ ಪ್ರಕ್ಷೇಪಿತ ಉಷ್ಣವಾಗಿದೆ. ಅಲ್ಲಿಯ ಅನ್ಯ ವಸ್ತುವು ದೂರವಾಗಿ ಶುದ್ಧಿಯಾಗುತ್ತಿರುವಾಗ ಇದು ಬರುತ್ತಿರಬಹುದು. ಇದರ ಸಂಬಂಧ ಕೇಂದ್ರ ಮಂಡಲಕ್ಕೆ ಬಹು ದೂರದ್ದಿದೆ. ಅಂಗುಷ್ಠದ ನಟ್ಟ–ನಡುವೆ ಇರುವ ನಾಡಿಯು ಕೇಂದ್ರ ಮಂಡಲಕ್ಕೆ ನೇರವಾಗಿ ಸಂಬಂಧಿಸಿದೆ. ಅಂಗುಷ್ಠದ ನಟ್ಟ ನಡುವೆ ಧ್ಯಾನ ಮಾಡುವುದರಿಂದ ಕೇಂದ್ರ ಮಂಡಲ ತೆರೆದುಕೊಳ್ಳುತ್ತದೆ ಎಂಬುದನ್ನು ತರಬೇತಿಗೆ ಸಂಬಂಧಿಸಿದ ವಿಷಯದಲ್ಲಿ ನಾನು ಎಲ್ಲಿಯೋ ಬರೆದಿದ್ದೇನೆ; ಮತ್ತು ಇನ್ನೂ ಅನೇಕ ವಿಚಾರಗಳನ್ನು ಅದರಲ್ಲಿ ಬರೆದಿದ್ದೇನೆ. ನಿನ್ನ 'ಮಿಷನ್' ಕುರಿತು ಲೇಖನ, ಜಪಾನದಲ್ಲಿ ಜರುಗಿದ 'ದಿ ಥರ್ಡ್ ವರ್ಲ್ಡ್ ರಿಲಿಜನ್'ದ ಸಮಾವೇಶದಲ್ಲಿ ಪ್ರಕಟವಾಯಿತು ಎಂಬುದು ಬಹಳ ಸಂತೋಷದ ಸಂಗತಿ.

ನಿನ್ನ ತಿಳಿವಳಿಕೆಗೋಸ್ಕರ ಮತ್ತು ನೀನು ವಿಚಾರ ಮಾಡಲೆಂದು ಒಂದು ಮಾತು ಬರೆಯುತ್ತೇನೆ. ಅದನ್ನು ನಿನ್ನ ಪತ್ರಗಳ ಜೊತೆಗೆ ಪ್ರಕಟಿಸಬೇಕು. ಇದು ಜಾತಿಯ ಅಭಿಮಾನ ಇಟ್ಟುಕೊಂಡವರಿಗೋಸ್ಕರ ಇದೆ. (ಜಾತಿಯ ಅಭಿಮಾನದಿಂದ ಯಾವ ಲಾಭವೂ ಇಲ್ಲ, ಬದಲಿಗೆ, ಹಾನಿಯೇ ಹೆಚ್ಚು). 'ಬ್ರಹ್ಮ'ಕ್ಕೆ ತಾನು 'ಬ್ರಹ್ಮ' ಎಂಬ ಅರಿವು ಇದ್ದರೆ, ಅದು 'ಬ್ರಹ್ಮ'ದ ಯೋಗ್ಯತೆಗಿಂತ ಕೆಳಕ್ಕೆ ಬೀಳುತ್ತದೆ. ಇಲ್ಲ, 'ಬ್ರಹ್ಮಗತಿ'ದಿಂದ ಬಹು ದೂರವಾಗುತ್ತಲೇ ಇರುತ್ತಾರೆ. ಅಷ್ಟಲ್ಲದೆ, ಇದು ಮಾನವೀಯ ಸಭ್ಯತೆಗೂ ವಿರುದ್ಧವಾದುದು. ಯಾರೇ ಆಗಲಿ, ಹೀಗೆ ಬ್ರಹ್ಮವೇ ಆದರೆ ನನ್ನ ಯಾವ ಆಕ್ಷೇಪವಿಲ್ಲ. ಆದರೆ, ಅವರು ತಮ್ಮದೇ ಅವನತಿಗೆ ಆಸ್ಪದವಾಗುವ ಪರಿಸ್ಥಿತಿ ನಿರ್ಮಿಸಿಕೊಳ್ಳುತ್ತಾರೆ ಎಂಬುದು ಖೇದದ ಸಂಗತಿ. ಆದರೆ ನಾವು ಅಸಹಾಯಕರು. ಬ್ರಹ್ಮ–ವಿದ್ಯೆಯು ಯಾರ ಭಾಗ್ಯದಲ್ಲಿ ಬರೆದಿಲ್ಲವೋ, ಮತ್ತು ಈಶ್ವರನು ಯಾರನ್ನು ತನ್ನೆಡೆಗೆ ಸೆಳೆಯಲು ಇಚ್ಛಿಸುವುದಿಲ್ಲವೋ ಅವರದು ಇದೇ ದಶೆಯಾಗುತ್ತದೆ. ಯಾರ ಸಮುದಾಯದಲ್ಲಿ ಇದು (ಜಾತಿಯ ಅಭಿಮಾನ, ಅಹಂಕಾರ) ಹುಟ್ಟಿಕೊಂಡಿದೆಯೋ, ಅವರ ಹೃದಯ ಕಲ್ಲಾಗಿ ಹೋಗಿದೆ; ಅವರು ಮನುಷ್ಯರಾಗಿ ಉಳಿದಿಲ್ಲ. ಅಲ್ಲದೆ ಅವರು, ಇತರರಿಗೂ ಕೇಡು ಉಂಟುಮಾಡುವಂಥ ಗಾಳಿಯನ್ನು (ವಿಷವನ್ನು) ಹಬ್ಬಿಸುತ್ತಾರೆ.

ಅಮ್ಮಾಜಿಗೆ ನನ್ನ ಪ್ರಣಾಮಗಳನ್ನು ತಿಳಿಸು. ಮತ್ತು ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು.

ನಿನ್ನ ಶುಭ ಚಿಂತಕ
ರಾಮಚಂದ್ರ

# ಅನಂತ ಯಾತ್ರೆ

## ಭಾಗ ೪

(೨೫ ಜುಲೈ ೧೯೫೫ ರಿಂದ ೨೭ ಏಪ್ರಿಲ್ ೧೯೫೮)

P-4-Books-PM-7-Anantyatre-134



# ಎರಡು ಮಾತು

## (ಭಾಗ ೪ಕ್ಕೆ) (ಹಿಂದಿ ಆವೃತ್ತಿಗೆ ಬರೆದದ್ದು)

ಪ್ರಿಯ ಅಭ್ಯಾಸಿ ಬಂಧುಗಳೆ,

'ಇಂದು ಅನಂತಯಾತ್ರೆ'ಯ ನಾಲ್ಕನೆಯ ಭಾಗವನ್ನು ತಮ್ಮ ಕೈಗಿರಿಸಲು ಬಹಳ ಸಂತೋಷವಾಗುತ್ತಿದೆ. 'ಅನಂತ ಯಾತ್ರೆ'ಯಲ್ಲಿ ಅನಂತ ದಶೆಗಳ ಅನುಭವವನ್ನು ತಮ್ಮ ಸಮಕ್ಷ ಪ್ರಸ್ತುತಪಡಿಸುವಾಗ ನನಗೆ ಅನಂತ ಸುಖದ ಅನುಭೂತಿಯಾಗುತ್ತದೆ. ಈ ದೈವೀ ದಶೆಗಳನ್ನು ಓದಿದಾಗ, ಅವುಗಳನ್ನು ಪ್ರಾಪ್ತ ಮಾಡಿಕೊಳ್ಳಬೇಕೆಂಬ ಪ್ರೇರಣೆ ತಮಗೆ ದೊರೆಯುವುದೆಂಬುದು ನನ್ನ ವಿಶ್ವಾಸ.

'ಅನಂತಯಾತ್ರೆ'ಯು ನನ್ನ ಪ್ರಿಯ ಸದ್ಗುರು ಶ್ರೀ ಬಾಬೂಜಿಯವರ ಕೃಪೆ ಮತ್ತು ಅಭ್ಯಾಸಿಗಳ ಕುರಿತಾದ ಅವರ ಸಹಜ ಪ್ರೇಮಗಳ ದಿವ್ಯ ಮಾದರಿಯಾಗಿದೆ. ದೈವಿಕ ಸೌಂದರ್ಯದೊಂದಿಗೆ ನನ್ನನ್ನು ಜೋಡಿಸಿ, 'ಅಂತಿಮ ಸತ್ಯ'ದ ಹೊಸ್ತಿಲಲ್ಲಿ ಪ್ರವೇಶಿಸುವಂತೆ ಮಾಡಿ, ಅವರು 'ಅನಂತ–ದೇಶ'ದ (ಭೂಮಾ), ದ್ವಾರವನ್ನು ತೆರೆದಿಟ್ಟಿದ್ದಾರೆ. ಈಗ ಇದರೊಳಗೆ ತಾವು ಪ್ರವೇಶ ಮಾಡಿ, ತಮ್ಮ ಜೀವನದ ಪರಮ ಲಕ್ಷ್ಯವನ್ನು ಪಡೆಯಲೆಂಬುದು ನನ್ನ ಶುಭಕಾಮನೆಯಾಗಿದೆ.

**– ಕಸ್ತೂರಿ ಚತುರ್ವೇದಿ**



ಕ್ರಮ ಸಂಖ್ಯೆ – ೧೩೨ **ಪತ್ರ ಸಂಖ್ಯೆ – ೫೦೧** ಷಾಹಜಹಾನಪುರ
೨೫–೦೭–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಸಂತೋಷಿಯಾಗಿರು.

ದಿ. ೧೯–೭–೧೯೫೫ರ ನಿನ್ನ ಪತ್ರ ತಲುಪಿತು. ಬ್ರಹ್ಮಾಂಡದಿಂದ ಶಕ್ತಿ ಸೆಳೆದುಕೊಳ್ಳುವುದರಿಂದ ಅವಶ್ಯ ಪ್ರಯೋಜನವಾಗುವುದು. ಬೆಳಗಿನ ಹೊತ್ತು ಖಂಡಿತ ಇದನ್ನು ಮಾಡು. ಮತ್ತು, ಬೇಕಿದ್ದರೆ ದಿನದಲ್ಲಿ ಎರಡು–ಮೂರು ಬಾರಿ ಮಾಡಬಹುದು. ಆದರೆ ಹೀಗೆ ಮಾಡುವಾಗ ಅವಶ್ಯ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದೆಂದರೆ, ಶರೀರಕ್ಕೆ ಎಷ್ಟು ಶಕ್ತಿ ಆವಶ್ಯಕವಿದೆಯೋ ಅಷ್ಟು ಮಾತ್ರ ಬರುತ್ತಿದೆಯೆಂಬ ಸಂಕಲ್ಪವನ್ನು ಸ್ಥಿರಗೊಳಿಸಬೇಕು. ನಾನು ನಿನಗೆ ತಿಳಿಸಿದ ಎರಡನೆಯ ಮಾತು, ಶರೀರದಲ್ಲಿ ಇರುವ ಎಲ್ಲ ರೋಗಗಳೂ ಹಿಂದಿನಿಂದ ಮತ್ತು ಎರಡೂ (ಬಲ–ಎಡ) ಪಾರ್ಶ್ವಗಳಿಂದ ಹೊಗೆಯ ರೂಪದಲ್ಲಿ ಹೊರಟು ಹೋಗುತ್ತಿವೆ ಮತ್ತು ಶರೀರ ಆರೋಗ್ಯವನ್ನು ಪಡೆಯುತ್ತಿದೆ ಎಂದು ಧ್ಯಾನ ಮಾಡಬೇಕು. ಕಣ್ಣು ತೆರೆದುಕೊಂಡೇ ಮಾಡಬಹುದು. ಅದಕ್ಕೇನೂ ಆಕ್ಷೇಪವಿಲ್ಲ. ನಿನ್ನ ಇಡೀ ಸ್ಥಿತಿಯನ್ನು ಅಂದರೆ, ನಿಃಶಕ್ತಿಯು ಹೊರಟು ಹೋಗುತ್ತಿರುವುದೋ ಇಲ್ಲವೋ, ಮತ್ತು ತೊಂದರೆ ಇದ್ದರೆ, ಏನು ತೊಂದರೆ ಮತ್ತು ಎಲ್ಲಿ ಇದೆ ಎಂಬುದನ್ನು ಬರೆದು ತಿಳಿಸು. ನೋವು ಇದೆಯೋ, ಉರಿ ಅಥವಾ ಕಠಿಣತೆ ಇದೆಯೋ, ಇದ್ದರೆ ಎಲ್ಲಿ (ಯಾವ ಭಾಗದಲ್ಲಿ) ಎಂಬುದನ್ನೂ ತಿಳಿಸು.

ಕಂಪನ ಅಥವಾ ತುಡಿತದ ಬಗ್ಗೆ ಬರೆದಿದ್ದೀಯೆ. ಅದು ಎಂದೂ ಸಮಾಪ್ತವಾಗುವುದಿಲ್ಲ, ಆದರೆ ಅವಶ್ಯ ಕಡಿಮೆಯಾಗುತ್ತದೆ. (ಮಂದವಾಗುತ್ತದೆ). ಮಂದವಾಗುವುದು ಉನ್ನತಿಯ ಸ್ಥಿತಿಯ ಸೂಚಕವಾಗಿದೆ. ಆದರೆ ಸಂಪೂರ್ಣ ಮಂದವಾಗುವುದು ನಾವು ಹದಿನಾರು ವೃತ್ತಗಳನ್ನು ದಾಟಿ, ನಮ್ಮ ಅಹಂಕಾರವನ್ನು ಸಂಪೂರ್ಣ ಅಳಿಸಿ ಹಾಕಿದಾಗ ಮಾತ್ರ. ಅಲ್ಲದೆ, ಕಂಪನವು ಎಷ್ಟು ಮಂದವಾಗಿರುವುದೋ ಅಷ್ಟೇ ಪ್ರಮಾಣದಲ್ಲಿ ಶಕ್ತಿಯು ಬೀಜರೂಪದಲ್ಲಿ ಬಂದು ತುಂಬಿಕೊಳ್ಳುತ್ತದೆ. ಮತ್ತು ನಾವು ಮಂದ ಕಂಪನವನ್ನು ಶಕ್ತಿಯುತಗೊಳಿಸಿದರೆ ದೊಡ್ಡ–ದೊಡ್ಡ ಕೆಲಸಗಳನ್ನು ಮಾಡಬಹುದು. ಅದು ಬೀಜ ರೂಪದಲ್ಲಿ (ಸೂಕ್ಷ್ಮ ರೂಪದಲ್ಲಿ) ಬರುವುದೆಂದರೆ, ನಾವು ಮೂಲ ಶಕ್ತಿಯಲ್ಲಿ ಪ್ರವೇಶ ಮಾಡುವುದೇ ಆಗಿದೆ. ತಲೆಯ ಮೇಲೆ ಹಸ್ತವಿರುವುದು ಈಗ ಅನುಭವವಾಗುತ್ತಿಲ್ಲವೆಂಬುದರ ಕಾರಣವನ್ನು ನೀನೇ ಬರೆದಿದ್ದೀಯೆ. ಅದು, ಇಳಿದು ಬರುತ್ತಿರುವ ಕಂಪನ ಅಥವಾ ಶಕ್ತಿ ಅಗತ್ಯವಿರುವುದಕ್ಕಿಂತ ಹೆಚ್ಚು ಬರಲು ಕೊಡುತ್ತಿರಲಿಲ್ಲ. ಹಸ್ತ ಈಗಲೂ ಇದೆ, ಆದರೆ ಎಷ್ಟು ಆವಶ್ಯಕವಿದೆಯೋ ಅಷ್ಟರಮಟ್ಟಿಗೆ ಮಾತ್ರ.

ಕೇಸರ್‌ಳಿಗೆ ೧೫೦ ರೂಪಾಯಿಗಳ ವೇತನವಿರುವ ಕೆಲಸ ಸಿಕ್ಕಿದ್ದು ಒಳ್ಳೆಯದಾಯಿತು. ಕೇಸರ್‌ಳು ಬರೆದುದರ ಬಗ್ಗೆ ಚಿಂತಿಸಬೇಕಾಗಿಲ್ಲ; ಇವೆಲ್ಲವೂ

P-4-Books-PM-7-Ananyatre-135



ಸರಿ ಹೋಗುತ್ತವೆ. ಅವಳು ಸ್ವಯಂ ಶುದ್ಧೀಕರಣದ ಪ್ರಕ್ರಿಯೆಯನ್ನು ಅನುಸರಿಸಲಿ. ಅವಶ್ಯವಿದ್ದರೆ ನೀನು ಅವಳಿಗೆ ತಿಳಿಸು. ಅವಳ 'ಸ್ಥಿತಿ'ಯ ಮಟ್ಟಿಗೆ ಹೇಳುವುದಾದರೆ, ಚೆನ್ನಾಗಿದೆ.

ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೩ **ಪತ್ರ ಸಂಖ್ಯೆ – ೫೦೩** ಷಾಹಜಹಾನಪುರ
೦೩–೮–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದಗಳು.

ದಿ. ೩೦ ಜುಲೈ ೧೯೫೫ರ ನಿನ್ನ ಪತ್ರ ತಲುಪಿತು. ನಿನ್ನ ಪತ್ರದಲ್ಲಿ ವಿಲಕ್ಷಣ ವಿಚಾರಗಳು, ವಿಲಕ್ಷಣ 'ಸ್ಥಿತಿ'ಗಳು ಇವೆ. ಅವೆರಡನ್ನೂ ವಿಲಕ್ಷಣ ಶೈಲಿಯಲ್ಲಿ ಬರೆಯಲಾಗಿದೆ. ಬರೆದ ವ್ಯಕ್ತಿಯೂ ವಿಲಕ್ಷಣ ಹಾಗೂ ಅನನ್ಯ ಎಂಬಂತೆ ತೋರುತ್ತದೆ. ಈ ಪತ್ರ ಬರೆದವಳು ನೀನೇ ಏನು? 'ನಾನು ಹೇಗೋ ಬರೆದೆ, ಆದರೆ ಹೇಗೆ ಎಂಬುದು ನನಗೆ ಗೊತ್ತಿಲ್ಲ' ಎಂದು ನೀನು ಹೇಳಬಹುದು. ನಿನಗೆ ಅದು ಗೊತ್ತಿರಲಿಕ್ಕಿಲ್ಲ, ಯಾಕೆಂದರೆ, ನೀನು ಅದರ ಬಗ್ಗೆ ಅಜ್ಞಳಾಗಿರಬಹುದು. ಅಂದರೆ, ಅರಿವು ಅರಿವನ್ನು ಕೊಟ್ಟು, ಎಲ್ಲೋ ಹೊರಟು ಹೋಗಿರಬಹುದು. ಇದೇ, 'ಸತ್ಯ' (Reality)ದಲ್ಲಿ ಭವ್ಯ ರೀತಿಯಲ್ಲಿ ಪ್ರವೇಶಿಸುವುದೆಂದರೆ ಇದೇ ಆಗಿದೆ. ಅದು ಕೂಡ ಸಮಾಪ್ತವಾಗಿದೆ, ಯಾಕೆಂದರೆ ಅರಿವಿನ ಅರಿವು ಉಳಿದಿಲ್ಲ; ಆದರೆ ಅಜ್ಞತೆಯ ಜ್ಞಾನ ಇನ್ನೂ ಉಳಿದಿದೆ; ನಿನ್ನ ನಾಲ್ಕಾರು ವಾಕ್ಯಗಳನ್ನೋದಿ ಹರ್ಷ ಗದ್ಗದಿತನಾದೆ. ಅವು ನಿನ್ನ ಆಧ್ಯಾತ್ಮಿಕ ಸ್ಥಿತಿಯ ಪೂರ್ಣ ಮಾಹಿತಿಯನ್ನೊದಗಿಸಿದವು. ನಿಜ ಸಂಗತಿಯೇನೆಂದರೆ, ಕೊನೆಯಲ್ಲಿ ಭಕ್ತಿ ಅಥವಾ ಭಕ್ತಿಯ ಕಲ್ಪನೆ ಕೂಡ ಉಳಿಯಿತೆಂದರೆ ನಮಗೆ ಪೂರ್ಣರೂಪದಲ್ಲಿ ಬಿಡುಗಡೆ ದೊರಕಿಲ್ಲ ಎಂದೇ ಅರ್ಥ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೪ **ಪತ್ರ ಸಂಖ್ಯೆ – ೫೦೫** ಷಾಹಜಹಾನಪುರ
೧೪–೮–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದ.



ಅಗಸ್ಟ್ ೮, ೧೯೫೫ರ ನಿನ್ನ ಪತ್ರ ತಲುಪಿತು. ನಿನ್ನ ಯಾವುದೋ ಪತ್ರದಲ್ಲಿ, ಎಫ್–೧(F1) ಬಿಂದುವಿನ ನಿನ್ನ ಆಧ್ಯಾತ್ಮಿಕ ಯಾತ್ರೆ ಪೂರ್ತಿಯಾಯಿತು ಎಂದು ಬರೆದಿದ್ದೀಯೆ; ಆದರೆ ಹಾಗಿಲ್ಲ. ಆ ಸ್ಥಾನದ ಶಕ್ತಿಯು ಅಲ್ಲಿ ಹರಡಿಕೊಂಡಿದೆ; ಆದರೆ ಹೇಗಿತ್ತೋ ಹಾಗೆಯೇ ಇದೆ. ಇನ್ನೂ ಅದು ಯಾತ್ರೆಯ ರೂಪ ಪಡೆದಿಲ್ಲ. ಅಲ್ಪಮಟ್ಟಿಗೆ ಆಗಿದೆಯೇನೋ ನಿಜ. (ಅಲ್ಪಮಟ್ಟಿಗೆ ಏನೋ ಅಗತ್ಯ ಉಂಟಾಗಿದೆ). ಆ ಕಾರಣ ನೀನು ಇತ್ತೀಚೆಗೆ ಸ್ಥಗಿತಳಾಗಿದ್ದೀಯೆ, ಅರ್ಥಾತ್, ಮುಂದುವರಿಯುತ್ತಿಲ್ಲ. ಆದರೆ ಇದರ ಬಗ್ಗೆ ಚಿಂತೆ ಮಾಡಬೇಡ. ಅದು ನನ್ನ ಕೆಲಸ; ನಾನು ಇದನ್ನು ಸರಿಪಡಿಸುತ್ತೇನೆ. ನೀನು ಬರೆದ ಉಳಿದ 'ಸ್ಥಿತಿ'ಯು, ನೀನು 'ಸತ್ಯ'ದಲ್ಲಿ (Reality) ಲಯ ಹೊಂದುತ್ತಿರುವುದನ್ನು ಸೂಚಿಸುತ್ತದೆ. ಪ್ರೇಮೋನ್ಮಾದ (ಭಕ್ತ್ಯುನ್ಮಾದ)ದ ಬಗ್ಗೆ ನೀನು ಒಂದು ಪ್ರಶ್ನೆ ಕೇಳಿರುವಿಯಲ್ಲ; ಅದರ ಉತ್ತರವನ್ನು ಪ್ರೇಮೋನ್ಮತ್ತನಾದವ ಮಾತ್ರ ಕೊಡಲು ಸಾಧ್ಯ, ಅಲ್ಲದೆ, ಪ್ರೇಮೋನ್ಮಾದ (ಭಕ್ತ್ಯುನ್ಮಾದ) ಇರುವಲ್ಲಿ 'ದ್ವೈತ'ವೂ ಇದ್ದೇ ಇರುತ್ತದೆ. ನೀನು ನಿದ್ದೆಯಲ್ಲಿ (ಯಾರೊಂದಿಗೋ) ಮಾತನಾಡುತ್ತಿರುವುದರ ಬಗ್ಗೆ ಬರೆದಿದ್ದೀಯೆ. ನಿದ್ದೆಯಲ್ಲಿದ್ದಾಗ ನಿನ್ನ ವಿಚಾರ ಪ್ರವಾಹವು ನನ್ನ ಕಡೆಗೆ ತಿರುಗಿರಬಹುದು. ಸಾಮಾನ್ಯವಾಗಿ ಜನರು (ಅಭ್ಯಾಸಿಗಳು) ಅಭ್ಯಾಸದ (ಧ್ಯಾನದ) ಸಮಯದಲ್ಲಿ, ಅದರ ಅಲ್ಲಿ–ಇಲ್ಲಿ, ಮಾತನಾಡುವ ಶಬ್ದ (ಧ್ವನಿ) ನನಗೆ ಕೇಳಿಸುತ್ತದೆ. ಸಂದರ್ಭವಶಾತ್, ಈಗಲೂ ಹಾಗೆ ನಡೆಯುತ್ತದೆ. ಉದಾಹರಣೆಗೆ, ಕಾಶ್ಮೀರದಲ್ಲಿ ಗುಂಪಿನ ಕಾಳಗ ನಡೆದಾಗ ಗುಂಡುಗಳ ಸದ್ದು ನನ್ನ ಕಿವಿಗೆ ಬಡಿಯುತ್ತಿತ್ತು. ನಕಾಶೆಯನ್ನು ನೋಡಿ, ನಾನು ಗಮನಿಸಿದಾಗ, ಗುಂಡಿನ ಸದ್ದು ಆ ದಿಕ್ಕಿನಿಂದಲೇ ಬರುತ್ತಿರುವುದು ತಿಳಿಯಿತು. ಎಲ್ಲಾದರೂ ರೇಲ್ವೆ ಆಕಸ್ಮಿಕ ಸಂಭವಿಸಿದರೆ, ಢಿಕ್ಕಿ ಹೊಡೆದ ಸದ್ದು, ಗಾಯಗೊಂಡವರ ಆಕ್ರಂದನ ಕೂಡ ನನ್ನ ಕಿವಿಗೆ ತಲುಪಿದೆ. ಆದರೆ ಇದು ಯಾವಾಗಲೂ ಸಂಭವಿಸುವುದಿಲ್ಲ. ಹೇಗೆ ಮತ್ತು ಯಾಕೆ ಹಾಗಾಗುವುದೆಂಬುದು ತಿಳಿಯದು.

ಕಾಶೀರಾಮ ಅಸಾಮದಲ್ಲಿ ಮಿಷನ್ನಿನ ಸೇವೆ ಬಹಳ ಸೇವೆ ಮಾಡುತ್ತಿದ್ದಾರೆ. 'ಮಿಷನ್ನಿನ' ಧ್ವನಿ ಅಲ್ಲಿಗೆ ತಲುಪಿದೆ. ಆರು–ಏಳು ಮಂದಿ ಸೇರಿದ್ದಾರೆ. ಮತ್ತು ನಿಯಮಿತವಾಗಿ ಧ್ಯಾನಾಭ್ಯಾಸ ನಡೆಸುತ್ತಿದ್ದಾರೆ.

ನಿನ್ನ ಹಿತೈಷಿ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೫ **ಪತ್ರ ಸಂಖ್ಯೆ – ೫೦೮** ಷಾಹಜಹಾನಪುರ
೧೭–೮–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದ.

P-4-Books-PM-7-Ananthyatre-136



ನಾನು ಆಗಸ್ಟ್ ೪ ರಂದು, ಮಾಸ್ಟರ್ ಸಾಹೇಬರ ವಿಳಾಸಕ್ಕೆ, ನಿನಗೆ ಒಂದು ಪತ್ರ ಕಳುಹಿಸಿದ್ದೆ. ಅದರಲ್ಲಿ ನಿನ್ನ ಪತ್ರಕ್ಕೆ ಉತ್ತರವಿದೆ. ಅದು ನಿನಗೆ ತಲುಪಿರಬಹುದು. ಈ ವರ್ಷ ಜನ್ಮಾಷ್ಟಮಿ, ಆಗಸ್ಟ್ ೩೧, ಬುಧವಾರ ಬೀಳುವುದು. ನೀನು ವ್ರತ ಮಾಡುವುದಾದರೆ, ಮಧ್ಯಾಹ್ನ ಹಾಲು ಅಥವಾ ಹಣ್ಣು, ಅಥವಾ ಇನ್ನಾವುದಾದರೂ ಹಗುರಾದ ಆಹಾರ ಸೇವಿಸಬೇಕು ಮತ್ತು ಸೂರ್ಯಾಸ್ತವಾದ ನಂತರ ಹಗುರಾದ ಆಹಾರವನ್ನು ಹೊಟ್ಟೆ ತುಂಬ ತಿನ್ನಬೇಕೆಂದು ನಾನು ಬಯಸುತ್ತೇನೆ. ಇತ್ತೀಚೆಗೆ ನೀನು ತುಂಬ ನಿಃಶಕ್ತಳಾಗಿರುವುದರಿಂದ ವ್ರತ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಅಗತ್ಯವಿಲ್ಲ. ಈಶ್ವರನ ಕೃಪೆಯಿಂದ ಕೇಸರ್‌ಳ ಆಧ್ಯಾತ್ಮಿಕ ಸ್ಥಿತಿ ಬಹಳ ಚೆನ್ನಾಗಿದೆ, ಮತ್ತು ನಿನ್ನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆಯುವ ಪ್ರಯತ್ನ ಮಾಡುತ್ತಿದ್ದಾಳೆಂದು ಅವಳಿಗೆ ಹೇಳು. ಆದರೆ ಕೆಲವು ಪರಿಮಿತಿಗಳಿವೆ. ಆದ ಕಾರಣ, ತನ್ನ ಆಕಾಂಕ್ಷೆಯಿರುವ ಪ್ರಮಾಣದಲ್ಲಿ ಮುಂದುವರಿಯಲು ಸಾಧ್ಯವಾಗುತ್ತಿಲ್ಲ; ಇದು ಎಲ್ಲರಲ್ಲಿಯೂ ಆಗುತ್ತದೆ. ಇದರಲ್ಲಿ ಯಾವುದೇ ಬಾಧೆ ಇಲ್ಲ. ಅಭ್ಯಾಸ ಮತ್ತು ಸತ್ಸಂಗದಿಂದ ಇದು ಕ್ರಮೇಣ ದೂರವಾಗುತ್ತದೆ. ಅವಳ ಆಧ್ಯಾತ್ಮಿಕ ಸ್ಥಿತಿಯೇನಿದೆಯೆಂಬುದನ್ನು ಒಂದು ಪತ್ರದಲ್ಲಿ ನಾನು ಅವಳಿಗೆ ಬರೆದಿದ್ದೇನೆ. ಯಾರಲ್ಲಿಯಾದರೂ ಲಯಾವಸ್ಥೆ ಇದ್ದುದಾದರೆ, ಅವರ ಸ್ಥಾನ ನಿನ್ನದಕ್ಕಿಂತ ನಂತರದ್ದು. ಜನರಲ್ಲಿ ಕೆಲವು ಒಳ್ಳೆಯವರೂ ಇದ್ದಾರೆ; ಇನ್ನು ಕೆಲವರು ಔಪಚಾರಿಕವಾಗಿ ಮಾಡುತ್ತಾರೆ.

ಚೌಬೇಜಿಯವರಿಗೆ ನನ್ನ ಪ್ರಣಾಮಗಳನ್ನು ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳನ್ನು ತಿಳಿಸು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೬ **ಪತ್ರ ಸಂಖ್ಯೆ – ೫೧೯** ಷಾಹಜಹಾನಪುರ
೨೩–೮–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದಗಳು.

ನಿನ್ನ ಪತ್ರ ತಲುಪಿದವು. ಅವುಗಳಿಗೆ ಉತ್ತರ ಕೊಡಬೇಕೆಂದು ಬಯಸಿದ್ದೆ. ಆದರೆ ಅಷ್ಟರಲ್ಲಿ ಅಲಹಾಬಾದಿನಿಂದ ಒಂದು ಪತ್ರ ಬಂದಿತು. ಅವರಿಂದ, ನಿನ್ನ ಆರೋಗ್ಯ ಚೆನ್ನಾಗಿಲ್ಲವೆಂಬ ಸಮಾಚಾರ ತಿಳಿಯಿತು. ಆ ಕಾರಣ ನಾನು ಶನಿವಾರ ಸಂಜೆಗೆ ಬಸ್ಸಿನಿಂದ ಲಖೀಂಪುರ ತಲುಪಬೇಕೆಂದು ನಿರ್ಧರಿಸಿದ್ದೇನೆ. (ಅದು



ಗೋಲಾದ ಮೂಲಕ ಬರುತ್ತದೆ). ಬಸಂತ ಪಂಚಮಿ ೧೬–೨–೫೬ ರಂದು ಆಚರಿಸಲ್ಪಡುತ್ತದೆ.

ನಿನ್ನ ಹಿತ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೭ **ಪತ್ರ ಸಂಖ್ಯೆ – ೫೧೨** ಷಾಹಜಹಾನಪುರ
೨೫–೮–೧೯೫೫

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದಗಳು.

ಆಗಸ್ಟ್ ೧೬ ಮತ್ತು ೧೮ರ ನಿನ್ನ ಪತ್ರಗಳು ತಲುಪಿದವು. ವರದಾಚಾರಿಯವರಿಂದ ಬಂದ ಪತ್ರದ ನಕಲು ನಿನಗೆ ಓದಲು ದೊರೆತಿರಬಹುದು. ಅವರ ಬಗ್ಗೆ ನೀನು ಬರೆದುದು ಸರಿಯೆಂದು ಸಿದ್ಧವಾಯಿತು. ಮತ್ತು, ನನಗೆ ನಿನ್ನ ನೆರವು ಹೆಜ್ಜೆ–ಹೆಜ್ಜೆಗೂ ಬೇಕಾಗುತ್ತದೆ. ಯಾಕೆಂದರೆ, ನಿನ್ನ ಪ್ರತಿಯೊಂದು ಮಾತು ಅನುಭವ (ಸಿದ್ಧ)ವೇ ಆಗಿರುವುದರಿಂದ; ಇಂಥ ವ್ಯಕ್ತಿ ನನ್ನ ಬಳಿ ಇರಲೆಂದು ನಾನು ಬಯಸುತ್ತೇನೆ. ಅದರಿಂದ ಇಂಥ (ಆಧ್ಯಾತ್ಮಿಕ) ವಿಷಯಗಳಲ್ಲಿ ನನಗೆ ಸಹಾಯವಾಗುತ್ತದೆ. ನನ್ನ ಅನುಭವವು ಸರಿಯಾದುದನ್ನೇ ತಿಳಿಸುತ್ತದೆ. ಆದರೆ ಅದನ್ನು ಬೇರೆ ಯಾರಾದರೂ ಸರಿ ಎಂದು ತಿಳಿಸಿದರೆ, ನನ್ನ ಅನುಭವ ಸರಿಯಿದೆಯೆಂಬ ಬಗ್ಗೆ ದುಪ್ಪಟ್ಟು ಖಾತ್ರಿಯಾಗುತ್ತದೆ. ನನ್ನ ಅನುಭವ ಶಕ್ತಿ ಬಹಳ ತೀಕ್ಷ್ಣವಾಗಿತ್ತು. ಮತ್ತು ಸಭವತಃ ಈಗಲೂ ಹಾಗೆಯೇ ಇರಬಹುದು; ಆದರೆ ನಾನು ಹಾಗೆ ಹೇಳಲಾರೆ.

ನಾನು ಅಲ್ಲಿಗೆ ಬರಬೇಕೆಂದು ನೀನು ಬಯಸುತ್ತೀಯೆ ಎಂದು ಅನಿಸುತ್ತದೆ. ನಾನು ಅಲ್ಲಿಗೆ ಬಂದಿದ್ದೆನೋ ಇಲ್ಲವೋ ನೀನೇ ನೋಡಿ ಹೇಳು. ಇನ್ನು, ನಾನು ಅಲ್ಲಿ ಬಂದಿದ್ದೇನೆಂದಾದರೆ, ಯಾವಾಗ ಬಂದಿದ್ದೆನೆಂಬುದನ್ನು ಹೇಳು. ನೀನು ಪತ್ರದಲ್ಲಿ ಬರೆದಿರುವುದು ಪ್ರೇಮದ ಬಹಳ ಉನ್ನತ ಸ್ಥಿತಿಯಾಗಿದೆ ಮತ್ತು ತನ್ನನ್ನೇ ತಾನು ಮರೆಯುವುದರ ಒಂದು ಉತ್ಕೃಷ್ಟ ವಿವರಣೆ (ರುಜುವಾತು) ಆಗಿದೆ. ಎಚ್ಚರವಿರುವುದರ ಸುಳಿವಿಲ್ಲ, ಎಚ್ಚರವಿಲ್ಲದಿರುವುದರ ಅರಿವೂ ಇಲ್ಲ. ಯಾವನು ಇವೆರಡರಿಂದಲೂ ಬೇರ್ಪಟ್ಟು (ಅತೀತ) ಇರುವನೋ ಅವನೊಂದಿಗೆ ನಿನ್ನ ಗಾಢವಾದ ಸಂಬಂಧ ಸ್ಥಾಪಿತವಾಗಿದೆಯೆಂಬುದನ್ನು ಈ ಮಾತು ರುಜುವಾತು ಪಡಿಸುತ್ತದೆ. ಆದರೆ, ಯಾರೊಂದಿಗೆ ನೀನು ಗಾಢ ಸಂಬಂಧ ಬೆಳೆಸಿಕೊಂಡಿರುವಿಯೋ ಅವನೂ ಮರೆತು ಹೋದರೆ ಸತ್ಯ (Reality) (ಅಸಲಿಯತ್) ಒಂದೇ ಉಳಿಯುತ್ತದೆ. ಆದರೂ, ಇದೂ 'ಕೊನೆ' ಅಲ್ಲ. ಪ್ರಗತಿಯು ನಿಂತು ಹೋದಾಗ ಚಡಪಡಿಕೆ ಉಂಟಾಗುತ್ತದೆ ಎಂದು, ಎಫ್‌–೧ (F1)ದ

P-4-Books-PM-7-Anantyatre-137



ವಿಷಯದಲ್ಲಿ ನೀನು ಬರೆದಿರುವುದು ಸರಿ ಇದೆ. ತರಬೇತಿ ಕೊಡುವಾಗ ಕೆಲವೊಮ್ಮೆ ನನ್ನಿಂದಲೂ ತಪ್ಪುಗಳಾಗುತ್ತವೆ. ಅವಶ್ಯವಿರುವುದಕ್ಕಿಂತಲೂ ಹೆಚ್ಚು ಶಕ್ತಿಯನ್ನು (ಪ್ರಾಣಾಹುತಿ) ಕೆಲವೊಮ್ಮೆ ಕೊಟ್ಟು ಬಿಡುತ್ತೇನೆ; ಅದು (ಅಭ್ಯಾಸಿಯಲ್ಲಿ) ಅರಗಿ ಹೋಗುವುದಿಲ್ಲ. ಈಗ (ಇನ್ನು) ನಾನು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಾನು ಈಗ ಆ ಸ್ಥಾನವನ್ನು (F1) ಮೃದುಗೊಳಿಸಿದ್ದೇನೆ. ಅದರ ಫಲವಾಗಿ ನಿನಗೆ ಸ್ವಲ್ಪ ಮೃದುತ್ವ ಮತ್ತು ನಮ್ರತೆಯ ಅನುಭೂತಿಯಾಗಿರಬಹುದು. ಈಗ, ಈಶ್ವರೇಚ್ಛೆಯಿದ್ದರೆ, ನಾನು ಇದೇ ಗತಿಯಲ್ಲಿ (ಆಧ್ಯಾತ್ಮಿಕ) ಯಾತ್ರೆಯ ಸ್ಥಿತಿಯನ್ನು ಉಂಟು ಮಾಡುತ್ತೇನೆ. ಈಗ ನಿನ್ನ ಸ್ಥಿತಿ ತುಂಬಾ ಸೂಕ್ಷ್ಮ ಮತ್ತು ಮೃದು ಆಗಿರಬಹುದು ಮತ್ತು ನಿನಗೆ ಅತ್ಯಂತ ಲಘುತ್ವದ ಅನುಭೂತಿಯಾಗುತ್ತಿರಬಹುದು. ನಾನು ಅದೆಂತು ತಪ್ಪು ಮಾಡುತ್ತೇನೋ ಗೊತ್ತಿಲ್ಲ. ಕೆಲವೊಮ್ಮೆ ಅಭ್ಯಾಸಿಯ ಸಾಮರ್ಥ್ಯಕ್ಕೆ ಸರಿಯಾಗಿ ನನ್ನ ಇಚ್ಛಾಶಕ್ತಿಯನ್ನು ಒಗ್ಗಿಸುವುದರಲ್ಲಿ ಎಡವುತ್ತೇನೆ; ಆ ಸ್ಥಾನದ ಅಗತ್ಯತೆಯ ದೃಷ್ಟಿಯಿಂದ ಅದರ ಸೂಕ್ಷ್ಮತೆಯ ಅಂದಾಜು ಮಾಡುವುದರಲ್ಲಿ ತಪ್ಪಾಗುತ್ತದೆ. ತಪ್ಪಾಗಲು ಇದುವೇ ಕಾರಣವೆಂದೆನಿಸುತ್ತದೆ. ತಪ್ಪೆಸಗಿದುದಕ್ಕೆ ನನಗೆ ಖೇದವೆನಿಸುತ್ತದೆ. ಈಶ್ವರ ಮತ್ತು ಭಕ್ತರ ನಡುವಿನ ವ್ಯತ್ಯಾಸವೆಂದರೆ, ಈಶ್ವರ ಎಂದೂ ತಪ್ಪು ಮಾಡುವುದಿಲ್ಲ, ಭಕ್ತನು (ದಾಸನು) ಯಾವುದೇ ಹಂತದಲ್ಲಿ, ಯಾವುದೇ ಸಮಯದಲ್ಲಿ ತಪ್ಪು ಮಾಡಬಹುದು.

ನಿಷ್ಠಾವಂತ, ಮತ್ತು ಸಮರ್ಥನಾದ ಒಬ್ಬ ಅಭ್ಯಾಸಿ ಮಿಷನ್ನಿನಲ್ಲಿ ಇದ್ದರೂ, ಅವನು ಮಿಷನ್ನನ್ನು ಬಹಳ ವೃದ್ಧಿಗೊಳಿಸಬಲ್ಲ. ಅಯೋಗ್ಯರಾದ ಐವತ್ತು ಮಂದಿಗಿಂತ ಅವನೇ ಲೇಸು. ಈಗ ಕಾಶೀರಾಮನ ಧ್ವನಿ ಇಡೀ ಆಸಾಮದಲ್ಲಿ ಮೊಳಗುವುದು, ಯಾಕೆಂದರೆ ಅವನಲ್ಲಿ ಗಾಢ ಪ್ರೇಮ ಇದೆ. ಆದ್ದರಿಂದ, ನಾನು ಅವಸರದಿಂದ ಮಾಡಿದಂತಾಯಿತೆಂದು ಮಾಸ್ಟರ್ ಸಾಹೇಬರು ಹೇಳಬಹುದೆಂಬ ಅಳುಕು ನನಗಿತ್ತಾದರೂ ನಾನು ಒಮ್ಮೆಲೆ, ಅಲ್ಪ ಸಮಯದಲ್ಲಿಯೇ ಪ್ರಶಿಕ್ಷಕನನ್ನಾಗಿ ತಯಾರು ಮಾಡಿದ್ದೇನೆ.

ಚೌಬೇಜಿಯವರಿಗೆ ಪ್ರಣಾಮ ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದ ತಿಳಿಸು.

ಶುಭ ಚಿಂತಕ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೩೮ **ಪತ್ರ ಸಂಖ್ಯೆ – ೫೧೬** ಷಾಹಜಹಾನಪುರ<br>
೨೯–೮–೧೯೫೫

ಅಗಸ್ಟ್ ೨೩, ೨೬ ಮತ್ತು ೨೭ (೧೯೫೫)ರ ನಿನ್ನ ಮೂರು ಪತ್ರಗಳು ತಲುಪಿವೆ. 'ಸಮುದ್ರದಲ್ಲಿ ಹೋಗುವುದು ಮತ್ತು ನನ್ನ ಕೈಗಳಲ್ಲಿ ಲೀನವಾಗಿ



ಹೋಗುವುದು' ಎಂದು ನೀನು ಬರೆದುದಕ್ಕೆ ಒಳ್ಳೆಯ ಅಂತರರ್ಥ ಉಂಟು. ನಾನು ಮಾಸ್ಟರ್ ಸಾಹೇಬರಿಗೆ ಬಹಳ ಹಿಂದೆ, ಒಂದು ಪತ್ರದಲ್ಲಿ ಈ ಕುರಿತು ಬರೆದಿದ್ದೆ. ಇದು ಈಗ ಒಂದು 'ದರ್ಶನ' ಅಥವಾ ಘಟನೆಯ ರೂಪದಲ್ಲಿ ಅವತರಣಗೊಂಡಿದೆ. ನೀನು ನನ್ನಲ್ಲಿ *'ಲಯ' ಹೊಂದಿದ್ದೀಯೆ;* ಇನ್ನು ನಿನ್ನ *ತಂದೆ–ತಾಯಿಗಳಿಗೆ ಜನಿಸಿದ 'ಕಸ್ತೂರಿ' ಆಗಿ ಉಳಿದಿಲ್ಲ*– ಎಂದು ಇದರ ಅರ್ಥ. ಹೀಗಿರುವಾಗ, ನನ್ನ ಗುರು ಮಹಾರಾಜರು ಮಹಾ ಸಮಾಧಿ ಹೊಂದಿದ ಮೇಲೆ ನನಗೆ ಯಾವ ಆಧ್ಯಾತ್ಮಿಕ ಹಂತವನ್ನು ದಯಪಾಲಿಸಿದರೋ– ಅದು ಈಗ ಏನೇ ಇರಲಿ– ಅದನ್ನು ಬಿಟ್ಟರೆ ನನ್ನ ಮತ್ತು ನಿನ್ನ ಸ್ಥಿತಿಯಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂದು ನನಗನಿಸುತ್ತದೆ. ಅವರು ಮಹಾ ಸಮಾಧಿಯಾದ ನಂತರ ಅವರು ನನಗೆ ಏನನ್ನು ಅನುಗ್ರಹಿಸಿದರೋ ಅದಕ್ಕೆ ಒಂದು ವಿಶೇಷತೆ ಇದೆ. ಆಧ್ಯಾತ್ಮಿಕ ಗುರುವು ಮಹಾ ಸಮಾಧಿಯಾದ ಮೇಲೆ ಅವನಿಂದ ಅಭ್ಯಾಸಿಗೆ (ಶಿಷ್ಯನಿಗೆ) ಸಿಗುವ (ಆಧ್ಯಾತ್ಮಿಕ) ಲಾಭವನ್ನು ಕುರಿತು ನಾನು ಯಾವುದೋ ಒಂದು ಪತ್ರದಲ್ಲಿ ಈ ಮೊದಲು ಬರೆದಿದ್ದೇನೆ. ನಾನು ಹೇಳಬಯಸಿದುದನ್ನು ಆ ಪತ್ರದಲ್ಲಿ ಹೇಳಿದೆ. ಸರಳತೆ ಮತ್ತು ನಿರಾಡಂಬರತೆಯ ಅನುಭೂತಿ ಆಗದಿರುವುದು–ಯಾವಾಗ? ಅದರಲ್ಲಿ ಲಯವಾಗಿ ಹೋದ ನಂತರ. ಇದು, ನಿನ್ನಲ್ಲಿ 'ಅಜ್ಞಾನತಾ' ಸ್ಥಿತಿಯು ಶುರುವಾಗಿದೆಯೆಂಬುದನ್ನು ತಿಳಿಸುತ್ತದೆ. ಅಲ್ಲಲ್ಲ! ಅದರಲ್ಲಿ ಇನ್ನೂ ಹೆಚ್ಚಿನ ಉನ್ನತಿ ಹೊಂದಿದ್ದೀಯೆ (ಎಂಬುದನ್ನು ತಿಳಿಸುತ್ತದೆ). ಈಗ, 'ಅಜ್ಞಾನತೆ'ಯು ಸಮಾಪ್ತಿಯಾದ ನಂತರ (ಆಧ್ಯಾತ್ಮಿಕ) ತರಬೇತಿ ಮುಕ್ತಾಯವಾಗುತ್ತದೆ. ಆದರೆ ನನ್ನ ಕಣ್ಣು ಎಲ್ಲಿಯೂ ನಿಲ್ಲುವುದಿಲ್ಲ. ಅದರಾಚೆಗೂ ಏನೋ ಉಂಟು. ಅದರ ಬಗ್ಗೆ ಈಗ ನಾನು ಬರೆದು ಮಾಡುವುದಾದರೂ ಏನು? ನಾನು ಆ ಕುರಿತು ಬಾಯಿ ತೆರೆದರೆ, ಈ ಕಾಲದ ವೇದಾಂತಿಗಳು (ಪಂಡಿತರು) ನನ್ನನ್ನು ಟೀಕಿಸಬಹುದು, ಆದರೂ ಅವರು ಟೀಕಿಸಿ ಯಶಸ್ವಿಯಾಗಲಾರರು. ಮುಂದೇನು? ನನಗೆ ಮೂರ್ಖತನದ ಬಿರುದು ಕೊಡಬಹುದು; ಯಾಕೆಂದರೆ ಅವರ ಬಳಿ ಇದ್ದುದು ಅದೊಂದೇ. ಆದ್ದರಿಂದ, ನೀನು ಸ್ವತಃ ಅಜ್ಞಾನತೆಯ ಮುಂದಿನ ಸ್ಥಿತಿಯನ್ನು ತಲುಪಿದ ನಂತರ, ಅದರ ಸಮಾಚಾರ ಕೊಡಲೆಂದು ನಾನು ಬಯಸುತ್ತೇನೆ; ಆ ಮೂಲಕ ನಾನು ಈ ಬಿರುದಿನಿಂದ ಬಚಾವಾಗಬಹುದು. ಚೌಬೇಜಿಯುವರು ವೇದಾಂತಿ (ಬೇದಾಂತಿ)ಗಳನ್ನು ಬಹಳ ಗೌರವದಿಂದ ಕಾಣುತ್ತಾರೆ. ಅವರು, ಯಾರಿಗೆ ಹಲ್ಲು ಇಲ್ಲವೋ (ಬೇದಾಂತಿ) ಅವರಿಗೆ ವೇದಾಂತಿ ಎಂದು ತಮಾಷೆಯಾಗಿ ಹೇಳುತ್ತಾರೆ; ಅದು ಸರಿಯೇ ಇದೆ. ಯಾಕೆಂದರೆ, ಹಲ್ಲಿಲ್ಲದವನು ಖಾದ್ಯವನ್ನು ಜಗಿಯಲಾರ; ಜಗಿಯದಿದ್ದಾಗ ಅವನಿಗೆ ಹಿಟ್ಟು ಕೂಡ ಜೀರ್ಣವಾಗದು. ಜಗಿಯದಿದ್ದ ಪದಾರ್ಥ ಹೊಟ್ಟೆಯಲ್ಲಿ ಸೇರಿದಾಗ ಜೀರ್ಣಕಾರಿ ವ್ಯವಸ್ಥೆ ಕೆಟ್ಟು ಹೋಗುತ್ತದೆ. ಸರಿ. ವೇದಾಂತಿಗಳ ಸ್ಥಿತಿ ಇದೇ ಆಗಿದೆ. ಆಧ್ಯಾತ್ಮಿಕತೆಯ ಖಾದ್ಯ ಮತ್ತು ಅದರ ಶಕ್ತಿಯನ್ನು ಗ್ರಹಣ ಮಾಡುವ ಸಾಮರ್ಥ್ಯ ಉಳಿಯಲಿಲ್ಲ. ಬಾಯಿ ಮಾತಿನಿಂದ ಯಾವ ಪ್ರಯೋಜನವೂ ಇಲ್ಲ; ಅದನ್ನು ಪ್ರತ್ಯಕ್ಷ ಬಾಳಿ ಬದುಕಬೇಕು.

P-4-Books-PM-7-Anantyatre-138



**ಸ್ವಾಮಿ ವಿವೇಕಾನಂದ : (ಆದೇಶ) :**

'ಇದು ಅಭಿವ್ಯಕ್ತಿಯ ಒಂದು ಉತ್ಕೃಷ್ಟ ವಿಚಾರ. ನೈಜ ಸ್ಥಿತಿಯಲ್ಲಿ ನೆಲೆಸುವುದೇ ನಿಜವಾದ ಆಧ್ಯಾತ್ಮಿಕತೆ.'

ಅಗಸ್ಟ್ ೨೩ರ ಪತ್ರದಲ್ಲಿ ಕೇವಲ ಒಂದು ಮಾತಿಗೆ ಮಾತ್ರ ಉತ್ತರಿಸುವುದು ಇದೆ. ಯಾವುದೆಂದರೆ, 'ಬಹಳ ವಿಚಾರಗಳು ಬರುತ್ತವೆ' ಎಂದು ನೀನು ಬರೆದಿರುವಿಯಲ್ಲ; ಅದನ್ನು ಕುರಿತು. ಇವುಗಳನ್ನು ನೀನು ಗಮನಿಸಿ ನೋಡಿದರೆ, ನೀನು ಅವುಗಳಿಂದ ಬೇರ್ಪಟ್ಟು ಇದ್ದೀಯೆ ಎಂಬುದು ಗೊತ್ತಾದೀತು. ಈಶ್ವರನ ದಯೆ ಎಷ್ಟೊಂದು ಅಪಾರವಾದುದು ! ಈ ದಶೆ (ಸ್ಥಿತಿ)ಯಲ್ಲಿಯೂ ವಿಚಾರಗಳ ಸರಣಿಗಳ ಪ್ರವಾಹ ಹರಿಯುತ್ತಿರುತ್ತದೆ; ಅದಿಲ್ಲವಾದರೆ ಶರೀರ ಛಿನ್ನ-ಭಿನ್ನವಾಗಿ ಬಿಡಬಹುದು. ಯಾಕೆಂದರೆ, ಸಂಪೂರ್ಣ ಸಂತುಲಿತ ಸ್ಥಿತಿ, ವಿಶ್ವವು ಉದ್ಭವಿಸುವ ಪೂರ್ವದ ಸ್ಥಿತಿ ಉಂಟಾಗುವುದು.

ಅಗಸ್ಟ್ ೨೬ರ ನಿನ್ನ ಪತ್ರಕ್ಕೆ ಉತ್ತರ ಅವಶ್ಯ ಕೊಡುತ್ತೇನೆ. 'ಕಣ-ಕಣವೂ ಚಿರ ಸಮಾಧಿ ಪಡೆದಿದೆ, ಮನಸ್ಸು ಮಹಾ ಶಾಂತಿ ಪಡೆದಿದೆ' ಎಂದು ಬರೆದಿದ್ದೀಯೆ. ಆದರೆ ಮಹಾ ಶಾಂತಿಯ ಅನುಭೂತಿ ಆಗಿದೆಯೇ ಎಂಬುದನ್ನು ಬರೆದಿಲ್ಲ. ಅಂದರೆ, ಅದು ಮನಸ್ಸಿನಲ್ಲಿದೆಯೇನು? ಶಾಂತಿಯನ್ನು ವಿಚಾರವು ಹಿಡಿದುಕೊಳ್ಳಲಾರದಂತಹ ಅನುಭೂತಿ ಉಂಟಾದರೆ, ಆ ಸ್ಥಿತಿ ನೈಜವಾದುದು, ಮತ್ತು ಆಗ 'ಅಜ್ಞಾನತೆ'ಯು ಪೂರ್ಣತೆ ಪಡೆದಂತಾಯಿತು. ನಾನಂತೂ, ಬಂಧು, ಶಾಂತಿಗೆ ಹೆದರುತ್ತೇನೆ. ಶಾಂತಿಯನ್ನು ಪಡೆಯುವುದಕ್ಕೂ ಮೊದಲೇ ತಮ್ಮನ್ನು ಶಾಂತರೆಂದು ಭಾವಿಸುವ ಮಹಾತ್ಮರಿಗೆ ಅಭಿನಂದನೆಗಳಿರಲಿ. "ನಿನ್ನದೇ ಕೈಯನ್ನು ಹಿಡಿದುಕೊಂಡರೂ, ಕೈಯ ಸ್ಪರ್ಶದ ಅನುಭೂತಿ ಪ್ರಜ್ಞೆಯಲ್ಲಿ ಉಂಟಾಗುವುದಿಲ್ಲ ಎಂದು ಬರೆದಿದ್ದೀಯೆ. ಇದು ಉತ್ತಮ ಮಟ್ಟದ ಲಯಾವಸ್ಥೆ. 'ದಶೆ' (ಸ್ಥಿತಿ)ಯನ್ನು (ಆಧ್ಯಾತ್ಮಿಕ) ನಶೆಯು ಮರೆಯಾಗಿಸುವುದಿಲ್ಲ, ತದನಂತರದ ಅಮಲು ಕೂಡ ಮರೆಯಾಗಿರುವುದಿಲ್ಲ"- (ಎಂದು ಬರೆದಿದ್ದೀಯೆ). ನಶೆಯು ದೇಹ ಸಂಬಂಧಿತವಾದುದು. (ಆಧ್ಯಾತ್ಮಿಕ) ಅಮಲು (ಖುಮಾರೀ) ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿದುದು. ನೀನು ಇದಕ್ಕಿಂತ ಎತ್ತರಕ್ಕೆ ಏರಿದ್ದೀಯೆ, ಅಂದ ಮೇಲೆ, ನಶೆ ಎಲ್ಲಿಯದು? ಮದ ಎಲ್ಲಿಯದು? ನೀನು ಕಾಯಸ್ಥಳಾಗಿದ್ದರೆ ನಶೆಯ ಸಂತೋಷ ಅನುಭವಿಸುತ್ತಿದ್ದೆ. ನಿನ್ನಲ್ಲಿ ಉಂಟಾದ ನಶೆ ಕಾಯಸ್ಥರ ಮುಖದಿಂದ ಬಂದುದೇನು?- ಅಲ್ಲ, ಹೃದಯದಿಂದ ಉಕ್ಕುವ ಆನಂದವಾಗಿತ್ತು. ಮುಸ್ಲಿಂ ಸೂಫಿಗಳು 'ನಶೇ-ಮಾರಫತ್', 'ದೈವೀ ಉನ್ಮಾದ (ನಶೆ)' ಎಂಬ ಶಬ್ದ ಬಳಸಿದ್ದಾರೆ; ಅದು ಸರಿಯಲ್ಲ. ಈಗ, ನೀನು ಯಾವ ಸ್ಥಿತಿಯಲ್ಲಿದ್ದೀಯೆ ಎಂದು ನೀನೇ ಹೇಳು.

"ನಾನು ಸ್ವಯಂ ಸತ್ಯದ (Reality) ಪ್ರತಿಬಿಂಬವೋ ಏನೋ ಎಂಬಂತೆ ತೋರುತ್ತದೆ, ಆದರೆ ಯಾಕೆ ಎಂಬುದು ತಿಳಿಯದು. ನಾನು ಸ್ವಯಂ 'ಪ್ರತಿಬಿಂಬ' ಆಗುವುದು ಅಶಕ್ಯ; ಯಾಕೆಂದರೆ 'ಸತ್ಯ' (Reality) ನನ್ನಿಂದಲೇ ಹೊರ ಹೊಮ್ಮಿಸಲ್ಪಟ್ಟದ್ದೇನೋ ಎಂಬಂತಿದೆ"- ಎಂದು ಅಗಸ್ಟ್ ೨೮ರ ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಈ ವಿವರಣೆಯ ಅರ್ಥ ನನಗೆ ತಿಳಿಯಲಿಲ್ಲ. 'ಅಲ್ಲಿ ಹೋಗುವುದೂ ಇಲ್ಲ, ಇಲ್ಲಿಗೆ ಹೋಗುವುದೂ ಇಲ್ಲ, ಸಮುದ್ರವೂ ಇಲ್ಲ, ನಾವೆಯೂ ಇಲ್ಲ....' ಇತ್ಯಾದಿಯಾಗಿ ನೀನು ಬರೆದಿದ್ದೀಯೆ. ಅಭ್ಯಾಸಿಯು 'ಸತ್ಯ'ದಲ್ಲಿ ಲಯ ಹೊಂದಲು ಪ್ರಾರಂಭಿಸಿದಾಗ ಇಂಥ ಅನುಭೂತಿ ಉಂಟಾಗುತ್ತದೆ. ಏನೂ ಬರುವುದೂ ಇಲ್ಲ, ಹೋಗುವುದೂ ಇಲ್ಲ- ಎಂಬುದು ಸರಿಯೇ ಇದೆ. ನಾವು ಎಲ್ಲಿದ್ದೇವೋ ಅಲ್ಲಿಯೇ- ಅಂದರೆ, ಎಲ್ಲಿ ನಾವು ಯಾವಾಗಲೂ ಇದ್ದೆವೊ, ಯಾವಾಗಲೂ ಇರುವೆವೋ ಅಲ್ಲಿ ಇರುತ್ತೇವೆ. ಆತ್ಮವು ಎಷ್ಟು ನಿರ್ಮಲ ಮತ್ತು ಶುದ್ಧವಿರುವುದೆಂದರೆ ಅದರ ಮೇಲೆ ಯಾವ ಬಣ್ಣವೂ ಅಂಟುವುದಿಲ್ಲ, ಎಂಬ ಮಾತು ಸರಿಯೇ ಇದೆ, ಆದರೆ, ಅದರ ಇರುವಿಕೆಯೇ-ಅರ್ಥಾತ್ ಅದರ ಅಸ್ತಿತ್ವದ ಭಾವವನ್ನು ಮನಸ್ಸು ಗ್ರಹಿಸಿದಾಗ, ಅದೇ ಎಲ್ಲಕ್ಕಿಂತ ದೊಡ್ಡ ಪರದೆಯಾಗಿ ಬಿಡುತ್ತದೆ. ಮತ್ತು, ಅದು ಆತ್ಮಕ್ಕೆ ಬಹಳ ಹತ್ತಿರದಲ್ಲಿರುವುದರ ಕಾರಣ, ಅದು ಎಲ್ಲವೂ ತನ್ನದೆಂದು ತಿಳಿದು 'ಅಹಂ'ಕಾರ (ego)ದ ಸುಳಿಯಲ್ಲಿ ಸಿಕ್ಕಿ ಬೀಳುತ್ತದೆ. ಅದನ್ನು ಬುದ್ಧಿ (Intelligence) ಎಂದು ಕರೆಯಿರಿ ಅಥವಾ ಗ್ರಹಣ ಸಾಮರ್ಥ್ಯ ಎಂದಾದರೂ ಹೇಳಿ- ಅದನ್ನು 'ಮನಸ್ಸು' ಎಂದು ಕರೆಯಬಹುದು. ಒಟ್ಟಿನಲ್ಲಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ಆತ್ಮವನ್ನು ಗುರುತಿಸುವಂತೆ ಮಾಡುವುದೂ ಅದೇ ಆಗಿದೆ.

ನಿನ್ನ ಶುಭ ಚಿಂತಕ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೧೫೯ **ಪತ್ರ ಸಂಖ್ಯೆ – ೫೨೦** ಷಾಹಜಹಾನಪುರ
೧೯-೯-೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ ಎಲ್ಲ ಪತ್ರಗಳೂ ಕೈ ಸೇರಿದವು. ನಿನ್ನ 'ಸ್ಥಿತಿ' ಚೆನ್ನಾಗಿದೆ. ಈಶ್ವರನಿಗೆ ಧನ್ಯವಾದವಿರಲಿ, ಇಂದು ಸಂಜೆ ೮-೩೦ಕ್ಕೆ ನಾನು ನಿನ್ನನ್ನು ಜಿ-೧ (G1) ಬಿಂದುವಿನಲ್ಲಿ ಇರಿಸಿದ್ದೇನೆ. ಈಶ್ವರೇಚ್ಛೆ ಇದ್ದರೆ, ನೀನು ಕೇಂದ್ರ ಮಂಡಲದ ಯಾತ್ರೆ ಅವಶ್ಯ ಮಾಡುತ್ತೀಯೆ. ದೇವರು ನಿನಗೆ ಆರೋಗ್ಯ ಕರುಣಿಸಲಿ; ಅದರಿಂದ ನೀನು ಮಿಷನ್ನಿನ ಕೆಲಸವನ್ನು ದಣಿವಿಲ್ಲದೆ ಮಾಡುವುದು ಸಾಧ್ಯವಾಗುವುದು.

ಕೇಸರ್‌ಳು ಇಲ್ಲಿಗೆ ಬಂದಿದ್ದಳು. ನಾನು ಅವಳ ಪಿಂಡ ಪ್ರದೇಶ 'ಯಾತ್ರೆ'ಯನ್ನು ಪೂರೈಸಿದ್ದೇನೆ. ಅವಳ ಸ್ವರೂಪ ಪ್ರತಿಬಿಂಬದ ರೂಪದಲ್ಲಿ ಬ್ರಹ್ಮಾಂಡ ಮಂಡಲದಲ್ಲಿ ಅದಾಗಲೇ ತಲುಪಿತ್ತು. ತಾನು ಬಂದಿರುವುದು ವ್ಯರ್ಥವಾಯಿತೆಂದು ಅವಳು

P-4-Books-PM-7-Anantyatre-139



ತಿಳಿಯದಿರಲೆಂದು, ನಾನು ಅವಳಿಗೆ ಒಂದು ದಿನ ಸತ್ಸಂಗ ಮಾಡಿಸಿದೆ. ಎರಡನೆಯ ದಿನ, ಅಷ್ಟು ನನಗೆ ಇಚ್ಛೆಯಿಲ್ಲದಿದ್ದರೂ, ಅವಳಿಗೆ ಬೈಠಕ್ (ಸತ್ಸಂಗ) ಕೊಟ್ಟೆ. ಪಿಂಡ ಪ್ರದೇಶ ಮೇಲೆ ಅವಳಿಗೆ ಪ್ರಭುತ್ವವನ್ನು ನೀಡುವುದು ನನ್ನ ಬಯಕೆಯಾಗಿತ್ತು. ಅದಕ್ಕೋಸ್ಕರ ತಯಾರಿ ಕೂಡ ಮಾಡುತ್ತಲಿದ್ದೆ. ಆದರೆ ಒಮ್ಮೆಲೆ ಕೊಡಲು, ಅವಳಲ್ಲಿ ಧಾರಣ ಸಾಮರ್ಥ್ಯವಿಲ್ಲದಿರುವುದು ಕಂಡು ಬಂತು. ನಾನು ಅಸಹಾಯಕನಾದೆ; ಮಿಷನ್ನಿನ ಕೆಲಸವನ್ನು ನಾನು ಅವಳಿಗೆ ಒಪ್ಪಿಸಿದ್ದೇನೆ. ಅದನ್ನು ಅವಳು ಸರಿಯಾಗಿ ಮಾಡುತ್ತಿರಬಹುದು.

ನೀನು 'ಸಹಜ–ಸಮಾಧಿ' ಪುಸ್ತಕವನ್ನು ವಿಸ್ತಾರಗೊಳಿಸಿದ್ದೀಯೆ. ನಾನು ಅಲ್ಲಿಗೆ (ಲಖೀಂಪುರಕ್ಕೆ) ಬಂದಾಗ ಅದನ್ನು ಆಲಿಸುತ್ತೇನೆ. ಅನಂತರ ಅದರ ಮುದ್ರಣದ ವ್ಯವಸ್ಥೆ ಅವಶ್ಯ ಮಾಡಬಹುದು.

ಚೌಬೇಜಿಯವರಿಗೆ ನನ್ನ ಪ್ರಣಾಮ ಮತ್ತು ಸೋದರ–ಸೋದರಿಯರಿಗೆ ಆಶೀರ್ವಾದಗಳನ್ನು ತಿಳಿಸು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೦ **ಪತ್ರ ಸಂಖ್ಯೆ – ೫೨೨** ಷಾಹಜಹಾನಪುರ
೨೯–೯–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ಸೆಪ್ಟೆಂಬರ್ ೨೫ರ ನಿನ್ನ ಪತ್ರ ತಲುಪಿದೆ. ನೀನು ಶ್ರೀ ವಿ. ವಿಶ್ವನಾಥನ್‌ರವರ ಬಗ್ಗೆ ಬರೆದಿರುವುದು ಸರಿ ಇದೆ. ಅವರು 'ಮಹಾಯೋಗ'ದಲ್ಲಿ ಮುಳುಗಿದ್ದಾರೆ. ಅದು ಅಹಂಕಾರವನ್ನು ಅಳಿಸಿ ಹಾಕುವ ವಿಧಾನವಾಗಿದೆ. ಆದರೆ ಆಶ್ಚರ್ಯವೇನೆಂದರೆ ಅವರಲ್ಲಿ ಅಹಂಕಾರ ಬೆಳೆಯುತ್ತಿದೆ. ಡಾ. ವರದಾಚಾರಿಯವರ ಪತ್ರ ಬಂದಿದೆ; ಅದರ ನಕಲನ್ನು ಕಳುಹಿಸುತ್ತಿದ್ದೇನೆ. ಆ ಮನುಷ್ಯ ಒಳ್ಳೆಯವರು; ಕೆಲವೊಮ್ಮೆ ಏನೇನೋ ಬರೆದು ಬಿಡುತ್ತಾರೆ. ಅವರ ಹೃದಯದಲ್ಲಿ ಸ್ಥೂಲತೆ (ಕಾಲಿಮಾ) ಗಟ್ಟಿಯಾದ ಸ್ಥಿತಿಯಲ್ಲಿ ಇಲ್ಲ ಎಂಬುದೇನೋ ಸರಿಯೆ. ಆದರೆ ಇನ್ನೂ ಇದ್ದೇ ಇದೆ. ಮತ್ತು ಅವರ ಇಡೀ ಶರೀರ–ವ್ಯೂಹದಲ್ಲಿ ನೀನದನ್ನು ಕಾಣುತ್ತೀಯೆ.

ನಿನ್ನ (ಆಧ್ಯಾತ್ಮಿಕ) ಸ್ಥಿತಿಯನ್ನು ಬರೆದು ತಿಳಿಸಲು ನಿನಗೆ ಶಬ್ದಗಳು ಸಿಗುವುದಿಲ್ಲವಾದರೆ, ನಿನ್ನ ಸ್ಥಿತಿಯನ್ನು ಅರಿಯಲು ನನಗೂ ಶಬ್ದಗಳು ಸಿಗುವುದಿಲ್ಲ. ನಿನ್ನ ಸ್ಥಿತಿಯನ್ನು ನಿನಗೆ ತಿಳಿಯುವಂತೆ ಮಾಡುವ ವಸ್ತು– ಅದು 'ದ್ವೈತ'ವಿತ್ತು. ಅದು ಈಗ ತನ್ನ ಅಸ್ಮಿತೆಯನ್ನು ಬಿಟ್ಟು ತೊಲಗುತ್ತದೆ. ಅಥವಾ ಬಾಡಿ ಹೋಗುತ್ತದೆ;



ಮತ್ತು ಆ ಕಾರಣ ಅದು ನಿನಗೆ ಕಾಣಸಿಗುವುದಿಲ್ಲ. ಆದರೂ ನಿನ್ನ ಸ್ಥಿತಿಯನ್ನು ನಿನಗೆ ಅರುಹುತ್ತಿರುವುದೊಂದು ವಸ್ತು ಏನೋ ಉಂಟು. ಕಬೀರರು ಒಂದು ಕಡೆ ಬರೆದಿದ್ದಾರೆ– *"ಜಹಾಂ ಮಿಲೌನಿ ತಹಾಂ ವಿಚಾರ; ಏಕ ಏಕ ಮೇ ಕಹಾಂ ವಿಚಾರ". ('ದ್ವೈತ' ಎಲ್ಲಿ ಇರುವುದೋ ಅಲ್ಲಿ 'ವಿಚಾರ' ಇದೆ. ಒಂದೇ ಒಂದು ಇರುವಾಗ ವಿಚಾರ ಬರುವುದೆಂತು?).*

'ಮಾಲಿಕ್' (ಗುರು/ಈಶ್ವರ) ನಿನ್ನ ಮನಸ್ಸಿನಲ್ಲಿ (ವಿಚಾರದಲ್ಲಿ) ಬರುತ್ತಿಲ್ಲ– ಎಂಬುದು ಬಹಳ ಒಳ್ಳೆಯದು; ಯಾಕೆಂದರೆ, ನೀನು ಅರಸುತ್ತಿರುವವನು ಅವನು ಸ್ವತಃ ನಿನ್ನೊಳಗೆ ಇದ್ದಾನೆ. ಆದರೆ, ಈ ಸ್ಥಿತಿ ಇನ್ನೂ ಪೂರ್ಣ ರೂಪದಲ್ಲಿ ಉಂಟಾಗಿಲ್ಲ. ನಿನ್ನ ಸ್ಥಿತಿಯಲ್ಲಿ ಯಾವುದೇ ವಿಶೇಷತೆ ನಿನಗೆ ಕಂಡುಬರುತ್ತಿಲ್ಲ, ಬದಲಿಗೆ, ಎಲ್ಲ ಮನುಷ್ಯರಿಗೆ ಸಮಾನವೆಂದೆನಿಸುತ್ತದೆ ಎಂದು ಬರೆದಿದ್ದೀಯೆ. ಈ ಸ್ಥಿತಿ ಸ್ವತಃ ಬಹಳ ಒಳ್ಳೆಯದಾಗಿದೆ. ಈ ದಶೆ ಆರಂಭವಾಗಿದೆಯೇನೋ ನಿಜ, ಆದರೆ ಅದಿನ್ನೂ ಪೂರ್ಣ ಪ್ರಮಾಣದಲ್ಲಿ ವೃದ್ಧಿಗೊಂಡಿಲ್ಲ. ಅಂತಿಮ ಅವಸ್ಥೆಯನ್ನು ಮುಟ್ಟಿದಾಗ ಯಾವ ಸ್ಥಿತಿ ಉಂಟಾಗುವುದೆಂಬುದನ್ನು ನಾನು ಇದುವರೆಗೆ ಮಾತಿನಿಂದ ಎಂದೂ ಹೇಳಿಲ್ಲ. ಅದೊಂದು ರಹಸ್ಯ. ಹೇಳಿದರೆ ಜನರು ನನ್ನ ಬಗ್ಗೆ ಏನು ಭಾವಿಸುವರೋ ಗೊತ್ತಿಲ್ಲ. ಪ್ರಾಯಶಃ ಈ ಮನುಷ್ಯ ಆಧ್ಯಾತ್ಮಿಕತೆಯಲ್ಲಿ ಒಂದು ಹೆಜ್ಜೆ ಕೂಡ ಇಟ್ಟಿಲ್ಲ, ಇವನು ಜನರನ್ನು ಮೋಸಗೊಳಿಸುತ್ತಿದ್ದಾನೆ– ಎಂದು ಅಪ್ಪಣೆ ಹೊರಡಿಸಬಹುದು. ಎರಡನೆಯ ಕಾರಣವೆಂದರೆ, ಈ ಅಂತಿಮ ದಶೆಯನ್ನು ತಲುಪಿದುದರ ಪರಿಣಾಮವನ್ನು ಯಾರಿಗಾದರೂ ತಿಳಿಸಿದರೆ, ಬ್ರಹ್ಮ ವಿದ್ಯೆಯ ಕಡೆಗೆ ಅವರನ್ನು ಆಕರ್ಷಿಸುವಂಥದು ಏನೂ ಮಿಕ್ಕುಳಿಯುವುದಿಲ್ಲ. ಅದನ್ನು ಎಲ್ಲಾದರೂ ಹೇಳಿಯೇ ಬಿಡಬೇಕೆಂದು ಮನಸ್ಸಾಗುತ್ತದೆ. ಆದರೂ, ಅದನ್ನು ಹೇಳದಿರುವುದೇ ಒಳ್ಳೆಯದು; ಯಾರು ಅಲ್ಲಿಗೆ ತಲುಪುತ್ತಾರೋ, ಅವರು ಅದನ್ನು ಅರಿಯುತ್ತಾರೆ. ವೇದಗಳಲ್ಲಿ, ಅಥವಾ ಋಷಿಗಳ ಗ್ರಂಥಗಳಲ್ಲಿ ಕೂಡ; ಈ ಕಾರಣಕ್ಕಾಗಿಯೆ, ಇದರ ಒಂದು ಹನಿಯಷ್ಟನ್ನೂ ಕೊಟ್ಟಿಲ್ಲದಿರುವ ಸಂಭವವಿದೆ, ಅಥವಾ, ನನ್ನಂಥ ಅಕಿಂಚನನಿಗೋಸ್ಕರ ಈಶ್ವರನು ಇದನ್ನು ಕಾಯ್ದಿರಿಸಿ ಇಟ್ಟಿರಲೂಬಹುದು; ಯಾಕೆಂದರೆ, ದೊಡ್ಡ ವ್ಯಕ್ತಿಗಳಿಗೋಸ್ಕರ ದೊಡ್ಡ ದೊಡ್ಡ ವಿಚಾರಗಳು, ಮತ್ತು ಚಿಕ್ಕ ವಿಚಾರಗಳು ನನ್ನಂಥ ಸಾಮಾನ್ಯ ಮನುಷ್ಯನಿಗೋಸ್ಕರ, ಇರಬಹುದು. ಅದೂ ಸರಿಯೆ. ಒಬ್ಬ ಭಿಕಾರಿ ಬೇಡಿದಾಗ ಅವನಿಗೆ ಮುಡಿಗಾಸನ್ನೋ ಅಥವಾ ರೊಟ್ಟಿಯ ಒಂದು ತುಣುಕನ್ನೋ ಕೊಡುತ್ತಾರೆ, ಮತ್ತು ಒಬ್ಬ ದೊಡ್ಡ ವ್ಯಕ್ತಿ ಬಂದು ಬೇಡಿದರೆ ಅವನಿಗೆ ಸಾವಿರಗಟ್ಟಲೆಯ ಚೆಕ್ಕನ್ನು ಜನರು ಕೊಡುತ್ತಾರೆ. 'ಎಲ್ಲವೂ ಕೈಯಿಂದ ಹೊರಟು ಹೋಯಿತೇನೋ ಎಂದು ನಿನಗೆ ಅನಿಸುತ್ತದೆ' ಎಂದು ಬರೆದಿದ್ದೀಯೆ. ಇದರ ಅರ್ಥವನ್ನು, ಎಲ್ಲವೂ ಕೈಯಲ್ಲಿ ಬಂದಿತು ಎಂದೂ ತಿಳಿಯಬಹುದು, ಅಥವಾ, ಯಾವುದನ್ನು ನೀನು ನಿನ್ನ ಹಸ್ತದಲ್ಲಿ ಹಿಡಿದಿರುವಿಯೋ ಅದರ ಭಾರದಿಂದ ಕೈ ಖಾಲಿಯಾಯಿತು ಎಂದೂ ತಿಳಿಯಬಹುದು. ನಿನ್ನಲ್ಲಿ

ಒಂದು 'ನೋವು' (ಅಭೀಪ್ಸೆ) ಉಳಿದಿದೆ, ಅದನ್ನು ಹೇಳಲೂ ಆಗದು, ಹೇಳದಿರಲೂ ಆಗದು– ಎಂದು ನೀನು ಬರೆದಿದ್ದೀಯೆ. ಅದೇ (ಆ ವೇದನೆಯೇ) ನಿನ್ನನ್ನು (ಆಧ್ಯಾತ್ಮಿಕವಾಗಿ) ಮುನ್ನಡೆಸುತ್ತಿದೆ. ಅದು ತನ್ನ ಕಾರ್ಯವನ್ನು ಪೂರ್ಣಗೊಳಿಸಿದ ನಂತರವಷ್ಟೇ ಹೊರಟು ಹೋಗುವುದು. ಅಂತಿಮವಾಗಿ ಅದೂ ಕೂಡ ಉಳಿಯುವ ಅಗತ್ಯವಿಲ್ಲ.

ಕೇಸರ್‌ಳ ಪತ್ರ ಬಂದಿದೆ. ನಾನು ಯಾವ ಮಟ್ಟದವರೆಗೆ ಕೊಡಲು ಬಯಸಿದ್ದೆನೋ, ಆ ಮಟ್ಟದ ಧಾರಣ ಸಾಮರ್ಥ್ಯ ಅವಳಲ್ಲಿ ಇದ್ದಿಲ್ಲವೆಂದು, ಅವಳ ಮನಸ್ಸು ಕುಗ್ಗಬೇಕಾಗಿಲ್ಲ. ಈಶ್ವರೇಚ್ಛೆಯಿದ್ದರೆ, ಅದು ಕ್ರಮೇಣ ಉಂಟಾಗುವುದು. ಜಪಾನಕ್ಕೆ ಕಳುಹಿಸಲೆಂದು ನಾನು ಫೋಟೋ ತೆಗೆಸಿದ್ದೇನೆ. ನಾನು ಎಲ್ಲ ಫೋಟೋಗಳನ್ನು ಕಳುಹಿಸುತ್ತೇನೆ. ಮಾಸ್ಟರ್ ಸಾಹೇಬರು ಜಗತ್ತಿನ ಪ್ರತಿಯೊಂದು ಭಾಗದಲ್ಲಿಯೂ– ಹೆಚ್ಚಿಗೆ ಅಲ್ಲದಿದ್ದರೂ ಒಬ್ಬಿಬ್ಬರಿಗಾದರೂ ಮಿಷನ್ನಿನ ಹೆಸರು ತಲುಪುವಂತೆ ಮಾಡಿದ್ದಾರೆ. ಇಷ್ಟು ನಮ್ಮ ಕೈಯಲ್ಲಿತ್ತು. ಮುಂದಿನದು ಈಶ್ವರನ ಕೈಯಲ್ಲಿದೆ.

ಚೌಬೇಜಿಯವರಿಗೆ ಪ್ರಣಾಮ. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೧ **ಪತ್ರ ಸಂಖ್ಯೆ – ೫೨೫** ಷಾಹಜಹಾನಪುರ
೦೨–೧೧–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ಅಕ್ಟೋಬರ್ ೨೨ ಮತ್ತು ೨೯ರ ನಿನ್ನ ಪತ್ರಗಳು ಕೈ ಸೇರಿದವು. ಡಾ. ವರದಾಚಾರಿಯವರಲ್ಲಿ ಅಂಧಕಾರ ಮತ್ತು ಸ್ಥೂಲತೆ (ಕಾಲಿಮಾ) ಈಗ ಬಹಳಷ್ಟು ಕಡಿಮೆ ಇದೆ. ನೀನು ಅವರ ಮೇಲೆ ಬಹಳ ಪರಿಶ್ರಮಪಟ್ಟು ಕೆಲಸ ಮಾಡಿದ್ದೀಯೆ. ಅವರನ್ನು ಶುದ್ಧಗೊಳಿಸಲು ಯಾವ ವಿಧಾನವನ್ನು ಅನುಸರಿಸಬೇಕೆಂಬ ಬಗ್ಗೆ ನಾನೂ ಬಹಳ ಯೋಚಿಸಿದ್ದೆ. ಇದನ್ನು ದೂರ ಮಾಡಲು ನಾನೂ ಕೂಡ ಅನೇಕ ತಿಂಗಳುಗಳಿಂದ ಪರಿಶ್ರಮ ಪಡುತ್ತಿದ್ದೆ. ಅವರ ಹೃದಯ ಕಗ್ಗತ್ತಲಿನ ಬಾವಿಯಂತಿತ್ತು. ಈಗ, ಗುರು ಮಹಾರಾಜರ ಕೃಪೆಯಿಂದ, ಅದು ಬಹಳ ಮಟ್ಟಿಗೆ ಕಡಿಮೆಯಾಗಿದೆ. ತೀರ ಇತ್ತೀಚೆಗೆ, (ಅದನ್ನು ನಿವಾರಿಸುವ) ಒಂದು ವಿಧಾನ ನನಗೆ ಹೊಳೆಯಿತು; ಏನೆಂದರೆ, ಅಂಧಕಾರದ ಕಾರಣವೇನಿತ್ತೋ ಅದರ ಮೇಲೆ ಕೇಂದ್ರೀಕರಿಸಿ ಅದನ್ನು ದೂರ ಮಾಡಬಹುದು ಎಂಬುದು. ಆದ್ದರಿಂದ, ನಾನು



ಅದೇ ರೀತಿ ಮಾಡಿದೆ, ಅವರಿಗೆ ಲಾಭವೂ ಆಯಿತು. ಈ ಹಿಂದೆ, ಅಂಥ ವಿಧಾನಗಳು ನನಗೆ ಕೂಡಲೇ ಹೊಳೆಯುತ್ತಿದ್ದವು; ಆದರೆ ಈಗ ಅದು ನನ್ನ ಮನಸ್ಸಿಗೆ ಹೊಳೆಯಲು ತಿಂಗಳುಗಳೇ ಬೇಕಾದವು ಎಂದು ಆಶ್ಚರ್ಯವೂ ಆಯಿತು. ನಿಃಶಕ್ತಿಯ ಕಾರಣದಿಂದಾಗಿ ಮೆದುಳು ಕೆಲಸ ಮಾಡುವುದಿಲ್ಲ.

ನಿನ್ನ ಪತ್ರಗಳಿಗೆ ಉತ್ತರ ಬರೆಯುವುದು ಬಹಳ ಕಠಿಣವಾಗುತ್ತಿದೆ. ಯಾಕೆಂದರೆ, ಮುಂದೆ ಲಯಾವಸ್ಥೆ ಮತ್ತು ಅದರ ತುರಿಯಾವಸ್ಥೆಗಳು (ಅದಕ್ಕೆ ಫಾರಸಿಯಲ್ಲಿ 'ಬಕಾ' ಎಂದು ಕರೆಯುತ್ತಾರೆ) ಶುದ್ಧ ರೂಪದಲ್ಲಿ ಪದೇ ಪದೇ ಬರುತ್ತಿರುತ್ತವೆ; ಮತ್ತು ಯಾವಾಗ ಬರುತ್ತವೆ ಎಂಬುದಕ್ಕೆ ಕೊನೆ ಇಲ್ಲ. 'ಅಪರಿವರ್ತನ–ದಶೆ' ಉಂಟಾಗುವುದು 'ಬಕಾ'ವಸ್ಥೆಯ ಕೊನೆಯ ದಶೆಯಾಗಿದೆ. ಅನಂತರ ಯಾವ ತಳಮಳ (Craving)ವೂ ಇರುವುದಿಲ್ಲ, ಯಾವ ದಶೆ (ಸ್ಥಿತಿ) ಕೂಡ ಇರುವುದಿಲ್ಲ. ಇದರ ನಂತರ ಮತ್ತೇನೂ ಉಳಿಯುವುದಿಲ್ಲವೆಂಬಂಥ ಉನ್ನತ ಸ್ಥಿತಿ ಇದು. ಎಲ್ಲರಿಗೂ ಈ ಸ್ಥಿತಿ ಪ್ರಾಪ್ತವಾಗಲೆಂದು ಈಶ್ವರನು ಕೃಪೆ ಮಾಡಲಿ. ಆದರೆ ಇರುವ ಕಷ್ಟವೇನೆಂದರೆ, ನನ್ನ ಸಹ ಬಾಂಧವರಿಗೆ ನಾನು ಕೂಗಿ ಹೇಳುತ್ತಲೇ ಇದ್ದರೂ ಯಾರೂ ಅದಕ್ಕೆ ಜೋರು ಕೊಡುವುದಿಲ್ಲ. ಕ್ಷಣ ಮಾತ್ರಕ್ಕೆ ನಾನು ಅವರಿಗೆ ಈ ದಶೆಯನ್ನು ತೋರಿಸಲು ಕೂಡ ನಾನು ಸಿದ್ಧನಿದ್ದೇನೆ. ಆದರೆ ಅದು ಅತ್ಯಂತ ಕಠಿಣ (ಅಪಾಯಕರ) ಕೆಲಸ. ಯಾಕೆಂದರೆ, ಅವರ ಬಂಧನಗಳ ಮೇಲೆ ನಾನು ಹಿಡಿತ ಇಟ್ಟುಕೊಳ್ಳಬೇಕಾಗುವುದು; ಅದಿಲ್ಲವಾದರೆ, ಅವರ ಆತ್ಮವು ಮೂಲದಲ್ಲಿ (ಸತ್ಯದಲ್ಲಿ) ಹೋಗಿ ಲೀನವಾಗಿ ಬಿಡುವುದು. ಅದೇಕೆಂದರೆ, ಒಬ್ಬ ಯಾತ್ರಿಕ ಎಷ್ಟು ದೂರ ಬೇಕಿದ್ದರೂ ಹೋಗಿರಲಿ, ಮನೆ ಅವನ ಎದುರಿಗೆ ಬಂದಿದ್ದರೆ, ಅವನು ಅದನ್ನು ಪ್ರವೇಶಿಸಲು ಬಯಸಲೇ ಬೇಕು. ಇವೆಲ್ಲವನ್ನೂ ಮಾಡಬಹುದೆನ್ನೋಣ, ಆದರೂ ಇದಕ್ಕೆ ಸಿದ್ಧರಾಗಿರುವುದು ಕಂಡು ಬರುವುದಿಲ್ಲ. ನಾನು ಆಗಾಗ, ಸಾಮಾನ್ಯ ಚಿಕ್ಕ–ಪುಟ್ಟ ಸ್ಥಿತಿಗಳನ್ನು ಜನರಿಗೆ ತೋರಿಸಿದ್ದೇನೆ– ಅದರಿಂದಲಾದರೂ ಅವರಿಗೆ ಬ್ರಹ್ಮ ವಿದ್ಯೆಯಲ್ಲಿ ಆಸಕ್ತಿ ಬೆಳೆಯಬಹುದೆಂದು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. 'ನಾನು 'ಸ್ಥಿತಿ'ಗೆ (condition) ಅಂಟಿಕೊಳ್ಳುವುದರಲ್ಲಿ ವಿಫಲಳಾಗುತ್ತೇನೆ'– ಎಂದು ನೀನು ಬರೆದಿದ್ದೀಯೆ. ಇದು ಹಿಂದೊಮ್ಮೆ ಕೂಡ ಆಗಿತ್ತು. ಆದರೆ ಈ ಸಲ, ಇದು ನಿನ್ನ ನ್ಯೂನತೆ ಅಲ್ಲ. ಹೇಗೆ ನಿನ್ನನ್ನು ಮುಂದಕ್ಕೊಯ್ಯಬೇಕೆಂದು ನನಗೆ ಇನ್ನೂ ನಿರ್ಧರಿಸಲಾಗಿಲ್ಲ. ಇಲ್ಲಿಯವರೆಗೆ ಹೇಗೆ ನಿನಗೆ ಮಾರ್ಗದರ್ಶನ ಮಾಡುತ್ತ ಬಂದೆನೋ ಅದೇ ರೀತಿಯಲ್ಲಿ ಮುಂದುವರಿಸಿದರೆ, ನನಗೆ ದೊರಕಿದ್ದ ಸಂಗತಿಗಳೇ ಎಲ್ಲವೂ ನಿನ್ನಲ್ಲಿಯೂ ಬರುತ್ತ ಹೋಗುತ್ತವೆ. ಅದರಲ್ಲಿಯೂ ನನ್ನ ಆಕ್ಷೇಪ (ತೊಂದರೆ) ಏನಿಲ್ಲ. ಆದರೆ ಒಂದು ಪ್ರಶ್ನೆ ಎದುರಾಗುತ್ತದೆ– ಒಂದೇ ಮಟ್ಟದ ಇಬ್ಬರು ವ್ಯಕ್ತಿಗಳು ಏಕಕಾಲದಲ್ಲಿ ಇರಲು ಸಾಧ್ಯವಿಲ್ಲ. ಅಂಥ ಎರಡನೆಯ ವ್ಯಕ್ತಿ ಅಕಸ್ಮಾತ್ ತಯಾರಾದನೆಂದರೆ, ಮೊದಲಿನವನ ಆವಶ್ಯಕತೆ ಉಳಿಯುವುದಿಲ್ಲ; ಅವನು ಜಗತ್ತನ್ನು ತ್ಯಜಿಸಿ ಹೋಗಬೇಕಾಗುವುದು.

P-4-Books-PM-7-Anantyatre-141



ಯಾವ ವಿಶೇಷ ವ್ಯಕ್ತಿ ಈಗ ಕೆಲಸ ಮಾಡುತ್ತಿರುವನೋ ಅವನಂಥವನು ಇನ್ನೂ ಸಾವಿರಾರು ವರ್ಷಗಳವರೆಗೆ ಬರಲಿಕ್ಕಿಲ್ಲ– ಎಂದು ಗುರು ಮಹಾರಾಜರು ನನಗೆ ಹೇಳಿದ್ದಾರೆ. ಅದೂ ಅಂಥ ತೊಂದರೆಯ ಮಾತಲ್ಲ ಎನ್ನೋಣ. ವಿಶೇಷ ರೀತಿಯಲ್ಲಿ ಪ್ರಾರ್ಥನೆ ಮಾಡಿ, ಒಬ್ಬರಾದ ನಂತರ ಒಬ್ಬರಂತೆ ಕೆಲ ಕಾಲದವರೆಗೆ ವಿಶೇಷ ವ್ಯಕ್ತಿಗಳು ಬರುವಂತೆ ಮಾಡಬಹುದು. ನಾನು ಇದುವರೆಗೆ ನಿನಗೆ ಮಾರ್ಗದರ್ಶನ ಮಾಡಿ ಮುನ್ನಡೆಸಿದ ರೀತಿಯನ್ನೇ ಮುಂದುವರಿಸುತ್ತಿರುವಂತೆ ನನ್ನ ಹೃದಯ ನನ್ನನ್ನು ವಿವಶಗೊಳಿಸುತ್ತದೆ. ಇದುವರೆಗೆ ನಾನು ನಿನ್ನನ್ನು ಮುಂದೆ ನಡೆಸಿಕೊಂಡು ಬಂದುದರ ಪರಿಣಾಮವಾಗಿ ನಿನ್ನಲ್ಲಿ 'ಅವತಾರಿಯ ಸ್ಥಿತಿ' ಆರಂಭವಾಗಿದೆ. ನೀನು ಗಮನ ಕೊಟ್ಟು ನೋಡಿಕೊಂಡರೆ, ಈಶ್ವರೀಯ ಶಕ್ತಿಗಳು ನಿನ್ನಿಂದ ಆದೇಶ ಪಡೆಯಲು ಮತ್ತು ಕೆಲಸ ಮಾಡಲು ಪ್ರತೀಕ್ಷೆಯಲ್ಲಿವೆ ಎಂಬುದು ಗೊತ್ತಾಗುವುದು. ಇದುವರೆಗೆ ನಾನು ಈ ವಿಷಯವನ್ನು ಬರೆದಿರಲಿಲ್ಲ. ಈಗ ಬರೆಯುತ್ತಿದ್ದೇನೆ. ನೀನು ಈಶ್ವರೀಯ ಶಕ್ತಿಗಳಿಂದ ಕೆಲಸ ತೆಗೆದುಕೊಳ್ಳಲು ಅಗತ್ಯವಿದ್ದ ಸಹಜ ಬುದ್ಧಿ ಶಕ್ತಿಯನ್ನು ನಾನು ಇದುವರೆಗೆ ನಿನ್ನಲ್ಲಿ ವೃದ್ಧಿಪಡಿಸಿಲ್ಲ. ಅದರತ್ತ ನಿನ್ನ ಗಮನವನ್ನು ತಿರುಗಿಸಿಲ್ಲ.

'ಕಂಪನ (Vibrations)ವಾದಾಗ, ಗುರುವಿನ ಅಂತರ್ಮನಸ್ಸಿನಲ್ಲಿ (Subconscious) ಲಯವಾಗಿ ಹೋದಂತೆನಿಸುತ್ತದೆ' ಎಂದು ಬರೆದಿದ್ದೀಯೆ. ಇದು ಸರಿಯಿದೆ ಎಂದೆನಿಸುತ್ತದೆ. 'ನನ್ನ ಶಕ್ತಿಯು ನೆನಪಿಗೆ ಬರುವುದಿಲ್ಲ' ಎಂದು ನೀನು ಬರೆದುದು, ಫೋಟೋ ನೋಡಿ ನಿನ್ನನ್ನು ನೀನೇ ಗುರುತಿಸಲಾಗದುದು– ಇವೆಲ್ಲ ಈ ಮೇಲಿನ ಮಾತುಗಳು, ಕಸ್ತೂರಿ ಈ ಜಗತ್ತಿಗೆ ಏನಾಗಿ ಬಂದಿದ್ದಳೋ, ಅದು ಅಳಿದು ಹೋಗಿ, ಮೊದಲಿನಂತೆ–ಅರ್ಥಾತ್–ಬರುವ ಪೂರ್ವದಲ್ಲಿ ಏನಿದ್ದಳೋ ಅದೇ ಆದಳು ಎಂಬುದನ್ನು ರುಜುವಾತುಪಡಿಸುತ್ತವೆ; ಆದ್ದರಿಂದಲೇ ತನ್ನನ್ನೇ ತಾನು ಗುರುತಿಸಿಕೊಳ್ಳುತ್ತಿಲ್ಲ. ವಿಚಾರಗಳ ಸರಣಿ ಬರುವುದನ್ನು ಬರೆದಿದ್ದೀಯೆ– ಈ ವಿಚಾರಗಳು ನಿನ್ನವಲ್ಲ. ಬದಲಿಗೆ, ಜನರು ಮಾಡಿದ ವಿಚಾರಗಳ ಸೂಕ್ಷ್ಮ ರೂಪಗಳು. ಅವು ನಿನಗೆ ಬಂದು ತಾಗುತ್ತಿರುತ್ತವೆ. ನನಗೂ ಈ ಸ್ಥಿತಿಯು ಬಹಳ ದಿನಗಳ ಕಾಲ ಇದ್ದಿತು. ಇನ್ನೂ ಉನ್ನತ ಸ್ಥಿತಿಗೆ ಹೋದ ಮೇಲೆ ಅವು ಬಂದು ಬಡಿಯುವುದು ನಿಂತು ಹೋಗುತ್ತವೆ. ಆದರೂ, ಎದುರಿಗೆ ಬರುತ್ತಿರುವ ಪರಿಸರಕ್ಕೆ ಅನುಗುಣವಾಗಿ ವಿಚಾರಗಳು ಉಂಟಾಗುತ್ತವೆ; ಆದರೆ, ಹೆಚ್ಚು ಪಕ್ಷ ಈ ವಿಚಾರಗಳು ಸ್ವಂತದ್ದಾಗಿರುವುದಿಲ್ಲ.

ಅಮ್ಮಾಜಿಗೆ ಪ್ರಣಾಮಗಳು. ಸೋದರ–ಸೋದರಿಯರಿಗೆ ಆಶೀರ್ವಾದಗಳು. 'ಆಸಾಂ–ಸಂದೇಶ'ವನ್ನು ಶ್ರೀ ಕಾಶೀರಾಮಜಿ ನಿನಗೂ ಕಳುಹಿಸಿರಬಹುದು. ಅದರಲ್ಲಿ ನಿನ್ನ ಭಜನೆ ಮುದ್ರಣಗೊಂಡಿದೆ.

ಶುಭ ಚಿಂತಕ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೧೪೨ **ಪತ್ರ ಸಂಖ್ಯೆ – ೫೩೦** ಷಾಹಜಹಾನಪುರ
೦೪–೧೨–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನವೆಂಬರ್ ೨೬ ಮತ್ತು ೨೯ರ ನಿನ್ನ ಪತ್ರಗಳು ಕೈ ಸೇರಿದವು. ನಾನು ನವೆಂಬರ್ ೩೦ಕ್ಕೆ ಸಂಜೆ ಮಥುರಾದಿಂದ ವಾಪಸು ಬಂದೆ. ನಾರಾಯಣನ ವಿನಂತಿಯ ಪ್ರಕಾರ ನಾನು ಅವನ ಮನೆಯಲ್ಲಿ ಆರು ಘಂಟೆ ಉಳಿದು ಬಂದೆ. ನಾರಾಯಣನಿಂದ ಅಭ್ಯಾಸ ಪ್ರಾರಂಭಿಸಿದ ವಕೀಲರೊಬ್ಬರು ನನ್ನ ಬಳಿ ಕುಳಿತಿದ್ದರು. ಅವರು ಬಹಳ ಸಂತೋಷಪಟ್ಟರು. ಅವರು ನಿಯಮಿತವಾಗಿ ಅಭ್ಯಾಸ ಮುಂದುವರಿಸಬಹುದೆಂಬುದು ಇದರಿಂದ ಗೊತ್ತಾಗುತ್ತದೆ. ಅವರು ಡಾ. ಚತುರ್ಭುಜ ಸಹಾಯ್‌ರವರ ಬಳಿಯೂ ಬೈಠಕ್ ತೆಗೆದುಕೊಂಡಿದ್ದರು; ಅಲ್ಲಿ ಬರೀ ಆಡಂಬರವಿತ್ತೆಂಬುದು ಅವರಿಗೆ ಮನವರಿಕೆಯಾಗಿತ್ತು. ಅವರು ಡಾ. ಚತುರ್ಭುಜ ಸಹಾಯ್‌ರವರ ಪುಸ್ತಕಗಳನ್ನೆಲ್ಲ ಓದಿದ್ದಾರೆ. ಅವು, ನಮ್ಮ ಮಿಷನ್ನಿನಿಂದ ಪ್ರಕಟವಾದ ಪುಸ್ತಕಗಳ ಮತ್ತು ಅವುಗಳಲ್ಲಿರುವ ವಿಚಾರಗಳ ಗುಂಜಿ ತೂಕಕ್ಕೂ ಸಮನಾಗಲಾರವು ಮತ್ತು ಅವುಗಳಲ್ಲಿರುವ ವಿಚಾರಗಳೂ ಪೂರ್ಣ ರೂಪದಲ್ಲಿ ವ್ಯಕ್ತಗೊಳಿಸಲ್ಪಟ್ಟಿಲ್ಲ– ಎಂದು ಅವರು ಹೇಳಿದರು. ಇಷ್ಟು ಒಳ್ಳೆಯ ಮತ್ತು ಮೌಲಿಕ ವಿಷಯ ಬೇರೆಲ್ಲೂ ಇಲ್ಲವೆಂಬುದು ಒಂದಿಲ್ಲೊಂದು ಸಮಯ ಜನರಿಗೆ ಮನದಟ್ಟಾಗಬಹುದೆಂದು ನಾನೆಣಿಸುತ್ತೇನೆ. ಇವೆಲ್ಲವೂ ನಮ್ಮ ಗುರು ಮಹಾರಾಜರ ಆಶೀರ್ವಾದ ಮತ್ತು ಕೃಪೆ. ಅವರ ಮಿಷನ್ನು ಉನ್ನತಿ ಹೊಂದಿಯೇ ತೀರುವುದೆಂದು ನನಗೆ ವಿಶ್ವಾಸವಿದೆ. ಇದುವರೆಗೆ ನನಗೆ ಜನರು ಅವರ (ಆಧ್ಯಾತ್ಮಿಕ) ಸೇವೆ ಮಾಡುವ ಅವಕಾಶ ಕೊಡುತ್ತಿಲ್ಲವೆಂಬುದೇನೋ ನಿಜ. ಮತ್ತು ಸತ್ಯವನ್ನು (Reality) ಹೊಂದುವ ಉತ್ಕಂಠೆಯುಳ್ಳ ಜನರು, ಹೆಚ್ಚು ಸಿಗುತ್ತಿಲ್ಲ. ಅಥವಾ ಇದು ನನ್ನ ದೌರ್ಭಾಗ್ಯವಿರಲೂಬಹುದು, ಇಲ್ಲವೆ, ಅದಕ್ಕೆ ಯೋಗ್ಯ ಸಮಯ ಇನ್ನೂ ಬಂದಿರಲಿಕ್ಕಿಲ್ಲ.

ಈಗ ನಾನು ನಿನ್ನ (ಆಧ್ಯಾತ್ಮಿಕ) ಸ್ಥಿತಿಗಳ ಬಗ್ಗೆ ಸ್ವಲ್ಪ ಹೇಳುತ್ತೇನೆ. ಅಂಥ ಸೂಕ್ಷ್ಮಗತಿಯ ಉತ್ತರ ಹೇಳುವುದು ತುಂಬಾ ಕಠಿಣ. ನಿನ್ನ ಪತ್ರದಲ್ಲಿ ಹೇಳಿದ ಲಯಾವಸ್ಥೆಯ ಗತಿ ವರ್ಧಿಸುತ್ತಿದೆ, ಮತ್ತು ಅದರ ಸ್ಥಿತಿಗಳೇ ವಿವಿಧ ರೂಪದಲ್ಲಿ ನಿನಗೆ ಕಾಣಿಸುತ್ತಿವೆ. ಪತ್ರ ಬರೆಯಲು ಕೂಡ ಮನಸ್ಸು ಬರದಷ್ಟು ನಿಷ್ಕರ್ಮ (inactive) ಸ್ಥಿತಿ ಇದೆಯೆಂದು ನೀನು ಬರೆದಿದ್ದೀಯೆ. ಇದು ಶುಕ್ಲಾಜಿಯವರ ಸ್ಥಿತಿಯಂಥದ್ದಲ್ಲ. ಇದು 'ಆತ್ಮ'ದ ಗುಣ ಲಕ್ಷಣ. ಅಂದರೆ, ನಾವು ನಿಷ್ಕರ್ಮ ಸ್ಥಿತಿಯಲ್ಲಿ ಹೆಚ್ಚು ಇರತೊಡಗಿದ್ದೇವೆ, ದೇಹದೊಂದಿಗಿನ ಸಂಬಂಧ ಬಹಳ

ಕಡಿಮೆಯಾಗುತ್ತಿದೆ. ಇದರಲ್ಲಿ ಎರಡು ಅಂಶಗಳಿವೆ. ನಾವು ದೇಹದಿಂದ ಕೆಲಸ ತೆಗೆದುಕೊಳ್ಳಬೇಕಾದಾಗ ಆಗುವುದು ಹೀಗೆ : ಈಶ್ವರನು ಜಗತ್ತನ್ನು ಸೃಷ್ಟಿಸುವಾಗ 'ಆತ್ಮ'ವು ನಮ್ಮ ಹುಟ್ಟಿನ ಕಾರಣ ಮತ್ತು ಆಧಾರ ತಲವಾಯಿತು; ಎಂಥ ಆಧಾರವಾಯಿತೆಂದರೆ, ವಿಚಾರಗಳು ಬರುತ್ತಿರುವಂತೆಯೇ, ಏಕಕಾಲದಲ್ಲಿ ಅದರಲ್ಲಿ ಕೆಲಸ ಮಾಡುವ ಗತಿ (ಕ್ರಿಯೆ; ಚಟುವಟಿಕೆ) ಶುರುವಾಗುತ್ತದೆ. 'ವಿಚಾರ'ವು ಆತ್ಮಕ್ಕೆ ಅತ್ಯಂತ ನಿಕಟವಾಗಿರುತ್ತದೆ. ಆದ್ದರಿಂದ, ಅದು ಸ್ವತಃ ಆತ್ಮದಿಂದ ಶಕ್ತಿಯನ್ನು ಹೀರಿಕೊಂಡು ದೇಹದಿಂದ ಕೆಲಸ ತೆಗೆದುಕೊಳ್ಳಲಾರಂಭಿಸುತ್ತದೆ ಎಂದು ಹೇಳಬಹುದು. ಮತ್ತು ಆತ್ಮದಲ್ಲಿ ಎಂಥ 'ಗತಿ' ಇದೆಯೆಂದರೆ, ಅದರ ಶಕ್ತಿಯಿಂದ ವಿಚಾರಗಳು ಬೇಕಾದ ಕೆಲಸ ತೆಗೆದುಕೊಳ್ಳುತ್ತವೆ. ಉದಾಹರಣೆಗೆ ವಿದ್ಯುತ್ತಿನ ಶಕ್ತಿಯಿಂದ, ಬೇಕಾದರೆ ಬೆಳಕು ಪಡೆಯಬಹುದು, ಅಥವಾ 'ಫ್ಯಾನ್' ತಿರುಗಿಸಬಹುದು, ಕುಲುಮೆ ಉರಿಸಬಹುದು; ಆದ ಕಾರಣವೇ, ವಿಚಾರವು 'ಆತ್ಮ'ದ ಬಣ್ಣವನ್ನು ಪಡೆಯಬೇಕೆಂದು ನಾವು ಪ್ರಯತ್ನಿಸುತ್ತೇವೆ; ಮತ್ತು ಅಭ್ಯಾಸ (ಸಾಧನೆ) ಇರುವುದು ಇದಕ್ಕೋಸ್ಕರವೇ. ವಿಚಾರಗಳು, ಎಲ್ಲ ಬಣ್ಣಗಳನ್ನು ಕಳೆದುಕೊಂಡು ಪರಿಶುದ್ಧನಾದಾಗ, ಮಾನವನು ಧರ್ಮಶಾಸ್ತ್ರ ಸಂಮತವಾದ ಕಾರ್ಯಗಳನ್ನೇ ಮಾಡುತ್ತಾನೆ; ಅವನು ಮಾಡುವುದೇನೇ ಇದ್ದರೂ ಅದು ಶಾಸ್ತ್ರ ವಿರುದ್ಧವಾಗಿರುವುದಿಲ್ಲ. ವಿಚಾರಗಳು ಶುದ್ಧ ಮತ್ತು ಪವಿತ್ರಗೊಳ್ಳುತ್ತ ಹೋಗುವುದಕ್ಕೋಸ್ಕರ ಶಾಸ್ತ್ರಗಳಲ್ಲಿ ಕಟ್ಟಳೆಗಳನ್ನು ವಿಧಿಸಲಾಗಿದೆ. ಕೆಲವು ಕವಿಗಳು ಈ ವಿಷಯಗಳ ಮೇಲೆ ಬಹಳಷ್ಟು ತಮ್ಮ ಮನಸ್ಸು ಕೊಟ್ಟಿದ್ದಾರೆ ಮತ್ತು ಸ್ಥೂಲತೆಯಿಂದ ಕೆಲಸ ಮಾಡಿದ್ದಾರೆ. ಅದರ ಪರಿಣಾಮವಾಗಿ ನಮ್ಮ ಆಧಾರ ಸ್ಥೂಲತೆಯ ಮೇಲೆಯೇ ಉಳಿಯಿತು. ಮತ್ತು ಅದು ಸುಲಭವಾಗಿದ್ದುದರಿಂದ, ಅದನ್ನೇ ತೆಗೆದುಕೊಂಡು, ನಮ್ಮಲ್ಲಿಯ ಬಣ್ಣದ ಸಾಧುಗಳು ನಡೆದುಕೊಂಡರು. ವಿವೇಕ ಶಕ್ತಿ ತೀಕ್ಷ್ಣಗೊಳ್ಳಲೇ ಇಲ್ಲ. ಸರಿ–ತಪ್ಪುಗಳ ಅಂತರವನ್ನು ಅರಿಯಲಾರದಿದ್ದರೂ, ಅವರು ಕೆಲಸ ಮಾಡತೊಡಗಿದರು. ಮತ್ತು ಆ ಕವಿಗಳನ್ನು 'ಪ್ರಮಾಣ'ವಾಗಿ ಮುಂದಿಟ್ಟರು; ಜನರು ಅವರನ್ನು (ಆ ಕವಿಗಳನ್ನು) ಮತ್ತು ಅವರ ಗ್ರಂಥಗಳ ಮೇಲೆ ಎಂಥ ಅಭಿಪ್ರಾಯಗಳನ್ನು ರೂಪಿಸಿಕೊಂಡಿದ್ದರೆಂದರೆ, ಆಧ್ಯಾತ್ಮಿಕತೆಯಲ್ಲಿಯೂ ಅವರು ಪರಿಪೂರ್ಣರೆಂದು ತಿಳಿದಿದ್ದರು. ಅವರ (ನಿಜವಾದ) ಸಾಮರ್ಥ್ಯವನ್ನು ಅಳೆದುನೋಡಬಹುದಾದಷ್ಟು ಆಧ್ಯಾತ್ಮಿಕ ಸ್ಥಿತಿಯನ್ನು ಈ ಮಹಾತ್ಮರುಗಳು ಪಡೆದಿರಲಿಲ್ಲ. ನಾನು ಉರ್ದು ಮತ್ತು ಫ಼ಾರ್ಸಿ ಸಾಹಿತ್ಯವನ್ನು ನೋಡಿದ್ದೇನೆ. ಅವುಗಳಲ್ಲಿ ಕೂಡ ಅತ್ಯುತ್ತಮ, ಉನ್ನತ ವಿಚಾರಗಳುಂಟು. ಆದರೆ ಅವುಗಳನ್ನು ಆಧ್ಯಾತ್ಮಿಕತೆಯ ಪ್ರಮಾಣಗಳಾಗಿ ಯಾರೂ ಪ್ರಸ್ತುತಪಡಿಸುವುದಿಲ್ಲ. ವಿಚಾರಗಳನ್ನು ಕೊಂಡಾಡಲಾಗುತ್ತದೆ, ಮತ್ತು ಅವುಗಳ ಉದಾಹರಿಸಲಾಗುತ್ತದೆ ಕೂಡ. ಈ ಹಿಂದೀ ಕವಿಗಳ ಗ್ರಂಥಗಳನ್ನು ಮಾತ್ರವೇ ಈ ಮಹಾತ್ಮರು (ಸಾಧುಗಳು) ಪ್ರಮಾಣವೆಂದು ತಿಳಿಯುತ್ತಾರೆ. ನನ್ನ ಅಭಿಪ್ರಾಯದಲ್ಲಿ ಕೇವಲ ಸಂಸ್ಕೃತವನ್ನು ಓದಿದವರ ದೃಷ್ಟಿ ಬಹಳ ವಿಶಾಲವೇನೂ ಆಗಿರುವುದಿಲ್ಲ. ಸಂಸ್ಕೃತದಲ್ಲಿ ಇದುವರೆಗೆ ಹೆಪ್ಪುಗಟ್ಟಿದ ಸಾಹಿತ್ಯವೇ ಉಳಿದಿದೆ ಮತ್ತು ಅದಕ್ಕೂ ಮುಂದಕ್ಕೆ ಪ್ರಕೃತಿಯನ್ನು



ವೀಕ್ಷಿಸಿ, ಹಾಗೂ ವಿಭಿನ್ನ ವಿಚಾರಗಳೊಂದಿಗೆ ತುಲನೆ ಮಾಡಿ ಬರೆದ ಸಾಹಿತ್ಯ ಬಂದಿಲ್ಲದಿರುವುದೇ ಇದಕ್ಕೆ ಕಾರಣವೆಂದು ಕಂಡುಬರುತ್ತದೆ. ಒಂದು ವೇಳೆ ವೇದದಲ್ಲಿಯೇ ಹೇಳಿದುದಾಗಿದ್ದರೂ, ಯಾವುದು ತರ್ಕ (ಯುಕ್ತಿ) ಮತ್ತು ಬುದ್ಧಿಗೆ ವಿರುದ್ಧವಾಗಿರುವುದೋ ಅದನ್ನು ಒಪ್ಪಲಾಗದು ಎಂದು ಮನು ಮಹರ್ಷಿ ಹೇಳಿದ್ದಾರೆ. ಪುತ್ರಿ, ನೀನು ಲಖ್ನೌ ಸಂಸ್ಕೃತಿಯುವಳಲ್ಲವಾದರೂ, ಜಾತಿಯಿಂದ ಬ್ರಾಹ್ಮಣಳಾಗಿದ್ದೀಯೆ. ನನ್ನ ಕುರಿತು ಕ್ಷಮೆ ಇರಲಿ. ಕವಿ ತುಳಸೀದಾಸರ ಒಂದು ವಾಕ್ಯವನ್ನು ಬರೆಯುತ್ತೇನೆ :

'ಪೂಜಿಯೆ ವಿಪ್ರ ಸಕಲ ಗುಣ ಹೀನಾ, ಶೂದ್ರ ನ ಗುಣಗಣ ಜ್ಞಾನ ಪ್ರವೀಣಾ' ಈ ಚೌಪಾಯಿಯನ್ನು ಬ್ರಾಹ್ಮಣರು ಪ್ರಮಾಣವೆಂದು ಉದಾಹರಿಸುವುದನ್ನು ನಾನು ಕೇಳಿದ್ದೇನೆ. ಜನರು ತಮಗೆ ಗೌರವ ಕೊಡಲಿ ಎಂದು ಅವರು ಇದನ್ನು ಉದಾಹರಿಸುತ್ತಾರೆ. ತಾವು ಜನರಿಂದ ಗೌರವಿಸಲ್ಪಡಲಾರದಷ್ಟು ಅವನತಿಗೆ ಇಳಿದಿದ್ದಾರೆಂಬುದು ಅವರಿಗೆ ಗೊತ್ತು ಎಂದು ಇದರ ಅರ್ಥ. ಆದ್ದರಿಂದಲೇ, ಅವರು ತುಲಸೀದಾಸರ ಈ ಆದೇಶವನ್ನು  ಉದಾಹರಿಸುತ್ತಾರೆ. ಇಂಥ ಅನೇಕ ಮಾತುಗಳು ಬೇರೆಡೆಗಳಲ್ಲಿಯೂ ಕಾಣಸಿಗುತ್ತವೆ. ಈ ಮಾತುಗಳನ್ನು, ಈ ಮೇಲೆ ಉದ್ಧರಿಸಿದ ಮನು ಮಹರ್ಷಿಯ ಮಾತಿನೊಂದಿಗೆ ತೂಗಿ ನೋಡಬೇಕು. ಅಲ್ಲಿ, ಜಾತಿಯ ಅಭಿಮಾನ ಭಗ್ನವಾಗಿ ಹೋಗಬೇಕು; ಯೋಚಿಸಿ ನೋಡಿದರೂ, ಒಳಗಿನಿಂದ, ನಾನು ಬ್ರಾಹ್ಮಣ. ಅಥವಾ ವೈಶ್ಯ ಅಥವಾ ಶೂದ್ರ ಅಥವಾ ಯಾವುದೇ ಜಾತಿಯವನೆಂಬ ಧ್ವನಿ ಹೊರ ಬರಕೂಡದು.

ನೀನು ನನ್ನನ್ನು ಕಣ–ಕಣದಲ್ಲಿಯೂ ನೋಡುತ್ತಿದ್ದೆ. ಆದರೆ ಈಗ ಏನಾಗಿದೆಯೆಂದರೆ 'ನೀವು ಎಲ್ಲಿಯೂ ಕಂಡು ಬರುವುದಿಲ್ಲ'– ಎಂದು ಬರೆದಿದ್ದೀಯೆ. ಕಣ್ಣು ಇನ್ನೊಂದು ಕಣ್ಣನ್ನು (ಅಥವಾ ತನ್ನನ್ನು) ನೋಡಲಾರದು ಎಂಬುದು. ತೆರೆದಿಟ್ಟ ಸಂಗತಿಯೇ ಆಗಿದೆ. ನೀನು ಯಾರನ್ನು ನೋಡುತ್ತಿದ್ದೆಯೋ, ಈಗ ನೀನೇ ಹೆಚ್ಚು ಕಡಿಮೆ ಅವನೇ ಆಗಿ ಹೋದಾಗ ನೋಡುವುದು ಯಾರನ್ನು? 'ಕೃಪೆ (ಪ್ರಾಣಾಹುತಿ) ನನ್ನಲ್ಲಿಗೆ ಬಂದು ತಲುಪುವುದೇ ಇಲ್ಲ'– ಎಂದು ಬರೆದಿದ್ದೀಯೆ. ಯಾವುದು ಈ ಮೊದಲು ನಿನಗೆ ಬಂದು ಮುಟ್ಟುತ್ತಿತ್ತೋ ಅದರಲ್ಲಿಯೇ ನೀನು ಮುಳುಗಿ ಹೋಗಿದ್ದೀಯೆ ಎಂದು ಇದರ ಅರ್ಥ. ಸಮುದ್ರದಲ್ಲಿ ಒಂದೆರಡು ಕೊಡ ನೀರು ಹಾಕಿದರೆ, ಅದರ ಮಟ್ಟದಲ್ಲಿ ಏನಾದರೂ ಹೆಚ್ಚು ಆದಂತೆ ಕಂಡು ಬರುವುದೇನು? 'ಹುಟ್ಟಿದಂದಿನಿಂದಲೂ ಎಂದೂ ನಿಮ್ಮ ಸ್ಮರಣೆ ಬಂದಿರಲೇ ಇಲ್ಲವೆಂಬಂತೆ ಭಾಸವಾಗುತ್ತದೆ'– ಎಂದು ಬರೆದಿದ್ದೀಯೆ. ಒಂದು ದೃಷ್ಟಾಂತ ಕೊಡುತ್ತೇನೆ. ಹೆಣ್ಣುಮಕ್ಕಳು ಮೊದಲ ಒಂದೆರಡು ಬಾರಿ ಅತ್ತೆಯ ಮನೆಗೆ ಬಂದಾಗ ಅವರಿಗೆ ತವರುಮನೆಯ ನೆನಪು ಬಹಳ ಬರುತ್ತದೆ. ಅಲ್ಲಿಯೇ ನೆಲೆಸಿದ ಮೇಲೆ ಕ್ರಮೇಣ ಅತ್ತೆಯ ಮನೆಯೇ ತವರುಮನೆಯಾಗಿ ಬಿಡುತ್ತದೆ. ಅನಂತರ ಅವರಿಗೆ ಮನೆ ಎಂದೆನಿಸತೊಡಗುತ್ತದೆ; ಅದೇ ಅವರಿಗೆ ಸ್ವಗೃಹವಾಗಿ ಬಿಡುತ್ತದೆ. ಇದೇ

ಸ್ಥಿತಿ ನಿನ್ನದಾಗಿದೆಯೆಂದು ತಿಳಿ. ಸ್ಮರಣೆ ಮಾಡುತ್ತ ಮಾಡುತ್ತ ನೀನೇ ಸ್ಮರಣೆಯೇ ಆಗಿ ಬಿಟ್ಟಿದ್ದೀಯೆ.

'ನನ್ನ ಶರೀರವು ಕೇವಲ ಛಾಯಾ ಮಾತ್ರ'ವಾಗಿ ಕಂಡು ಬರುತ್ತಿದೆ– ಮುಂತಾಗಿ ಬರೆದ, ನವೆಂಬರ್ ೨೬ರ ನಿನ್ನ ಪತ್ರದಲ್ಲಿರುವ ಇತರ ವಿಷಯಗಳು, ನನ್ನಲ್ಲಿ ಯಾವ 'ವಸ್ತು' ಇದೆಯೋ ಅದರಲ್ಲಿ ನೀನು ಪೂರ್ಣ ಲಯವಾಗಿದ್ದೀಯೆ ಎಂಬುದನ್ನು ತೋರಿಸುತ್ತವೆ. ಆದರೆ ಇಷ್ಟು ಮಾತ್ರ ಕೊರತೆ ಇರುವುದೇನೆಂದರೆ, ನಾನು ನಿನಗೆ 'ಛಾಯಾಮಾತ್ರ' ಆಗಿ ದೃಷ್ಟಿಗೆ ಗೋಚರಿಸುತ್ತೇನೆ. ಅಭ್ಯಾಸಿಗಳಿಗೆ ಮಾರ್ಗದರ್ಶಿ (ಗುರು)ಯ ಅಭಿರುಚಿ ಏನೆಂದು ತಿಳಿದಿರಬೇಕು ಎಂದು ನಾನು ಆಗಾಗ ಹೇಳುತ್ತೇನೆ. ಅದರ ಅರ್ಥವೇನೆಂದರೆ, ಅವರಿಗೆ ಈ ವಿಷಯದಲ್ಲಿ ಜಾಗರೂಕರಾಗಿ, ಮತ್ತು ಸೂಕ್ಷ್ಮಗ್ರಹಣಕ್ಕೆ ಸಿದ್ಧರಾಗಿ ಇರಬೇಕು. ಅಭ್ಯಾಸಿಯ ವಿಚಾರ ಪ್ರವಾಹ ಮಾರ್ಗದರ್ಶಿಯ (ಗುರುವಿನ) ಕಡೆಗೆ ಸದಾ ಹರಿಯುತ್ತಿದ್ದಾಗ ಮಾತ್ರವೇ ಇದು ಸಾಧ್ಯವಾಗುವುದು. ಇದಕ್ಕೆ ಅನೇಕ ವಿಧಾನಗಳುಂಟು. ಉದಾಹರಣೆಗೆ, ಒಬ್ಬ ನಿಷ್ಠಾವಂತ ಸೇವಕ ತನ್ನಿಂದ ಒಡೆಯನಿಗೆ ಯಾವಾಗಲೂ ಆರಾಮ ಸಿಗಬೇಕೆಂದು ಬಯಸುತ್ತಾನೆ. ಅವನು ಎಲ್ಲಿಯೇ ಕುಳಿತಿರಲಿ, ಆ ಹೊತ್ತಿನಲ್ಲಿ ಒಡೆಯನಿಗೆ ಏನು ಬೇಕು ಎಂಬುದರ ಕಡೆಗೆ ಅವನ ಮನಸ್ಸು ಚಿಂತಿಸುತ್ತಿರುತ್ತದೆ. ಇದೊಂದು ಉದಾಹರಣೆಗಾಗಿ ಉದಾಹರಣೆ ಮಾತ್ರ. ಈಗ, ಆಧ್ಯಾತ್ಮಿಕ ಕ್ಷೇತ್ರದಲ್ಲಿ, ಗುರುವಿನೊಂದಿಗೆ ಒಂದು ನೈಜ ಸಂಬಂಧ ಏರ್ಪಟ್ಟರೆ, ಯಾವಾಗ ನಾವು ಒಡೆಯನ (ಗುರುವಿನ) ಸನ್ನಿಧಿಯಲ್ಲಿ ಲಭ್ಯನಾಗಿರಬೇಕು, ಮತ್ತು ಕಾಲ ಕಾಲಕ್ಕೆ ಅವನಿಗೋಸ್ಕರ ಏನು ಮಾಡಬೇಕು ಎಂಬುದು ತನ್ನಿಂದ ತಾನೇ ಗೊತ್ತಾಗುವಂಥ ಆಪ್ತತೆ ಉಂಟಾಗುತ್ತದೆ. ಈಗ, ಈ ವಿಷಯಗಳು ನಿನಗೋಸ್ಕರ ಅಲ್ಲ.

ನವೆಂಬರ್ ೨೭ರ ನಿನ್ನ ಪತ್ರದಲ್ಲಿ, ನೀನು ಪೂಜೆ (ಧ್ಯಾನ) ಮಾಡುವಾಗ ನಿನ್ನ ನಾಲಗೆಯ ಪದರು ಸುಲಿದು ಎದ್ದು ಬಂದಿತು ಎಂದು ಬರೆದಿದ್ದೀಯೆ. ಇದೊಂದು ವಿಚಿತ್ರ ವಿಷಯ, ನನ್ನ ಕಣ್ಮುಂದೆ ಹೀಗೆ ಗೋಚರಿಸಿತು. ಶಬ್ದ ಆಕಾಶದಲ್ಲಿದೆ; ನಮ್ಮ ಬಳಿ ನಾಲಗೆ ಇದೆ. ನಾವು ಹೇಳಬೇಕೆಂದಿರುವುದರ ನೈಜ ವಸ್ತುವು (ವಿಷಯ), ವಿಚಾರದಲ್ಲಿರುವುದರ ಶಬ್ದಗಳ ಮೂಲಕ ಬರುತ್ತದೆ. ಅದನ್ನು ನಾಲಗೆಯು ಹೊರಳಿಸಿ, ರೂಪಿಸಿ ಇತರರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ರೂಪದಲ್ಲಿ ಹೊರ ಹೊರಡಿಸುತ್ತದೆ. ಅಂದರೆ, ವಾಸ್ತವ ವಿಷಯವನ್ನು ಹೊರಡಿಸಲು ನಾಲಗೆ ಒಂದು ಉಪಕರಣವಾಗುತ್ತದೆ. ಈಗ, ನಾಲಗೆಯ ಮೇಲ್ಪದರು ಸುಲಿದು ಹೋದಂತೆನಿಸಿದುದರ ಅರ್ಥವೇನೆಂದರೆ, ಧ್ವನಿಯು (ಶಬ್ದ) ವಿರೂಪಗೊಳ್ಳುವುದು ಮುಗಿದು ಹೋದಂತಾಯಿತು. ಮತ್ತು ಶಬ್ದವು ಎಂತಿರುವುದೋ ಸಹಜ ರೀತಿಯಲ್ಲಿ ಹೊರಹೊಮ್ಮಬೇಕು. ಆಧ್ಯಾತ್ಮಿಕತೆಯಲ್ಲಿ ಇದರ ಅರ್ಥ, ನಿನ್ನ ಮುಖದಿಂದ ಹೊರಬರುವ ಶಬ್ದಗಳಲ್ಲಿ ಸತ್ಯ (Reality) ಮತ್ತು ಶುದ್ಧತೆಗಳು ಮಾತ್ರವೇ ಇರುವುವು,



ಕೃತ್ರಿಮತೆ ಇರಲಾರದು. ಅರ್ಥಾತ್, ನೀನು ಏನನ್ನು ಹೇಳುತ್ತೀಯೋ ಅದರಲ್ಲಿ ಅನುಗ್ರಹ ಮತ್ತು ಪ್ರಭಾವ ಇರುವುವು, ಮತ್ತು ಇತರ ಹೃದಯದ ಮೇಲೆ ಹೆಚ್ಚಿನ ಪ್ರಭಾವ ಬೀರುವುದು, ಮತ್ತು ಧ್ವನಿಯ ಕಂಪನಗಳಿಂದ ಅವರಿಗೆ ಆಧ್ಯಾತ್ಮಿಕ ಲಾಭವಾಗುವುದು. ಬೆನ್ನು ಹುರಿಯಲ್ಲಿ ಹರಿದಾಡಿದಂತೆ ಅನುಭೂತಿಯಾಗುವುದು, ಆ ಸ್ಥಾನಗಳು (ಬಿಂದುಗಳು) ಜಾಗ್ರತ ಸ್ಥಿತಿಗೆ ಬರುತ್ತಿರುವುದನ್ನು ಸೂಚಿಸುತ್ತದೆ.

ನೀನು ಮಾತನಾಡಲಿಕ್ಕಿರುವ ಕಾರ್ಯಕ್ರಮವನ್ನು ಪ್ರಯತ್ನಪಟ್ಟು ನಿಗದಿಪಡಿಸಲು ಶ್ಯಾಮ ಪ್ರಕಾಶಜಿಯವರಿಗೆ ಹೇಳು. ಹಾಗೆ ಖಂಡಿತ ಮಾಡಲಾಗುವುದು ಮತ್ತು ತಾವು ಸ್ವತಃ ಸಹಾಯ ನೀಡುವರೆಂದು ಚೌಬೇಜಿ ಹೇಳುತ್ತಾರೆ.

ಎಚ್–೧(H1) ಬಿಂದುವಿನಲ್ಲಿ ನಿನ್ನ ಯಾತ್ರೆ ಇನ್ನೂ ಆರಂಭವಾಗಿಲ್ಲ. ಈ ಪತ್ರ ತಲುಪುವಷ್ಟರಲ್ಲಿ ಅದು ಆರಂಭವಾಗಿರುತ್ತದೆ ಎಂಬುದನ್ನು ನೀನು ನೋಡಬಹುದು.

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು. ಅಮ್ಮಾಜಿಯವರಿಗೆ ವಂದನೆಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೩ **ಪತ್ರ ಸಂಖ್ಯೆ – ೫೩೩** ಷಾಹಜಹಾನಪುರ
೨೨–೧೨–೧೯೫೫

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದ.

ಡಿಸೆಂಬರ್ ೮, ಮತ್ತು ೧೯ರ ನಿನ್ನ ಪತ್ರಗಳ ಕೈ ಸೇರಿದವು. ನಿನ್ನ ಎಚ್–೧ (H1) ಸ್ಥಾನದಲ್ಲಿ ಯಾಕೆ ಅಂಧಕಾರ ಕೆಲವೊಮ್ಮೆ ಪಸರಿಸುವುದೋ ತಿಳಿಯದು. ನಾನು ಅದನ್ನು ತೆಗೆದು ಹಾಕುತ್ತೇನೆ, ಆದರೆ ಮತ್ತೆ ಅದು ಬಂದು ಬಿಡುತ್ತದೆ. ಇದರ ಬಗ್ಗೆ ಆಲೋಚಿಸಬೇಕಿದೆ. ಗುರು ಮಹಾರಾಜರ ಕೃಪೆಯಿಂದ ಅದರ ಕಾರಣ ಗೊತ್ತಾಗುವುದೆಂಬ ವಿಶ್ವಾಸವಿದೆ. ನಾನು ಅದನ್ನು ದೂರ ಮಾಡಲು ಪ್ರಯತ್ನಿಸುತ್ತೇನೆ. ಚಿಂತೆಗೀಡಾಗುವ ಕಾರಣವಿಲ್ಲ. ನಿನ್ನ ಮನಸ್ಸಿಗೆ ಹೊಳೆದರೆ ಬರೆದು ತಿಳಿಸು. ಡಿಸೆಂಬರ್ ೮ ರ ನಿನ್ನ ಪತ್ರದಲ್ಲಿ, ನೀನು–'ಏನೂ ಗೊತ್ತಿಲ್ಲ, ಗೊತ್ತಿಲ್ಲದೆಯೂ ಇಲ್ಲ' ಎಂದು ಬರೆದಿದ್ದೀಯೆ. ಇದು ಬ್ರಹ್ಮಗತಿಯ ಸ್ಥಿತಿ. ಆದರೆ ಅದಿನ್ನೂ ಹೆಚ್ಚು ಸ್ಪಷ್ಟಗೊಳ್ಳುವುದು ಉಳಿದಿದೆ. ಅಭ್ಯಾಸಿಯು ಎಷ್ಟು ಎತ್ತರಕ್ಕೆ ಹೋಗುತ್ತಾನೋ, ಅಷ್ಟೇ ಪ್ರಮಾಣದಲ್ಲಿ ಕೆಳಗಿನ (ನಿಮ್ನಸ್ತರದ) ವಸ್ತುಗಳು/ ವಿಷಯಗಳು ಮಸಕಾಗಿ ತೋರಿ ಬರುತ್ತವೆ; ಎತ್ತರದ ಪರ್ವತವನ್ನೇರಿದಾಗ

ಮರಗಳು, ಮನುಷ್ಯರು ಕೇವಲ ಛಾಯೆಯಂತೆ ತೋರಿ ಬರುವ ಹಾಗೆ. ನೀನು ನನಗೆ ಒಂದು ಛಾಯೆಯಂತೆ ಕಾಣುತ್ತೀಯೆ ಎಂಬುದಕ್ಕೆ ಉತ್ತರ ಇದೇ ಆಗಿದೆ. ಮತ್ತು ಗಮನಿಸಿ ನೋಡಿದರೆ ಎಲ್ಲರ ವಿಷಯದಲ್ಲಿಯೂ ಹೀಗೇ ಕಾಣಬಹುದು. ಇಡೀ ಶರೀರದಲ್ಲಿ ಸ್ಪಂದನವಾಗುವುದರ ಬಗ್ಗೆ ಬರೆದಿದ್ದೀಯೆ. ನನ್ನ ಸ್ಥಿತಿಯಲ್ಲಿ ನೀನು ಬಹುತೇಕ ಅಂಟಿಕೊಂಡು ಬಿಟ್ಟಿದ್ದೀಯೆ ಮತ್ತು ಇದೇ ಪ್ರಭಾವ ಅಸ್ಥಿಗಳಲ್ಲಿ ಸೇರಿಕೊಳ್ಳುತ್ತಿದೆ. ಅದೇ ಇದಕ್ಕೆ ಕಾರಣ. ಪ್ರತಿಯೊಂದು ಅಸ್ಥಿಯಿಂದಲೂ ಪ್ರಕಾಶ ಹೊರಹೊಮ್ಮುತ್ತಿರುವಂತೆ ಭಾಸವಾಗುತ್ತದೆ ಎಂದು ಬರೆದಿದ್ದೀಯ. ಯಾವ ವಸ್ತು ಆಂತರ್ಯದಲ್ಲಿಯೋ ಅದೇ ಹೊರ ಹೊಮ್ಮುತ್ತಿದೆಯೆಂದು ಇದರ ಅರ್ಥ. ಈಶ್ವರನಿಗೆ ಧನ್ಯವಾದಗಳು; ಇದು ಒಳ್ಳೆಯ ಸ್ಥಿತಿಯಾಗಿದೆ. ಈಗ ದಿನಾಂಕ ೮೯ರ ಪತ್ರದ ವಿಷಯಕ್ಕೆ ಬರುತ್ತೇನೆ. "ಒಂದು ಆವೇಗದಲ್ಲಿ ನೀನು ಬೇರೆಯವರಿಗೆ ಏನನ್ನೋ ಹೇಳಲು ಬಯಸಿದಾಗ, ನಾನು ಅವರಿಗೆ ತಪ್ಪಾಗಿ ಹೇಳಿ ಮೋಸಗೊಳಿಸುತ್ತಿಲ್ಲವಷ್ಟೆ? ಎಂಬ ಭಾವನೆ ಬರುತ್ತದೆ"–ಎಂದು ನೀನು ಬರೆದಿದ್ದೀಯೆ; ಒಂದು ಚಿಕ್ಕ ಕೊರತೆಯಿದೆಯೆಂದು ಇದು ಸೂಚಿಸುತ್ತದೆ; ಅದೇನೆಂದರೆ, ನಿನ್ನ ಅಸ್ತಿತ್ವದ ಭಾವನೆ ಇನ್ನೂ ಉಳಿದಿದೆ. ಇದಕ್ಕೆ ಉರ್ದುವಿನಲ್ಲಿ 'ಅಹಮಿಯತ್' ('ಅಹಂ'ಕಾರ ಅಸ್ತಿತ್ವದಲ್ಲಿರುವುದು) ಎಂದು ಕರೆಯಲಾಗುತ್ತದೆ, ನಾನು ಮಾತನಾಡಿದಾಗಿನ ಬಗ್ಗೆ ಒಂದಿಷ್ಟು ಹೇಳುತ್ತೇನೆ. ಯಾರು ಮಾತನಾಡುತ್ತಿದ್ದಾರೆ ಎಂಬ ಭಾವನೆ ನನಗೆ ಲವಲೇಶವೂ ಇರುವುದಿಲ್ಲ. ಆದರೆ, ನಾನು ಹೇಳುವುದರ ವಿಷಯದಲ್ಲಿ ದೃಢನಾಗಿರುತ್ತೇನೆ; ಇದೇ ಸ್ಥಿತಿ ನಾನು ಬರೆಯುವಾಗಲೂ ಇರುತ್ತದೆ. ಆದ್ದರಿಂದಲೇ ಪ್ರತಿಯೊಂದು ಕಡೆಗೂ ಪ್ರಭುತ್ವಪೂರ್ಣ ಸ್ವರವೇ ಕೇಳಿ ಬರುವುದು. ಇದನ್ನು ಜನರು ಅಹಂಕಾರ ಎಂದು ತಿಳಿದರೆ, ನಾನು ಅಸಹಾಯಕ. ಒಂದು ವೇಳೆ ಇದು ಸರಿ ಇದೆಯೆಂದು ಕಂಡರೆ ಪ್ರತಿಯೊಬ್ಬ ಅಭ್ಯಾಸಿಯೂ ಈ ಸ್ಥಿತಿಗೆ ಬರಬೇಕು ಎಂದು ನಾನು ಇದನ್ನು ಹೇಳುತ್ತಿದ್ದೇನೆ. "ಒಂದು ಸಮಪಾತಳಿ ಇದ್ದಂತಿದೆ, ಅದರಲ್ಲಿ ಮುಳುಗಿ ಮುಳುಗಿ ನನ್ನ ಹೃದಯವೂ ಸಮಪಾತಳಿಯಾದಂತಿದೆ"– ಎಂದು ಬರೆದಿದ್ದೀಯೆ. ಸಾಮ್ಯಾವಸ್ಥೆಯ ಪ್ರಕಾಶ ಶುರುವಾಗಿದೆಯೆಂಬುದು ಇದರ ಅರ್ಥ. ಸಾಮ್ಯಾವಸ್ಥೆಯನ್ನು ಋಷಿಗಳು ಹಾಡಿ ಹೊಗಳಿದ್ದಾರೆ; ವಾಸ್ತವವಾಗಿ ಇದು ಬಹಳ ಉನ್ನತ ಸ್ಥಿತಿ. ಈಶ್ವರನು ಈ ಸ್ಥಿತಿಯನ್ನು ಯಾರಿಗಾದರೂ ಅನುಗ್ರಹಿಸಿದರೆ, ವಾಸ್ತವವಾಗಿ ಜೀವನದ ಸಮಸ್ಯೆ ಬಗೆಹರಿಯಿತೆಂದೇ ತಿಳಿಯಬೇಕು. ಈ ದೃಷ್ಟಿಯಿಂದ ನೀನು, ಸಮಸ್ಯೆ ಬಗೆಹರಿದಂತಾಯಿತು ಎಂದು ದಿ. ೪ರ ಪತ್ರದಲ್ಲಿ ಬರೆದುದು ಸರಿಯೇ ಇದೆ. ದೊಡ್ಡ ದೊಡ್ಡ ಋಷಿಗಳು ಇದನ್ನೇ ಪರ್ಯಾಪ್ತವೆಂದು ತಿಳಿದು ಮುಂದೆ ಸಾಗುವ ಪ್ರಯತ್ನ ಮಾಡುವುದಿಲ್ಲ; ಅದೂ ಸರಿಯೇ ಎನ್ನೋಣ, ಯಾಕೆಂದರೆ ಇದು ಬಹಳ ಮಹತ್ತಾದ, ಉನ್ನತ ಸ್ಥಿತಿಯಾಗಿದೆ. ನೀನು ಅದನ್ನು ಇನ್ನೂ ಪೂರ್ಣ ರೂಪದಲ್ಲಿ ಪಡೆದಿಲ್ಲ, ಆದರೆ ಖಂಡಿತ ಪಡೆಯುವ ನಿರೀಕ್ಷೆ ಇದೆ. ಆದರೆ ಈ ಸ್ಥಿತಿಯನ್ನು ತಲುಪಿದ ಅಭ್ಯಾಸಿಯು (ಸಾಧಕನು), ಬೇರೆಯುವರಿಗೆ, ಸೆಂಕೆಂದಿನಲ್ಲಿ ಮೋಕ್ಷವನ್ನು ಕೊಡುವ ಅಧಿಕಾರ



ವುಳ್ಳವನಾಗಿರುವುದಿಲ್ಲ. ಅಭ್ಯಾಸ ಮಾಡಿಸುತ್ತ ಹೋಗಿ ಕೆಲವು ವರ್ಷಗಳಲ್ಲಿ ಅವನು ಎಲ್ಲವನ್ನೂ ಮಾಡಲು ಶಕ್ತನಾಗಬಹುದು ಆದರೆ, ನನ್ನ ನಡೆ ಎಲ್ಲಿಯೂ ಮುಗಿಯುವುದೇ ಇಲ್ಲ. ಜನರ ದೃಷ್ಟಿಯಲ್ಲಿ ಇದೇ 'ಪರಿಪೂರ್ಣತೆ'ಯಾಗಿದೆ, ಆದರೆ ಹಾಗೆನ್ನುವುದು ತಪ್ಪು. ನಾನು ಒಂದು ಅನನ್ಯ ಪಥದ ಪಥಿಕನಾಗಿದ್ದೇನೆ; ಆ ಪಥ ಎಂಥದೆಂದರೆ, ಅದರಲ್ಲಿ ಕ್ರಮಿಸಿದ ಮೇಲೆ, ಎಂದಾದರೂ ಈ ಪಥದಲ್ಲಿ ನಾನು ಕ್ರಮಿಸಿದ್ದೆ ಎಂಬುದೂ ಅರಿವಿರುವುದಿಲ್ಲ; ಮತ್ತು ಯಾವುದೊಂದು ಸ್ಥಿತಿಯ ಅನುಭೂತಿಯೂ ಉಳಿಯುವುದಿಲ್ಲ. ಅಭ್ಯಾಸಿಗಳಲ್ಲಿ ಸಾಮ್ಯಾವಸ್ಥೆಯು ಉಂಟಾಗಲೆಂದು ನಾನೂ ಪ್ರಯತ್ನಿಸುತ್ತೇನೆ. ಯಾಕೆಂದರೆ, ಈ ಸ್ಥಿತಿಯೂ ಉಂಟಾಯಿತೆಂದರೆ ಅವರ ಜೀವನದ ಸಮಸ್ಯೆ ಬಗೆಹರಿದಂತಾಗುವುದು. ಹಾಗೆಂದು, ಈ ಸ್ಥಿತಿಯವರೆಗೆ ಅವರನ್ನು ತಲುಪಿಸುವಷ್ಟಕ್ಕೆ ನಾನು ತೃಪ್ತನಾಗುವುದಿಲ್ಲ. ನಾನು ಪೂರ್ತಿಯಾಗಿ ಬಾಯಿ ತೆರೆದರೆ, ಈಶ್ವರೀಯ ರಹಸ್ಯ ಹೊರಬೀಳಬಹುದು. ಅದಕ್ಕೋಸ್ಕರ, ತಿಳಿಯಬೇಕೆನ್ನುವವರಿಗೆ, ನಾನು ಬರೆಯುವುದಿಷ್ಟೆ : 'ನಾವು ಯಾವ ಸಂಬಂಧವೂ ಇಲ್ಲದವರಾದಾಗ (ನಿಃಸಂಗರಾದಾಗ) 'ಸತ್ಯ' (Reality)ದಲ್ಲಿ ಸಂಲಗ್ನರಾದೆವೆಂದು ತಿಳಿಯಬೇಕು. ಅನಂತರ ಏನು ಉಂಟಾಗುವುದೋ ಅದನ್ನು ವಿವರಿಸಲು ಶಬ್ದಗಳಿಲ್ಲ'.

'ನಿನ್ನ ಪರಿವೀಕ್ಷಣೆ (Observation) ಸ್ಥಿರವಾಗಿ ನಿಲ್ಲುವುದಿಲ್ಲ, ಆದ್ದರಿಂದ ಮನಸ್ಸಿನ ಮನನ ಶಕ್ತಿಯು ಅದರಿಂದ ಬೇರ್ಪಟ್ಟದ್ದಾಗಿ ಇರುತ್ತದೆ'–ಎಂದು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಈ ವಿಚಾರವನ್ನು ನೀನು ಸರಿಯಾಗಿ ವ್ಯಕ್ತಗೊಳಿಸಲು ಸಾಧ್ಯವಾಗಿಲ್ಲ. ಇರಲಿ ಬಿಡು. ಒಂದು ವೇಳೆ ಸರಿಯಾಗಿ ವ್ಯಕ್ತ ಮಾಡಿದೆಯೆಂದರೆ, ಅದರ ಉತ್ತರವೇನೆಂದರೆ, ಬ್ರಹ್ಮದಲ್ಲಿ ನೀನು ಗಾಢವಾಗಿ ಲೀನಳಾಗಿದ್ದೀಯೆ. ಎಡ ಭುಜದ ಕೆಳಗಿನ ಅಸ್ಥಿಯಲ್ಲಿ ಆಗುವ ಸಂವೇದನೆಯ ಬಗ್ಗೆ ಹೇಳುವುದಾದರೆ, ಆ ಬಿಂದುವನ್ನು ಕುರಿತು ಆಲೋಚನೆ ಮಾಡಬೇಕು. ಆದರೆ ಅದರ ಕಾರಣ ಹೇಳಿಬಿಡುತ್ತೇನೆ. ನೀನು ಷಾಹಜಹಾನಪುರಕ್ಕೆ ಬಂದಾಗ ನಿನ್ನ ಸಾಮ್ಯಾವಸ್ಥೆಯಲ್ಲಿ ನಾನು ನಿನ್ನ ಬೆನ್ನಿನ ನಾಡಿಗಳನ್ನು ಮತ್ತು ಅಸ್ಥಿಗಳನ್ನು ಎಲ್ಲಿಯೂ 'ಭಾರ' ಉಳಿಯದಿರಲೆಂಬ ಉದ್ದೇಶದಿಂದ ಶುದ್ಧಗೊಳಿಸಿದ್ದೆ; ಅವುಗಳನ್ನು ಇನ್ನೂ ಶುದ್ಧಗೊಳಿಸಬೇಕಿದೆ. ಈ ನರಗಳನ್ನು ಮತ್ತು ಅಸ್ಥಿಗಳನ್ನು ಶುದ್ಧ ಮಾಡುವುದರಿಂದ ಸಾಮ್ಯಾವಸ್ಥೆಯು ನೈಜ ರೂಪದಲ್ಲಿ ಕಾಣಲು ಶುರುವಾಗುತ್ತದೆ. ನನ್ನ ಬಳಿ ಬರುವ ಸಾಮಾನ್ಯ ಅಭ್ಯಾಸಿಗಳಿಗೂ ಈ ನಾಡಿಗಳನ್ನು ಮತ್ತು ಅಸ್ಥಿಗಳನ್ನು ಏಕೆ ಶುದ್ಧ ಮಾಡಬಾರದು ಎಂದು ಆಲೋಚನೆ ಬರುತ್ತದೆ. ಹಾಗೆ ಮಾಡುವುದರಲ್ಲಿ ಎದುರಾಗುವ ಕಷ್ಟವೇನೆಂದರೆ, ಅವರಲ್ಲಿ, ಈ ವಸ್ತುಗಳು ಶುದ್ಧವಾಗುವ ಸದವಕಾಶ ಬರುವಷ್ಟು, ಅವರು ನನಗೆ ಸಮಯ ಕೊಡುವುದಿಲ್ಲ. ಯಾಕೆಂದರೆ ಅವರ ಪಿಂಡ ಮತ್ತು ಬ್ರಹ್ಮಾಂಡ ದೇಶಗಳ ಶುದ್ಧೀಕರಣಕ್ಕೆ ಅವರು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಅವರಲ್ಲಿ ಭಕ್ತಿ ಮತ್ತು ಈಶ್ವರ ಪ್ರಾಪ್ತಿಯ ತೃಷ್ಣೆ ಇದ್ದುದಾದರೆ, ನನಗೆ ಅಷ್ಟು

P-4-Books-PM-7-Anantyatre-145



ಸಮಯ ತೆಗೆದುಕೊಳ್ಳಬೇಕಾಗುವುದಿಲ್ಲ. ಎಲ್ಲ ಕೆಲಸವನ್ನೂ ನನ್ನ ಹೆಗಲ ಮೇಲೆ ತೆಗೆದುಕೊಳ್ಳಲೇ ಎಂದು ನಾನು ಬಯಸುವುದೇನೋ ಸರಿಯೆ. ಆದರೆ, ಬಂಧು, (ಅಭ್ಯಾಸಿಯು) ತನ್ನದೇ ಧರ್ಮ ಮತ್ತು ಕರ್ತವ್ಯಗಳ ಪಾಲನೆ ಮಾಡುವುದರಿಂದ ಈಶ್ವರೀಯ ಶಕ್ತಿಯನ್ನು ಪಡೆಯಬಹುದೆಂಬುದೇ ಒಳ್ಳೆಯ ನಿಯಮವಾಗಿದೆ.

ಕೇಸರ್‌ಳ ಪತ್ರವೂ ಬಂದಿದೆ. ಓದಿ ನಾನು ಪ್ರಸನ್ನನಾದೆ. ಕೇಸರ್‌ಳೂ ಒಳ್ಳೆಯ ಉನ್ನತಿ ಹೊಂದುತ್ತಿದ್ದಾಳೆ. ನೀನು ಸ್ವತಃ ಅವಳಿಗೆ ವಿವರಿಸಿ ಹೇಳಬಲ್ಲೆ ಮತ್ತು ನಾನು ನನ್ನ ಸಮಯ ಉಳಿಸಿಕೊಳ್ಳಲು, ಅವಳ ಪತ್ರಕ್ಕೆ ವಿಸ್ತಾರಪೂರ್ವಕ ಉತ್ತರ ಕೊಟ್ಟಿಲ್ಲ, ಇರಲಿ. ಅವಳ ತಿಳಿವಳಿಕೆಗೋಸ್ಕರ ಇಷ್ಟು ಬರೆಯುತ್ತೇನೆ : ನಾಲ್ಕೂ ದಿಕ್ಕುಗಳಲ್ಲಿ ಪ್ರಕಾಶವು ಹೊಮ್ಮಿ ಪಸರಿಸುತ್ತಿರುವುದು, ಪಿಂಡ ದೇಶದ ಮೇಲೆ ಪ್ರಭುತ್ವ ಪಡೆಯುವ ಹೆಜ್ಜೆ ಇರಿಸಿದ್ದಾಳೆ ಎಂಬುದರ ಸೂಚಕವಾಗಿದೆ. ನಾನು ಒಮ್ಮೆಲೆ ಅವಳಿಗೆ (ಅದನ್ನು) ಕೊಡಬಯಸಿದ್ದೆ. ಆದರೆ ಅವಳ ಒಳಗಿನ ಸ್ಥಿತಿ ಪಾರದರ್ಶಕವಿರಲಿಲ್ಲ, ಬದಲಿಗೆ ಅಪಾರದರ್ಶಕ (opaque) ಇತ್ತು. ಅದಕ್ಕಾಗಿ, ಯಾವುದೇ ನಾಡಿಗೆ ಹಾನಿಯಾಗದಿರಲೆಂದು, ಅಷ್ಟಕ್ಕೇ ನಿಂತೆ. ಆದರೆ, ನಾನು ಯಾವ ಸಂಕಲ್ಪವನ್ನು (ಈ ಕುರಿತು) ಮಾಡಿರುವೆನೋ, ಅದನ್ನು ಈಶ್ವರನು ಕ್ರಮೇಣ ಪೂರ್ತಿಗೊಳಿಸುತ್ತಾನೆ. ನಾನು ಅವಳಿಗೆ ಹೇಳಿದುದನ್ನು ಅವಳು ಮಾಡುತ್ತಿರಬಹುದು. ಅವಳಲ್ಲಿ, ಪ್ರೇಮದ ಕಾರಣದಿಂದ ತಾಜಾತನ (Freshness) ಯಾವಾಗಲೂ ಇರುವುದರಿಂದ, ಬೈಠಕ್ ತೆಗೆದುಕೊಳ್ಳಲು ಮನಸ್ಸಾಗದಿರಬಹುದು. ಆದರೆ, ಆ ತಾಜಾತನ ಇನ್ನೂ ವರ್ಧಿಸುವಂತಾಗಲು ಅವಳು ಬೈಠಕ ತೆಗೆದುಕೊಳ್ಳುವುದನ್ನು ತಪ್ಪಿಸಬಾರದು.

ನಿನ್ನ ಶುಭ ಚಿಂತಕ<br>ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೪ **ಪತ್ರ ಸಂಖ್ಯೆ – ೫೩೫** ಷಾಹಜಹಾನಪುರ<br>೨೬-೧೨-೧೯೫೫

ಪ್ರಿಯ ಪುತ್ರಿ ಕಸ್ತೂರಿ,<br>ಶುಭಾಶೀರ್ವಾದಗಳು.

ನೀನು ಡಿಸೆಂಬರ್ ೨೪ಕ್ಕೆ ಬರೆದ ಪತ್ರ ತಲುಪಿತು. ನೀನು ಗೀತಾ ಜಯಂತಿಯ ದಿನ ಚೆನ್ನಾಗಿ ಮಾತನಾಡಿದೆಯೆಂಬುದನ್ನು ಕೇಳಿದೆ. ಈ ಬಗ್ಗೆ ನನಗೆ ಬಹಳ ಸಂತೋಷವಿದೆ. ನೀನು ಈ ಒಬ್ಬ ವಾಗ್ಮಿಯಾದೆ, ಆ ಕುರಿತ ಸಂಕೋಚವೆಲ್ಲ ಹೊರಟು ಹೋಗುತ್ತಿದೆ. ಮಾತನಾಡುವಾಗ ನಾಲಗೆಯೊಂದಿಗೆ ಯಾವುದೇ ಸಂಬಂಧ ಇಲ್ಲ ಎಂದು ಗೊತ್ತಾಯಿತು ಎಂದು ಬರೆದಿದ್ದೀಯೆ. ಇದು ಲಯಾವಸ್ಥೆಯ ಉತ್ತಮ ಅಭಿವ್ಯಕ್ತಿಯಾಗಿದೆ. ಮಹಾಪ್ರಳಯದ ರೀತಿಯ ನೀರವತೆಯ ಅನುಭೂತಿಯಾಗುವುದು, ಚಿತ್ತವೃತ್ತಿಗಳು ನಿರೋಧಗೊಂಡಿವೆಯೆಂಬುದನ್ನು



ಸ್ಪಷ್ಟಪಡಿಸುತ್ತದೆ. ಆದರೆ, ಈ ಸ್ಥಿತಿಯಲ್ಲಿ ಇನ್ನೂ 'ಭಾರ' ಇದೆ. ನಾಲ್ಕೂ ದಿಕ್ಕಿನಲ್ಲಿ ಮಂದ ಸ್ಪಂದನ ಅನುಭವವಾಗುತ್ತಿದೆ ಎಂದು ಬರೆದಿದ್ದೀಯೆ. ಅದು ನೀನು ಈಗ ಇರುವ ಎಚ್–೧(H1) ಸ್ಥಾನದ ದೃಶ್ಯವಾಗಿದೆ. 'ರೋಮ–ರೋಮವೂ (ಶರೀರದ ಕಣ–ಕಣವೂ) ತೆರೆದುಕೊಂಡಂತೆನಿಸುತ್ತದೆ' ಎಂಬುದರ ಅರ್ಥ ನನಗನಿಸುವ ಪ್ರಕಾರ, 'ಸ್ಥಿತಿ'ಯು ಒಂದು ವೃಕ್ಷದ ಛಾಯೆಯಂತೆ ಏಕರೂಪವಾಗಿದೆ. ಇದರಲ್ಲಿ ಸ್ಪಂದನದ ಅನುಭವ ಅವಶ್ಯ ಆಗುತ್ತದೆ. ಇದಕ್ಕೂ ಮುಂದಕ್ಕೆ ನೀನು ಬರೆದಾಗ ನಾನು ವಿಶದವಾಗಿ ವರ್ಣಿಸಲು ಸಾಧ್ಯ. ಎಲ್ಲಿಯವರೆಗೆ ತಿಳಿವಳಿಕೆಗೆ ನಿಲುಕುತ್ತಿರುವುದೋ ಅಲ್ಲಿಯವರೆಗೂ ಬರೆಯುತ್ತಿರು. ಅದಕ್ಕೂ ಮುಂದೆ, ನಿಜವಾಗಿಯೂ, ಅಭಿವ್ಯಕ್ತಗೊಳಿಸಲು ಶಬ್ದಗಳು ಸಿಗುವುದಿಲ್ಲ.

ನನ್ನ ಮೃತ್ಯುವಾಗಿದೆಯೋ ಏನೋ ಎಂಬಂತೆ ಮತ್ತು ಜಗತ್ತಿನೊಂದಿಗೆ ನನ್ನ ಸಂಬಂಧ ಕಡಿದು ಹೋಗಿದೆಯೋ ಏನೋ ಎಂಬಂತೆ ಅನಿಸುತ್ತದೆ ಎಂದು ಕೇಸರ್‌ಳು ಬರೆದಿದ್ದಾಳೆ. ಅವಳ ಅನುಭೂತಿ ಬಹುಮಟ್ಟಿಗೆ ಸರಿ ಇದೆ. ಆದರೆ ಜಗತ್ತಿನೊಂದಿಗೆ ಸಂಬಂಧ ಇನ್ನೂ ಇದೆ.

ಅಮ್ಮಾಜಿಯವರಿಗೆ ಪ್ರಣಾಮ ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ<br>ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೫ **ಪತ್ರ ಸಂಖ್ಯೆ – ೫೩೭** ಷಾಹಜಹಾನಪುರ<br>೦೧–೦೧–೧೯೫೬

ಪ್ರಿಯ ಪುತ್ರಿ ಕಸ್ತೂರಿ,<br>ಶುಭಾಶೀರ್ವಾದಗಳು.

ನಿನ್ನ, ಡಿಸೆಂಬರ್ ೨೯ರ ಪತ್ರ ಕೈ ಸೇರಿತು. ಎಚ್–೧ (H1) ಬಿಂದುವಿನಲ್ಲಿ ಅಂಧಕಾರ ಬರುವುದರ ಕಾರಣವೇನೆಂದು ಇನ್ನೂ ತಿಳಿಯಲಿಲ್ಲ. ಅಲ್ಪ–ಸ್ವಲ್ಪ ಅಂದಾಜು ಬರುತ್ತಿದೆ. ಸರಿಯಾಗಿ ತಿಳಿದ ಮೇಲೆ ನಿನಗೆ ತಿಳಿಸುತ್ತೇನೆ. ದಕ್ಷಿಣ ಭಾರತದಲ್ಲಿ ಇನ್ನೂ ಕೆಲವರು ಅಭ್ಯಾಸ ಪ್ರಾರಂಭಿಸಿದ್ದಾರೆ. ಕಲ್ಕತ್ತೆಯಿಂದ ಒಬ್ಬರ ಪತ್ರ ಬಂದಿತ್ತು. ಅವರಿಗೆ ಅಭ್ಯಾಸದ ವಿವರಗಳನ್ನು ಕಳುಹಿಸಲಾಗಿದೆ. ಮನಸ್ಸಿನಲ್ಲಿ ದೃಢತೆ ಇರಬೇಕು. ಇದರ ವಿರುದ್ಧ ಯಾರಾದರೂ ಹೇಳಿದರೆ, ಪರೀಕ್ಷಕನ ದೃಷ್ಟಿಯಲ್ಲಿ ಅದು ಬಂಗಾರವೇ ಇರುತ್ತದೆ. 'ಅಸ್ಥಿಗಳು ಕರಗಿ–ಕರಗಿ ಕಾಣೆಯಾಗುತ್ತಿವೆ'– ಎಂದು ಬರೆದಿದ್ದೀಯೆ. ಈಶ್ವರನ ಕೃಪೆಯಿಂದ ಅವು ಕರಗುತ್ತಲೂ ಇಲ್ಲ, ಮರೆಯಾಗಿ ಹೋಗುತ್ತಲೂ ಇಲ್ಲ. ಬದಲಿಗೆ, ಅದು ನಿರಸನ (Negation)ದ ಸಿದ್ಧತೆಯಾಗಿದೆ, ಒಳಗೂ ಹೊರಗೂ (ಅಂತರ್ಬಾಹ್ಯದಲ್ಲಿ) ಒಂದೇ ಆಗಿ ಸಮತಟ್ಟಾಗಿರುತ್ತದೆ

F-4-Books-PM-7-Anantyatre-146



ಎಂಬ ನಿನ್ನ ಅನುಭೂತಿಗೆ, ಉತ್ತರವನ್ನು ಹಿಂದಿನ ಪತ್ರದಲ್ಲಿ ಕೊಟ್ಟಿದ್ದೇನೆ. ಶಿರಸ್ಸಿನ ಹಿಂಭಾಗ, (Occpetal Prominence – ಎಂದು ಕರೆಯಲಾದದ್ದು) 'ಬ್ರಹ್ಮ'ನ ಭಂಡಾರವಾಗಿದೆ. ಅಲ್ಲಿ ಅಲೆಗಳೇಳುವುದರ (लपकन) ಅನುಭೂತಿಯಾಗುವುದೆಂದರೆ, ಅಲ್ಲಿ (ಆಧ್ಯಾತ್ಮಿಕತೆಯ) ಪ್ರಭಾವ ಬೀಳುತ್ತಿದೆಯೆಂದು ಅರ್ಥ. ಅಭ್ಯಾಸಿಯು ಯಾವ ಸ್ಥಾನದಲ್ಲಿರುತ್ತಾನೋ ಅದಕ್ಕಿಂತಲೂ ಮುಂದೆ ಅವನ ಡೇರೆ ಅದಾಗಲೇ ಸ್ಥಾಪಿಸಲ್ಪಡುತ್ತದೆ ಎಂಬುದು ಕಂಡು ಬಂದಿದೆ, ಮತ್ತು ಇದು ಲಾಲಾಜಿಯವರ ಸಾಮರ್ಥ್ಯದ ಒಂದು ರುಜುವಾತು ಆಗಿದೆ. ಅಷ್ಟೇ ಅಲ್ಲದೆ, ಕೆಲವೇ ದಿನಗಳ ಅಭ್ಯಾಸದ ನಂತರ Occipetal bone (ಹಿಂದಲೆಯ ಎಲುಬು) ಮೇಲೆ ಕೆಲವು ಅಲೆಗಳು ಏಳಲಾರಂಭಿಸುತ್ತವೆಯೆಂಬುದು ಅನುಭವ ಸಿದ್ಧ ಸಂಗತಿಯಾಗಿದೆ. ವಾಸ್ತವವಾಗಿ, ಅದರಲ್ಲಿ (ಅಭ್ಯಾಸಿಗಳಲ್ಲಿ) ಮೂಲ ವಾಸ್ತವಿಕ ತತ್ತ್ವ (Reality) ಅರ್ಥಾತ್, ಅವರು ಏನಾಗಬೇಕೆಂದಿದೆಯೋ ಅದನ್ನು ಆರಂಭದಲ್ಲಿಯೇ ಬಿತ್ತಲಾಗುತ್ತದೆ. ಇದರಿಂದ ಪ್ರಗತಿಯು ಬಹು ತೀವ್ರವಾಗಿ ಆಗುತ್ತದೆ.

ಮಾತನಾಡುವಾಗ ನಿನ್ನ ತಾಯಿಯೊಂದಿಗೆ ಮಾತನಾಡುತ್ತೀಯೋ ಅಥವಾ ತಂದೆಯೊಂದಿಗೊ ಎಂಬುದರ ಭೇದದ ಅರಿವಾಗದಿರುವುದನ್ನು ಬರೆದಿದ್ದೀಯೆ. ಸಂಬಂಧದ ಕೊಂಡಿ ಕಡಿದು ಹೋಗಿರುವುದನ್ನು ಇದು ಸೂಚಿಸುತ್ತದೆ; ಆದರೆ ಇದರಲ್ಲಿ ಸಮತೆಯೂ ಉಂಟಾಗುವುದು. ಅದು ಹೆಚ್ಚಾಗಲು ಕೆಲಮಟ್ಟಿಗೆ ಇನ್ನೊಂದು ಕಾರಣ, ಶರೀರದ ನಿಃಶಕ್ತಿಯಿಂದಾಗಿ ಮೆದುಳಿನಲ್ಲಿ ಉಂಟಾದ ಬಲಹೀನತೆಯಾಗಿದೆ; ಮತ್ತು ಅದರ ಮೇಲೆ ಒತ್ತಡವಿರುವುದರಿಂದ, ಅದರ ಕಾರ್ಯಕ್ಷಮತೆಯಲ್ಲಿ ಸ್ವಲ್ಪ ಕೊರತೆಯಾಗಿ ಕಂಡು ಬರುತ್ತದೆ. ಈ ವಿವರಣೆಯ ಅರ್ಥ ನಿನ್ನ ಮೆದುಳು (ಮನಸ್ಸು) ದುರ್ಬಲ ಎಂದಲ್ಲ; ಬದಲಿಗೆ ಅದರಲ್ಲಿ ಶಕ್ತಿ(ಬಲ) ಇರುವುದಕ್ಕಿಂತ ಹೆಚ್ಚು ಕೆಲಸವನ್ನು ಅದರಿಂದ ತೆಗೆದುಕೊಳ್ಳಲಾಗುತ್ತಿದೆ ಎಂದಾಗುತ್ತದೆ. ಹಾಗೆನ್ನುವುದಾದರೆ, ನಿನ್ನ ಬುದ್ಧಿ ತೀಕ್ಷ್ಣವಾಗಿದೆ ಮತ್ತು ಮೆದುಳೂ ಒಳ್ಳೆಯದಿದೆ. ಬೇರೆಯವರು ಹೇಳಿದುದು ಬೇಗ ಕೇಳಿಸಿಕೊಳ್ಳದಿರುವುದಕ್ಕೆ, ಏಕಾಗ್ರತೆ ಮತ್ತು ಅದರ ಫಲ ಸ್ವರೂಪವಾಗಿ ಲಕ್ಷ್ಯ ಅತ್ತ ಹೊರಳದಿರುವುದೇ ಕಾರಣ. ನೀನು ಈಶ್ವರನ ಸ್ಮರಣೆಯಲ್ಲಿ ಮೊದಲೇ ಮೈಮರೆತವಳಾಗಿದ್ದೀಯೆ. ಆದರೆ ಅದಿದ್ದಾಗ 'ಎರಡನೆಯದು' ನಿನ್ನ ಎದುರಿಗಿತ್ತು. ಆದರೆ ಈಗ ಒಂದೇ ಇದೆ. ಹಾಗಾಗಿ ಮರೆಯುವುದು ಏನನ್ನು?

ಕೇಸರಳ ಪತ್ರ ಓದಿದೆ. ಅವಳ ಸ್ಥಿತಿ ಈಶ್ವರನ ಕೃಪೆಯಿಂದ ಚೆನ್ನಾಗಿ ಮುಂದುವರಿಯುತ್ತಿದೆ.

ಅಮ್ಮಾ ಮತ್ತು ತಾವೂಜಿಯವರಿಗೆ ಪ್ರಣಾಮಗಳು. ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ



* * * *

ಕ್ರಮ ಸಂಖ್ಯೆ – ೧೪೬ **ಪತ್ರ ಸಂಖ್ಯೆ – ೫೪೦** ಷಾಹಜಹಾನಪುರ
೧೧–೦೧–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ ಎರಡೂ ಪತ್ರಗಳು ಕೈ ಸೇರಿದವು. ಅಭ್ಯಾಸಿಗಳು (ಸಾಧಕರು) ಷಾಹಜಹಾನಪುರಕ್ಕೆ ಬಂದು, ಮರಳಿ ಹಿಂದಿರುಗಿದಾಗ ತಮ್ಮ ಹೃದಯವನ್ನು ನನ್ನ ಬಳಿಯೇ ಬಿಟ್ಟು ಹೋಗುತ್ತಾರೆ– ಎಂದು ಬರೆದಿದ್ದೀಯೆ. ನಿನ್ನ ಅನುಭೂತಿ ಸರಿ ಇದೆ, ಏನೆಂದರೆ, ಅವರ ಮನಸ್ಸು (ಲಕ್ಷ್ಯ) ನನ್ನ ಕಡೆಗೆ ಇರುತ್ತದೆ. ಆದರೆ, ನನ್ನ ಮನಸ್ಸು ಅವರ ಜೊತೆಗೆ ಕೆಲದಿನಗಳವರೆಗೆ ಇರುತ್ತದೆ ಎಂಬ ರೀತಿಯಲ್ಲಿ ಇದನ್ನು ಭಾವಿಸಿದರೆ ಹೆಚ್ಚು ಸರಿಯಾದೀತು. ನನ್ನ ಕಡೆಗೆ ಅವರ ಆಕರ್ಷಣವಿರುವಾಗ ನನ್ನ ಮನಸ್ಸೂ ಅವರ ಕಡೆಗಿರುತ್ತದೆಯೆಂಬುದು ನಿಶ್ಚಿತ. ಆದರೆ ಎಲ್ಲರ ವಿಷಯದಲ್ಲಿ ಹೀಗಾಗುವುದು ಕಂಡು ಬರುವುದಿಲ್ಲ. ಒಂದು ವೇಳೆ ಅವರು ನನ್ನ ಬಳಿ ಅವರ ಮನಸ್ಸನ್ನು ಶಾಶ್ವತವಾಗಿ ಬಿಟ್ಟು ಹೋದರೆ, ಅವರು ಮತ್ತೇನನ್ನೂ ಹುಡುಕುವ ಅಗತ್ಯ ಬರುವುದಿಲ್ಲ.

ನಿನ್ನ, ಎಚ್–೧ (H1) ಸ್ಥಾನದಲ್ಲಿ, ಪ್ರಕೃತಿಯ ಕಡೆಯಿಂದ (ಉಂಟು ಮಾಡಲಾದ) ಅಂಧಕಾರವು ಒಂದು ತಡೆ (Check) ಆಗಿತ್ತು ಎಂಬ ನಿನ್ನ ಅನಿಸಿಕೆ ಸರಿ ಇದೆ. ಅದಿಲ್ಲದಿದ್ದರೆ ನೀನು ವಿಶೇಷ ವ್ಯಕ್ತಿ (ವಿಭೂತಿ) (Special Personality) ಆಗುತ್ತಿದ್ದೆ ಮತ್ತು ನಾನು ಜಗತ್ತಿನಿಂದ ಹೊರಟು ಹೋಗಬೇಕಾಗುತ್ತಿತ್ತು. ನನ್ನ ಮನಸ್ಸು ಯಾವ ರೀತಿಯಿಂದಲೂ ಒಪ್ಪಿರದಿದ್ದರೂ, ಸ್ವಾಮಿ ವಿವೇಕಾನಂದರು ತಡೆದು ನಿಲ್ಲಿಸಿದರು. ಇದರಿಂದ ನಿನಗೆ ಏನೂ ಹಾನಿ ಉಂಟಾಗಲಿಲ್ಲ. ನನಗೆ ತಿಳಿದಂತೆ, ಅದು ಪ್ರವಾದಿಯ (Prophetic) ಸ್ಥಾನ; ಮತ್ತು ನಿನ್ನ ಈ ಸ್ಥಿತಿ ಮೊದಲೇ ಪ್ರಾರಂಭವಾಗಿತ್ತು. ಅದು ಮೇಲೆದ್ದು ಬರದಂತೆ ಯೋಜಿಸಲಾಗಿದೆ; ಅದರಿಂದಲೂ ನಿನಗೆ ಯಾವುದೇ ಹಾನಿ ಇಲ್ಲ. ನಿನ್ನೆ ರಾತ್ರಿ ಒಂಭತ್ತೂವರೆ ಘಂಟೆಗೆ ನೀನು ಆಯ್–೧ (I1) ಸ್ಥಾನದ ಕಡೆಗೆ ಒಲಿಯುವಂತೆ ಮಾಡಿದ್ದೇನೆ. ಎಚ್–೧ (H1) ಮೇಲಿನ ಅಂಧಕಾರ ಹೊರಟು ಹೋಗುತ್ತಿರಲಿ ಎಂಬ ಕಾರಣ ಪೂರ್ತಿಯಾಗಿ ಆ ಬಿಂದುವಿಗೆ ಒಯ್ದಿಲ್ಲ. ಮತ್ತು ಅಂತರ್ಬಾಹ್ಯದಲ್ಲಿ ನಿನಗೆ ಒಂದೇ ಸಮತಟ್ಟು ಪ್ರದೇಶವಾಗಿ ಭಾಸವಾಗುತ್ತಿತ್ತು. (ಅದುವರೆಗೆ) ಅದು (H1) ಅನ್ಯ ವಸ್ತುವಾಗಿತ್ತು; ಈಗ ಅದು ಮತ್ತು ನೀನು ಮಿಲಿತವಾಗಿ ಒಂದೇ ಆಗಿ ಬಿಟ್ಟಿದ್ದೀರಿ. ನೋವು ತನ್ನ ಸೀಮೆಯನ್ನು ಮೀರಿದಾಗ, ಅದೇ ಅದಕ್ಕೆ ಔಷಧವಾಗಿ ಸಲ್ಲುತ್ತದೆ. ನೀನು ನಿನ್ನ ಪತ್ರದಲ್ಲಿ ಬರೆದ ವಿಷಯಗಳನ್ನು ಕುರಿತು ಕೆಲವು ಸಾಲುಗಳನ್ನು ಬರೆಯುತ್ತೇನೆ.

P-4-Books-PM-7-Anantyatre-147



'ನಿನ್ನನ್ನು ನೀನು ಗುರುತಿಸಿಕೋ, ಅರ್ಥಾತ್ ನೀನು ಯಾರು ಎಂಬುದನ್ನು ಅರಿತುಕೊ'– ಎಂದು ಎಲ್ಲರೂ ಹೇಳುತ್ತಾರೆ– ಅವರು ಸರಿಯೇ ಇರಬಹುದು. ಆದರೆ, ನನ್ನನ್ನು ಕೇಳಿದರೆ, ತನ್ನನ್ನು ತಾನು ಮರೆಯುವುದೇ, ಅರ್ಥಾತ್ ದೇಹಪ್ರಜ್ಞೆ ಮತ್ತು ಆತ್ಮ–ಪ್ರಜ್ಞೆಗಳೆರಡನ್ನೂ ಕಳೆದುಕೊಳ್ಳುವುದೇ, ಎಲ್ಲವನ್ನೂ ಸಾಧಿಸಿದಂತೆ ಎಂದು ಹೇಳುತ್ತೇನೆ. ನಮ್ಮಲ್ಲಿ ಗುರುತಿಸುವ ಅಥವಾ ಅರಿಯುವ ಶಕ್ತಿ ಇದ್ದರೆ, ನಾವು ಮತ್ತು ನಾವು ಅರಿಯಬೇಕೆಂದಿರುವ ವಸ್ತು– ಈ ಎರಡೂ ಉಳಿಯುತ್ತವೆ; ಆಗ ನಾವು ಎಂದೂ ಅರಿತುಕೊಳ್ಳಲಾರೆವು. ಆದ್ದರಿಂದ ಸರಳ ಉಪಾಯವೆಂದರೆ, ನಮ್ಮನ್ನು ನಾವು ಮರೆಯುವ ಪ್ರಯತ್ನ ಮಾಡೋಣ. ನಾನು ಇದೇ ಪ್ರಯತ್ನ ಮಾಡುತ್ತಿದ್ದೇನೆ, ಮತ್ತು ಜನರಿಗೆ ಅಂಥದೇ ಅಭ್ಯಾಸ ಮಾಡಲು ತಿಳಿಸುತ್ತೇನೆ. 'ನಿನ್ನನ್ನು ನೀನು ತಿಳಿ' (Know thyself) ಎಂಬುದನ್ನು ಬರೆದವ ಸಾಕ್ರೆಟಿಸ್ ಎಂದು ನಾನು ತಿಳಿದಿದ್ದೇನೆ; ಮತ್ತೆ ಅದರದೇ ಪುನರುಕ್ತಿಯಾಗುತ್ತ ಬಂದಿತು. ಭಾರತವರ್ಷದ ಜ್ಞಾನಿಗಳು ಇದರ ಮೇಲೆ ಬಹಳ ಒತ್ತು (ಮಹತ್ವ) ಕೊಟ್ಟಿರಲೂಬಹುದು. ನಾವು ನಮ್ಮನ್ನು, ಬೆಣ್ಣೆ ಮಾತ್ರವೇ ಉಳಿಯುವಂತೆ– ಕಡೆಯಬೇಕು; ಕಡೆಯುವುದು ಧ್ಯಾನದ ಮೂಲಕವೇ ನಡೆಯುತ್ತದೆ. ನಾನು ಈ ಸಲ ಲಖೀಂಪುರಕ್ಕೆ ಬಂದಾಗ ಅಲ್ಲಿಯೇ ಉಳಿದು ಬಿಟ್ಟೆ, ತಿರುಗಿ (ಷಾಹಜಹಾನಪುರಕ್ಕೆ) ಬರುವುದೇ ಅಸಾಧ್ಯವೇನೋ ಎಂಬಂತೆ ಅಲ್ಲಿ ಉಳಿದೆ– ಎಂದು ನೀನು ಬರೆದಿದ್ದೀಯೆ. ಅದು ಸರಿಯೇ ಇದೆ.

ಕೇಸರ್‌ಳ ಪತ್ರವೂ ತಲುಪಿದೆ. ಅವಳಿಗೆ ಸಂಸ್ಕಾರಗಳು ಉಂಟಾಗುವುದು ನಿಂತು ಹೋಗಿದೆ. ಚಿಂತೆಯೇ ಇರದುದರ ಅರ್ಥವೇನೆಂದರೆ ತನ್ನೊಳಗೆ ಮಗ್ನಳಾಗಿರುತ್ತಾಳೆ. ಮೇಲಿನಿಂದ ಅಂಧಕಾರದ ಅನುಭೂತಿಯಾಗುವುದರಿಂದ, ತ್ರಿಕುಟಿಯಲ್ಲಿ ಅವಳ ಯಾತ್ರೆ ಶುರುವಾಗಿರುವುದು ತಿಳಿದು ಬರುತ್ತದೆ.

ಶುಭ ಚಿಂತಕ<br>
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೭ **ಪತ್ರ ಸಂಖ್ಯೆ – ೫೪೩** ಷಾಹಜಹಾನಪುರ<br>
೩೧–೦೧–೧೯೫೬

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು.

ಜನೆವರಿ ೧೧ ಮತ್ತು ೧೪ರ ನಿನ್ನ ಪತ್ರಗಳು ಕೈ ಸೇರಿದವು. ನಿನ್ನ ಪತ್ರಗಳಿಗೆ ಉತ್ತರಿಸುವ ಮೊದಲು, ಒಂದು ಶುಭ ಸಮಾಚಾರ ಹೇಳುತ್ತೇನೆ. ನಿನ್ನ ಕಾಶೀರಾಮು ಮತ್ತು ಗಜಾನಂದಜಿಯವರು ಆಸಾಮದಿಂದ ಬಂದರು.

ಈಗ ನಿನ್ನ ಆಧ್ಯಾತ್ಮಿಕ ದಶೆಯನ್ನು ಕುರಿತು ಸ್ವಲ್ಪ ಬರೆಯುತ್ತೇನೆ.



ನಿನ್ನ ಆಧ್ಯಾತ್ಮಿಕ ದಶೆಗಳನ್ನು ಅರ್ಥ ಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ನನಗೆ ಕೂಡ ಅವುಗಳನ್ನು ಅರ್ಥ ಮಾಡಿಕೊಳ್ಳುವಾಗ ಕಷ್ಟವೆನಿಸುತ್ತದೆ ಮತ್ತು ಅದಕ್ಕೆ ಶಬ್ದಗಳು ಸಿಗುವುದಿಲ್ಲ. ನೀನು ಅದೆಂಥ ಅದ್ಭುತ ಸ್ಥಿತಿಯನ್ನು ಚೆನ್ನಾಗಿ ವರ್ಣಿಸಿದ್ದೀಯೆ–'*ಕಣ್ಣು ಮುಚ್ಚಿದಾಗ ಕತ್ತಲೆಯ ಅನುಭೂತಿಯೂ ಇಲ್ಲ, ಕಣ್ಣು ತೆರೆದಾಗ ಬೆಳಕಿನ ಅನುಭೂತಿಯೂ ಇಲ್ಲ*'. ಎಲ್ಲಿ ಬೆಳಕೂ ಇಲ್ಲವೋ, ಕತ್ತಲೆಯೂ ಇಲ್ಲವೊ ಆ 'ಸತ್ಯ' (Reality)ದ ಚರಟ ಇದು ಎಂದು ತೆಗೆದುಕೊಳ್ಳಬಹುದು, ಅಥವಾ ಹಾಗೆ ಅರ್ಥ ಮಾಡಿಕೊಳ್ಳಬಹುದು. ಜನರು ಅದನ್ನು 'ಪ್ರಕಾಶ' ಎಂದು ಕರೆಯುತ್ತಾರೆ. ಮತ್ತು ನಾನು ಕೂಡ ವಿಚಾರ ಪ್ರಕಟಿಸಲಿಕ್ಕೋಸ್ಕರ ಆ ಶಬ್ದವನ್ನು ಬಳಸುತ್ತೇನೆ. ಯಾರಾದರೂ 'ಭೂಮಾ' (ಅಂತಿಮ ಸತ್ಯ)ದತ್ತ ಇಣುಕಿ ನೋಡಿದರೆ, ಅವರಿಗೆ, ಈ ಸ್ಥಿತಿಯ ಸೂಕ್ಷ್ಮತರ ಅವಸ್ಥೆ ಕಂಡು ಬಂದೀತು; ಅದರ ಅನುಭೂತಿ ನಿನಗೆ ಆಗಿದೆ. ಆದರೆ ಯಾರ ಬಳಿ ಹೃದಯ ಉಳಿದಿಲ್ಲವೋ ಅವನು ಮಾತ್ರವೇ ಇಣುಕಿ ನೋಡಬಲ್ಲ. ನಾನು ನನ್ನ 'ಅನಂತದೆಡೆಗೆ' (Towards Infinity) ಪುಸ್ತಕದಲ್ಲಿ ಈ ವಿಷಯ ಬರೆದಿದ್ದೇನೆ. "ಒಳಗೂ–ಹೊರಗೂ ಒಂದು 'ನೀರವತೆ' ಆವರಿಸಿದಂತಿದೆ"–ಎಂದು ನೀನು ಬರೆದಿದ್ದೀಯೆ. ಇದನ್ನು ಅಭಿವ್ಯಕ್ತಪಡಿಸಲು 'Wilderness' ಎಂಬ ಇಂಗ್ಲೀಷ್ ಶಬ್ದ ಹೆಚ್ಚು ಸೂಕ್ತವಾದೀತು; ಅಥವಾ ಏಕಾಕಿತನ (ಶೂನ್ಯತಾ ಭಾವ) ಎಂದೂ ಹೇಳಬಹುದು. ಆದರೆ ಇದು (ಏಕಾಂಗಿತನ) ಅದಕ್ಕಿಂತ ನಂತರ ಬರುವುದಾಗಿದೆ. ಆದರೆ, ನಿಜವಾದ (ಸತ್ಯದ) ಸ್ಥಿತಿ ಇನ್ನೂ ಬಹು ದೂರ ಉಂಟು. ಇನ್ನೂ ನಿನ್ನ ಸ್ಥಿತಿಯಲ್ಲಿ ಭೌತಿಕತೆಯ (Matter) ಕೆಲವು ಹಗುರಾದ ಪರಮಾಣುಗಳು ಉಳಿದಿವೆ; ಮತ್ತು ಇದು ಆಯ್–೧(I1)ದ ಸ್ಥಿತಿಯಾಗಿದೆ. ಒಂದಿಷ್ಟು ಮಂದವಾದ ಸಂವೇದನೆ (ಕಣ್ಣು ಕುಕ್ಕುವಿಕೆ) ಕೂಡ ಇದೆ, ಅದು ಅತ್ಯಂತ ಗಮನವಿಟ್ಟು ನೋಡಿದಾಗ ಮಾತ್ರ ಗೊತ್ತಾಗುವಂತಿದೆ ಈ ಸಂವೇದನೆ. ಕಂಪನದ ಸೂಕ್ಷ್ಮಗತಿಯಲ್ಲದೆ ಬೇರೆ ಅಲ್ಲ. 'ನಿರಸನ'ದಲ್ಲಿ ಇವು ಯಾವವೂ ಉಳಿಯುವುದಿಲ್ಲ. ಒಂದು ರೂಕ್ಷ ಸ್ಥಿತಿಯು ಬದಲಾವಣೆ ಇಲ್ಲದೆ ಇರುತ್ತದೆ. ಮತ್ತು ಅದರ ಅನುಭೂತಿಯೂ ಇರುವುದಿಲ್ಲ. ಅದಕ್ಕೂ ಮುಂದೆ ಕಂಪನವು ಮಾಧ್ಯಮವಾಗುವಲ್ಲಿ ಅಪಾರ ಶಕ್ತಿ ಇರುತ್ತದೆ. 'ನಿರಸನ'ಕ್ಕೆ,ಒಂದು 'ಮೃತ' ಅವಸ್ಥೆ ಎನ್ನಬೇಕು; ಆದರೆ ಸಕಲ ಪ್ರಾಣಶಕ್ತಿಯ 'ಮೂಲ'ವು ಅದೇ ಆಗಿದೆ. ವಾಸ್ತವವಾಗಿ ನಾವು (Ego) ಸತ್ತ ಮೇಲೆಯೇ ನಿಜವಾದ ಜೀವನ ಬದುಕುತ್ತೇವೆ. 'ಏಕಾಗ್ರತೆ' ಉತ್ಕೃಷ್ಟ ಸ್ವರೂಪ ತಳೆದಾಗ, ಅದರ ಅನುಭೂತಿಯಾಗಲಾರದು. 'ಈಶ್ವರ', 'ಆತ್ಮ' ಇವು ನಿನಗೆ ದಂತಕತೆಗಳೆಂಬಂತೆ ತೋರಿ ಬರುತ್ತವೆ. ಇದು, ರತ್ನದ ಅಂಗಡಿಯ ಎದುರಿಗೆ ಬಣ್ಣದ ಅಂಗಡಿ ಇಟ್ಟಂತಾಯಿತು. ನಿಜ ಹೇಳಬೇಕೆಂದರೆ, ಬ್ರಹ್ಮವಿದ್ಯಾಪ್ರಾಪ್ತಿಗೋಸ್ಕರ ಜನರು ಬಣ್ಣದ (ಆಕರ್ಷಕ ವಿಧಾನಗಳು) ಅಂಗಡಿಗಳನ್ನೇ ತೆರೆಯುತ್ತಾರೆ ಮತ್ತು ಜೀವನವಿಡೀ ಅದನ್ನೇ ಮಾರುತ್ತಿರುತ್ತಾರೆ. ಯಾರ ದೃಷ್ಟಿ ಈ ಬಣ್ಣಗಳ ಮೇಲೆ

ಆಕರ್ಷಿತವಾಗುವುದೋ ಅವರ ಮನಸ್ಸಿನಲ್ಲಿಯೂ ಆ ಬಣ್ಣಗಳೇ (ವರ್ಣಮಯತೆಯೇ) ಬೆಳೆಯುತ್ತದೆ. ಆದರೆ ವಾಸ್ತವವಾಗಿ, ಯಾವುದು ನಮ್ಮೊಳಗೆ ವರ್ಣಮಯವಿದೆಯೋ ಅವೆಲ್ಲವನ್ನೂ ತ್ಯಜಿಸಬೇಕಿತ್ತು.

ಪ್ರತಿಯೊಂದು ಕಣ ಕಣದಿಂದಲೂ ಈಶ್ವರೀಯ ಪ್ರಕಾಶ ಹೊಮ್ಮುತ್ತದೆಯೆಂಬ ಅನುಭೂತಿಯಾಗುವುದು, ಪ್ರಾಥಮಿಕ ಸ್ತರದ ಲಯಾವಸ್ಥೆ ನಿನಗೆ ಬ್ರಹ್ಮದಲ್ಲಿ ಉಂಟಾಗಿದೆಯೆಂಬುದನ್ನು ತಿಳಿಸುತ್ತದೆ. ಹಿಂದೆ ಯಾವುದೋ ಪತ್ರದಲ್ಲಿ ನಾನು ಬರೆದಿದ್ದೆ, ಮತ್ತು ಋಗ್ವೇದವೂ ಕೂಡ. 'ಬ್ರಹ್ಮ'ದ ಅನೇಕ ಪ್ರಕಾರಗಳುಂಟು ಎಂದು ಹೇಳುತ್ತದೆ. ನಿನ್ನ ಈಗಿನ ಸ್ಥಿತಿಯು ಒಳ್ಳೊಳ್ಳೆಯ ಋಷಿಗಳಿಗೂ ಕಷ್ಟ ಸಾಧ್ಯ. ನಮ್ಮ ಮಿಷನ್ನಿನಲ್ಲಿ ಬ್ರಹ್ಮವಿದ್ಯೆಯ ಶಿಕ್ಷಣವು ಎಷ್ಟು ಸುಲಭದ್ದಾಗಿದೆಯಾದರೂ ಯಾರೂ ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳುವುದಿಲ್ಲ; ಆದ್ದರಿಂದ ಅದರ ಮೌಲ್ಯ ಕಡಿಮೆಯೆಂದೆನಿಸಿರುವುದು ಖೇದದ ಸಂಗತಿ. ಅಂದರೆ, ಅದರ ಬಗ್ಗೆ ಜನರಿಗೆ ಆದರವಿಲ್ಲ ಎಂಬುದು ನಾನು ಹೇಳುವುದರ ತಾತ್ಪರ್ಯ. ದಕ್ಷಿಣದಲ್ಲಿ ನೀನು ಕಂಡ ರಕ್ತಪಾತ, ಅದು ಘಟಿಸಲೇ ಬೇಕಿದೆ. ಹೀಗೆ ಯಾವುದೋ ಸಮಯದಲ್ಲಿ ಯಾರೊಂದಿಗೋ ನಾನು ಸಂಭಾಷಣೆಯಲ್ಲಿದ್ದಾಗ, ಇದು ದಕ್ಷಿಣ ಭಾರತದಿಂದ ಶುರುವಾಗುವುದು ಎಂದು ಹೇಳಿದ್ದೆ. ಅದು ನಿಜವಾಗುವ ಸಂಭವವಿದೆ. ನೀನು ಸತ್ಸಂಗಿಗಳಿಗೆ 'ರಕ್ಷೆ'ಯನ್ನುಂಟು ಮಾಡಿದುದು ಒಳ್ಳೆಯದಾಯಿತು. ಈಶ್ವರೇಚ್ಛೆಯಿದ್ದರೆ ಅವರು ಸುರಕ್ಷಿತವಾಗಿರುತ್ತಾರೆ. ಆತ್ಮವು ಸರ್ವವ್ಯಾಪಕವಾದುದು. ಆದರೆ, ಜನರು ಯಾವ ಸ್ಥಿತಿಯ ಹುಡುಕಾಟದಲ್ಲಿರುವರೋ, ಅದೇ ನಿನ್ನ ಸ್ವರೂಪವಾಗಿದೆಯೆಂದು, ಈ ವಿಷಯದಲ್ಲಿ ನಿನಗಾದ ಅನುಭೂತಿಯು ಸೂಚಿಸುತ್ತದೆ. ಆದರೆ ಖೇದದ ವಿಷಯವೆಂದರೆ, ಜನರು ಮಣ್ಣಿನ ಮಡಕೆಯಲ್ಲಿ ಆನೆಯನ್ನು ಹುಡುಕುತ್ತಾರೆ.

ನೀನು ಆಯ್–೧(I1)ದ ಸ್ಥಿತಿಯ ಬಗ್ಗೆ ಸರಿಯಾಗಿಯೇ ಬರೆದಿದ್ದೀಯೆ. ನನ್ನಲ್ಲಿ ಗುರು ಮಹಾರಾಜರ ಜ್ಞಾನ ಮತ್ತು ಬುದ್ಧಿಗಳು ಕೆಲಸ ಮಾಡುತ್ತಿರದಿದ್ದರೆ, ಅಥವಾ ನನ್ನ ನೆರವಿಗೆ ಬಾರದಿದ್ದರೆ, ಉನ್ನತ ಮಟ್ಟದ ಆಧ್ಯಾತ್ಮಿಕ ಶಿಕ್ಷಣ (ತರಬೇತಿ) ಕೊಡಲು ನನಗೆ ಶಕ್ಯವಾಗುತ್ತಿರಲಿಲ್ಲ ಎಂಬುದು ನಿಜವೇ ಇದೆ. ಎಚ್–೧(H1) ಬಿಂದುವಿನಲ್ಲಿಯ ಅಂಧಕಾರವನ್ನು ದೂರ ಮಾಡಲು ಅದರ ಪೂರ್ಣ ಶಕ್ತಿಯನ್ನು ನಾನು ಆಯ್–೧(I1)ದ ಮೇಲೆ ವರ್ತಿಸುವಂತೆ ಮಾಡಿದ್ದೆ. ಅದರ ಪರಿಣಾಮವಾಗಿ ಎಚ್–೧(H1)ದ ಕೂಡ ಸರಿ ಹೋಯಿತು ಮತ್ತು ನೀನು ನಿನ್ನ ಎರಡನೆಯ ಹೆಜ್ಜೆಯನ್ನೂ ಆಯ್–೧(I1)ದಲ್ಲಿ ಇಡಲು ಉಪಕ್ರಮಿಸಿದೆ. ಎಚ್–೧(H1) ಸ್ಥಾನದಲ್ಲಿ ಕಂಡು ಬರುತ್ತಿದ್ದ ಅಂಧಕಾರವು ಯಾವುದೇ ಕಾಲಿಮೆ (ಕಪ್ಪು) (Grossness), ಅಥವಾ ನ್ಯೂನತೆಯಾಗಿರಲಿಲ್ಲ. ಅದು ನನ್ನಿಂದಲೇ ಆದ ತಪ್ಪಾಗಿತ್ತು. ನಾನು ಅದಕ್ಕೆ ಅಗತ್ಯಕ್ಕಿಂತ ಹೆಚ್ಚು ಶಕ್ತಿಯನ್ನು ನೀಡಿದ್ದೆ. ಅದರಿಂದಾಗಿ, ಶಕ್ತಿಯ ಒಂದು ಪದರು ಅದಕ್ಕೆ ಅಂಟಿಕೊಂಡಿತ್ತು (ಗಟ್ಟಿಯಾಗಿ ನೆಲೆಸಿತ್ತು). ಅದು ನಾನು ಹೊರದೂಡಿದರೂ ಹೊರಟು ಹೋಗುತ್ತಿರಲಿಲ್ಲ. ಗುರು ಮಹಾರಾಜರ ಕೃಪೆಯಿಂದ,



ಅದರ ವಿಧಾನ (ಈ ಮೇಲೆ ಹೇಳಿದುದು) ನನಗೆ ಹೊಳೆಯಿತು. ಇದರಿಂದ ನನ್ನ ತಪ್ಪಿನ ಪರಿಣಾಮವೂ ದೂರವಾಯಿತು, ಮತ್ತು ಈ ತಪ್ಪಿನಿಂದಾಗಿ, ಮುಂದಿನ ಬಿಂದುವಿನಲ್ಲಿ, ನನಗೆ ಸಹಾಯವಾಯಿತು.

ನಿನ್ನ ತಾಯಿ–ತಂದೆಯರಿಗೆ ಪ್ರಣಾಮಗಳು ಮತ್ತು ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೮ **ಪತ್ರ ಸಂಖ್ಯೆ – ೫೪೭** ಷಾಹಜಹಾನಪುರ
೨೯–೦೨–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ತಾರೀಖು ೨೩–೨–೫೬ಕ್ಕೆ ಬರೆದ ಪತ್ರ ತಲುಪಿತು. ಶ್ರೀ ಎಂ. ಕೆ. ಗಣೇಶನ್ (ತ್ರಿಚಿ) ಪೂರ್ತಿಯಾಗಿ ಅಭ್ಯಾಸಕ್ಕೆ ಅಂಟಿಕೊಂಡಿದ್ದಾರೆ. ಫೆ. ೨೫ ರಂದು, ಸಂಜೆ ೭–೧೫ಕ್ಕೆ ಅವರು ತಾನೇ ಸ್ವತಃ ಆತ್ಮದ ಸ್ಥಾನವನ್ನು ತಲುಪಿದರು ಮತ್ತು ಪಿಂಡ ದೇಶಕ್ಕೆ ಸಂಬಂಧಿಸಿದಷ್ಟು ಹೃದಯ ಚಕ್ರದ ಯಾತ್ರೆಯನ್ನು ಕ್ರಮಿಸಿ ಬಂದರು. ಈಗ ಹೃದಯದಲ್ಲಿಯ ಸ್ಥೂಲತೆಯನ್ನು, ಮತ್ತು ಅಂಧಕಾರವನ್ನು ತೆಗೆದು ಹಾಕಿ ಶುದ್ಧಗೊಳಿಸುವ ಕೆಲಸ ನನ್ನ ಮತ್ತು ನಿನ್ನದಾಗಿದೆ.

ನನಗೆ ಮರೆತು ಹೋಗಿದೆ. ನಿನ್ನ ಆಧ್ಯಾತ್ಮಿಕ ಯಾತ್ರೆಯ ಸ್ಥಾನವು ಈಗ ಆಯ್–೧(I1) ಅಲ್ಲವೆ? ನನ್ನೆಣಿಕೆ ಹಾಗೆ ಇದೆ. ಹಿಂದಿನ ಪತ್ರವನ್ನು ನೋಡಿದರೆ ಗೊತ್ತಾಗುವುದು. ಈಶ್ವರನ ಕೃಪೆಯಿಂದ ನಿನ್ನಲ್ಲಿ ಸಾಮ್ಯಾವಸ್ಥೆ ಈಗಾಗಲೇ ಉಂಟಾಗಿದೆ. ಆದರೆ ಅದರಲ್ಲಿ ನಿರ್ಮಲತೆ ಮತ್ತು ಶುದ್ಧತೆಗಳು ಇನ್ನೂ ಉಂಟಾಗಿಲ್ಲ. ಆ ಸ್ಥಿತಿಗೆ ಹೋಲಿಸಿದರೆ, ನೆರಳಿನಂತೆ ಕಪ್ಪಾದ ಒಂದಿಷ್ಟು ಸ್ಥೂಲತೆ (ಭಾರ) ಅಲ್ಲಿರುವಂತೆ ಕಾಣುತ್ತದೆ. ಇದೂ ಕೂಡ, ಈಶ್ವರನ ಕೃಪೆಯಿಂದ ದೂರವಾಗುವುದು. ಉತ್ಸವದಲ್ಲಿ (ಬಸಂತ ಪಂಚಮಿ) ಅದರ ಪ್ರಭಾವದ ಅನುಭೂತಿಯಾಗದೆ ಇರುವುದು, ನೀನು ನಿನ್ನೊಳಗೇ ಅಂಟಿಕೊಂಡು ಲಯಾವಸ್ಥೆಯನ್ನು ಹೊಂದಿದ್ದೀಯೆ ಎಂಬುದನ್ನು ಸೂಚಿಸುತ್ತದೆ. ಮತ್ತು ಇದು ಒಳ್ಳೆಯ ಸ್ಥಿತಿ. ವಿಚಾರರಹಿತ ಸ್ಥಿತಿಯ ಬಗ್ಗೆ ಬರೆದಿದ್ದೀಯೆ– ಇದು 'ಸಾಮ್ಯಾವಸ್ಥೆ'ಯ ತರ್ಜುಮೆಯಾಯಿತಷ್ಟೆ. ಮತ್ತು ಇದೇ ಕಾರಣದಿಂದ ಏಕಾಂಗಿತನವೂ ಪ್ರತೀತವಾಗುತ್ತದೆ. ನೀನು ಇರುವ ಸ್ಥಾನದಲ್ಲಿ ಇಂದ್ರಿಯಗಳ ವೇದನೆಯಿಲ್ಲ ಎಂದು ನೀನು ಸರಿಯಾಗಿಯೇ ಬರೆದಿದ್ದೀಯೆ. ಒಬ್ಬ ಉರ್ದು ಕವಿ ಹೀಗೆ ಹೇಳುತ್ತಾನೆ– 'ಅಲ್ಲಿ ವಿಚಾರಗಳು ಮುಟ್ಟುವುದಿಲ್ಲ, ಬುದ್ಧಿಯೂ ತಲುಪುವುದಿಲ್ಲ' (ನ ಯಹಾಂ ಖ್ಯಾಲ ಪಹುಂಚೇ, ನ ಜೇಹನ್ ಕೀ ಹೈ ರಸಾಯಿ'). ಎಷ್ಟು ನೀನು ಪ್ರೇಮ ಮಾಡಲು ಬಯಸುತ್ತೀಯೋ ಅಷ್ಟು

P-4-Books-PM-7-Anantyatre-149



ಮಾಡುವುದಾಗುವುದಿಲ್ಲ ಎಂದು ಬರೆದಿದ್ದೀಯೆ. ನಾನೂ ಇದನ್ನೇ ಹೇಳುತ್ತಲಿದ್ದೆ, ಹೇಳುತ್ತ ಹೇಳುತ್ತಲೇ ಬಾಡಿ ಬಸವಳಿದು ಹೋದೆ.

ಕೇಸರ್‌ಳ ಪತ್ರ ಬಂದಿದೆ. ಅವಳ ಸ್ವಪ್ನದ ಅರ್ಥವನ್ನು ನಾನು ಹೀಗೆ ವಿವರಿಸಿದ್ದೇನೆ– ಅವಳ ಆತ್ಮವು ನಿರಾವರಣ ರೂಪದಲ್ಲಿ ಬಂದಿದೆ. ಅದರ ವ್ಯಾಖ್ಯೆ ಕೊಡುವುದು ಕಷ್ಟ. ಅದಕ್ಕೆ ತಗಲಿದ್ದ, ಅಂಟಿದ ಏನೇ ಆವರಣಗಳು ಇದ್ದವೋ ಅವೆಲ್ಲ ತೊಲಗಿ ಹೋದಂತಿದೆ ಎಂದು ಬರೆದರೆ ಪರ್ಯಾಪ್ತವೆನಿಸುತ್ತದೆ. ಅದನ್ನೇ ಆತ್ಮದ 'ನಗ್ನ' (ನಿರಾವರಣ) ರೂಪ ಎನ್ನುತ್ತಾರೆ. ಧ್ಯಾನ ಮಾಡುವುದು ಮತ್ತು ಮಾಡದಿರುವುದರಲ್ಲಿ ಅಂತರ ಪ್ರತೀತವಾಗುವುದಿಲ್ಲ– ಎಂದು ಬರೆದಿದ್ದಾಳೆ. ಆದರೆ ಅದನ್ನು ಸರಿಯಾಗಿ ವ್ಯಕ್ತಪಡಿಸಲು ಅವಳಿಗೆ ಶಕ್ಯವಾಗಿಲ್ಲ. ಪೂಜೆ (ಧ್ಯಾನ) ಮಾಡುವುದರಲ್ಲಿ ಯಾವ ಸ್ಥಿತಿ ಇರುವುದೋ ಅದೇ ಸ್ಥಿತಿ ಪೂಜೆ ಮಾಡದಿದ್ದರೂ ಇರುತ್ತದೆ ಎಂಬುದು ಅವಳ ಹೇಳಿಕೆಯ ತಾತ್ಪರ್ಯ. ಹೀಗೆ ಸ್ಥಾಯೀ ರೂಪದಲ್ಲಿ ಬಂದರೆ ಅದು ಒಳ್ಳೆಯದೇ ಸರಿ; ಆದರೆ ಅದಕ್ಕೋಸ್ಕರ ಪ್ರಯತ್ನ ಮಾಡಬಾರದು, ಇದು ತನ್ನಿಂದ ತಾನೇ ಬರಲು ಬಿಡಬೇಕು. ಪ್ರಾರ್ಥನೆ ಮಾಡುವಾಗ ಕಣ್ಮುಂದೆ ಬರುವ ಯುದ್ಧದ ದೃಶ್ಯ ನಿಜವಾಗಲೂಬಹುದು. ಗೋಂಡಾದಿಂದ ಒಬ್ಬ ಅಭ್ಯಾಸಿ ಬರೆದಿದ್ದ, (ಅವನು ಧ್ಯಾನ ಮಾಡುವುದನ್ನು ಕೆಲದಿನಗಳ ನಂತರ ಬಿಟ್ಟುಬಿಟ್ಟ)– "ಧ್ಯಾನದ ಸಮಯದಲ್ಲಿ, ಇಡೀ ಭಾರತ ಒಂದು ಪರದೆಯಿಂದ ಆಚ್ಛಾದಿಸಲ್ಪಟ್ಟಂತೆ, ಮತ್ತು ಅದರ ಮೇಲೆ Danger (ಅಪಾಯ) ಎಂದು ಬರೆದಿರುವಂತೆ ಕಂಡಿತು; ಅದನ್ನು ತೆಗೆದು, ನಾನು ಅದರಲ್ಲಿ ಪ್ರವೇಶಿಸಿದೆ". ಅವನು ಒಂದು ಕನಸು ಕೂಡ ಕಂಡಿದ್ದ. ಈಗ, ಏನು ಸಂಭವಿಸುವುದೋ ಈಶ್ವರನೇ ಬಲ್ಲ.

ಈ ವರ್ಷ ಉತ್ಸವದಲ್ಲಿ ನನ್ನ ಕೈಯಿಂದ ಏನೂ ಖರ್ಚು ಆಗಿಲ್ಲ. ಅಷ್ಟೇ ಅಲ್ಲ, ೩೦–೪೦ ರೂಪಾಯಿಗಳು ಮಿಕ್ಕುಳಿದವು. ಅದನ್ನು ಬ್ಯಾಂಕಿನಲ್ಲಿ ಜಮಾ ಮಾಡಲಾಗುವುದು.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ವಂದನೆಗಳು. ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೪೯ **ಪತ್ರಸಂಖ್ಯೆ – ೫೪೯** ಷಾಹಜಹಾನಪುರ
೧೫–೦೩–೧೯೫೬

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು

ನಿಜವಾದ 'ಜೀವನ' ಎಂದರೇನು? ಜೀವನದ ಜೀವನ ಹೊರಟು ಹೋಗುತ್ತಿರಬೇಕು. ಯಾವುದು ಹೊರಟುಹೋಗಬೇಕೋ ಆ 'ಜೀವನ ಯಾವುದು?



ಯಾವುದರಲ್ಲಿ (ಅಸ್ತಿತ್ವ ಸೂಚಕವಾದ) ..... 'ತ್ವ' ಅಥವಾ 'ತನ' – ಉದಾಹರಣೆಗೆ 'ಜೀವತ್ವ'– ಇರುವುದೋ ಅದು. ಜೀವನ ಮುಗಿದು ಹೋದ ಮೇಲೆ, ಎಲ್ಲ ಹುಡುಕಾಟದ ಹೆಣಗಾಟವನ್ನು ಕೊನೆಗೊಳಿಸುವುದು. ಯಾವುದೋ ಅಂಥ ಜೀವನ ಬಂದರೆ, ಅದನ್ನು ಜಗತ್ತು 'ಮೃತನಾಗುವುದು' ಎಂದೇ ಕರೆಯುವುದು, ಆದರೆ, ಈಶ್ವರನ ದೃಷ್ಟಿಯಿಂದ 'ಜೀವಿಸಿರುವುದು' ಎಂಬುದೇ ಸರಿಯಾದ ಶಬ್ದವಾದೀತು. ನೀನು ಬರೆದಿದ್ದೀಯೆ– 'ನಾನು ಬಂದೆ, ಮತ್ತೆ, ನಾನು ಹೊರಟು ಹೋದೆ, ಆದರೆ ಇದರ ಅನುಭೂತಿಯೇ ಇಲ್ಲ' – ಎಂಬುದಾಗಿ. ಅಂದರೆ, ಆ ನಿಜವಾದ ಜೀವನ ಆರಂಭವಾಯಿತು ಎಂದೇ ಅರ್ಥ. ಆದರೆ– 'ಹೃದಯ ಬಾಬೂಜಿ, ಬಾಬೂಜಿ ಎಂದು ಕೂಗಿ ಕರೆಯುತ್ತಿದೆ' – ಎಂದೂ ಬರೆದಿದ್ದೀಯೆ. ಅಂದರೆ, ಯಾವುದರಿಂದ ನಿಜವಾದ ಜೀವನದಲ್ಲಿ ಜೀವಿಸಿರಬೇಕಾದುದು ಇರುವುದೋ ಆ ಯಾತನೆ ಉಳಿದಿದೆ ಎಂಬುದನ್ನು ಅದು ತಿಳಿಸುತ್ತದೆ. ನಿಜವಾದ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು, ಹೃದಯವು 'ಬಾಬೂಜಿ, ಬಾಬೂಜಿ' ಎಂದು ಕೂಗಿ ಕರೆಯುವುದು ಒಂದು ದೌರ್ಬಲ್ಯವೆಂದೇ ಕರೆಯಲ್ಪಡಬಹುದು. ಆದರೆ, ಯಾವ ಜೀವನಕ್ಕೋಸ್ಕರ ನೀನು ಜೀವಿಸಿರಬೇಕಾಗಿದೆಯೋ ಆ ಜೀವನಕ್ಕೆ ಈ ಭಾವನೆಯೇ ಸಾಧನವಾಗಿದೆ (ಉಪಕರಣವಾಗಿದೆ).

ಮಿಕ್ಕುಳಿದ ನಿನ್ನ ಪತ್ರಕ್ಕೆ ಉತ್ತರವೆಂದರೆ– ಶ್ರಾವಣದಲ್ಲಿ ಹಸಿರೂ ಆಗದ, ಭಾದ್ರಪದದಲ್ಲಿ ಒಣಗಿಯೂ ಇರದ 'ಬಬೂಲ್' ವೃಕ್ಷದಂತೆ ನೀನಾಗುತ್ತಿದ್ದೀಯೆ. ಇನ್ನಿತರ ಮಾತುಗಳು, ಲಯಾವಸ್ಥೆಯ ಉನ್ನತ ಸ್ತರವನ್ನು ಸೂಚಿಸುತ್ತವೆ. ಮತ್ತು ನಿಜವಾಗಿಯೂ 'ಲಯ'ವಾಗುವ ಈ ಪ್ರಕ್ರಿಯೆ, ಒಮ್ಮೆ ಲಯಾವಸ್ಥೆಯಾದರೆ, ಒಮ್ಮೆ ಅದರ ತುರೀಯಾವಸ್ಥೆ ನಡೆಯುತ್ತಲೇ ಇರುತ್ತದೆ.

ಈಗ ನಿನ್ನ ಕತೆಯನ್ನು ಕೈಗೆತ್ತಿಕೊಳ್ಳುತ್ತೇನೆ. ಅಥವಾ, ನಾನು ನನ್ನದೇ ಕತೆಯನ್ನು ಹೇಳುತ್ತಿದ್ದೇನೆಂದೂ ನೀನು ತೆಗೆದುಕೊಳ್ಳಬಹುದು. ನಾನು ಇತ್ತೀಚೆಗೆ ಲಖೀಂಪುರಕ್ಕೆ ಬಂದಿದ್ದಾಗ, ನಿನ್ನನ್ನು ಜೆ–೧ (J1) ಬಿಂದುವಿಗೆ ಕೊಂಡೊಯ್ದಿದ್ದೆ. ಅದರ ಯಾತ್ರೆ ಇನ್ನೂ ಸರಿಯಾಗಿ ಆರಂಭವಾಗಿಲ್ಲ, ಆದರೆ ಅದರ ಲಕ್ಷಣಗಳು ಉಂಟಾಗುತ್ತಿವೆ ಮತ್ತು ಅದರಲ್ಲಿ ಸೂಕ್ಷ್ಮತೆ ಹೆಚ್ಚುತ್ತಿದೆ. ನಿಜ ಹೇಳಬೇಕೆಂದರೆ, ನಾನು ನಿನ್ನ (ಆಧ್ಯಾತ್ಮಿಕ) ಸ್ಥಿತಿಗಳನ್ನು ನೋಡುತ್ತಲೇ ಹೋಗುತ್ತೇನೆ ಮತ್ತು ಕೆಲವೊಂದು ಸ್ಥಿತಿಗಳು ನನಗೆ ಎಷ್ಟು ಒಳಿತೆನಿಸುತ್ತವೆಯೆಂದರೆ, ಅವುಗಳನ್ನು ನೋಡುತ್ತಿರುವುದೇ ನನಗೆ ಸಂತೋಷವೆನಿಸುತ್ತದೆ. ಆದ್ದರಿಂದ ನಿನಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈಗ ಆ ಸ್ಥಾನದಲ್ಲಿ ಇರುವ ಸ್ಥಿತಿಯನ್ನು ನೋಡಿ ನಾನು ಸಂತೋಷಪಡುತ್ತಿದ್ದೇನೆ; ಅದನ್ನು ನೋಡುತ್ತ ಇರಬೇಕೆಂದು ಹೃದಯ ಬಯಸುವುದಾದರೂ, ನಾನು, ಅದರಲ್ಲಿ ನಿನ್ನ ಯಾತ್ರೆಯ (ಕ್ರಮಣದ) ಸ್ಥಿತಿಯನ್ನುಂಟು ಮಾಡುತ್ತೇನೆ.

ಚೌಬೇಜಿಯವರು ಕೊಟ್ಟ ಋಗ್ವೇದವನ್ನು ಓದಿಸಿ ಕೇಳಿದೆ. ಮತ್ತು ಕೇಳುತ್ತಿದ್ದೇನೆ. ಅದರಲ್ಲಿ ಸೋಮರಸದ ವರ್ಣನೆ ಮಾಡಲಾಗಿದೆ. ಮತ್ತು ವ್ಯಾಖ್ಯಾನಕಾರರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವರೊಂದಿಗೆ ನಾನು ಸಹಮತನಾಗಿಲ್ಲ. ನಾನೀಗ ಹೀಗೆ ನಿಶ್ಚಯಿಸಿದ್ದೇನೆ. ನಾನು ಲಖೀಂಪುರಕ್ಕೆ ಬಂದಾಗ ಅನೇಕ ಸತ್ಸಂಗಿಗಳು ಅಲ್ಲಿ ಉಪಸ್ಥಿತರಾಗಿರುತ್ತಾರೆ; ನಾನು ಅವರೆಲ್ಲರಿಗೂ ಸೋಮರಸ ಕುಡಿಸುತ್ತೇನೆ. ಈ ರೀತಿ ನಾನೂ ಒಂದು ಅನುಭವ ಪಡೆಯುತ್ತೇನೆ. ಮತ್ತು ಈಶ್ವರೇಚ್ಛೆಯಿದ್ದರೆ, ಎಲ್ಲರೂ ಸೋಮರಸಪಾನ ಮಾಡಿ ಅದರ ಪರಿಣಾಮದ ಅನುಭೂತಿ ಪಡೆಯಬಹುದು. ಆ ಪರಿಣಾಮವು ಒಂದು ರೀತಿಯ ಔಷಧ ವಿಧಿಯಾಗುವುದೆಂದು ಸಿದ್ಧವಾದರೆ, ಅದರ ಸಂಶೋಧನೆ ಮಾಡಲಾಗುವುದು. ಯಾವುದಾದರೊಂದು ಪ್ರಾಚೀನ ಶಬ್ದಕೋಶವನ್ನು ನೋಡಿ 'ಸೋಮರಸ' ಅರ್ಥ, ಬಬೂಲ್ (ಅಕೇಶಿಯಾ) ಇರಬಹುದಲ್ಲ ಎಂಬುದನ್ನು ನೋಡಿ ಹೇಳಲು ಕೇಸರ್ ಮತ್ತು ಹರದತ್ತ ಸಿಂಹರನ್ನು ಕೇಳಿಕೋ. ನನಗೆ ಹಾಗನಿಸುತ್ತದೆ.

ಋಗ್ವೇದದಲ್ಲಿ 'ಸರಸ್ವತಿ'ಯ ಮಂತ್ರಗಳುಂಟು, ಅಂತೆಯೇ ಅಗ್ನಿ, ವಾಯುಗಳ ಮಂತ್ರಗಳೂ ಇವೆ. ಅವರ ಶಕ್ತಿಗಳು ಅವರದೇ ಆದ ಸ್ಥಾನಗಳಲ್ಲಿವೆ. 'ಸರಸ್ವತಿ'ಯ ಸ್ಥಾನದ ಮೇಲೆ ನಾನು ಬಹಳ ಮುಂಚೆಯೇ ಸಂಶೋಧನೆ ಮಾಡಿದ್ದೇನೆ. ಅದರಲ್ಲಿ ಎಷ್ಟು ಮಂತ್ರಗಳು ಬಂದಿವೆಯೋ, ಅವೆಲ್ಲವುಗಳಲ್ಲಿಯೂ, ಆಯಾ ಸ್ಥಾನಗಳ ಮೇಲೆಯೇ ಬಲ ಬೀಳುತ್ತದೆ, ಮತ್ತು ಅವುಗಳ ಶಬ್ದಲಯ (ಛಂದಸ್ಸು) ಎಂತಿದೆಯೆಂದರೆ, ಅದರಿಂದ ಆ ಸ್ಥಾನ ಜಾಗ್ರತವಾಗುತ್ತದೆ. ಅಲ್ಲದೆ, ಅದೇ ಮಂತ್ರಗಳನ್ನು ಪುನಃ ಪುನಃ (ಅದೇ ಸ್ವರದಲ್ಲಿ) ಪಠಣ ಮಾಡಿದರೆ, ಆ ಸ್ಥಾನದ ಪೂರ್ತಿ ಕ್ರಮಣ (ಯಾತ್ರೆ) ನಡೆಯುತ್ತದೆ. ಇದೇ ರೀತಿ, ನಾನು ಯಾವುದೋ ಭಾಷಣದಲ್ಲಿ ಹೇಳಿದ್ದೇನೆ; ದೀಪಕ ರಾಗವನ್ನು ಕಂಠಚಕ್ರಕ್ಕೆ ಸಮೀಪವಿರುವ ಸ್ಥಾನದಿಂದ ಹಾಡಲಾಗುತ್ತಿತ್ತು, ಯಾಕೆಂದರೆ, ಅಗ್ನಿಯನ್ನು ಕುರಿತಾದ ಮಂತ್ರಗಳೆಲ್ಲವೂ ಕಂಠಚಕ್ರದಿಂದಲೇ ಹೊರಡುತ್ತವೆ, ಮತ್ತು ಅವುಗಳ ಕ್ರಮಣವು, (ಯಾತ್ರೆ) ನಾನು ಇಚ್ಛಾಶಕ್ತಿಯಿಂದ ಮಾಡಿಸುವ ರೀತಿಯಲ್ಲಿಯೇ ಇರುತ್ತದೆ. ಇದುವರೆಗೆ ನಾನು ಕೆಲವೇ ಮಂತ್ರಗಳನ್ನು ಆಲಿಸಿದ್ದೇನೆ; ಅದರ ಪರಿಣಾಮವನ್ನು ನಾನು ಬರೆದಿದ್ದೇನೆ. ಆದ ಕಾರಣ, ವೇದಮಂತ್ರಗಳ ಸ್ವಾಧ್ಯಾಯವೊಂದೇ ಲಾಭಕಾರಿಯಾಗಬಲ್ಲದು. ಆರ್ಯರು ಶಬ್ದದ ಮೂಲಕ ಸಾಗಿದ್ದಾರೆ; ಅದು ಗುರಿಯವರೆಗೆ ಮುಟ್ಟಿಸಬಲ್ಲ ಶಬ್ದ. ನಾನೂ ಇಡೀ ವೇದವನ್ನು ಆಲಿಸಿದರೆ, ವೇದಕಾಲದಲ್ಲಿ ಋಷಿಗಳು ಎಲ್ಲಿಯವರೆಗೆ (ಆಧ್ಯಾತ್ಮಿಕವಾಗಿ) ಉನ್ನತಿಯನ್ನೈದಿದ್ದರು ಎಂಬುದನ್ನು ಹೇಳಬಲ್ಲೆ.

ಋಗ್ವೇದವನ್ನು ನನಗೆ ಕಳುಹಿಸಿದ್ದಕ್ಕೆ ಮತ್ತು ಆ ಮೂಲಕ ಅದನ್ನು ಕುರಿತು ಆಳವಾಗಿ ನಾನು ವಿಚಾರ ಮಾಡುವಂತೆ ಮಾಡಿದ್ದಕ್ಕೆ ಚೌಬೇಜಿಯವರಿಗೆ ನಾನು ಧನ್ಯವಾದ ಹೇಳಬೇಕು.



ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು, ಅಮ್ಮಾಜಿಗೆ ವಂದನೆಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೫೦ **ಪತ್ರ ಸಂಖ್ಯೆ – ೫೫೧** ಷಾಹಜಹಾನಪುರ
೦೪–೦೪–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ನಿನ್ನ ಪೋಸ್ಟ್ ಕಾರ್ಡ್ ತಲುಪಿದೆ. ಅದರ ಉತ್ತರ ಆಮೇಲೆ ಬರೆಯುತ್ತೇನೆ. ಈಗ ಸದ್ಯ ನನ್ನ ಕಣ್ಣೆದುರಿನಲ್ಲಿರುವ ಒಂದು ವಿಷಯದ ಬಗ್ಗೆ ಬರೆಯುತ್ತೇನೆ. ನಾನು ಹೇಳುತ್ತಿರುವುದರ ಬಗ್ಗೆ, ಅದರ ಕಾರಣವೇನು ಹಾಗೂ, ನನ್ನ ಅಭಿಪ್ರಾಯ ಏನೇ ಇರಲಿ, ಅದು ಪ್ರೇಮಭರಿತವಾಗಿದೆಯೋ, ಇಲ್ಲವೋ ಎಂಬುದನ್ನು ನೀನು ಯೋಚಿಸಬೇಕು. ಅದು ಹಿತಕಾರಿ (ಲಾಭಕಾರಿ) ಆಗಿದ್ದರೆ ಮಾತ್ರವೇ ಅದು ಪ್ರೇಮಭರಿತವಾಗಿದೆಯೆಂದು ತಿಳಿಯಬೇಕು. ನನ್ನ ಜನ್ಮದಿನಕ್ಕೆ ಐದು ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಕೂಡದೆಂದು ನಾನು ಚೌಬೇಜಿಯವರಿಗೆ ಹೇಳಿದ್ದೆ. ಹಾಗೆಯೇ ಆಗಲಿ ಎಂದು ಚೌಬೇಜಿ ಒಪ್ಪಿದ್ದರು. ಅದರಂತೆ ವ್ಯವಸ್ಥೆ ಮಾಡಲಾಗಿದೆಯೆಂದೂ ನನಗೆ ಹೇಳಿದ್ದರು. ಆದರೆ, ನಿನ್ನಿಂದ ಮತ್ತು ಅಮ್ಮನಿಂದ ಕೇಳಿ ತಿಳಿದ ಪ್ರಕಾರ ಊಟ–ಉಪಚಾರವನ್ನು ಬೇರೆಯವರಿಗೂ ಮಾಡಲಾಗಿತ್ತು. ಎಂದು ತಿಳಿದು ಬಂದಿತು. ಅದಕ್ಕೆ ೫೦–೬೦ ರೂಪಾಯಿಗಳಿಗಿಂತ ಕಡಿಮೆ ಖರ್ಚು ಆಗಿರಲಿಕ್ಕಿಲ್ಲ. ನಿನಗೆ ಹಣದ ತೊಂದರೆ ಎಷ್ಟು ಇರುತ್ತದೆ ಮತ್ತು ಅದರ ಮೇಲೆ ಈ ಭಾರ ಬೇರೆ,– ಅದನ್ನು ಯೋಚಿಸು. ೪–೫ ರೂಪಾಯಿ ಖರ್ಚು ಮಾಡಿದರೆ ಸಾಕಾಗುವ ಕೆಲಸಕ್ಕೆ ಇಷ್ಟು ವ್ಯರ್ಥ ಖರ್ಚು ಮಾಡುವುದು ಎಷ್ಟರ ಮಟ್ಟಿಗೆ ಜಾಣತನವಾದೀತು? ಖರ್ಚು ಮಾಡುವ ವಿಷಯದಲ್ಲಿ ನಾನು ಕಟ್ಟುನಿಟ್ಟು, ಪ್ರಸಾದ ಅರ್ಪಿಸುವುದು ಅಗತ್ಯವಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಹೇಳುತ್ತಿರುವುದು ಸರಿಯೇ ಎಂಬುದನ್ನು ನೀನೇ ಯೋಚಿಸಿ ನೋಡು. ಇಷ್ಟಕ್ಕಾಗಿಯೇ ನಾನು ಇಷ್ಟು ನಿಷ್ಠುರ ಶಬ್ದಗಳಲ್ಲಿ ಪತ್ರ ಬರೆಯಬೇಕಾಯಿತು. ಇನ್ನೊಂದು ಮಾತು ಬರೆಯುತ್ತೇನೆ. (ನನ್ನ ಪ್ರಶಂಸೆಗೋಸ್ಕರ ಅಲ್ಲ). ನಮ್ಮ ಗುರು ಮಹಾರಾಜ ಲಾಲಾಜಿಯವರಿಗೆ ಪಾದ ಮುಟ್ಟಿ ನಮಸ್ಕರಿಸುವುದು ಇಷ್ಟವಾಗುವುದಿಲ್ಲವೆಂಬುದು ನನಗೆ ಗೊತ್ತಾದ ನಂತರ ನಾನು ಅವರ ಪಾದ ಮುಟ್ಟುವುದನ್ನು ನಿಲ್ಲಿಸಿಬಿಟ್ಟೆ. ಯಾಕೆಂದರೆ, ಅವರಿಗೆ ಯಾವುದು ಒಪ್ಪಿಗೆಯೋ ಅದನ್ನೇ ನಾವು ಮಾಡಬೇಕು. ಈಗ ನಿಮ್ಮೊಂದಿಗಿರುವಂತಹ ವ್ಯವಹಾರ ನಮ್ಮಲ್ಲಿ–

P-4-Books-PM-7-Anantyatre-151



ನನ್ನದಲ್ಲದಿದ್ದರೂ, ಲಾಲಾಜಿಯವರ ಯಾರಾದರೂ ಶಿಷ್ಯರಲ್ಲಿ–ಇದ್ದಿದ್ದರೆ, ಲಾಲಾಜಿಯವರು ಮನಸ್ಸಿನಿಂದ ನೋಡಿಯೇ ಅದನ್ನು ನಿರ್ಮೂಲ ಮಾಡಿ ಬಿಡುತ್ತಿದ್ದರು ಮತ್ತು ಅದರ ಭಾರ ಹೃದಯದ ಮೇಲೆ ಬರುತ್ತಿರಲಿಲ್ಲ. ಹಾಗೆನ್ನುವುದಾದರೆ, ನೀವು ಎಷ್ಟು ಖರ್ಚು ಮಾಡಲು ಬಯಸುವಿರೋ ಮಾಡಿ; ನನ್ನ ಆಕ್ಷೇಪವಿಲ್ಲ. ಅದರ ತೊಂದರೆಯಾಗುವುದು ನಿಮಗೇ ತಾನೆ.

ಆಧ್ಯಾತ್ಮಿಕ ಗಂಗೆಯಲ್ಲಿ ಮುಳುಗುವುದರಿಂದ ಹೆಚ್ಚು ಲಾಭವಾಗುವುದೋ ಅಥವಾ ಮಾಯೆಯ ನದಿಯಲ್ಲಿ ಮುಳುಗುವುದರಿಂದಲೋ ಎಂಬುದನ್ನು ನೀವು ಮತ್ತೆ ಯೋಚಿಸಬೇಕು. ನೀವು 'ಗುರು–ಪಶು'ವಾಗುವುದರ ರುಜುವಾತು ನೀಡುವಂತಾದರೆ ನನಗೆ ಖೇದವಾಗುವುದು. ನಿಮಗೆ ನನ್ನ ಮಾತು ಅಪ್ರಿಯವಾಗುವುದಾದರೆ ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಅಲ್ಲದೆ, ಇದು ಗುರುಮಹಾರಾಜರ ಆಜ್ಞೆ; ಅದಕ್ಕಾಗಿಯೇ ನನಗಿದು ಅನಿವಾರ್ಯ. ಆದರೆ ನಾನು ಹೇಳಿದ್ದರಿಂದ ಅಥವಾ ಬರೆದುದರಿಂದ ನಿಮ್ಮ ಮೇಲೆ ಪರಿಣಾಮವುಂಟಾಗಿದೆಯಾದರೆ, ಅದನ್ನು ತೆಗೆದು ಹಾಕುವುದರ ಮೇಲೆ ಈಗ (ಈ ಸಮಯ) ನನ್ನ ನಿಯಂತ್ರಣವಿಲ್ಲ. ಅನಾವಶ್ಯಕ ಜಂಜಾಟಗಳಿಂದ ಎಷ್ಟು ತಪ್ಪಿಸಿಕೊಂಡರೂ ಅಷ್ಟು ಒಳ್ಳೆಯದೆಂಬ ಕಾರಣಕ್ಕೆ, ಈ ಸಂಗತಿಯನ್ನು ಇಲ್ಲಿಗೆ ಮುಗಿಸಿಬಿಡಬೇಕೆಂದು ನನ್ನ ಮನಸ್ಸು ಬಯಸುತ್ತದೆ. ನಾನು ಬರೆದ ಪತ್ರದಿಂದ ನಿನಗೆ ಬೇಸರವಾಗಲಿಲ್ಲವೇನು? ಚೌಬೇಜಿಯವರಿಗೆ ಮತ್ತು ಅಮ್ಮಾಜಿಗೆ ಬೇಸರವಾಗಿರಬಹುದು. ಹಾಗಿದ್ದರೆ, ನನ್ನ ಜನ್ಮದಿನದಂದು ಅವರು ಎಷ್ಟು ಹಣ ಖರ್ಚು ಮಾಡಿದರೂ ನನಗೆ ಖೇದವಾಗುವುದಿಲ್ಲ; ಯಾಕೆಂದರೆ, ನಾನು ಅದನ್ನು ನಿಷೇಧಿಸುವುದರ ಕಾರಣವನ್ನು, ಆ ನನ್ನ ಪ್ರೇಮವನ್ನು ಅವರು ಗ್ರಹಿಸಲೇ ಇಲ್ಲ. ಮನಸ್ಸಿನಲ್ಲಿ ಮೊದಲೇ ಗಟ್ಟಿಗೊಳಿಸಿ ನಿರ್ಧರಿಸಿಲ್ಲವೆಂದಾದರೆ, ಅಥವಾ ನಾನು ಹೇಳಿದುದನ್ನು ಅನುಸರಿಸಲು ಮನಸ್ಸಿಲ್ಲವೆಂದಾದರೆ, ಒಬ್ಬ ಬುದ್ಧಿವಂತ ವ್ಯಕ್ತಿ ನಾನು ಹೇಳಿದುದರ ಹಿಂದಿನ ಉದ್ದೇಶವೇನೆಂಬುದರ ಮೇಲೆ ಮೊದಲು ಲಕ್ಷ್ಯಕೊಡಬೇಕಿತ್ತು. ನಿಮ್ಮ ಮನೆಯಲ್ಲಿ ನನ್ನ ಜನ್ಮದಿನ ಆಚರಿಸಿರುವುದರಿಂದ ಒಂದು ಹೊಸ ಸಮಸ್ಯೆ ಉದ್ಭವಿಸಿ, ಅದರಿಂದ ನಿಮಗೆಲ್ಲ ಬೇಸರವಾಯಿತೆಂಬುದು ನನಗೆ ಅರ್ಥವಾಗುತ್ತದೆ. ನನ್ನ ಗುರುಮಹಾರಾಜರ ಒಂದು ರೂಢಿಯಿತ್ತು; ಯಾರಾದರೂ ಸತ್ಸಂಗಿ, ಅವರಿಗೋಸ್ಕರ ಆವಶ್ಯಕತೆಗಿಂತ ಹೆಚ್ಚು ಖರ್ಚು ಮಾಡಿದರೆ ಅವರಿಗೆ ಅದು ಸರಿ ಬರುತ್ತಿರಲಿಲ್ಲ, ಮತ್ತು ಅವರು ಅವನಿಗೆ ಗದರಿಸಿ ಎಚ್ಚರ ಕೊಡುತ್ತಿದ್ದರು. ಅದೇ ರೂಢಿ ನನ್ನಲ್ಲಿಯೂ ಬಂದಿದೆ. ನನ್ನ ಒಳ್ಳೆಯ (ಸದುದ್ದೇಶದ) ಮಾತು, ಅದರ ತಳವನ್ನು ಅರ್ಥಮಾಡಿಕೊಳ್ಳದಿದ್ದ ಕಾರಣ, ಪರಿಣಾಮ ಉಂಟು ಮಾಡಿತು ಎಂಬುದು ನನಗೆ ಖೇದವೆನಿಸುತ್ತದೆ.

ಅನೇಕ ಸಲ ನಾನು ನಿಷ್ಠುರ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಈ ವಿಷಯದಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಂಡೆನೆಂಬುದೇನೋ ನಿಜವೆ. ನನ್ನ



ಜನ್ಮದಿನವನ್ನು ಎಲ್ಲೋ ಆಚರಿಸಲಾಯಿತು. ಇದರಿಂದ ರಾಮಚಂದ್ರ ತಾನು ಪೂಜಿಸಲ್ಪಡಬೇಕೆಂದು ಬಯಸುತ್ತಾನೆ ಎಂದು ಜನರು ಭಾವಿಸಬಹುದು ಎಂದು ನನಗೆ ಸಂಕೋಚವೆನಿಸುತ್ತದೆ. ಈ ಜನ್ಮದಿನದ ವಿಷಯವನ್ನು ನಿನ್ನ ಮೇಲೆಯೇ ಬಿಟ್ಟುಬಿಡಬೇಕೆಂಬ ವಿಚಾರವೂ ನನಗೆ ಬಂದಿತು. ನೀನು ಹೇಗೆ ಬಯಸುತ್ತೀಯೋ ಹಾಗೆ ಮಾಡು; ಒಟ್ಟಿನಲ್ಲಿ ನಿನ್ನ ಮನಸ್ಸಿಗೆ ದುಃಖವಾಗದಿರಲಿ. ನಾನು ಎಲ್ಲ ವಿಷಯಗಳನ್ನೂ ಮತ್ತು ಅದರ ಕಾರಣವನ್ನೂ ಈ ಮೇಲೆ ಬರೆದಿದ್ದೇನೆ. ಅದರಿಂದ ನನ್ನ ನಿಜವಾದ ತಾತ್ಪರ್ಯ ಸುಸ್ಪಷ್ಟವಾಗಲಿ. ಅಲ್ಲದೆ, ಇದನ್ನು ಚೌಬೇಜಿಯವರಿಗೂ ಅಮ್ಮಾಜಿಗೂ ತಿಳಿಸು. ಇನ್ನೂ, ಚೌಬೇಜಿಯವರು ಸಂತುಷ್ಟರಾಗದಿದ್ದರೆ, ನಾನು ಅವರಿಗೆ ಕ್ಷಮೆ ಬೇಡುತ್ತ, ಪ್ರತ್ಯೇಕವಾಗಿ ಬರೆಯುತ್ತೇನೆ. ನಾನು ಹೇಳಿದುದರ ಪರಿಣಾಮ ಕೆಲಮಟ್ಟಿಗೆ, ಮೇಲಿಂದ ಮೇಲೆ ದೂರವಾಗಿದೆ. ಆದರೂ ನೀನು, ಚೌಬೇಜಿ ಮತ್ತು ಅಮ್ಮಾಜಿಯವರು, ಅದು ದೂರವಾಗಲೆಂದು ಲಾಲಾಜಿಯವರನ್ನು ಪ್ರಾರ್ಥಿಸಿದಾಗಲೇ ಪೂರ್ತಿಯಾಗಿ ದೂರವಾದೀತು. ಅದರಿಂದ, ನನ್ನ ಮನಸ್ಸೂ ಎಂದಿನಂತೆಯೇ ಆಗುವುದು. ನನ್ನದೇನಾದರೂ ನ್ಯೂನತೆ ಉಳಿದಿದ್ದರೆ, ಚೌಬೇಜಿಯವರು ನನಗೆ ಬರೆದು ತಿಳಿಸಲಿ, ನಾನು ಅದನ್ನು ನಿವಾರಿಸುತ್ತೇನೆ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೫೧ **ಪತ್ರ ಸಂಖ್ಯೆ – ೫೫೪** ಷಾಹಜಹಾನಪುರ
೧೨–೪–೧೯೫೬

ಪ್ರಿಯ ಪುತ್ರಿ ಕಸ್ತೂರಿ

ಶುಭಾಶೀರ್ವಾದಗಳು.

ನಿನ್ನ ಪತ್ರ ಕೈ ಸೇರಿದೆ. ನಾನು ನನ್ನ ಜನ್ಮದಿನಕ್ಕೋಸ್ಕರ ಇಷ್ಟು ಹಣ ಖರ್ಚು ಮಾಡುವುದನ್ನು ಯಾಕೆ ಒಪ್ಪಲಿಲ್ಲವೆಂಬುದರ ಕಾರಣ ನಿಮ್ಮೆಲ್ಲರಿಗೆ ಮನದಟ್ಟಾಯಿತೆಂದು ಈ ಪತ್ರ ನನಗೆ ವಿಶ್ವಾಸ ತಂದುಕೊಟ್ಟಿತು. ಹಾಗೆ ಹೇಳಬೇಕೆಂದರೆ, ಯಾರಾದರೂ ತಮ್ಮ ಸಂಪತ್ತನ್ನು ಸೂರೆ ಮಾಡಿದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ನಿಮ್ಮ ಹಣಕಾಸಿನ ತೊಂದರೆ ನನಗೆ ಕೆಡುಕೆನಿಸಿದರೆ, ಅದು ನನಗೆ ಚಿಂತೆ ಉಂಟುಮಾಡುತ್ತದೆ; ಆ ಕಾರಣವೇ ನಾನು ನಿಷ್ಠುರವಾಗಿ ನಿರಾಕರಿಸಿದ್ದೆ. ಈ ಉದಾಹರಣೆ ಇಲ್ಲಿ ಅಷ್ಟುಮಟ್ಟಿಗೆ ಸರಿಯಾಗಿ ಸಲ್ಲದಿರಬಹುದು, ಆದರೂ ಬರೆಯುತ್ತೇನೆ. ತಂದೆ ತಾಯಿಗಳಿಗೆ ಮತ್ತು ಇತರರಿಗೆ ಆ ಕಾರಣದಿಂದಾಗಿ ತೊಂದರೆ ಉಂಟಾಗುವ ಹಾಗೆ ಒಬ್ಬ ಮಗ ದಾನ–ಧರ್ಮ ಮಾಡಲು ತೊಡಗಿದರೆ, ಅಂಥ ದಾನ ಅದೆಂಥ ಪಾಪದ ಕೆಲಸವಾಗಬಹುದೆಂಬುದನ್ನು ಯೋಚಿಸಿ ನೋಡು. ಯಾಕೆಂದರೆ, ಆ ಹುಡುಗನ ಮೇಲೆ ಎಷ್ಟೆಲ್ಲ ಜನರ (ಪೋಷಣೆಯ) ಹೊಣೆಗಾರಿಕೆ

P-4-Books-PM-7-Anantyatre-152



ಇರುವುದೋ ಅವರೆಲ್ಲ ಸಂಕಷ್ಟಕ್ಕೀಡಾಗಬೇಕಾಗುತ್ತದೆ. ಯಾವ ಹಣದ (ಸಂಪತ್ತಿನ) ಮೇಲೆ ಬೇರೆಯವರ ಹಕ್ಕು ಇರುವುದೋ, ಅದನ್ನು ದಾನ–ಧರ್ಮಗಳಿಗೋಸ್ಕರ ವಿನಿಯೋಗಿಸುವುದು, – ಆ ಖರ್ಚಿನಿಂದಾಗಿ ಎಲ್ಲರಿಗೂ ತೊಂದರೆಯುಂಟಾಗುವ ಸಂದರ್ಭವಿರುವಾಗ – ಖಂಡಿತ ಪಾಪವೆಂದೆನಿಸುತ್ತದೆ.

ನನ್ನ ಗುರು ಮಹಾರಾಜರು ಒಂದು ಉತ್ತಮ ಬೋಧೆ ಮಾಡಿದ್ದರು – ಮೂರ್ತಿ ಪೂಜೆ ಅಥವಾ ವಿಗ್ರಹಾರಾಧನೆಯೆಂದರೆ ಕೇವಲ ಕಲ್ಲಿನ ಪೂಜೆ ಮಾಡುವುದು ಮಾತ್ರವಲ್ಲ; ಯಾವುದೊಂದು ರೂಢಿಗೆ, ವ್ಯಸನಕ್ಕೆ ದಾಸನಾಗುವುದೂ ಮೂರ್ತಿ ಪೂಜೆಯೇ. ಎರಡನೆಯದೆಂದರೆ, ನಾವು ನಮ್ಮ ಇಚ್ಛಾಪೂರ್ತಿಯಲ್ಲಿಯೇ (ಮುಳುಗಿ) ಇದ್ದರೆ, ಅದರ ವಿರುದ್ಧ ಯಾವುದಿದ್ದರೂ ನಮಗೆ ಆಘಾತವೆನಿಸುತ್ತದೆ. ಅಂಥ ಜನರಿಗೆ 'ಮನ್ಮತ' (ತನ್ನ ಮತ ಅರ್ಥಾತ್ ಅಭಿಪ್ರಾಯ / ವಿಚಾರಕ್ಕೆ ಅಂಟಿಕೊಂಡಿರುವವ) ಎಂದು ಕರೆಯುತ್ತಾರೆ. ಅಂಥವನು ಗುರುವಿನ ಇಚ್ಛೆಯಲ್ಲಿ ತೃಪ್ತಿಹೊಂದಿದವನೆಂದು ಹೇಳಲಾಗದು, ಅರ್ಥಾತ್ ಅವನಿಗೆ 'ಗುರು–ಮತ'ನೆಂದು ಕರೆಯಲು ಸಾಧ್ಯವಿಲ್ಲ. (ಅರ್ಥಾತ್ ಗುರುವಿನ ಇಚ್ಛೆಗೆ ಸಮರ್ಪಿತನಾಗಿರುವವನೆಂದು ಹೇಳಲಾಗದು). ಇದರಲ್ಲಿ (ಅಧ್ಯಾತ್ಮದಲ್ಲಿ) ಎಷ್ಟು ಪ್ರಗತಿ ಹೊಂದುತ್ತಾನೋ, ಅಷ್ಟೇ ಮಟ್ಟಿಗೆ ಗುರುವಿನೊಂದಿಗೆ, (ಪ್ರಭುವಿನೊಂದಿಗೆ) ಅನುರೂಪಿಯಾಗಿದ್ದಾನೆ. ಅರ್ಥಾತ್ ವಿಧೇಯನಾಗಿ ಇರುತ್ತಾನೆ, ಎಂದು ಹೇಳಲಾಗಿದೆ. ಯಾವುದರಿಂದ ಗುರುವು ಸಂತುಷ್ಟನಾಗುವನೋ ಅದನ್ನೇ ನಾವು ಮಾಡತಕ್ಕದ್ದಿದೆ, ಮತ್ತು ಅದರಿಂದಲೇ ನಮ್ಮ ಕಾರ್ಯ (ಉದ್ದೇಶ) ಸಿದ್ಧಿಸುತ್ತದೆ ಮತ್ತು ಸಂಬಂಧ ಗಾಢವಾಗುತ್ತ ಹೋಗುತ್ತದೆ.

ನನ್ನಲ್ಲಿ ಅನೇಕ ಕೆಟ್ಟ ಅಭ್ಯಾಸ(ರೂಢಿ)ಗಳಿರಬಹುದು. ಒಂದು, ಬೆಳಿಗ್ಗೆ ತಡವಾಗಿ ಏಳುವುದು, ಎರಡನೆಯದು, ಹುಕ್ಕಾ ಸೇದುವುದು. – ಇದು ಎಲ್ಲರಿಗೂ ಗೊತ್ತುಂಟು. ಇನ್ನು, ನನ್ನ ಅರಿವಿಗೆ ಬಾರದವು ಎಷ್ಟಿವೆಯೋ ತಿಳಿಯದು. ಅದನ್ನು ಬೇರೆಯವರು ನನಗೆ ತಿಳಿಸಿದರೆ ಮಾತ್ರವೇ ಗೊತ್ತಾಗಬಲ್ಲುದು. ಇನ್ನೊಂದು ನ್ಯೂನತೆಯಂತೂ, ನಾನು ಹೇಳಿಯೇ ಬಿಡುತ್ತೇನೆ; ನಾನೊಬ್ಬ 'ಅತಿರೇಕವಾದಿ' [Extremist] ಎಂಬುದು ಖಂಡಿತ. (ಆಧ್ಯಾತ್ಮಿಕವಾಗಿ) ಯಾವುದಾದರೊಂದು ಆಧ್ಯಾತ್ಮಿಕ ಉನ್ನತಿಯ ನಿಲುಕಿನ ವಿಚಾರ ಏಕಾಗ್ರವಾದರೆ ಸಾಕು, ಅದನ್ನು ಕೊಟ್ಟ ಹೊರತು ನನಗೆ ನೆಮ್ಮದಿ ಬರುವುದಿಲ್ಲ. ಅದರೊಂದಿಗೆ, ಇನ್ನಾವುದನ್ನಾದರೂ ನಾನು ಗಂಭೀರವಾಗಿ ತೆಗೆದುಕೊಂಡರೆ ಮತ್ತು ಆ ವಿಚಾರದ ಆಳದಲ್ಲಿ ಮುಳುಗಿದೆನಾದರೆ, ಅದನ್ನು ಮಾಡಿ ಮುಗಿಸುವುದರ ಹೊರತಾಗಿ ನನ್ನ ಲಕ್ಷ್ಯ ಬೇರೆಡೆಗೆ ತಿರುಗುವುದಿಲ್ಲ. ಅದಕ್ಕೋಸ್ಕರವೇ, ನಾನು ಎಲ್ಲವನ್ನೂ ಹಗುರಾಗಿ ತೆಗೆದುಕೊಳ್ಳುತ್ತೇನೆ. ಆದರೆ ಅದೂ ವಿಚಾರದ ಆಳದಲ್ಲಿ ಮುಳುಗಿ ಹೋಗುವುದೂ ಉಂಟು. ಆದ್ದರಿಂದಲೇ, ನಿನ್ನೆದುರು ಇರುವ ಸಂಗತಿಯ ವಿಷಯದಲ್ಲಿ, ಹಾಗೆಯೇ ಆಯಿತು. ನಿನ್ನ ಪತ್ರದಲ್ಲಿ ಅದರ ವಿವರಣೆ ಬರುವಷ್ಟರಲ್ಲಿ, ಬಾಣವು ಬಿಲ್ಲಿನಿಂದ



ಹೊರಟು ಹೋಗಿ ಬಿಟ್ಟಿತ್ತು. ಈಗ ನೀನು ನಿರಾಶಳಾಗಬೇಕಿಲ್ಲ. ನಾನು ಈ ವಿಷಯವನ್ನು ಸಂಪೂರ್ಣವಾಗಿ ನಿನಗೇ ಬಿಟ್ಟು ಬಿಟ್ಟಿದ್ದೇನೆ. ಆದ್ದರಿಂದ ನೀನು ೫ ರೂಪಾಯಿ ಖರ್ಚು ಮಾಡು ಅಥವಾ ಹೆಚ್ಚಿಗೆ ಖರ್ಚು ಮಾಡು, ನನ್ನ ಅಭ್ಯಂತರವಿಲ್ಲ. ಆದರೆ ನನ್ನ ವಿವಶತೆಯೊಂದಿತ್ತು. ಏನೆಂದರೆ ನನ್ನ ಲಕ್ಷ್ಯವು ಈ ತರಹ ಅಂಟಿಕೊಂಡು ಬಿಟ್ಟಿತ್ತು. ಮತ್ತು ಆ ಕಾರಣವೇ ನಿಮಗೆ ಜನ್ಮದಿನದಂದು ಕೃಪೆಯು ಸ್ವಲ್ಪಮಟ್ಟಿಗೆ ತಡೆಯಲ್ಪಟ್ಟಿರಲು ಸಾಧ್ಯವಿದೆ. ಮತ್ತು ಅದಕ್ಕೋಸ್ಕರವೇ, ಆ ತಡೆ ದೂರವಾಗಲೆಂದು ನೀವು ಲಾಲಾಜಿಯವರಿಗೆ ಪ್ರಾರ್ಥನೆ ಮಾಡಿರಿ ಎಂದು ಬರೆದಿದ್ದೆ. ನಾನೂ ಪ್ರಾರ್ಥನೆ ಮಾಡಿದೆ; ಇನ್ನೂ ಮಾಡುತ್ತೇನೆ; ಆದರೆ ಅದು (ಆ ತಡೆ) ಇದುವರೆಗೂ ಪೂರ್ತಿಯಾಗಿ ಸರಿದು ಹೋಗಿಲ್ಲ. ಜನ್ಮದಿನದ ಆಚರಣೆ ನಡೆಯಲಿ ಎಂದು ಅಪ್ಪಣೆಯಾಗಿತ್ತು. ಆದ್ದರಿಂದ ನಾನು ಅಸಹಾಯಕನಾದೆ. ಅದಿಲ್ಲದಿದ್ದರೆ, ನಿಮಗೆ ಅದನ್ನು ಆಚರಿಸಬಾರದೆಂದು ನಿಷೇಧಿಸಿಬಿಡುತ್ತಿದ್ದೆ.

ನನ್ನ ಹೃದಯದಲ್ಲಿ ಇನ್ನೊಂದು ವಿಚಾರ ಬಂದಿತು. ಅದೇನೆಂದರೆ, ಶಿಷ್ಯನು ಗುರುವಿಗೆ ತನ್ನನ್ನು ಒಪ್ಪಿಸಿಕೊಳ್ಳುವ ಕಾಲ ಮುಗಿದುಹೋಯಿತು. ಕಾಲಗತಿಯನ್ನು ಗಮನಿಸಿ, ಗುರುವೇ ಶಿಷ್ಯನಿಗೆ ತನ್ನನ್ನು ಒಪ್ಪಿಸಿಕೊಂಡು [submit] ಬಿಡಬೇಕು. ಈ ವಿಚಾರ ನನ್ನಲ್ಲಿ ಇನ್ನೂ ನೆಲೆಸಿದೆ. ಈಗ, ಲಾಲಾಜಿ ಸಾಹೇಬರ ಮಾರ್ಗದರ್ಶನ ಪಡೆದು ಈ ವ್ಯವಸ್ಥೆಯನ್ನು ನಾನು ಬದಲಿಸಲು ಬಯಸುತ್ತೇನೆ. ಅದಕ್ಕೋಸ್ಕರವೇ ನಾನು ಚೌಬೇಜಿ ಮತ್ತು ಅಮ್ಮಾಜಿಯವರಲ್ಲಿ ಕ್ಷಮೆ ಕೋರಿದ್ದೇನೆ. ಲಾಲಾಜಿ ಸಾಹೇಬರು ಇದನ್ನು ಸಮ್ಮತಿಸಿದರೆ, ನನ್ನ ಅಭಿಪ್ರಾಯದಲ್ಲಿ ಈ ವಿಚಾರ ಚೆನ್ನಾಗಿದೆ. ಈ ವಿಷಯದಲ್ಲಿ ಚೌಬೇಜಿಯವರ ಅಭಿಪ್ರಾಯವೇನೆಂದು ಕೇಳು; ಮಾಸ್ಟರ್ ಸಾಹೇಬರನ್ನು ಕೇಳು. ನನಗೆ ಯಾರೊಂದಿಗೂ ಬೇಸರವಿಲ್ಲ ಎಂದು ನಿನಗೆ ಭರವಸೆ ಕೊಡುತ್ತೇನೆ. ಈ ಒಂದು ವಿಚಾರ ನನ್ನ ಮನಸ್ಸಿನಲ್ಲಿ ಹೊಕ್ಕು ಬಲಗೊಂಡಿತು; ನಾನು ಅದಕ್ಕೆ ತಕ್ಕಂತೆ ನಡೆದುಕೊಂಡೆ, ಅದರ ಅರಿವು ನನಗಿದೆ.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ನನ್ನ ವಂದನೆಗಳು. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೫೨ **ಪತ್ರ ಸಂಖ್ಯೆ – ೫೫೮** ಷಾಹಜಹಾನಪುರ
೧೩–೪–೧೯೫೭

ಪ್ರಿಯ ಪುತ್ರಿ ಕಸ್ತೂರಿ
ಶುಭಾಶೀರ್ವಾದಗಳು.

ಈ ಮೊದಲು ನಾನು ಒಂದು ಲಕೋಟೆಯನ್ನು ಕಳುಹಿಸಿದ್ದೇನೆ. ಅದಾದ ನಂತರ, ೧೧–೪–೫೭ರ ನಿನ್ನ ಪತ್ರ ಪ್ರಾಪ್ತವಾಯಿತು. ನಾನು

P-4-Books-PM-7-Anantyatre-153



ಚೌಬೇಜಿಯುವರೊಂದಿಗಾಗಲಿ, ಅಮ್ಮಾಜಿಯುವರೊಂದಿಗಾಗಲಿ ಬೇಸರ ಪಟ್ಟುಕೊಂಡಿಲ್ಲ, ಎಂಬ ಉತ್ತರವನ್ನು ನಿನ್ನ ಪತ್ರಕ್ಕೆ ಈಗಾಗಲೇ ಕೊಟ್ಟಿದ್ದೇನೆ. ಬೇಸರಪಟ್ಟುಕೊಳ್ಳುವ ಪ್ರಶ್ನೆಯೇನಿದೆ? ನಾನು ಒಂದು ರೂಢಿಯನ್ನು ಮತ್ತು ಖರ್ಚನ್ನು ಕಡಿಮೆ ಮಾಡಲು ಬಯಸಿದ್ದೆ, ಅಷ್ಟೆ. ಮಾಸ್ಟರ್ ಸಾಹೇಬರೂ ಸ್ವತಃ ಅರ್ಥಮಾಡಿಕೊಳ್ಳಲಿಲ್ಲ, ಆದ್ದರಿಂದ ಅವರು ನಿನಗೆ ಹಾಗೆ ಹೇಳಿದರು. ಈ ವಿಷಯ ಕುರಿತ ನನ್ನ ಹಿಂದಿನ ಪತ್ರದಲ್ಲಿಯೇ ಹೇಳಿಬಿಟ್ಟಿದ್ದೇನೆ. ಹೇಳುವ ತಾತ್ಪರ್ಯವೇನೆಂದರೆ, ಈ ಹೇಳಿಕೆಯ ಪರಿಣಾಮದಿಂದ ನಿಮ್ಮ ಮೇಲೆ ಕೃಪೆ ವರ್ಷಿಸುವುದು. ಅದರಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ, ಪ್ರಾರ್ಥನೆ ಮಾಡುವುದು ಆವಶ್ಯಕ, ಅಂದರೆ, ಅದರಿಂದ ಪ್ರಭಾವವು ಕಡಿಮೆಯಾಗುವುದು– ಆದರೆ ಐದು ರೂಪಾಯಿಗಳಿಗಿಂತ ಕಡಿಮೆ ಖರ್ಚಾದರೆ ಮಾತ್ರ. ಆದ್ದರಿಂದ, ನನ್ನ ಮನಸ್ಸು ಈ ವಿಚಾರದಿಂದ ಸ್ವಚ್ಛವಾಗಲಿ ಎಂದು ಲಾಲಾಜಿಯವರಿಗೆ ಪ್ರಾರ್ಥಿಸಬೇಕು. ಈ ಎಲ್ಲ ಮಾತುಗಳನ್ನು ಈ ಮೊದಲಿನ ಪತ್ರದಲ್ಲಿ ಸ್ಪಷ್ಟಪಡಿಸಿದ್ದೇನೆ. ನೀವು ಖಂಡಿತ ಚಿಂತೆ ಪಟ್ಟುಕೊಳ್ಳಬೇಕಿಲ್ಲ. ಹಿಂದಿನ ಪತ್ರವನ್ನು ಗಮನವಿಟ್ಟು ಓದಿರಿ. ಇನ್ನೂ ಏನಾದರೂ ಉಳಿದರೆ, ನನ್ನನ್ನು ಕೇಳಿರಿ. ನಾನೂ ಒಬ್ಬ ಮನುಷ್ಯನೇ. ಹಾಗಿರಲಾಗಿ, ನಾನು ತ್ವರಿತದಲ್ಲಿ ಹೇಳಿಬಿಟ್ಟೆ, ಎಂದು ಭಾವಿಸಿರಿ. ಚೌಬೇಜಿ ಮತ್ತು ಅಮ್ಮಾಜಿಯವರಿಗೆ ಪ್ರಣಾಮಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ ೧೫೩ **ಪತ್ರಸಂಖ್ಯೆ–೫೬೩** ಲಖೀಂಪುರ
೦೭–೦೫–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಸುಖಿಯಾಗಿರು.

ಪತ್ರ ಕೈಸೇರಿತು. ಈಗ ನಿನ್ನ ಪತ್ರಗಳಿಗೆ ಉತ್ತರ ಬರೆಯುವುದು ಕಷ್ಟವಾಗುತ್ತಿದೆ; ಯಾಕೆಂದರೆ ಗಾಢ ಚಿಂತನೆ ಬೇಕಾಗುತ್ತದೆ. ಆದರೆ ಇತ್ತೀಚೆಗೆ ನಿನಗೆ ನಾನು ಆಗಾಗ ಪ್ರಾಣಾಹುತಿ (Transmission) ಕೊಡುತ್ತಿದ್ದೇನೆ. ಕೆಲ ಸಮಯ ಉಳಿದು, ನಂತರ ನನ್ನ ಕೆಲಸವನ್ನು ಪೂರ್ಣಗೊಳಿಸುತ್ತೇನೆ; ಮತ್ತು ಆಗ ಬರೆಯುವ ಪ್ರಯತ್ನ ಮಾಡುತ್ತೇನೆ. ಅಮ್ಮಾಜಿಗೆ ವಂದನೆಗಳು, ಎಲ್ಲ ಕಿರಿಯರಿಗೂ ಪ್ರೀತಿಯ ನೆನಹುಗಳು.

ಶುಭ ಚಿಂತಕ
ರಾಮಚಂದ್ರ

* * * *



ಕ್ರಮಸಂಖ್ಯೆ – ೧೫೪ **ಪತ್ರ ಸಂಖ್ಯೆ – ೫೭೦** ಷಾಹಜಹಾನಪುರ
೨೮–೬–೧೯೫೬

ಪ್ರಿಯ ಪುತ್ರಿ ಕಸ್ತೂರಿ

ಶುಭಾಶೀರ್ವಾದಗಳು.

ನಿನ್ನ ೨೫–೬–೧೯೫೬ರ ಪತ್ರ ಕೈ ಸೇರಿತು. ನಿನ್ನ ಆಧ್ಯಾತ್ಮಿಕ ಯಾತ್ರೆಯ (ಕ್ರಮಣದ) ಸ್ಥಾನ ಈ ಕೆ–೧ (K1) ಮತ್ತು ಅದರಲ್ಲಿ ಕ್ರಮಣವೂ ಸಾವಕಾಶ ಪ್ರಾರಂಭವಾಗಿದೆ. ಈ ಸಮಯದಲ್ಲಿ, ನನ್ನ ವಿಚಾರವು ಈ ಸ್ಥಾನವನ್ನು ಮುಟ್ಟಿದಾಗ ತುಂಬಾ ನೆಮ್ಮದಿ ದೊರಕಿತು, ಚಿತ್ತವು ಪ್ರಸನ್ನವಾಯಿತು. ಮತ್ತು ನಾನು ನನ್ನ ಶುಷ್ಕ ಸ್ಥಾನವನ್ನು ಮರೆತೆ. ಈ ಸ್ಥಾನವನ್ನು ವರ್ಣಿಸಬೇಕೆಂದರೆ, ಕೆಲಮಟ್ಟಿಗೆ ಉಷಃಕಾಲದ ಹೋಲಿಕೆ ಸಿಗುವುದು. ಇದರಲ್ಲಿಯೆ ಪರಮಾಣುಗಳು ಬಹಳ ಸೂಕ್ಷ್ಮ ಸ್ಥಿತಿಯಲ್ಲಿವೆ ಮತ್ತು ಮಾಯೆಯ ಕಾಂತಿ ಮತ್ತು ಕೋರೈಸುವಿಕೆ ಬಹಳ ಕಡಿಮೆ ಇದೆ. ಈ ಸ್ಥಾನದಲ್ಲಿ ಎಲ್ಲವೂ ನಿದ್ರಾಮಗ್ನವಾಗಿರುವಂತೆ ಕಂಡು ಬರುತ್ತದೆ. ತನ್ನ ಜಗತ್ತನ್ನು ಸಂಪತ್ತು ಇತ್ಯಾದಿಗಳನ್ನು ಛಿನ್ನ–ಭಿನ್ನಗೊಳಿಸಿ, ಮನೆಯನ್ನು ಭಗ್ನಗೊಳಿಸಿ, ಅದರ ಒಡೆಯ ನಿರಾತಂಕವಾಗಿ ನಿದ್ರಿಸುತ್ತಿರುವನೋ ಎಂಬಂತೆ. ನೀನು ನಿನ್ನ ಪತ್ರದಲ್ಲಿ ಇಂಥದೇ ಸ್ಥಿತಿಯಿಂದ ವಿವರಿಸುತ್ತಿದ್ದೀಯೆ. ಧ್ಯಾನ ಮಾಡುತ್ತಿರುವಾಗ ನೀನು ಪ್ರಾಣಾಹುತಿ ನೀಡುತ್ತಿಲ್ಲವೆಂದು ನಿನಗೆ ಅನಿಸುವುದು ಒಳ್ಳೆಯ ಲಯಾವಸ್ಥೆಯ ರುಜುವಾತು ಆಗಿದೆ. ಶರೀರದ ಕಣ–ಕಣವೂ ನಿಶ್ಚೇಷ್ಟವಾಗಿ, ನಿದ್ರಾಮಗ್ನವಾಗಿ ಇರುವಂತೆನಿಸುವ ನಿನ್ನ ಅನುಭೂತಿಯು, ಆ ಸ್ಥಾನದಲ್ಲಿ ನಡೆಯುತ್ತಿರುವ ನಿನ್ನ ಯಾತ್ರೆಯ (ಕ್ರಮಣ) ಪರಿಣಾಮವಾಗಿದೆ.

ಕೇಸರ್‌ಳ ಪತ್ರವೂ ಬಂದಿದೆ. ಅದು, ಒಂದು ಒಳ್ಳೆಯ 'ಸ್ಥಿತಿ' ಇರುವ ಸಮಾಚಾರ ತಂದಿದೆ. ಮಿಷನ್ನಿನ ಬಗ್ಗೆ ನಾನು ಅವಳಿಗೆ ಒಪ್ಪಿಸಿದ ಕೆಲಸವನ್ನು ಅವಳು ಮಾಡುತ್ತಿದ್ದಾಳೆಂದು ಆಶಿಸುತ್ತೇನೆ.

ನಿನ್ನ ಪತ್ರಗಳು ಮತ್ತು ನನ್ನ ಉತ್ತರಗಳನ್ನು ಸಾಧ್ಯವಿದ್ದಷ್ಟು ಕೇಸರಳು ನಕಲು ಮಾಡುತ್ತಿರಲಿ, ಅದರಿಂದ, ಅವು ಮುದ್ರಣಗೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶುಭ ಚಿಂತಕ,
ರಾಮಚಂದ್ರ,

* * * *

ಕ್ರಮ ಸಂಖ್ಯೆ – ೧೫೫ **ಪತ್ರ ಸಂಖ್ಯೆ – ೫೭೩** ಷಾಹಜಹಾನಪುರ
೦೬–೦೭–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು

ದಿ. ೩೦–೬–೫೬ರ ನಿನ್ನ ಪತ್ರ ತಲುಪಿತು. ನಾನು ಈ ಮೊದಲು ಹೇಳಿದಂತೆ ನಿನ್ನ ಆಧ್ಯಾತ್ಮಿಕ ಯಾತ್ರೆಯ ಸ್ಥಾನ ಈಗ ಕೆ೧ (K1) ಇದೆ. ಮತ್ತು ಆ ಬಿಂದುವಿನ

P-4-Books-PM-7-Anantyatre-154



ಸ್ಥಿತಿಯನ್ನೇ ತಿಳಿಸುತ್ತದೆ. ಈ ಸ್ಥಾನವು ಒಂದು ಅಡವಿ ಅಥವಾ ಪಾಳುಬಿದ್ದ ಸ್ಥಳಕ್ಕೆ ಸದೃಶ ಎಂದು ಹೇಳಬಹುದು. ಈ ಸ್ಥಾನದಲ್ಲಿ ಪ್ರಕೃತಿಯು ತನ್ನ ಆವರಣಗಳನ್ನು ಬಹುತೇಕ ತೆಗೆದೊಗೆದುಬಿಡುತ್ತದೆ. ಅದರಿಂದ ಭಾರ, ಅಥವಾ ತೂಕವೆಲ್ಲ ಮುಗಿದು ಹೋಗುತ್ತದೆ; ಆದರೂ ಸೂಕ್ಷ್ಮರೂಪದಲ್ಲಿ ಇದ್ದೇ ಇರುತ್ತದೆ. ಇದೂ ಹೊರಟು ಹೋದಾಗ ಅದನ್ನು ಮಹಾಪ್ರಲಯದ ಗತಿ ಅಥವಾ ಮೂಲದ ಸ್ಥಿತಿ ಎಂದು ಕರೆಯಬಹುದು. ಇದರಾಚೆಗೆ ಇದರ ರೂಪ ವಿರೂಪಗೊಳ್ಳುತ್ತ ಹೋಗುತ್ತದೆ, ಮತ್ತು ಅದರ ಆವರಣಗಳು ಕಳೆಯುತ್ತ ಹೋಗುತ್ತವೆ. ಇಡೀ ಪ್ರಕೃತಿಯು ನಿದ್ರಾವಸ್ಥೆಯಲ್ಲಿದೆಯೋ ಏನೋ ಎಂಬಂತೆ ನಿನಗೆ ಪ್ರತೀತವಾಗಿರುವುದು ಈ ಕಾರಣದಿಂದಲೇ. ಈ ಸ್ಥಾನಗಳನ್ನು ದಾಟುವ ಸಾಮರ್ಥ್ಯ ಅಭ್ಯಾಸಿಯ ವಶದಲ್ಲಿರುವುದಿಲ್ಲ. ಕೇವಲ, ಯಾತ್ರೆಯ (ಕ್ರಮಣದ) ಮತ್ತು ಸತ್ಯವಸ್ತುವನ್ನು ತಲುಪುವ ಅವ ಹಂಬಲ (ತೃಷ್ಣೆ)ವೊಂದೇ, ಅವನು ಪ್ರಗತಿಯ ಮುಂದಿನ ಹೆಜ್ಜೆ ಇಡುವುದರಲ್ಲಿ ಸಹಾಯಕವಾಗುವುದು ಮತ್ತು ಇದನ್ನು ನೋಡಿಯೇ ಪ್ರಾಣಾಹುತಿ ನೀಡುವವನು (ಗುರು) ಅವನನ್ನು ಮುಂದಕ್ಕೊಯ್ಯುತ್ತ ಹೋಗುತ್ತಾನೆ.

ಸಾವಿರ ವರ್ಷಕಾಲ ಧ್ಯಾನಮಾಡಿದರೂ, ಸಮರ್ಥ ಮಾರ್ಗದರ್ಶಿಯ (ಗುರುವಿನ) ಸಹಾಯವಿಲ್ಲದೆ ಅಭ್ಯಾಸಿಯು ಮುಂದೆ ಸಾಗಲಾರನೆಂದು ನಾನು ದೃಢವಾಗಿ ಹೇಳಬಲ್ಲೆ. ಕೇವಲ ತನ್ನ ಪ್ರಯತ್ನದಿಂದ ಮಾತ್ರವೇ ಕೆಲಸ ಸಾಧಿಸಬಯಸುವುದಾದರೆ, ಅದರ ಒತ್ತಡ ಹೆಚ್ಚುತ್ತಲೇ ಹೋಗುವುದಲ್ಲದೆ ಅದೇ ಒಂದು ಗ್ರಂಥಿಯಾಗಿ ರೂಪುಗೊಂಡು, ಮುಂದಿನ ಪ್ರಗತಿಗೆ ಬಾಧಕವಾಗಿ ನಿಲ್ಲುವುದು. ನಮ್ಮನ್ನು ಮುಂದಕ್ಕೊಯ್ಯುತ್ತಿರುವುದು ನಮ್ಮ ಸದ್ಗುರು ಲಾಲಾಜಿಯವರ ಕೃಪೆ ಮತ್ತು ಶಕ್ತಿ ಮಾತ್ರವೇ ಆಗಿದೆ, ಅದು ಬೇರೆ ಯಾರ ವಶದಲ್ಲಿಯೂ ಇಲ್ಲ.

ನಿನ್ನ ಕ್ರಮಣದಲ್ಲಿ ದಣಿವು ಬಂದಿಲ್ಲ. ಆದರೆ ಕ್ರಮಣವು ಮಂದಗತಿಯಲ್ಲಿ ಸಾಗುತ್ತಿದೆ, ಯಾಕೆಂದರೆ ಈ ಸ್ಥಾನವೇ ಅಂಥದಿದೆ. ಅದರಲ್ಲಿ ಒಂದು ವೇಳೆ ವೇಗವನ್ನು ತೀವ್ರಗೊಳಿಸಿದರೆ, ಪ್ರಕೃತಿಯು ತೆಗೆದು ಹಾಕಿದ ಆವರಣಗಳು ಮತ್ತೆ ಮೆತ್ತಿಕೊಳ್ಳತೊಡಗುತ್ತವೆ. ಆದ ಕಾರಣ, ಅಲ್ಲಿಯ ಸ್ಥಿತಿಯು ಸೂಕ್ಷ್ಮತರವಾಗಿ ಹೋಗುತ್ತಿರುವ ಪ್ರಮಾಣದಲ್ಲಿಯೇ ಗತಿಯು ಕೂಡ ಸೂಕ್ಷ್ಮತರವಾಗುತ್ತ ಹೋಗುತ್ತದೆ. ಅರ್ಥಾತ್ ಸೂಕ್ಷ್ಮ ರೀತಿಯಲ್ಲಿ ಕ್ರಮೇಣ ಮಾಡಿಸಲಾಗುತ್ತದೆ. ಮತ್ತೊಮ್ಮೆ ಬರೆಯುತ್ತೇನೆ; ಇವುಗಳನ್ನು ಪೂರ್ತಿಗೊಳಿಸುವವರು ನಮ್ಮ ಲಾಲಾಜಿ ಸಾಹೇಬರೇ ಹೊರತು, ಮತ್ತಾರೂ ಮಾಡಲಾರರು. ದೈವೀಜ್ಞಾನಶಕ್ತಿಯ (Intelligence) ಕಾರ್ಯ ಇರುವುದು ಇಲ್ಲಿಯೇ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು. ಮಕ್ಕಳಿಗೆ ಆಶೀರ್ವಾದ.

ಶುಭಚಿಂತಕ
ರಾಮಚಂದ್ರ



* * * *

ಕ್ರಮಸಂಖ್ಯೆ – ೧೫೬ **ಪತ್ರಸಂಖ್ಯೆ – ೫೭೫** ಶಾಹಜಹಾನಪುರ
೧೨–೦೭–೧೯೫೬

ಪ್ರಿಯ ಪುತ್ರಿ ಕಸ್ತೂರಿ
ಶುಭಾಶೀರ್ವಾದಗಳು

ನಿನ್ನ ಪತ್ರ ಬಾಬೂ ಶ್ಯಾಮ ಬಿಹಾರಿಜಿಯವರ ಮೂಲಕ ಪ್ರಾಪ್ತವಾಯಿತು. ನೀನು ಜುಲೈ ೩ನೆಯ ತಾರೀಖಿನ ಪತ್ರದಲ್ಲಿ ಯಾವ ಸ್ಥಿತಿಯನ್ನು ಕುರಿತು ಬರೆದಿದ್ದಿಯೋ, ಅದರ ಉತ್ತರವನ್ನು ಈ ಹಿಂದಿನ ಪತ್ರದಲ್ಲಿ ಬರೆದಿದ್ದೇನೆ. ಅದಕ್ಕೆ ಉತ್ತರವನ್ನು ನಿನ್ನ ೬–೭–೫೬ರ ಪತ್ರದಲ್ಲಿ ಕೊಟ್ಟಿದ್ದೀಯೆ. ನೀನು ರಾತ್ರಿಯ ಉಪಮೆಯನ್ನು ಕೊಟ್ಟು ವ್ಯಕ್ತಪಡಿಸಿದ 'ಸ್ಥಿತಿ'ಯು ಕೆ–೧ (K1) ಸ್ಥಾನದ್ದಾಗಿದೆ. ಈಶ್ವರನು ಜನರಿಗೆ ಯಾಕೆ ಲಭ್ಯನಾಗುವುದಿಲ್ಲ? ಯಾಕೆ ಎಂದರೆ ಜನರು ಅವನನ್ನು ಕೋರೈಸುವ ಬೆಳಕಿನಲ್ಲಿ ಹುಡುಕುತ್ತಾರೆ; ಅವನು ಕತ್ತಲೆಯಲ್ಲಿ ತಡಕಾಡಿ ಹುಡುಕುವುದರಿಂದಲೇ ಸಿಗಬಲ್ಲನು. ಹಗಲಿನಲ್ಲಿ ಯಾರಾದರೂ ರಾತ್ರಿಯನ್ನು ಹುಡುಕಿದರೆ ಅದು ಸಿಗಲಾರದು, ಅಂತೆಯೇ ರಾತ್ರಿಯಲ್ಲಿ ಹಗಲನ್ನು ಹುಡುಕಿದರೆ ಅದು ಸಿಗಲಾರದೆಂಬುದೂ ನಿಜವೆ. ಅರ್ಥಾತ್, ಯಾವನು ಈಶ್ವರನನ್ನು ಪಡೆದನೋ ಅವನಿಗೆ ಬೆಳಕಿನ (ಉರುಗೋಲಿನ) ಸಹಾಯ ಕಲ್ಪನೆಯಲ್ಲಿ ಬರಲಾರದು. ಆದ್ದರಿಂದಲೇ ನಾನು ನಿನ್ನನ್ನು ಕತ್ತಲೆಯಲ್ಲಿ ಕರೆದೊಯ್ಯುತ್ತಿದ್ದೇನೆ; ಅಲ್ಲಿ ನಿನಗೇ ನೀನು ಕಾಣುವುದಿಲ್ಲ, ಮತ್ತೆ, ಮುಂದಕ್ಕೆ ಸಿಗುವುದು ಕತ್ತಲೆಯೇ ಕತ್ತಲೆ. ಇನ್ನೂ ಮುಂದಕ್ಕೆ ಸಾಗಿದರೆ, ಅದಕ್ಕೆ ಕತ್ತಲೆ ಎಂದು ಕರೆಯಬಾರದಂಥದ್ದು ಅವಶ್ಯ ಬರುತ್ತದೆ; ಅಲ್ಲಿಗೆ ತಲುಪಿ ನಾವು ಪ್ರಕಾಶಕ್ಕೂ ವಿದಾಯ ಹೇಳುತ್ತೇವೆ. ಅದಕ್ಕೂ ಮುಂದೆ, ನಾವು ಕತ್ತಲೆಗೂ ವಿದಾಯ ಹೇಳಲೇಬೇಕಾಗುವುದು. ಆಗ ನಾವು *'ಮೂಲ–ಭಂಡಾರ'ದಲ್ಲಿ ಪ್ರವೇಶಿಸುತ್ತೇವೆ – ಆಗ ಅಲ್ಲಿ ಇರುವುದಾದರೂ ಏನು?– ಕತ್ತಲೆಯೂ ಇಲ್ಲ, ಬೆಳಕೂ ಇಲ್ಲ, ಹಗಲೂ ಇಲ್ಲ, ರಾತ್ರಿಯೂ ಇಲ್ಲ. ಆದರೂ, ಮುಂದೆ ಕ್ರಮಿಸುವುದು ಇನ್ನೂ ಇದೆ.*

ಕೇಸರ್‌ಳ ಪತ್ರವೂ ಸಿಕ್ಕಿತು. ಈಶ್ವರನ ಕೃಪೆಯಿಂದ ಅವಳ ಸ್ಥಿತಿಯೂ ಚೆನ್ನಾಗಿದೆ. ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು ಮತ್ತು ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೫೭ **ಪತ್ರ ಸಂಖ್ಯೆ – ೫೭೮** ಷಾಹಜಹಾನಪುರ
೨೮–೦೭–೧೯೫೬

ಪ್ರಿಯಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ದಿನಾಂಕ ೧೮–೭–೫೬ ಮತ್ತು ೨೩–೭–೫೬ರ ಪತ್ರಗಳು ತಲುಪಿವೆ.

ಈಶ್ವರ (God) ನ ಅಸ್ತಿತ್ವವು ಸಿದ್ಧಮಾಡಬೇಕಾದ ವಿಷಯವಲ್ಲ. ಅದು ಮನುಷ್ಯನು ಅನುಭವಪಡಬೇಕಾದ ವಿಷಯ. ಅಲ್ಲದೆ, ಅದನ್ನು ಶಬ್ದಗಳಿಂದ ಇದುವರೆಗೂ ಸಿದ್ಧಮಾಡಿ ತೋರಿಸಲು ಸಾಧ್ಯವಾಗಿಲ್ಲ. ಯಾವ ವಸ್ತುವು ದರ್ಶನ ಮಾಡತಕ್ಕದ್ದಿದೆಯೋ, ಅದು ಅನುಭವಕ್ಕೆ ಬರಬಲ್ಲದು. ಮತ್ತು ಅದನ್ನು ದರ್ಶಿಸಬಹುದು.

ನಿನ್ನ (ಆಧ್ಯಾತ್ಮಿಕ) ಯಾತ್ರೆಯ ಸ್ಥಾನ ಈ ಕೆ–೧ (K1) ಎಂಬುದು ಸರಿ ಇದೆ. ಮತ್ತು ಅದರಲ್ಲಿ ಮೂರನೆಯ ಒಂದು ಭಾಗ ಯಾತ್ರೆ ಸಮಾಪ್ತವಾಗಿದೆ. ಮತ್ತು ಅಲ್ಲಿ ನೀನು ನಿಂತುಬಿಟ್ಟಿದ್ದೀಯೆ. ಅದಕ್ಕೆ ಕಾರಣವೆಂದರೆ, ನಿನ್ನ ಶಕ್ತಿ (ಸಾಮರ್ಥ್ಯ) ಸಾಲದು. ಹೆಜ್ಜೆ ಹೆಜ್ಜೆಗೂ ಈಗ ಸಹಾಯದ ಆವಶ್ಯಕತೆ ಇದೆ. ಈ ದಿನಗಳಲ್ಲಿ ನಾನು ಕೆಲಮಟ್ಟಿಗೆ ಬೇರೆಡೆಗೆ ಲಕ್ಷ್ಯಕೊಟ್ಟಿರುತ್ತೇನೆ. ಕೆಲವು ಸಮಸ್ಯೆಗಳೂ ಬಂದಿವೆ. ಈಶ್ವರನು ಅವುಗಳನ್ನು ಬಗೆಹರಿಸಿದರೆ, ನವೆಂಬರ್ ತಿಂಗಳಲ್ಲಿ ನಾನು ದಕ್ಷಿಣಭಾರತಕ್ಕೆ ಹೋಗಲು ಸಾಧ್ಯ. ಆದ್ದರಿಂದ, ನಿನ್ನ ಕಡೆಗೆ ಲಕ್ಷ್ಯ ಕೊಡಲಾಗಲಿಲ್ಲ. ಈಗ ನಿನ್ನ ಯಾತ್ರೆ (ಮತ್ತೆ) ಶುರುವಾಗುತ್ತದೆ. ಈಶ್ವರೇಚ್ಛೆಯಿದ್ದರೆ, ಈ ಪತ್ರ ತಲುಪುತ್ತಲೇ, ನಿನಗೆ ಅದರ ಅನುಭೂತಿ ಉಂಟಾಗತೊಡಗುವುದು. ನೀನು ಎರಡು ಪತ್ರಗಳನ್ನು ಕಳುಹಿಸಿದ್ದೀಯೆ. ಅದರಲ್ಲಿ ಉತ್ತರ ಕೊಡಬಹುದಾದ ಯಾವುದೇ ವಿಷಯ ಇಲ್ಲ. ಇನ್ನೊಂದು ಮಾತೆಂದರೆ ಅಂಥ ಸೂಕ್ಷ್ಮ ಸ್ಥಿತಿಗಳನ್ನು ಕುರಿತು ಉತ್ತರ ಬರೆಯುವುದೂ ಕಷ್ಟಸಾಧ್ಯ; ಯಾಕೆಂದರೆ ಸಮರ್ಪಕ ಶಬ್ದಗಳು ಸಿಗುವುದು ದುಃಸಾಧ್ಯ. ಅಲ್ಲದೆ, ಈಗ ಆ ಸಂಗತಿಗಳ (ಅನುಭೂತಿಗಳ) ಕಾರಣಗಳನ್ನು ಬರೆಯುವುದು ಇನ್ನೂ ಕಷ್ಟದ ಕೆಲಸ. ಆದರೂ ಏನಾದರೊಂದಿಷ್ಟು ಉತ್ತರರೂಪದಲ್ಲಿ ಬರೆಯಲು ನಾನು ಪ್ರಯತ್ನ ಪಟ್ಟೇ ಪಡುತ್ತೇನೆ.

ಕಾಶೀರಾಮಜಿಯವರ ಪತ್ರ ಬಂದಿತ್ತು. ಅವರು ಪತ್ರಿಕೆಯನ್ನು ಹೊರಡಿಸಲು ತ್ವರೆ ಮಾಡುತ್ತಿದ್ದಾರೆ. ಈಗ ಅವರು ೨೪ ಪುಟಗಳನ್ನು ಹಿಂದಿಗೋಸ್ಕರ ಮತ್ತು ೮ ಪುಟಗಳನ್ನು ಇಂಗ್ಲಿಷಿಗೋಸ್ಕರ ಇಟ್ಟಿದ್ದಾರೆ. ನೀನು ನಿನ್ನ ಲೇಖನಗಳನ್ನು ಕಳುಹಿಸುತ್ತಿರು. ಪತ್ರಿಕೆಯ ವಾರ್ಷಿಕ ಚಂದಾ ಮೂರು ರೂಪಾಯಿಗಳು. ನಾನೂ ಸ್ವಲ್ಪ ಬರೆಯಬೇಕೆಂದು ಯೋಚಿಸುತ್ತೇನೆ. ಆದರೆ ಏನೂ ಹೊಳೆಯುವುದಿಲ್ಲ. ನಾನೆಲ್ಲಿ ವೃದ್ಧನಾಗಿ ಬಿಟ್ಟಿದ್ದೇನೋ ತಿಳಿಯದು. ಅದೇನೇ ಇದ್ದರೂ, ಈಶ್ವರನ ಕೃಪೆಯಾದಾಗ ಲೇಖನದ ವಿಷಯ (ವಸ್ತು) ತನ್ನಿಂದ ತಾನೇ ಇಳಿದು ಬರುತ್ತದೆ. (ಕೇವಲ) ನನ್ನ ಪ್ರಯತ್ನದಿಂದ ಏನೂ ಆಗದು.



ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದ. ಚೌಬೇಜಿ ಮತ್ತು ಅಮ್ಮಾಜಿಯವರಿಗೆ ವಂದನೆಗಳು.

ಕೇಸರ್‌ಳ ಪತ್ರ ಬಂದಿದೆ. ಅವಳ 'ಸ್ಥಿತಿ' ಒಳ್ಳೆಯದಿದೆ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೫೮ **ಪತ್ರಸಂಖ್ಯೆ – ೫೮೦** ಷಾಹಜಹಾನಪುರ
೩೦–೭–೧೯೫೬

ಪ್ರಿಯಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು

ಇದಕ್ಕೂ ಮುಂಚೆ ಬಂದ ಪತ್ರಗಳ ಉತ್ತರವನ್ನು ಇದೇ ಲಕೋಟೆಯಲ್ಲಿ ಇರಿಸಿದ್ದೇನೆ. ಈಗ, ಜುಲೈ ೨೫ರ ಪತ್ರಕ್ಕೆ ಉತ್ತರವನ್ನು ಬರೆಯುತ್ತಿದ್ದೇನೆ. ನಿನ್ನ ಮುನ್ನಡೆಯು ಸ್ಥಗಿತವಾಗಿತ್ತು ಮತ್ತು ಕೆ–೧ (K1) ಸ್ಥಾನದ ೧/೩ ಯಾತ್ರೆ ಮುಗಿದಿತ್ತು ಎಂದು ಹಿಂದಿನ ಪತ್ರದಲ್ಲಿ ಬರೆದಿದ್ದೇನೆ. ಈಗ, ಇಂದಿನಿಂದ ಅದರಲ್ಲಿ ಜಾಗ್ರತಿ ಉಂಟಾಗತೊಡಗಿದೆ. ಈಶ್ವರೇಚ್ಛೆ ಇದ್ದರೆ, ನಾನು ಬರೆದಂತೆ, ಪತ್ರ ತಲುಪುವಷ್ಟರಲ್ಲಿ ಯಾತ್ರೆ ಮತ್ತೆ ಶುರುವಾಗುವುದು. ನಾನು ಎಷ್ಟು 'ಚಾವಿ' (ಪ್ರಾಣಾಹುತಿಯ ಶಕ್ತಿ) ಕೊಡುತ್ತೇನೋ ಅಷ್ಟರ ಮಟ್ಟಿಗೆ ನೀನು ಮುಂದೆ ಸಾಗುತ್ತೀಯೆ; ಇದರಲ್ಲಿ ನಿನ್ನ ದೋಷವೇನೂ ಇಲ್ಲ. ಉನ್ನತ ಸ್ಥಾನಗಳಲ್ಲಿ ಮಾರ್ಗದರ್ಶಿ (ಗುರು) ಮುಂದೆ ತಳ್ಳದಿದ್ದರೆ, ಯಾರೂ ಮುಂದೆ ಸಾಗಲು ಸಾಧ್ಯವಿಲ್ಲ. ಅಂಥ ಸೂಕ್ಷ್ಮ ಸ್ಥಿತಿಗಳು ಪ್ರಾಪ್ತವಾದವನಿಗೆ ಮಾತ್ರ ನನ್ನ ಈ ಹೇಳಿಕೆಯ ಮೇಲೆ ವಿಶ್ವಾಸ ಹುಟ್ಟಲು ಸಾಧ್ಯ. ಈಶ್ವರನೊಂದಿಗೆ ನೇರವಾಗಿ ಪ್ರೇಮ ಬೆಳೆಸಿಕೊಂಡು ಸಾಧಿಸಿದ ಒಬ್ಬಿಬ್ಬರು ಸಂತರು ಕೂಡ ಆಗಿ ಹೋಗಿದ್ದಾರೆ. ಮತ್ತು ಈ ಪ್ರೇಮವೂ ಕೂಡ, ಯಾರಾದರೂ ಹಾಗೆ ನೇರವಾಗಿ ಮಾಡಬಲ್ಲರಾದರೆ– ಒಳ್ಳೆಯದೇ ಸರಿ. ಆದರೆ ಅಹಂಕಾರದ ಈ ಹದಿನಾರು ವೃತ್ತಗಳನ್ನು ತಮ್ಮ ಜೀವಿತಕಾಲದಲ್ಲಿ, ಲಾಲಾಜಿಯವರನ್ನು ಹೊರತುಪಡಿಸಿದರೆ, ಮತ್ತೆ ಯಾರೂ ದಾಟಿ ಹೋಗಲು ಶಕ್ತರಾಗಿಲ್ಲ. ನಾನು ಶೋಧಿಸಿ ನೋಡಿದಮಟ್ಟಿಗೆ, ಹಿಂದಿನ ಮಹಾತ್ಮರುಗಳಲ್ಲಿ ಇಷ್ಟು ಉನ್ನತ ಆರೋಹಣವನ್ನು ಮಾಡಿದ ಯಾರನ್ನೂ ಕಂಡಿಲ್ಲ. ಕೇವಲ ಸ್ವಪ್ರಯತ್ನದಿಂದ ಸಫಲರಾಗುವುದು ಬಹಳ ಕಠಿಣವೆಂಬುದು ನನ್ನ ಅನಿಸಿಕೆ; ಯಾಕೆಂದರೆ, ಗುರುವಿನ ಸಹಾಯವಿಲ್ಲದೆ, ಸ್ವಪ್ರಯತ್ನದಿಂದ ಅಹಂಕಾರಮುಕ್ತರಾಗಲು ಹೊರಟರೆ, ಶರೀರ ಉಳಿಯುವುದಿಲ್ಲ. ಇದಕ್ಕೆ ಅನುಸರಿಸಬೇಕಾದ ವಿಧಾನವೆಂದರೆ, ಅಭ್ಯಾಸಿಗೂ ಅದು ತಿಳಿಯದಂತೆ, ಮತ್ತು ಕಣ್ಣಿದ್ದವರಿಗೂ (ಅದನ್ನು ನೋಡುವ ಅಂತರ್ದೃಷ್ಟಿಯಿರುವವರಿಗೂ) ಕೂಡ ಕಾಣದಂತೆ, ಅದನ್ನು (ಅಹಂಕಾರ)

P-4-Books-PM-7-Anantyatre-156



ಸ್ವಲ್ಪಮಟ್ಟಿಗೆ ಒಳಕ್ಕೆ ದಬ್ಬಬೇಕು. ಕುರ್ಚಿಯ ಆಸನದ ಅಡಿಯಲ್ಲಿ ಧೂಳು ಇರುವ ಹಾಗೆ. ಅದರ ಮೇಲೆ ಕುಳಿತುಕೊಳ್ಳುವವರಿಗೆ ಅದು ಗೊತ್ತಾಗುವುದಿಲ್ಲ. ಶರೀರವನ್ನು ಇಟ್ಟುಕೊಳ್ಳಲೋಸುಗ ಈ ಸ್ಥಿತಿಯನ್ನು ಉಂಟುಮಾಡುವುದು ಅಗತ್ಯ. ನಿಜ ಸಂಗತಿಯೇನೆಂದರೆ, ಅಹಂಕಾರವನ್ನು ನಿಃಶೇಷ ಅಳಿಸಿ ಹಾಕುವುದು–ನಾನು 'ರಾಜಯೋಗದ ಪ್ರಭಾವ'ದಲ್ಲಿ ಬರೆದಂತೆ– ಮಹಾಪ್ರಳಯದ ಸಮಯದಲ್ಲಿ ಮಾತ್ರ; ಆಗ ಎಲ್ಲವೂ ಸೇರಿ ಒಂದೇ ಅಸ್ಮಿತೆ (ಸಾರೂಪ್ಯತೆ) (Identity) ಆಗಿ ಬಿಡುತ್ತದೆ; ಮತ್ತು ಅದರಿಂದ ವಿಶ್ವದ ಸೃಷ್ಟಿಯು ಹೊಸತಾಗಿ ಆರಂಭವಾಗುತ್ತದೆ. ಇಷ್ಟು ತಿಳಿದರೆ ಸಾಕು– ಅಭ್ಯಾಸಿಯು ಶರೀರದಲ್ಲಿದ್ದೂ ಅಹಂಕಾರದ ವೃತ್ತಗಳನ್ನು ದಾಟಬೇಕಾದಾಗ, 'ಅಹಂಕಾರ'ವನ್ನು ಸಾರೂಪ್ಯತೆಯಾಗಿ (Identity) ಮಾರ್ಪಡಿಸಲಾಗುತ್ತದೆ.

ಈಗ ನಿನ್ನ ಪತ್ರದ ವಿಷಯಕ್ಕೆ ಬರುತ್ತೇನೆ. ನಿನಗೆ ಅಸ್ತಿತ್ವವೇ ಲುಪ್ತವಾಗಿ ಹೋದಂತೆನಿಸುತ್ತದೆ. ಇದು ಲಯಾವಸ್ಥೆಯ ಒಂದು ಉನ್ನತ ಸ್ಥಿತಿ. ಆದರೆ ಇದು ಎಷ್ಟು ಸ್ಥಾಯಿಯಾಗಬೇಕೆಂದರೆ, ಅಭ್ಯಾಸಿಯು ಎಷ್ಟು ಯೋಚನೆ ಮಾಡಿ ನೋಡಿದರೂ ಅದರ ಸಂಸ್ಕಾರ ಹೃದಯದ ಮೇಲೆ ಆಗಕೂಡದು. ನಿನ್ನ ಈ ಅನುಭೂತಿ ಸಮಾಪ್ತವಾಗುವುದು, ಅಂದರೆ, ಪ್ರಕೃತಿಗೆ ಯಾವುದೋ ಒಂದು ವಸ್ತುವು ಶಕ್ತಿ ನೀಡುತ್ತದೆ ಎಂಬುದು, ಚೇತನತೆಯು ಲುಪ್ತವಾಗಿ ಹೋಗಲೆಳಸುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತದೆ; ಆದರೆ ಇನ್ನೂ ಅದರ ಸೂಕ್ಷ್ಮ ಸ್ಥಿತಿ ಉಳಿದಿದೆ. ಅಥವಾ ಚೇತನತೆಯ (Consciousness) ಸೂಕ್ಷ್ಮ ಗತಿ ಇನ್ನೂ ಉಳಿದಿದೆ ಎಂದೂ ಹೇಳಬಹುದು. ಈಶ್ವರೇಚ್ಛೆಯಿದ್ದರೆ, ಇದೂ ಕೂಡ, ಇದಕ್ಕಿಂತ ಮುಂದೆ ಸಾಗುವ ಶುಭ ಸಮಾಚಾರ ಕೊಡಬಹುದು. ಜಗತ್ತಿನ (ಜನರ) ಎಲ್ಲ ಪರಿಶ್ರಮ, ಹೆಣಗಾಟಗಳೂ ಕೇವಲ ಶುದ್ಧಚೇತನತೆಯವರೆಗೆ ಮಾತ್ರ ಇರುತ್ತದೆ (ಅದನ್ನು ಪಡೆಯಲಿಕ್ಕೋಸ್ಕರ ಮಾತ್ರ ಇದೆ). ಮತ್ತು ಇದನ್ನೇ ಅವರು 'ಈಶ್ವರಪ್ರಾಪ್ತಿ' ಎಂದು ಪರಿಗಣಿಸುತ್ತಾರೆ. ಆದರೆ, ಯಾರಾದರೂ ನನ್ನನ್ನು ಕೇಳಿದರೆ, ವಾಸ್ತವವಾಗಿ ಅವರು ಇನ್ನೂ ನಿಜವಾದ ನೆಲೆಯನ್ನು ತಲುಪಿಲ್ಲ. ಯಾರಿಗಾದರೂ ನಾನು ಇದನ್ನು ಹೇಳಿದರೆ, ನಾನು ನನ್ನ ಹಿರಿಮೆಯನ್ನು ತೋರಿಸಲೋಸುಗ ಒಂದು ಹೊಸ ಕಲ್ಪನೆಯನ್ನು ಹುಟ್ಟುಹಾಕಿದ್ದೇನೆ ಎಂದು ಹೇಳಬಹುದು. ಅವರು, ತಮಗೆ ಸಿಕ್ಕ ವಾತಾವರಣಕ್ಕೆ ಅನುಗುಣವಾಗಿ ಹಾಗೆನ್ನುವುದು ಸರಿಯೆ. ಅವರು ತಮ್ಮ ಸ್ಥಾನದಲ್ಲಿ ಇರಲಿ. ಅಲ್ಲದೆ, ದೊಡ್ಡ ದೊಡ್ಡ ಪೂಜೆ–ಆರಾಧನೆಗಳನ್ನು ಉಪದೇಶಿಸುವ ದೊಡ್ಡ ದೊಡ್ಡ ಮಹಾತ್ಮರೆದುರು ನನ್ನಂಥ ಸಾಮಾನ್ಯ ವ್ಯಕ್ತಿಯ ಮಾತಿಗೆ ಯಾರು ತಾನೆ ಕಿವಿಗೊಡುತ್ತಾರೆ?

ನಿನ್ನ ಶಿರಸ್ಸಿನ ಸ್ಥಾನದಲ್ಲಿ ಯಾವುದೋ ಒಂದು ಪರದೆಯನ್ನು ಹರಿದು ಹಾಕಿದರೆ ನೀನು ಎಲ್ಲಿಯೋ (ಉನ್ನತ ಸ್ಥಾನಕ್ಕೆ) ಹೋಗಿ ತಲುಪಿಬಿಡುತ್ತಿದ್ದೆ– ಎಂದು ಬರೆದಿದ್ದೀಯೆ. ನಿನ್ನ ಅನಿಸಿಕೆ ಸರಿಯಾಗಿದೆ. ಚಂಡಿಕೆ (ಜುಟ್ಟು) ಬಿಡುವ ಸ್ಥಾನವನ್ನು ಬ್ರಹ್ಮರಂಧ್ರ ಎಂದು ಕರೆಯಲಾಗುತ್ತದೆ. ಇಲ್ಲಿ ಅಪರೋಕ್ಷ ದರ್ಶನ



(ಸ್ಫುರಣೆ) ಆಗುತ್ತದೆ. ಆದರೆ ಈ ಸ್ಥಾನ (K1 ದಿಂದ) ಇನ್ನೂ ದೂರ ಉಂಟು. ಅದರ ನಡುವೆ ಅನೇಕ ಬಿಂದುಗಳು ಇರುವ ಸಂಭವವಿದೆ. ಅವು ಇರುವಲ್ಲಿ ಅಳೆದು ನೋಡಿದರೆ ಅಂತರವು ಬಹಳ ಚಿಕ್ಕದು ಎಂದೆನಿಸಬಹುದು. ಆದರೆ ಈ ಅಂತರದ ಪರಿಮಾಣದಿಂದ ನಾವು ಗಣಿಸಲಾಗದು. ಪ್ರತಿಯೊಂದು ಬಿಂದುವೂ ಈಶ್ವರನ ಒಂದು ದೊಡ್ಡ ವಲಯವಾಗಿದೆ. ಒಂದು ವೇಳೆ ಅಳೆದರೆ, ನಾವು ವಾಸಿಸುತ್ತಿರುವ ವಿಶ್ವದಂಥ ಸಾವಿರಾರು ವಿಶ್ವಗಳು ಅದರಲ್ಲಿ ಅಡಕವಾಗಿಡಬಹುದು.

ಬೆಳಕು ಇರುವಾಗಲೂ ಕತ್ತಲೆಯ ಅನುಭೂತಿಯಾಗುವುದೆಂದು ಕೇಸರ್ ಬರೆದಿದ್ದಾಳೆ. ಅವಳು 'ತ್ರಿಕುಟಿ'ಯ (ಆಧ್ಯಾತ್ಮಿಕ) ಯಾತ್ರೆ ಪ್ರಾರಂಭಿಸಿದ್ದಾಳೆ ಎಂದು ಇದರ ಅರ್ಥ. ('ತ್ರಿಕುಟಿ'ಯನ್ನು ಪ್ರಾಚೀನ ಸೂಫಿಗಳು 'ಸೈರ್–ಸಫ್ಸ್' ಎಂದು ಕರೆದಿದ್ದಾರೆ.)

ನೀನು ಆಸಾಮಕ್ಕೆ ಕಳುಹಿಸುವ ಲೇಖನಗಳಲ್ಲಿ ನನ್ನನ್ನು ಕುರಿತ ಹೊಗಳಿಕೆ ಇರಕೂಡದು. ಇಲ್ಲವಾದರೆ, ಅದು ಪ್ರಚಾರ ಸಾಮಗ್ರಿ ಎಂದು ಪರಿಗಣಿಸಲ್ಪಡಬಹುದು. ಕೇವಲ ಪ್ರಾಯೋಗಿಕ ಅಭ್ಯಾಸ (ಸಾಧನೆ) ಮತ್ತು ಸಹಜಮಾರ್ಗದ ತತ್ತ್ವಗಳ ನಿರೂಪಣೆ ಇರಬೇಕು. ಯಾವುದೇ ಪುಸ್ತಕದ ಆಕರ–ಸಂಬಂಧವನ್ನು ಸೂಚಿಸಲು ಆಕ್ಷೇಪವಿಲ್ಲ. ಲಾಲಾಜಿಯವರ ಹೆಸರನ್ನು ಪ್ರಸ್ತಾಪಿಸುವುದು ಹೆಚ್ಚು ಒಳ್ಳೆಯದು. ಆದರೆ ಅದರಲ್ಲಿ ಕೂಡ ಪ್ರಚಾರೋದ್ದೇಶ ಸ್ವಲ್ಪವೂ ಇರಕೂಡದು. ಬದಲಿಗೆ ಅವರು ನಿಜವಾಗಿ ಹೇಳಿದುದು ಅಥವಾ ಬರೆದುದು, ಅಥವಾ ಅವರು ತತ್ತ್ವಶಾಸ್ತ್ರವನ್ನು ವಿವರಿಸಿರುವುದು ಮುಂತಾದವು ಬರಬಹುದು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೫೯ **ಪತ್ರಸಂಖ್ಯೆ – ೫೮೭** ಷಾಹಜಹಾನಪುರ
೦೬–೦೯–೧೯೫೬

ಪ್ರಿಯ ಪುತ್ರಿ ಕಸ್ತೂರಿ,
ಶುಭಾಶೀರ್ವಾದಗಳು.

ಅಗಸ್ಟ್ ೨೨, ೨೯ ಮತ್ತು ಸೆಪ್ಟೆಂಬರ್ ೨ರ ನಿನ್ನ ಪತ್ರಗಳು ಪ್ರಾಪ್ತವಾದವು. ನಿನ್ನ ಎಲ್ಲ ಪತ್ರಗಳೂ ಉಚ್ಚ ಲಯಾವಸ್ಥೆಯನ್ನು ತಿಳಿಸುತ್ತವೆ. ಕೊನೆ ಮುಟ್ಟುವುದರೊಳಗೆ ಇನ್ನೆಷ್ಟು ಲಯಾವಸ್ಥೆಗಳು ಬರುವವೋ ಗೊತ್ತಿಲ್ಲ, ಮತ್ತು ಲಯವಾಗುತ್ತ ಹೋಗುವುದೇ ಈ ಸ್ಥಿತಿಯ ಅದ್ಭುತವಾಗಿದೆ; ಹಾಗೂ, ಮತ್ತೆ ಅದರಿಂದ ಮುಂದೆ (ಇನ್ನೊಂದು ಲಯಾವಸ್ಥೆಗೆ) ಜಿಗಿಯುವುದೇ ಅದರ ಪರಿಣಾಮ ಅದ್ಭುತವಾಗಿದೆ. ಈ ಸ್ಥಿತಿಗಳನ್ನು ನೋಡಿದಾಗ, ಮತ್ತು ಭಿನ್ನ ಭಿನ್ನ ಲಯಾವಸ್ಥೆಗಳ ಈ ವಿಧಾನದಿಂದ ಉಂಟಾಗುವುದನ್ನು ಕಂಡಾಗ ನಾನಂತೂ ಆಶ್ಚರ್ಯ–ಮುಗ್ಧನಾಗಿ

P-4-Books-PM-7-Anantyatre-157



ಬಿಡುತ್ತೇನೆ. ನಾವು ನಮ್ಮ ಅನ್ವೇಷಣೆಯಲ್ಲಿ ಎಷ್ಟು ಜೀವನ ಕಳೆದೆವೊ ತಿಳಿಯದು; ಮತ್ತೆ, ಇನ್ನೂ ಹೊಸ ಸಂಗತಿಗಳು ನಿರಂತರ ತೆರೆದುಕೊಳ್ಳುತ್ತಲೇ ಇವೆ. ಭಾರತ ವರ್ಷದಲ್ಲಿ ಮಹಾತ್ಮರೆನಿಸಿಕೊಂಡವರು ಅದೆಷ್ಟು ಅವನತಿ ಹೊಂದಿದ್ದಾರೆಂದರೆ, ಒಬ್ಬಿಬ್ಬರಂತೂ, ರಾಮಾಯಣವನ್ನು ಮನೆಯಲ್ಲಿಟ್ಟು ಅದಕ್ಕೆ ಆರತಿ ಮಾಡುತ್ತಿದ್ದರೆ ಸಾಕು, ಮುಕ್ತಿ ಪ್ರಾಪ್ತವಾಗುತ್ತದೆ ಎಂದು ಹೇಳತೊಡಗಿದ್ದಾರೆ. ಜನರು ತಮಾಷೆಯಾಗಿ ಒಂದು ಮಾತು ಹೇಳುತ್ತಾರೆ. ಅದು ಇಂಥವರಿಗೆ ಸಮರ್ಪಕವಾಗಿ ಸಲ್ಲುತ್ತದೆ– 'ಇಸ್ ಹುಸ್ನ್ ಪರ್ ಯೇ ನಖರೇ"– "ಈ ಸೌಂದರ್ಯಕ್ಕೆ ಇಷ್ಟು ಬೆಡಗು–ಬಿನ್ನಾಣ"! ಶಿಷ್ಯರನ್ನು ದೇವರೇ ಕಾಪಾಡಲಿ), ನಾನು ಬಳಸಿದ 'ನಖರಾ' (ಬೆಡಗು ಬಿನ್ನಾಣ, ಹಮ್ಮು) ಎಂಬ ಶಬ್ದ ಅರ್ಥಪೂರ್ಣವಾಗಿದೆ. ಅದಕ್ಕೆ ತಮಾಷೆಯ (ವ್ಯಂಗ್ಯದ) ಛಾಯೆ ಇದೆ, ಆದರೆ, ಗತಿಯಿಲ್ಲದೆ ನಾನು ಈ ಶಬ್ದವನ್ನು ಬಳಸುತ್ತಿದ್ದೇನೆ, ಯಾಕೆಂದರೆ, ಅದು ಈ ಮಹಾತ್ಮರುಗಳ ರೀತಿ ಮತ್ತು ಮನೋವೃತ್ತಿಯನ್ನು ಪ್ರಕಟಪಡಿಸಿ ತೋರಿಸುತ್ತದೆ. ಈ ಗುರುಗಳು ಕೊಡುತ್ತಿರುವ ತಾಲೀಮು ಇದು ಇರುವಾಗ, ಅವರು ಗೌರವವನ್ನು ಬಯಸುತ್ತಾರೆ. ಯಾರಾದರೂ ಅವರ ಗೌರವ ಮನ್ನಿಸದಿದ್ದರೆ, ಅವರಿಗೆ ಬಿಸಿ ಏರಿಬಿಡುತ್ತದೆ. ಇಂಥವರು, ಮಳೆ ಬಿದ್ದಾಗ ಅಣಬೆಗಳು ನೆಲ ಕಚ್ಚುವಂತೆ ಬಿದ್ದುಹೋಗುವ ಕಾಲ ಅವಶ್ಯ ಬಂದೇ ಬರುತ್ತದೆ. ಈ ವಿಷಯಗಳನ್ನು ಕುರಿತು ತುಂಬಾ ಬರೆಯಬೇಕೆಂದು ನನ್ನ ಮನಸ್ಸು ಎಳೆಯುತ್ತದೆ; ಆದರೆ ಅದರಿಂದೇನೂ ಪ್ರಯೋಜನವಾಗುವಂತೆ ಕಾಣುವುದಿಲ್ಲ. ಆದ್ದರಿಂದ ಹಾಗೆ ಮಾಡುವುದು ವ್ಯರ್ಥ. ಈಶ್ವರೀಯ (ಆಧ್ಯಾತ್ಮಿಕತೆಯ) ಅಲೆ ಎದ್ದು ಬಂದಾಗ ಸತ್ಯವು ಮತ್ತೆ ಪ್ರಕಾಶಿತಗೊಳ್ಳುವುದು ನಿಶ್ಚಿತ.

ಸೆಪ್ಟೆಂಬರ್ ೫, (೧೯೫೬) ರಂದು ರಾತ್ರಿ ಹನ್ನೊಂದುವರೆ ಗಂಟೆಗೆ ನಾನು ನಿನ್ನನ್ನು ಎಲ್೧ (L1) ಸ್ಥಾನದಲ್ಲಿ ತಂದು ಬಿಟ್ಟಿದ್ದೇನೆ. ಅಂಧಕಾರ ಮಿಶ್ರಿತ ಪ್ರಕಾಶವುಳ್ಳ ಬಯಲಿನಂಥ ಸ್ಥಾನವಿದು. ಈ ಬಯಲುಗಳನ್ನು, ಕೋಗಿಲೆಯಂತೆ (ಪಪೀಹಾ) ಸದಾ 'ಪಿಂವ್ರೂ ಪಿಂವ್ರೂ' ಎಂದು ಕರೆಯುತ್ತ (ಸದಾ ತೃಷ್ಣೆ ಹೊಂದಿದ್ದು) ಅನ್ವೇಷಣೆ ಮಾಡುವವನು ಮಾತ್ರವೇ ದಾಟಿ ಹೋಗಬಲ್ಲನು. ನಾನು ನನ್ನ ತಾಯಿಯನ್ನು ಪಿಂಡ ದೇಶದ ಎಲ್ಲ ಬಿಂದುಗಳನ್ನು ದಾಟಿಸಿ ಬ್ರಹ್ಮಾಂಡ–ಮಂಡಲದಲ್ಲಿ ಇರಿಸಿದೆ, ಮತ್ತು ಅವಳ ಇಡೀ ಶರೀರದಲ್ಲಿ 'ಅಜಪಾ' ಉಂಟಾಯಿತು, ಎಂಬ ನಿನ್ನ ತಿಳಿವಳಿಕೆ ಸರಿ ಇದೆ. ಈ ಸಮಯದಲ್ಲಿ ಅವಳ ಬ್ರಹ್ಮಾಂಡ ಮಂಡಲದ ಯಾತ್ರೆ (ಕ್ರಮಣ) ನಡೆಯುತ್ತಿದೆ. ಅವಳಿಗೆ ಇದರ ಅರಿವೂ ಬಾರದಂತಹ ರೀತಿಯಲ್ಲಿ ಇದನ್ನು ಮಾಡಿದೆ. ಅವಳ ನಿಃಶಕ್ತಿಯ ದೆಸೆಯಿಂದ, ಅವಳ ಮೆದುಳಿನ ಮೇಲೆ ಒತ್ತಡ ಬೀಳದಿರಲೆಂದು ಹೀಗೆ ಮಾಡಿದ್ದೇನೆ. ಅವಳು ಎಷ್ಟು ನಿಃಶಕ್ತಳಾಗಿದ್ದಾಳೆಂದರೆ, ಮಲ–ಮೂತ್ರ ವಿಸರ್ಜನೆಗೆ ಕೂಡ ಅವಳನ್ನು ಎತ್ತಿ ಕರೆದೊಯ್ಯಬೇಕಾಗುತ್ತದೆ. ಮುಂದೇನಾಗುವುದೋ ನೋಡಬೇಕು. ಅವಳು ಅಸ್ತಮಾದಿಂದ ಇನ್ನೂ ಬಳಲುತ್ತಿದ್ದಾಳೆ. ನನಗೂ ಸ್ವಲ್ಪಮಟ್ಟಿಗೆ ಅಸ್ತಮಾ ಬಂದಿತ್ತು. ಅದು ತನ್ನಿಂದ ತಾನೇ



ಹೊರಟು ಹೋಗಿರಬಹುದು, ಅಥವಾ, ನಾನು ಒಂದೆರಡು ಬಾರಿ 'ಶೀತೋಪಲಾದ'ದ ಚಟ್ನಿ ತಿಂದಿದ್ದೆನಾದ್ದರಿಂದ ಅದರಿಂದ ಸ್ವಲ್ಪ ಪ್ರಯೋಜನವಾಗಿರಬಹುದು.

ಕಾಶೀರಾಮಜಿಯವರ ಪತ್ರ ಬಂದಿದೆ. ಪತ್ರಿಕೆಯನ್ನು ಮುದ್ರಣಕ್ಕೆ ಅವರು ಕಲ್ಕತ್ತೆಗೆ ಕಳುಹಿಸಿದ್ದಾರೆ. ಮುಂದಿನ ಸಂಚಿಕೆಗೋಸ್ಕರ ಲೇಖನಗಳನ್ನು ಬೇಡಿದ್ದಾರೆ. ಲೇಖನಗಳು ಪ್ರಾಪ್ತವಾಗುತ್ತಿದ್ದರೆ ಪ್ರತಿಕೆಯೂ ಮುದ್ರಿಸಲ್ಪಡುತ್ತ ಹೋಗಬಹುದು ಎಂದು ಕೂಡ ಬರೆದಿದ್ದಾರೆ.

ಕೇಸರ್‌ಳ ಪತ್ರವೂ ಬಂದಿತ್ತು. ಅವಳ ಆಧ್ಯಾತ್ಮಿಕ ಸ್ಥಿತಿ ಚೆನ್ನಾಗಿ ನಡೆಯುತ್ತಿದೆ.

ಇದೀಗ ಒಂದು ಕರಪತ್ರ ನನ್ನ ಬಳಿಗೆ ಬಂದಿದೆ. ಅದರ ತಲೆಬರಹ 'ಕಭಲಾದ ಶ್ರೀ ಶ್ರೀ ೧೦೮ ದಯಾನಂದ ಮಹಾರಾಜ ಸರಸ್ವತಿಯವರ ಅಕ್ರಮಗಳು' ಎಂದಿದೆ.

ಈ ಮಹಾತ್ಮ 'ಕಭಲಾ'ದವರು. ಅವರು ಒಂದು ಶಾಲೆ ತೆರೆದಿದ್ದಾರೆ. ಸರಕಾರ ಮುನ್ನೂರು ಬೀಘಾ ಜಮೀನನ್ನು ಅದಕ್ಕೆ ಕೊಟ್ಟಿದೆ ಎಂದು ಕರಪತ್ರದಲ್ಲಿ ಹೇಳಲಾಗಿದೆ. ಅದರಿಂದ ಬರುವ ಆದಾಯವನ್ನು ಅವರು ಸ್ವತಃ ಉಪಯೋಗಿಸುತ್ತಾರೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಬೇನಾಮಿ ಹೆಸರುಗಳನ್ನು ಬರೆಯಲಾಗಿದೆ ಮತ್ತು ಅವರ ಸಂಬಳವನ್ನು ಅವರೇ ತಿಂದುಹಾಕುತ್ತಾರೆ. ಈ ಕರಪತ್ರವನ್ನು ಎಲ್ಲ ಮಂತ್ರಿಗಳಿಗೆ ಕಳುಹಿಸಲಾಗಿದೆ. ಮತ್ತು ಪ್ರೆಸಿಡೆಂಟ್–ಶ್ರೀರಾಮಚಂದ್ರ ಮಿಷನ್– ಹೆಸರಿಗೆ ನನಗೆ ಬಂದಿದೆ. ಆ ಕಮಿಟಿಯವರಿಗೆ ನಮ್ಮ ಮಿಷನ್ನಿನ ವಿಳಾಸ ಹೇಗೋ ದೊರೆತಿರಬೇಕು. ಆದ್ದರಿಂದ ನಮಗೆ ಕಳುಹಿಸಿರಬಹುದು. ಇದು ಮಹಾತ್ಮರೆಂದೆನಿಸಿಕೊಂಡವರ ಪಾಡು ! ಅಷ್ಟಾಗಿ, ಅವರು ತಮ್ಮನ್ನು ಗೌರವಿಸಬೇಕೆಂದು ಬಯಸುತ್ತಾರೆ !

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೦ **ಪತ್ರಸಂಖ್ಯೆ – ೫೯೧** ಷಾಹಜಹಾನಪುರ
೧೯–೯–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು.

ಸೆಪ್ಟೆಂಬರ್ ೧೧ ಮತ್ತು ೧೭ರ ನಿನ್ನ ಪತ್ರಗಳು ಕೈ ಸೇರಿದವು. ನಾನು 'ಅಭ್ಯಾಸ' ಪ್ರಾರಂಭಿಸಿದಾಗ, ಹಿಂದೆ, ಪ್ರಾಪಂಚಿಕ ವಿಷಯಗಳನ್ನು ಕುರಿತಂತೆ, ಆಗುತ್ತಿದ್ದ ಯಾವ ಸಂಗತಿಗಳ ಅಂಥ ಅನುಭವವೂ ನನಗಿಲ್ಲ. ಆದರೆ, ಪ್ರಕೃತಿಯ

P-4-Books-PM-7-Anantyatre-158



(Nature) ವಿಷಯಗಳ ಅನುಭವ ಖಂಡಿತವಾಗಿಯೂ ನನಗೆ ಆಗುತ್ತದೆ. ಆದ್ದರಿಂದ, ನಾನು ನನ್ನ ಮಾತಾಜಿಯವರ ಅನ್ನಮಯ ಕೋಶವೊಂದನ್ನು ಬಿಟ್ಟು ಉಳಿದೆಲ್ಲ ಕೋಶಗಳನ್ನೂ ಭಗ್ನಗೊಳಿಸಿದ್ದೇನೆ. ಅನ್ನಮಯ ಕೋಶವನ್ನು ಭಗ್ನಗೊಳಿಸುವ ಅಗತ್ಯವು ಇರಲಿಲ್ಲ. ಯಾಕೆಂದರೆ ಅದನ್ನು ಭಗ್ನಗೊಳಿಸಿದಾಗ ಕೆಲವು ಶುದ್ಧ ಮತ್ತು ಪ್ರಬಲ ಶಕ್ತಿಗಳು ಹುಟ್ಟಿಕೊಳ್ಳುತ್ತವೆ. ಮತ್ತು, ಬಾಯಿಯಿಂದ ಒಳ್ಳೆಯ ಅಥವಾ ಕೆಟ್ಟ ಮಾತುಗಳು ಹೊರಡುವುದರಿಂದ ಅಂತೆಯೇ ಆಗುವ ಸಂಭವವಿದೆ.

ಪಂಡಿತ ಲಕ್ಷ್ಮೀಚಂದ, ಈಗ 'ರಾಮೇಂದ್ರ ದೇವ' ಆಗಿ, (ನಮ್ಮ ಮಿಷನ್ನಿನಿಂದ) ತಮ್ಮ ಸಂಬಂಧ ಕಡಿದುಕೊಂಡು, ತಮ್ಮದೇ ಆದ ನಿಯಮಗಳನ್ನು ಮಾಡಿಕೊಂಡಿದ್ದಾರೆ. ಅವರ ಸಂಸ್ಥೆಗೆ 'ದಿವ್ಯಪಥ ಪ್ರದರ್ಶಕ ಮಂಡಲ'– ಎಂದು ಹೆಸರಿಟ್ಟಿದ್ದಾರೆ. ನನಗೆ ಇದರ ಬಗ್ಗೆ ಖಂಡಿತ ಖೇದವಿಲ್ಲ. ಆದರೆ 'ಮೇರೇ ಘರ್ ಸೋ ಆಗೀ ಲಾಯಿ, ನಾಮಧರೋ ಮೈಸಂಧರ್' (ನನ್ನ ಮನೆಯಿಂದ ಬೆಂಕಿ ಬೇಡಿ ತೆಗೆದುಕೊಂಡ, ತನ್ನ ಹೆಸರು ವೈಶ್ವಾನರ(ಅಗ್ನಿ) ಎಂದ.) ಎಂಬ ಮಾತು ನಿಜವಾದಂತಾಯಿತು. ಈ ವ್ಯಕ್ತಿಯ ಬಗ್ಗೆ ನನಗೆ ಈಗಲೂ ಕನಿಕರವೆನಿಸುತ್ತದೆ. ಅವನ ಯೋಗ್ಯ ಶಿಷ್ಯ 'ಹರಿಶರಣ' ಎಂಬವರು 'ಯೋಗ ವೇದಾಂತ ಮುಕ್ತಾವಳಿ' ಎಂಬ ಪುಸ್ತಕವನ್ನು ಬಹಳ ಅಭಿಮಾನದಿಂದ ಬರೆದಿದ್ದಾರೆ. ಆ ಪುಸ್ತಕ ಮತ್ತು ನಿಯಮಗಳನ್ನು ಕಳುಹಿಸುತ್ತಿದ್ದೇನೆ. ಓದಿ ನೋಡು. ಮಾಸ್ಟರ್ ಸಾಹೇಬರಿಗೆ ಬಿಡುವಿದ್ದಾಗ ಅವರಿಗೂ ಕೊಡು; ಅವರೂ ನೋಡಲಿ.

ಈಗ (ಇತ್ತೀಚೆಗೆ) ಬರುತ್ತಿರುವ ನಿನ್ನ ಪತ್ರಗಳಿಗೆ ಉತ್ತರ ಬರೆಯಲು ಸರಿಯಾದ ಶಬ್ದಗಳು ಸಿಗುವುದಿಲ್ಲ. ನೀನು ಹೇಗೋ ಯಾವುದೋ ರೀತಿಯಲ್ಲಿ ವ್ಯಕ್ತಮಾಡಿಬಿಡುತ್ತೀಯೆ. ಹೊಗೆ ಬರುವುದರಿಂದ, ಅಲ್ಲಿ ಬೆಂಕಿಯೂ ಇದೆಯೆಂಬುದು ತಿಳಿದು ಬರುತ್ತದೆ. ಬೆನ್ನು ಹುರಿಯಲ್ಲಿ ಅಥವಾ ಅದರ ಸಮೀಪದಲ್ಲಿ ಹರಿದಾಡಿದಂತೆ ಅನಿಸುವುದು, ಅಲ್ಲಿ ಕಂಪನ ಅಥವಾ ಸ್ಪಂದನವನ್ನು ಸೂಚಿಸುತ್ತದೆ. ಅದರಿಂದ (ಅಲ್ಲಿ) ಜಾಗ್ರತಿ ಉಂಟಾಗುತ್ತದೆ. ಅದನ್ನು ಒಂದು ದೊಡ್ಡ ಅಲೆ ಎಂದು ತಿಳಿಯಬಹುದು; ಅದು ವಿಸ್ತಾರವಾದಂತೆ, ಇಡೀ ಜಲರಾಶಿಯಲ್ಲಿ ಹಬ್ಬುತ್ತದೆ. ಬೆನ್ನುಹುರಿಯ ಪ್ರತಿಯೊಂದು ಸಂಧಿಯಲ್ಲಿಯೂ ಶಕ್ತಿಗಳು ಅಡಗಿವೆ. ಅವುಗಳಿಗೆ ಆಧ್ಯಾತ್ಮಿಕತೆಯ ಬೆನ್ನೆಲುಬು ಎಂದು ಕರೆದರೆ ತಪ್ಪಾಗಲಾರದು. ಬೆನ್ನು ಹುರಿಯ ಮಣಿಗಳ ಮೇಲೆ ಪ್ರಾಣಾಹುತಿ (Transmission) ಕೊಡುವುದೂ ಆಧ್ಯಾತ್ಮಿಕ ತರಬೇತಿಯ ಒಂದು ವಿಧಾನವಾಗಿದೆ. ಯಾವ ಚಕ್ರದ ಮೇಲೆ ಬೇಕೋ ಅದರ ಮೇಲೆ ಪ್ರಾಣಾಹುತಿ ನೀಡಿ ಅದರಲ್ಲಿಯ ಯಾತ್ರೆಯನ್ನು ಕೈಗೊಳ್ಳಬಹುದು. ನನಗೆ ತಿಳಿದಮಟ್ಟಿಗೆ ಮಹಾತ್ಮರು ಈ ವಿಧಾನವನ್ನು ಪ್ರಚಲಿತಗೊಳಿಸಿಲ್ಲ; ಆದರ ಸುಳುಹುಗಳೂ ಎಲ್ಲೂ ದೊರೆಯುವುದಿಲ್ಲ. ಯಾರಾದರೂ ಇದರ ಮೇಲೆ ಸಂಶೋಧನೆ ಮಾಡಿರಲೂಬಹುದು, ಆದರೆ ನನಗೆ ಅದು ಗೊತ್ತಿಲ್ಲ. ನಾನು ಇಷ್ಟು ಸೂಚನೆ ಕೊಡಬಲ್ಲೆ– ಯಾವ ಚಕ್ರದ ಮೇಲೆ ಪ್ರಭಾವ ಉಂಟು



ಮಾಡುವುದಿದೆಯೋ ಅದರ ಹಿಂದಿನ ಮಣಿ (disc)ಯ ಮೇಲೆ ಪ್ರಾಣಾಹುತಿ (Transmission) ಕೊಡಬೇಕು. ಆಗ ಆ ಸ್ಥಾನದ (ಚಕ್ರದ) ಆಧ್ಯಾತ್ಮಿಕ ಯಾತ್ರೆ ಪ್ರಾರಂಭವಾಗುತ್ತದೆ. ಈ ರೀತಿಯ ಆಧ್ಯಾತ್ಮಿಕ ತರಬೇತಿ ನೀಡುವ ಅಗತ್ಯವಿಲ್ಲ. ಆದ್ದರಿಂದ ಸಂಶೋಧನೆ ಮಾಡುವುದೂ ವ್ಯರ್ಥವೇ ಸರಿ. ನಾನು ಎಲ್ಲೋ ಅಗತ್ಯವಿದ್ದಷ್ಟು ಈ ವಿಧಾನದಿಂದ ಕೆಲಸ ತೆಗೆದುಕೊಂಡಿದ್ದೇನೆ.

ಒರಗಿದ ಸ್ಥಿತಿಯಲ್ಲಿದ್ದಾಗ ಆಘಾತ(jerks)ಗಳಾಗುವ ಬಗ್ಗೆ ಬರೆದಿದ್ದೀಯೆ. ನನಗೂ, ನಾನು ಅಭ್ಯಾಸ ಪ್ರಾರಂಭಿಸಿ ಎರಡು ವರ್ಷಗಳ ನಂತರ ಅಂಥ ಆಘಾತಗಳು ಅನುಭವಕ್ಕೆ ಬಂದಿದ್ದವು. ನೀನು ಪತ್ರದಲ್ಲಿ ಬರೆದ ಮೇಲೆ ನನಗೆ ಅದರ ಕಾರಣವೇನೆಂದು ಹೊಳೆಯಿತು. ಮನಸ್ಸಿನಲ್ಲಿ ನಿಶ್ಚಲತೆ (ಸ್ಥಿರತೆ) ಇದ್ದಾಗ, ಜನರು ಮಾಡಿದ ವಿಚಾರಗಳು ಬ್ರಹ್ಮಾಂಡದಲ್ಲಿ ತೇಲುತ್ತಿರುವಂಥವು, ಸ್ಪರ್ಶಿಸಿದಾಗ ಆಘಾತ (jerk) ವಾಗುತ್ತದೆ; ಅಲ್ಲದೆ, ನಮ್ಮದೇ ವಿಚಾರಗಳು ಯಾವುದೇ ಕಾರಣದಿಂದ ಒಮ್ಮೆಲೆ ಸಿಡಿದೆದ್ದರೆ, ಅವುಗಳ ಸ್ಪರ್ಶವೂ ಕೂಡ ಆಘಾತ ಕೊಡುತ್ತದೆ. ಅಂಥ ಸ್ಥಿತಿಯಲ್ಲಿ, ನಾವು ಸ್ತಂಭೀಭೂತರಾದಂತೆನಿಸುತ್ತದೆ. ದೈವೀಧಾರೆಯು ಒಂದೇ ಸಮನೆ ಬಂದು ತಟ್ಟಿದಂತಾಗುವುದೂ ಒಂದು ಕಾರಣ. ನಿನ್ನ ಅನುಭೂತಿಯ ಸ್ಥಿತಿಯು ಈಶ್ವರೀಯ ಪ್ರಕಾಶದ ಧಾರೆಯ ಕಾರಣದಿಂದ ಆದುದು. ನಿನ್ನ ಹೊರತಾಗಿ, ಅದು ದೈವೀ ಪ್ರಕಾಶ ಎಂದು ನಿನಗೆ ಬಿಂಬಿತವಾದುದು ನೀನು ನಿನ್ನ ಅಸ್ತಿತ್ವವನ್ನು ಸಂಪೂರ್ಣ ಅಳಿಸಿ ಹಾಕಿದ್ದೀಯೆ ಎಂಬುದನ್ನು ರುಜುವಾತುಪಡಿಸುತ್ತದೆ; ಇದು ಮೂಲ ತತ್ತ್ವದ (Originality) ಪ್ರಾರಂಭ. ಆದರೆ, ಆ ಸ್ಥಿತಿಯು ಸತ್ಯವಸ್ತುವಿಗಿಂತಲೂ ಸಾವಿರಪಟ್ಟು ಭಾರವಾಗಿದೆ.

ನೀನು ಸೆಪ್ಟೆಂಬರ್ ೧೭ರ ಪತ್ರದಲ್ಲಿ ಬರೆದುದಕ್ಕೆ ಉತ್ತರವೆಂದರೆ ನಿನ್ನ ಸ್ಥಿತಿಯು ಲಯಾವಸ್ಥೆಯು ತಾನೇ ತಾನಾಗಿರುವಂಥ (ಅಥವಾ, ಲಯಾವಸ್ಥೆಯ ಉನ್ನತ) ಪ್ರಕಾರದ್ದಾಗಿದೆ ಎಂಬುದೇ ಆಗಿದೆ. ಹೃದಯದಲ್ಲಿ ಒಂದು ರೀತಿಯ ಪೀಡೆ ಇದೆ– ಅದರಲ್ಲಿ ನೋವಿಲ್ಲ, ವ್ಯಥೆ ಇಲ್ಲ ಎಂಬ ಅನುಭೂತಿಯಾಗುತ್ತಿದೆಯೆಂದು ಬರೆದಿದ್ದೀಯೆ. ಅಂದರೆ ಏನೋ ಒಂದು ವಸ್ತು ಇತ್ತು, ಅದಕ್ಕೋಸ್ಕರ ನಿನಗೆ ನೋವೂ ಇತ್ತು, ವ್ಯಥೆಯೂ ಇತ್ತು ಎಂದು ಇದರಿಂದ ತಿಳಿದು ಬರುತ್ತದೆ. ಈಗ ಪೀಡೆ ಇದೆಯೆಂಬ ಅನುಮಾನ. ಏಕೆಂದರೆ, ಯಾವುದನ್ನು ಪಡೆಯಬೇಕಿದೆಯೋ ಅದರ ಅಂದಾಜು ಸಿಕ್ಕಿಬಿಟ್ಟಿದೆ. ಕೆಲವೊಮ್ಮೆ ಯಾವ ಸ್ಥಿತಿ ಇರುವುದೋ ಅದರ ಮೇಲೆ ಅಂಧಕಾರ ಕವಿಯುತ್ತದೆ, ಮತ್ತೆ ಕೆಲವೊಮ್ಮೆ ನಿಚ್ಚಳವಾಗುತ್ತದೆ ಎಂದು ಬರೆದಿದ್ದೀಯೆ–ಅಂದರೆ, ಅಲ್ಲಿ ಇದ್ದ ಅಂಧಕಾರವು (ಕಪ್ಪು) ಹೊರಟು ಹೋಗುತ್ತಿದೆ. ಆದರೆ ಇಷ್ಟು ಉನ್ನತ ಸ್ಥಿತಿಯಲ್ಲಿ ಇಷ್ಟು ಸ್ಥೂಲರೂಪದಲ್ಲಿ ಅಂಧಕಾರ (ಕಾಲಿಮೆ) ಇರುವುದು ಸಾಧ್ಯವೇ ಇಲ್ಲ; ಆದ್ದರಿಂದ 'ಆತ್ಮ ಎಂತಿದೆಯೋ, ಅಂತೆಯೇ ದೇವತೆ' ಎಂಬಂಥ ವಸ್ತುವೇ ಅಲ್ಲಿದೆ. ಅರ್ಥಾತ್, ಆ ಸ್ಥಾನವು ಎಷ್ಟು ಸೂಕ್ಷ್ಮ ಮತ್ತು ಮಹತ್ತಾದುದು ಇದೆಯೋ, ಅಲ್ಲಿಯ ಅಂಧಕಾರ (ಕಾಲಿಮೆ) ಕೂಡ ಅದೇ ರೀತಿ

ಸೂಕ್ಷ್ಮವಿದೆ. ಆದ್ದರಿಂದ ಹೇಳಬಹುದಾದುದಿಷ್ಟೆ; ಆ ಸ್ಥಾನದಲ್ಲಿಯ ಯಾತ್ರೆ ಶುರುವಾದಾಗ ಮತ್ತು ವಿಸ್ತಾರಗೊಳ್ಳತೊಡಗಿದಾಗ, ನಮ್ಮ ಯಾತ್ರೆಯಲ್ಲಿ ತಡೆ ಉಂಟುಮಾಡುತ್ತಿದ್ದ ಆ ಅನುಭವವೂ ವಿದಾಯ ಹೇಳುತ್ತದೆ.

ಒಂದು ಮಾತು, ಬರೆಯುವುದುಳಿಯಿತು. ನೋವೂ ಇಲ್ಲದ, ವ್ಯಥೆಯೂ ಇಲ್ಲದ ಆ ಪೀಡೆ ಮುಂದೆ (ಆದರೆ, ಕೆಲ ಸಮಯದ ನಂತರ) ಹೀಗಾಗುವ ಸಂಭವವಿದೆ: ನಿನಗೆ ಒಂದು ಗಾಯವಾಗಿತ್ತೆಂದು ತಿಳಿ, ಯೋಚಿಸಿದಾಗ, ಅದು ಮರೆತು ಹೋಗಿರುವಂತೆ ಕಾಣುತ್ತದೆ. ಅದರ ಅರ್ಥ, ಅದು ಮನಸ್ಸಿನಿಂದ ಸಂಪೂರ್ಣ ದೂರವಾಗಿಬಿಟ್ಟಿದೆ ಎಂದಲ್ಲ. ಅದರೊಂದಿಗಿನ ಸಂಬಂಧ ಉಳಿದೇ ಉಳಿಯುತ್ತದೆ; ಆದರೆ, ಬಹಳ ಆಳವಾಗಿ ಒಳಗೇ ಉಳಿದಿರುತ್ತದೆ. ಆದ್ದರಿಂದ, ಪೀಡೆಯು ಇನ್ನೂ ಇದೆಯೆಂಬುದು, ಯಾವುದಕ್ಕೋಸ್ಕರ ನಾವು ಪೀಡೆ (ಯಾತನೆ)ಯನ್ನು ಹುಟ್ಟಿಸಿಕೊಂಡಿದ್ದೆವೋ, ಅದರ ಸ್ವಭಾವ ಆಗಿಬಿಟ್ಟಿದೆ ಎಂಬುದರ ಚಿಹ್ನವಾಗಿದೆ.

ಕೇಸರ್‌ಳ ಪತ್ರ ಬಂದಿದೆ. ಅವಳ ಸ್ಥಿತಿ ಬಹಳ ಚೆನ್ನಾಗಿ ನಡೆಯುತ್ತಿದೆ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೧ **ಪತ್ರಸಂಖ್ಯೆ – ೫೪೩** ಷಾಹಜಹಾನಪುರ
೨೮–೯–೧೯೩೬

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

೨೨, ಸೆಪ್ಟೆಂಬರ್ ೧೯೩೬ರ ನಿನ್ನ ಪತ್ರ ತಲುಪಿತು. 'ವೇದಾಂತಮುಕ್ತಾವಳಿ' ಪುಸ್ತಕವನ್ನು ಸ್ವಾಮಿ ರಾಮೇಂದ್ರದೇವ್ ನನಗೆ ಕಳುಹಿಸಿದ್ದರು. ತಮ್ಮ ಸಂಸ್ಥೆಯಲ್ಲಿಯೂ ಬರೆಯುವವರಿದ್ದಾರೆ ಎಂಬುದನ್ನು ನನಗೆ ಪ್ರಕಟಪಡಿಸುವುದು ಅವರ ಉದ್ದೇಶವಿದ್ದಿರಲೂಬಹುದು. ನಾನಾದರೋ, ಯೋಗ್ಯತಾವಂತರೆದುರಿಗೆ ನನ್ನ ಲೆಕ್ಕಣಿಕೆಯನ್ನು ಒಪ್ಪಿಸಲು ಸಿದ್ಧನಿದ್ದೇನೆ. ನನ್ನಲ್ಲಿರುವ ಯೋಗ್ಯತೆಯಾದರೂ ಏನು? ಜನರು ಯಾವುದು ನನ್ನಲ್ಲಿರುವ ಯೋಗ್ಯತೆಯೆಂದು ಭಾವಿಸುತ್ತಾರೋ ಅದು, ಯಾರ ಬಾಗಿಲಿನಲ್ಲಿ ನಾನು ದೃಢವಾಗಿ (ಭಿಕ್ಷುಕನಂತೆ) ಕುಳಿತಿದ್ದೆನೋ 'ಅವನ'ದೇ ಆಗಿದೆ. ಆ ಪುಸ್ತಕ ಗ್ರಾಮೀಣ ಜನರಿಗೆ ಒಳ್ಳೆಯದೇ ಹೌದು; ಅದರಲ್ಲಿ ಕವಿತೆಗಳೂ ಉಂಟು. ಅವುಗಳನ್ನು ಹಾಡಿ ಅವರನ್ನು ರಂಜಿಸಲೂ ಬಹುದು. ಅದರಲ್ಲಿ ಒಂದು ಅಧ್ಯಾಯ ತಂಬಾಕು ಸೇವನೆಯ (ಹೊಗೆ ಸೇದುವುದರ) ಕುರಿತಾಗಿಯೂ ಇದೆ. ಅದರ ಮೇಲೆ ನಾನು ಕೆಂಪು ಗುರುತು ಹಾಕಿದ್ದೇನೆ. ನಾನು ಲಖ್ನೌಗೆ ಹೋದಾಗ ನಾನು ಹುಕ್ಕಾ ಸೇದುವುದರ ಬಗ್ಗೆ ಆಕ್ಷೇಪಣೆ ಬಂದಿತು; ಮತ್ತು ಅದು ಆಕ್ಷೇಪಿಸಲ್ಪಡಲು ಯೋಗ್ಯವೇ ಆಗಿತ್ತು ಕೂಡ. ನಾನು ಹುಕ್ಕಾ ಕುಡಿಯುವುದನ್ನು ಬಿಟ್ಟುಬಿಡಬೇಕೆಂದು



ಒಬ್ಬ ಸತ್ಸಂಗಿ ಬಂಧುವಿನ ಅಭಿಪ್ರಾಯದಂತೆ ಸಲಹೆ ಮಾಡಲಾಯಿತು, ಎಚ್ಚರಿಕೆ ನೀಡಲಾಯಿತು. ಅವರು ನನ್ನ ಒಂದು ದೌರ್ಬಲ್ಯವನ್ನು ತಿಳಿಸಿಕೊಟ್ಟಿದ್ದಕ್ಕೆ ಅವರಿಗೆ ಹಾರ್ದಿಕ ಧನ್ಯವಾದಗಳು.

ಈಗ ಅವರು ತಮ್ಮ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಮತ್ತು ನಿಯಮಾವಳಿಯನ್ನು ರೂಪಿಸಿಕೊಂಡಿದ್ದಾರೆ. ಅಲ್ಲದೆ, ಅವರ ಬಣ್ಣದ ಬಟ್ಟೆಗಳು ಅವರನ್ನು 'ಗುರು' ಆಗಿಸಿವೆ. ಒಂದಿಷ್ಟು ಸಂಕುಚಿತ ವಿಚಾರ (ದೃಷ್ಟಿ) ಎಂಥೆಂಥ ಪವಾಡಗಳನ್ನು ಮಾಡಿ ತೋರಿಸಿತೆಂಬುದನ್ನು ನೀನು ನೋಡಿದೆಯಲ್ಲ! ಈಶ್ವರನು ಪ್ರತಿಯೊಬ್ಬನನ್ನೂ ಇದರಿಂದ ಪಾರು ಮಾಡಿ ಕಾಪಾಡಲಿ. ಇಲ್ಲಿ, 'ಯಾರನ್ನು ಈಶ್ವರನು ತನ್ನೆಡೆಗೆ ಸೆಳೆಯುವನೋ ಅವನು ಮಾತ್ರವೇ ಯಶಸ್ವಿಯಾಗುವನು'– ಎಂಬ, ನಮ್ಮ ಲಾಲಾಜಿಯವರ ವಚನ ನೆನಪಿಗೆ ಬರುತ್ತದೆ. ಅವರು (ರಾಮೇಂದ್ರ ದೇವ) ನೇತ್ರಹೀನರಾಗಿದ್ದಾಗ ನಾನು ಅವರಲ್ಲಿ ಅಂತರ್ದೃಷ್ಟಿಯನ್ನು ತೆರೆಯಲು ಪ್ರಯತ್ನಿಸಿದೆ; ಮತ್ತು ತೆರೆದೂ ಇದ್ದೆ. ಆದರೆ ಎಲ್ಲಿ ಎಲ್ಲ (ಆಧ್ಯಾತ್ಮಿಕ) ಸ್ಥಿತಿಗಳ ಕೇಂದ್ರ (Nucleus) ಇರುವುದೋ ಅಲ್ಲಿ ನಾನು ತಂತಾನೇ ನಿಂತುಬಿಟ್ಟೆ; ಒಂದು ವೇಳೆ ಆತುರ ಮಾಡಿದ್ದರೆ, ಅದು ಒಡೆದು ಹೋಗುತ್ತಿತ್ತು. ನಾನು ತುಂಬಾ ಅನನುಭವಿ. ನಾನು ಸ್ವಭಾವತಃ ಅತ್ತಿತ್ತ ನೋಡುವವನಲ್ಲ. ಅಂಥ ತಪ್ಪನ್ನು ನಾನು ಮಾಡದಿರುವಂತೆ ಈಶ್ವರನು ನನಗೆ ಯುಕ್ತವಾದ ವಿವೇಕ (ಬುದ್ಧಿ) ಕೊಡಲಿ. ಅವರು, ಸತ್ಸಂಗಿಗಳನ್ನು ಮಾಡಲು ಸಮೀಪದ (ಸುತ್ತಲಿನ) ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದಾರೆ. ಕೆಲವು ಸತ್ಸಂಗಿಗಳು ಪುವಾಂಯಿಯಲ್ಲಿಯೂ ಇದ್ದಾರೆ. ೩೦–೪೦ ಜನರಂತೂ ಅವರ ಜೊತೆಗೆ ಇದ್ದೇ ಇದ್ದರು. ಇನ್ನೂ ಕೆಲವರು ಸೇರಿರುವ ಸಂಭವವಿದೆ. ಇದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಒಟ್ಟಾರೆ, ಅವರೂ ಕೂಡ ಈಶ್ವರನ ಹೆಸರನ್ನು ಪ್ರಸಾರ ಮಾಡುತ್ತಿದ್ದಾರೆ ತಾನೆ.

ಈಗ ನಿನ್ನ ಆಧ್ಯಾತ್ಮಿಕ ದಶೆ (ಸ್ಥಿತಿ)ಯ ಮೇಲೆ ಒಂದಿಷ್ಟು ಬೆಳಕು ಚೆಲ್ಲುತ್ತೇನೆ. ಇದರ ಬಗ್ಗೆ ಹೇಳುವ ಮೊದಲು, ಸಾಮಾನ್ಯವಾಗಿ ನಡೆಯುತ್ತಿರುವ ಸ್ಥಿತಿ, ಲಯಾವಸ್ಥೆಯ ಉನ್ನತ ಸ್ಥಿತಿಯಾಗಿದೆಯೆಂದು ಹೇಳಬಯಸುತ್ತೇನೆ. ನೆಲೆ, ನಿಲ್ದಾಣಗಳ ಪರಿವೆಯಿಲ್ಲದಂತಿರುವುದು, ಯಾವ ಆಧಾರತಲದ ಮೇಲೆ ನಿರ್ಮಿತಿಯಾಗಿತ್ತೋ ಆ ನೆಲೆಗಟ್ಟು ಈಗ ಇಲ್ಲವಾಗಿದೆ ಎಂಬುದನ್ನು ತಿಳಿಸುತ್ತದೆ. ತಾತ್ಪರ್ಯವೇನೆಂದರೆ, ಭಕ್ತಿಯ ತೀವ್ರ ಹೊಡೆತಗಳು ಅದನ್ನು ಭಗ್ನಗೊಳಿಸಿವೆ, ಮತ್ತು ಅದರ ಸ್ಥಾನದಲ್ಲಿ 'ವಿಶ್ವಾಸ' (ಶ್ರದ್ಧೆ) ಯೊಂದೇ ಬಂದು ನಿಂತಿದೆ; ಅದರ ಮೇಲೆ ಈ ನಿರ್ಮಾಣ ಎದ್ದು ಬರುತ್ತಿದೆ; ಅದನ್ನು ತಿಳಿವಳಿಕೆಗೋಸ್ಕರ 'ಗಾಳಿಗೋಪುರ' (ಅಥವಾ ಗಾಳಿಯ ಕೋಟೆ) ಎಂದು ಕರೆಯಬಹುದು. ವಿಶ್ವಾಸದ ಮುಂದುವರಿದ ಉನ್ನತಿಯ ಸ್ಥಿತಿಯಾದ ಈ ಅಚಲತೆ ಕೂಡ ಕರಗಿ ಹೋದಾಗ, 'ಸಮುದ್ರದ ತೀರವನ್ನು ತಲುಪುವುದು' ಎಂದು ಅದನ್ನು ಕರೆಯಬಹುದು. ಆಧ್ಯಾತ್ಮಿಕವಾಗಿ ಉನ್ನತಿ ಹೊಂದಲು ನಮಗೆ ಸಹಾಯಕವಾಗುವ ವಸ್ತುಗಳೇ (ಅಂಶಗಳು) ಆಧಾರವಾಗಿ, ನಮಗೆ

P-4-Books-PM-7-Anantyatre-160



ಪಾರ್ಶ್ವರೇಖೆಗಳಾಗುತ್ತವೆ. ಆ ಪಾರ್ಶ್ವಗಳು ಯಾವ ರೀತಿಯಾಗಿ ನಿರ್ಮಾಣಗೊಳ್ಳುತ್ತವೆಂದರೆ, ಕೇಂದ್ರದಲ್ಲಿ ಅನ್ಯವಸ್ತುಗಳು ಪ್ರವೇಶಿಸಿ ಇಡೀ ಆಟವೇ ಭಂಗಗೊಳ್ಳದಿರುವಂತೆ ಮಾಡುತ್ತವೆ. ಅದಾದ ನಂತರ ಆಗುವುದೇನು? ತನ್ನ ಕೆಲಸ ಮುಗಿದ ಮೇಲೆ ಅದು ತಾನೇ ಕರಗಿಹೋಗತೊಡಗುತ್ತದೆ. ತಾತ್ಪರ್ಯವಿಷ್ಟೆ; ನಮ್ಮ ಉನ್ನತಿಗೆ ಸಹಾಯಕವಾಗಿದ್ದ ಬಂಧಗಳು (ಕಟ್ಟುಪಾಡುಗಳು), ತಮ್ಮ ಕಾರ್ಯ ಮುಗಿಸಿ ವಿದಾಯ ಹೇಳುತ್ತವೆ.

'ಯಾವುದೇ ಕೆಲಸವನ್ನು ಎಷ್ಟೇ ಮನಸ್ಸಿನಿಂದ ಮಾಡಿದರೂ, ಪರಿಶೀಲಿಸಿ ನೋಡಿದಾಗ ಇಚ್ಛೆಯೂ ಇಲ್ಲ, ಅನಿಚ್ಛೆಯೂ ಇಲ್ಲ ಎಂದೆನಿಸುತ್ತದೆ' ಎಂದು ಬರೆದಿದ್ದೀಯೆ. ಇದರ ಸರಳ ತಾತ್ಪರ್ಯವೇನೆಂದರೆ, ಇಚ್ಛೆಗಳು ಕಡಿಮೆಯಾಗುತ್ತಿವೆ. ಆದರೆ ಅನಿಚ್ಛೆಗಳು ಇನ್ನೂ ಇವೆ. ಈಗ ನನಗೆ ಸಂಬಂಧಿಸಿದುದರ ಬಗ್ಗೆ ಹೇಳುತ್ತೇನೆ; ಮನಸ್ಸಿನ ಸ್ಥಿತಿ ಬದಲಾಗಿದೆ; ಮತ್ತು ಪ್ರಪಂಚದ ಕುರಿತಾಗಿ ಹೆಚ್ಚು ಕಾಳಜಿ ಇದ್ದು ಅದರ ಆವರಣವನ್ನು (ಪರದೆಯನ್ನು) ಅದು ತೆಗೆದೊಗೆದಿದೆ. ಅದರಲ್ಲಿ ಮೊದಲು ಒಂದು ರೀತಿಯ (ಆಧ್ಯಾತ್ಮಿಕ) 'ನಶೆ' ಇತ್ತು. ಈಗ ಅದರ ಪರಿಣಾಮರೂಪದ ಸ್ಥಿತಿ ಮಾತ್ರ ಉಳಿದಿದೆ. ಅದರಲ್ಲಿ ಮನಸ್ಸು, 'ನಶೆ' ಇಳಿದ ನಂತರದ ಹುಟ್ಟುತ್ತಿರುವ ಸೂಕ್ಷ್ಮಗತಿಯಲ್ಲಿ; ಯಾವುದರೊಂದಿಗೆ ಸಂಬಂಧ ಹೊಂದಿದೆ ಎಂಬುದನ್ನು ಅನ್ವೇಷಿಸುತ್ತದೆ. ಅಲ್ಲಲ್ಲ! ನೀನು ಆ ನಶೆಯ ನಂತರದ ಪರಿಣಾಮವನ್ನು ಮೇಲಿನಿಂದ ತೆಗೆದುಹಾಕಿ ಬಿಟ್ಟಿದ್ದೀಯೆ. ಆದ್ದರಿಂದ ಅದಕ್ಕೆ, ಸತ್ಯ ವಸ್ತುವಿನ (Reality) ಹತ್ತಿರವಿರುವ ಸ್ಥಿತಿ ದೊರೆಯುತ್ತಿದೆ. ಅದರಲ್ಲಿರುವ ದೋಷ (ಕೊರತೆ) ಏನು? ಅದಕ್ಕೆ, ಅದು ಪ್ರಾಪಂಚಿಕತೆಯ ವಿಷಯಗಳಲ್ಲಿದ್ದಾಗ ಬರುತ್ತಿದ್ದ ರುಚಿಯೇ ಸಿಗುತ್ತಿರುವ ಸಮಸ್ಯೆಯಲ್ಲಿ ಅದು ಸಿಕ್ಕಿಬಿದ್ದಿದೆ. ಮೊದಲು ಅದಕ್ಕೆ ಸಂಸ್ಕಾರಗಳ ಅರಿವು ಇತ್ತು. ಈಗ ಅದಕ್ಕೆ ಮುಂದಿನ ಲೋಕದ ಅರಿವು ಇದೆ. ಈ (ಆಧ್ಯಾತ್ಮಿಕ) ಅರಿವು (consciousness) ಬರಬೇಕಾದುದೇ ಆಗಿದೆ; ಅದರಿಂದ, ಅದು ಸತ್ಯವನ್ನು, ವಾಸ್ತವವನ್ನು ಹುಡುಕಬಹುದಾಗಿದೆ. ಅನ್ವೇಷಣೆ ಅಥವಾ ಹುಡುಕಾಟವೆಂದರೆ, ಅಂಥ ಯಾವುದೋ ಒಂದು ವಸ್ತು ಅದರ ಹೃದಯದಲ್ಲಿ ನಾಟಿದೆ ಅಥವಾ ಯಾವ ಪುಷ್ಪದ ಹುಟುಕಾಟವಿತ್ತೋ ಅದರ ಸುಗಂಧ ಅದಕ್ಕೆ ಬಂದು ತಾಗುತ್ತಿದೆ ಎಂದೇ ಅರ್ಥ.

ನಾನು ಈ ಕೆಲವು ಶಬ್ದಗಳಲ್ಲಿ ನಿನ್ನ ಇಡೀ ಸ್ಥಿತಿಯ ಉತ್ತರ ಕೊಟ್ಟಿದ್ದೇನೆ, ಸಣ್ಣಪುಟ್ಟ ವಿಷಯಗಳ ವಿವರಣೆಗೆ ಕೈ ಹಾಕಿಲ್ಲ. ಮನುಷ್ಯನು ಈಶ್ವರನಲ್ಲಿ ಸಂಪೂರ್ಣ ಲಯಾವಸ್ಥೆ ಹೊಂದಿದಾಗ, ಅವನ ಸ್ಥಿತಿಯು (ಕಾರ್ಯ ರೀತಿ) ವಿಲಕ್ಷಣವಾಗಿ ಬಿಡುತ್ತದೆ; ಅವನು ತನಗೆ ದತ್ತವಾದ ಸಾಮರ್ಥ್ಯ (faculties) ಗಳಿಂದ ತನ್ನಿಂದ ತಾನೆ ಕೆಲಸ ತೆಗೆದುಕೊಳ್ಳಲಾರಂಭಿಸುತ್ತಾನೆ. ನಾನು ಒಂದು ವಿಲಕ್ಷಣ ಸಂಗತಿಯನ್ನು ಹೇಳಿದ್ದೇನೆ. ವಿಲಕ್ಷಣವೇನು ಬಂತು, ಅದು ಎಲ್ಲರಿಗೂ ಗೊತ್ತಿರುವುದೇ ಆಗಿದೆ.



ಒಂದಿಷ್ಟು ಮಾನವತೆ ಮಾತ್ರ ಅವನಲ್ಲಿ ಉಳಿದಿರುತ್ತದೆ. ಈ ಅಲ್ಪ ಪ್ರಮಾಣದಲ್ಲಿರುವ ಮಾನವತೆ ಕೂಡ ಲಯವಾಗಿ ಹೋಯಿತೆಂದರೆ, ಅವನ ಜೀವನ ಆ ಕ್ಷಣವೇ ಸಮಾಪ್ತವಾಗುತ್ತದೆ. ಈ ಒಂದು ಸಾಮಾನ್ಯ ಸಂಗತಿಯನ್ನು, ನನ್ನ ದೊಡ್ಡಸ್ತಿಕೆಗೋಸ್ಕರ ಹೇಳಿದ್ದೇನೆ. ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು. ಅಮ್ಮಾಜಿ ಮತ್ತು ಚೌಬೇಜಿಯವರಿಗೆ ವಂದನೆಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೨ **ಪತ್ರಸಂಖ್ಯೆ – ೫೯೮** ಷಾಹಜಹಾನಪುರ
೧೬–೧೧–೧೯೫೬

ಪ್ರಿಯ ಪುತ್ರಿ ಕಸ್ತೂರಿ,

ಶುಭಾಶೀರ್ವಾದಗಳು

ನಿನ್ನ ೧೦–೧೧–೧೯೫೬ರ ಪತ್ರ ದೊರಕಿತು. ನಿನ್ನ (ಆಧ್ಯಾತ್ಮಿಕ) ಯಾತ್ರೆ ಈಗ ಎಮ್೧ (M1) ಮೇಲಿದೆ. ಮತ್ತು ನೀನು ಅದರದೇ ಸ್ಥಿತಿಗಳನ್ನು ಬರೆದಿದ್ದೀಯೆ. ಇದರ ಹಿಂದಿನ ಸ್ಥಾನ ಎಲ್೧ (L1) ಇತ್ತು. ಇದು ಅದರ ನಂತರದ ಸ್ಥಾನ. ನೀನು ಪತ್ರವನ್ನು ನೋಡಿ, ಈ ಹಿಂದಿನ ಸ್ಥಾನ ಎಲ್೧ (L1) ಇತ್ತು ಎಂಬುದನ್ನು ದೃಢಪಡಿಸು.

ನಿನ್ನ ದೃಷ್ಟಿ ಒಳಗಡೆಗೆ (ಅಂತರ್ಮುಖವಾಗಿ) ಹೋಗುವುದೇ ಇಲ್ಲ. ಬಲಪೂರ್ವಕವಾಗಿಯೂ ಅದನ್ನು ನಿನ್ನಿಂದ ಮಾಡಲಾಗುತ್ತಿಲ್ಲ ಎಂದು ಬರೆದಿದ್ದೀಯ. ಒಂದು ಹಿಂದೀ ಲೋಕೋಕ್ತಿ ಇದೆ– 'ಬತ್ತಲಾಗಿದ್ದವಳು ಏನು ಸ್ನಾನ ಮಾಡುವುದು? ಸ್ನಾನದ ನಂತರ ಹಿಂಡುವುದು ಏನನ್ನು? ('ನಂಗೀ ಕ್ಯಾ ನ ಹಾಯೇಗೀ, ಔರ್ ಕ್ಯಾ ನಿಚೋಡೇಗಿ'). ನೀನು ಯಾವುದಕ್ಕೆ ಅಂಟಿಕೊಳ್ಳಬೇಕೆಂದು ಬಯಸಿದ್ದಿಯೋ ಅದಕ್ಕೆ ಅಂಟಿಕೊಂಡಿದ್ದೀಯೆ. ಈಗ ಅದರ ಅಲೆಗಳು ಮತ್ತು ಬಾಹ್ಯ(ಪರಿಸರ)ಗಳೆರಡೂ ಅಳಿದು ಹೋಗುತ್ತಿರುವುದರ ಅನುಭೂತಿಯಾಗುತ್ತಿದೆ. ನೀನು ನಿನ್ನ ಎದುರಿನಲ್ಲಿ ಒಂದು ರೀತಿಯ 'ಪ್ರಭೆ' ಉಂಟಾಗುವುದರ ಬಗ್ಗೆ ಬರೆದಿದ್ದೀಯೆ. ಯಾವುದಕ್ಕೆ ನೀನು ಅಂಟಿಕೊಂಡಿದ್ದೀಯೋ ಅದು ಈಗ ಮೂರನೆಯದೊಂದನ್ನು ಉಂಟು ಮಾಡಿದೆ; ಅದು ಪೂರ್ಣ 'ಶುದ್ಧ'ವಾದುದು. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇದು ಉಂಟು. ಆದರೆ, ಯಾರು ದುಷ್ಟ ವಿಚಾರಗಳ ಮತ್ತು ಪ್ರಾಪಂಚಿಕತೆಯ ಪ್ರಭಾವಕ್ಕೊಳಗಾಗಿರುತ್ತಾರೋ ಅವರ ಪ್ರಭೆ ಅಥವಾ ಬಿಂಬವು ಅಂತೆಯೇ ಇರುತ್ತದೆ. ಒಂದು ಹೊಸ ವಿಚಾರ ಹೇಳುತ್ತೇನೆ. ಮನುಷ್ಯನ ಸ್ಥಿತಿಯು ಯಾವಾಗ ಅಪರಿವರ್ತನೀಯ (Changeless condition) ಆಗುವುದೋ

ಆಗ ಈ ಬಿಂಬದ ವಿಸ್ತಾರವು ಇಡೀ ವಿಶ್ವದಲ್ಲಿ ಆಗುತ್ತದೆ. ಹೃದಯ ಉದ್ವೇಗಕ್ಕೆ (ಬೇಸರಕ್ಕೆ) ಒಳಗಾಗುವುದಿಲ್ಲ, ಅಂದರೆ, ಈಗ ಹೃದಯವು ಹೃದಯವಾಗಿ ಉಳಿದಿಲ್ಲ ಎಂದು ಅರ್ಥ.

ನಿನ್ನ ಈ ಪತ್ರಕ್ಕೆ ಸಂಕ್ಷೇಪವಾಗಿ ಉತ್ತರ ಕೊಟ್ಟಿದ್ದೇನೆ. ಕಿರಿಯರಿಗೆಲ್ಲ ಆಶೀರ್ವಾದಗಳು. ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೩ **ಪತ್ರಸಂಖ್ಯೆ – ೬೦೩** ಷಾಹಜಹಾನಪುರ
೫–೧೨–೧೯೫೬

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಎಲ್ಲ ಪತ್ರಗಳೂ ಕೈ ಸೇರಿದವು. ಬರೆದುಕೊಳ್ಳುವವರು ಯಾರೂ ದೊರೆಯಲಿಲ್ಲವಾದ್ದರಿಂದ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಈ ಎಲ್ಲ ಪತ್ರಗಳ ಉತ್ತರ ಏನೆಂದರೆ– 'ಗುಡ್ ಸೇ ಮೀಠೇ ಹೈ ಭಗವಾನ್, ಬಾಹರ ಭೀತರ ಏಕ ಸಮಾನ'– ಅಂದರೆ, ಭಗವಂತನು ಬೆಲ್ಲಕ್ಕಿಂತ ಸಿಹಿ, ಅಂತರ್ಬಾಹ್ಯ ಏಕ ಸಮಾನ'. ನಾವು ವಾಸ್ತವಿಕತೆಯ, ಸತ್ಯದ ಸಂಗಡ ಸಂಬಂಧಿತರಾದಾಗ, ಮತ್ತು ಅದರೊಳಗೆ ನುಗ್ಗಿ ಪ್ರವೇಶಿಸಿದಾಗ, ಒಳ–ಹೊರಗಿನ ದೃಶ್ಯದಲ್ಲಿ ಅಂತರ ಅನುಭೂತಿಯಾಗುವುದಿಲ್ಲ.

ಕೇಸರ್‌ಳು ಮಿಷನ್ನಿನ ಪ್ರಗತಿಗೆ ಮಾಡುತ್ತಿರುವುದನ್ನು ಮಾಡುತ್ತಲೇ ಇರಲಿ ಎಂದು ಅವಳಿಗೆ ಹೇಳು. ಆದರೆ, ನಾನು ದಕ್ಷಿಣ ಭಾರತದಲ್ಲಿ ಇರುತ್ತಿರುವ ಸಮಯದಲ್ಲಿ, 'ದಕ್ಷಿಣ ಭಾರತದ ಜನರು ಮಿಷನ್ನಿನತ್ತ ಆಕರ್ಷಿತರಾಗುತ್ತಿದ್ದಾರೆ' ಎಂಬ ವಿಚಾರವನ್ನು ಮನಸ್ಸಿನಲ್ಲಿ (ಧಾರಣ ಮಾಡಿ) ಇಟ್ಟುಕೊಳ್ಳುವಂತೆ ತಿಳಿಸು; ನೀನಂತೂ ಅಂತೆಯೇ ಮಾಡುತ್ತೀಯೆ. ನಾನು ಡಿಸೆಂಬರ್ ೧೦ರ ರಾತ್ರಿ ಹೊರಟು ಡಿ. ೧೪ಕ್ಕೆ ತಿರುಪತಿ ತಲುಪುತ್ತೇನೆ, ಮತ್ತು ಮೂರು ದಿನಗಳ ನಂತರ ಮದ್ರಾಸಿಗೆ ತೆರಳುತ್ತೇನೆ. ಅಲ್ಲಿಂದ ಪತ್ರ ಬರೆಯಲು ಪ್ರಯತ್ನಿಸುತ್ತೇನೆ.

ನಿನ್ನ ೧೭ ರೂಪಾಯಿಗಳು ಮುಟ್ಟಿದವು. ಅದರಲ್ಲಿ, ನೀನು ೧೫ ರೂಪಾಯಿಗಳನ್ನು ಕಳುಹಿಸುವ ಅಗತ್ಯವಿರಲಿಲ್ಲ; ಯಾಕೆಂದರೆ ನಿನ್ನ ಬಳಿಯೂ ಸ್ವಲ್ಪ ಇರಬೇಕು.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ಪ್ರಣಾಮಗಳು. ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ



* * * *

ಕ್ರಮಸಂಖ್ಯೆ – ೧೬೪ **ಪತ್ರಸಂಖ್ಯೆ – ೬೧೩** ಷಾಹಜಹಾನಪುರ
೦೬–೩–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ, ೨೪ ಮತ್ತು ೨೫ ಫೆಬ್ರುವರಿ ೧೯೫೭ರ ಪತ್ರಗಳು ಕೈ ಸೇರಿದವು. ಮತ್ತು ಜಜ್ ಸಾಹೇಬರ ಪತ್ರವೂ ಬಂದಿದೆ. ಇದರಲ್ಲಿ ಬೇಸರದ ಪ್ರಶ್ನೆಯೇನಿಲ್ಲ; ಜನರು ಉತ್ತಮರಾಗಬೇಕಾದ ಆವಶ್ಯಕತೆ ಇದೆ. ಒಬ್ಬ ವ್ಯಕ್ತಿಯಾದರೂ ನನ್ನಂತಾದರೆ, ನಮ್ಮ ಮಿಷನ್ನು ಪೂರ್ಣವಾದಂತೆ. ಆದರೆ ೨೨ ವರ್ಷಗಳ ಪರಿಶ್ರಮದಿಂದ ನನಗೆ ಏನು ಪ್ರಾಪ್ತವಾಯಿತೋ ಅದರ (ಆ ಶಕ್ತಿಯ) ಆಘಾತವನ್ನು ಸಹನ ಮಾಡಿಕೊಳ್ಳಬಲ್ಲ ಒಬ್ಬನೂ ತಯಾರಾಗಿಲ್ಲ. ಒಳ್ಳೆಯ ಜನರು ಮಿಷನ್ನಿನಲ್ಲಿ ಅವಶ್ಯ ಇದ್ದಾರೆ, ಮತ್ತು ಎಲ್ಲರಲ್ಲಿಯೂ ಪ್ರಕಾಶವಿದೆ. ಮಾರ್ಗದರ್ಶಿಯ (ಗುರುವಿನ) ರೂಪವನ್ನು ನೋಡುತ್ತಿರುವುದು ಒಂದು ಬಹಳ ಒಳ್ಳೆಯ ವಿಧಾನ. ನಾನು ಇದನ್ನು ಬಹಳ ಅನುಸರಿಸಿದ್ದೆ. ನಾನು ನನ್ನ ಗುರುಮಹಾರಾಜರ ಬಳಿಗೆ ಹೋಗಿದ್ದಾಗ, ಅವರ ಸಮ್ಮುಖದಲ್ಲಿದ್ದಾಗ, ಅವರ ರೂಪವನ್ನು ನೋಡುತ್ತಲೇ ಇರುತ್ತಿದ್ದೆ. ನೀನು ಈಗ ಎನ್೧ (N1) ಸ್ಥಾನವನ್ನು ತಲುಪಿದ್ದೀಯೆ ಎಂದು ನಾನು ಈಗಾಗಲೇ ಹೇಳಿದ್ದೆ; ಆದರೆ ನಾನು ಇನ್ನೂ ಆ ಸ್ಥಾನ(ಬಿಂದು)ದತ್ತ ಹೆಚ್ಚು ಗಮನ ಕೊಡಲು ಸಾಧ್ಯವಾಗಲಿಲ್ಲ. ಅದರ (ಆ ಸ್ಥಾನದ) ಪ್ರಭಾವ ಇದ್ದೇ ಇದೆ. ಆದರೆ ಅದರ ಕಾರ್ಯ ಇನ್ನೂ ಶುರು ಆಗಿಲ್ಲ.

ಮನುಷ್ಯ (ತನಗೆ ಸೇರಿದ) ಎಲ್ಲವನ್ನೂ ಕಳೆದುಕೊಂಡಾಗ ಅವನಿಗೆ ವಾಸ್ತವಿಕ ಜೀವನ ಪ್ರಾಪ್ತವಾಗುತ್ತದೆ. ನಿಜವಾಗಿಯೂ, ಎಲ್ಲವನ್ನೂ ಕಳೆದುಕೊಳ್ಳುವುದೇ ಇದೆ, ಮತ್ತು ನೀನು ಕಳೆದುಕೊಳ್ಳುತ್ತಲೇ ಸಾಗುತ್ತಿದ್ದೀಯೆ. ನಾನು ಹೇಳಿದ ಒಂದು ವಾಕ್ಯ ನನಗೆ ನೆನಪಿನಲ್ಲಿದೆ–ನಾನು ತಿರುಪತಿಯಿಂದ ಹೊರಟು, ರೇಣಿಗುಂಟಾ ತಲುಪಿ, ಮದ್ರಾಸಿಗೆ ಗಾಡಿ ಬದಲಿಸಿದಾಗ, ಅಲ್ಲಿ ಡಾ. ಕೆ.ಸಿ. ವರದಾಚಾರಿಯವರ ಕೆಲವು ಶಿಷ್ಯರು ಭೇಟಿಯಾದರು. ಅವರಿಗೆ, ವರದಾಚಾರಿಯವರು ಪ್ರತಿ ೧೫ ದಿನಗಳಿಗೊಮ್ಮೆ ಆಧ್ಯಾತ್ಮಿಕ ಪಾಠ (Lecture) ಮಾಡುತ್ತಾರೆ. ಹೋಗುತ್ತಿರುವ ಸಮಯದಲ್ಲಿ ನಾನೂ ಅವರಿಗೆ ಒಂದು ಪಾಠ ಹೇಳಿದೆ– Liquidate yourself 'ನಿಮ್ಮನ್ನು ನೀವು ಇಲ್ಲವಾಗಿಸಿ ಬಿಡಿ'. ನೀನು ನೀನಾಗಿಯೇ ಅದನ್ನು ಮಾಡುತ್ತಿದ್ದೀಯೆ. ನೀನು ನಿನ್ನ ಪತ್ರದಲ್ಲಿ ಹೇಳಿದಂತೆ, ನಾನು ನಿನ್ನನ್ನು ನೆನಪಿಸಿಕೊಳ್ಳುತ್ತಿದ್ದೇನೆಂಬುದು ನಿನಗೆ ತಿಳಿದಾಗ, ಸಂತೋಷದ ಅಲೆಗಳು ಬಂದು ಅಪ್ಪಳಿಸುತ್ತವೆ, ಮತ್ತು ನಂತರ ಹೇಗಿದ್ದಿಯೋ ಹಾಗೇ ಆಗಿಬಿಟ್ಟು, ಕಸ್ತೂರಿ ಯಾರು ಎಂಬುದೇ ನಿನಗೆ ತಿಳಿದು ಬರುವುದಿಲ್ಲ. ನಿನಗೆ ನಿನ್ನ ಅರಿವು ಒತ್ತಟ್ಟಿಗಿರಲಿ, ನಿನ್ನ ನೆನಪೂ ಮರೆತು ಹೋಗಿದೆ ಎಂಬುದು ಇದರ ಅರ್ಥ. ಇದಕ್ಕೆ ಬಹಳ ಉತ್ತಮ ಪ್ರಕಾರದ ಲಯಾವಸ್ಥೆ ಎಂದು

P-4-Books-PM-7-Anantyatre-162



ಕರೆಯುತ್ತಾರೆ. ಒಂದು ಒಳ್ಳೇ ವಾಕ್ಯವನ್ನು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಏನೆಂದರೆ– "ನಿಮ್ಮನ್ನು ನನ್ನ ಪ್ರೇಮದ ಹಗ್ಗದಿಂದ ಕಟ್ಟಿ ಹಾಕುತ್ತ, ಹಾಕುತ್ತಾ ನಾನೇ ಕಳೆದು ಹೋಗಿದ್ದೇನೆ". ಇದರ ಅರ್ಥ – 'ನಿನ್ನನ್ನು ಜೋಡಿಸಿದ ಭಕ್ತಿಯ ಕೊಂಡಿಯು (ದಾರದ ಮುದ್ದೆಯು) ತನ್ನ ಆವರಣವನ್ನು ಕಳಚಿ ಹಾಕಿತು.' ನಾವು ಭಕ್ತಿಯ ಮೂಲಕವೇ ಸಾಗಬೇಕು. ಮತ್ತು ಅದರ ಆವರಣ, ಕಳಚಿ ಬಿದ್ದು ಹೋದಾಗ ಜ್ಞಾನದ ಅವಸ್ಥೆ ಬರುತ್ತದೆ; ಮತ್ತು ಅದರ ಕೆದರುವಿಕೆ (ಅನ್ವೇಷಣೆ) ಸಮಾಪ್ತವಾಗಿ ಹೋದರೆ, ಅದೇ 'ಸತ್ಯ' (Reality). ಭಕ್ತಿಯ ಆವರಣ ಕಳಚಿ ಹೋಗಿ, ಜ್ಞಾನದ ಅವಸ್ಥೆ ಪ್ರಾಪ್ತವಾದಾಗ, ಅದರಲ್ಲಿ ಯಾವ ಮೂಲ ಆರಂಭ ಇದೆಯೋ– ಅರ್ಥಾತ್ ಅದರ ಅನುಮಾನ (ಕಲ್ಪನೆ) ಹೊರಟು ಹೋಗುತ್ತಿರುವುದೋ ಆಗ– ಅದು 'ದೈವೀ–ವಿವೇಕ'ದ (Divine wisdom) ಪ್ರಾರಂಭವಾಗುತ್ತದೆ. ಜ್ಞಾನದ ಪ್ರಭಾವ ಹೊರಟು ಹೋಗುತ್ತಲೇ 'ವಿಜ್ಞಾನ'ದ ಪರದೆ– ಅರ್ಥಾತ್ ವಿಜ್ಞಾನಮಯ ಕೋಶ ಹರಿದು ಹೋಗತೊಡಗುತ್ತದೆ. ನಮ್ಮ ಅರಿವು ಮತ್ತು ಬುದ್ಧಿಗಳು ದೈವೀಕರಣಗೊಳ್ಳತೊಡಗುತ್ತವೆ. ಈಗ, 'ವಿಜ್ಞಾನ'ದ ಪರದೆ ಹರಿದು ಹೋಯಿತೆನ್ನೋಣ, ಆಗ ಏನಾಗುವುದು?– ದೈವೀ–ವಿವೇಕ(ಜ್ಞಾನ) ಕೂಡ ತನ್ನ ಭಾಗವನ್ನು ಮೂಲ ಭಂಡಾರದಲ್ಲಿ ಲಯಗೊಳಿಸಲು ಪ್ರಾರಂಭಿಸುತ್ತದೆ. ಹಾಗೆ ಆದ ನಂತರ, ಇಲ್ಲಿಯವರೆಗೆ ತಲುಪಿದ ಅಭ್ಯಾಸಿಯ (ಸಾಧಕನ) ಮಾತಿನಲ್ಲಿ ಸಹಜ ಮತ್ತು ಸ್ವಯಂ ಕಾರ್ಯಶೀಲ ದೈವೀ ವಿವೇಕ (ಜ್ಞಾನ) ಪ್ರತಿಫಲಿಸುತ್ತದೆ. ಈ ಹೊಸ ಸಂಬಂಧದ ಕೊಂಡಿ ಸಮಾಪ್ತವಾಯಿತು ಎಂದು ತಿಳಿಯಬಾರದು. 'ಸತ್ಯ'ವಸ್ತುವಿನಲ್ಲಿ ಯಾವ ಪ್ರಭಾವ ಇರುವುದೋ ಅದು ಕಣ ಕಣದಲ್ಲಿಯೂ ಉಂಟಾದಾಗ ಮಾತ್ರ ಅದು ಸಮಾಪ್ತವಾಯಿತು ಎಂದು ಹೇಳಬೇಕು.

ನಿನ್ನೆ ಫೆಬ್ರುವರಿ ೫ ರಂದು ರಾತ್ರಿ ನಾನು ಕೆಲವು ಅಭ್ಯಾಸಿಗಳಿಗೆ (Sitting) ಬೈಠಕ್ ಕೊಡುತ್ತಿರುವಂತೆ ಕನಸು ಕಂಡೆ. ಅಭ್ಯಾಸಿಗಳು ಪ್ರಾಣಾಹುತಿ ತೆಗೆದುಕೊಳ್ಳುತ್ತಿರುವಲ್ಲಿ (ಬೈಠಕ್ ತೆಗೆದುಕೊಳ್ಳುತ್ತಿರುವಲ್ಲಿ) ಆಕಾಶವು ಕೈಗೆ ತಗಲುವಷ್ಟು ಕೆಳಗಡೆ ಇತ್ತು, ಮತ್ತು ತಾರೆಗಳು ಹೊಳೆಯುತ್ತಿದ್ದವು. ಅವುಗಳ ಪ್ರಕಾಶ ಮಂದವಾಗಿತ್ತು, ಈಗಲೂ ಕೂಡ ಅವುಗಳನ್ನು ನೋಡಲು ಮನಸ್ಸು ಬಯಸುತ್ತದೆ. ಈ ಸ್ವಪ್ನದ ಅರ್ಥವೇನೆಂಬುದು ಈಶ್ವರನಿಗೇ ಗೊತ್ತು. ಸ್ವಪ್ನವು ನಿಃಸಂಶಯವಾಗಿ ಒಳ್ಳೆಯದಿತ್ತು.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ಪ್ರಣಾಮ. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೬೫ **ಪತ್ರಸಂಖ್ಯೆ – ೬೧೮** ಷಾಹಜಹಾನಪುರ
೩–೪–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದ,

ನಿನ್ನ ಅನೇಕ ಪತ್ರಗಳು ಪ್ರಾಪ್ತವಾದವು, ಪ್ರತಿಯೊಂದು ಸೂಕ್ಷ್ಮ ಸ್ಥಿತಿಗಳ ಕಾರಣಗಳನ್ನು ವಿವರಿಸಲು, ಅವುಗಳಿಗೆ ಶಬ್ದಗಳ ಆವರಣ ಹೇಗೆ ತೊಡಿಸುವುದು ಎಂಬುದು ತಿಳಿಯದೆ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಆದರೂ ಏನಾದರೊಂದಿಷ್ಟು ಬರೆಯಬೇಕೆಂದು ಯೋಚಿಸಿದೆ. ಬರೆಯಲು ತೊಡಗಿದಾಗ, ಲಯಾವಸ್ಥೆ, ಮತ್ತೆ ಅದರ ಲಯಾವಸ್ಥೆ– ಹೀಗೆ ಅದರ ಸೀಮೆ ಇನ್ನೂ ದೂರದವರೆಗೆ ಹೋಗುತ್ತಲೇ ಹೋಗುತ್ತದೆ ಎಂಬ ವಿಚಾರ ಬಂದಿತು. ನಾವು ಎಷ್ಟು ಸ್ಥಿತಿಗಳನ್ನು ನಮ್ಮೊಳಗೆ ಉಂಟುಮಾಡಿಕೊಂಡಿದ್ದೇವೋ ಅವೆಲ್ಲವೂ, ಅವುಗಳ ಕಾರಣ ಯಾವುದಿದೆಯೋ ಅದರಲ್ಲಿ ಸೇರಿ ಒಂದಾಗಿ ಹೋಗಬೇಕಿದೆ.

" 'ಜಗತ್ತು' ಎಂಬುದಿಲ್ಲ, ನಮ್ಮ ವಿಚಾರಗಳು ಅದನ್ನು ಪ್ರಕಟಗೊಳಿಸಿವೆ"– ಎಂದು ಯಾವನೋ ಒಬ್ಬ ಲೇಖಕ ಹೇಳಿದ್ದಾನೆ. ಹಾಗೆ ಬರೆದವನ ಬುದ್ಧಿಯ ನಿಲುಕು ಅದಿತ್ತು. ಆದರೆ ನಿಜವೇನೆಂದರೆ, ನಾವು ನಮ್ಮ ಪರಿವಾರದೊಂದಿಗೆ 'ಸತ್ಯ'ದಲ್ಲಿ ಬಂದಾಗ, ಅದೇ ಸತ್ಯವು 'ಏಕವಸ್ತು'ವಾಗಿ ಭಾಸವಾಗತೊಡಗುತ್ತದೆ. ನಾವು 'ಅನೇಕ'ವಾಗಿದ್ದಾಗ, ನಮ್ಮೆದುರು 'ಅನೇಕತೆ' (ನಾನಾತ್ವ) ಇತ್ತು, ಮತ್ತು ನಾವು 'ಏಕ'ವಾಗಿ ಹೋದಾಗ ಆ ಏಕವಸ್ತುವು ಎಲ್ಲದರಲ್ಲಿಯೂ ಭಾಸವಾಗತೊಡಗಿತು. ಹಾಗಿದ್ದಾಗ 'ಏಕತೆ'ಯೂ ಇರಲಿಲ್ಲ, ಅನೇಕತೆಯ ಭಾವವೂ ಇರಲಿಲ್ಲ. ಅಂದರೆ ಈಗ ಎದುರಿನಲ್ಲಿ ಏನೂ ಕಂಡುಬರುವುದಿಲ್ಲವೆಂದಾಯಿತು. ಆದರೆ ಇಲ್ಲಿಗೇ ಕೊನೆ ಬಂತೆನ್ನಲಾಗದು. ಇದನ್ನೇ ನೀನು ಬರೆದಿದ್ದೀಯೆ– 'ಮೊದಲು ನನಗೆ ಎಲ್ಲವೂ ಛಾಯಾಮಾತ್ರವಾಗಿ ಕಂಡುಬರುತ್ತಿತ್ತು, ಈಗ ಛಾಯೆಯೂ ಇಲ್ಲ, ಏನೂ ಇಲ್ಲ. ಈ ಸ್ಥಿತಿಯಲ್ಲಿ ಹೇಳುವುದಿದ್ದರೆ, ಯಾರ ಬಳಿ ಹೇಳತಕ್ಕದ್ದು ಇದೆಯೋ ಅವನು ಮಾತ್ರ ಹೇಳುತ್ತಾನೆ. ಇದೇ ಮಾತನ್ನೇ ನೀನು ನಿನ್ನ ಪತ್ರದಲ್ಲಿ ವಿವಿಧ ರೀತಿಗಳಲ್ಲಿ ಹೇಳಿದ್ದೀಯೆ.

ಚೌಬೇಜಿಯವರಿಗೆ, ಅಮ್ಮಾಜಿಯವರಿಗೆ ಪ್ರಣಾಮಗಳು, ಸೋದರ ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೬ **ಪತ್ರಸಂಖ್ಯೆ – ೬೨೧** ಷಾಹಜಹಾನಪುರ
೧೦–೦೪–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ಏಪ್ರಿಲ್ ೩ ಮತ್ತು ೭, ೧೯೫೭ರ ನಿನ್ನ ಪತ್ರಗಳು ಕೈ ಸೇರಿದವು. ಅವೆರಡಕ್ಕೂ

P-4-Books-PM-7-Anantyatre-163



ಒಟ್ಟಿಗೆ ಉತ್ತರ ಬರೆಯುತ್ತಿದ್ದೇನೆ. ಈಗ ನಿನಗೆ ನಿನ್ನ ಆರೋಗ್ಯವನ್ನು ಸುಧಾರಿಸುವ ಶಕ್ತಿಯು ಉಂಟಾಗಿರಬಹುದು. 'ನನಗೆ ನನ್ನಲ್ಲಿ ಪವಿತ್ರತೆಯ ಭಾಸವೂ ಆಗುತ್ತಿಲ್ಲ'– ಎಂದು ನಿನ್ನ ೩–೪–೫೭ರ ಪತ್ರದಲ್ಲಿ ಬರೆದಿದ್ದೀಯೆ. ಅಪವಿತ್ರತೆ ಇದ್ದಾಗ ಮಾತ್ರವೇ ಅದರ (ಪವಿತ್ರತೆಯ) ಭಾಸ ಉಂಟಾಗುತ್ತದೆ. ತುಲನೆ ಇಲ್ಲದಿದ್ದರೆ ಯಾವುದೇ ವಸ್ತುವಿನ ವಾಸ್ತವಿಕತೆಯು ಅರಿವಿಗೆ ಬರುವುದೇ ಇಲ್ಲ. ಈಶ್ವರನ ಆಳ (ಗಾಢತೆ) ಅರಿವಿಗೆ ಅಳವಡಿಸುವುದಿಲ್ಲವೇಕೆಂದರೆ, ಅವನೊಂದಿಗೆ ಹೋಲಿಸಲು ಅವನಿಗೆ ಅನುಸಾರವಾಗಿರುವ ಬೇರೊಂದು ವಸ್ತು ಸಿಗುವುದಿಲ್ಲ. ದಶೆಯಲ್ಲಿ (ಸ್ಥಿತಿಯಲ್ಲಿ) ಪರಿವರ್ತನೆಯಾಗುತ್ತಲೇ ಇರುತ್ತದೆ, ಆದರೆ ಅದೆಷ್ಟು ಸೂಕ್ಷ್ಮವೆಂದರೆ, ಅದು ಅರಿವಿಗೆ ಸಿಗುವುದಿಲ್ಲ. ಎಲ್ಲಿ ಅಪರಿವರ್ತನೀಯ ದಶೆ ಇರುವುದೋ, ಅದೇ ಮನುಷ್ಯ ತಲುಪಬೇಕಾದ ಕೊನೆ. ಪೀಡೆ ಇಲ್ಲದ ನೋವೇ, ನೋವಿನ ವಾಸ್ತವ ಸ್ವರೂಪವಾಗಿದೆ (ಬಿನಾ ದರ್ದ್ ಕೇ ಪೀರ್). ಮರುಭೂಮಿಯಲ್ಲಿ ನೀರನ್ನು ಆಶಿಸುತ್ತ, ನಡೆಯುತ್ತ ನಡೆಯುತ್ತ ಮನುಷ್ಯನೊಬ್ಬ ಬಹಳ ದೂರ ಹೋಗುತ್ತಾನೆ. ನೀರಿನ ದಾಹದ ವ್ಯಗ್ರತೆ ಅವನ ವಿಚಾರಗಳನ್ನು ನುಚ್ಚುನೂರು ಮಾಡುತ್ತದೆ. ಅದೇ ವ್ಯಗ್ರತೆಯಲ್ಲಿ ಇರುತ್ತ ದೀರ್ಘ ಸಮಯ ಕಳೆದಾಗ, ಆ ವ್ಯಗ್ರತೆಯೇ ಅವನ ಅಸಹಾಯಕತೆಯಲ್ಲಿ ಶಾಂತಿಯಾಗಿ ಬಿಡುತ್ತದೆ. ಆದರೆ ನೀರಿನಿಂದ ಸಿಗುವ ವಾಸ್ತವಿಕ ತೃಪ್ತಿ ಅದಾಗಿರುವುದಿಲ್ಲ. ಅವನ ಪರಿಶ್ರಮದ ಫಲವಾಗಿ, ಎಲ್ಲೋ ಮಳೆ ಸುರಿಯಲು ಪ್ರಾರಂಭಿಸುತ್ತದೆ. ಅದು ಬರುವುದು ಸಮುದ್ರದಿಂದಲೇ. ನದಿಯಾದರೋ, ಆ ಸಮುದ್ರದ ಒಂದು ಅಂಶ ಮಾತ್ರ. ಒಟ್ಟಿನಲ್ಲಿ, ಅವನು ಯಾವ ನೀರಿನ ಅನ್ವೇಷಣೆಯಲ್ಲಿದ್ದನೋ, ಯಾವ ಆವಶ್ಯಕತೆಗೋಸ್ಕರ ಅದಿತ್ತೋ, ಅದು ಪೂರ್ತಿಯಾಗುತ್ತದೆ. ಮಳೆ ಚೆನ್ನಾಗಿ ಸುರಿದು ಕೆರೆಯಾಗಿ ತುಂಬಿಕೊಂಡರೆ, ಸಾಕಷ್ಟು ದೀರ್ಘ ಸಮಯ ನದಿ ಅಥವಾ ಸಮುದ್ರದತ್ತ ವಿಚಾರ ಹೋಗುವುದಿಲ್ಲ. ಈಗ ಅವನಿಗೆ ಮಿಲನದ ಇಚ್ಛೆ ಕಡಿಮೆಯಾಯಿತು. ಅದರ (ಅವನು ಬಯಸಿದ ವಸ್ತುವಿನ) ಅಭಾವದಿಂದಾಗುವ ವ್ಯಗ್ರತೆಯೂ ಇಲ್ಲ. ಯಾಕೆಂದರೆ, ಒಂದು ಸೀಮಿತ ರೂಪದಲ್ಲಿ ಅದು ಲಭ್ಯವಿದೆ. ಆದರೆ ಪುಟ್ಟ ಕೆರೆಯ ನೀರು ಕುಡಿದು ಮುಗಿದು ಹೋದಾಗ, ಮತ್ತೆ ಅದರ ಅರಸುವಿಕೆ ಪ್ರಾರಂಭವಾಗುತ್ತದೆ. ಆಗ ಅವನಿಗೆ ದೊಡ್ಡ ಜಲಾಶಯ ಕಾಣಸಿಗಬಹುದು– ನಿನ್ನ ಪತ್ರದಲ್ಲಿರುವ ಅಗಲಿಕೆ ಮತ್ತು ಮಿಲನಗಳ ಸ್ಥಿತಿಯನ್ನು ನಾನು ಹೀಗೆ ವಿವರಿಸಿದ್ದೇನೆ. ಸಮುದ್ರ ಇನ್ನೂ ದೂರ ಇದೆ. ನೀನು ಈಗ ಇರುವಲ್ಲಿಂದ ನೋಡಿದರೆ ದೃಷ್ಟಿ ಹಾಯದಷ್ಟು ದೂರ ಇದೆ. ಆದರೆ ಸಮುದ್ರವನ್ನು ಸಮೀಪಿಸುತ್ತಿರುವುದರ ಲಕ್ಷಣ ಖಂಡಿತ ಕಾಣುತ್ತಿದೆ.

ನಿನ್ನನ್ನು ನೀನು ಋಣಿ ಎಂದು ಭಾವಿಸುವುದಾದರೆ, ನನ್ನ ಮೇಲೆ ನೀನು ಮಾಡಿದ ಉಪಕಾರದ ಭಾರ ಒಂದಿದೆ. ಏನೆಂದರೆ, ನಿಮಗೋಸ್ಕರವೇ ನನ್ನ ಬಳಿ ನ್ಯಾಸವಾಗಿ ಇಟ್ಟದ್ದನ್ನು (ಆಧ್ಯಾತ್ಮಿಕ ಸಂಪತ್ತನ್ನು) ನೀವು ತೆಗೆದುಕೊಳ್ಳಲು ಪ್ರಾರಂಭಿಸಿದಿರಿ. ಹಾಗಾಗಿ, ಯಾರಿಗೋಸ್ಕರ ನನ್ನ ಬಳಿ ಅದನ್ನು ನ್ಯಾಸವಾಗಿ



ಇಡಲಾಗಿತ್ತೋ ಅವರಿಗೆ ಅದನ್ನು ನಾನೇಕೆ ವಿತರಣ ಮಾಡಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಬೇಕಾದುದರಿಂದ ನಾನು ಪಾರಾದೆ.

ಏಪ್ರಿಲ್ ೬ರ ನಿನ್ನ ಪತ್ರದಲ್ಲಿ – 'ತಿಳಿದುಕೊಳ್ಳಬೇಕು ಎಂದಿದ್ದರೆ, ನಾನು ಏನನ್ನು ತಿಳಿದುಕೊಳ್ಳಲಿ? ತಿಳಿಯಬಾರದೆಂದಿದ್ದರೆ ಏನನ್ನು ತಿಳಿದುಕೊಳ್ಳದಿರಲಿ?' ಎಂದು ಬರೆದಿದ್ದೀಯೆ. ಇದರ ತಾತ್ಪರ್ಯ ಇಷ್ಟೆ; 'ಕಾಮನೆಗಳಾವುವೂ ಉಳಿದಿಲ್ಲ; ನಿನ್ನ ತಲೆಯಲ್ಲಿ ವಿಷಯ (Matter) ಯಾವುದೂ ಉಳಿದಿಲ್ಲವೆಂದು ಬರೆದಿದ್ದೀಯೆ. ನವುರಾದ (ಸೂಕ್ಷ್ಮವಾದ) ವಿಷಯದಿಂದ (matter) ಕೂಡ ಸಂಬಂಧ ದೂರವಾಗಿದೆ ಮತ್ತು ಅವ್ಯಕ್ತಗತಿ ಸಮೀಪಿಸುತ್ತಿದೆ ಎಂದು ಇದರ ಅರ್ಥ. ಸೂಕ್ಷ್ಮತೆಯಲ್ಲಿ ಲಯಾವಸ್ಥೆ ಉಂಟಾಗಲು ತೊಡಗಿದಾಗ ಬಾಹ್ಯ ಸಂಸಾರದ ಆವರಣ ದೂರ ಸರಿಯುತ್ತದೆ. ಆದ್ದರಿಂದ ಒಳಗೂ–ಹೊರಗೂ ಒಂದೇ ರೀತಿಯಾಗಿ ಅನುಭೂತಿ ಯಾಗತೊಡಗುತ್ತದೆ. ಇದು ತುಂಬ ಒಳ್ಳೆಯ ಗತಿ. ಆದರೆ ಯಾವುದೇ ಸ್ಥಿತಿಯಲ್ಲಿ (ಗತಿಯಲ್ಲಿ) ಶಾಶ್ವತವಾಗಿ ಉಳಿಯಬೇಕಿಲ್ಲ. ತಲೆಯಲ್ಲಿ ಸಡಿಲವಾಗಿರುವುದೆಂಬಂತೆ ಕಾರಣ ದೈಹಿಕ ದುರ್ಬಲತೆಯೇ ಆಗಿದೆ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು. ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೭ **ಪತ್ರಸಂಖ್ಯೆ – ೬೨೪** ಷಾಹಜಹಾನಪುರ
೧೯–೪–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ೧೪–೪–೫೭ರ ಮತ್ತು ೧೫–೪–೫೭ರದು ಒಂದೊಂದು ಪತ್ರಗಳು ಕೈ ಸೇರಿದವು. ಏಪ್ರಿಲ್ ೧೯ಕ್ಕೆ ನನ್ನ ಜೀವನದ ಹೊಸ ವರ್ಷ ಆರಂಭವಾಯಿತು. ನೀವುಗಳೆಲ್ಲ ಸಂಭ್ರಮದಿಂದ ಆಚರಿಸಿದಿರಿ, ಆದರೆ ನನಗೆ ನನ್ನ ಜೀವನದ ಒಂದು ವರ್ಷ ಕಳೆದುಹೋಯಿತು ಎಂದು ದುಃಖವಾಗಬೇಕು. ಈ ದಿವಸ ನೀನು ವಿನಂತಿಸಿಕೊಂಡಂತೆಯೇ ನಾನು ಮಾಡಿದ್ದೇನೆ. ಎಲ್ಲರೂ ಮಾಲಿಕ್‌ನ (ಸದ್ಗುರುವಿನ) ಕೃಪೆಯಿಂದ ಲಾಭಾನ್ವಿತರಾಗಿರಬಹುದು.

ಈ ಹಿಂದಿನ ಪತ್ರದಲ್ಲಿ, ನಿನ್ನ 'ಸ್ಥಿತಿ'ಯನ್ನು ವ್ಯಕ್ತಪಡಿಸಲು ನಾನು ರೂಪಕಾತ್ಮಕವಾಗಿ ಬರೆದೆ; ಅದನ್ನು ತಿಳಿಸುವ ಬೇರಾವ ರೀತಿಯೂ ನನಗೆ ಹೊಳೆಯಲಿಲ್ಲ. ಚಲಿಸುವುದು ಮತ್ತು ಚಲಿಸದಿರುವುದು ಎರಡೂ ಸಮಾನವಾಗಿ

P-4-Books-PM-7-Anantyatre-164



ಕಾಣುವುದು'–– ಎಂದರೆ, ನೀನು ನಿನ್ನನ್ನು ಸಂಪೂರ್ಣ ಮರೆತುಬಿಟ್ಟಿದ್ದೀಯೆ ಮತ್ತು ಅದಾದ ನಂತರ ಏನು ಉಳಿಯುವುದೋ ಅದೂ ಕೂಡ ಲಯವಾಗಿ ಹೋಗುತ್ತಿದೆ ಎಂಬುದರ ಪ್ರಮಾಣ ಅದಾಗಿದೆ. 'ಈಗ ಇರುವ (ವರ್ತಮಾನ) ಸ್ಥಿತಿಯಿಂದ ನೀನು ಎಲ್ಲಿಗೆ ಹೋಗಿ ತಲುಪುವುದಿದೆಯೋ ಅಲ್ಲಿ ಒಂದು ಡೇರೆ ಸ್ಥಾಪಿತವಾಗಿದೆ'– ಎಂದು ನೀನು ಸರಿಯಾಗಿಯೇ ಬರೆದಿದ್ದೀಯೆ. ನಮ್ಮ ಲಾಲಾಜಿ ಸಾಹೇಬರ ಆಧ್ಯಾತ್ಮಿಕ ಶಿಕ್ಷಣದ ರೀತಿಯೇ ಹಾಗಿದೆ; ಅಭ್ಯಾಸಿಯು ಯಾವ ಸ್ಥಾನಕ್ಕೆ ಹೋಗಿ ತಲುಪಬೇಕಿದೆಯೋ ಅಲ್ಲಿಯ ತತ್ತ್ವದ ಬೀಜ ಮೊದಲನೆಯ ಬೈಠಕಿನಲ್ಲಿಯೇ ಅಂಕುರಿಸಲು ಪ್ರಾರಂಭವಾಗುತ್ತದೆ. ಯಾರು ಈ ಬೀಜವನ್ನು ತಮ್ಮದಾಗಿಸಿಕೊಳ್ಳುವರೋ ಅವರು ಮುಂದೆ ಸಾಗುತ್ತಲೇ ಇರುತ್ತಾರೆ. ಅನುಭವಶಕ್ತಿ ತೀಕ್ಷ್ಣವಾಗಿದ್ದರೆ, (ಆಧ್ಯಾತ್ಮಿಕತೆಯ) ಸಮುದ್ರದ ಆನಂದವು ಮೊದಲನೆಯ ದಿನದಿಂದಲೇ ಒಂದಿಷ್ಟು ಬರಲಾರಂಭಿಸುತ್ತದೆ.

ನೀನು ನಿನ್ನ ಪತ್ರದಲ್ಲಿ ಇನ್ನೊಂದು ಮಾತು ಬರೆದಿದ್ದೀಯೆ– 'ಜೀವನ ಮತ್ತು ಮರಣದ ಮಾತು ಬಂದರೆ ಎರಡೂ ಒಂದೇ ಎಂಬಂತೆ ಪ್ರತೀತವಾಗುತ್ತದೆ'. ನಿನಗೆ ಜೀವನ ಮತ್ತು ಮೃತ್ಯುವಿನೊಂದಿಗೆ ಸಂಬಂಧ ಉಳಿದಿಲ್ಲ ಎಂಬುದು ಇದರ ಅರ್ಥ. ಆ ಎರಡೂ ಸಂಬಂಧಗಳು ಹೋಗಿವೆ. ಇದು ಜೀವನ್ಮೋಕ್ಷದ ಅವಸ್ಥೆ. ನಿನಗೆ ಅದು ಮೊದಲೇ ಬಂದು ಬಿಟ್ಟಿತ್ತು. ಇದಕ್ಕೆ ಪ್ರಮಾಣವಾಗಿ ಈ ವಾಕ್ಯವೂ ಇದೆ: "ಮೃತ್ಯುವಿನ ಮೃತ್ಯುವೂ ಆಗಿಹೋದಾಗ ಉಂಟಾಗುವ ಜೀವನವು, ನಾವು ಯಾವುದರ ಅನ್ವೇಷಣೆಯಲ್ಲಿರುವೆವೋ ಆ 'ಸ್ಥಿತಿ'ಯನ್ನು ತಿಳಿಸುವುದು ಮತ್ತು ಅದರ ನೆಲೆ ಯಾವುದೆಂಬುದನ್ನೂ ತಿಳಿಸುವುದು' ಆದರೆ, ಮುಂದೆ ಸಾಗುವುದು ಇನ್ನೂ ಉಳಿದಿರುತ್ತದೆ.

ಏಪ್ರಿಲ್ ೧೫ರ ನಿನ್ನ ಪತ್ರದಲ್ಲಿ ವಿವರಿಸಿದ ನಿನ್ನ ಸ್ವಪ್ನ ಬಹಳ ಒಳ್ಳೆಯದಿದೆ. ಈಗ ವಾಸ್ತವಿಕ ಜೀವನ ಪ್ರಾರಂಭವಾಗಿದೆಯೆಂದು ಅದರ ಅರ್ಥ. ನಾನು (ಧ್ಯಾನ) ಅಭ್ಯಾಸವನ್ನು ಪ್ರಾರಂಭಿಸಿದಂದಿನಿಂದಲೂ ಮುಕ್ತಾತ್ಮರನ್ನು ಸ್ವಪ್ನದಲ್ಲಿ ಕಾಣುತ್ತಿದ್ದೆ. ಕನಿಷ್ಠ ಪಕ್ಷ, ವಾರದಲ್ಲಿ ಎರಡು ಬಾರಿಯಾದರೂ ನನಗೆ ಅಂಥ ಸ್ವಪ್ನಗಳು ಬೀಳುತ್ತಿದ್ದವು ಮತ್ತು ಮನುಷ್ಯರಿಗೆ ಭರಿಸಿಕೊಳ್ಳಲಾಗದಂಥ ಕೃಪೆಯೂ ಸಿಗುತ್ತಿತ್ತು. ಯಾವುದನ್ನು ನಾನು ತಾಳಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲವೋ ಅದನ್ನು ಲಾಲಾಜಿಯವರು ತೆಗೆದುಕೊಂಡು ಬಿಡುತ್ತಿದ್ದರು – ಇದು ಲಾಲಾಜಿಯವರ ಶ್ರೇಯಸ್ಸಿಗೆ ಸಲ್ಲುತ್ತದೆ. ದೀಕ್ಷೆ ಕೊಡಬೇಕಿದ್ದ ಸಮಯ ಬಂದಾಗ ಅನೇಕ ಮಹಾತ್ಮರು ನನಗೆ ದೀಕ್ಷೆ ಕೊಟ್ಟರು. ನಾನು ದೀಕ್ಷೆಗೆ ಸಹಮತನಾಗಿರದ ಸಂದರ್ಭಗಳಲ್ಲಿ, ನನ್ನ ಮನಃಸ್ಥಿತಿಯನ್ನು ಅದಕ್ಕೆ ಸರಿಯಾಗುವಂತೆ ರೂಪಿಸಿ ಬಿಡಲಾಗುತ್ತಿತ್ತು. ತನ್ನ ಗುರುವನ್ನು ಗಾಢವಾಗಿ ಪ್ರೀತಿಸುವವನಿಗೆ ಇಂಥ ಸನ್ನಿವೇಶಗಳು ಬರುತ್ತವೆ. ಇತರ ಸತ್ಸಂಗಿಗಳಿಗೆ ಹೀಗೆ ಆಗಿಲ್ಲ.



ನೀನು 'ಎನ್'೧ (N1) ಸ್ಥಾನದ ಯಾತ್ರೆಯನ್ನು ಪೂರೈಸಿದ್ದೀಯೆ. ಈಗ 'ಓ'೧ (O1) ದ ಸ್ಥಾನ ಬರುವುದು. ಆದರೆ ನಿನ್ನ ಸ್ವಾಸ್ಥ್ಯ ಇನ್ನೂ ಸುಧಾರಿಸಲಿ ಎಂದು ನಾನು ಬಯಸುತ್ತೇನೆ. ಡಾ. ವರದಾಚಾರಿಯವರಿಂದ ಪ್ರೇಮಪೂರ್ಣ ಪತ್ರಗಳು ಬರುತ್ತಿವೆ. ಈಶ್ವರನ ಕೃಪೆಯಿಂದ ಅವರು ಒಳ್ಳೆಯ ಪ್ರಗತಿ ಹೊಂದುತ್ತಿದ್ದಾರೆ.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ಪ್ರಣಾಮಗಳು. ನಿನ್ನ ಸೋದರ– ಸೋದರಿಯರಿಗೆ ಆಶೀರ್ವಾದಗಳು.

ಶುಭಚಿಂತಕ<br>
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೪ **ಪತ್ರಸಂಖ್ಯೆ – ೬೨೯** ಷಾಹಜಹಾನಪುರ<br>
೨೭–೫–೧೯೫೭

ಪ್ರಿಯ ಪುತ್ರಿ ಕಸ್ತೂರಿ ಶುಭಾಶೀರ್ವಾದಗಳು,

ನಿನ್ನ ಅನೇಕ ಪತ್ರಗಳು ಬಂದಿವೆ. ಏನೆಂದು ಉತ್ತರ ಕೊಡಲಿ ಎಂದು ಯೋಚಿಸುತ್ತಿದ್ದೇನೆ. ಯಾಕೆಂದರೆ ನಿನಗೆ ಕೂಡ ಬರೆಯಲು ಯಾವುದೇ 'ಸ್ಥಿತಿ'ಗಳು ಸಿಗುತ್ತಿಲ್ಲ (ಅನುಭೂತಿಯಾಗುತ್ತಿಲ್ಲ) ಮತ್ತು, ಕೊಡಲಿಕ್ಕೆ ಉತ್ತರಗಳು ನನಗೂ ಸಿಗುತ್ತಿಲ್ಲ. ಎಲ್ಲಿಯವರೆಗೆ ಉತ್ತರ ಮೂಡಿಬರಬಹುದೋ ಅಲ್ಲಿಯವರೆಗೂ ಉತ್ತರ ಕೊಡುತ್ತಿರಲು ಬಯಸುತ್ತೇನೆ. ನೀನು ಪತ್ರಗಳಲ್ಲಿ ಏನು ಬರೆದಿದ್ದೀಯೆ ಎಂಬುದು ನನಗೆ ಜ್ಞಾಪಕವಿಲ್ಲ. ನೀನು 'ಮರುಭೂಮಿ'ಯ ಗಾಳಿ ಸೇವಿಸಿದ್ದೀಯೆ ಎಂಬ ಅಂದಾಜು ಮಾತ್ರ ಇದೆ; ಅದೇ 'ಮರುಭೂಮಿಯಾಗಿರುವುದರ ವಿಷಯವನ್ನೇ ನೀನು ವ್ಯಕ್ತ ಮಾಡಿದ್ದೀಯೆ. ಈಗ ಆ ಮರುಭೂಮಿಯ ತಳವನ್ನು ನೋಡಿದರೆ (ಸೂಕ್ಷ್ಮವಾಗಿ ಗಮನಿಸಿದರೆ), ಯಾವುದರ ಪ್ರಭಾವ ವಿಚಾರಗಳಲ್ಲಿ ನೆಲೆಸಿದೆಯೋ ಅಂಥ ಯಾವುದೋ ಒಂದು ವಸ್ತು ಕಾಣಸಿಗುವುದು. ಇದು 'ಓ'೧ (O1) ಸ್ಥಾನದ ಸ್ಥಿತಿ; ಅದನ್ನು ಸರಿಯಾಗಿ ವ್ಯಕ್ತಮಾಡಲು ನಿನಗೆ ಸಾಧ್ಯವಾಗಲಿಲ್ಲ. ಯಾರಾದರೂ ಮರಣ ಹೊಂದಿ, ಆ ಕಾರಣ, ಅಲ್ಲಿಯ ವಾತಾವರಣ ಬೆಳಕಿಲ್ಲದಾದಂತೆ (ಮಂಕು ಕವಿದಂತೆ) ಆಗುವಂಥ ಸ್ಥಿತಿ ಇದು. ಆದರೆ, ಈ ಮರುಭೂಮಿಯೂ ಅಂತ್ಯಹೊಂದುವುದು ನಮಗೆ ಬೇಕಿದೆ. ಈಗ ಅದು, ಕೇವಲ ಯಾರದೋ ಮೃತ್ಯುವಾಗಿದೆಯೆಂಬುದನ್ನು ಅರುಹುತ್ತಿದೆ, ಆದರೆ ಆ ಮರುಭೂಮಿಯದೇ ಮೃತ್ಯು ಇನ್ನೂ ಆಗಿಲ್ಲ; ಅದರ ಪ್ರತೀಕ್ಷೆ ಮಾಡಬೇಕು; ಮತ್ತು ಅದಕ್ಕೆ ಸಮಯ ತೆಗೆದುಕೊಳ್ಳಬಹುದು. ವಾಸ್ತವವಾಗಿ, ಇದು, ಇಷ್ಟು ದೀರ್ಘ ಸಮಯ ಕ್ರಮಿಸಿ ಬಂದ ನಂತರ ನಮಗೆ ದೊರೆತ, ನಮ್ಮ ನಿಜವಾದ ಸ್ಥಿತಿ. 'ಮರುಭೂಮಿ'ಯು ಮೃತ್ಯು ಹೊಂದಬೇಕೆಂಬುದರ ಅರ್ಥ, ನಾವು ಸ್ವಯಂ ಆ ಸ್ಥಿತಿಯನ್ನು ತಲುಪುವುದೆಂಬುದೇ ಆಗಿದೆ. ಹಾಗೆನ್ನುವುದಾದರೆ, ಮೃತ್ಯು ಹೊಂದಿದ ನಂತರವೂ

P-4-Books-PM-7-Anantyatre-165



ಏನಾದರೊಂದು ಉಳಿದೇ– ಉಳಿದಿರುತ್ತದೆ. ಆದ್ದರಿಂದ, ಹಾಗೆ 'ಉಳಿಯುವುದರ' ಮೃತ್ಯು ಆಗಬೇಕಾದುದೂ ಆವಶ್ಯಕ. ಆದರೆ ಎಲ್ಲಿಯವರೆಗೆ ಮೃತ್ಯು ಇರುವುದೋ, ಅಲ್ಲಿಯವರೆಗೂ, ಅದರ ಏನಾದರೊಂದು ರೂಪ (ಕುರುಹು) ಉಳಿದಿರುತ್ತದೆ. ಈ ಎಲ್ಲ ರೂಪಗಳೂ (ಕುರುಹುಗಳೂ) ಸಮಾಪ್ತವಾಗಿ ಹೋದಾಗ, 'ಭೂಮಾ'ದೊಂದಿಗೆ ಸಂಬಂಧ ಸ್ಥಾಪಿತವಾಗುವ ಭರವಸೆ ಇದೆ.

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದ, ಮತ್ತು ಅಮ್ಮಾಜಿಯವರಿಗೆ ಪ್ರಣಾಮಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೬೯ **ಪತ್ರಸಂಖ್ಯೆ – ೬೩೩** ಷಾಹಜಹಾನಪುರ
೦೪–೦೭–೧೯೫೭

ಪ್ರಿಯಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿತು. ನೀವೆಲ್ಲರೂ ಸುಧಾರಿಸಿಕೊಳ್ಳುತ್ತಿದ್ದೀರಿ; ಗುರುಮಹಾರಾಜರಿಗೆ ಧನ್ಯವಾದಗಳು. ನಿನ್ನ ಸ್ಥಿತಿಯ ಬಗ್ಗೆ ಈ ಮಾತನ್ನು ಬರೆಯುತ್ತಿದ್ದೇನೆ;

'ನಾನಕ ಶೂನ್ಯ ಸಮಾಧಿ ಮೇ ನಹೀ ಸಾಂಝ್ ನಹಿ ಭೋರ್'

ಗುರು ನಾನಕರು ಹೇಳುತ್ತಾರೆ– ಶೂನ್ಯ ಸಮಾಧಿಯಲ್ಲಿ ಎಂದೂ ಸಂಜೆಯೂ ಇಲ್ಲ, ಮುಂಜಾವು ಕೂಡ ಇಲ್ಲ.

ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು. ಚೌಬೇಜಿ ಮತ್ತು ಅಮ್ಮಾ ಅವರಿಗೆ ನನ್ನ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೦ **ಪತ್ರಸಂಖ್ಯೆ – ೬೩೫** ಷಾಹಜಹಾನಪುರ
೧೬–೦೭–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ, ೧೨–೭–೧೯೫೭ರ ಪತ್ರ ಕೈ ಸೇರಿತು. ಕೇಸರ್‌ಳ ಪತ್ರವೂ ಬಂದಿದೆ. ಚೌಬೇಜಿಯವರು ತಮ್ಮ ಆತ್ಮೋನ್ನತಿಯನ್ನು ಬಯಸುತ್ತಾರೆಂಬ ಬಗ್ಗೆ ಸಂದೇಹವಿಲ್ಲ. ಆದರೆ, ತಮ್ಮ ದೇಹಕ್ಕೆ ಪ್ರತಿಯೊಂದು ಪ್ರಕಾರದ ಆರಾಮ ಬಯಸುವುದು ಅವರಿಗೆ



ಸ್ವಭಾವಗತವಾಗಿಬಿಟ್ಟಿದೆ; ಮತ್ತು ಅವರು ಮಾಡುತ್ತಿರುವ ಪೂಜೆ (ಧ್ಯಾನಾಭ್ಯಾಸ)ಯಲ್ಲಿ ಆಸಕ್ತಿ ಇಲ್ಲವೇ ಇಲ್ಲ. ಅದಕ್ಕೆ ಕಾರಣ ಪ್ರೇಮದ ಕೊರತೆ ಎಂದು ಹೇಳಬಹುದು. ಇದಲ್ಲದೆ, ಅವರು ಯಾವ ರೀತಿಯ ರೂಢಿ ಬೆಳೆಸಿಕೊಂಡಿದ್ದಾರೆಂದರೆ, ಈಶ್ವರ ಪ್ರಾಪ್ತಿಯನ್ನು ಅವರು ಬಯಸುತ್ತಿರುವರಾದರೂ, ಈಶ್ವರನೊಂದಿಗೆ ಅರ್ಥಪೂರ್ಣ ಕಾಳಜಿ ಇಟ್ಟುಕೊಳ್ಳುವುದಿಲ್ಲ. ಇದರಿಂದಾಗಿ ಅನೇಕ ದೋಷಗಳು ಉಂಟಾಗುತ್ತವೆ. ಇದುವರೆಗೂ ಅವರು ಯಾರನ್ನೂ ತನ್ನವರನ್ನಾಗಿ ಮಾಡಿಕೊಂಡಿಲ್ಲ ಮತ್ತು ಯಾರಿಗೂ ಸೇರಿದವರಾಗಿಲ್ಲ (ಸಮರ್ಪಿಸಿಕೊಂಡಿಲ್ಲ). ಈ ಎರಡರಲ್ಲಿ ಅವರು ಒಂದನ್ನೂ ಮಾಡಿಲ್ಲ. ಈ ವಿಷಯಗಳ ಮೇಲೆ ಅವರು ಸ್ವತಃ ವಿಚಾರ ಮಾಡಲಿ ಮತ್ತು ತಮ್ಮ ಆರಾಮಕ್ಕೆ ಕಡಿವಾಣ ಹಾಕಲಿ, ಹಾಗೂ ಪ್ರೇಮ ಬೆಳೆಸಿಕೊಳ್ಳಲಿ. ಆಗ ಮಾತ್ರವೇ ಒಳ್ಳೆಯ ರೀತಿಯಲ್ಲಿ ಪ್ರಗತಿಯಾಗಬಹುದು. ಇದುವರೆಗಿನ ಆಧ್ಯಾತ್ಮಿಕ ಇತಿಹಾಸ ನಮಗೆ, ಈಶ್ವರ ಪ್ರಾಪ್ತಿಗೋಸ್ಕರ ಜನರು ಎಂಥೆಂಥ ತ್ಯಾಗ ಮಾಡಿದ್ದಾರೆಂಬುದನ್ನು ತಿಳಿಸುತ್ತದೆ. ಆಗ ಮಾತ್ರವೇ ಅವರು ಎಲ್ಲೋ (ಅಪರೂಪಕ್ಕೆ) ಈಶ್ವರನವರೆಗೆ ತಲುಪಿರಬಹುದು, ಅದೂ ಒಂದು ಜನ್ಮದಲ್ಲಲ್ಲ, ಎಷ್ಟೋ ಜನ್ಮಗಳೇ ತಗಲಿರಬಹುದು. ನಾನಂತೂ, ಯಾವ ತ್ಯಾಗವನ್ನೂ ಮಾಡಬೇಕೆಂದು ಹೇಳುವುದಿಲ್ಲ. ನಾನು ಹೇಳುವುದು ಇಷ್ಟೇ; ನಿಮ್ಮ ಹೃದಯವನ್ನು (ಲಕ್ಷ್ಯವನ್ನು) ಅವನ (ಈಶ್ವರನ) ಕಡೆಗೆ ತಿರುಗಿಸಿರಿ; ಯಾವ ರೀತಿ ಎಂದರೆ, ಎಂಥ ಪರಿಸ್ಥಿತಿಯಲ್ಲಿಯೂ, ಅದು, ವಿಚಲಿತಗೊಳಿಸಿದರೂ, ಕದಲಕೂಡದು.

ಈಗ ನಿನ್ನ (ಆಧ್ಯಾತ್ಮಿಕ) ಸ್ಥಿತಿಯನ್ನು ತಿಳಿಸುತ್ತೇನೆ. 'ಓ'೧ (O1) ಬಿಂದುವಿನ ನಿನ್ನ ಯಾತ್ರೆ ಸಮಾಪ್ತವಾಗಿದೆಯೆಂಬುದು ಸರಿ ಇದೆ. ನಿನಗೆ, ನೀರವತೆ ಆವರಿಸಿದಂತೆ ಅನುಭೂತಿಯಾಗುತ್ತಿರುವುದು ಆ ಸ್ಥಾನದ ಲಕ್ಷಣವಾಗಿದೆ. ಈ ವಿಶಿಷ್ಟ ನೀರವತೆ ಒಂದು ಶಕ್ತಿಯಾಗಿದೆ; ಈ ಶಕ್ತಿಯನ್ನು ಬೇರೆಯವರ ಆಧ್ಯಾತ್ಮಿಕ ಲಾಭಕ್ಕೋಸ್ಕರ ಪ್ರಯೋಗಿಸಬಹುದಾಗಿದೆ. ಈ ಶಕ್ತಿಯಿಂದ ಯಾವುದಾದರೊಂದು ಸ್ಥಳವನ್ನು ಮರುಭೂಮಿಯಾಗಿ ಮಾಡಿಬಿಡಬಹುದು. ಆದರೆ ಈಶ್ವರೀಯ ಕಾರ್ಯಕ್ಕೋಸ್ಕರ ಆದೇಶವಾಗುವವರೆಗೂ ಈ ಶಕ್ತಿಯನ್ನು ಪ್ರಯೋಗಿಸುವುದಿಲ್ಲ. "ಕುಳಿತಿರುವಾಗಲೇ ನೀನು ಓಲಾಡತೊಡಗುತ್ತೀಯೆ' ಎಂದು ಬರೆದಿರುವುದನ್ನು 'ಆತ್ಮದ ನೃತ್ಯ' ಎಂದು ಕರೆಯಲಾಗಿದೆ. ಇನ್ನೂ ಆಳವಾಗಿ ಹೋಗಿ, ನೈಸರ್ಗಿಕ ರೀತಿಯಲ್ಲಿ ನೋಡಿದರೆ ಇನ್ನೂ ಕೆಲವು ಅರ್ಥಗಳು ಹೊರಡಬಹುದು. ಆತ್ಮವು ತಾನೇ ತಾನಾಗಿತ್ತು; ಸೃಷ್ಟಿಯು ಉದ್ಭವವಾಗುವ ಸಮಯ ಬಂದಿತು. ಆಗ ಈ ಚಲನವಲನ ಅಥವಾ ಕ್ಷೋಭ ಉಂಟಾಯಿತು; 'ಆತ್ಮದ ನೃತ್ಯ'ವು ಆ ಕ್ಷೋಭದ ತೆರನಾಗಿಯೇ ಇದೆ.

ಕೇಸರಳ ಪತ್ರ ಬಂದಿದೆ. 'ನಾನು ಎಲ್ಲಿಯೇ ನೋಡಲಿ, ಏನನ್ನು ನೋಡಿದೆ ಎಂಬುದು ತಿಳಿದು ಬರುವುದಿಲ್ಲ'– ಎಂದು ಬರೆದಿದ್ದಾಳೆ. ಹೃದಯ ಬಾಹ್ಯ ವಿಷಯಗಳ ಪ್ರಭಾವವನ್ನು ಸ್ವೀಕರಿಸುತ್ತಿಲ್ಲ; ಆದ ಕಾರಣ ಸಂಸ್ಕಾರಗಳು ಉಂಟಾಗುತ್ತಿಲ್ಲ

P-4-Books-PM-7-Anantyatre-166



ಎಂಬುದರ ಸೂಚಕ ಇದಾಗಿದೆ. ಹೃದಯ ಮತ್ತು ಆತ್ಮಗಳು ಕರಗಿ ಹೋದಂತೆನಿಸುವುದನ್ನು ಬರೆದಿದ್ದಾಳೆ. ದೇಹ ಪ್ರಜ್ಞೆಯು ಹಗುರಾಗುತ್ತ (ಕ್ಷೀಣಿಸುತ್ತ) ಹೋಗುತ್ತಿದೆಯೆಂದು ಇದರ ಅರ್ಥ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೧ **ಪತ್ರಸಂಖ್ಯೆ – ೬೪೦** ಷಾಹಜಹಾನಪುರ
೩೧–೮–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

೨೬ನೆಯ ಆಗಸ್ಟ್ ೧೯೫೭ರ ನಿನ್ನ ಪತ್ರ ತಲುಪಿತು. ನಿನ್ನ ಆಧ್ಯಾತ್ಮಿಕ ಸ್ಥಿತಿಯನ್ನು ತಿಳಿದು ಸಂತೋಷದಿಂದ ನಾನು ಗದ್ಗದಿತನಾಗಿಬಿಟ್ಟೆ. ಈಗ ಪೂಜೆ (ಧ್ಯಾನ) ಮಾಡುವುದು ಅಸಂಭವವೆಂದೆನಿಸಿದೆ, ಮತ್ತೆ, ಇದೂ ಕೂಡ ಒಂದು ಬಂಧನವೇ ಸೈ; ಆದರೆ ಈ ಬಂಧನವಿಲ್ಲದೆ, ನಿಜವಾದ ಬಿಡುಗಡೆ ದೊರೆಯಲಾರದು. ನಿನ್ನ ಶರೀರದ ಕಣ–ಕಣವೂ ಚದುರಿ ಹೋದಂತೆ ನಿನಗೆ ಭಾಸವಾಗುತ್ತಿದೆ. ಇದರ ಅರ್ಥವೇನೆಂದರೆ, ಯಾವ ಪರಮಾಣುಗಳಿಂದ ನಿನ್ನ ಶರೀರ ರಚಿತವಾಗಿದೆಯೋ, ಮತ್ತು ಕ್ರಿಯೆ–ಪ್ರಕ್ರಿಯೆಗಳನ್ನು ಉಂಟುಮಾಡುತ್ತವೋ, ಆ ಪರಮಾಣುಗಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿವೆ. ಹೀಗೆ ಆದ ನಂತರ ಒಂದು ಉನ್ನತವಾದ, ಸಹಜ ದಶೆ ಬಂದಿದೆ. ಇಲ್ಲಿ ಜನರು ಜೀವನ್ಮೋಕ್ಷ ದಶೆಯನ್ನು ಸಾಧನೆಯ ಸರ್ವಸ್ವವೆಂದು ಭಾವಿಸಿ ಕುಳಿತಿದ್ದಾರೆ; ಮತ್ತು ಅದಕ್ಕೂ ಮುಂದೆ ಅವರಿಗೆ ಯಾವ ಕಲ್ಪನೆಯೂ ಇಲ್ಲ. 'ಆ ಸ್ಥಿತಿ ಏನಿದೆ'?– ಎಂದು ಅವರ ಕಿವಿಗೆ ಕೇಳಿಸುವಂತೆ ದೊಡ್ಡದಾಗಿ ಕೇಳು. ಅದರಲ್ಲಿ ಈಶ್ವರೀಯ ಪ್ರಭಾವದ ಅನುಭೂತಿಯಾಗುವುದೆಂದರೆ, ಪರಮಾಣುಗಳು ತಮ್ಮ ಮೂಲದ ಸ್ಥಿತಿಯನ್ನು ಪಡೆದಿವೆ ಎಂದು ಅರ್ಥ. ಆದರೆ ಅಲ್ಪಮಟ್ಟಿನ ಭಾರ ಅವುಗಳದು ಇನ್ನೂ ಉಳಿದಿದೆ. ಅದನ್ನು ಅಳೆಯುವುದು ಅಸಾಧ್ಯ. ನಿನ್ನ ಶರೀರದ ಕಣಗಳು ಆ ಸ್ಥಳದಲ್ಲಿ ಪ್ರವೇಶ ಮಾಡಿದವೆಂಬುದರ ಅರ್ಥವೇನೆಂದರೆ, ಈ ಕಣಗಳಲ್ಲಿರುವ ಉಪ್ಪಿನ ರುಚಿಯು (ಈಶ್ವರೀಯ ಶಕ್ತಿಯು) ಆ ಕಣಗಳನ್ನೂ ಉಪ್ಪಾಗಿ ಮಾರ್ಪಡಿಸುವುವು (ಈಶ್ವರೀಯ ಶಕ್ತಿಯಾಗಿ ಮಾರ್ಪಡಿಸುವುವು) ಮತ್ತು ಅಳಿದುಳಿದ ಭಾರವನ್ನು ದೂರ ಮಾಡಲು ಸಹಾಯಕವಾಗುವುವು, ಎಂದಾಗುತ್ತದೆ. ಅಮ್ಮಾಜಿಯವರಿಗೆ ಪ್ರಣಾಮ.

ಶುಭ ಚಿಂತಕ
ರಾಮಚಂದ್ರ



* * * *

ಕ್ರಮಸಂಖ್ಯೆ – ೧೭೨ **ಪತ್ರಸಂಖ್ಯೆ – ೬೪೧** ಷಾಹಜಹಾನಪುರ
೦೨–೯–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಾನು ಒಂದು ಪತ್ರವನ್ನು ಕಳುಹಿಸಿದ್ದೇನೆ, ಅದು ನಿನಗೆ ತಲುಪಿರಬಹುದು. ನಿನ್ನ ಚಿಕಿತ್ಸೆಯು ಶುರುವಾಗಿರಬಹುದು. ಅದರಿಂದ ಪ್ರಯೋಜನವಾಗಿ ನೀನು ಶೀಘ್ರ ಸ್ವಸ್ಥಳಾಗುವಂತೆ, ಈಶ್ವರನು ಕೃಪೆ ಮಾಡಲಿ. ನಾನು ಸಪ್ಟೆಂಬರ್ ಎರಡನೆಯ ವಾರ ದಿಲ್ಲಿಗೆ ಹೋಗುವೆನು; ಆದರೆ, ಕಾರ್ಯಕ್ರಮ ಇನ್ನು ನಿಗದಿಪಡಿಸಿಲ್ಲ.

ಅಮ್ಮಾಜಿಯವರಿಗೆ ವಂದನೆಗಳು

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೩ **ಪತ್ರಸಂಖ್ಯೆ – ೬೪೨** ಷಾಹಜಹಾನಪುರ
೦೪–೦೯–೧೯೫೭

ಪ್ರಿಯ ಪುತ್ರಿ ಕಸ್ತೂರಿ ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿದೆ. ನಾನು ಎರಡು ಪತ್ರಗಳನ್ನು ಕಳುಹಿಸಿದ್ದೇನೆ; ನಿನಗೆ ತಲುಪಿರಬಹುದು. ನೀನು ಈಗ ನಿನ್ನ ಅನಾರೋಗ್ಯವನ್ನು ದೂರಮಾಡಿ ಆರೋಗ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹೆಚ್ಚು ಕಾಳಜಿ ವಹಿಸಬೇಕು. ಇವೆಲ್ಲವನ್ನೂ ನೀನು ಪೂಜೆ ಎಂದೇ ತಿಳಿ. ಯಾಕೆಂದರೆ ಶರೀರವನ್ನು ಚೆನ್ನಾಗಿ ಇಟ್ಟುಕೊಳ್ಳುವುದು ನಮ್ಮ ಧರ್ಮ; ಅದರಿಂದಲೇ ನೀನು ಈಶ್ವರನ ಸ್ಮರಣೆ ಮತ್ತು ಇತರರ ಸೇವೆಯನ್ನು ಮಾಡಲು ಶಕ್ಯ.

ಮುಂದುವರಿಯಲು (ಪ್ರಗತಿ ಹೊಂದಲು) ಹೃದಯ ಹಾತೊರೆಯುತ್ತಿದೆ ಎಂದು ಬರೆದಿದ್ದೀಯೆ; ಅದು ಸರಿಯೇ ಇದೆ. ಆದರೆ ಒಂದು ಸಂಗತಿಯನ್ನು ನೀನು ಗಮನಿಸಿಲ್ಲ; ಇದುವರೆಗೆ ಬಂದ ಎಲ್ಲ ಸ್ಥಿತಿಗಳೂ ವಿಸ್ತಾರಗೊಳ್ಳುತ್ತಿವೆ. ಇದೂ ಕೂಡ ಈಶ್ವರನ ಒಂದು ವರದಾನವೇ ಸೈ.

ನಾನು ದಿಲ್ಲಿಗೆ ಹೋಗಲು ಬಯಸುತ್ತಿರುವುದೂ ಸರಿಯೆ, ಮತ್ತು ಪ್ರಯತ್ನವನ್ನೂ ಮಾಡುತ್ತಿದ್ದೇನೆ. ಆದರೆ ಮನೆಯ ತೊಂದರೆಗಳು ಹೋಗಲು ಬಿಡುವುದಿಲ್ಲ. ಜೀವನ ನಿರ್ವಹಣೆಗೆ ಅಗತ್ಯವಾದ ಕೆಲವು ಕೆಲಸಗಳು ಎದುರಿನಲ್ಲಿವೆ.

ಅಮ್ಮಾಜಿಯವರಿಗೆ ವಂದನೆಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೪ **ಪತ್ರಸಂಖ್ಯೆ – ೬೪೪** ಷಾಹಜಹಾನಪುರ
೧೫–೦೯–೧೯೫೭

ಪ್ರಿಯ ಪುತ್ರಿ ಕಸ್ತೂರಿ ಶುಭಾಶೀರ್ವಾದಗಳು,

ಸೆಪ್ಟೆಂಬರ್ ೫ರ ನಿನ್ನ ಪತ್ರ ತಲುಪಿದೆ. ಚಲಿಸುತ್ತಿರುವಾಗ, ನಾನು ಚಲಿಸುತ್ತಿರುವುದರ ಅನುಭೂತಿಯೇ ಆಗುವುದಿಲ್ಲ– ಎಂದು ಬರೆದಿದ್ದೀಯೆ. ಅಂದರೆ, ನೀನು ನಡೆಯುತ್ತ ನಡೆಯುತ್ತ, ನಡೆಯುವುದನ್ನು ಮರೆತುಬಿಟ್ಟೆ ಎಂದಾಯಿತು. ಅರ್ಥಾತ್ ಕಾರ್ಯದ ಸಂಸ್ಕಾರ ಎಲ್ಲಿಯೂ ಆಗುತ್ತಿಲ್ಲ. ಯಾರಿಗೋ ಒಂದು ಪತ್ರದಲ್ಲಿ ಬರೆದಿದ್ದೆ; ಅದನ್ನು ಮತ್ತೆ (ನಿನಗೆ) ಬರೆಯುತ್ತೇನೆ. 'ಬ್ರಹ್ಮ'ದ ವ್ಯಾಖ್ಯೆಯಿರುವುದು ಹೀಗೆ:

ಕಾಲಿಲ್ಲದೆ ಚಲಿಸುತ್ತದೆ, ಕಿವಿಯಿಲ್ಲದೆ ಕೇಳುತ್ತದೆ.
ಕರ್ಮವನ್ನು ಮಾಡದೆಯೆ, ನಾನಾ ಕಾರ್ಯವಿಧಿಗಳನ್ನು ಪೂರೈಸುತ್ತದೆ.

[ಬಿನ ಪಗ ಚಲೈ, ಸುನೈ ಬಿನ ಕಾನಾ
ಕರ ಬಿನ ಕರ್ಮ, ಕರೈ ವಿಧಿ ನಾನಾ]

'ಪ್ರಜ್ಞೆ ಉಂಟಾಗುವುದು' ಎಂದು ಯಾವುದನ್ನು ನೀನು ಬರೆದಿದ್ದೀಯೋ ಅದು, ಮೃತ್ಯು ಹೊಂದಿದ ನಂತರ (ಅಹಂಕಾರ), ಯಾವ ಜೀವನ ಬರುವುದೋ ಅದೇ ಆಗಿದೆ. ಪಾಮರನ ಮಾತಿನಲ್ಲಿ ಹೇಳುವುದಾದರೆ–

'ಚೌಬೇಜಿಯವರ ಕಸ್ತೂರಿ ತೀರಿಹೋಗಿದ್ದಾಳೆ; ಈಗ, ಯಾರ ಸುಗಂಧ ಸರ್ವತ್ರ ಪಸರಿಸಿರುವುದೋ 'ಅವನ' ಕಸ್ತೂರಿ ಉಳಿದಿದ್ದಾಳೆ.'

'ಜಗತ್ತಿನಲ್ಲಿ, ಯಾರ ಬಳಿಯಲ್ಲಿಯೇ ಆಗಲಿ, ಏನೆಲ್ಲ ಇರುವುದೋ ಅದೆಲ್ಲವೂ ತಮ್ಮಿಂದಲೇ (ಬಾಬೂಜಿಯವರಿಂದಲೇ) ಕೊಡಲ್ಪಟ್ಟಿರುವುದಾಗಿದೆ' ಎಂದು ಬರೆದಿದ್ದೀಯೆ. 'ನಿನ್ನ ಬಳಿ ಏನೆಲ್ಲ ಇದೆಯೋ ಅವೆಲ್ಲವೂ ಈ ಜನರಿಂದಲೇ ಕೊಡಲ್ಪಟ್ಟಿರುವುದಾಗಿದೆ'– ಎಂಬ ಅನುಭೂತಿ ಆಗಿದ್ದಿದ್ದರೆ, ಬಹಳ ಒಳ್ಳೆಯ ಸ್ಥಿತಿಯಾಗಿರುತ್ತಿತ್ತು.

ಅಮ್ಮಾಜಿಯವರಿಗೆ ಪ್ರಣಾಮಗಳು

ಶುಭ ಚಿಂತಕ
ರಾಮಚಂದ್ರ

* * * *



ಕ್ರಮ ಸಂಖ್ಯೆ – ೧೭೫ **ಪತ್ರ ಸಂಖ್ಯೆ – ೬೪೭** ಷಾಹಜಹಾನಪುರ
೨೨–೯–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ಸೆಪ್ಟೆಂಬರ್ ೧೧ರ ನಿನ್ನ ಪತ್ರ ತಲುಪಿದೆ. ಇನ್ನೊಂದು, ನಾನು ಸೆ. ೧೫ ರಂದು ನಿನ್ನ ಹಿಂದಿನ ಪತ್ರಕ್ಕೆ ಉತ್ತರವಾಗಿ ಬರೆದುದು ನಿನಗೆ ತಲುಪಿರಬಹುದು.

ಅಭ್ಯಾಸಿಯು ಬಹಳ ಉನ್ನತ ಶಿಖರವನ್ನು ಮುಟ್ಟಿದಾಗ, ಒಂದು ತೆರನಾದ ಶಬ್ದರಹಿತ ಗುಂಜಾರವ ಉಂಟಾಗುತ್ತದೆ, ಮತ್ತು ಆಗ ಅದರ ಆವೇಗವು ಕೆಳಕ್ಕೆ ಅವತರಣಗೊಳ್ಳಲಾರಂಭಿಸುತ್ತದೆ. ಈ ಸಂಗತಿ ನನಗೆ ಗೊತ್ತಿತ್ತು. ಆದರೆ ಅದು ಆಗುವುದು ಹೇಗೆ ಎಂಬುದು ತಿಳಿದಿರಲಿಲ್ಲ. ಈಗ ಈ ಸಂಗತಿ ನನ್ನ ಅನುಭವಕ್ಕೆ ಸಿಕ್ಕಿದೆ. ಮತ್ತು ನಾನು ನನ್ನ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲು ಅದನ್ನು ವೀಕ್ಷಣೆ ಮಾಡುತ್ತಿದ್ದೇನೆ.

ಕಬೀರ ಸಾಹೇಬರು ಬರೆಯುತ್ತಾರೆ– "ಸಿಂಧುವಿನಲ್ಲಿ ಬಿಂದು ಲೀನವಾಗುವುದೆಂಬುದು ಎಲ್ಲರಿಗೂ ತಿಳಿದಿದೆ. ಆದರೆ, ಸಿಂಧುವು ಬಿಂದುವಿನಲ್ಲಿ ಲೀನವಾಗಬಲ್ಲದು ಎಂಬುದನ್ನು ಅರಿತವರು ತೀರ ವಿರಳ". ಆದ್ದರಿಂದ, ನೀನು ಬರೆದೂ ಇದ್ದೀಯೆ– ಸಂಪೂರ್ಣ ರೂಪವು ಶುಭ್ರ (ಶ್ವೇತವರ್ಣದ) ಶಿಲೆಯಂತಾಗಿದೆ. ಇದರ ಅರ್ಥವೇನೆಂದರೆ, ಎರಡು–ಮೂರು ಚಕ್ರಗಳು ಕೆಳಭಾಗದಲ್ಲಿವೆ ಮತ್ತು ಅವುಗಳನ್ನು ನಮ್ಮಲ್ಲಿ ಅನಂತರ ಕೈಗೆತ್ತಿಕೊಳ್ಳಲಾಗುವುದು. ಅವುಗಳನ್ನು ಒಂದೊಂದಾಗಿ ತೆರೆಯಲು (ಜಾಗ್ರತಗೊಳಿಸಲು) ಬಯಸುತ್ತೇವೆ. ಅವುಗಳಲ್ಲಿ 'ಸಿದ್ಧಿ'ಗಳೂ ಇರುತ್ತವೆಯಾದ ಕಾರಣ ಅವುಗಳನ್ನು ಆ ಸಮಯದಲ್ಲಿ (ಅನಂತರ, ಕೊನೆಯಲ್ಲಿ) ತೆಗೆದುಕೊಳ್ಳಲಾಗುವುದು; ಯಾಕೆಂದರೆ ನಮ್ಮ ಲಕ್ಷ್ಯವಿರುವುದು ಸಿದ್ಧಿಗಳ (ಪವಾಡ–ಶಕ್ತಿಗಳ) ಮೇಲೆ ಅಲ್ಲ. ನಿನ್ನ ಈ ಅನುಭವ ಸರಿಯಾಗಿದೆ. ಇದರ ಅನುಭವ ನನಗೂ ಇದೆ.

ನಿನ್ನ ಹೃದಯದಲ್ಲಿ ಅನುಭವವಾಗುತ್ತಿರುವ ಸ್ಪಂದನಗಳು (vibrations) ನನ್ನ ಕಡೆಯಿಂದ ಬಂದವುಗಳಾಗಿವೆ. ನೀನು ಕಂಡ ಸ್ವಪ್ನವು 'ಬಿಂದುವಿನಲ್ಲಿ ಸಿಂಧು' ಎಂಬ ಸ್ಥಿತಿಯ ರುಜುವಾತು ಆಗಿದೆ. ಕೊನೆಯಲ್ಲಿ ಹಸ್ತಗಳು ಬಂದವಲ್ಲ, ಅವು ಸರಿ ಇವೆ– ಅವುಗಳಿಂದಲೇ ನಿನ್ನ ಕಲ್ಯಾಣವಾಗುವುದು.

ನೀನು ಈಗ ಯಾವ ಸ್ಥಾನದಲ್ಲಿದ್ದೀಯೆ ಎಂಬುದನ್ನು ಬರೆದು ತಿಳಿಸು; ನಾನು ಮರೆತುಬಿಟ್ಟೆ. ನಾನು 'ಧರ್ಮ'ದ ವ್ಯಾಖ್ಯೆಯನ್ನು ಎಲ್ಲೋ ಬರೆದಿದ್ದೇನೆ. ಜ್ಞಾಪಕದಲ್ಲಿದ್ದರೆ ಅದನ್ನೂ ಬರೆ.

ಅಮ್ಮಾಜಿಯವರಿಗೆ ವಂದನೆ.

ಶುಭ ಚಿಂತಕ
ರಾಮಚಂದ್ರ

P-4-Books-PM-7-Anantyatre-168



* * * *

ಕ್ರಮಸಂಖ್ಯೆ – ೧೭೬ **ಪತ್ರಸಂಖ್ಯೆ – ೬೫೦** ಷಾಹಜಹಾನಪುರ

.........

ಪ್ರಿಯ ಪುತ್ರಿ ಕಸ್ತೂರಿ ಶುಭಾಶೀರ್ವಾದಗಳು,

ಸೆಪ್ಟೆಂಬರ್ ೨೭ ಮತ್ತು ೨೮ರ ನಿನ್ನ ಪತ್ರಗಳು ತಲುಪಿದವು. ಸ್ವಾಮೀಜಿಯವರೊಂದಿಗೆ ನಿನ್ನ ಭೇಟಿಯಾದದ್ದು ಒಳ್ಳೆಯದಾಯಿತು. ನನ್ನ ಬಳಿಗೆ ಅವರು ಬರುವುದು ಕಷ್ಟ; ಒಂದು ವೇಳೆ, ಸಂದರ್ಭವಶಾತ್ ಬಂದಿದ್ದರೆ, ನನ್ನ ಬಗ್ಗೆ ಯಾವ ಅಭಿಪ್ರಾಯ ತಳೆಯುತ್ತಾರೋ ಗೊತ್ತಿಲ್ಲ. ಯಾಕೆಂದರೆ, ಇಲ್ಲಿ 'ಸ್ಥಿತಿ' ಎನ್ನುವಂಥಾದ್ದು ಏನೂ ಉಳಿದಿಲ್ಲ. ಪ್ರಾಣಾಹುತಿಯಿಂದ (Transmission) ಪ್ರತಿಯೊಬ್ಬನೂ ಸಂತುಷ್ಟನಾಗುವುದಿಲ್ಲ, ಯಾಕೆಂದರೆ ಅದರಲ್ಲಿ ಆಕರ್ಷಣೆ (ರುಚಿ) ಇರುವುದಿಲ್ಲ. ಅಭ್ಯಾಸಿಯ ಅರಿವಿಗೂ ಬಾರದಷ್ಟು ಉತ್ತಮ ಆತ್ಮಸಮರ್ಪಣೆ ಇದ್ದರೆ, ಸೂತ್ರದ ಗೊಂಬೆಯ ಸ್ಥಿತಿಯಂಥ 'ಗತಿ' ಪ್ರಾಪ್ತವಾಗುತ್ತದೆ. 'ಆತ್ಮಸಮರ್ಪಣೆ' ಎಂಬುದಾದರೂ ಏನು?– ಗುರುವಿನ ಸ್ಥಿತಿ ಯಾವುದು ವಾಸ್ತವದಲ್ಲಿ ಇರುವುದೋ ಅದರ ಯಥಾ ನಕಲು; ಮತ್ತು ನಂತರ, ಘನತ್ವ (ಸಾಂದ್ರತೆ density)ದೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ, ಅರ್ಥಾತ್, ನಾವು ನಮ್ಮ ಅಂತಿಮ ದಶೆಯಲ್ಲಿ ಬಂದು ಬಿಡುತ್ತೇವೆ. ಆ ಕಾರಣದಿಂದಲೇ ಶ್ರೀ ಕೃಷ್ಣನು ಅದರ ಮಹಿಮೆಯನ್ನು ಬಹುವಾಗಿ ಕೊಂಡಾಡಿದ್ದಾನೆ. ದೈವೀ ಶಕ್ತಿಯನ್ನು ಅವತರಣಗೊಳಿಸುವುದನ್ನು ನಿನ್ನಿಂದ ನಾನು ಯಾವ ರೀತಿ ಕಲಿತೆನೆಂದರೆ, ಈಗ, ಆ ಸ್ಥಿತಿಯನ್ನು ಉಂಟುಮಾಡುವ ವಿಧಾನ ಹೇಗೆ ಎಂಬುದು ನನಗೆ ಗೊತ್ತಾಗಿದೆ, ನಾನು ಈ ಕುರಿತು ಯೋಚಿಸುತ್ತಿದ್ದೆ, ಆದರೆ ಅರಿವಿಗೆ ಸಿಗುತ್ತಿರಲಿಲ್ಲ. ಆದರೆ ನನ್ನೆದುರಿನಲ್ಲಿಯೇ ಅದು ಸಂಭವಿಸಿದಾಗ, ಅದು ತಿಳಿಯಿತು. ಅದಕ್ಕೆ, 'ಬಿಂದುವಿನಲ್ಲಿ ಸಿಂಧುವು ಲೀನವಾಗುವುದು' ಎಂದು ಹೋಲಿಸಿ ಹೇಳಿದರೆ, ಅದರ ಅರ್ಥವು ಚೆನ್ನಾಗಿ ತಿಳಿದು ಬಂದೀತು. ಈ ಸ್ಥಿತಿಯನ್ನು ಈಗಾಗಲೇ, 'ಬಿಂದುವಿನಲ್ಲಿ ಸಿಂಧು' ಎಂದು ಹೇಳಿದ್ದಾಗಿದೆ. ಆದರೆ, ಆ ಪರಿಮಿತಿಯು ಭಗ್ನವಾಗಿ ಹೋದಾಗ, ನಾನು 'ಬಿಂದು' ಆಗಿದ್ದೇನೆಂಬ ಅರಿವೂ ಹೊರಟು ಹೋದಾಗ, ಮತ್ತು ಎಲ್ಲವೂ ಏಕಪಾತಳಿಯಾಗುವ ರೀತಿಯಲ್ಲಿ ದೈವೀ ಶಕ್ತಿಯ ಅವತರಣವಾದಾಗ ಮತ್ತು, ಇನ್ನೊಂದು ಶರತ್ತು ಏನೆಂದರೆ, ಆ ಶಕ್ತಿಯು ಏನನ್ನು ತನ್ನೊಂದಿಗೆ ತಂದಿತೋ ಅದರ ಅರಿವೂ ಇಲ್ಲದಾದಾಗ– ಏನಾಗುತ್ತದೆ? ಅದನ್ನು ಹೇಳಲು ಶಬ್ದಗಳು ಸಿಗುವುದಿಲ್ಲ. ಬಹುಶಃ ಹೀಗೆ ವ್ಯಕ್ತಮಾಡಬಹುದೇನೋ!– ಶಕ್ತಿಯೂ ಇಲ್ಲ, ಸಮುದ್ರವೂ ಇಲ್ಲ, ಬಿಂದು (ಹನಿ)ಯೂ ಇಲ್ಲ. ಅಂದರೆ, ಶಬ್ದವು ವ್ಯಕ್ತಪಡಿಸಲಾರದುದು ಉಳಿಯುತ್ತದೆ. ಅದಕ್ಕೆ ಏನೆಂದು ಕರೆಯೋಣ? Negation-ನಿರಸನ ಎನ್ನು. ಇಲ್ಲಿ ಏನನ್ನೂ ವ್ಯಕ್ತಪಡಿಸಲು ಸಾಧ್ಯವಿಲ್ಲ. ಇದಲ್ಲ, ಇದಲ್ಲ ಎನ್ನುತ್ತಲೇ ಮುಂದೆ ಸಾಗುತ್ತ ಹೋದರೆ, ಇದಲ್ಲ (ಇಲ್ಲ) ಎನ್ನುವುದು ಮುಗಿಯುವುದೇ ಇಲ್ಲ. 'ಇದೆ', 'ಇದೆ' ಎನ್ನುವುದು ಹಿಂದೆಯೇ ಉಳಿಯುತ್ತದೆ.



ಅಮ್ಮಾಜಿಗೆ ಪ್ರಣಾಮಗಳು, ನಿನ್ನ ಸೋದರ ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೭ **ಪತ್ರಸಂಖ್ಯೆ – ೬೫೨** ಷಾಹಜಹಾನಪುರ
೨೭–೧೦–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ದಿ. ೧೪–೧೦–೧೯೫೭ರ ನಿನ್ನ ಪತ್ರ ತಲುಪಿದೆ. ಈ ಪತ್ರಕ್ಕೆ ಉತ್ತರ ಬರೆಯುವುದರಲ್ಲಿ ತುಂಬ ತಡವಾಯಿತು. ನಾನು ೫–೧೨–೧೯೫೭ನೆಯ ತಾರೀಖಿಗೆ ದಕ್ಷಿಣ ಭಾರತಕ್ಕೆ ಹೋಗುವುದು ನಿರ್ಧಾರವಾಗಿದೆ. ನೀನು ಯಾವ ಪತ್ರವನ್ನೂ ಕಳುಹಿಸಿಲ್ಲ. ಅದರಿಂದ, ನಿನ್ನ ಆರೋಗ್ಯದ ಬಗ್ಗೆ ನನಗೆ ಚಿಂತೆ ಇರುತ್ತದೆ; ಬೇಗ ಉತ್ತರ ಬರೆದು ಕಳುಹಿಸು.

ನಾನು ನಿನಗೆ ಒಂದು ಪತ್ರದಲ್ಲಿ ಬರೆದುದರ ತಾತ್ಪರ್ಯ, 'ಮೇಲಿನಿಂದ ಯಾವುದು ಅವತರಣಗೊಳ್ಳುತ್ತಿರುವುದೋ ಅದು ಕೆಳಗೆ ವಿಸ್ತಾರಗೊಳ್ಳುತ್ತಿದೆ'– ಎಂಬುದಾಗಿತ್ತು. ಈಗ ಸಮರಸದ ಸ್ಥಿತಿ ಇದೆ ಮತ್ತು ವೇಗವು ಬಹಳ ಮಂದವಾಗಿದೆ. ನೀನು ಯಾವ ಬಿಂದುವಿನಲ್ಲಿ (೦೧, O1) ಇರುವಿಯೋ ಅದು ಬಹುತೇಕ ಏಕರಸವಾಗಿದೆ. ನಿನ್ನ ಮನೆ ಮತ್ತು ಬೇರೆಯವರ ಮನೆಗಳು ನಿನಗೆ ಒಂದೇ ಸಮಾನವಾಗಿ ಕಾಣುತ್ತದೆ. ಭೇದಭಾವ ನಿನ್ನ ಮನಸ್ಸಿನಿಂದ ಹೊರಟು ಹೋಗಿದೆ, ಮತ್ತು ಎಲ್ಲರೂ ತನ್ನವರೇ ಎಂದು ಪ್ರತೀತವಾಗುತ್ತದೆ. ಇದಾದ ನಂತರ, ಈಶ್ವರೇಚ್ಛೆಯಿದ್ದರೆ, ಮನಸ್ಸಿನಲ್ಲಿ ಯಾವ ಭಾವವೂ ಹುಟ್ಟುವುದಿಲ್ಲ. ಇದು 'ಸತ್ಯ' (Reality)ದ ದಶೆಯಾಗಿದೆ.

'ಎಚ್ಚರವೂ ಇಲ್ಲ. ಎಚ್ಚರವಿಲ್ಲದಿರುವಿಕೆಯೂ (unconscious) ಇಲ್ಲ'– ಎಂದು ನೀನು ಬರೆದಿರುವುದು, (ಈಗ) ನಿನ್ನ 'ಸ್ಥಿತಿ'ಯಾಗಿದೆ. ನನ್ನದೂ ಇದೇ ಸ್ಥಿತಿ ಇದೆ; ಏರು–ತಗ್ಗು ಇರುವ ನೆಲದ ಮೇಲೆ ನಡೆದಾಡುವಾಗ, ಹೇಗೋ ಬಿದ್ದು ಹೋಗದಂತೆ ಚಲಿಸುತ್ತೇನೆ; ಆಗ ನನಗೆ ಅರಿವಿಲ್ಲದಾಗಿತ್ತು (ಬೇಹೋಶ್) ಎಂದೆನಿಸುತ್ತದೆ. ಮನಸ್ಸಿನ ವೃತ್ತಿಯು 'ಸತ್ಯ'ದಲ್ಲಿ– ಎಷ್ಟು ಲಯ ಹೊಂದಬೇಕೋ ಅಷ್ಟು ಆದಾಗ ಈ ಸ್ಥಿತಿ ಉಂಟಾಗುತ್ತದೆ. ಪೂರ್ಣವಾಗಿ ಅದು ತನ್ನ ಸತ್ಯದಲ್ಲಿ ಲಯಹೊಂದಿದರೆ ಜೀವನ ಮುಗಿದು ಹೋಗುತ್ತದೆ. ಆದುದರಿಂದ, ಇಷ್ಟರ ಮಟ್ಟಿಗೆ ಎಚ್ಚರ (ಪ್ರಜ್ಞೆ) ಆವಶ್ಯಕ ಎಂದು ನಾನು ತಿಳಿಯುತ್ತೇನೆ.

P-4-Books-PM-7-Anantyatre-169



ಅಮ್ಮಾಜಿಯವರಿಗೆ ಪ್ರಣಾಮ ಮತ್ತು ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೮ **ಪತ್ರಸಂಖ್ಯೆ – ೬೫೪** ಷಾಹಜಹಾನಪುರ
೦೫–೧೧–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನೀನು ಅಕ್ಟೋಬರ್ ೨೮ಕ್ಕೆ ಬರೆದ ಪತ್ರ ತಲುಪಿತು. ಈ ಸಲ 'ಗುಲಬರ್ಗಾ ಬ್ರಾಂಚಿ'ನ ವಾರ್ಷಿಕೋತ್ಸವವನ್ನು ಶ್ರೀ ರಾಘವೇಂದ್ರರಾಯರು ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಿದ್ದಾರೆ, ದಕ್ಷಿಣ ಭಾರತದಲ್ಲಿ ಅಗ್ನಿಯು ಪ್ರಜ್ವಲಿಸಲು ಪ್ರಾರಂಭಿಸಿದೆ. ಜನರು ಕಡಿಮೆ ಸಂಖ್ಯೆಯಲ್ಲಿ ಬರುತ್ತಿರುವುದೇನೋ ಸರಿಯೆ. ಅಲ್ಲಿ, ಪ್ರತಿವರ್ಷ, ನಾನು ಕಡಿಮೆಯೆಂದರೆ ಮೂರು ತಿಂಗಳು ಇರಬೇಕಾದ ಆವಶ್ಯಕತೆಯಿದೆ. ಡಿಸೆಂಬರ್ ೫ಕ್ಕೆ ನಾನು ದಕ್ಷಿಣ ಭಾರತಕ್ಕೆ ಹೋಗಿಬಿಡುತ್ತೇನೆ. ಎಂ. ಕೆ. ಗಣೇಶನ್ ಕೆಲಸ ಮಾಡುತ್ತಿದ್ದ ತ್ರಿಚನಾಪಳ್ಳಿ ಕೇಂದ್ರವನ್ನು ನಾನು ನಿಲ್ಲಿಸಬೇಕಾಯಿತು.

ಅಮ್ಮಾಜಿಯವರಿಗೆ ಪ್ರಣಾಮಗಳು

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೭೯ **ಪತ್ರಸಂಖ್ಯೆ – ೬೫೭** ಷಾಹಜಹಾನಪುರ
೦೯–೧೧–೧೯೫೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಬಂದಿದೆ. ನೀನು ಆರೋಗ್ಯದಿಂದ ಬಾಳು ಎಂದಷ್ಟೇ ಈಗ ನಾನು ಬರೆಯುವುದಿದೆ. ಅಮ್ಮಾಜಿ ನಿನ್ನನ್ನು ಅಲ್ಲಿಯೇ (ಆಸ್ಪತ್ರೆಯಲ್ಲಿಯೇ) ಇರಲು ಬಿಡಲಿ, ಡಾಕ್ಟರ್ ಸಾಹೇಬರು ಹೇಳುವವರೆಗೂ ನೀನು ಅಲ್ಲಿಯೇ ಇರಲಿ ಎಂದು ನಾನು ಅಮ್ಮಾಜಿಯವರನ್ನು ವಿನಂತಿಸಿಕೊಂಡಿದ್ದೇನೆ. ಉತ್ಸವದ (ಬಸಂತ ಪಂಚಮಿ) ಸಮಯದಲ್ಲಿ, ಅಲ್ಲಿ, ನಿನ್ನ ಚಿಕಿತ್ಸೆಗೋಸ್ಕರ ಇರಬೇಕಾದುದು ಅವಶ್ಯವೆನಿಸಿದರೆ, ನೀನು ಉತ್ಸವಕ್ಕೆ ಬರಬೇಕಿಲ್ಲ ಎಂದು ನಾನು ಹೇಳುತ್ತೇನೆ.

ಅಮ್ಮಾಜಿಯವರಿಗೆ ಪ್ರಣಾಮಗಳು.

ನಿನ್ನ ಶುಭ ಚಿಂತಕ
ರಾಮಚಂದ್ರ



* * * *

ಕ್ರಮಸಂಖ್ಯೆ – ೧೮೦ **ಪತ್ರಸಂಖ್ಯೆ – ೬೬೮** ಷಾಹಜಹಾನಪುರ
೧೨–೦೩–೧೯೫೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಆಧ್ಯಾತ್ಮಿಕ 'ಸ್ಥಿತಿ' ಚೆನ್ನಾಗಿಯೇ ಇದೆ, ಆದರೆ ಚಿಂತೆ ಇರುವುದು ನಿನ್ನ ಆರೋಗ್ಯದ ವಿಷಯದಲ್ಲಿ. ನೀನು ಸ್ವಸ್ಥಳಾಗಿ, ಮಿಷನ್ನಿನ ಕೆಲಸ ಮಾಡಲು ಸಾಧ್ಯವಾಗುವಂತೆ ಈಶ್ವರ ಕೃಪೆ ಮಾಡಲಿ. ಅಭ್ಯಾಸಿಯು ಪ್ರಗತಿ ಹೊಂದುತ್ತ–ಹೊಂದುತ್ತ, Supermind ಎಂದೂ ಕರೆಯಲಾಗುವ, ಈಶ್ವರೀಯ ಮನಸ್ಸಿನ ಪ್ರಭಾವ ಬರಲಾರಂಭಿಸುವ ಸ್ಥಾನವನ್ನು ತಲುಪುತ್ತಾನೆ; ಮತ್ತು ಆಗ ಶೂನ್ಯದ ಅನುಭೂತಿಯಾಗುತ್ತದೆ. ಅದರಲ್ಲಿ ಲಯ ಹೊಂದಿ ಒಂದಾಗಿ ಹೋದಾಗ ಅವನಿಗೆ ಅದಕ್ಕಿಂತಲೂ ಸೂಕ್ಷ್ಮ ಗತಿಯ ಸಂಕೇತ ಸಿಗುತ್ತದೆ. ಇಲ್ಲಿಯ ಸ್ಥಿತಿ ಎಷ್ಟು ಹಗುರಾಗಿ (ಲಘುವಾಗಿ) ಇರುವುದೆಂದರೆ, ಅದನ್ನು ಶಬ್ದಗಳಲ್ಲಿ ವ್ಯಕ್ತಪಡಿಸಲು, 'ಯಾವಾಗಲೋ, ಇಲ್ಲಿ ಒಂದು ದೀಪ ಉರಿಯುತ್ತಿತ್ತು, ಅದರ ಪ್ರಕಾಶವಿತ್ತು. ಅರ್ಥಾತ್, ಪ್ರಕಾಶದ ಪ್ರಭಾವ ಮಂದವಾಗಿ ಹೋದಂತೆ', ಎಂದು ಊಹೆ ಮಾಡಬಹುದಷ್ಟೆ, ಅಥವಾ ಪ್ರಾತಃಕಾಲದಲ್ಲಿ ಮಿಣುಕುತ್ತಿರುವ ದೀಪದಂತೆ, ಅಥವಾ ಮನುಷ್ಯನ ಮನಸ್ಸಿನಲ್ಲಿ ಸಂದೇಹದ ಛಾಯೆ ಸುಳಿದಂತೆ ಆಗುವ ಅನುಭೂತಿಯಂತೆ, ಅದು ತಿಳಿದು ಬರಬಹುದು. ಚಕ್ರಗಳು ತಮ್ಮ ಅದ್ಭುತ ಕಾರ್ಯ ಪ್ರಕಟಪಡಿಸಿ, ಉನ್ನತಿ ನೀಡಿ ತಮ್ಮ ಕೆಲಸ ಮುಗಿಸುತ್ತವೆ. ಅನಂತರ ಉಳಿಯುವುದೆಂದರೆ, ಪ್ರಕೃತಿಯ ರಹಸ್ಯಗಳನ್ನು ತಿಳಿಸುವ, ಪ್ರಕಟಪಡಿಸುವ ಕೇಂದ್ರ, ಅಥವಾ 'ಭೂಮಾ' ಮಾತ್ರ.

*ಸಹಸ್ರದಲ ಕಮಲದಲ್ಲಿ ಮೇಲೆ ಛೇದ, (ಮತ್ತು) ಪೂರ್ಣಹಸ್ತ (ಐದೂ ಬೆರಳುಗಳುಳ್ಳ)* ಅನುಭವಕ್ಕೆ ಬರದಿರುವುದು– ಅದರ ಅರ್ಥವೇನೆಂದರೆ ಈಗ ನನ್ನ ಸಹಾಯ (ಸಹಾಯದ ಆವಶ್ಯಕತೆ) ಸೂಕ್ಷ್ಮ ರೂಪದ್ದಾಗಿ ಮಾತ್ರ ಉಳಿದಿದೆ. ಈ ಕೆಲಸವನ್ನು ಪ್ರಕೃತಿಯೇ ಬಹುಮಟ್ಟಿಗೆ ತನ್ನ ಕೈಗೆ ತೆಗೆದುಕೊಂಡಿದೆ. ಅಭ್ಯಾಸಿಯ ಲಯಾವಸ್ಥೆಯು ಸೂಕ್ಷ್ಮಗತಿಯಲ್ಲಿ ಆಗಿಹೋದಾಗ, ಒಳಗೆ–ಹೊರಗೆ ಎಲ್ಲವೂ ನೀರವತೆ ಆವರಿಸಿಬಿಡುತ್ತದೆ.

ಪ್ರತಿಯೊಂದು ಸ್ಥಿತಿಯ ಅನುಭೂತಿಯೂ ಸಮಾಪ್ತವಾಗಿ ಹೋದಾಗ, ಭಾವವು (Feeling) 'ಅಭಾವ'ವಾಗಿ ಹೋದಾಗ, ಅಭ್ಯಾಸಿಯು 'ಸತ್ಯ' ವಸ್ತುವಿನಲ್ಲಿ (Reality) ಈಜಲು ಆರಂಭಿಸಿದ್ದಾನೆ ಎಂದು ತಿಳಿಯಬೇಕು. ಅದಾದನಂತರ ಉಳಿಯುವುದೆಂದರೆ, ಅಲ್ಲಿಯ ಪರಮಾಣುಗಳೂ ಕರಗಿ ಹೋಗಿ ತಮ್ಮ ಅಸ್ಮಿತೆಯ ಸತ್ಯತೆಯನ್ನು ಕಳೆದುಕೊಳ್ಳುವುದು ಮಾತ್ರ. ನೀನು ಕುಳಿತುಕೊಂಡಾಗಿರಲಿ ಅಥವಾ ಒರಗಿಕೊಂಡಾಗಿರಲಿ, ನಿನ್ನ ಎಲ್ಲ ಅಸ್ವಸ್ಥತೆಗಳೂ ದೂರವಾಗುತ್ತಿವೆಯೆಂದು ನೀನು ಆರೋಗ್ಯವಂತಳಾಗುತ್ತಿರುವಿಯೆಂದು ನನ್ನ ಸಂಕಲ್ಪ ಶಕ್ತಿಯನ್ನು ಪ್ರಯೋಗಿಸುತ್ತಿರಬೇಕು. ನೀನು ನಿನ್ನ (ಆಧ್ಯಾತ್ಮಿಕ) ಶಕ್ತಿಯು ಎಷ್ಟಿದೆಯೆಂಬುದನ್ನು

P-4-Books-PM-7-Anantyatre-170



ಅನುಭವಪಟ್ಟಿಲ್ಲ. ನೀನು ನಿನ್ನ ಈ ಶಕ್ತಿಯನ್ನು ಒಂದು ಕಲ್ಲಿನ ಮೇಲೆ ಕೇಂದ್ರೀಕರಿಸಿದರೆ, ಅದು ಚೂರು ಚೂರಾಗಿ ಹೋಗುವುದು, ಪರ್ವತ ಮತ್ತು ಭೂಮಿ ನಡುಗಲಾರಂಭಿಸುವುವು; ಇನ್ನು ಅನಾರೋಗ್ಯದ ಮಾತೇನು?

ಅಮ್ಮಾಜಿಯವರಿಗೆ ಪ್ರಣಾಮಗಳು

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೧ **ಪತ್ರಸಂಖ್ಯೆ – ೬೭೧** ಷಾಹಜಹಾನಪುರ
೧೭–೦೩–೧೯೫೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಎಲ್ಲ ಪತ್ರಗಳೂ ಕೈ ಸೇರಿದವು. ನಿನ್ನ ಸ್ವಾಸ್ಥ್ಯ ಚೆನ್ನಾಗಿದೆ ಎಂದು ಬರೆದಿದ್ದೀಯೆ. ಅದಕ್ಕಾಗಿ, ಸಂತೋಷದಿಂದ, ನಾನು ನಿನ್ನನ್ನು ಪಿ೧ (P1) ಸ್ಥಾನದಲ್ಲಿ ಇರಿಸಿದ್ದೇನೆ. ಈಗ ಆ ಸ್ಥಾನದ ಯಾತ್ರೆ, ಪ್ರಾರಂಭವಾಗಲಿದೆ. ಬ್ರಹ್ಮ–ವಿದ್ಯೆಯ ದಶೆಯನ್ನು, ಜೀವಂತ ವ್ಯಕ್ತಿಯನ್ನು ಮೃತ ಎಂದು ಕರೆಯುವ ಹಾಗೆ – ಒಂದು ಅಶುಭ ಸಂಕೇತದಿಂದ ವರ್ಣಿಸಿರುವುದೇ ಅತ್ಯಂತ ಒಳ್ಳೆಯ ವರ್ಣನೆಯಾಗುವುದು. ಮತ್ತು ಅದು ಕೆಲಕಾಲ ಇದ್ದು, ನಂತರ ವಿದಾಯ ಹೇಳುವುದು. ಪ್ರತಿಯೊಂದು ಕಣ–ಕಣವೂ ಹಿಂಡಿ ಹಿಪ್ಪೆ ಮಾಡಲ್ಪಟ್ಟಂತಿದೆ ಎಂದು ನೀನು ಬರೆದಿರುವುದು ಸರಿ ಇದೆ. ಪ್ರಪಂಚದ ಪಸೆ (ಹಸಿತನ) ಕಳೆದು ಹೋಗಿ ನಿನ್ನನ್ನು ಶುಷ್ಕಗೊಳಿಸಿಬಿಟ್ಟಿದೆ ಎಂದು ಇದರ ಅರ್ಥ. ನೀನು ಆರಿ ಹೋದ ದೀಪದ ಸಾದೃಶ್ಯ ಕೊಟ್ಟಿದ್ದೀಯೆ; ಆದರೆ, ಅದು ಆರಿಹೋದ ದೀಪವಲ್ಲ, ಬದಲಿಗೆ, ಅದರಿಂದ ನಿಜವಾದ (ದೈವೀ) ಪ್ರಕಾಶ ಹೊರಹೊಮ್ಮುತ್ತಿದೆ. ಅರ್ಥಾತ್, ಉಳಿದೆಲ್ಲ ದೀಪಗಳನ್ನೂ ಜ್ವಲಿಸುವಂತೆ ಮಾಡುವ ಬೆಳಕು ಅದು. ಇನ್ನೊಂದು ಮಾತು, ನಿನ್ನ ಮನೆಯಲ್ಲಿಯೂ ನಿನ್ನಿಂದಾಗಿ ಪ್ರಕಾಶವು ಪಸರಿಸಿದೆ.

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದ. ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ–೧೮೧ **ಪತ್ರಸಂಖ್ಯೆ–೬೭೪** ಷಾಹಜಹಾನಪುರ
೦೭–೦೪–೧೯೫೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,



ನಿನ್ನೆ, ದಿ. ೩೧ ಮಾರ್ಚ್ ೧೯೫೮ರ ಒಂದು ಪತ್ರ ಮತ್ತು ೩ ಏಪ್ರಿಲ್ ೧೯೫೮ರ ಒಂದು ಪೋಸ್ಟ್‌ಕಾರ್ಡ್‌ಗಳು ತಲುಪಿದವು. ನಿನ್ನ ಪೋಸ್ಟ್‌ಕಾರ್ಡ್ ತಲುಪಿದ ಕೂಡಲೇ ನಿನಗೆ ಪ್ರಾಣಾಹುತಿ (Transmission) ಕೊಟ್ಟೆ, ನಿನಗೆ ಒಳ್ಳೆಯ ಅನುಭೂತಿಯಾಗಿರಬಹುದು. ಒಂದು ಆಶ್ಚರ್ಯದ ಮಾತೆಂದರೆ ಜನರು ಈಶ್ವರನೊಂದಿಗೆ ಪ್ರೇಮ ಮಾಡುವುದಿಲ್ಲ, ಅಲ್ಲದೆ, ಒಂದು ವೇಳೆ ಪ್ರೇಮ ಮಾಡಲು ಬಯಸಿದರೂ ಮಾಡಲು ಶಕ್ತರಾಗುವುದಿಲ್ಲ. ಇದರ ಕಾರಣವೇನು ಎಂದು ನೀನು ಯೋಚಿಸಿರುವಿಯೇನು? ನಾನೂ ಅದರ ಬಗ್ಗೆ ಯೋಚಿಸಿಲ್ಲ, ಆದರೆ ಈ ಸಮಯದಲ್ಲಿ ಬಂದ ವಿಚಾರ ಬರೆಯುತ್ತಿದ್ದೇನೆ. ಅವರನ್ನು ಪ್ರಾಪಂಚಿಕತೆಯೊಂದಿಗೆ ಬಂಧಿಸಿ, ಸುತ್ತುವರಿದು ಹಿಡಿದಿರುವ ಈ ಸಂಬಂಧವನ್ನು ಈಶ್ವರನತ್ತ ತಿರುಗಿಸಿ ಗಟ್ಟಿಗೊಳಿಸುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಈ ಸಂಬಂಧದ ಕೊಂಡಿಯನ್ನು ನಾನು ಜೋಡಿಸಬೇಕಾಗುತ್ತದೆ. ಅದಕ್ಕೆ ನಾನು ಪ್ರಯತ್ನವನ್ನೂ ಮಾಡಿದ್ದೇನೆ. ಆದರೆ ನನಗೆ ಏನಾಗಿದೆಯೋ ಗೊತ್ತಿಲ್ಲ; ಆ ದಿಶೆಯಲ್ಲಿ ಈಗ ನಾನು ಹೆಚ್ಚು ಶಕ್ತಿ ವ್ಯಯಿಸುವುದಿಲ್ಲ. ಯಾಕೆಂದರೆ, ನಾನು ಆ ಸಂಬಂಧದ ಕೊಂಡಿಯನ್ನು ಜೋಡಿಸುವುದರ ಪರಿಣಾಮ ಆದದ್ದಿಷ್ಟೆ; ಎಲ್ಲಿಯವರೆಗೆ ಮದ್ಯ ಕುಡಿಸಿದೆನೋ ಅಲ್ಲಿಯವರೆಗೆ ನಶೆ ಇತ್ತು, ಕುಡಿಸುವುದನ್ನು ನಿಲ್ಲಿಸಿದ ಕೂಡಲೆ ಆ ನಶೆ ಮಾಯವಾಗಿ ಹೋಯಿತು. ಅವರು ಆ ದೈವೀ ಪ್ರೇಮೋನ್ಮಾದವನ್ನು (ನಶೆ) ನೋಡಿದ ಮೇಲೆ ಅಂಥದೇ ಸ್ಥಿತಿಯನ್ನು ತಾವು ಉಂಟು ಮಾಡಿಕೊಳ್ಳಲೇ ಇಲ್ಲ.

ನೀನು ತಿಳಿದಂತೆಯೇ, ಸದ್ಗುರುವಿನ ಕೃಪೆಯಿಂದ, ದಕ್ಷಿಣ ಭಾರತದಲ್ಲಿ ಮಿಷನ್ನಿನ ಅಗ್ನಿ ಕಿಡಿಯುಗುಳಿ ಪ್ರಜ್ವಲಿಸಲಾರಂಭಿಸಿದೆ. ಮತ್ತು ಡಾ. ಕೆ. ಸಿ. ವರದಾಚಾರಿಯವರ ಬಳಿಗೆ ಒಳ್ಳೊಳ್ಳೆಯ ಜನರು ಬರಲಾರಂಭಿಸಿದ್ದಾರೆ. ಆಶ್ರಮದ ಕಟ್ಟಡಕ್ಕೋಸ್ಕರ ಸರಕಾರ ತ್ವರೆ ಮಾಡುತ್ತಿದೆ. ಈಶ್ವರನ ಕೃಪೆಯಿಂದ ಅನೇಕ ಜನರು ಅದರ ವ್ಯವಸ್ಥೆ ಮಾಡುತ್ತಿದ್ದಾರೆ. ಒಬ್ಬ ವ್ಯಕ್ತಿ, ಅವನಿಗೆ 'ಚೈನಾ–ಕ್ಲೇ'ಗೆ ಅಧಿಕಾರ ಪತ್ರ (Registration) ಸಿಗುವುದಾದರೆ, ಒಬ್ಬನೇ ಆಶ್ರಮ ಕಟ್ಟಡ ನಿರ್ಮಿಸುವ ಭರವಸೆ ಕೊಟ್ಟನು. ಒಬ್ಬ ನಿವೃತ್ತ ಡೆಪ್ಯುಟಿ ಕಲೆಕ್ಟರ್ ಹೋಗಿ ಆ ಕೆಲಸ ಮಾಡಿಸಿಕೊಟ್ಟರು. 'ಹಿಂದೂ' ಪತ್ರಿಕೆಯ ಸಹಾಯಕ ಸಂಪಾದಕರೊಬ್ಬರು ಸತ್ಸಂಗ ಸೇರಿಕೊಂಡಿದ್ದಾರೆ. ಮೂರು–ನಾಲ್ಕು ಬೈಠಕ್‌ಗಳನ್ನು ತೆಗೆದುಕೊಂಡ ನಂತರ ಅವರಿಗೆ ಏಪ್ರಿಲ್ ೭ನೆಯ ತಾರೀಖು ಅಮೆರಿಕಾಕ್ಕೆ ಹೋಗಬೇಕಾಗಿದೆ. ಕೆಲದಿನಗಳ ನಂತರ ಅವರು ಅಮೇರಿಕೆಗೆ ಹೋಗುವುದು ಒದಗಿ ಬಂದಿದ್ದರೆ, ಕೆಲಮಟ್ಟಿಗೆ ಮಿಷನ್ನಿನ ಪ್ರಚಾರಕಾರ್ಯ ನಡೆಯುತ್ತಿತ್ತು. ಏನೇ ಇರಲಿ, ನಾನು 'ಸತ್ಯೋದಯ'ದ (Reality at dawn) ಆರು ಪ್ರತಿಗಳನ್ನು ಅವರಿಗೆ ಕಳುಹಿಸಿದ್ದೇನೆ.

ಈಗ ನಿನ್ನ ಆಧ್ಯಾತ್ಮಿಕ ಸ್ಥಿತಿಯ ಬಗ್ಗೆ ಹೇಳುತ್ತೇನೆ. ನಿನ್ನ ಯಾತ್ರೆಯ ಸ್ಥಾನ ಈ ಪಿ೧ (P1) ಆದರೆ, ಇನ್ನೂ, ಕ್ರಮಣ ಪ್ರಾರಂಭವಾಗಿಲ್ಲ. ಅದೂ ಕೂಡ ಆಗುವುದು. ನಿನ್ನ ಆರೋಗ್ಯದ ಕಾಳಜಿಯ ಕಾರಣ, ಸ್ವಾಭಾವಿಕ ರೀತಿಯಲ್ಲಿ

P-4-Books-PM-7-Anantyatre-171



ಸ್ವಲ್ಪ–ಸ್ವಲ್ಪವಾಗಿ ಮಾಡುತ್ತೇನೆ. ಈಗ ನೀನು ಕೂಡ ನಿನ್ನ ಆರೋಗ್ಯ ಸುಧಾರಿಸಿ ಆರಾಮವಾಗುತ್ತಿದೆ, ಮತ್ತು ಖಂಡಿತ ಸ್ವಸ್ಥಳಾಗುತ್ತ ಇದ್ದೀಯೆ. ಎಂದು ಸಂಕಲ್ಪವನ್ನು ಸ್ಥಿರಗೊಳಿಸು. ನಿನಗೆ ಯಾವ ಖಾದ್ಯವನ್ನಾದರೂ ತಿನ್ನಬೇಕೆನಿಸಿದಾಗ, ನೀನೇ ತಿನ್ನುವ ಬದಲಿಗೆ, ಬೇರೆಯವರಿಗೆ ಅದನ್ನು ತಿನ್ನಿಸಿದಾಗ ನಿನಗೆ ಅಷ್ಟೇ ಸಂತೋಷವಾಗುತ್ತದೆ ಎಂದು, ಮಾರ್ಚ್ ೩೧ರ ಪತ್ರದಲ್ಲಿ ಬರೆದಿದ್ದೀಯೆ. ನನ್ನ ಸ್ಥಿತಿಯೂ ಅನೇಕ ವರ್ಷಗಳಿಂದ ಹೀಗೆಯೇ ನಡೆಯುತ್ತಿದೆ. ನೀನು ಬರೆದಾಗ, ಅದು ನನಗೂ ಜ್ಞಾಪಕಕ್ಕೆ ಬಂದಿತು. ಏಕತ್ವದ ಭಾವ ಉಂಟಾಗಿದೆ ಮತ್ತು ನಿನ್ನದೇ ಆದ ಇಚ್ಛೆ ಯಾವುದೂ ಬಾಕಿ ಉಳಿದಿಲ್ಲ– ಎಂದು ಇದರ ಅರ್ಥ. ಮಿಷನ್ನನ್ನು ಪ್ರಸಾರ ಮಾಡಲು ನಿನಗೆ ತೀವ್ರ ಇಚ್ಛೆ ಉಂಟಾಗಿದೆ; ಅದರ ಕಾರಣ ಬಹಳ ಸರಳವಿದೆ– ನೀನು ಉತ್ತಮ ಲಯಾವಸ್ಥೆಯನ್ನು ಉಂಟು ಮಾಡಿಕೊಂಡಿದ್ದೀಯೆ. ಆದ್ದರಿಂದ ನನ್ನಲ್ಲಿರುವ ಈ ಉತ್ಕಟತೆ ನಿನ್ನಲ್ಲಿ ಉಂಟಾಗುತ್ತಿದೆ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೩ **ಪತ್ರಸಂಖ್ಯೆ – ೬೭೬** ಷಾಹಜಹಾನಪುರ
೧೬–೦೪–೧೯೫೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಎರಡು ಪತ್ರಗಳು ಅಂಚೆಯ ಮೂಲಕ ಮತ್ತು ಒಂದು ಪತ್ರ ಕೈಯಿಂದ ಕಳುಹಿಸಿರುವುದು ಬಂದು ತಲುಪಿವೆ. ನೀನು ಖಂಡಿತ ಸ್ವಾಸ್ಥ್ಯ ಮರಳಿ ಪಡೆದೇ ತೀರುವೆ ಎಂದು ನೀನು ಬರೆದಿರುವುದು, ನನಗೆ ಬಹಳ ಸಂತೋಷವಾಯಿತು.

ನಿನ್ನಲ್ಲಿ ಈಗ, ವಾತಾವರಣದಲ್ಲಿ ಇಚ್ಛಿತ ಸ್ಥಿತಿಯನ್ನು ಉಂಟುಮಾಡುವ ಸಾಮರ್ಥ್ಯ ಇದೆ ಎಂಬ ನಿನ್ನ ವಿಚಾರ ಸರಿ ಇದೆ. ಯಾಕೆಂದರೆ, ನಿನಗೆ ಬ್ರಹ್ಮಾಂಡಮಂಡಲದ ಮೇಲಿನ ಪ್ರಭುತ್ವವನ್ನು ಕೊಡಲಾಗಿದೆ. ನಿನ್ನ ಶುದ್ಧ ಸ್ಥಿತಿಯಂತೂ ನಡೆಯುತ್ತಲೇ ಇದೆ. ಆದರೆ ನೀನು ಇನ್ನೂ ಶುದ್ಧ, ಅಶುದ್ಧ ಎಂಬ ಭಾವನೆಗೆ ಕಟ್ಟುಬಿದ್ದಿದ್ದೀಯೆ. ಅಲ್ಲಿ, ಶುದ್ಧತೆಯೂ ಇಲ್ಲ, ಅಶುದ್ಧತೆಯೂ ಇಲ್ಲ. ಈಗ ನೀನು ಲಯಾವಸ್ಥೆಯ ಹೊಸ ದಶೆಯಲ್ಲಿ ನಿಂತಿದ್ದೀಯೆ ಎಂಬ ನಿನ್ನ ವಿಚಾರ ಸರಿ ಇದೆ. ನಿನ್ನ 'ಆತ್ಮ–ಪ್ರಜ್ಞೆ' (Soul consciousness) ಲಯವಾಗಿ ಹೋಗಿರುವುದರ ಸಂಕೇತ ನಿನಗೆ ಶೀಘ್ರವೇ ಸಿಗಲಿಕ್ಕಿದೆ; ನೀನು ಅದರ ಬಾಗಿಲಿನಲ್ಲಿದ್ದೀಯೆ. ಇದು ಏಪ್ರಿಲ್ ೧೧ರ ನಿನ್ನ ಪೋಸ್ಟ್ ಕಾರ್ಡಿಗೆ ಉತ್ತರ.

ಅಮ್ಮಾಜಿಯವರಿಗೆ ಪ್ರಣಾಮ

ಶುಭಚಿಂತಕ
ರಾಮಚಂದ್ರ



* * * *

ಕ್ರಮಸಂಖ್ಯೆ – ೧೮೪ **ಪತ್ರಸಂಖ್ಯೆ – ೬೭೯** ಷಾಹಜಹಾನಪುರ
೨೭–೦೪–೧೯೫೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನೀನು ಕುಶಲವಾಗಿ ದಿಲ್ಲಿಗೆ ತಲುಪಿರಬಹುದು ಮತ್ತು ಇಳಿಯುತ್ತಲೇ, ಕೂಡಲೇ ಆಸ್ಪತ್ರೆಯ ವಾರ್ಡಿನಲ್ಲಿ ಪ್ರವೇಶವೂ ಆಗಿರಬಹುದು. ನಾನು ನಿನ್ನನ್ನು ವನವಾಸಕ್ಕೆ ಕಳುಹಿಸಿದ್ದೇನೆ; ಅದರಿಂದ ನೀನು ಅಳಿದುಳಿದ ನಿನ್ನ ಅಸ್ವಸ್ಥತೆಯನ್ನು ಅಲ್ಲಿ ನಿಃಶೇಷಗೊಳಿಸಬಹುದು. ನೀನು ಧೈರ್ಯದಿಂದಿರಬೇಕು. ಮತ್ತು ಎಲ್ಲರೂ ಪ್ರತಿಯೊಂದು ಸಂದರ್ಭದಲ್ಲಿಯೂ ಸಂತೋಷದಿಂದಿರಬೇಕು.

ನಿನ್ನ ಆಧ್ಯಾತ್ಮಿಕ ದಶೆಗಳು (ಹಂತಗಳು) ಈಶ್ವರೇಚ್ಛೆಯಿದ್ದರೆ, ಅಂತೆಯೇ ಮುಂದುವರಿಯುತ್ತಿರುತ್ತವೆ; ಮತ್ತು ಹೃದಯದಲ್ಲಿ ನೆಮ್ಮದಿ ನೆಲೆಸಿರುತ್ತದೆ. ನಿನಗೆ ಏನಾದರೂ ಕಷ್ಟ (ತೊಂದರೆ) ಅನಿಸಿದರೆ, 'ಪ್ರಾರ್ಥನೆ'ಯ ಅಸ್ತ್ರವಂತೂ ನಿನ್ನ ಕೈಯಲ್ಲಿದೆ. ಅದರಿಂದ ಪ್ರತಿಯೊಂದು ಸ್ಥಿತಿಯೂ ಸರಿ ಹೋಗುವುದು.

ಶುಭಚಿಂತಕ
ರಾಮಚಂದ್ರ

# ಅನಂತ ಯಾತ್ರೆ

## ಭಾಗ ೫

(೨೦ ಮೇ ೧೯೫೫ ರಿಂದ ೧೬ ಜುಲೈ ೧೯೭೩)

P-4-Books-PM-7-Anantyatre-173



# ಎರಡು ಮಾತು

## (ಭಾಗ ೫ಕ್ಕೆ) (ಹಿಂದಿ ಆವೃತ್ತಿಗೆ ಬರೆದದ್ದು)

ಶ್ರೀ ಬಾಬೂಜಿಯವರ ಕೃಪೆಯಿಂದ ಪುಸ್ತಕರೂಪದಲ್ಲಿ ಪರಿಪೂರಿತವಾಗಿ, 'ಅನಂತ ಯಾತ್ರೆ'ಯು ಸಂಪನ್ನವಾಗಿ, ಸದ್ಗುರುವಿನ ಚರಣಗಳಲ್ಲಿ ಸಮರ್ಪಿತವಾಗಿದೆ, ಎಂಬುದನ್ನು ಬರೆಯುತ್ತಿರುವಾಗ, ನನಗೆ ಅತೀವ ಪ್ರಸನ್ನತೆಯ ಅನುಭೂತಿಯಾಗುತ್ತಿದೆ. ಅದು, ಅಸ್ತಿತ್ವ–ವಿಹೀನವಾಗಿ ಎಂಬಂತೆ ಸಮಸ್ತ ಮಾನವ ಕೋಟಿಗೆ ನಮ್ಮ ಶ್ರೀ ಬಾಬೂಜಿಯವರ ಮಂಗಲಮಯ–ದೈವಿಕ–ನಿಮಂತ್ರಣ ವಾಗಿರುವುದೆನ್ನಬಹುದು. 'ಅನಂತಯಾತ್ರೆ'ಯಲ್ಲಿ, ನನ್ನ ಮತ್ತು ನನ್ನ ಪೂಜ್ಯ ಶ್ರೀ ಬಾಬೂಜಿಯವರ ಮಧ್ಯೆ ನಡೆದ ಪತ್ರ ವ್ಯವಹಾರದಲ್ಲಿ, ಲಭ್ಯವಿರುವಷ್ಟನ್ನು ಇಲ್ಲಿ ಕೊಡಲಾಗಿದೆ. ಅವರ ಕೃಪೆಯ ಅನಂತಧಾರೆಯಲ್ಲಿ ತೊಯ್ದು ಹೋದ ನನ್ನ 'ಅನಂತಯಾತ್ರೆ'ಯ ಆದಿ–ಅಂತ್ಯಗಳು ಶ್ರೀ ಬಾಬೂಜಿಯವರ ಚರಣ ಸಾನ್ನಿಧ್ಯವನ್ನು ಹೊಂದಿ ಅನಂತವಾಗಿ ಬಿಟ್ಟಿವೆ. ಈ ಪತ್ರ–ವ್ಯವಹಾರಕ್ಕೆ **'ಅನಂತ ಯಾತ್ರೆ'** ಎಂಬ ಹೆಸರನ್ನೂ ಅವರೇ ಕೊಟ್ಟಿದ್ದರು. ಅಂತೆಯೇ, ಅವರ ಇಚ್ಛಾನುಸಾರವಾಗಿ, 'ಅನಂತ ಯಾತ್ರೆ'ಗೆ ಪುಸ್ತಕ ರೂಪ ಕೊಡಲಾಗಿದೆ. 'ಅನಂತಯಾತ್ರೆ'ಯನ್ನು ಓದುವವರ ಹೃದಯದಲ್ಲಿ ಶ್ರೀ ಬಾಬೂಜಿಯವರ ಅನಂತ ಕೃಪಾಧಾರೆ ಪ್ರವಹಿಸುವುದೆಂಬುದು ನನ್ನ ಹಾರ್ದಿಕ ಅಭಿಲಾಷೆಯಾಗಿದೆ. ನನ್ನ ಈ ಎರಡು ಮಾತುಗಳು ಮತ್ತು ಲೆಕ್ಕಣಿಕೆ, ಅವರ ದಿವ್ಯ ಮಹಿಮೆಯ ವರ್ಣನೆಯ ಅನುಪಮ ಗೌರವದಿಂದ ಸಾರ್ಥಕ್ಯ ಪಡೆದಿವೆ.

" 'ಅನಂತಯಾತ್ರೆ'ಯ ಎರಡು ಮಾತುಗಳಲ್ಲಿ, ಕೊನೆಯದಾಗಿ **'ಕೆ'** (K) ಬಿಂದು ಮತ್ತು ವಾಯ್ (Y) ಬಿಂದುಗಳ ವಿಶೇಷತೆಯನ್ನು ಕುರಿತು ಕೊನೆಯ ಎರಡು ಮಾತುಗಳು. **'ಕೆ'** (K) ಬಿಂದುವಿನಲ್ಲಿ ನಿನಗೆ ಪ್ರವೇಶ ಮಾಡಿಸಿದಾಗ, ನಿನ್ನ ಬ್ರಹ್ಮರಂಧ್ರವು ತೆರೆದುದನ್ನು ನಾನು ಕಂಡೆ; ಅದು ಆತ್ಮ ಪ್ರವೇಶ ದ್ವಾರ, ಹಾಗೂ ನಿರ್ಗಮನ ದ್ವಾರವೂ ಹೌದು. ಆದುದರಿಂದ, ನಾನು ನಿನ್ನನ್ನು ನನ್ನ ಆತ್ಮದೊಳಗೆ ತೆಗೆದುಕೊಂಡು– ಒಂದು ಜಿಗಿತದಿಂದೆಂಬಂತೆ–ಬ್ರಹ್ಮರಂಧ್ರವನ್ನು ದಾಟಿಸಿ 'ಎಲ್' (L) ಬಿಂದುವಿನಲ್ಲಿ ಸ್ಥಿತಗೊಳಿಸಿದೆ." ಎಂದು ಶ್ರೀ ಬಾಬೂಜಿ ಬರೆದಿದ್ದರು. ಅಲ್ಲದೆ, "ಇಲ್ಲಿಗೆ 'ಬಿಂದು'ಗಳ ಅನುಸಂಧಾನವು ಸಂಪನ್ನವಾಯಿತು, ಮತ್ತು 'ಕೇಂದ್ರ ಮಂಡಲ' ಎದುರಿನಲ್ಲಿದೆ' – ಎಂದೂ ಬರೆದಿದ್ದರು.

ಅಕ್ಕ ಕೇಸರ್ ಬಹೆನ್‌ರವರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಇಲ್ಲಿಯವರೆಗೆ ಮುದ್ರಣಗೊಂಡ ನನ್ನ ಎಲ್ಲ ಹಿಂದಿ ಮತ್ತು ಇಂಗ್ಲೀಷ್ ಪುಸ್ತಕಗಳ



ಶುದ್ಧ ಪ್ರತಿ ಮಾಡುವ ಪರಿಶ್ರಮದ ಕಾರ್ಯವನ್ನು ಅವರು ದಣಿವರಿಯದೆ ಮಾಡಿದ್ದಾರೆ. ನನ್ನ ಸೋದರ, ಈ ಪುಸ್ತಕಗಳನ್ನು ಗೌರವಿಸಿ, ತಮ್ಮ ಸ್ವಂತ ಪ್ರಕಾಶನದ ಹೆಸರಿನಿಂದ ಮುದ್ರಿಸಿದ್ದಾರೆ. ಅವರಿಗೂ ನಾನು ಆಭಾರಿಯಾಗಿದ್ದೇನೆ. ಜಗತ್ತಿನಲ್ಲಿ ಎಲ್ಲರ ಹೃದಯಗಳಲ್ಲಿಯೂ ಶ್ರೀ ಬಾಬೂಜಿಯವರ ಕೃಪೆಯು ಪಸರಿಸಲಿ ಎಂದು ಸಮಸ್ತ ಮಾನವ ಕೋಟಿಯ ಪರವಾಗಿ ನಾನು ಸದ್ಗುರುವಿನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಬಾಬೂಜಿಯವರ ಸೇವೆಯಲ್ಲಿ ಸದಾ ಸಮರ್ಪಿತ

**– ಕಸ್ತೂರಿ**

P-4-Books-PM-7-Anantyatre-174



ಕ್ರಮಸಂಖ್ಯೆ – ೧೮೫ **ಪತ್ರಸಂಖ್ಯೆ – ೭೦೩** ಬಳ್ಳಾರಿ ಕ್ಯಾಂಪ್
೨೦–೫–೧೯೫೫

ಪ್ರಿಯಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಗುಲಬರ್ಗಾದಲ್ಲಿಯೇ ಸಿಕ್ಕಿತ್ತು. ನಾನು ನಾಲ್ಕೈದು ಸ್ಥಳಗಳನ್ನು ಸುತ್ತುತ್ತ ಬಳ್ಳಾರಿಗೆ ತಲುಪಿದೆ. ಬಳ್ಳಾರಿಯಿಂದ ತಿರುಪತಿಗೆ ಮೇ ೧೨ಕ್ಕೆ ಹೋಗುತ್ತೇನೆ. ತಾ. ೩೧ಕ್ಕೆ ಮದ್ರಾಸ್ ಎರಡು ದಿವಸ ಮತ್ತು ತ್ರಿಚನಾಪಳ್ಳಿ ೪ ದಿವಸ, ವಾಪಸು ಬರುವಾಗ ೨ ದಿವಸ ಮದ್ರಾಸಿನಲ್ಲಿ ಮತ್ತು ೫ ದಿವಸ ವಿಜಯವಾಡಾದಲ್ಲಿ ಇದ್ದು, ಷಾಹಜಹಾನ್‌ಪುರಕ್ಕೆ ಹಿಂದಿರುಗುತ್ತೇನೆ. ಶ್ರೀ ರಾಘವೇಂದ್ರ ರಾಯರ ಬ್ರಾಂಚಿನಲ್ಲಿ ಸುಮಾರು ೭೦ ಜನರಾಗಿದ್ದಾರೆ; ಮತ್ತು ಸಂಖ್ಯೆ ಹೆಚ್ಚುವ ಭರವಸೆ ಇದೆ.

ದಿನಾಂಕ ೨ ಮೇ ೧೯೫೫ರಂದು ನಾನು ನಿನ್ನನ್ನು S1 (ಎಸ್ ೧) ಸ್ಥಾನದಲ್ಲಿ ಇರಿಸಿದ್ದೇನೆ. ನೀನು ಇಲ್ಲಿಯ ಸ್ಥಿತಿಯನ್ನೇ 'ಸರಳತೆ'ಯ ರೂಪದಲ್ಲಿ ಬರೆದಿದ್ದೀಯೆ. ಈ ಸರಳತೆಯೂ ಅಂತ್ಯಗೊಳ್ಳಲಿದೆ. ಈಗ ನಿನಗೆ ದಣಿವಿನ ಅನುಭವವಾಗಲಿಕ್ಕಿಲ್ಲ. ಚೌಬೇಜಿಯವರ ಆರೋಗ್ಯ ಚೆನ್ನಾಗಿದೆಯೆಂದು ತಿಳಿದು ಸಂತೋಷವಾಯಿತು.

ಅಮ್ಮಾಜಿಯವರಿಗೆ ಪ್ರಣಾಮಗಳು, ನಿನ್ನ ಸೋದರ, ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೬ **ಪತ್ರಸಂಖ್ಯೆ – ೭೧೨** ಮದ್ರಾಸ್
೦೮–೦೮–೧೯೫೫

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ದಿ. ೧–೮–೫೫ರ ನಿನ್ನ ಪತ್ರ ತಲುಪಿತು. ಓದಿ ಹರ್ಷವೆನಿಸಿತು. ಕಣ–ಕಣವೂ ಈಶ್ವರನ ಸ್ಮರಣೆಯಲ್ಲಿರುವುದು ಅನುಭವವಾಗುತ್ತಿದೆ ಎಂದು ನಿನ್ನ ಸ್ಥಿತಿಯನ್ನು ಬರೆದಿದ್ದೀಯೆ. ಇದು ಹೃದಯದ ನಾಲ್ಕನೆಯ ಸ್ಥಿತಿ. ಈಯೆಲ್ಲ ಸ್ಥಿತಿಗಳು, ಹೃದಯದ ಎಲ್ಲ ಸ್ಥಳಗಳಲ್ಲಿ ತಿರುಗಿ ಮತ್ತೆ ಮತ್ತೆ ಬರುತ್ತಿರುತ್ತವೆ. ಮತ್ತೆ, ಈ ಸ್ಥಿತಿಗಳು ಇರುತ್ತಿದ್ದರೂ, ಮುಂದೆ ಹೋದ ಮೇಲೆ ಅನುಭೂತಿಗೆ ಬರುವುದಿಲ್ಲ. ನಾನು ನಿನ್ನ ಪತ್ರಗಳ ಉತ್ತರವನ್ನು ಏಕೆ ಕೊಡುತ್ತಿಲ್ಲ ಎಂದರೆ, ಈಗ ನಿನ್ನ ಸ್ಥಿತಿಯನ್ನು ವಿವರಿಸುವುದು ಬಹಳ ಕಷ್ಟ. ನೀನು ಲಖ್ನೌಗೆ ಹೋಗಿದ್ದರೆ, ಷಾಹಜಹಾನಪುರಕ್ಕೆ ಬರುವುದು ಸಹಜವೇ.

ನಿನ್ನ ಚಿಕ್ಕಪ್ಪ (ಜಡ್ಜ್‌ಸಾಹೇಬ) ನಿವೃತ್ತಿಯಾದಾಗಿನಿಂದ ಬಹಳ ಪರಿಶ್ರಮ ಪಡುತ್ತಿದ್ದಾರೆ, ಮತ್ತು ಪ್ರೇಮ ಬೆಳೆಸಿಕೊಳ್ಳುತ್ತಿದ್ದಾರೆ. ಅಲಹಾಬಾದಿನಲ್ಲಿ ಅವರಿಗೆ



ಕೆಲವು ಸತ್ಸಂಗಿಗಳು ದೊರೆತರೆ, ನಾನು ಅವರಿಂದ ಆಧ್ಯಾತ್ಮಿಕ ಶಿಕ್ಷಣದ ಕೆಲಸ ತೆಗೆದುಕೊಳ್ಳುವೆ. ಆದರೆ, ಪಾಪ, ಅವರು ಎಷ್ಟು ಸಾದಾ ವ್ಯಕ್ತಿಯೆಂದರೆ, ಅವರು ಸತ್ಸಂಗಿಗಳನ್ನು ಮಾಡಲಾರರು; ಅಲ್ಲದೆ, ಅವರ ಸಂಪರ್ಕವಿರುವ ಉಚ್ಚ ವಲಯಗಳಲ್ಲಿ, ಶಿಕ್ಷಣ ತೆಗೆದುಕೊಳ್ಳುವವರು ಸಿಗುವುದು ಕಡಿಮೆಯೇ ಸರಿ.

ಚೌಬೇಜಿ ಮತ್ತು ಅಮ್ಮಾಜಿಯವರಿಗೆ ವಂದನೆಗಳು. ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೭ **ಪತ್ರಸಂಖ್ಯೆ – ೭೧೪** ಷಾಹಜಹಾನಪುರ
೨೮–೦೯–೧೯೫೫

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಎರಡು ಪತ್ರಗಳು ಬಂದಿವೆ. ಈಶ್ವರನ ಕೃಪೆಯಿಂದ ನಿನ್ನ 'ಸ್ಥಿತಿ' ಚೆನ್ನಾಗಿದೆ. ನಾನು ನಿನ್ನನ್ನು ಒಂದೊಂದೇ ಬಿಂದುವಿನ ಮೂಲಕ ಕರೆದೊಯ್ಯುತ್ತಿದ್ದೇನೆ. (ಮನಸ್ಸಿನ ಮೇಲೆ) ಒತ್ತಡ ಬೀಳಬಾರದೆಂಬ ಕಾರಣ, ಒಮ್ಮೆಲೇ ಮುಂದಕ್ಕೊಯ್ಯುತ್ತಿಲ್ಲ. ಮುಂದೆ–ಮುಂದಕ್ಕೆ ಹೋದಹಾಗೆ, ಸದಾಕಾಲ ಪೂಜೆಯಲ್ಲಿ (ಧ್ಯಾನದಲ್ಲಿ) ಇದ್ದೂ, ಪೂಜೆಯಿಂದ ಪೃಥಕ್ ಆಗಿ ಇರುತ್ತೀಯೆ. ಎಲ್ಲಿ ದ್ವೈತವಿರುವುದೋ ಅಲ್ಲಿ ಮಾತ್ರ ಪೂಜೆ (ಧ್ಯಾನ) ಇರುವುದು ಸಾಧ್ಯ. ಎಲ್ಲಿ ಒಂದೇ ಭಾವವಿರುವುದೋ ಅಲ್ಲಿ ಪೂಜೆ ಇರುವುದೆಂತು? (ಯಾರ ಪೂಜೆ ಮಾಡಬೇಕು?); ಅದು ನಮ್ಮದೇ ಪೂಜೆಯಾಗಿ ಬಿಡುತ್ತದೆ.

ಅಮ್ಮಾಜಿ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೮ **ಪತ್ರ ಸಂಖ್ಯೆ – ೭೨೧** ಬಳ್ಳಾರಿ ಕ್ಯಾಂಪ್
೦೩–೧೨–೧೯೫೫

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಗುಲಬರ್ಗಾದಲ್ಲಿ ಕೈ ಸೇರಿತು. ಇಲ್ಲಿ ಪ್ರತಿಯೊಂದು ಕೇಂದ್ರದಲ್ಲಿಯೂ ಸತ್ಸಂಗಿಗಳ ಸಂಖ್ಯೆ ಒಂದಿಷ್ಟಾದರೂ ಹೆಚ್ಚಾಗಿದೆ. ಗುಲಬರ್ಗಾ ಮತ್ತು ಸೇಡಂಗಳಲ್ಲಿ ಸಂಖ್ಯೆ ೧೦೦ಕ್ಕೂ ಮಿಕ್ಕಿದೆ. ನಿನ್ನ ಆಧ್ಯಾತ್ಮಿಕ ದಶೆ ಬಹಳ ಶುಭ್ರವಾಗಿ ಕಂಡುಬರುತ್ತದೆ.

P-4-Books-PM-7-Anantyatre-175



ನನ್ನ ಕಾರ್ಯಕ್ರಮ ಎರಡು ತಿಂಗಳುಗಳದ್ದಿತ್ತು. ಮೊಕದ್ದಮೆಗಳ ನಿಮಿತ್ತ ಅದನ್ನು ಕಡಿತಗೊಳಿಸಿ, ಒಂದೇ ತಿಂಗಳಲ್ಲಿ ಪೂರೈಸಬೇಕು. ಅನೇಕ ಸ್ಥಳಗಳಿಗೆ ನಾನು ಹೋಗಬೇಕೆಂದಿದ್ದೆ, ಆದರೆ ಈಗ ಹೋಗುವುದಿಲ್ಲ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೮೯ **ಪತ್ರ ಸಂಖ್ಯೆ – ೭೩೦** ಷಾಹಜಹಾನ್‌ಪುರ
೨೭–೦೨–೧೯೬೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿತು. ಈಶ್ವರನಿಗೆ ಧನ್ಯವಾದಗಳು, ದಕ್ಷಿಣದಲ್ಲಿ 'ಸಹಜಮಾರ್ಗ' ಪಸರಿಸಲಾರಂಭಿಸಿದೆ. ಆದರೆ ಮದ್ರಾಸ್ ಹಾಗೂ ದಕ್ಷಿಣದಲ್ಲಿ ಅಷ್ಟು ಒಳ್ಳೆಯ ಸಫಲತೆ ದೊರೆತಿಲ್ಲ. ಮದ್ರಾಸಿನಲ್ಲಿ ನನ್ನ ಬಗ್ಗೆ ತಿಳಿದ ಜನರು ೩೦–೪೦ ಇರಬಹುದಷ್ಟೆ. ಮತ್ತು ಇಲ್ಲಿ, ಜನರು ದೇಶದಲ್ಲಿಯೇ ಅತಿಶಯ ಸಂಪ್ರದಾಯ ಬದ್ಧರು (rigid). ಯಾರಾದರೂ ಪತ್ರಿಕಾ ಸಂಪಾದಕ ನಮ್ಮ ಸತ್ಸಂಗಿಯಾಗಲಿ ಎಂದು ನಾನು ಬಯಸುತ್ತೇನೆ. ಏನೇ ಇದ್ದರೂ, ಒಬ್ಬ ಕನ್ನಡ ಪತ್ರಿಕಾ ಸಂಪಾದಕ ಮತ್ತು ಅವರ ಧರ್ಮಪತ್ನಿ ಸತ್ಸಂಗಿಗಳಾಗಿದ್ದಾರೆ. ಇಬ್ಬರ ಪತ್ರಗಳೂ ಬರುತ್ತಿವೆ. ಅವು ಬಹಳ ಪ್ರೇಮಪೂರ್ಣ ಪತ್ರಗಳು. ಅದೇ ಪತ್ರಿಕೆಯಲ್ಲಿ ಸರ್ನಾಡ್‌ಜಿಯವರ 'ಪ್ರಾಣಾಹುತಿ (Transmission) ಎಂಬ ಲೇಖನ ಪ್ರಕಟವಾಗಿದೆ. ಅದರಿಂದ ಆ ಸಂಪಾದಕರ ಮೇಲೆ ಒಳ್ಳೆಯ ಪ್ರಭಾವ ಬಿದ್ದಿತು. ಅವರು ಆ ಪತ್ರಿಕೆಯಲ್ಲಿ ಆಗಾಗ ಲೇಖನಗಳನ್ನು ಕೊಡುತ್ತಿರುತ್ತಾರೆ. ಆ ಪತ್ರಿಕೆ ಧಾರವಾಡದಿಂದ ಹೊರಡುತ್ತದೆ.

ಒಂದು ಮಾತು, ಅದನ್ನು ಲಾಲಾಜಿ ಸಾಹೇಬರು ನನಗೆ ಹೇಳಿದ್ದರು; ದಕ್ಷಿಣ ಭಾರತ ಎಷ್ಟು ತೀವ್ರಗತಿಯಿಂದ ಪ್ರಗತಿ ಹೊಂದುತ್ತಿರುವುದೋ ಆ ಪ್ರಮಾಣದಲ್ಲಿ ಉತ್ತರ ಭಾರತದಲ್ಲಿ ಅಭ್ಯಾಸಿಗಳು ಪ್ರಗತಿ ಹೊಂದುತ್ತಿಲ್ಲ. ಅಲ್ಲಿ ಮೂವರು ಕೇಂದ್ರಮಂಡಲವನ್ನು ತಲುಪಿದ್ದಾರೆ; ಅವರಲ್ಲಿ ಇಬ್ಬರು ತಾವಾಗಿಯೇ ಕೇಂದ್ರಮಂಡಲದಲ್ಲಿ ಪ್ರವೇಶಿಸಿದರೆ, ಒಬ್ಬರನ್ನು ನಾನು ಕಳುಹಿಸಿದ್ದೇನೆ. ದಕ್ಷಿಣ ಭಾರತದಲ್ಲಿ ನಾಲ್ಕನೆಯವರು, ಕೇಂದ್ರ ಮಂಡಲದಿಂದ ಬಹುದೂರ ಇದ್ದಾರಾದರೂ, ತೀವ್ರ ಮುಂದುವರಿಯುವ ತಯಾರಿ ಮಾಡುತ್ತಿದ್ದಾರೆ. ಅಲ್ಲಿಂದ ಉತ್ತಮ (ಆಧ್ಯಾತ್ಮಿಕ ಪ್ರಗತಿಯ) ಸಮಾಚಾರ ಬರುತ್ತಿದೆ, ಆದರೆ ಇಲ್ಲಿ ಹಾಗೆ ಸಿಗುತ್ತಿಲ್ಲ. ಚೌಬೇಜಿ ಬುದ್ಧಿವಂತ ವ್ಯಕ್ತಿ. ಅದರ ಕಾರಣವೇನೆಂದು ನನಗೆ ತಿಳಿಸಲು ನನ್ನ ಪರವಾಗಿ ಅವರನ್ನು ಕೇಳಿಕೋ. ಹೀಗೆ ನಿನ್ನನ್ನು ನಾನು ಕೇಳಬಯಸುವುದಿಲ್ಲ, (ಕೇಳಿದರೆ ತಪ್ಪೇನಿಲ್ಲವೆನ್ನು) ಯಾಕೆಂದರೆ ನೀನು, ನನಗೆ ತಿಳಿದಿರುವ ಉತ್ತರವನ್ನೇ ಕೊಡುತ್ತೀಯೆ.



ನೀನು 'ಯು'೧ (U1) ಬಿಂದುವಿಗೆ ತಲುಪಿದ್ದೀಯೆ. ನಿನ್ನ ಆಧ್ಯಾತ್ಮಿಕ ಸ್ಥಿತಿಯನ್ನು ವಿವರಿಸುವಾಗ, ಅದು 'ಶೂನ್ಯ–ಸಮಾಧಿ'ಯ ಸ್ಥಾನವೆಂಬ ನಿರ್ಣಯಕ್ಕೆ ತಲುಪಿದ್ದೇನೆ. ಗುರುನಾನಕರು– "ನಾನಕ ಶೂನ್ಯ ಸಮಾಧಿ ಮೇ ನಹಿ ಸಾಂಝ್ ನಹಿ ಭೋರ್' (ಓ ನಾನಕ್, ಶೂನ್ಯ–ಸಮಾಧಿಯಲ್ಲಿ ಸಂಜೆಯೂ ಇಲ್ಲ, ಮುಂಜಾವವೂ ಇಲ್ಲ"– ಎಂದು ಬರೆದಿದ್ದಾರೆ. ಮುಂದಕ್ಕೆ ಹೋಗಲು, ಇರುವುದೇನು? ಪ್ರತಿಯೊಂದೂ ಕರಗಿ ಕರಗಿ ಲಯವಾಗಿ ಹೋಗುವುದಿದೆ. ಲಯಾವಸ್ಥೆಯು ಎಲ್ಲಿಯವರೆಗೆ ಬೆಳೆಯುತ್ತದೆಂದರೆ, ಜ್ಞಾನ, ಬುದ್ಧಿ ಮತ್ತು ಭಾವನೆಗಳು (emotions) ಎಲ್ಲವೂ, ಅನುಭವವೂ ಕೂಡ ಲಯವಾಗಿ ಹೋಗುತ್ತವೆ; ಆದರೆ, (ಹಾಗೆ ಆಗುವುದು) ಬಹಳೇ ಉನ್ನತ ಸ್ಥಿತಿಯಲ್ಲಿ. ಮತ್ತೆ, ಅದರಿಂದ ಹೊರ ಹೊಮ್ಮಿದ ಏನೋ ಒಂದು ವಸ್ತು, ಇವೆಲ್ಲವನ್ನೂ ಪುನಶ್ಚೇತನಗೊಳಿಸುತ್ತದೆ. ಆದರೆ ಆಗ, ಇವೆಲ್ಲವುಗಳದೂ ಒಂದು ಪರಿಶುದ್ಧ ರೂಪವಾಗಿರುತ್ತದೆ.

ಈಗ ನಾನು ನನ್ನ ಸ್ಥಿತಿಯನ್ನು ಗಮನಿಸಿದರೆ, ಈ ಎಲ್ಲವೂ ಲಯವಾಗಿವೆಯೋ ಇಲ್ಲವೋ ತಿಳಿಯದು; ನನಗೆ, ನಾನು ಜಗತ್ತಿನಿಂದ ಪೃಥಕ್ಕಾಗಿಸಿ ತೂಗುಬಿಡಲ್ಪಟ್ಟವನಂತೆ ಕಂಡುಬರುತ್ತದೆ. (ಜಗತ್ತಿನಿಂದ ಸಂಪೂರ್ಣ ನಿಃಸಂಗನಾಗಿ). ಪರಲೋಕದ ಬಗ್ಗೆಯೂ ಗೊತ್ತಿಲ್ಲ, ಆಧ್ಯಾತ್ಮಿಕತೆಗೆ ನಾನು ಇನ್ನೂ ಅಂಟಿಕೊಂಡಿರುವೆನೋ ಗೊತ್ತಿಲ್ಲ. ಇವೆಲ್ಲವನ್ನೂ ಗಮನಿಸಿದರೆ, ನಿಜವಾಗಿ ಪ್ರಾಪಂಚಿಕರೆಂದೆನಿಸಿಕೊಂಡವರು ನನಗಿಂತ ಎಷ್ಟೋ ವಾಸಿ ಎನ್ನಬೇಕಾದೀತು.

ಅಮ್ಮಾಜಿ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು. ಕಿರಿಯರೆಲ್ಲರಿಗೂ ನನ್ನ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೦ **ಪತ್ರಸಂಖ್ಯೆ – ೭೩೩** ಷಾಹಜಹಾನಪುರ
೧೦–೩–೧೯೫೯

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಕೈ ಸೇರಿ ಸಂತೋಷವಾಯಿತು. ನಾವು ಪ್ರಗತಿ ಹೊಂದುತ್ತ ಹೋದ ಹಾಗೆ, ಎಲ್ಲ ವರ್ಣಗಳೂ ಸಂಯುಕ್ತಗೊಂಡು, ನಂತರ ಯಾವ ವರ್ಣವೂ ಉಳಿಯುವುದಿಲ್ಲ. ಅಳಿದುಳಿದ ಯಾವುದೇ ವರ್ಣವಿದ್ದರೆ, ಅದೂ ತನ್ನ ಸ್ಥಿತಿಯನ್ನು ಕಳೆದುಕೊಳ್ಳುತ್ತದೆ. ಸರಿ, ನಿನ್ನ ಸ್ಥಿತಿಯೂ ಇದೇ ಆಗುತ್ತಿದೆ. ಬೆಳಕು, ಕಾಂತಿ ಇಲ್ಲದಾಗ ಅದನ್ನು ಅಂಧಕಾರ ಎಂದು ಕರೆಯುತ್ತಾರೆ. ಆದರೆ, ಅಂಧಕಾರವಂತೂ ಮೊದಲೇ ಹೊರಟು ಹೋಗಿದೆ. ಈಗ ಅಲ್ಲಿ ಇರುವುದಾದರೂ ಏನು?

ಡಾ. ವರದಾಚಾರಿಯವರ ಪತ್ರಗಳು ಬರುತ್ತಿವೆ. ಅವರು ಬಹಳ ಉನ್ನತ ಪ್ರಗತಿ ಮಾಡಿದ್ದಾರೆ. ಆದರೆ ವಿಚಾರಗಳು ಮುತ್ತುವುದು, ಮತ್ತು ಪ್ರಾಪಂಚಿಕ ತೊಂದರೆಗಳು ಅವರನ್ನು ತುಂಬಾ ಕಷ್ಟಕ್ಕೀಡುಮಾಡುತ್ತಿವೆ. ಇಂಥ ಉನ್ನತ ಸ್ಥಿತಿಯಲ್ಲಿಯೂ, ಇವು ಹೇಗೆ ಉಳಿದುಕೊಳ್ಳುತ್ತವೆ, ಅವರಿಗೆ ಏನು ಬರೆಯಲಿ, ಹೇಗೆ ಬರೆಯಲಿ ಎಂಬುದು ನನಗೆ ತಿಳಿಯುತ್ತಿಲ್ಲ. ಅವರು ಗೀತೆಯ ಒಂದು ಶ್ಲೋಕದ ಬಗ್ಗೆ ಕೇಳಿದ್ದಾರೆ; ಅದರ ಒಂದು ಭಾಗವನ್ನಷ್ಟೇ ಅವರು ಬರೆದಿದ್ದಾರೆ. ಆ ಶ್ಲೋಕದ ಮೂಲಕ ಅವರು ತಮ್ಮ 'ಸ್ಥಿತಿ'ಯನ್ನು ಅಂದಾಜಿಸಿ ನೋಡಲು ಬಯಸುತ್ತಾರೆ. ಅದು ಎಂಟನೆಯ ಅಧ್ಯಾಯದ ಒಂಭತ್ತನೆಯ ಶ್ಲೋಕ: '.... ಆದಿತ್ಯ ವರ್ಣಂ ತಮಸಃ ಪರಸ್ತಾತ್' ಎಂಬುದು. ಒಬ್ಬ ಪಂಡಿತರನ್ನು ವಿಚಾರಿಸಿ ಕೇಳಿದಾಗ ಇದು ಗೀತೆಯ ಶ್ಲೋಕವೆಂದು ತಿಳಿಯಿತು. ನಾನು ಏನು ಬರೆಯಬೇಕೆಂದು ಗೊತ್ತಿಲ್ಲ; ಸಮರ್ಥ (ಪಂಡಿತ) ವ್ಯಕ್ತಿಗಳು ಲಖೀಂಪುರದಲ್ಲಿದ್ದಾರೆ. ಏನೇ ಇರಲಿ, ಸೂರಜ ಪ್ರಸಾದರನ್ನು, ಈ ಕುರಿತು ಏನಾದರೂ ಶೀಘ್ರ ಬರೆಯಲು ಹೇಳು, ಮಾಸ್ಟರ್ ಸಾಹೇಬರೂ ಇದನ್ನು ಗಮನವಿಟ್ಟು ವಿಚಾರ ಮಾಡಲಿ; ಅದರಿಂದ ನಮ್ಮ ಮರ್ಯಾದೆಗೆ ಕುಂದು ಬರದಿರಲಿ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೧ **ಪತ್ರಸಂಖ್ಯೆ – ೭೩೫** ಷಾಹಜಹಾನಪುರ
೧೮–೩–೧೯೬೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿ, ಸಂತೋಷವಾಯಿತು. ನೀವೆಲ್ಲರೂ ವಿಚಾರ ಮಾಡಿ, ಬಾಬು ಸೂರಜಪ್ರಸಾದರ ಪತ್ರದ ಮೂಲಕ ಬರೆದು ಕಳುಹಿಸಿದ ಉತ್ತರ ಚೆನ್ನಾಗಿದೆ. ಮಾಸ್ಟರ್ ಸಾಹೇಬರ ಪತ್ರ ಬಂದನಂತರ, ಅದನ್ನೇ ಬರೆದು ಕಳುಹಿಸುತ್ತೇನೆ.

ಡಾ. ವರದಾಚಾರಿಯವರಿಗೋಸ್ಕರ ನೀನು ಪ್ರಾರ್ಥನೆ ಮಾಡುತ್ತಿರುವುದು ಯೋಗ್ಯವಾಗಿದೆ. ಅವರು ನನ್ನಿಂದ ಸಾಕಷ್ಟು ಪರಿಶ್ರಮ (ಕೆಲಸ) ತೆಗೆದುಕೊಂಡರು; ಮತ್ತು ಸಜ್ಜನಿಕೆಯ ದೃಷ್ಟಿಯಿಂದ ನಾನೂ ಈಗಲೂ ಅವರಿಗೋಸ್ಕರ ಪರಿಶ್ರಮ ಪಡುತ್ತಿದ್ದೇನೆ. ಆದರೆ ವಿಚಾರಗಳು ಮತ್ತು ಪ್ರಾಪಂಚಿಕತೆಯ ವಿಷಯಗಳಿಂದ ಅವರು ಈಗಲೂ ತೊಂದರೆಪಟ್ಟುಕೊಳ್ಳುತ್ತಾರೆ. ಇದಕ್ಕೇನು ಮಾಡಬಹುದು, ಯಾವುದರಿಂದ ಇದು ಕೊನೆಗೊಂಡೀತು ಎಂಬುದು ನನಗೆ ಹೊಳೆಯುತ್ತಿಲ್ಲ. ಅವರಿಂದ ನಾನು ನಿರೀಕ್ಷಿಸದಿದ್ದಾಗ್ಯೂ, ಕೊನೆಯಲ್ಲಿ, ಈ ಮಾರ್ಗದಲ್ಲಿ (ಸಹಜಮಾರ್ಗ) ಹೆಚ್ಚು ಸಾರ (ತತ್ತ್ವ) ಇಲ್ಲವೆಂದು ತಿಳಿದು ಕೈಚೆಲ್ಲಬಾರದಲ್ಲ.



ನೀನು ಒಂದು ಬಹಳ ಒಳ್ಳೆಯ ಉದಾಹರಣೆ ಕೊಟ್ಟಿದ್ದೀಯೆ– "ನಾವು ನರಕದ ವಿಚಾರವನ್ನಿಟ್ಟುಕೊಂಡೇ ಸ್ವರ್ಗಕ್ಕೆ ಹೋದರೆ, ಸ್ವರ್ಗವೂ ದುಃಖಮಯವಾಗುವುದು." ನಾನು ಇದೇ ಮಾತನ್ನು ಶೈಲಿಯಲ್ಲಿ ಅಂದಗೊಳಿಸಿ, ನಿನ್ನ ಹೆಸರಿನಲ್ಲಿಯೇ ಕಳುಹಿಸುತ್ತೇನೆ.

ನೀನು ಬರೆದಿದ್ದೀಯೆ– 'ಅವರ ಉನ್ನತಿಯ ಬಿಂದುವಿನಿಂದ (point) ವಿಚಾರಗಳ ಕಡೆಗೆ ಒಂದು ದೃಷ್ಟಿಯಿಂದ ನೋಡಿದರೆ ಕೂಡ, ಸರಿಹೋಗಬಹುದು' ನಿನ್ನ ಈ ಮಾತಿನ ತಾತ್ಪರ್ಯ ನನಗೆ ಅರ್ಥವಾಗಲಿಲ್ಲ, ನಾನು ಯಾವ ದೃಷ್ಟಿಯಿಂದ ನೋಡಲಿ?

ನೀನು, ನನಗೆ ನೆನಪಿದ್ದ ಮಟ್ಟಿಗೆ 'ಯು'೧ (U1) ಸ್ಥಾನದಲ್ಲಿದ್ದೀಯೆ. ಇದನ್ನು ಶುದ್ಧಿಗೊಳಿಸಿ, ಬೇಗ 'ವಿ'೧ (V1) ಸ್ಥಾನಕ್ಕೆ ನಿನ್ನನ್ನು ತಲುಪಿಸುತ್ತೇನೆ. ನಿನಗೂ ವಿಚಾರಗಳು ಬರುವುವೇನು? ಬರುವುದಾದರೆ, ಹೆಚ್ಚು ಪ್ರಮಾಣದಲ್ಲಿ ಬರುವುವೋ ಅಥವಾ ಅಲ್ಪಸ್ವಲ್ಪ ಮಾತ್ರವೋ?

ಕೇಸರ್‌ಳು ಒಳ್ಳೆಯ ಪ್ರಗತಿ ಹೊಂದುತ್ತಿದ್ದಾಳೆ.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೨ **ಪತ್ರಸಂಖ್ಯೆ – ೭೪೧** ಷಾಹಜಹಾನ್‌ಪುರ
೧೬–೪–೧೯೬೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನೀನು, ಏಪ್ರಿಲ್ ೧೩ರಂದು ಮಧ್ಯಾಹ್ನ 'ವಿ'೧ (V1) ಸ್ಥಾನ ತಲುಪಿದ್ದೀಯೆ ಸ್ಥಿತಿಯಲ್ಲಿ ಕೆಲವು ಪರಿವರ್ತನಗಳಾಗಬಹುದು.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೩ **ಪತ್ರಸಂಖ್ಯೆ – ೭೪೬** ಷಾಹಜಹಾನ್‌ಪುರ
೧೨–೦೫–೧೯೬೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು

ನಿನ್ನ ಮತ್ತು ಕೇಸರ್‌ಳ ಪತ್ರ ಇಂದು ತಾನೆ ಕೈ ಸೇರಿತು. ನಿನ್ನ ಪತ್ರಕ್ಕೆ ಏನೆಂದು ಉತ್ತರ ಬರೆಯಲಿ? ನಿನ್ನ 'ಸ್ಥಿತಿ' ಎಲ್ಲವೂ ಚೆನ್ನಾಗಿದೆ. ಅದಕ್ಕೋಸ್ಕರ

P-4-Books-PM-7-Anantyatre-177



ಗುರು ಮಹಾರಾಜರಿಗೆ ಧನ್ಯವಾದಗಳು. ನಿನ್ನ ನಿಲುಕು ಈಗ 'ಯು'೧ (U1) ಅಥವಾ 'ವಿ'೧ (V1) ಸ್ಥಾನದಲ್ಲಿದೆ ಎಂದು ನಾನು ನಿನಗೆ ಬರೆದಿದ್ದೆ. ಮುಂದೆ ಮುಂದೆ ಪ್ರಗತಿ ಹೊಂದುತ್ತ ಹೋದಂತೆ 'ಸ್ಥಿತಿ'ಗಳೆಲ್ಲವೂ ಸಮಾಪ್ತವಾಗುತ್ತ ಹೋಗುವುವು. ಕೊನೆಯಲ್ಲಿ ಯಾವ ಸ್ಥಿತಿ ಉಳಿಯುವುದೆಂಬುದನ್ನು, ಆ 'ಸ್ಥಿತಿ'ಯು ಯಾರಲ್ಲಿ ಉಂಟಾಗುವುದೋ ಅವನು ಮಾತ್ರವೇ ಅರಿಯಬಲ್ಲ. ಶಬ್ದಗಳು ಅದರ ಅರ್ಥವನ್ನು ಸರಿಯಾಗಿ ಬಿಂಬಿಸಲಾರವು.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೪ **ಪತ್ರಸಂಖ್ಯೆ – ೭೫೯** ಷಾಹಜಹಾನಪುರ
೧೦–೧೦–೧೯೬೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಕೈ ಸೇರಿತು. ನಿನ್ನ ಪ್ರಗತಿಯ ವೇಗ ಮಂದವಾದಂತೆ ತೋರುತ್ತದೆ, ಯಾಕೆಂದರೆ, ಶೂನ್ಯ (ಏಕಾಂತ) ಪ್ರದೇಶದಲ್ಲಿ ಅದು ವಿಸ್ತಾರಗೊಳ್ಳುತ್ತಿದೆ. ಆ ಕಾರಣ ನಿನ್ನ ಸ್ಥಿತಿಯಲ್ಲಿ ವ್ಯಾಕುಲತೆ ಇದೆ.

ಇಲ್ಲಿ ಎರಡು ಸಾರೆ ಮಹಾಪೂರ ಬಂದಿತು. ಒಂದು ಅಕ್ಟೋಬರ್ ಒಂದರಂದು, ಮತ್ತೊಂದು, ಅಗಸ್ಟ್ ಎರಡರಂದು. ಮನೆಯ ನಾಲ್ಕೂ ದಿಕ್ಕಿಗೆ ಸುತ್ತಲೂ ಮೂರು–ನಾಲ್ಕು ಅಡಿ ನೀರು ಬಂದಿತ್ತು. ಗೇಟಿನ ಒಳಗೆ ೧೦–೧೨ ಅಡಿ ನೀರು ಒಳಗೆ ಬಂದಿತ್ತು; ಅದಕ್ಕೂ ಮುಂದೆ ಬಂದಿರಲಿಲ್ಲ. ಕೋಣೆ ಮತ್ತು ಪಡಸಾಲೆಗೆ ನುಗ್ಗಿರಲಿಲ್ಲ. ಆದರೆ ಹೊಲದಲ್ಲಿ ಬೆಳೆ ಸಂಪೂರ್ಣ ನಾಶವಾಗಿದೆ. ಈಗ ನೀರು ಮನೆಯಿಂದ ದೂರ ಸರಿದಿದೆ; ಮತ್ತು ನದಿಯಲ್ಲಿ ನೀರಿನ ಮಟ್ಟ ಸಾವಕಾಶವಾಗಿ ಇಳಿಯುತ್ತಿದೆ. ಈಗ ಅದರ ಬಗ್ಗೆ ಚಿಂತಿಸಬೇಕಾದುದಿಲ್ಲ.

ಇಲ್ಲಿ ಎಲ್ಲವೂ ಕ್ಷೇಮ. ಅಮ್ಮಾಜಿ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು. ಮತ್ತು ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೫ **ಪತ್ರಸಂಖ್ಯೆ – ೭೬೩** ಷಾಹಜಹಾನಪುರ
೦೨–೧೧–೧೯೫೦

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,



ನಿನ್ನ ಪತ್ರ ತಲುಪಿದೆ. ನಿನ್ನ ಆಧ್ಯಾತ್ಮಿಕ ಸ್ಥಿತಿ ಚೆನ್ನಾಗಿ ನಡೆಯುತ್ತಿದೆ. ಇಲ್ಲಿ, ಸತ್ಸಂಗಿಗಳ ಕಾಳಜಿ ತೆಗೆದುಕೊಳ್ಳುತ್ತಲೇ ಇದ್ದೇನೆ, ಆದರೆ, ನನ್ನ ಹೃದಯವು ಒಳಗಿನಿಂದಲೇ (subconsciously-ಅಂತರ್ಮನಸ್ಸಿನಿಂದ) ದಕ್ಷಿಣ ಭಾರತದ ಜನರತ್ತ ಒಲಿದಿರುತ್ತದೆ, ಯಾಕೆ ಎಂದು ಗೊತ್ತಿಲ್ಲ. ನಾನು ನವೆಂಬರ್ ೧೫ರ ಸಂಜೆ ನಾಲ್ಕೂವರೆ ಗಂಟೆಯ ಗಾಡಿಗೆ ದಿಲ್ಲಿಗೆ ಹೋಗುತ್ತೇನೆ. ಅಲ್ಲಿಂದ ೧೭ನೆಯ ತಾರೀಖಿಗೆ ದಕ್ಷಿಣಭಾರತಕ್ಕೆ ಪ್ರಯಾಣ ಬೆಳೆಸುತ್ತೇನೆ. ತಿರುಗಿ ಬರುವುದು ಜನವರಿ ೧೫–೧೬ಕ್ಕೆ ಆಗುವುದು. ತಾ. ೨೦ ಜನವರಿ ೧೯೬೧ಕ್ಕೆ ಮಿಷನ್ನಿನ ವಾರ್ಷಿಕ ಉತ್ಸವ ಶುರುವಾಗುವುದು. ತಾ. ೨೧ರಂದು ಬಸಂತ ಪಂಚಮಿ ಇದೆ.

ನೀನು ಕೇಸರ್‌ಳಿಗೆ ಬರೆದು ತಿಳಿಸು. ದಕ್ಷಿಣ ಭಾರತ ಜನರು ಮಿಷನ್ನಿನಲ್ಲಿ ಬರುತ್ತಿದ್ದಾರೆ ಎಂಬ ಸಂಕಲ್ಪದ ಮೇಲೆ ಕೇಂದ್ರೀಕರಿಸಲಿ ಮತ್ತು ರಾತ್ರಿ ಸ್ವಲ್ಪ ಸಮಯ ಅದೇ ರೀತಿ ಈಶ್ವರನಲ್ಲಿ ಪ್ರಾರ್ಥನೆ ಮಾಡಲಿ. ಅಲ್ಲದೆ, ಕೆಲ ಸಮಯದ ನಂತರ ನಿನ್ನ ಆರೋಗ್ಯ ಸುಧಾರಿಸಿದ ಮೇಲೆ, ನೀನೂ ಇದಕ್ಕೋಸ್ಕರ ಸ್ವಲ್ಪ ಸಮಯ ಮೀಸಲಿಡಬೇಕು. ನಾನು, ಪ್ರೋಗ್ರಾಮನ್ನು ನಿನಗೆ ಕಳುಹಿಸುತ್ತಿದ್ದೇನೆ.

ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೬ **ಪತ್ರಸಂಖ್ಯೆ – ೭೭೭** ಷಾಹಜಹಾನಪುರ
೨೦–೬–೧೯೬೨

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿದೆ. ಡಾ. ವರದಾಚಾರಿಯವರು ಶೀಘ್ರವಾಗಿ ಕಸ್ತೂರಿಗೆ ಔಷಧ ಕಳುಹಿಸುವುದಾಗಿ ಬರೆದಿದ್ದಾರೆ; ಅದು, ಪ್ರಾಯಶಃ ನಿನಗೆ ಮುಟ್ಟಿರಬಹುದು.

ನಿನಗೆ ನಿನ್ನ ಸ್ಥಿತಿಯನ್ನು ಬರೆಯಲು (ಹೇಗೆಂಬುದು) ತಿಳಿಯುತ್ತಿಲ್ಲ; ನನಗೂ, ನಿನ್ನ 'ಸ್ಥಿತಿ'ಯ ಬಗ್ಗೆ ಬರೆಯಲು ಶಬ್ದಗಳು ಸಿಗುವುದಿಲ್ಲ. ಯಾವ ಶುದ್ಧ–ಅವಸ್ಥೆಯ ನಂತರ ಶಬ್ದಾವಳಿಗಳು ಉಗಮಿಸುವುವೋ ಆ ಶುದ್ಧ ಅವಸ್ಥೆಯಲ್ಲಿ ನೀನು ಇದ್ದೀಯೆ ಎಂದು ಇದರ ಅರ್ಥ.

ಮಕ್ಕಳಿಗೆ ಆಶೀರ್ವಾದಗಳು

ಶುಭ ಚಿಂತಕ
ರಾಮಚಂದ್ರ

* * * *

P-4-Books-PM-7-Anantyatre-178



ಕ್ರಮಸಂಖ್ಯೆ – ೧೯೭ **ಪತ್ರಸಂಖ್ಯೆ–೭೮೨** ಷಾಹಜಹಾನಪುರ

೦೫–೧೨–೧೯೬೨

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಕೈ ಸೇರಿದೆ. ನಾನು ನಿನಗೆ ಕೇಳಿಕೊಂಡಂತೆ, ಪ್ರಾರ್ಥನೆಯನ್ನು ಮಾಡುತ್ತಿರು. ಅದರ ಪ್ರಭಾವ ಅಲ್ಪಮಟ್ಟಿಗೆ ಮಾತ್ರ ಆಗಿದೆ. ನಾನು ಬರೇಲಿ ಸ್ಟೇಷನ್ನಿನಲ್ಲಿದ್ದಾಗ ನಿನ್ನನ್ನು ಮುಂದಿನ ಬಿಂದುವಿಗೆ ತಲುಪಿಸಿದ್ದೇನೆ. ಅದು 'ಎಕ್ಸ್'೧ (X1) ಅಥವಾ ವಾಯ್–೧ (Y1) ಎಂದು ಅಂದುಕೊಳ್ಳುತ್ತೇನೆ. ನಾನು ಆಘಾತ (jerk) ಕೊಟ್ಟಿದ್ದೆ, ಅದು ನಿನಗೆ ಗೊತ್ತಾಗಿರಲು ಸಾಕು. ಅದನ್ನು ಪರಿಶೀಲಿಸಿ, ನನಗೆ ಬರೆದು ತಿಳಿಸು. ನಾನು, ಎಲ್ಲಾದರೂ, ಮರೆತುಬಿಟ್ಟಿಲ್ಲವಷ್ಟೆ!

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದಗಳು. ಅಮ್ಮಾ ಮತ್ತು ಚೌಬೇಜಿಯವರಿಗೆ ಪ್ರಣಾಮಗಳು.

ಶುಭ ಚಿಂತಕ

ರಾಮಚಂದ್ರ

* * * *

ಕ್ರಮ ಸಂಖ್ಯೆ – ೧೯೮ **ಪತ್ರಸಂಖ್ಯೆ – ೭೮೪** ಷಾಹಜಹಾನಪುರ

೦೭–೦೩–೧೯೬೩

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ (ಆಧ್ಯಾತ್ಮಿಕ) ಯಾತ್ರೆ ಈಗ ಎ೨ (A2) ಸ್ಥಾನದಲ್ಲಿದೆ. ನಿನ್ನ ಅನುಭವ ಸರಿಯಾಗಿಯೇ ಇದೆ. ನಿನ್ನ ತಂದೆ–ತಾಯಿಯವರಿಗೆ ಪ್ರಣಾಮಗಳು. ಸೋದರ–ಸೋದರಿಯರಿಗೆ ಆಶೀರ್ವಾದಗಳು.

ಶುಭ ಚಿಂತಕ

ರಾಮಚಂದ್ರ

* * * *

ಕ್ರಮಸಂಖ್ಯೆ – ೧೯೯ **ಪತ್ರ ಸಂಖ್ಯೆ – ೮೦೧** ಷಾಹಜಹಾನಪುರ

೧೫–೯–೧೯೬೪

ಪ್ರಿಯ ಪುತ್ರಿ ಕಸ್ತೂರಿ ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿದೆ. ಈಶ್ವರನಿಗೆ ಧನ್ಯವಾದಗಳು; ಅವನು ನಿನ್ನ ಪ್ರಾರ್ಥನೆಯನ್ನು ಸ್ವೀಕರಿಸಿದ್ದಾನೆ. ಈಶ್ವರ ಪ್ರಾಪ್ತಿಯ ಮಾರ್ಗದಲ್ಲಿ ಮುಂದೆ–ಮುಂದೆ ಸಾಗಿದಂತೆಲ್ಲ, ಅಷ್ಟಲ್ಲದೆ, ಅವನ ನಿಕಟವಾಗಿ ಸಾಗಿದಂತೆಲ್ಲ, ಶುದ್ಧತೆ, ಸಾಧನೆ, ಅನುಭವ–ಎಲ್ಲವೂ ಅವನಲ್ಲಿ ಲಯವಾಗುತ್ತ ಹೋಗುತ್ತವೆ; ಯಾಕೆ ಎಂದರೆ, ಈಶ್ವರನಲ್ಲಿ ಇವಾವುದೂ ಇಲ್ಲ. ನಿನ್ನದು ಈಗ ಈಶ್ವರೀಯ ದಶೆ'.



ನಿಮ್ಮೆಲ್ಲರಿಗೂ ಶುಭಾಕಾಂಕ್ಷೆಗಳು

ಶುಭಚಿಂತಕ

ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೦ **ಪತ್ರಸಂಖ್ಯೆ – ೮೦೩** ಬೀದರ್

೦೪–೧೨–೧೯೬೪

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಹೈದರಾಬಾದಿನಲ್ಲಿ ಕೈಸೇರಿತು. ನಾನು ಸ್ವಸ್ಥನಾಗಿದ್ದೇನೆ. ಇಲ್ಲಿ, ಮಿಷನ್ನು ದಾಪುಗಾಲಿಟ್ಟು ಎಲ್ಲ ಕಡೆಗೆ ಪಸರಿಸುತ್ತಿದೆ. ಮತ್ತು ಪ್ರತಿಯೊಬ್ಬ ಅಭ್ಯಾಸಿಯೂ ಇದೇ ಉದ್ದೇಶಕ್ಕೆ ಪ್ರಯತ್ನಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ಇಲ್ಲಿ ಪ್ರಗತಿಯಾಗುವ ಆಶೆ ಇದೆ.

ಎಲ್ಲರಿಗೂ ಶುಭಾಶೀರ್ವಾದಗಳು.

ಶುಭ ಚಿಂತಕ

ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೧ **ಪತ್ರಸಂಖ್ಯೆ – ೮೦೭** ತಿರುಪತಿ

೨೭–೧೨–೧೯೬೪

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ, ಮತ್ತು ಕೇಸರ್‌ಳ ಪತ್ರವೂ ತಲುಪಿತು. ಕೇಸರ್‌ಳು ತನ್ನ 'ಸ್ಥಿತಿ'ಯ ಬಗ್ಗೆ ಚೆನ್ನಾಗಿ ಬರೆದಿದ್ದಾಳೆ. ನೀನು ಕಂಡ ಸ್ವಪ್ನವು, ಲಯಾವಸ್ಥೆಯ ಒಳ್ಳೆಯ ದಶೆಯಾಗಿದೆ; ಮತ್ತು 'ನೀರು ಕುಡಿಸುವುದು' (ಇತರರಿಗೆ) ಆ ಅವಸ್ಥೆಯ ಸಾಯುಜ್ಯಗತಿ.

ನನ್ನ ಅಂದಾಜಿನಂತೆ, ದಕ್ಷಿಣ ಭಾರತದಲ್ಲಿ ಕೆಲಸವು ಪೂರ್ಣ ಓಘದಿಂದ ಬರುವಂತಾಗಲು ಇನ್ನೂ ಎರಡು ವರ್ಷ ಬೇಕಾಗಬಹುದು. ನಾವು ಎಲ್ಲರೂ ಪೂರ್ಣ ಸಾಮರ್ಥ್ಯದಿಂದ ಕೈ ಜೋಡಿಸಿದರೆ, ಖಂಡಿತವಾಗಿ ಕಡಿಮೆ ಸಮಯ ಸಾಕಾಗಬಹುದು.

ನಿಮ್ಮೆಲ್ಲರಿಗೂ ಆಶೀರ್ವಾದಗಳು

ಶುಭ ಚಿಂತಕ

ರಾಮಚಂದ್ರ

* * * *

P-4-Books-PM-7-Ananthyatre-179



ಕ್ರಮಸಂಖ್ಯೆ – ೨೦೨ **ಪತ್ರಸಂಖ್ಯೆ – ೮೧೯** ತಿರುವಣ್ಣಾಮಲೈ
೦೧–೦೧–೧೯೬೫

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರಕ್ಕೆ ನಾನು ಉತ್ತರ ಕೊಟ್ಟಿದ್ದೆ, ನಿನಗೆ ಅದು ತಲುಪಿರಲು ಸಾಕು. ಈಶ್ವರನಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕು; ಇಲ್ಲಿ ತಿರುವಣ್ಣಾಮಲೈಯಲ್ಲಿ ಬಹಳಷ್ಟು ಕೆಲಸ ಮಾಡುವುದಕ್ಕೆ ಸಿಕ್ಕಿತು ಮತ್ತು ಮುಂದೆ ಪ್ರಗತಿಯಾಗುವ ನಿರೀಕ್ಷೆ ಇದೆ. ನಾನು ಇಲ್ಲಿಂದ ಹೊರಡುವ ಹೊತ್ತಿಗೆ, ಅಭ್ಯಾಸಿಗಳ ಸಂಖ್ಯೆ ೭೦–೮೦ ಆಗಬಹುದೆಂದು ಆಶಿಸುತ್ತೇನೆ. ಇಲ್ಲಿ, ಅಭ್ಯಾಸಿಗಳು ನನಗೆ ಎಲ್ಲ ಆರಾಮ ಒದಗಿಸಿದರು. ಈಶ್ವರನು ನಿನಗೆ ಇನ್ನೂ ಹೆಚ್ಚು ಹೆಚ್ಚು ಪ್ರಗತಿಯನ್ನು ಅನುಗ್ರಹಿಸಲಿ. ನಿಮ್ಮೆಲ್ಲರಿಗೂ ಆಶೀರ್ವಾದ

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೩ **ಪತ್ರಸಂಖ್ಯೆ – ೮೩೯** ಷಾಹಜಹಾನಪುರ
೦೮–೦೫–೧೯೬೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ಮೇ ೨೧ರ ಸಂಜೆ ಇಲ್ಲಿಂದ ಹೊರಟು ೨೨ರಂದು ನಾನು ದಿಲ್ಲಿ ತಲುಪಲಿದ್ದೇನೆ; ಮತ್ತು ೨೩ರ ಸಂಜೆ ದಕ್ಷಿಣ ಭಾರತದತ್ತ ಪ್ರಯಾಣ ಮಾಡುತ್ತೇನೆ.

ಮೇ ೭ ರಂದು, ಆಶ್ರಮ ನಿರ್ಮಿಸಲೋಸುಗ ಹತ್ತುಸಾವಿರ (೧೦,೦೦೦) ರೂಪಾಯಿ ಕೊಟ್ಟು ಜಮೀನು ಖರೀದಿಸಲಾಗಿದೆ. ಹಣ ಸಹಾಯ ಮಾಡುವ ಮಾತುಕೊಟ್ಟ ಅನೇಕರಿಂದ ಇನ್ನೂ ಬಂದಿಲ್ಲ. ಕೇವಲ ೫೫೦೦ ರೂಪಾಯಿಗಳಿದ್ದುವು. ಮತ್ತು ಬೇರೆ ೫೫೦೦ ರೂಪಾಯಿಗಳು ನಮ್ಮಲ್ಲಿ ಜಮೆ ಆದ ಹಣವಿತ್ತು; ಅದರಿಂದ ಕೊಡಬೇಕಾಯಿತು.

ನಿನ್ನಲ್ಲಿ ಕಂಪನ (Vibration) ಶಕ್ತಿಗಳು ತುಂಬಿವೆ. ಮಕ್ಕಳಿಗೆ ಆಶೀರ್ವಾದ.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೪ **ಪತ್ರಸಂಖ್ಯೆ – ೮೪೨** ಷಾಹಜಹಾನಪುರ
೦೨–೧೦–೧೯೬೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,



ನಿನ್ನ ಪತ್ರ ತಲುಪಿತು. ನೀನು ನಿನ್ನ 'ಸ್ಥಿತಿ'ಯನ್ನು ಸರಿಯಾಗಿ ಬರೆದಿದ್ದೀಯೆ. ಏನು ಮಾಡಬೇಕು ಎಂಬುದನ್ನು ನಾನು ನೋಡುತ್ತಿದ್ದೇನೆ. ಒಂದಿಷ್ಟು ನನಗೆ ಹೊಳೆದಿದೆ; ಇನ್ನೂ ಒಂದಿಷ್ಟು ಹೊಳೆಯಬಹುದು. ಟಂಡನ್ ಇತ್ತೀಚೆಗೆ ಚಿಂತಿತರಾಗಿದ್ದಾರೆ. ನೀನು ಮಾಡಿದ ಒಂದಿಷ್ಟು ಕೆಲಸದಿಂದ (Transmission) ಅವರಿಗೆ ಲಾಭವೇನೋ ಆಗಿದೆ ಮತ್ತು ಸಂಸ್ಕಾರಗಳ ತೊಡಕು ಸ್ವಚ್ಛಗೊಳಿಸಲ್ಪಟ್ಟಿದೆ. ಇದರ ಲಾಭ ಇನ್ನೂ ಹೆಚ್ಚಬಹುದೆಂದು ನನಗೆ ಅನಿಸುತ್ತದೆ, ಮತ್ತು ಅವನ ಕಷ್ಟ ಒಂದಿಷ್ಟು ಕಡಿಮೆಯಾಗಬಹುದು.

ಹೈದರಾಬಾದಿನಿಂದ ೯–೧೦ ಜನರು ಬರಲಿದ್ದಾರೆ. ಸಾಧ್ಯವಾದರೆ ನೀನೂ ಬಾ. ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೫ **ಪತ್ರಸಂಖ್ಯೆ – ೮೪೩** ಷಾಹಜಹಾನಪುರ
೨೫–೧೦–೧೯೬೭

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು.

ನಿನ್ನ ಪತ್ರ ಕೈ ಸೇರಿತು. ಶ್ರೀ ಲಾಲಾಜಿ ಸಾಹೇಬರು ನಿನ್ನನ್ನು ಆಧ್ಯಾತ್ಮಿಕ ಸಂಶೋಧನೆಗೋಸ್ಕರ ಆಯ್ಕೆ ಮಾಡಿದುದು ಬಹಳ ಸಂತೋಷ. ಸಾಧ್ಯವಿದ್ದ ಮಟ್ಟಿಗೆ ನೀನು ನಿನ್ನ ಸ್ಥಿತಿಯನ್ನು ಒಳ್ಳೆಯ ರೀತಿಯಲ್ಲಿ ಸ್ಪಷ್ಟವಾಗಿ ಬರೆದು ತಿಳಿಸುತ್ತೀಯೆ. ಆದರೆ ಉನ್ನತ ಅವಸ್ಥೆಗಳಲ್ಲಿ ಹೋದ ಮೇಲೆ, ಸ್ಥಿತಿಗಳನ್ನು ವಿವರಿಸುವುದು ತುಂಬಾ ಕಠಿಣವೇನೋ ಸರಿಯೆ; ಯಾಕೆಂದರೆ ಶಬ್ದಗಳು ದೊರೆಯುವುದಿಲ್ಲ. ನಾನೇನು ಮಾಡಬೇಕೆಂಬ ಬಗ್ಗೆ ಒಂದಿಷ್ಟು ಅರಿವಿಗೆ ಬರಬಹುದು ಎಂದು ನಾನು ನಿನಗೆ ಬರೆದಿದ್ದೆ; ನಾನು ನಿನ್ನನ್ನು 'ಜೆ'–೨ (J2) ಬಿಂದುವಿಗೆ ಒಯ್ದು ಮುಟ್ಟಿಸಿದ್ದೇನೆ. ಈಶ್ವರೇಚ್ಛೆಯಿದ್ದರೆ, ಈ (J2 ಬಿಂದುವಿನ) ಸ್ಥಿತಿಯ ಶುಭ ಸಮಾಚಾರವನ್ನು ನೀನು ಕೊಡುತ್ತೀಯೆ. ನಿನ್ನ 'ಸ್ಥಿತಿ'ಯನ್ನು ನೋಡಿ ನಾನು ಹಿಡಿಸಲಾರದಷ್ಟು ಹರ್ಷಭರಿತನಾಗುತ್ತೇನೆ; ಯಾಕೆಂದು ತಿಳಿಯದು. ಲಾಲಾಜಿಯವರು ನಿನ್ನನ್ನು ಹರಸಲಿ. ನಿನ್ನ ಸ್ವಾಸ್ಥ್ಯವೂ ಚೆನ್ನಾಗಿರಬೇಕು.

ನಿಮ್ಮೆಲ್ಲರಿಗೂ ಆಶೀರ್ವಾದ

ಶುಭ ಚಿಂತಕ
ರಾಮಚಂದ್ರ

* * * *

P-4-Books-PM-7-Anantyatre-180



ಕ್ರಮಸಂಖ್ಯೆ – ೨೦೬ **ಪತ್ರಸಂಖ್ಯೆ – ೮೪೭** ಚನ್ನಪಟ್ಟಣ
೦೧–೦೧–೧೯೬೮

ಪ್ರಿಯ ಕಸ್ತೂರಿ, ಶುಭಾಶೀರ್ವಾದಗಳು.

ನಾನು ಇಂದು ಚನ್ನಪಟ್ಟಣಕ್ಕೆ ಬಂದೆ. ಸೇಲಂದಲ್ಲಿ ಕೆಲವು ಹೊಸ ಅಭ್ಯಾಸಿಗಳು ಸೇರಿದರು. ಮದುರೈಯಲ್ಲಿ ಸುಮಾರು ಇಪ್ಪತ್ತು ಜನರು ಶುರು ಮಾಡಿದರು. ನನ್ನ ಸ್ವಾಸ್ಥ್ಯ ಚೆನ್ನಾಗಿದೆ. ನನಗೆ (ಆಧ್ಯಾತ್ಮಿಕ) ಕೆಲಸ ಮಾಡಲು ಶಕ್ತಿ ಲಾಲಾಜಿಯವರಿಂದ ಬರುತ್ತದೆ, ಮತ್ತು ನೀನು ಕೂಡ ಕೊಡುತ್ತೀಯೆ. ಈಗ ನೀನು ನನಗೆ ಶಕ್ತಿ ನೀಡುವ ಅಗತ್ಯವಿಲ್ಲ. ಯಾಕೆಂದರೆ, ಮಾನವನು ತಲುಪಬಹುದಾದ ಕೊನೆಯ ಮಜಲು ಕೇಂದ್ರಮಂಡಲ; ಅದರಲ್ಲಿ ಅವನ ಶಕ್ತಿ ಬಹಳ ಹೆಚ್ಚುತ್ತದೆ. ಅಲ್ಲಿ ಅಲ್ಪ ಪ್ರಮಾಣ ಕೂಡ ಬಹಳ ಆಗಿ ಬಿಡುತ್ತದೆ. ನಿನಗೆ ಅದರ ಅಂದಾಜು ಸಿಗಲಾರದು. ಇಂದು, ಹೃದಯದ ಮೇಲೆ ಭಾರದ ಒತ್ತಡ ಅನುಭವವಾಯಿತು. ನಿಃಶಕ್ತಿಯಿರುವ ಕಾರಣ, ಅದರ ಪ್ರಭಾವ ಹೆಚ್ಚಿಗೆ ಆಗುತ್ತದೆ.

ವಿ. ಪಾರ್ಥಸಾರಥಿ ಇಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಈಶ್ವರನು ಅವರನ್ನು ಸಂತೋಷದಿಂದಿರಿಸಲಿ.

ಎಲ್ಲ ಮಕ್ಕಳಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೭ **ಪತ್ರಸಂಖ್ಯೆ – ೮೫೭** ಷಾಹಜಹಾನಪುರ
೨೮–೬–೧೯೬೮

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ತಲುಪಿತು. ವಿಷಯ ತಿಳಿಯುತ್ತಲೇ ನನ್ನ ಮುಂದೆ ಆನಂದದ ಸ್ಥಿತಿ ಎದುರು ನಿಂತಂತಾಯಿತು. ಲಾಲಾಜಿ ಸಾಹೇಬರಿಗೆ ಕೃತಜ್ಞತೆಯನ್ನು ಅದೆಂತು ಸಲ್ಲಿಸಲಿ ! ಅವರು ನಿನಗೆ ಆನಂದದ ಅತ್ಯಂತ ಉಚ್ಚ ಸ್ಥಿತಿಯನ್ನು ಅನುಗ್ರಹಿಸಿದ್ದಾರೆ. ಭೇಷ್ ಭೇಷ್, ಅದೆಷ್ಟು ಅದ್ಭುತವಾಗಿ, – 'ಯಾವುದೋ ಆಕರ್ಷಣೆ ನನ್ನನ್ನು ತೀವ್ರತೆಯಿಂದ ತನ್ನೆಡೆಗೆ ಸೆಳೆಯುತ್ತಿದೆ ಮತ್ತು ನಾನು, ನನ್ನ ಪ್ರಾಣವೇ ಹೊರಟು ಹೋಗುವುದೇನೋ ಎಂಬಂತೆ, ಅಷ್ಟೇ ವೇಗದಿಂದ ಅದರಲ್ಲಿ ಹೋಗಿ ಸಂಮಿಲಿತನಾಗಲು ಬಯಸುತ್ತೇನೆ'– ಎಂದು ಬರೆದಿರುವೆ. 'ಸ್ಥಿತಿಯು' ನಿಯಂತ್ರಣ ತಪ್ಪಿ ಹೋಗುವುದೆಂದೆನಿಸಿದಾಗ, ಪೂಜಾ ಕೊಠಡಿಯ ಆಸನದ ಎದುರು ಹೋಗಿ ಕುಳಿತುಕೊಳ್ಳಬೇಕು. ಇಂಥ ಸಂದರ್ಭದಲ್ಲಿ ಅಭ್ಯಾಸಿಯು ಮಾರ್ಗದರ್ಶಕನ



(ಗುರುವಿನ) ಹತ್ತಿರ ಇರಬೇಕು. ನಿನ್ನ ಸ್ಥಿತಿಯು ಹದ್ದು ಮೀರಿ ಹೋಗುವ ಮುನ್ನವೇ ಲಾಲಾಜಿಯವರ ಶಕ್ತಿ ಅದನ್ನು ನಿಯಂತ್ರಿಸುತ್ತದೆ; ಇದು ಅವರ ಕೃಪೆ. ನಿನ್ನ ಸ್ಥಿತಿಯನ್ನು ಎಷ್ಟೆಂದು ಕೊಂಡಾಡಲಿ? 'ಬಿಂದುವಿನಲ್ಲಿ ಸಿಂಧುವು ಹೀರಿ ಹೋಗಿದೆ; ಮತ್ತು ಬಿಂದುವು ತನ್ನ ಪ್ರಿಯತಮನೆಲ್ಲಿ ಎಂದು ವಿಹ್ವಲವಾಗಿದೆ'– ಎಂದು ನೀನು ಬರೆದಿದ್ದೀಯೆ. ಈಗಂತೂ, ಸದಾ ನಿನ್ನ ಸ್ಥಿತಿಯ ಮೇಲೆ ದೃಷ್ಟಿಯಿಡಬೇಕಾಗುತ್ತದೆ.

ನಿಜ ಹೇಳಬೇಕೆಂದರೆ, ನಿನ್ನನ್ನು ಹಿಡಿದಿರುವುದು ಕರೆಂಟ್ (current) ಅಲ್ಲ; ದೈವೀಶಕ್ತಿಯು ನಿನ್ನೊಳಗೆ ಪ್ರವೇಶ ಮಾಡುತ್ತಿದೆ. ಈಶ್ವರೇಚ್ಛೆಯಿದ್ದರೆ, ಕೇಂದ್ರ ಮಂಡಲದಲ್ಲಿ ನೀನು ಈಜಲು ಪ್ರಾರಂಭಿಸುತ್ತೀಯೆ.

ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೦೮ **ಪತ್ರಸಂಖ್ಯೆ – ೮೬೮** ಷಾಹಜಹಾನಪುರ
೨೬–೦೪–೧೯೬೯

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನಿನ್ನ ಪತ್ರ ಬಂದಿದೆ. ಜೂನ್ ೬ ಕ್ಕೆ ನಾನು ಆಸಾಮಕ್ಕೆ ಹೋಗುವವನಿದ್ದೇನೆ. ಜೂನ್ ೨೧ ಕ್ಕೆ ಮರಳುತ್ತೇನೆ. ನಾನು ನಿನ್ನನ್ನು (ಕೇಂದ್ರ ಮಂಡಲದ) ಮೊದಲನೆಯ ವೃತ್ತದವರೆಗೆ ತಂದು ಬಹಳ ದಿನಗಳಾದವು. ಆದರೆ, ಆ ವೃತ್ತದಲ್ಲಿ ಮತ್ತು ವೃತ್ತಕ್ಕೂ ಮೊದಲು ಈ ಎರಡೂ ಕಡೆಗಳಲ್ಲಿ ಕಂಪನ (ತಡೆ)ಗಳಿದ್ದವು. ಈಗ, ನೀನು ಮೊದಲನೆಯ ವೃತ್ತದೊಳಗೆ ಬರುವಂತೆ ಮತ್ತೂ ಹೆಚ್ಚು ಎಳೆದಿದ್ದೇನೆ. ಅದೂ ಆಗಿಯೇ ಆಗುತ್ತದೆ.

ನಿನಗೆ ಪೆಟ್ಟು ಬಿದ್ದುದನ್ನು ನೀನು ಬರೆಯಲೇ ಇಲ್ಲ. ಈಗ ಹೇಗಿದೆ? ನನಗೂ ಪೆಟ್ಟಾಗಿದೆ; ಎಂಥ ಗಾಯವೆಂದರೆ, ಅದೆಂದೂ ವಾಸಿಯಾಗುವುದೇ ಇಲ್ಲ. ನಾನು ಪಥ್ಯ ತೆಗೆದುಕೊಂಡಾಗ ಸ್ವಲ್ಪ ಪ್ರಯೋಜನವಾಗುತ್ತದೆ; ಪಥ್ಯ ಬಿಟ್ಟರೆ ಮತ್ತೆ ಹೆಚ್ಚಾಗುತ್ತದೆ. ನಾನು ಹಾಗೆ ಮಾಡುವುದೇಕೆಂದರೆ, ನೀನು ನನಗೆ ಪಥ್ಯ– ಸ್ವಲ್ಪ ಕಡಿಮೆ ಮಾಡುವಂತೆ ಕೇಳಿಕೊಂಡಿದ್ದೆ.

ನಿಮಗೆಲ್ಲರಿಗೂ ಆಶೀರ್ವಾದಗಳು

ಶುಭ ಚಿಂತಕ
ರಾಮಚಂದ್ರ

P-4-Books-PM-7-Anantyatre-181



* * * *

ಕ್ರಮಸಂಖ್ಯೆ–೨೦೯ **ಪತ್ರಸಂಖ್ಯೆ–೮೬೯** ಷಾಹಜಹಾನಪುರ
೦೪–೦೩–೧೯೬೯

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು,

ನೀನು (ಕೇಂದ್ರಮಂಡಲದ) ಮೊದಲನೆಯ ವೃತ್ತದಲ್ಲಿದ್ದೀಯೆ ಎಂದು ನಾನು ಬರೆದಿದ್ದೆ. ಅದರ ಹಿಂದಿನ ಬಯಲಿನಲ್ಲಿ (ಕ್ಷೇತ್ರ) ಕೂಡ ಸ್ವಲ್ಪ ಬಲ ಇದೆ. ನಿನ್ನನ್ನು ಎರಡನೆಯ ವೃತ್ತಕ್ಕೆ ಕೊಂಡೊಯ್ಯಬೇಕೆಂದು ನಾನು ಬಯಸುತ್ತೇನೆ. ನೀನಾಗಿಯೇ ಬರುತ್ತೀಯೆ, ಆದರೆ ಅದಕ್ಕೆ ಸ್ವಲ್ಪ ಸಮಯ ಬೇಕಾಗಬಹುದು. ಇದು ಹೀಗೆ ನಡೆಯುತ್ತಲೇ ಇರುತ್ತದೆ. ಶಕ್ತಿ ಉಂಟಾದಾಗ ಮುಂದಕ್ಕೆ ಸಾಗುತ್ತೀಯೆ. ನಿನಗೆ ಅನೇಕ ಸಾರೆ ಹೇಳಿದ್ದೆ, ಈಗಲೂ ಹೇಳುತ್ತೇನೆ; ಏನೆಂದರೆ, ಸುಮಾರು ಹತ್ತು ನಿಮಿಷ ಕಾಲ ಒರಗಿಕೊಂಡು, ನಿನ್ನ ಎಲ್ಲ ಕಾಯಿಲೆಗಳೂ ದೂರವಾಗುತ್ತಿವೆ ಮತ್ತು ನಿನ್ನ ಆರೋಗ್ಯ ಸುಧಾರಿಸುತ್ತಿದೆ ಎಂಬ ವಿಚಾರದ ಮೇಲೆ ಕೇಂದ್ರಿತಳಾಗಿರು. ಇದನ್ನು ಈಗ ಮಾಡಿ ನೋಡು. ಪ್ರಾರಂಭದಲ್ಲಿ ಸ್ವಲ್ಪ ಕಡಿಮೆ ಸಮಯ ಮಾಡು.

ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮ ಸಂಖ್ಯೆ – ೨೧೦ **ಪತ್ರಸಂಖ್ಯೆ – ೮೮೨** ಮೋದಿನಗರ
೩೦–೭–೧೯೭೦

ಪರಮ ಪೂಜ್ಯ ಶ್ರದ್ಧೇಯ ಶ್ರೀ ಬಾಬೂಜಿ,
ಸಾದರ ಪ್ರಣಾಮಗಳು.

ಸುಮಾರು ಒಂದು ತಿಂಗಳ ನಂತರ ತಮಗೆ ಪತ್ರ ಬರೆಯುತ್ತಿದ್ದೇನೆ. ಇಲ್ಲಿ, ನನಗೆ ಸ್ವಲ್ಪ ಅಶಕ್ತತೆಯಾಗಿತ್ತು, ಈಗ ಸರಿ ಹೋಗಿದೆ. ತಾವು ನನ್ನ ಬಗ್ಗೆ ಚಿಂತೆ ಪಡಬೇಡಿರಿ. ಸದ್ಗುರುವಿನ ಕೃಪೆಯಿಂದ, ಆತ್ಮಿಕ ದಶೆ ಏನಿದೆಯೋ ಅದನ್ನು ಬರೆಯುತ್ತಿದ್ದೇನೆ.

ಇಂದು ರಾತ್ರಿ ಸುಮಾರು ೧೨ ಅಥವಾ ಒಂದು ಘಂಟೆಗೆ ಕಣ್ಣುಮುಚ್ಚಿ ಮಲಗಿದ್ದೆ. ತಮ್ಮ ವಿಶಾಲ ವಿರಾಡ್ರೂಪ ನನ್ನೆದುರಿಗೆ ಗೋಚರವಾಯಿತು. ಅದು ಭೂಮ್ಯಾಕಾಶಗಳನ್ನು ಆವರಿಸಿತ್ತು. ಕೇವಲ ಜಗತ್ತು ಮಾತ್ರವಲ್ಲ, ಸಮಸ್ತ ಸೃಷ್ಟಿಯೂ ತಮ್ಮೊಳಗೆ ನೆಲೆಸಿತ್ತು, ತಮ್ಮ ರೋಮ–ರೋಮದಲ್ಲಿಯೂ ಬ್ರಹ್ಮಾಂಡವು ಅಡಕವಾಗಿತ್ತು. ತಮ್ಮ ಹೃದಯದಲ್ಲಿ ನಾನು ಮತ್ತು ಎಲ್ಲರೂ ಪ್ರಕಾಶ ಬಿಂದುಗಳ ರೂಪದಲ್ಲಿ ಅಡಕಗೊಂಡಿದ್ದೇವೆ. ನಿಮ್ಮ ಹೃದಯ ಮತ್ತು ಜಠರದಿಂದ ಅಸಂಖ್ಯ ಸರಪಣಿಗಳು ವಿಸ್ತರಿಸಿಕೊಂಡಿವೆ. ಆದರೆ, ಇವು ಅನಂತದವರೆಗೂ ಹಬ್ಬಿ ವ್ಯಾಪಿಸಿಕೊಂಡಿವೆ;



ಅವುಗಳ ಕೊನೆ ಎಲ್ಲಿದೆಯೆಂಬುದೇ ತಿಳಿಯದಂತಿದೆ. ನನ್ನ ಹೃದಯ ಎಷ್ಟು ಚಿಕ್ಕದಾಗಿದೆಯೆಂದರೆ ನಾನು ತಮ್ಮನ್ನು ಅದರೊಳಗೆ ಅಡಕಗೊಳಿಸಿಕೊಳ್ಳಲಾಗುತ್ತಿಲ್ಲ. ತಮ್ಮದೇ ದಿವ್ಯ ದೃಷ್ಟಿಯಿಂದ ನಾನು ತಮ್ಮನ್ನು ನೋಡುತ್ತಿದ್ದೇನೆ. ಇಂದು ಕೂಡ, ನನ್ನ ಪರಮ ಪ್ರಿಯರಾದ ತಾವು ಎಂದಿನಂತೆ ನನ್ನ ದೃಷ್ಟಿಯೊಳಗೆ ಪ್ರತ್ಯಕ್ಷವಾಗಿ ಇರುವಿರಿ. ಆ ದೃಶ್ಯದಲ್ಲಿ (ದರ್ಶನದಲ್ಲಿ) ನನ್ನ ಮನಸ್ಸು ಗಾಢವಾಗಿ ಹೋದಂತೆಲ್ಲ, ನನ್ನಲ್ಲಿ ಅನಂತ ಶಕ್ತಿ ಸಾಮರ್ಥ್ಯಗಳ ಪುಂಜವು ನನ್ನಲ್ಲಿ ಲೀನವಾಗುತ್ತಿದೆಯೆಂಬ ಅನುಭವವಾಗುತ್ತದೆ. ಇದೆಲ್ಲವೂ ತಮ್ಮ ದಯೆ, ತಮ್ಮ ಕೃಪೆ.

ಕಿರಿಯ ತಮ್ಮ–ತಂಗಿಯರಿಗೆಲ್ಲ ನನ್ನ ಪ್ರೀತಿಯ ನೆನಹುಗಳು.

ಇತಿ
ತಮ್ಮ, ದೀನ–ಹಿನ, ಸರ್ವಸಾಧನ ವಿಹೀನ
ಪುತ್ರಿ, ಕಸ್ತೂರಿ

* * * *

ಕ್ರಮಸಂಖ್ಯೆ – ೨೧೧ **ಪತ್ರಸಂಖ್ಯೆ – ೮೮೫** ಷಾಹಜಹಾನಪುರ
೨೪–೦೮–೧೯೭೦

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು,

ನಿನ್ನ ಪತ್ರಗಳು ಬರುತ್ತಿರುತ್ತವೆ. ಉತ್ತರ ಕೊಡುವುದು ಕಠಿಣ ಮಾತ್ರವಲ್ಲ, ಅಸಾಧ್ಯವಾಗಿ ಹೋಗುತ್ತದೆ. ಉಕ್ತ ವಿವರಣೆಯನ್ನು ಸರಿಯಾಗಿ ಬರೆದುಕೊಳ್ಳಬಲ್ಲವರೂ ಯಾರೂ ನನ್ನ ಬಳಿ ಇಲ್ಲ. ಸೂಕ್ಷ್ಮ ಅವಸ್ಥೆಗಳನ್ನು ಕುರಿತು ಬರೆಯುವಾಗ ಸಂಪೂರ್ಣ ನಿಸ್ತರಂಗ ಮೌನ ಬೇಕು ಮತ್ತು ಬರೆದುಕೊಳ್ಳುವವನೂ ತತ್ಪರ ಹಾಗೂ ಚುರುಕಾಗಿರಬೇಕು. ಇರಲಿ. ನಿನ್ನ ಸ್ಥಿತಿ ಏನಿದೆಯೋ ಅದರಿಂದ ತಿಳಿದು ಬರುವುದೇನೆಂದರೆ, ನೀನು (ಕೇಂದ್ರಮಂಡಲದ) ಎರಡನೆಯ ವೃತ್ತದಿಂದ ಮುಂದಕ್ಕೆ ಹೋಗಲು ಬಯಸುತ್ತಿದ್ದೀಯೆ. ಲಾಲಾಜಿ ಸಾಹೇಬರಿಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು. ಅವರು ನನಗೆ ಸಂಕೇತ ಮಾಡಿ ತೋರಿಸಿದರು ಮತ್ತು ನೀನು ಮೂರನೆಯ ವೃತ್ತದಲ್ಲಿ ಬಂದು ಬಿಟ್ಟೆ. ಪುತ್ರಿ, ನಾನು ಧನ್ಯನೆಂದು ಹೇಳಲೆ? ಅಥವಾ, ನೀನು ಧನ್ಯನೆಂದೆನ್ನಲೆ?– ಅತ್ಯುಚ್ಚ ದಶೆಗಳ ಅನುಭೂತಿ ನಿನ್ನ ಪತ್ರಗಳಲ್ಲಿ ಸಿಗುತ್ತಿದೆ. ನಾನು ನನ್ನನ್ನು ಮರೆತುಬಿಟ್ಟಿದ್ದೇನೆ. ಆದರೆ ನಿನ್ನ 'ಸ್ಥಿತಿ'ಯು ನನ್ನ ಕುರಿತಾಗಿಯೂ ನನಗೆ ಒಂದಿಷ್ಟು ತಿಳಿಸಿ ಕೊಡುತ್ತಿದೆ. ನಿನ್ನ ಸಂಕಲ್ಪ ಶಕ್ತಿ ನನ್ನನ್ನು ಉಸಿರಾಟದ ತೊಂದರೆಯಿಂದ ಶಾಶ್ವತವಾಗಿ ಬಿಡುಗಡೆಗೊಳಿಸಿದೆ.

ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೨ **ಪತ್ರಸಂಖ್ಯೆ – ೮೮೮** ಷಾಹಜಹಾನಪುರ
೨೮–೧೨–೧೯೭೦

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು,

ಉತ್ಸವದ ತಾರೀಖುಗಳು ಜನವರಿ ೩೦, ೩೧ ಮತ್ತು ಫೆಬ್ರುವರಿ ೧ ರಂದು ಬೀಳುತ್ತವೆ. ಫೆಬ್ರುವರಿ ೧೫ಕ್ಕೆ ನಾನು ದಿಲ್ಲಿಯಿಂದ ಮದ್ರಾಸಿಗೆ ವಾಯುಮಾರ್ಗದ ಮೂಲಕ ಹೋಗುತ್ತೇನೆ. ಪೋರೇಯವರ ಕಾರ್ಯಕ್ರಮವನ್ನು ಈಗ ಬದಲಿಸುವುದು ಕಷ್ಟ. ಸೇಠಜಿಯವರಿಗೆ ನನ್ನ ಪ್ರಾಣಾಹುತಿ (Transmission) ಯಿಂದ ಯಾವುದೇ ಅನುಭೂತಿಯಾಗಲಿಲ್ಲ. ಆದ್ದರಿಂದ, ನನ್ನ ಪ್ರಾಣಾಹುತಿ (Transmission)ಯಿಂದ ಯಾವುದೇ ಪರಿಣಾಮವಿಲ್ಲವೆಂದು ಪ್ರತಿಯೊಬ್ಬನೂ ಭಾವಿಸುವುದು ಸ್ವಾಭಾವಿಕ. ನನ್ನ ಪ್ರಾಣಾಹುತಿಯಲ್ಲಿ, ಜಾಗ್ರತಿಯುಂಟಾಗುವಿಕೆ ಮತ್ತು ಸಾಯುಜ್ಯತೆ ಉಂಟು. ಯಾರ ಕಣ್ಣು ತೆರೆದಿದೆಯೋ (ಅಂತರ್ದೃಷ್ಟಿ ಜಾಗ್ರತವಾಗಿದೆಯೋ) ಅವರು ಮಾತ್ರ ಅದನ್ನು ಮಾನ್ಯ ಮಾಡಲು ಸಾಧ್ಯ. ನಾನು ಸೇಠಜಿ ಮತ್ತು ಬಾಪೂಭಾಯಿಯವರ ವಿಷಯದಲ್ಲಿ ಬಹಳ ತರಾತುರಿ (ಜಲ್ದಿ) ಮಾಡಿದೆ. ಆದರೆ, ಅವರಿಗೆ ಅದರ ಅನುಭೂತಿಯಾಗಲಿಲ್ಲವೆಂದ ಮೇಲೆ ಅವರ ಕಣ್ಣಿನಲ್ಲಿ ನಾನು, ಇತರ ಢೋಂಗಿ ಸಾಧುಗಳಂತೆಯೇ ಒಬ್ಬ ಎಂದೆನಿಸಿಬಿಡುತ್ತೇನೆ. ನಿಮಗೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೩ **ಪತ್ರಸಂಖ್ಯೆ – ೮೯** ಷಾಹಜಹಾನಪುರ
೧೩–೧–೧೯೭೧

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು.

ನಿನ್ನ ಪತ್ರ ತಲುಪಿದೆ. ಡಾ. ವರದಾಚಾರಿಯವರಿಗೆ ೧೦೧ ರಿಂದ ೧೦೩° ಡಿಗ್ರಿ ಜ್ವರ ಯಾವಾಗಲೂ ಇರುತ್ತದೆ; ಅದರಿಂದ ಅವರು ಮತ್ತೂ ಅಶಕ್ತರಾಗಿದ್ದಾರೆ. ಅವರಲ್ಲಿ ಸಕ್ಕರೆಯ ಮಟ್ಟ ಕಡಿಮೆಯಾಗಲೆಂದು ನಾನೂ ಪ್ರಾರ್ಥಿಸುತ್ತಿದ್ದೇನೆ, ನೀನೂ ಕೂಡ ಪ್ರಾರ್ಥಿಸುತ್ತಿದ್ದೀಯೆ. ಆದರೆ, ಅವರಲ್ಲಿ ಅದು ಕಡಿಮೆಯಾಗುತ್ತಿಲ್ಲ. ಆದ್ದರಿಂದ ನನಗೆ ಬಹಳ ಚಿಂತೆಯಾಗುತ್ತಿದೆ. ನಾವು ಪ್ರಾರ್ಥನೆ ಮಾಡುತ್ತಲೇ ಇರೋಣ.

ಮಿ. ಪೋರೇ, ಮತ್ತು ಶ್ರೀಮತಿ ಹಾಗೂ ಶ್ರೀ ಡೇವಿಸ್ ೧೯–೧–೭೧ಕ್ಕೆ ಬರುವವರಿದ್ದಾರೆ; ಅವರು ೨೪–೧–೭೧ರ ವರೆಗೆ ಉಳಿಯುತ್ತಾರೆ.



ಪಾರ್ಥಸಾರಥಿಯವರೂ ೧೯ ಅಥವಾ ೨೦ಕ್ಕೆ ಬರುತ್ತಾರೆ. ನೀನು ಹೀರಜೀ ಭಾಯಿ ಮತ್ತು ಮುಂಬಯಿಯ ಸೇಠಜಿಯವರಿಗೆ ಪ್ರಾಣಾಹುತಿ ನೀಡಿದ್ದೆಯಲ್ಲ; ಅದರಿಂದ ಸ್ವಲ್ಪ ಮಟ್ಟಿಗೆ ಸಮಾಧಿಯ ದಶೆ ಉಂಟಾಗಿತ್ತು. ಹೀರಜಿಭಾಯಿಯವರು ತುಂಬಾ ಸಂತುಷ್ಟರಾಗಿದ್ದರು. ಎಷ್ಟೆಂದರೆ, ‘ಈ ಹುಡುಗಿ ಎರಡು ತಿಂಗಳು ಅಲ್ಲಿಗೆ ಬಂದು ಮಿಷನ್ನಿನ ಪ್ರಚಾರ ಮಾಡಲಿ, ನಾನು ಅದರ ಪೂರ್ತಿ ಖರ್ಚು ವಹಿಸುತ್ತೇನೆ’– ಎಂದು ಅವರು ಸೇಠಜಿಯವರಿಗೆ ಹೇಳಿದರು. ಉಳಿದ, ಬೇರೆಯ ವಿಷಯಗಳನ್ನು ನೀನು ಇಲ್ಲಿಗೆ ಬಂದಾಗ ತಿಳಿಸುತ್ತೇನೆ.

ಏನೇ ಆಗಲಿ, ನಾನು ಈಗ ದಕ್ಷಿಣ ಭಾರತಕ್ಕೆ ಹೋಗಲೇಬೇಕಿದೆ. ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೪ **ಪತ್ರಸಂಖ್ಯೆ – ೮೯೨** ಷಾಹಜಹಾನಪುರ
೧೪–೪–೧೯೭೧

ಪ್ರಿಯ ಪುತ್ರಿ ಕಸ್ತೂರಿ, ಸಂತೋಷಿಯಾಗಿರು,

ನಿನ್ನ ಪತ್ರ ತಲುಪಿತು. ನಾನು ಜೂನ್ ೬ ಅಥವಾ ೭ಕ್ಕೆ ಆಸಾಮಕ್ಕೆ ಹೋಗುವ ಉದ್ದೇಶ ಇಟ್ಟುಕೊಂಡಿದ್ದೇನೆ. ನಮ್ಮಿಬ್ಬರ ವಾಯುಯಾನದ ಖರ್ಚಿನ ಬಾಬತ್ತು ಜಮಾ ಮಾಡಿ ಆಗಿದೆ. ವಿಮಾನ ಯಾನದ ಮಾರ್ಗ ನಾಲ್ಕು ಘಂಟೆಯದಿದೆ. ಈ ದಿನಾಂಕಗಳು ನಿನಗೆ ಅನುಕೂಲವಾಗಿರುವುದೆಂಬುದನ್ನು ಬರೆದು ತಿಳಿಸು. ಅಂದರೆ, ನಾವು ದಿನಾಂಕ ನಿಶ್ಚಿತಗೊಳಿಸಿ ಆಸಾಮಕ್ಕೆ ಸೂಚಿಸಬಹುದು.

ಕೇಸರ್‌ಳನ್ನು, ಅವಳು ದಿಲ್ಲಿಯಲ್ಲಿ ಅಥವಾ ಅಲ್ಲಿಂದ ಹೊರಟ ನಂತರ, ಬ್ರಹ್ಮಾಂಡ ಮಂಡಲದಲ್ಲಿ ಪೂರ್ತಿಯಾಗಿ ಕೊಂಡೊಯ್ದಿದ್ದೇನೆ. ನಾನು ಹೇಳುವುದು ಸರಿಯೇ ಎಂದು ನೀನೂ ನೋಡು. ಪಶ್ಚಿಮದ ಕೆಲಸವನ್ನು ನಾನು ರಾಘವೇಂದ್ರ ರಾಯರಿಗೆ ಒಪ್ಪಿಸಿದ್ದೆನೆಂದು ನಿನಗೆ ಹೇಳಿದ್ದೆ; ನೀನು ಮರೆತಿರಬಹುದು. ನಿನ್ನ ಅನುಭವ ಸರಿಯಾಗಿಯೇ ಇದೆ. ನಿನಗೂ ಕೆಲಸ ಕೊಡಬಯಸಿದ್ದೆ. ಆದರೆ, ನಿನ್ನ ನಿಃಶಕ್ತಿ ಮತ್ತು ಅಸ್ವಸ್ಥತೆಯ ಭಯದಿಂದ, ಹಾಗೆ ಮಾಡಿಲ್ಲ. ನೀನೇ ಕೆಲಸ ತೆಗೆದುಕೊಂಡಿರುವುದು ಒಳ್ಳೆಯದಾಯಿತು. ಈಗ, ಎಷ್ಟು ಸಾಧ್ಯವಾಗುವುದೋ ಅಷ್ಟು ಮಾಡುತ್ತ ಹೋಗು. ಅದರಲ್ಲಿ ಅಮೇರಿಕೆ ಮತ್ತು ಆಫ್ರಿಕೆಗಳನ್ನು ಸೇರಿಸಿಕೊ. ರಾಜಗೋಪಾಲಾಚಾರಿ ಅಮೇರಿಕಾಕ್ಕೆ ಕೂಡ ಹೋಗುತ್ತಿದ್ದಾರೆ. ಅಲ್ಲಿಯ ಜನರು ಆಧ್ಯಾತ್ಮಿಕತೆಯಲ್ಲಿ ಉನ್ನತಿ ಸಾಧಿಸಿದರೆ, ಕಲಹ ಮತ್ತು ಯುದ್ಧಗಳು ಸಮಾಪ್ತಗೊಳ್ಳಬಹುದು.

F-4-Books-PM-7-Anantyatre-183



ಪಾಕಿಸ್ತಾನವು ಬಂಗ್ಲಾದೇಶದಲ್ಲಿ ಇತಿಹಾಸದಲ್ಲಿ ಎಲ್ಲೂ ಕೇಳಿರದಂಥ ಯಾತನಾಮಯ ಅನ್ಯಾಯ–ಅತ್ಯಾಚಾರಗಳನ್ನೆಸಗಿದೆ; ಎಲ್ಲ ಬುದ್ಧಿಜೀವಿಗಳನ್ನು ಕೊನೆಗೊಳಿಸುತ್ತಿದೆ; ಇವೆಲ್ಲವನ್ನೂ ನನ್ನಿಂದ ನೋಡಿ ತಡೆದುಕೊಳ್ಳಲಾಗುತ್ತಿಲ್ಲ. ಈಶ್ವರನ ಇಚ್ಛೆ ಏನಿದೆಯೋ, ಮತ್ತು ಏನಾಗಲಿಕ್ಕುಂಟು ಎಂಬುದು ತಿಳಿಯದು.

ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೫ **ಪತ್ರಸಂಖ್ಯೆ – ೮೯೩** ಷಾಹಜಹಾನಪುರ
೨೩–೬–೧೯೭೧

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು,

ನಾನು ತಾ. ೨೦–೬–೧೯೭೧ರಂದು ವಾಪಸು ಬಂದೆ. ನಿನ್ನಿಂದ ನಾನು ಕೆಲವು ಸಲಹೆಗಳನ್ನು ಪಡೆಯಬೇಕು ಮತ್ತು ಮಿಷನ್ನಿನ ನೀತಿ (policy)ಯನ್ನು ರೂಪಿಸುವುದಿದೆ. ಆದ್ದರಿಂದ, ನೀನು ಲಖನೌದಿಂದ ಮೋದಿ ನಗರಕ್ಕೆ ಹೋಗುವಾಗ ೨–೩ ದಿವಸ ಷಾಹಜಹಾನಪುರದಲ್ಲಿ ಇದ್ದು ಹೋಗು. ಕೆಲಸ ಅನಿವಾರ್ಯವಾದುದು. ಆದರೆ ಆತಂಕ ಪಡುವ ಕಾರಣವಿಲ್ಲ. ಶುಭ ಸಮಾಚಾರ ಏನೆಂದರೆ ಇಂದೇ ನಾನು ನಿನ್ನನ್ನು (ಕೇಂದ್ರ ಮಂಡಲದ) ಮೂರನೆಯ ವೃತ್ತದಿಂದೆತ್ತಿ ನಾಲ್ಕನೆಯ ವೃತ್ತಕ್ಕೆ ತಂದು ಮುಟ್ಟಿಸಿದ್ದೇನೆ.

ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೬ **ಪತ್ರಸಂಖ್ಯೆ – ೮೯೬** ಷಾಹಜಹಾನಪುರ
೦೩–೫–೧೯೭೨

ಪ್ರಿಯ ಪುತ್ರಿ ಕಸ್ತೂರಿ, ಶುಭಾಶೀರ್ವಾದಗಳು.

ನಿನ್ನ ಪತ್ರಗಳು ಬರುತ್ತಿರುತ್ತವೆ. ನಿನ್ನ ಪತ್ರಗಳನ್ನು ಜನರು ನನಗೆ ತಿರುಚಿ, ಬಿಟ್ಟು–ಬಿಟ್ಟು ಓದಿ ಹೇಳುತ್ತಾರೆ. ಅದಕ್ಕಾಗಿಯೇ ನಾನು ನಿನಗೆ ಪತ್ರ ಬರೆಯುವುದು ಕಡಿಮೆಯಾಗುತ್ತಿದೆಯೆಂದು ನನಗನಿಸುತ್ತದೆ. ನಿನ್ನ ಪ್ರತಿಯೊಂದು ಪತ್ರಕ್ಕೂ ವಿಸ್ತಾರವಾಗಿ ಉತ್ತರ ಬರೆಯಬೇಕೆಂದೇ ನಾನು ಬಯಸುವುದು; ಅದರ ಮೂಲಕ ಪ್ರತಿಯೊಂದು ಆಧ್ಯಾತ್ಮಿಕ ದಶೆಯ (ವರ್ಣನೆಯ) ಸಂಗಡ, ದೈವೀ ಶಕ್ತಿಯ



ಅಂದಾಜು ಕೂಡ ಕೊಡುತ್ತ ಹೋಗಬಹುದು. ಕಾರಣವೇನೆಂದರೆ, ಮುಂದೆ ಪ್ರಗತಿ ಹೊಂದುತ್ತ ಹೋದಂತೆ ಪ್ರತಿಯೊಂದು (ಆಧ್ಯಾತ್ಮಿಕ) ಸ್ಥಿತಿಯೂ ಶಕ್ತಿಯಾಗಿ ಪರಿಣಮಿಸುವುದು. ನಿನ್ನ ಪ್ರತಿಯೊಂದು ಅನುಭವವೂ ದೈವೀ ಶಕ್ತಿಯಲ್ಲಿ ಲಯವಾಗಿ ಬಿಡುತ್ತದೆ. ಅಂದಮೇಲೆ, ಕೇವಲ ಶಕ್ತಿಮಾತ್ರವೇ ಉಳಿಯುತ್ತದೆ. ನಿನಗೊಂದು ಸಂತೋಷ ಸಮಾಚಾರ ಹೇಳುತ್ತೇನೆ. ದಕ್ಷಿಣದಿಂದ ಬಂದವರೆಲ್ಲರನ್ನೂ ಲಾಲಾಜಿ ಸಾಹೇಬರು ಸಂತೋಷಪಡಿಸಿ ಕಳುಹಿಸಿದ್ದಾರೆ. ನಿನ್ನ ಅನುಭವವನ್ನು ನಾನು ಎಷ್ಟು ಕೊಂಡಾಡಲಿ! ನಾನು ನಿನ್ನನ್ನು ಐದನೆಯ ವೃತ್ತಕ್ಕೆ ಯಾವಾಗ ಒಯ್ದೆನೋ ಗೊತ್ತಿಲ್ಲ; ಅದೇ ಸ್ಥಿತಿಯನ್ನು ನೀನು ನಿನ್ನ ಪತ್ರದಲ್ಲಿ ಬರೆದಿದ್ದೀಯೆ. ಇದು ಕೂಡ ದೈವೀ ಶಕ್ತಿಯಾಗಿ ಪರಿವರ್ತಿತವಾಗುವುದು; ಅಷ್ಟೇಕೆ, ನೋಡು, ಪರಿವರ್ತಿತವಾಗಲು ಪ್ರಾರಂಭಿಸಿಯೂ ಆಗಿದೆ; ನಿನ್ನಲ್ಲಿರುವ ಒಂದು ವಿಶೇಷತೆಯೆಂದರೆ, ಆಯಾ 'ಸ್ಥಿತಿ'ಗೆ ಅನುಗುಣವಾದ ನಡಾವಳಿಯ ರೀತಿ–ನೀತಿಗಳು ಅದರ ಸಂಗಡವೇ ನಿನ್ನಲ್ಲಿ ಬಂದು ಬಿಡುತ್ತವೆ. ನಿಜ ಹೇಳಬೇಕೆಂದರೆ, 'ಸ್ಥಿತಿ'ಯು ಅದೆಷ್ಟೇ ಶ್ರೇಷ್ಠವಾದುದು ಇರಲೊಲ್ಲದೇಕೆ, ಆ 'ಸ್ತರ'ಕ್ಕೆ ಅನುಗುಣವಾದ ರೀತಿ–ನೀತಿಗಳು ಅಭ್ಯಾಸಿಯಲ್ಲಿ ಇಳಿದು ಬಂದಿಲ್ಲವಾದರೆ, ಅದೊಂದು ನ್ಯೂನತೆಯೆಂದೇ ಪರಿಗಣಿಸಲಾಗುವುದು. ಮತ್ತೆ, ಲಾಲಾಜಿ ಮಹಾರಾಜರು, ಈ ನ್ಯೂನತೆಯು ನಿನ್ನಲ್ಲಿರಲು ಎಂದಿಗೂ ಬಿಡುವುದಿಲ್ಲ.

ಈಗ ತುಲಸೀದಾಸನ ಆರೋಗ್ಯ ಸುಧಾರಿಸಿರಬಹುದು. ನಿಮ್ಮೆಲ್ಲರಿಗೂ ಆಶೀರ್ವಾದಗಳು.

ಶುಭ ಚಿಂತಕ
ರಾಮಚಂದ್ರ

* * * *

ಕ್ರಮಸಂಖ್ಯೆ – ೨೧೭ **ಪತ್ರಸಂಖ್ಯೆ – ೯೦೦** ಷಾಹಜಹಾನಪುರ
೧೬–೭–೧೯೭೩

ಪ್ರಿಯ ಪುತ್ರಿ ಕಸ್ತೂರಿ, ಆಶೀರ್ವಾದಗಳು.

ನಿನ್ನ ಎಲ್ಲ ಪತ್ರಗಳೂ ಕೈ ಸೇರಿವೆ. ಉತ್ತರ ಕೊಡಲು, ಬರೆದುಕೊಳ್ಳಬಲ್ಲವರೊಬ್ಬರ ಪ್ರತೀಕ್ಷೆ ಮಾಡಬೇಕಾಗುತ್ತದೆ. ಇಂದು ಸಂದರ್ಭವಶಾತ್ ಬರೆದುಕೊಳ್ಳುವವರು ದೊರೆತರು. ಆದ್ದರಿಂದ, ನಿನಗೆ ಉತ್ತರ ಬರೆಯುತ್ತಿದ್ದೇನೆ.

ಈಶ್ವರನ ಅದ್ಭುತ ಕಾರ್ಯ (ಪವಾಡ)ವಿದು – ಏನೆಂದರೆ, ಒಬ್ಬ ವಿಭೂತಿ ಪುರುಷನನ್ನು ಅವನು ಇಲ್ಲಿಗೆ ಅವತರಣಗೊಳಿಸಿದಾಗ, ಸಂಗಡವೇ, ಅವನ ಅಭಿಲಾಷೆಯನ್ನು ಪೂರ್ಣಗೊಳಿಸಬಲ್ಲವನನ್ನೂ ಕರೆದುಕೊಂಡೇ ಬರುತ್ತಾನೆ. ಸಮರ್ಥ ಸದ್ಗುರು ಲಾಲಾಜಿಯವರ ಕೃಪಾದೃಷ್ಟಿ ಮತ್ತು ಸ್ವಾಮೀಜಿಯವರ

(ವಿವೇಕಾನಂದ) ಆಶೀರ್ವಾದ, ನನ್ನ ಸಂತೋಷ, ಎಲ್ಲವೂ ಇಂದು ಹರ್ಷೋನ್ಮಾದದಿಂದ ನರ್ತಿಸುತ್ತಿವೆ; ಯಾಕೆಂದರೆ ನೀನು ನಿನ್ನ 'ಸ್ಥಿತಿ'ಯನ್ನು ಕುರಿತು ಅಭಿವ್ಯಕ್ತಪಡಿಸುವ ಸೀಮೆಯನ್ನು ಅತಿಕ್ರಮಿಸಿ ಮುಂದೆ ಸಾಗಿದ್ದೀಯೆ. ಪ್ರಾಯಶಃ ಯಾವುದೇ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಈ ಆಧ್ಯಾತ್ಮಿಕ ಸ್ಥಿತಿಗಳ ವರ್ಣನೆ (ವಿವರ) ಇರುವುದು ಒತ್ತಟ್ಟಿಗಿರಲಿ, ಎಲ್ಲಿಯೂ ಅದರ ಗಾಳಿಯೂ ಸೋಂಕಿಲ್ಲ. ನಾನು ಲಾಲಾಜಿ ಮಹಾರಾಜರಿಗೆ ಕೃತಜ್ಞನಾಗಿದ್ದೇನೆ; ಯಾಕೆಂದರೆ, ಅವರ ಕೃಪಾದೃಷ್ಟಿಯ ಅಡಿಯಲ್ಲಿ ನಿನ್ನನ್ನು ಶ್ರೇಷ್ಠತಮ (ಆಧ್ಯಾತ್ಮಿಕ) ಸ್ಥಿತಿಗಳ ಮೂಲಕ ಕೊಂಡೊಯ್ದು, "ಅಂತಿಮ ಸತ್ಯ'ದ (Ultimate Reality) ಸತ್ಯತೆಯನ್ನು (ವಾಸ್ತವಿಕ ಅನುಭೂತಿಯನ್ನು) ಪ್ರಕಾಶಪಡಿಸಿದ್ದೇನೆ. ಇನ್ನೊಂದು ಮಾತನ್ನು ಬರೆಯುತ್ತೇನೆ, ಏನೆಂದರೆ, ಯಾವ (ಆಧ್ಯಾತ್ಮಿಕ) ಸ್ಥಿತಿಗಳ ಮೂಲಕ (ದಾಟಿಸಿ) ನಿನ್ನನ್ನು ಕರೆದೊಯ್ಯುತ್ತಿರುವೆನೋ ಅಲ್ಲಿ 'ಶಕ್ತಿ'ಗೂ ಪ್ರವೇಶವಿಲ್ಲ. ಏಳನೆಯ ವೃತ್ತದಲ್ಲಿಯಂತೂ ನೀನು ಬಂದೇ ಇದ್ದೀಯೆ. ಲಾಲಾಜಿ ಮಹಾರಾಜರು ನಿನ್ನನ್ನು ಸ್ವತಃ ತಮ್ಮ ಸುಪರ್ದಿಯಲ್ಲಿ ತೆಗೆದುಕೊಂಡಿದ್ದಾರೆ; ಯಾಕೆಂದರೆ ಏಳನೆಯ ವೃತ್ತದ ನಂತರ, ಅಷ್ಟೇಕೆ, ಏಳನೆಯ ವೃತ್ತದೊಳಗೇ ಅಂತಿಮ ಸತ್ಯದ ಪ್ರಥಮ ನೋಟ ಸಿಗುವುದು ಆರಂಭವಾಗುತ್ತದೆ. ಎಲ್ಲಾದರೂ ನನ್ನ ದೃಷ್ಟಿ ವಿಚಲಿತವಾಗಬಾರದಲ್ಲ, ಎಂಬ ಕಾರಣದಿಂದ, ಅವರ ಕಣ್ಗಾವಲು ಮತ್ತು ನನ್ನ ದೃಷ್ಟಿ ನಿನ್ನ ಮೇಲೆ ಇರುತ್ತದೆ. ಓಹ್, ಲಾಲಾಜಿ ಸಾಹೇಬರ ಕಣ್ಗಾವಲಿನ ಅದ್ಭುತಕಾರ್ಯ (ಪವಾಡ) ಕುರಿತು ಏನು ಹೇಳಲು ಸಾಧ್ಯ! ಅದು ಎಂತಿದೆಯೆಂದರೆ, ನನ್ನ ಆದಿಯ, ಚ್ಯುತಿಗೊಳ್ಳದ ಸಂಕಲ್ಪವು ನಿನ್ನ ಸದ್ಯದ ಸ್ಥಿತಿಯನ್ನು ಸ್ಪರ್ಶಿಸದಿರಲೆಂದು, ಅವರು ತಮ್ಮ ಕಣ್ಗಾವಲಿನ ಪ್ರೀತಿಯ ರಕ್ಷಾ ಕವಚವನ್ನು ನಿನಗೆ ಇತ್ತಿದ್ದಾರೆ. ಹಾಗೆನ್ನುವುದಾದರೆ, ಅದರಿಂದೇನೂ ಬಾಧೆ ಇಲ್ಲ, ಆದರೆ ನಿನ್ನ ಪ್ರತಿಯೊಂದು ವಿಚಾರವೂ ಶಕ್ತಿಯಾಗಿ ಪರಿವರ್ತಿತವಾಗದಿರಲಿ ಎಂದು, ಪ್ರಾಯಶಃ ಅವರ ಪ್ರೇಮವು ನಿನ್ನ 'ಸ್ಥಿತಿ'ಯನ್ನು ಅಡಗಿಸಿ (ಪ್ರಚ್ಛನ್ನಗೊಳಿಸಿ) ಇಟ್ಟಿದೆ. ಪ್ರತಿಯೊಂದು ಸ್ಥಿತಿಯ ಕೇಂದ್ರವು ಅದರ ಶಕ್ತಿಯ ಕೇಂದ್ರವಾಗಿರುತ್ತದೆ. (ಕೇಂದ್ರಮಂಡಲದ) ವೃತ್ತದ ವಿಶೇಷತೆಯೇನೆಂದರೆ, ಅದರಲ್ಲಿ ಕಾಲಿರಿಸುತ್ತಲೇ, ಕೇಂದ್ರದ ಆಕರ್ಷಣ ಶಕ್ತಿ (ಕಶಿಶ್) ತನ್ನತ್ತ ಸೆಳೆಯಲು ತೊಡಗುತ್ತದೆ. ನಾನು 'ಆಕರ್ಷಣ ಶಕ್ತಿ' ಎಂಬ ಪದವನ್ನು ಬಳಸಿದ್ದೇನೆ. ಆದರೆ, ಅಲ್ಲಿ 'ಆಕರ್ಷಣ ಶಕ್ತಿ'ಗೂ ಪ್ರವೇಶವಿಲ್ಲ; ಗುರುವಿನ ದೃಷ್ಟಿಯೇ ಆಕರ್ಷಣೆಯ ಕೆಲಸ ಮಾಡುತ್ತದೆ ಎಂದು ಹೇಳಬಹುದು. 'ಅದೃಷ್ಟ' (ಕಾಣದ್ದು)ವನ್ನು ನೀನು ಕಂಡೆ; ನಾನಂತೂ, 'ಪರಮಗತಿಯೇ ನಿನ್ನನ್ನು ತನ್ನದಾಗಿಸಿಕೊಂಡಿತು' ಎಂದು ಹೇಳಿಯೇನು! ಇನ್ನು, ಈಗ ಬರೆಸುವುದಕ್ಕೆ ವಿಚಾರಗಳೇ ಇಲ್ಲ; ನಿಜ ಸಂಗತಿಯೇನೆಂದರೆ, ನಿನ್ನ 'ಸ್ಥಿತಿ'ಯನ್ನು ಕುರಿತು ಬರೆಯುವ ಕಾವು ತಾನೇ



ವಿಚಾರಗಳನ್ನು ತರುತ್ತಿದೆ. ನಿನ್ನ ಮೇಲೆ ಆಶೀರ್ವಾದಗಳ ವರ್ಷಣೆಯಾಗುತ್ತಿದೆ; ಆದ್ದರಿಂದ ನಾನು ಸಂತುಷ್ಟನಾಗಿದ್ದೇನೆ.

ನಿನ್ನ ಸೋದರ–ಸೋದರಿಯರಿಗೆ ಆಶೀರ್ವಾದ.

ಶುಭ ಚಿಂತಕ
ರಾಮಚಂದ್ರ

Divine Shri Babuji Maharaj - Saint Kasturi Memorial Trust (Regd.)
(The Way to Ultimate)
J-371S-1, Dilshad Colony, Delhi- 110095

New Delhi
24th August, 2015

Respected Brother Shri B G Janardanji,

This has reference to your letter dated 3rd August 2015 addressed to brother Shri Prem Prakash Saxena seeking Trust's permission for publishing the Kannada version of 'Anant Yatra' containing collection of letters of Shri Babuji Maharaj to Sister Saint Kasturi. We are grateful for the initiative of translating and publishing the Kannada version of this book. We are sure it will be a step forward towards spreading the messages of Shri Babuji Maharaj.

2. In this context, I have been directed by Shri G D Chaturvedi, Chief Patron of the Trust and publisher of Saint Kasturi's books to permit translation and publication of Kannada version of Anant Yatra containing letters of Shri Babuji Maharaj to Sister Saint Kasturi subject to following:

(i) The copy rights will remain with the Trust and the book will be published in the name of Divine Shri Babuji Maharaj - Saint Kasturi Memorial Trust

(ii) The book will be published in the same manner as the book published in English including the contents of all the 4 covers, and few words, brief life history of Sister Kasturi, Trust Brief etc., given in page 1 to page 7of the English version book.

(iii) While translating, the originality of letters will be retained without adding any interpretation by the translator. Normally, the translation is approved by the editorial committee of the Trust. But, since the translation done by brother Shri Laksmikant Hegdeji has already been seen and approved by respected brother Shri (Justice) Vithal Rao, Preceptor, Bangalore, we request the following before publication:

a. The Printer be asked to give two copies of the manuscript. One copy will be certified by brother Hegde and brother Justice Vithal Rao and the second eopy will be sent to brother Shri M Srinivas, President of the Trust, who is also a member of the Editorial Committee, for approval at the following address:

M. SRINIVAS,
Superintending Engineer,
OMC Circle/TS-TRANSCO
MULUGU ROAD
WARANGAL Dist.- 506 007(TS)
(09440811034)

b. Brother Shri (Justice Vithal Rao ji may add a few words regarding Shri Babuji Maharaj, Sister Kasturi and Kannada translation of the book.

c. Please send both copies of the manuscript and 5 copies of published books to the Trust.

d. To ensure originality, authenticity and acknowledge the efforts, the book should clearty mention the names of concerned persons Viz., Translated by Shri Laksmikant Hegde and Compared and edited by Shri (Justice) Vithal Rao, Preceptor, Bangalore,

(iv) As you have already mentioned, we are sure this publication will be brought out without any profit motive. The number of copies printed in the first edition and price per copy be mentioned at appropriate place.

3. We wish you all the success with the grace of Shri Babuji Maharaj.

With kind regards,
A C Dubey
General Secretary

## ಬಸಂತ ಪಂಚಮಿ
## ಸಮರ್ಥ ಸದ್ಗುರು ಶ್ರೀ ಲಾಲಾಜಿ ಮಹಾರಾಜರ (ಫತೇಹ್‌ಗಡ) ಅವತರಣ ಮಹೋತ್ಸವ

ಶ್ರೀ ಬಾಬೂಜಿ ಮಹಾರಾಜರಿಗೆ ದಿನಾಂಕ ೦೧–೦೨–೧೯೪೪ (ಬಸಂತ ಪಂಚಮಿ), ಸಾಯಂಕಾಲ ೭–೩೦ ಗಂಟೆಗೆ ನೀಡಿದ ಆದೇಶ :

"ಮಕ್ಕಳೆ, ಗಮನ ಕೊಡಿ. ನೀವೆಲ್ಲರೂ ಸಮರ್ಥ ಸದ್ಗುರು ಶ್ರೀ ಲಾಲಾಜಿ ಮಹಾರಾಜರ ಪಾವನ ಜನ್ಮೋತ್ಸವವನ್ನು ಆಚರಿಸಲು ಇಲ್ಲಿ ಒಂದೆಡೆಗೆ ಸೇರಿದ್ದೀರಿ. ಇದು ಮಿಶನ್ನಿನ ಅತ್ಯಂತ ಮಹತ್ವಪೂರ್ಣ ಉತ್ಸವ. ಜಗತ್ತು ಇರುವವರೆಗೂ ಇದು ಆಚರಿಸಲ್ಪಡುತ್ತಿರಲಿ. ಇದು ಮುಂಬರುವ ಪೀಳಿಗೆಗಳಿಗೋಸ್ಕರ ನೀಡಿದ ನಿರ್ದೇಶ".

**ಅನಂತಯಾತ್ರಾ (ಭಾಗ ೩) ಪತ್ರ ಸಂಖ್ಯೆ ೩೬೯**

ಲಖೀಂಪುರ ೧೬–೦೨–೧೯೫೪

ಪರಮ ಪೂಜ್ಯ ಶ್ರದ್ಧೇಯ ಶ್ರೀ ಬಾಬೂಜಿ,

ಸಾದರ ಪ್ರಣಾಮಗಳು.

ನಾವೆಲ್ಲರೂ ಇಲ್ಲಿಗೆ ಕ್ಷೇಮದಿಂದ ಬಂದು ತಲುಪಿದ್ದೇವೆ. ಪ್ರಿಯ ಶ್ರೀ ಬಾಬೂಜಿ, ಅಲ್ಲಿಂದ ಹೊರಟು ಬರುವುದು ಆಗದು, ಆದರೆ ಬರಲೇಬೇಕಾಗುವುದು. ನಿಜ ಹೇಳಬೇಕೆಂದರೆ, ಉತ್ಸವ ಎಂದರೆ ಹೀಗಿರಬೇಕು. ನನ್ನ ಅಲ್ಪ ಸಾಮರ್ಥ್ಯದಿಂದ (Reading Capacity) ವೀಕ್ಷಿಸಿ, ಅಲ್ಲಿಯ ಕಣ–ಕಣದಲ್ಲಿ ಏನಿದೆಯೋ ಅದನ್ನು ಅನುಭವಪಟ್ಟ ಅನುಸಾರ ಬರೆಯುತ್ತಿದ್ದೇನೆ. ಆದರೆ, ನನಗಿಂತ ಉನ್ನತತರವಾದ ಸಾಮರ್ಥ್ಯ ಹೊಂದಿರುವವರು ಇದಕ್ಕಿಂತ ಚೆನ್ನಾಗಿ ವೀಕ್ಷಿಸಿ ಗ್ರಹಣ ಮಾಡಬಲ್ಲರೆಂಬ ವಿಶ್ವಾಸ ನನಗಿದೆ. ಒಂದು ಕಣದಲ್ಲಿ ಸಮಸ್ತ ಬ್ರಹ್ಮಾಂಡದ ಆತ್ಮಿಕ–ಪಾಲನೆ ಮಾಡುವಂಥ ಸ್ಥಿತಿ ಇತ್ತು. ಅಥವಾ, ಸಮಸ್ತ ಬ್ರಹ್ಮಾಂಡದ ಆತ್ಮಿಕ ಶಕ್ತಿಯಿಂದ ಪಾಲನ ಮಾಡಬಹುದಾದ ಶಕ್ತಿ ಇತ್ತು ಎಂಬ ಅನುಭವ ನಾನು ಪಡೆದೆ. ಪ್ರತಿಯೊಬ್ಬ ಅಭ್ಯಾಸಿಯ ಹೃದಯ ಎಂಥ ಸ್ಥಿತಿಯಲ್ಲಿ ಮಗ್ನವಾಗಿ ಹೋಗಿತ್ತು ಎಂದರೆ, ನಿಜವಾಗಿ ಒಬ್ಬ ಅಭ್ಯಾಸಿ ಸದ್ಗುರುವಿಗೆ ಶರಣಾದವನು, ಸಾವಿರಾರು ವರ್ಷಗಳ ತಪಸ್ಯೆಯ ನಂತರ ಬಹುಶಃ ಪಡೆಯುತ್ತಿದ್ದನೇನೋ, ಎಂಬುದು ಸಂದೇಹ. ನಾನಾದರೋ ತಮ್ಮ ಪ್ರಾಣಾಹುತಿ ಶಕ್ತಿಯನ್ನು ಇನ್ನೂ ಇಷ್ಟು ಅಲ್ಪ ಮಾತ್ರವೇ ಅನುಭವ ಪಟ್ಟಿದ್ದೇನೆ. ಆದರೆ ತಮ್ಮ ಕೃಪೆಯಿಂದ ಅದರಲ್ಲಿ ಇನ್ನೂ ಹೆಚ್ಚು ಹೆಚ್ಚು ಈಜಲು ಶಕ್ತಳಾಗಬಲ್ಲೆನೆಂಬ ವಿಶ್ವಾಸ ನನಗಿದೆ. ಇಂಥ ಆಧ್ಯಾತ್ಮಿಕ ಸ್ಥಿತಿಗಳು ಸಿಗುವುದಾದರೂ ಎಲ್ಲಿ? ಇಂಥ ಪ್ರಾಣಾಹುತಿ ಶಕ್ತಿ ಲಭ್ಯವಾಗುವುದಾದರೂ ಇನ್ನೆಲ್ಲಿ? ಪ್ರಾಪಂಚಿಕ ಜನರು ಬಸಂತ ಉತ್ಸವದಲ್ಲಿ ಕೇವಲ ಸಂಮಿಲಿತರಾಗುವುದರಿಂದಲೇ ಅದೆಂಥ ಆಧ್ಯಾತ್ಮಿಕ ಸ್ಥಿತಿಯನ್ನು ಅದರಿಂದ ಪಡೆಯುತ್ತಾರೆ ಎಂಬುದನ್ನು ಶಬ್ದಗಳು ಹಿಡಿದಿಡಲಾರವು. ಪಾವಿತ್ರ್ಯ ಮತ್ತು ಶುದ್ಧತೆಗಳ ಸ್ಥಿತಿ ತಾನೇ ತಾನಾಗಿರುವ ರಾಜ್ಯದಲ್ಲಿ ಅದಕ್ಕೇ ಅಂಟಿಕೊಂಡಿರುವಂತೆ ಮಾಡುವ ಶಕ್ತಿ, ಸಂಭವತಃ ಬೇರೆ ಯಾರಲ್ಲಿಯೂ ಇರಲಾರದು. ಅನೇಕ ವರ್ಷಗಳ ತಪಸ್ಯೆ, ಸಂಯಮ ಮತ್ತು ಸಾಧನೆಗಳ ನಂತರ ಮಾತ್ರವೇ ಸಾಧಕರು ಅರ್ಹರಾಗುತ್ತಾರೆ ಮತ್ತು ಮಹಾತ್ಮರು ಎಲ್ಲೋ ಒಬ್ಬಿಬ್ಬ ಶಿಷ್ಯರನ್ನು ಉನ್ನತ ಸ್ಥಿತಿಯವರೆಗೆ ಮುಟ್ಟಿಸುತ್ತಾರೆ – ಎಂಬುದನ್ನು ಓದಿದ್ದೆ ಮತ್ತು ಕೇಳಿದ್ದೆ, ಅಷ್ಟೆ. ಇಂದಿನ ನಮ್ಮ ಕಾಲದಲ್ಲಿ, ನಮಗೆ ನಿರಂತರ ಆಧ್ಯಾತ್ಮಿಕ ಪ್ರಕಾಶ ಕೊಡುತ್ತಿರುವ ಈ ಜ್ಯೋತಿಯನ್ನು ಅದು ನಮ್ಮ ಅರಿವಿಗೆ ಬರಲಿ, ಬರದಿರಲಿ – ಅನುಗ್ರಹಿಸಿದ ಸಮರ್ಥ ಶ್ರೀ ಲಾಲಾಜಿ ಮಹಾರಾಜರ ಚರಣಗಳಲ್ಲಿ ನಾನು ಶತ–ಶತ ಪ್ರಣಾಮ ಸಲ್ಲಿಸುತ್ತೇನೆ. ................

## LIST OF PUBLICATIONS OF SAINT KASTURI BAHEN

1. ENGLISH ANANT YATRA PART 1
2. ENGLISH ANANT YATRA PART 2
3. ENGLISH ANANT YATRA PART 3
4. ENGLISH ANANT YATRA PART 4
5. ENGLISH ANANT YATRA PART 5
6. ENGLISH REALISATION TO ULTIMATE REALITY
7. ENGLISH SIMPLICITY AT DAWN
8. ENGLISH DIVINE BEAUTY OF TEN COMMANDMENTS IN SM SYSTEM
9. ENGLISH HE LOVES ALL - WOH SAB KO PYAR KARTA HAI
10. ENGLISH WHO WAS HE
11. ENGLISH THE GLIMPSES OF SPIRITUAL EXPERIENCES
12. ENGLISH THAT DIVINE BEAUTY
13. ENGLISH DIVINITY IN THE LIGHT OF SM
14. ENGLISH DIVINE KNOTS
15. ENGLISH MELODIES OF ULTIMATE TRUTH
16. ENGLISH SAHAJ DHARA
17. ENGLISH DIVINE WAVES OF ULTIMATE REALITY
18. HINDI ANANT YATRA BHAG 1
19. HINDI ANANT YATRA BHAG 2
20. HINDI ANANT YATRA BHAG 3
21. HINDI ANANT YATRA BHAG 4
22. HINDI ANANT YATRA BHAG 5
23. HINDI ANUBHAV SARITA
24. HINDI SAHAJ DHARA
25. HINDI DIARY KASTURI JIJI KI
26. HINDI DAIVIK GRANTHI DARPAN
27. HINDI ANTHIM SATYA KI SAHAJ DHARA
28. HINDI WOH SABKO PYAR KARTA HAI
29. HINDI WAH DIVYA CHHAVI
30. HINDI SADGI KI OT SE
31. HINDI SM KE SARGARBIT DUS NIYAM
32. HINDI ANTIM SATYA KE MADHUR SWAR
33. HINDI SAKSHATKAR SE ANTIM SATYA TAK
34. HINDI DIVYA DESH KA DARSHAN SM KE DARPAN ME
35. HINDI SANDHYA KE GEET BHAG 1
36. HINDI SANDHYA KE GEET BHAG 2
37. HINDI KAUN THE VEH